ಕನ್ನಡ ಸಾಹಿತ್ಯ ಪರಿಷತ್ತು

ಮನುಷ್ಯ ಜಾತಿ ತಾನೊಂದೆ ವಲಂ

ದಲಿತ ಸಾಹಿತ್ಯ ಸಂಪುಟ

# ಸಣ್ಣಕಥೆ



ಪ್ರಧಾನ ಸಂಪಾದಕರು

**ನಾಡೋಜ ಡಾ. ಮನು ಬಳಿಗಾರ್**

ಸಂಪಾದಕರು

**ಡಾ. ಸಣ್ಣರಾಮ**

# ದಲಿತ ಸಾಹಿತ್ಯ ಸಂಪುಟ

# ಸಣ್ಣಕಥೆ


ಪ್ರಧಾನ ಸಂಪಾದಕರು

**ನಾಡೋಜ ಡಾ. ಮನು ಬಳಿಗಾರ್**

ಸಂಪಾದಕರು

**ಡಾ. ಸಣ್ಣರಾಮ**



**ಕನ್ನಡ ಸಾಹಿತ್ಯ ಪರಿಷತ್ತು**

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು ೫೬೦ ೦೧೮.

DALITA SAHITYA SAMPUTA - SANNAKATHE- Edited by: Dr. Sannarama Published by: Nadoja Dr. Manu Baligar, President, Kannada Sahitya Parishattu, Pampa Mahakavi Road, Chamarajapete, Bengaluru - 560018 Pages: x +266 Price: Rs.320-00: 2019

ಪ್ರಥಮ ಮುದ್ರಣ : ೨೦೧೯

ಪ್ರತಿಗಳು : ೫00

ಬೆಲೆ : ಮುನ್ನೂರ ಇಪ್ಪತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿ

---

ನಾಡೋಜ ಡಾ. ಮನು ಬಳಿಗಾರ್, ಅಧ್ಯಕ್ಷರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಸಂಚಾಲಕರು

ಡಾ. ಮೂಡಾಕೂಡು ಚಿನ್ನಸ್ವಾಮಿ, ಸದಸ್ಯರು

ಡಾ. ಅರ್ಜುನ ಗೊಳಸಂಗಿ, ಸದಸ್ಯರು

ಡಾ. ಬಿ.ಟಿ. ಲಲಿತಾ ನಾಯಕ್, ಸದಸ್ಯರು

ಪ್ರಕಟಣಾ ಸಮಿತಿ

ನಾಡೋಜ ಡಾ. ಮನು ಬಳಿಗಾರ್

ಅಧ್ಯಕ್ಷರು

ಸಮ್ಮೇಳನಾಧ್ಯಕ್ಷರು - ಡಾ. ಚಂದ್ರಶೇಖರ ಕಂಬಾರ

ಲ೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸಂಚಾಲಕರು, ಪ್ರಕಟಣಾ ವಿಭಾಗ ಡಾ. ಪದ್ಮರಾಜ ದಂಡಾವತಿ

ಸದಸ್ಯರು

| | |
|---|---|
| ಶ್ರೀ ಜರಗನಹಳ್ಳಿ ಶಿವಶಂಕ | ಶ್ರೀ ಎ.ಆರ್. ಉಜ್ಜನಪ್ಪ |
| ಡಾ. ಮೂಡಾಕೂಡು ಚಿನ್ನಸ್ವಾಮಿ | ಶ್ರೀ ಸಂಜಯ ಅಡಿಗ |
| ಪ್ರೊ ಧರಣೇಂದ್ರ ಕುರಕುರಿ | ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್ |
| ಶ್ರೀ ರಂಜಾನ್ ದರ್ಗಾ | ಗೌರವ ಕಾರ್ಯದರ್ಶಿಗಳು |
| ಡಾ. ಬಿ.ಕೆ. ರವಿ | ಡಾ. ರಾಜಶೇಖರ ಹತಗುಂದಿ |
| ಡಾ. ತಮಿಳ್ ಸೆಲ್ವಿ | ಶ್ರೀ ವ.ಚ. ಚನ್ನೇಗೌಡ |
| ಡಾ. ದೊಡ್ಡಮಲ್ಲಯ್ಯ | ಗೌರವ ಕೋಶಾಧ್ಯಕ್ಷರು |
| ಡಾ. ಎಚ್.ಎಲ್. ಪುಷ್ಪ | ಶ್ರೀ ಪಿ. ಮಲ್ಲಿಕಾರ್ಜುನಪ್ಪ |

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮುಖಪುಟ ಕಲಾವಿನ್ಯಾಸ : ಚಂದ್ರಕಾಂತ ಪಟ್ಟಣ

ಮುದ್ರಣ : ಬಿ.ಎಂ.ಶ್ರೀ, ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು

# ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಾಡು, ನುಡಿ, ನೆಲ, ಜಲ ಹಾಗೂ ಸಾಹಿತ್ಯ-ಸಂಸ್ಕೃತಿಗೆ ಪ್ರೇರಕ ಶಕ್ತಿಯಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೧೯೧೫ನೇ ಇಸವಿ ಮೇ ೫ ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ ಅವರ ದೂರದೃಷ್ಟಿಯ ಫಲವಾಗಿ ಅಸ್ತಿತ್ವಕ್ಕೆ ಬಂದಿತು. ಅಂದಿನ ಮೈಸೂರು ಸಂಸ್ಥಾನದ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯ ಅವರ ಒತ್ತಾಸೆಯೂ ಇಲ್ಲಿ ಜೊತೆಗೂಡಿತ್ತು. ಶತಮಾನ ಪೂರೈಸಿರುವ ಕನ್ನಡ ಸಾಹಿತ್ಯ ಪರಿಷತ್ತು ನನ್ನನ್ನೂ ಸೇರಿ ೨೫ ಅಧ್ಯಕ್ಷರನ್ನು ಕಂಡಿದೆ. ೮೪ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಿ ಕನ್ನಡದ ಕಹಳೆ ಮೊಳಗಿಸಿದೆ. ಇಲ್ಲಿಯವರೆಗೆ ೧೫೦೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ- ಸಂಸ್ಕೃತಿ ಪ್ರಸಾರದಲ್ಲಿ ಮಹತ್ತರ ಸಾಧನೆಗೈದಿದೆ. ೧೦೫ನೇ ವರ್ಷಕ್ಕೆ ಕಾಲಿಟ್ಟ ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು: 'ದಲಿತ ಸಾಹಿತ್ಯ ಸಂಪುಟ'ದ ಯೋಜನೆ ರೂಪಿಸಿ ಕಾರ್ಯಗತ ಗೊಳಿಸುತ್ತಿರುವುದು ಚರಿತ್ರಾರ್ಹ ಸಂಗತಿಯೆಂದೇ ಭಾವಿಸಿದ್ದೇನೆ. 'ದಲಿತ ಸಾಹಿತ್ಯ ಸಂಪುಟ' ರಚನಾ ಸಮಿತಿಯ ಸಂಚಾಲಕರಾಗಿ ಕಾರ್ಯ ನಿರ್ವಹಿಸುತ್ತಿರುವ ಕನ್ನಡದ ಹಿರಿಯ ವಿದ್ವಾಂಸರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು "ಭಾರತೀಯ ಯಾವ ಭಾಷೆಗಳಲ್ಲೂ ಈ ಬಗೆಯ ಸಂಪುಟಗಳು ಪ್ರಕಟಗೊಂಡಿಲ್ಲ" ಎಂದು ಹೇಳಿರುವುದು ಈ ಯೋಜನೆಯ ಐತಿಹಾಸಿಕ ಮಹತ್ವವನ್ನು ಎತ್ತಿ ತೋರಿಸುತ್ತದೆ.

'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪನ ಮಾತನ್ನು ತನ್ನ ಘೋಷ ವಾಕ್ಯವಾಗಿ ಸ್ವೀಕರಿಸಿರುವ ಕನ್ನಡ ಸಾಹಿತ್ಯ ಪರಿಷತ್ತು, ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ನನ್ನ ಅವಧಿಯಲ್ಲಂತೂ ಒಂದು ವ್ರತದಂತೆ ಪಾಲಿಸುತ್ತಾ ಬಂದಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಬಗೆಯ ಚಟುವಟಿಕೆಗಳಲ್ಲಿ ಸಮಸ್ತರನ್ನು ಒಳಗೊಳ್ಳುತ್ತಾ ನಿಜವಾದ ಅರ್ಥದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಲಾಗಿದೆ. ಅದರ ಭಾಗವಾಗಿಯೇ 'ದಲಿತ ಸಾಹಿತ್ಯ ಸಂಪುಟ'ದ ಈ ಚರಿತಾರ್ಹ ಯೋಜನೆ ಕಾರ್ಯಗತಗೊಂಡಿದ್ದು, ಸಮಾರಂಭವೊಂದರಲ್ಲಿ ಕರ್ನಾಟಕ ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಅರ್ಜುನ ಗೊಳಸಂಗಿಯವರು 'ಶತಮಾನ ಪೂರೈಸಿರುವ ಕನ್ನಡ ಸಾಹಿತ್ಯ ಪರಿಷತ್ತು ದಲಿತ ಸಾಹಿತ್ಯ ಸಂಪುಟಗಳನ್ನು ಹೊರತಂದರೆ ಒಳ್ಳೆಯದು. ಅದು ನಿಮ್ಮ ಅವಧಿಯಲ್ಲೇ ಕಾರ್ಯಗತಗೊಂಡರೆ ಚರಿತ್ರಾರ್ಹ

ಸಂಗತಿ ಎನಿಸಿಕೊಳ್ಳುತ್ತದೆ' ಎಂದು ಪ್ರಸ್ತಾವನೆ ಇಟ್ಟರು. ತಕ್ಷಣವೇ ಕಾರ್ಯಪ್ರವೃತ್ತನಾದ ನಾನು ಕಾರ್ಯಕಾರಿ ಸಮಿತಿ ಅನುಮೋದನೆ ಪಡೆದು ಅಗತ್ಯದ ಆರ್ಥಿಕ ಸಂಪನ್ಮೂಲದ ವ್ಯವಸ್ಥೆ ಮಾಡಿಕೊಂಡು 'ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿ' ಅಸ್ತಿತ್ವಕ್ಕೆ ಬರುವಂತೆ ನೋಡಿಕೊಂಡೆ. ಅಷ್ಟು ಮಾತ್ರವಲ್ಲ; ಕಾಲಮಿತಿಯಲ್ಲಿ ಈ ಯೋಜನೆ ಅನುಷ್ಠಾನಗೊಳ್ಳುವಂತೆ ಪ್ರಯತ್ನಿಸಿರುವೆ. ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿಯ ಸಂಚಾಲಕರಾಗಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ನಿರೀಕ್ಷೆಗೂ ಮೀರಿದ ವೇಗದಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಒಟ್ಟು ಹತ್ತು ಸಂಪುಟಗಳನ್ನು ಹೊರತರಲು ಯೋಜನೆ ರೂಪಿಸಲಾಗಿದೆಯಾದರೂ ಮೊದಲ ಕಂತಿನಲ್ಲಿ ಐದು ಸಂಪುಟಗಳು ನಿಮ್ಮ ಕೈ ಸೇರುತ್ತಿವೆ. ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿಯ ಸದಸ್ಯರಾಗಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಡಾ. ಅರ್ಜುನ ಗೊಳಸಂಗಿ, ಡಾ. ಬಿ.ಟಿ. ಲಲಿತಾ ನಾಯಕ್ ಅವರು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ದಲಿತ ಸಂವೇದನೆ' ಒಳ ವಿದ್ಯುತ್ತಿನಂತೆ ಪ್ರವಹಿಸುತ್ತಲೇ ಇದೆ. ಮನುಷ್ಯ ಜಾತಿ ತಾನೊಂದೆ ವಲಂ ಎಂಬ ಮಾತು ಪರೋಕ್ಷವಾಗಿ ಜಾತ್ಯತೀತ ಸಮಾಜದ ಕನಸನ್ನೇ ಪ್ರತಿಪಾದಿಸುತ್ತದೆ. ದಲಿತ ಸಂವೇದನೆಯ ಅಭಿವ್ಯಕ್ತಿಗೆ ಮತ್ತು ದಲಿತ ಪರ ಕಾಳಜಿಗೆ ಬಹುದೊಡ್ಡ ವೇದಿಕೆ ದೊರೆತದ್ದು ೧೨ನೇ ಶತಮಾನದ ವಚನ ಚಳವಳಿಯ ಕಾಲದಲ್ಲಿ ಹಾಗೆ ನೋಡಿದರೆ ವಚನ ಚಳವಳಿಯ ಮುಖ್ಯ ಕಾಳಜಿಯೇ 'ದಲಿತ ಲೋಕ" . ಅಸಂಖ್ಯಾತ ದಲಿತ ಶರಣರ ಅಭಿವ್ಯಕ್ತಿಗೆ ಮಾಧ್ಯಮವಾಗಿದ್ದು ಅನುಭವ ಮಂಟಪ, ಬಸವೋತ್ತರ ಯುಗದ ಮಹಾಕವಿ ಹರಿಹರನು, ಮಾದಾರ ಚನ್ನಯ್ಯ ಸೇರಿದಂತೆ ದಲಿತ ಹಾಗೂ ತಳ ಸಮುದಾಯದ ಶಿವಭಕ್ತರ 'ಭಕ್ತಿಯ ಪಾರಮ್ಯವನ್ನೇ', ಕಾವ್ಯವಾಗಿಸಿದ. ಹರಿಹರನ ರಗಳೆಗಳು 'ದಲಿತ ಸಂವೇದನೆ'ಯ ಪ್ರತಿಬಿಂಬದಂತಿವೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ೭೦-೮೦ರ ದಶಕ ದಲಿತ ಸಂವೇದನೆಯ ಪುನರುತ್ಥಾನದ ಯುಗ, ಹಾಗೆ ನೋಡಿದರೆ ಕಳೆದ ಶತಮಾನದ ೭೦-೮೦ರ ದಶಕ ಚಳವಳಿಗಳ ಕಾಲ, ದಲಿತ ಬಂಡಾಯ ಚಳವಳಿಯ ಪ್ರಭಾವಳಿಯಲ್ಲಿ ಅಂದಿನ ಬಹುಪಾಲು ದಲಿತೇತರ ಸಾಹಿತಿಗಳೂ 'ದಲಿತ ಸಂವೇದನೆ'ಯೊಂದಿಗೆ ಮುಖಾಮುಖಿಯಾಗುವ ಸಂದರ್ಭ ಸೃಷ್ಟಿಯಾಯಿತು. ದೇವನೂರು ಮಹಾದೇವ, ಸಿದ್ಧಲಿಂಗಯ್ಯ ಸೇರಿದಂತೆ ಹಲವರ ಸಾಹಿತ್ಯ ಒಂದು ಪರಂಪರೆಯ ಹುಟ್ಟಿಗೆ ಕಾರಣವಾದದ್ದು ಇತಿಹಾಸ, ದಲಿತ ಸಾಹಿತ್ಯ ಸಂಪುಟಗಳ ಪ್ರಕಟಣೆಯನ್ನು 'ದಲಿತ ಅಸ್ಮಿತೆ'ಯ ಭಾಗವಾಗಿ ನೋಡಬೇಕು. ದಲಿತ ಸಂವೇದನೆ; ಸೃಜನಶೀಲ ಪ್ರಕಾರಗಳಾದ ಕತೆ, ಕಾವ್ಯ, ಕಾದಂಬರಿ, ನಾಟಕಗಳಲ್ಲಿ ಢಾಳಾಗಿ ಎದ್ದು ಕಾಣುತ್ತದೆ. ಸೃಜನೇತರ ಪ್ರಕಾರಗಳಲ್ಲಿ ದಲಿತ ಸಂವೇದನೆಯ ಹೆಜ್ಜೆ ಗುರುತುಗಳನ್ನು ಪತ್ತೆ ಹಚ್ಚಲು ಹಾಗೂ ಒಟ್ಟು ಕನ್ನಡ ಕಟ್ಟುವ ಕಾಯಕದಲ್ಲಿ ದಲಿತ ವಿದ್ವಾಂಸರ ಪಾಲ್ಗೊಳ್ಳುವಿಕೆಯನ್ನು ಈ ಸಂಪುಟಗಳ ಮೂಲಕ ಗುರುತಿಸಬಹುದಾಗಿದೆ. ದಲಿತ ಅಸ್ಮಿತೆಯ ಚಹರೆಯನ್ನು ಈ ಎಲ್ಲ ಸಂಪುಟಗಳು ಹೆಚ್ಚು ಸ್ಪಷ್ಟಗೊಳಿಸುತ್ತವೆ.

ದಲಿತ ಸಾಹಿತ್ಯ ಸಂಪುಟಗಳನ್ನು ಪ್ರಾತಿನಿಧಿಕವಾಗಿ ರೂಪಿಸಲಾಗಿದೆ. ಹಾಗೂ ಇಲ್ಲಿ ಪ್ರಾದೇಶಿಕ ನ್ಯಾಯ ಮತ್ತು ಲಿಂಗ ಸಮಾನತೆಯನ್ನು ಪಾಲಿಸಲಾಗಿದೆ. ಕತೆ, ಕಾವ್ಯ, ಕಾದಂಬರಿ, ನಾಟಕಗಳಲ್ಲಿ ಅಭಿವ್ಯಕ್ತಿಗೊಂಡ 'ದಲಿತ ಸಂವೇದನೆ'ಯ ವಿಭಿನ್ನ ಆಯಾಮವನ್ನು ಇಲ್ಲಿ ಕಂಡುಕೊಳ್ಳಬಹುದಾಗಿದೆ. ಸೃಜನೇತರ ಪ್ರಕಾರಗಳಲ್ಲಿ ದಲಿತ ಯುಗ ತಡವಾಗಿ ಆರಂಭವಾಗಿದೆಯಾದರೂ ಬೆರಗು ಹುಟ್ಟಿಸುವ ಸಾಧನೆ ಕಾಣಬಹುದಾಗಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿನ ದಲಿತ ಸಂವೇದನೆಯ ಸ್ಥಿತ್ಯಂತರದ ನೆಲೆಗಳನ್ನು ಶೋಧಿಸುವ ಅಧ್ಯಯನಗಳು ಸಾಕಷ್ಟು ನಡೆದಿದ್ದವು. ಆದರೆ ದಲಿತ ಸಾಹಿತ್ಯದ ಪ್ರಾತಿನಿಧಿಕ ಪಠ್ಯಗಳ ಮಾದರಿಗಳನ್ನು ಒಂದೆಡೆ ಸಂಗ್ರಹಿಸಿ ಸಂಪುಟಗಳಲ್ಲಿ ಪ್ರಕಟಿಸುತ್ತಿರುವುದು ಇದೇ ಮೊದಲು, ಇದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ಹೆಮ್ಮೆ ಪಡುತ್ತದೆ. ದಲಿತ ಸಾಹಿತ್ಯ ಸಂಪುಟ- ಯೋಜನೆ ಯಶಸ್ವಿಯಾಗಿ ಕಾರ್ಯಗತವಾಗಲು ಶ್ರಮಿಸಿದ ಸಮಿತಿಯ ಸಂಚಾಲಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ವಿಶೇಷ ಕೃತಜ್ಞತೆ ಸಲ್ಲಿಸುತ್ತೇನೆ. ಸಮಿತಿಯ ಸದಸ್ಯರಾದ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಡಾ. ಅರ್ಜುನ ಗೊಳಸಂಗಿ, ಡಾ. ಬಿ.ಟಿ. ಲಲಿತಾನಾಯಕ್ ಅವರಿಗೂ ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಕಾಲಮಿತಿಯಲ್ಲಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟ ಎಲ್ಲ ಸಂಪಾದಕರಿಗೆ ಕೃತಜ್ಞತೆಗಳು. ದಲಿತ ಸಾಹಿತ್ಯ ಸಂಪುಟ ಯೋಜನೆಯಡಿ ಪ್ರಕಟಗೊಳ್ಳುತ್ತಿರುವ 'ಸಣ್ಣಕಥೆ' ಸಂಪುಟವನ್ನು ಅದರ ಸಂಪಾದಕರಾದ ಡಾ. ಸಣ್ಣರಾಮ ಅವರು ಕಾಲಮಿತಿಯೊಳಗೆ ಅಚ್ಚುಕಟ್ಟಾಗಿ ಸಿದ್ಧಪಡಿಸಿ ಕೊಟ್ಟಿದ್ದಾರೆ. ಅಷ್ಟು ಮಾತ್ರವಲ್ಲ; ಸಣ್ಣಕಥೆ ಸಂಪುಟದ ಎಲ್ಲ ಲೇಖಕರ ಅನುಮತಿಯನ್ನೂ ಪಡೆದಿರುವುದಾಗಿ ತಿಳಿಸಿದ್ದಾರೆ. ಈ ಸಂಪುಟದ ಸಂಪಾದಕರಿಗೆ ಮತ್ತು ಎಲ್ಲ ಲೇಖಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಯೋಜನೆಯಡಿಯ ಎಲ್ಲ ಸಂಪುಟಗಳ ರಕ್ಷಾಪುಟ ಕಲಾವಿನ್ಯಾಸ ಮಾಡಿಕೊಟ್ಟ ಶ್ರೀ ಚಂದ್ರಕಾಂತ ಪಟ್ಟಣ ಅವರಿಗೆ, ಸಂಪುಟಗಳನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಬಿ.ಎಂ.ಶ್ರೀ ಆಫ್‌ಸೆಟ್ ಅಚ್ಚುಕೂಟದ ಸಿಬ್ಬಂದಿಗೆ ಹಾಗೂ ಪ್ರಕಟಣೆಗೆ ಸಹಕರಿಸಿದ ಪ್ರಕಟಣಾ ಸಮಿತಿಯ ಸದಸ್ಯರಿಗೆ ನನ್ನ ಕೃತಜ್ಞತೆಗಳು.

೦೧-೦೫-೨೦೧೬

ನಾಡೋಜ ಡಾ. ಮನು ಬಳಿಗಾರ್

ಅಧ್ಯಕ್ಷರು

## ಒಂದು ಮಾತು

ಮೌಖಿಕ ಪರಂಪರೆಯನ್ನು ಪರಿಶೀಲಿಸಿ ನೋಡಿದಾಗ ದಲಿತ ಸಾಹಿತ್ಯ ರಚನೆಗೆ ಸುದೀರ್ಘ ಇತಿಹಾಸವಿದೆ. ಮೌಖಿಕ ಪರಂಪರೆ ಎಲ್ಲಾ ಪ್ರಕಾರಗಳಲ್ಲಿಯೂ ದಲಿತರ ಕೊಡುಗೆಯೇ ಹೆಚ್ಚೆಂಬುದಾಗಿ ಬಹುಪಾಲು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಜನಪದ ಕಥೆಗಳ ರಚನೆಯ ಇತಿಹಾಸ ಮಾನವ ಸಂಸ್ಕೃತಿಯ ವಿಕಾಸದಲ್ಲಿ ಕೃಷಿಯುಗದ ಉಗಮದಷ್ಟೇ ಹಳೆಯದು. ದಲಿತರ ಕಥಾರಚನೆಯ ಸಾಮರ್ಥ್ಯಕ್ಕೆ ಸುದೀರ್ಘ ಇತಿಹಾಸವಿದೆ. ಆದರೆ ಶಿಕ್ಷಣ ವಂಚಿತರಾದ ಈ ಜನರ ಕಥೆಗಳು ಬರಹ ರೂಪದ ಧಾರಣೆ ಮಾಡಿದ್ದು ಮಾತ್ರ ಆಧುನಿಕ ಕಾಲದಲ್ಲಿ .

ಆಧುನಿಕ ಕಾಲದಲ್ಲಿ ದಲಿತ ಲೇಖಕರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ್ದು ತಡವಾಗಿಯೇ. ಅಂದರೆ ಎಂಬತ್ತರ ದಶಕದಲ್ಲಿ. ಆದರೂ ಈ ಅಲ್ಪ ಅವಧಿಯಲ್ಲಿ ಸಾಧಿಸಿದ್ದು ನಿರೀಕ್ಷೆಗೆ ಮೀರಿದ್ದು. ಮೊದಲ ಹಂತದ ಕಥೆಗಾರರಾದ ದೇವನೂರ ಮಹಾದೇವ ಅವರು ತಮ್ಮ ಕಥೆಗಳ ಮೂಲಕ ದಲಿತ ಕೇರಿಯ ಅನುಭವಗಳನ್ನು ತೆರೆದಿಟ್ಟಾಗ ಕನ್ನಡ ಸಾಹಿತ್ಯ ಲೋಕವೇ ತಲ್ಲಣಗೊಂಡಿತು. ದಲಿತ ಬಂಡಾಯ ಸಾಹಿತ್ಯ ಘಟ್ಟದ ಸಂದರ್ಭದಲ್ಲಿ ದಲಿತ ಬಹುಸಮುದಾಯದ ಕಥೆಗಾರರು ಕಡೆಗಣಿಸಲ್ಪಟ್ಟ ಬಹುಸಂಸ್ಕೃತಿಯ ಬದುಕಿನ ವಿವಿಧ ಸ್ತರಗಳನ್ನು ತೆರೆದಿಟ್ಟಿದ್ದಾರೆ. ಬರಗೂರು ರಾಮಚಂದ್ರಪ್ಪ, ಬಿ.ಟಿ. ಲಲಿತಾನಾಯ್ಕ, ಅರವಿಂದ ಮಾಲಗತ್ತಿ, ಮ.ನ.ಜವರಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ ಮೊದಲಾದವರು ತಮ್ಮ ಕಥೆಗಳ ಮೂಲಕ ಕನ್ನಡ ಕಥಾ ಸಾಹಿತ್ಯವನ್ನು ಹಿಗ್ಗಲಿಸಿದ್ದಾರೆ. ದಲಿತ ಕಥೆಗಳ ಹೊಸಧಾರೆಯ ಸೇರ್ಪಡೆಯಿಂದ ಕನ್ನಡ ಸಾಹಿತ್ಯವಾಹಿನಿ ಶ್ರೀಮಂತಗೊಂಡಿದೆ.

ಜಾತಿಯ ಆಚರಣೆ ಇಂದು ತುಂಬಾ ಸೂಕ್ಷ್ಮವಾಗುತ್ತಿದೆ. ಸಮಾಜ ಅತ್ಯಂತ ಸಂಕೀರ್ಣವಾಗಿದೆ. ಅಂಬೇಡ್ಕರ್ ಜನ್ಮ ದಿನಾಚರಣೆಯನ್ನು ಆಚರಿಸುತ್ತಲೇ ಸಂವಿಧಾನವನ್ನು ಸುಡುವವರೂ ಇದ್ದಾರೆ. ಅಂತರ್ಜಾತಿಯ ವಿವಾಹಕ್ಕೆ ಪ್ರೋತ್ಸಾಹಿಸುತ್ತಲೇ ಮರ್ಯಾದಾ ಹತ್ಯೆಯ ಬಗ್ಗೆ ಏನೂ ಗೊತ್ತಿಲ್ಲವೆಂಬಂತೆ ಜಾಣ ಮೌನವನ್ನು ತೋರುವವರೂ ಇದ್ದಾರೆ. ತಳ ಸಮುದಾಯದ ಪರವೆಂಬಂತೆ ಮಾತಾಡಿ ಅವರನ್ನೇ ಹತ್ಯೆಗೈದು ಗೊತ್ತಿಲ್ಲದಂತೆ ಇದ್ದು ಬಿಡುವವರೂ ಇದ್ದಾರೆ. ಇಷ್ಟರ ಮಧ್ಯದಲ್ಲಿ ರಾಜಕಾರಣವೆಂಬುದು ಯಾವ ಕ್ಷೇತ್ರವನ್ನೂ ಬಿಡದೆ ತನ್ನ ಸುಪರ್ದಿಗೆ ತೆಗೆದುಕೊಂಡು ಸಾರ್ವಭೌಮತ್ವವನ್ನು ಮೆರೆಯುತ್ತಿದೆ. ಈ ಎಲ್ಲಾ ವೈರುಧ್ಯಗಳ ನಡುವೆ ದಲಿತ

ಲೇಖಕರ ಲೇಖನಿ ಹಲವೊಮ್ಮೆ ಪ್ರಖರವಾಗಿ ಝಳಪಿಸಿದರೆ ಕೆಲವೊಮ್ಮೆ ಸಾಂಕೇತಿಕ ರೂಪವನ್ನು ಧರಿಸಿ ಪ್ರತಿಭಟಿಸಿದೆ.

ದಲಿತ ಬರಹಗಾರರ ಸಾಹಿತ್ಯಕ ರಚನೆಗಳು ಕನ್ನಡ ಸಾಹಿತ್ಯ ಲೋಕದಲ್ಲಿ ದಾಖಲಾಗಿರುವುದು ತುಂಬಾ ವಿರಳ. ಈಗಾಗಲೇ ಸಾಹಿತ್ಯಕ ವಲಯದಲ್ಲಿ ಛಾಪು ಮೂಡಿಸಿರುವ ಕಥೆಗಾರರನ್ನು ಹೊರತುಪಡಿಸಿ ಹೊಸ ಕತೆಗಾರರ, ಕಡೆಗಣಿಸಲ್ಪಟ್ಟ ಕತೆಗಾರರ ಕಥೆಗಳು ಸಂಗ್ರಹಗೊಂಡಿರುವುದಿಲ್ಲ. ಈ ಶೂನ್ಯವನ್ನು ತುಂಬಲು ಹಳಬರು, ಹೊಸಬರು ಮತ್ತು ಕಡೆಗಣಿಸಲ್ಪಟ್ಟ ಕತೆಗಾರರ ಕಥೆಗಳನ್ನು ಒಟ್ಟಾರೆಯಾಗಿ ಇಲ್ಲಿ ಒಂದೇ ಸಂಗ್ರಹದಡಿಯಲ್ಲಿ ತರಲಾಗಿದೆ. ಒಂದು ಕಾಲದಲ್ಲಿ ಕೇವಲ ದಲಿತ ಕೇರಿಯ ಅನುಭವಗಳಿಗೆ ಮಾತ್ರ ಸೀಮಿತವಾಗಿದ್ದ ದಲಿತ ಲೇಖಕರ ಬರವಣಿಗೆ ಈಗ ಕೇರಿಯನ್ನು ದಾಟಿ ಸಮಾಜದ ಸಮಸ್ತ ಸಮಸ್ಯೆಗಳ ಕಡೆಗೆ ದೃಷ್ಟಿ ಹಾಯಿಸುತ್ತಿದೆ. ಭ್ರಷ್ಟಾಚಾರ, ದೌರ್ಜನ್ಯ, ರಾಜಕೀಯದ ಗಿಮಿಕ್ಸ್, ದಲಿತ ಮಹಿಳೆಯರ ಮೇಲಿನ ಅತ್ಯಾಚಾರ, ಊಳಿಗಮಾನ್ಯ ಪದ್ಧತಿಯ ದೌರ್ಜನ್ಯ ಹೀಗೆ ಬದಲಾದ ಕಾಲಘಟ್ಟದಲ್ಲಿ ದಲಿತ ಕಥೆಗಾರರ ಚಿಂತನೆ, ಅನುಭವಗಳನ್ನು ಸಹೃದಯರ ಮುಂದೆ ತೆರೆದಿಡುವ ದೃಷ್ಟಿಯಿಂದ ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡ ಈ ಕಾರ್ಯ ಸ್ತುತ್ಯರ್ಹವಾದುದು.

ದಲಿತ ಲೇಖಕರ ಕಥೆಗಳ ಸಂಗ್ರಹಣೆ ನಿಜಕ್ಕೂ ಸಾಹಸದ ಕೆಲಸವೇ ಸರಿ. ಏಕೆಂದರೆ ಹಿರಿಯ ಬರಹಗಾರರು ಅತ್ಯಂತ ಸಂತೋಷದಿಂದ ಕಥಾ ಸಂಗ್ರಹಕ್ಕೆ ತಮ್ಮ ಕಥೆಗಳನ್ನು ಕಳುಹಿಸುವುದರ ಮೂಲಕ ಪ್ರೋತ್ಸಾಹವನ್ನು ನೀಡಿದ್ದಾರೆ. ದಲಿತ ಲೇಖಕರು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ದಲಿತ ಕೇರಿಗಳು, ಲಂಬಾಣಿ ತಾಂಡಗಳು, ಭೋವಿಗಳ ಬೀದಿಗಳು ಕರ್ನಾಟಕದಲ್ಲೇ ಇದ್ದು, ಕನ್ನಡ ಭಾಷಿಕರೇ ಆಗಿದ್ದಾರೆ. ಅವರು ಬರೆದಿರುವ ಸಾಹಿತ್ಯ ಕನ್ನಡ ಸಾಹಿತ್ಯವೇ ಹೊರತು ದಲಿತ ಸಾಹಿತ್ಯವೆಂಬ ಹೆಸರಿನಡಿಯಲ್ಲಿ ಪ್ರತ್ಯೇಕವಾಗಿ ಗುರುತಿಸುವುದು, ಸಾಹಿತ್ಯದಲ್ಲಿ ಜಾತಿಯನ್ನು ಹುಟ್ಟುಹಾಕಿದಷ್ಟೇ ಕ್ರೂರವಾದುದೆಂದು ಅಭಿಪ್ರಾಯ ಪಟ್ಟವರೂ ಇದ್ದಾರೆ. ಆದರೆ ಜಾತಿಯ ಕಾರಣಕ್ಕೆ ಕನ್ನಡ ಸಾಹಿತ್ಯದಲ್ಲಿ ಕಳೆದು ಹೋಗುವವರೂ ಇದ್ದಾರೆ. ಅಂತಹ ಸಂದರ್ಭದಲ್ಲಿ ಈ ಬಗೆಯ ಸಂಗ್ರಹದ ರೂಪದಲ್ಲಾದರೂ ಬೆಳಕಿಗೆ ಬರಲಿ ಎಂದು ಅಭಿಪ್ರಾಯ ಪಡುವವರೂ ಇದ್ದಾರೆ. ಇದರ ಮಧ್ಯದಲ್ಲಿಯೂ ಹಲವರು ತಮ್ಮ ಕಥೆಗಳನ್ನು ಕಳುಹಿಸಿ ಸಂಗ್ರಹಕ್ಕೆ ಸಹಕಾರವನ್ನು ತೋರಿದ್ದಾರೆ.

ಪ್ರಪ್ರಥಮವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮನುಬಳಿಗಾರ್ ಅವರು ಈ ಯೋಜನೆಯನ್ನು ರೂಪಿಸಿದ್ದಾರೆ. ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಕಥಾ ಸಂಗ್ರಹಕ್ಕೆ ಅವಕಾಶ ಕಲ್ಪಿಸಿದ ಹಿರಿಯರೂ, ಆತ್ಮೀಯರೂ ಆದ ಡಾ. ಮಲ್ಲೆಪುರಂ, ಜಿ.ವೆಂಕಟೇಶ್ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೆಯೇ ಸಹಕರಿಸಿದ ಡಾ. ಅಮರೇಂದ್ರ ಹೊಲ್ಲಂಬಳ್ಳಿ ಅವರಿಗೆ, ಡಾ. ಅಣ್ಣಪ್ಪ ಮಳಿಮಠ ಅವರಿಗೆ ಕೃತಜ್ಞತೆಗಳು, ಕಥೆಗಳನ್ನು ಕಳುಹಿಸಿ ಸಂಗ್ರಹಕ್ಕೆ ಸಹಕರಿಸಿದ ಕಥೆಗಾರರಿಗೆ ಕೃತಜ್ಞತೆಗಳು.

ಈ ಸಂಗ್ರಹದಲ್ಲಿ ಪ್ರಕಟಿತ ಕಥೆಗಳ ಲೇಖಕರ ಅನುಮತಿಯನ್ನು ಪಡೆಯಲಾಗಿದೆ.

- ಡಾ. ಸಣ್ಣರಾಮ

## ಪರಿವಿಡಿ


| | | |
|---|---|---|
| ೧. | ಅಮಾಸ ದೇವನೂರ ಮಹಾದೇವ | ೧ |
| ೨. | ಕಪ್ಪು ನೆಲದ ಕೆಂಪುಕಾಲು - ಬರಗೂರು ರಾಮಚಂದ್ರಪ್ಪ | ೬ |
| ೩. | ಲೂಟಿ ಬಿ.ಟಿ. ಲಲಿತಾನಾಯಕ್ | ೨೦ |
| ೪. | ತೂತಿನ ದುಡ್ಡು ಮತ್ತು ನೀರು - ಅರವಿಂದ ಮಾಲಗತ್ತಿ | ೨೮ |
| ೫. | ಮೂಗನ ಪಾಡು – ಮೂಾಕೂಡು ಚೆನ್ನಸ್ವಾಮಿ ೪೩ | |
| ೬. | ಕಾಲ- ಮ.ನ. ಜವರಯ್ಯ | ೫೦ |
| ೭ | ಕಳ್ಳು ಬಳ್ಳಿ - ಬಿ.ಟಿ. ಜಾಹ್ನವಿ | ೫೦ |
| ೮. | ಮಾನಿ - ಸಣ್ಣರಾಮ | ೬೦ |
| ೯. | ಊರನ್ನಾದರೂ ತೊರೆದೇವು, ಪ್ರಾಣವನ್ನಾದರೂ ಬಿಟ್ಟೇವು, ಆದರೆ.... | |
| | ಎಸ್.ಆರ್. ಗುರುನಾಥ | ೬೭ |
| ೧೦. | ಕರುಳರಿಯುವ ಹೊತ್ತು-ಎಚ್.ಟಿ. ಪೋತೆ | ೭೪ |
| ೧೧. | ಗುರುತಿರದ ವಿಳಾಸ – ದು.ಸರಸ್ವತಿ | ೮೪ |
| ೧೨. | ಪ್ರಶ್ನೆ - ಜಿ. ಪ್ರಶಾಂತ ನಾಯಕ | ೯೫ |
| ೧೩. | ಬೋನಿಗೆ ಬಿದ್ದವರು – ಟಿ.ಕೆ. ದಯಾನಂದ | ೧೦೨ |
| ೧೪. | ಮುಟ್ಟು - ಗುರುಪ್ರಸಾದ್ ಕಂಟಲಗೆರೆ | ೧೧೩ |
| ೧೫. | ಶುದ್ಧಿ – ದಿನೇಶ್ ಮಡಗಾಂವ | ೧೨೭ |
| ೧೬. | ಮೂತ್ರ ವಿಚಾರಂ– ಬಿ.ಎಂ. ಪುಟ್ಟಯ್ಯ | ೧೩೪ |
| ೧೭. | ಅಪ್ಪ - ಹುಲಿಕುಂಟೆ ಮೂರ್ತಿ | ೧೪೯ |
| ೧೮. | ಪಂಪ್ಲೆಟ್ - ರಮೇಶ ಅರೋಲಿ | ೧೫೪ |

೧೯. ಸಾಬಿಯ ಪರೋಟ - ಹೆಚ್.ಡಿ. ಉಮಾಶಂಕ ೧೬೧

೨೦. ಜಾಡಮಾಲಿ ವಿ.ಎಂ. ಮಂಜುನಾಥ ೧೬೯

-X-

೨೧. ತೆರೆ ಮರೆಯ ಯೋಧ ವಿಕಾಸ್ ಆರ್. ಮೌಲ್ಯ ೧೭೮

೨೨. ಹನುಮಂತಿ - ದಯಾನಂದ ಕನ್ನಾಳ್ ೧೮೮

೨೩. ಪ್ರಶ್ನೆ - ಎಲ್.ಸಿ. ರಾಜು ೧೯೩

೨೪. ತೋರಣ - ಶಿವರಾಜ ಬ್ಯಾಡರಹಳ್ಳಿ ೨೦೩

೨೫. ಮೇಗಳಕೇರಿ ಸೋಮಶೇಖರ್ ಹೊಂಗಳ್ಳಿ ೨೧೧

೨೬. ಕೊಂಯ್ಯ ಮತ್ತು ಧೋತ್ರ - ಶಾಂತಾನಾಯ್ಕ ೨೩೦

೨೭ ಪಪ್ಪಾಯಿ ಮರ - ಅಣ್ಣಮ್ಮ ೨೩೯

೨೮. ಕಸಿ - ಬಿ.ರಂ. ಜಗದೀಶ್ ೨೪೪

೨೯. ಸೋಮ್ಲ ಹಾಗೂ ಸಿಎಂ - ಓಂಪ್ರಕಾಶ್ ನಾಯಕ್ ೨೫೩

# ದಲಿತ ಸಾಹಿತ್ಯ ಸಂಪುಟ

## ಸಣ್ಣಕಥೆ

## ೧. ಅಮಾಸ

· ದೇವನೂರ ಮಹಾದೇವ

ಅಮಾಸ ಎಂಬುದು ಅಮಾಸನ ಹೆಸರು. ಅವನು ಕಪ್ಪುಗಿದ್ದುದಕ್ಕೆ ಅಮಾವಾಸ ದಿನ ಹುಟ್ಟಿದ್ದಕ್ಕೆ ಅವನಿಗೆ ಅಮಾಸ ಹೆಸರು ನಿಂತಿದೆ. ಅಮಾಸ ಹೆಸರು ಯಾಕೆ ಬಂತು ಎಂದು ಅವನ ಅಪ್ಪ, ಅವ್ವ ಬದುಕಿದ್ದರೆ ಕೇಳಬಹುದಿತ್ತು. ಆದರೆ ಅವನು ಹುಟ್ಟಿದ ಮೇಲೆ ನಡೆದಾಡೊ ವೇಳೆಗೆ ಅವನನ್ನು ಹೆತ್ತವಳು ಹುಟ್ಟಿಸಿದವನು ನಾನಾ ನಿಮಿತ್ತವಾಗಿ ದೈವಾಧೀನರಾದರು. ಅಗಲೀಗ ಆಮಾಸನಿಗೆ ಮಾರಿಗುಡಿ ಅಂದರೆ ಅಮಾಸ, ಅಮಾಸ ಅಂದರೆ ಮಾರಿಗುಡಿ ಎಂಬಂತಾಯ್ತು. ಮಾರಿಗುಡಿ ಎಂದ ಮಾತ್ರಕ್ಕೆ ದಿಕ್ಕು ದೆಸೆ ಇಲ್ಲ. ಅಂತೇನಲ್ಲ . ಅಮಾಸನಂಥ ಎಷ್ಟೋ ಜನಕ್ಕೆ ಮಾರಿಗುಡಿ ನೆರಳು ನೀಡುತ್ತ ಬಂದಿದೆ. ಬೇಸಿಗೆಯಲ್ಲಂತೂ ದಗೆಗೆ ಜನ ಅಲ್ಲಿ ಜಾತ್ರೆಯಾಗುವುದು. ಅದರಲ್ಲಿ, ಅಲ್ಲಿ ಅಮಾಸನನ್ನು ಬಿಟ್ರೆ ಒಂದು ಹಳೆ ತಲೆಯ ವಾಸವಿದೆ. ಹಳೆ ತಲೆ ಅಂದರೆ ಅಂತು ಅವನ ಮಯ್ಯಕಯ್ಯತಲೆ ಅನ್ನದೆ ಕೂದಲು ಇದ್ದಷ್ಟೂ ಬೆಳ್ಳಗಾಗಿ ಅವನ ದೇಹ ತುಂಬ ಹರಿದಿವೆ. ಇದುವರೆಗೆ ಕಂಡಂತೆ ಅವನು ಕುಂತಲ್ಲಿಂದ ಎದ್ದುದನ್ನು ಯಾರೂ ಕಂಡಂತಿಲ್ಲ. ಮಾರಿಗುಡಿಯ ಮೂಲೆಗೆ ಸೇರಿದಂತೆ ಒಂದು ಮೂಲೇಲಿ ಒಂದು ಕಡೆ ಒಂದು ಕಪ್ಪು ಕಂಬಳಿ, ಯಾವ ಕಾಲೊದ್ದ ಅಂತು ಹಾಸಿದೆ. ಅದರ ಮೇಲೆ ಅವನು ಕಾಲು ಚಾಚಿಯೊ ಪಕ್ಕದ ಕಂಬಕ್ಕೊರಗಿಯೊ ಅಥವಾ ಕೈಗಳ ಹಿಂದಕ್ಕಾನಿಸಿಯೋ ಕೂತೇ ಇರುವನು. ಅವಗೆ ಇಂಥ ಮೂರು ನಾಲ್ಕು ಭಂಗಿಗಳನ್ನು ಬಿಟ್ಟರೆ ಬೇರೆಯದು ಇದ್ದಂತೂ ಇದ್ದಿಲ್ಲ. ಅವ ಅಂತೆ ಕುಂತಾಗೆಲ್ಲ ಅರೆಗಣ್ಣು ಮುಚ್ಚಿ ಕೂರುವುದು ಹಿಂದಿನಿಂದಲೂ ಹೇಗೊ ಬಂದುಬಿಟ್ಟಿದೆ. ಅದು ಬಿಟ್ಟು ಅವ ಕೂತಂತೂ ಇಲ್ಲ . ಅವನ ಈ ಸ್ಥಿತಿಯ ಕಂಡರೆ ಏನನ್ನೋ ಧೇನಿಸುತ್ತ ಕುಂತಂತೆ ಗೋಚರಿಸುತ್ತೆ . ಸುಕ್ಕುಗಳಿಂದಲೇ ಮಾಡಿದ ಅವನ ಮೊಖ ಮೇಲಿನ ರೀತಿ ಅನ್ನಿಸಲು ಕಾರಣ ಇದ್ದೀತು. ಆಥವಾ ಆ ಸುಕ್ಕು ಮೊಖಕ್ಕೆ ಒಪ್ಪುವ ಕತ್ತಿನವರೆಗೂ ಬೆಳ್ಳಗೆ ಇಳಿ ಬಿದ್ದಿರುವ ರಟ್ಟೆ ಗಾತ್ರದ ಮೀಸೆಯೂ ಕಾರಣವೆ. ಒಟ್ನಲ್ಲಿ ಅವ ಏನನ್ನೋ ಧೇನಿಸುತ್ತ ಕುಂತಂತೆ ಗೋಚರಿಸುತ್ತದೆ. ಅಲ್ಲವನ ಪಕ್ಕಕ್ಕೆ ಸೇರಿದಂತೆ ಆಳೆತ್ತರದ ಬಿದಿರುಗಳ ಸದಾ ಇದ್ದುದೆ. ಅವನು ಅತ್ತ ಇತ್ತ ಚಲಿಸಬೇಕಾದಗೆಲ್ಲ ಅಮಾಸ ಕೈಗಿರರುವುದರಿಂದ ಆ ಬಿದಿರು ಗಳದ ಬಳಕೆ ಅಷ್ಟೇನು ಈಗಿಲ್ಲ. ಆದರೆ ಕೋಳಿ ಕುರಿ ಆಡುಮರಿ ಮುಂತಾದವು ಸುತ್ತುವರಿದರೆ ಅದ್ಧರಿಸುವುದಕ್ಕೆ ಅದು ಆಗಾಗಬೇಕಾಗುತ್ತದೆ. ಇನ್ನೊ ಹೇಳಿ ಅವನ ಹೆಸರು ಹೇಳುವುದೆ ತಪ್ಪಿತು. ಸಣ್ಣವರಿಂದ ಹಿಡಿದು ದೊಡ್ಡವರರೆಗೆ ಅವನನ್ನು ಕುರಿಯಯ್ಯ ಕುರಿಯಯ್ಯ ಎನ್ನುವರು. ಅದೇನು ಅವನ ಹುಟ್ಟಿದ ಹೆಸರೆ?

ಪ್ರಶ್ನೆ ನಮಗು ಬೇಡ. ನಿಮಗು ಬೇಡ. ಇಷ್ಟರಿತು ಕಂಡುದೆ ಅವ ಬುದ್ಧಿ ಬಲ್ಲವನಾದಾಗಲಿಂದ ಹಿಡಿದು ಅವನ ತೊಡೆಗಳು ನಡೆದಾಡೋದ ಕಳೆದುಕೊಳ್ಳುವವರೆಗೆ ಊರ ಗೌಡರ ಹಟ್ಟಿ ಕುರಿಗಳ ಕಾಯ್ದುಕೊಂಡು ಬಂದುದು. ಈಗಲೂ ಮೇಲಿನ ರೀತೀಲಿ ಅರೆಗಣ್ಣು ಮುಚ್ಚಿಕೊಂಡಾಗ ಬೆರಳನ್ನು ಒಂದೊಂದು ಕುರಿ ಮಾಡಿಕೊಂಡೇನೂ ತಂತಾನು ಎಣಿಸುತ್ತ ಹೋಗುವನು. ದಿನಾ ಆರೇಳು ಸಲ ಹೀಗೆ ಇದು ತಪ್ಪಿದ್ದಲ್ಲ. ಇದ ಯಾವ ದಿನವೂ ತಪ್ಪಿಸಿಕೊಂಡೂ ಹೋಗಿಲ್ಲ. ಅಮಾಸನು ಹೀಗೆ ಕುರಿಯಯ್ಯನ ಕಣ್ಣು ಮಟಾರದಲ್ಲಿ ಬೆಳೆಯತೊಡಗಿದನು. ಈಗ ಅವನ ವಯಸ್ಸು ಹತ್ತೊ ಹನ್ನೊಂದೂ ನಡೆಯುತ್ತಿದೆ. ಕುರಿಯಯ್ಯನು ಅಮಾಸ ಬಂದಾಗ ಅಂತ ಧ್ವನಿ ಕೊಡೋದು ಅಮಾಸನ ಹಗಲು ಕೆಲಸ ಅನ್ನಬಹುದು. ಊರಿಗೆ ಕತ್ತಲು ಇಳಿಯಲು ತೊಡಗಿದಾಗಲೆ ಅಮಾಸನು ಕುರಿಯಯ್ಯನೂ ಮಠದ ಬೆಲ್ಲು ಆಗುವುದನ್ನೇ ನೆಟ್ಟಗೆ ಕಾಯುವರು. ಮಠದ ಬೆಲ್ಲು ಹೊಡೆದ ತಡವೆ ಅಮಾಸನು ಕುರಿಯಯ್ಯನ ಕಿದ್ದಂಡೆಯಲ್ಲಿ ಮಡಗಿರುವ ತಟ್ಟೆ ಗ್ಲಾಸು ತೆಗೆದುಕೊಂಡು ಲಗುಬಗ ಓಡುವನು. ಅಷ್ಟಕ್ಕಾಗಲೆ ಸಂಪೂರ್ಣ ಕತ್ತಲು ಹಿಡಿದು ಗವ್ವಗಿರುವುದರಿಂದ ಅಮಾಸ ಓಡುವುದೇನೂ ಕಾಣಿಸುವುದಿಲ್ಲ. ಕಣ್ಣು ಸೀಳಿಸಿಕೊಂಡು ನೋಡಿದರೆ ಅವ ಓಡುವ ಓಟಕ್ಕೆ ಕತ್ತಲು ಕಲಕುತ್ತಿರುವಂತೆ ಹೊಳೆಯುತ್ತದೆ. ಹಾಗೆ ಅವನು ಹೋದವನು ತಿರುಗ ಯಾವಾಗ ಬಂದ ಎಂಬುದೂ ತಿಳಿಯದು. ಬಂದವ ಅಯ್ಯಾ ಅಂದುದು ಕತ್ತಲನ್ನು ಅಲುಗಾಡಿಸುತ್ತ ಮೂಡುವಾಗಲೇ ತಿಳಿಯುವುದು. ಆಗ ಕುರಿಯಯ್ಯ ಮಲಗಿದ್ದರೆ ಎದ್ದು ಮಲಗಿ ಕೂರುವನು. ರೂಢಿಯಂತೆ ಆ ಕತ್ತಲಲ್ಲಿ ಮಠದ ಹಿಟ್ಟು ಸಾರು ಉಂಡು ಆಮೇಲ ಅಮಾಸ ಮಲಗಿ ಬಿಡುವನು. ಅಷ್ಟೊತ್ತಿಗೆಲ್ಲ ಆ ಹಿಡಿದ ಕತ್ತಲಿಗೆ ಊರು ತನ್ನ ದನಿ ಅಡಗಿಸಿಕೊಂಡು ಮಲಗಿದರೂ ಆಗಾಗ ಅಲ್ಲಲ್ಲಿ ನಾಯಿಗಳ ಕಿರುಚಾಟವೋ ಗೂಗೆಯ ಗೂ ಮೆಲುಕಾಕುತ್ತಲೆ ಇರುವುದು. ಮುದುಕ ನಿದ್ದೆ ಬಾರದ್ದಕ್ಕೆ ಕಣ್ಣು ಬಿಟ್ಟು ಕಣ್ಣಿಗೆಟಕುವಷ್ಟು ನೋಡುಲೇ ಎಚ್ಚರಿರುವಷ್ಟು ಕಾಲ ಏನನ್ನಾರೂ ತನ್ನೊಳಗೆ ಮಾತಾಡುತ್ತಲೋ ಇದ್ದು ಅಮಾಸ ಅಮಾಸ ಎಂದು ಎರಡು ಮೂರು ಸಲ ಅಂದು ಮರುತ್ತರ ಬರದೆ ಅವನೂ ಮಲಗುವನು.

ಆ ಆಜುಬಾಜುಗೆಲ್ಲ ವರ್ಷಕ್ಕೊಂದಾವರ್ತಿ ಎಲ್ಲ ಊರಿಗೂ ಬರುವ ಹಾಗೆಯೇ ಅಲ್ಲಿಗೂ ಮಾರಿಹಬ್ಬ ಬರುವುದು. ಆಗ ಮಾತ್ರವೇ ಕುರಿಯಯ್ಯ ತನ್ನ ಸ್ಥಾನವ ಬೇರೆ ಸ್ಥಳಕ್ಕೆ ಪಲ್ಲಟಿಸಬೇಕಾಗುತ್ತದೆ. ಆಗ ಮಾರಿಗುಡಿಗೆ ದುಂಬುದೂಳು ತೊಡೆದು ಸುಣ್ಣ ಕೆಮ್ಮಣ್ಣು ಬಣ್ಣವ ತುಂಬಿ ಕಣ್ಣಿಗೆ ಗುದ್ದುವಂತೆ ಮಾಡುವರು.

ಈಗ ಸುಣ್ಣ ಕೆಮ್ಮಣ್ಣು ಪಟ್ಟೆ ಹೊಡೆದು ಎಲ್ಲ ಕಡೆಗು ಮುಗಿದಿದ್ದು ಆಗ ಬೀಳುತ್ತಿದ್ದ ಎಳೆ ಬಿಸಿಲು ಅವುಗಳ ಮೇಲೆ ಬಿದ್ದು ಅದು ಹೆಚ್ಚು ಕಾಂತಿ ಬೀರುತ್ತಿತ್ತು. ಅಲ್ಲಿಗೆಲ್ಲ ಕುರಿಯಯ್ಯನ ಸುತ್ತುಮುತ್ತು ಮಾತ್ರವೆ ಮೊದಲಂತೆ ಉಳಿದಿದ್ದು ಉಳಿದ ಕಡೆಲ್ಲ ಬೆಳ್ಳಾಗಿದ್ದರಿಂದ ಅದು ಮತ್ತೂ ಕಂದಾಗಿತ್ತು. ಅಲ್ಲಿ ಹಜಾರ ತುಂಬ ಹತ್ತೆಂಟಾಳು ಅತ್ತಗೊಂದು ಕಡೆ ಇತ್ತಗೊಂದು ಕಡೆ ಓಡಾಡುತ್ತ ಪಂಜು ರೆಡಿ ಮಾಡುವುದು ಬಣ್ಣ

ಬಣ್ಣದ ಕಾಗದ ಕತ್ತರಿಸಿ ಅಂಗಳ ಅಂದ ಮಾಡಲು ಸರ ಮಾಡುವುದು ಮುಂತಾಗಿ ಚಿತ್ರ ವಿಚಿತ್ರ ಮಾಡುತ್ತಿದ್ದರು. ಹೆಚ್ಚ ಕಮ್ಮಿ ಎಲ್ಲರೂ ಅಲ್ಲಿ ಹೊಸ ಹೊಸ ಬಿಳಿ ಬಟ್ಟೆ ಹಾಕಿದ್ದರಿಂದ ಮಾರಿಗುಡಿ ತುಂಬ ಬಿಳಿ ಹೊಳಪು ಪಡೀತಿತ್ತು. ಅಲ್ಲಿದ್ದ ಬಸಣ್ಣ ಎಂಬುವವನು ಫ್ರೆಂಚು ಮೀಸೆಬಿಟ್ಟು ಕಪ್ಪಗೆ ಗಿಡ್ಡಕ್ಕೆ ಇದ್ದನು. ಅವನೂ ಬಿಳಿಬಟ್ಟೆ ತೊಟ್ಟಿದ್ದರಿಂದ ಮತ್ತೂ ಹೆಚ್ಚು ಕಪ್ಪಾಗಿ ಹೊಳೆಯುತ್ತಿದ್ದನು. ಅವನು ಬಾಯಿ ಬಿಡದಿದ್ದರೂ ಅವನ ಹಳದಿ ಬಾಚಿ ಹಲ್ಲುಗಳು ಬಿಳಿಬಟ್ಟೆ ದೆಸೆಯಿಂದ ಅವೂ ಹೊಳೆಯುತ್ತ ಹೊರಗೇ ಇದ್ದುವು. ಅವನ ಕೈಯಲ್ಲಿ ಒಂದು ಹಿಡಗಲು ಇತ್ತು. ಬಸಣ್ಣನು ದಪ ದಪ ಹೆಜ್ಜೆ ಹಾಕಿ ಕುರಿಯಯ್ಯನ ಮೂಲೆಗೆ ಬಂದು ಅಯ್ಯಾ ಎಂದು ಜೋರಾಗಿ ಕಿರುಚಿದನು. ಕುರಿಯಯ್ಯನನ್ನು ಎರಡು ಸಲವಾರು ಮಾತಾಡಿಸಿದರೆ ಮಾತ್ರವೇ ಆ ಅಂತಿದ್ದರಿಂದ ಎಲ್ಲರು ಮೊದಲೇ ಕೂಗಿಕೊಂಡು ಮಾತಾಡುವರು. ಬಸಣ್ಣನ ದನಿಗೆ ಕುರಿಯಯ್ಯ ನಿಧಾನ ಕಣ್ಣು ತೆಗೆದು ಬಹಳ ನಿಧಾನವಾಗಿ ನೋಡಿದನು. ಅವನು ತನ್ನೆದುರು ಬೆಳ್ಳಗೆ ಮೂಡುತ್ತ ಓಡಾಡುತ್ತ ಇದ್ದ ಆಕೃತಿಗಳನ್ನು ನೋಡುತ್ತ, ಅವನು ಹಾಗೆ ನೋಡುತ್ತ ಹೋದಂತೆ ಅವನಿಗೆ ಹಿಂದಣ ನೆನಪುಗಳು ಕೆಂದುತ್ತ ಕಣ್ಣ ಮುಂದೆ ಓಡಾಡತೊಡಗಿದವು. ಮಾರಿಹಬ್ಬ ಅಂದರೆ ಹುಲಿಯಾಸ, ಅಂದರೆ ಅವನೆ. ಅವನ ಪ್ರಾಯದಲ್ಲಿ ಅವನಿಲ್ಲದೆ ಹುಲಿಯಾಸ ಇದ್ದುದಿಲ್ಲ. ಹುಲಿಯಾಸ ಕಣ್ಣಳ ಮುಂದೆ ಕುಣಿಯತೊಡಗಿತು. ತಮ್ಮಟೆಯ ಸದ್ದೂ ಬಂದು ಕಿವಿಗೆ ಚಚ್ಚತೊಡಗಿತು. ಆಗ ದೊಡ್ಡಗೌಡರು ಬದುಕಿದ್ದ ಕಾಲ. ಕುರಿಯಯ್ಯ ಅಮಾಸನಷ್ಟುದ್ದದ ಹೈದನು. ಕುರಿಯಯ್ಯನ ಹುಲಿಯಾಸದ ಥೇಟಿಗೆ ದೊಡ್ಡಗೌಡರು ತಲೆದೂಗಿಬಿಟ್ಟರು. ಅಂಗಿಬಟ್ಟೆ ಇನಾಮು ಕೊಡುತ್ತ ನೀ ಇರೋಷ್ಟು ಕಾಲ ನಮ್ಮ ಹಟ್ಟಲೆ ಇರು. ನೀನು ಉಂಡ ಊಟ, ಹಾಕೊಂಡ ಬಟ್ಟೆ, ಒಂದಿಷ್ಟು ಕುರಿ ನೋಡ್ಕೊ ಅಷ್ಟೇನೆ. ಅವನು ಸುಕ್ಕುಮೊಖದ ಪ್ರತಿನರಿಗೆಯೂ ಮಾರಿಗುಡಿಯ ಬಿಳಿಬಣ್ಣದಿಂದೊ ಅಲ್ಲಿದ್ದ ಗುಂಪು ತೊಟ್ಟಿದ್ದ ಬಿಳಿ ಬಟ್ಟೆ ದೆಸೆಯಿಂದೋ ಬೆಳ್ಳಗೆ ಅಗಲವಾಗಿ ಅರಳತೊಡಗಿತು. ಬಸಣ್ಣನು ಇನ್ನೂ ಒಂದು ಸಲ ಜೋರಾಗಿಯೇ ಅಯ್ಯಾ ಅಂದನು. ಕುರಿಯಯ್ಯ ಕತ್ತ ಎತ್ತಿ ಅವನ ಅವಲೋಕಿಸಿದನು. ಬಸಣ್ಣ ನಿಂತ ಠೀವಿಗೆ ಅವ ಬಂದದ್ದು ಹೊಳೆಯಿತು. ಕುರಿಯಯ್ಯ ಬಲಗೈಲಿ ಬಿದಿರುಗಳ ಹಿಡಿದು ಇನ್ನೊಂದು ಕಯ್ಯ ಮೆಲು ನೀಡಿದನು. ನೀಡಿದ ಕಯ್ಯ ಬಸಣ್ಣ ಹಿಡಕಂಡ ಮೇಲೆ ಅದರ ಮೇಲೆ ಬಲ ಹಾಕಿ ಎದ್ದು ನಿಂತು ಬಿದಿರುಗಳ ಊರುತ್ತ ನಡೆಯುತ್ತ ಆ ಮೂಲೆ ಸೇರಿ ಕುಂತನು. ಅಲ್ಲಿ ಹಾಸಿದ್ದ ಕಂಬಳಿಯನ್ನು ಬಸಣ್ಣನು ಒಂದೆರಡು ಸಲ ಜಾಡಿಸಿ ವದರಿ ಕುರಿಯಯ್ಯ ಕುಂತ ಮೂಲೆಗೆ ತಂದು ಹಾಸಿದನು. ಕಂಬಳಿಯ ಜಾಡಿಸಿ ವದರಿದ ಬಿರುಸಿಗೆ ಕಂಬಳಿಯಲ್ಲಿದ್ದ ಧೂಳು ಕಸವೆಲ್ಲ ಎಳೆ ಬಿಸಿಲಿಗೆ ಹಾರಿ ಗಾಳೀಲಿ ಈಜತೊಡಗಿದವು. ಕಂಬಳಿಯನ್ನು ಮೊದಲು ಹಾಸಿದ್ದ ಅಷ್ಟಗಲಕ್ಕೆ ಅಂಗೈ ಮಟ್ಟದ ಕಂದು ಬಣ್ಣಕ್ಕೆ ತಿರುಗಿದ್ದ ಧೂಳು ಕಸಕಡ್ಡಿ ಪವಡಿಸಿತ್ತು. ಅದರ ಮೇಲಕ್ಕು ಆಗ ಎಳೆ ಬಿಸಿಲು ಬಿದ್ದು ಅದಕ್ಕೂ ಬಿಳಿ ಬಣ್ಣವೆ ಹಿಡಕಂಡಂತೆ ತೋರುತ್ತಿತ್ತು.

ಅತ್ತಗೆ ಆಡಿಕೊಳ್ಳುವುದಕ್ಕೆ ಅಂತ ಎತ್ತೆತ್ತಗೂ ಹೋಗಿದ್ದ ಅಮಾಸನು ಮಧ್ಯಾಹ್ನ ಮಾಡಿಕೊಂಡೆ ಮಾರಿಗುಡಿಗೆ ಬಂದುದು. ಬಂದು ನೋಡುತ್ತಾನೆ, ನೋಡಿದರೆ ಕಣ್ಣಿಗೆ

ಹಿಡಿಸಲಾರದಷ್ಟು ಅಲ್ಲಿ ಏನೇನೋ ತುಂಬಿಕೊಂಡಿತ್ತು. ಹಸಿ ಸುಣ್ಣ ಕೆಮ್ಮಣ್ಣು ನೆಲ ತಾರಿಸಿದ ಹಸಿ ತೊಪ್ಪೆ ವಾಸನೆಗಳೆಲ್ಲ ಒಂದರ ಮೇಲೊಂದು ಬಿದ್ದು ಮೂಗಿಗೆ ಮುತ್ತುತ್ತ ಮಾರಿಗುಡಿ ಗಮಲೆ ಒಂದಾಗಿತ್ತು. ಕುರಿಯಯ್ಯ ಈ ಮೂಲೆಯಿಂದ ಆ ಮೂಲೆಗೆ ಸ್ಥಳಾಂತರಿಸಿ ಮೊದಲಂತೆ ಕೂತಿದ್ದನು. ಹಜಾರದಲ್ಲಿ ನಡುವೆ ರೌಂಡಾಗಿ ಒಂದಿಷ್ಟು ಜನ ಗುಂಪುಗೂಡಿ ನಿಗರಿ ನಿಗರಿ ಏನೋ ನೋಡುತ್ತಿದ್ದರು. ಗುಂಪಿನ ಒಳಗ ಒಬ್ಬ ಮಾಡುತ್ತಿದ್ದನು. ತವಕ್ಕಂತ ಅಲ್ಲಿಗೆ ಅಮಾಸ ಹಾರಿ ಇಣುಕಿದನು. ಕಂಡದ್ದು- ಬಣ್ಣ ಬಣ್ಣದ ಬ್ರಿಂಗದ ಕಾಗದದಲ್ಲಿ ಗಂಡಭೇರುಂಡ ಕಿರೀಟ ಮುಂತಾದ ಅವಚವಿ ಕೊರೆಯುತ್ತಿದ್ದಂತೆಲ್ಲ ಸುತ್ತಗೆ ನೆರೆಕೊಂಡವರು ಹಾಗಿರಬೇಕು ಹೀಗಿರಬೇಕು ಹಾಗೆ, ಹೀಗೆ ಭೇಷ್ ಅಂತೆಲ್ಲ ತಲಾ ಒಂದು ಮಾತಾಡುತ್ತಿದ್ದರು. ನೋಡಿ ನೋಡಿ ಅವೆಲ್ಲ ಕಣ್ಣಿಗಿಳಿದ ಮೇಲೆ ಅಮಾಸನು ಅಲ್ಲಿಂದ ನೆಗೆದು ಕುರಿಯಯ್ಯನ ಪಕ್ಕಕ್ಕೆ ಬಂದು ಕೂತನು. ಎದುರಾ ಅಂಗಳದಲ್ಲಿ ಗೋಡೆಗೆ ಸೇರಿದ ಹಾಗೆ ದೊಡ್ಡ ದೊಡ್ಡದ ಕೆಂಪು ಬಿಳಿ ಬಣ್ಣದ ದೇವರ ಚತ್ರಿ ಚಾಮರಗಳನ್ನು ಹೊರತೆಗೆದು ಬಿಸಿಲಿಗೆ ಒಣ ಹಾಕಿ ಸಾಲಾಗಿ ನಿಲ್ಲಿಸಿದ್ದರು. ಅವಕ್ಕೆ ಹತ್ತಿರದ ಮೂಲೇಲಿ ಬಾನ ಎಟುಕಿಸಲು ತೆಂಗಿನ ಮರ ನಿಗುರುತ್ತ ವಾಲಾಡುತ್ತಿತ್ತು. ಅದರ ಮೇಲಕ್ಕೆ ಕಣ್ಣು ಹತ್ತಿಸಿ ಅಮಾಸ ಕಣ್ಣು ಹೋದಷ್ಟು ದೂರ ಏರಿಸಿದನು. ಆರೇಳು ಬಲವಾದ ಗೊನೆಗಳ ಕಾಯಿ ಭಾರಕ್ಕೆ ಮರ ಜಗ್ಗುತ್ತಿತ್ತು. ಬುಡಕ್ಕೆ ಕಣ್ಣು ಇಳಿಸಿದರೆ ಅಲ್ಲಿ ಅದಕ್ಕೆ ಸುಣ್ಣ ಕೆಮ್ಮಣ್ಣು ಬಣ್ಣವ ಮರದ ಬುಡದ ತುಂಬಾ ಯಾರೋ ಬಳಿದಿದ್ದರು. ಕಂಡ ಅಮಾಸ ಕುರಿಯಯ್ಯನ ಪಕ್ಕಕ್ಕೆ ಮತ್ತೂ ತವದು 'ಅಯ್ಯಾ' ಅನ್ನಲು ಏನ ಎಂಬಂತೆ ಅವ ನೋಡಲು 'ನೋಡಯ್ಯ ನೋಡಯ್ಯ ನಿನ್ನ ತಿಗನ ಮರ ಯಾರಕಣ ಸುಣ್ಣ ಬಣ್ಣ ಬಳದವರೆ' ಅಂತು. ಕುರಿಯಯ್ಯ ನೋಡಲು ಅಷ್ಟು ದೂರ ಕಾಣಿಸಿ ಆಮೇಲ ಕಣ್ಣು ಮಂಜು ಮಂಜಾಗಿ ಬಿಡುತ್ತ ಏನೂ ಕಾಣಲಿಲ್ಲ. ಅವನಿಗೆ ಕಂಡು : ಮಾಟ್ಟ ಮಾಡಿ ಯಾರೂ ಸುಡುಗಾಡಲ್ಲಿ ತೆಂಗಿನಕಾಯಿ ಹೂತಿದ್ದು, ಅದು ಸಸಿಯಾಗಿ ಕೆಂದಿ, ಭೂಮಿ ಸೀಳಿ ಬಂದದ್ದು . ಕಿತ್ತು ತಂದು ತನ್ನದು ಅಂತಾರು ಇಲ್ಲಿ ಅಂತ ಮಾರಿಗುಡಿ ಮೂಲೇಲಿ ನೆಟ್ಟದ್ದು, ಅದು ತನ್ನ ಕಣ್ಣು ಮಟಾರದಲ್ಲೇ ಗರಿ ಕಳಚ್ಚ, ಕಳಚಿದಲ್ಲಿ ಕಳಚಿದ ಗುರುತ ಉಳಿಸ್ತ, ಗರಿ ಕಳ ಕಳಚಿದಲ್ಲಿ ಗುರುತ ಮಯ್ಯಲ್ಲಿ ಉಳಿಸ್ತ ಬೆಳೀತ ಬೆಳೀತ ಮೇಲಕ್ಕೆ ಮೇಲಕ್ಕೆ ಅಂತ ಇನ್ನೂ ಮೇಲಕ್ಕೆ ಬೆಳೆದು ನಿಂತಿತು.

ಹಬ್ಬದಂದು ನೆಲಕ್ಕೆ ಹೊತ್ತು ಇಳಿಯುತ್ತಿದ್ದಂತೆಲ್ಲ ಪರಸ್ಥಳದಿಂದ ನೆಂಟರಿಷ್ಟರು ಊರಿಗೆ ಒಬ್ಬೊಬ್ಬರಾಗಿ ಇಳಿಯುವುದು ಏರತೊಡಗಿತು. ಬಂದವರು ರೂಢಿಯಂತೆ ಮಾರಿಗುಡಿಗೆ ಮೊಖಹಾಕಿಯೆ ಆಮೇಲಿನದು ಮಾಡುತ್ತಿದ್ದರು. ಕೆಲವರು ಅಲ್ಲಿ ಕುಂತು ಎಲ್ಲಾ ಮರೆತು ಲಾ ವಡೆಯುವಲ್ಲಿ ಲೀನವಾಗಿದ್ದರು. ಅವರವರ ಊರಲ್ಲಿ ಆದ ಹಿಂದಲ ಜಗಳನೆಲ್ಲ ಕೆದಕಿ ಹೆಂಗಾಯ್ತು ಏನ್ನಥೆ ಎಂಬುದೆ ಅವರ ಬಾಯಿಗೆ ಮುಖ್ಯವಸ್ತುವಾಗಿತ್ತು. ಅಂಥ ಸಂದರ್ಭದಲ್ಲೇ ಹೊರಗೆ ಜೋಳದಕಂತೆ ಕತ್ತಿಸಿ ಬಸಣ್ಣನು ತಮ್ಮಟೆ ಕಾಯಿಸುತ್ತ ಅದರ ದನಿ ಬಿಗಿ ಮಾಡುತ್ತಿದ್ದನು. ಅವನ ಸುತ್ತ ವಾನರಸೇನೆಯಂತೆ ಐಕಲು ಮಕ್ಕಳು ಸುತ್ತಿದ್ದವು. ಅದರೊಳಗೆ ಅಮಾಸನು ಒಬ್ಬನಾಗಿದ್ದನು. ಬಸಣ್ಣ

ತಮ್ಮಟೆಯನ್ನು ಎದಿಗೆ ಏರಿಸಿ ಚಡ್ ಚಡ್ ನಕುನ, ನಕುನ ನಕುನ ಬಾರಿಸಲು ಕಂಚಿಗೆ ಬಡಿದಂತೆ ತಮ್ಮಟೆ ದನಿಯು ಊರ ನಾಕ ಮೂಲೆ ಮುಟ್ಟತೊಡಗಿತು. ಸುತ್ತ ಇದ್ದ ಐಕಳು ಸುಮ್ಮನಿರದೆ ಕುಣಿಯತೊಡಗಿದವು. ಬಸಣ್ಣನಿಗೂ ಹುಮ್ಮಸ್ಸು ಬಂದು ಢಂಗ್ ಢಂಗು, ಢಂಗು ಚುಕ್ಕಿ ವಡೀತ ಅವನೂ ಕುಣಿದನು.

ಅದಕ್ಕೆ ಕುಣಿಯೋಕೆ ಐಕಳಿಗೂ ಹೆಜ್ಜೆ ಸಿಕ್ಕಿ ಐಕಳೂ ಕುಣೀತ ಬಸಣ್ಣನೂ ಕುಣೀತ ಹೋಗವರು ಬರುವರು ಸೇರಿ ಒಬ್ಬರ ಮೇಲೆ ಒಬ್ಬರು ಬಿದ್ದು ನಿಂತರು. ಅಮಾಸನಿಗೆ ಯಾರು ಹೇಳಿಕೊಟ್ಟಿದ್ದರೂ ಏನ ಕಥೆಯೊ, ಎಲ್ಲರಿಗಿಂತಲು ವೈನಾಗಿ ಹೆಜ್ಜೆ ಹಾಕುತ್ತಿದ್ದನು. ಎಲ್ಲರು ಬೆರಗಿನಿಂದ ಎಲಾ ಇವೆ ಅಂದುಕೊಂಡು ಅಮಾಸನನ್ನೇ ನೋಡುವುದು ಮಾಡುತ್ತಿದ್ದರು. ಅಷ್ಟಕ್ಕೆ ಅಲ್ಲಿಗೆ ಹೆಂಗಸೂ ಅನ್ನದೆ ಬಂದು ನಿಂತು ನೋಡುವುದಕ್ಕೆ ಬಂದು ಬಿಟ್ಟಿತ್ತು. ಬಂಗಾರಿಗಂತು ಅಮಾಸನಿಂದ ಕಣ್ಣು ಕೀಳುವುದಕ್ಕೆ ಆಗಲಿಲ್ಲ. ಅಮಾಸನನ್ನು ನೋಡುತ್ತ ನೋಡುತ್ತ ಮತ್ತೆ ಅವಳೊಳಗೆ ಕಂಕುಳಿಗೆ ಒಂದು ಕಂದ ಅಂತ ಬೇಕು ಎಂಬಂಥ ಅತ್ಯುಗ್ರ ಆಸೆ ಉಂಟಾಯಿತು. ಅವಳಿಗೆ ಮದುವೆಯಾಗಿ ಆರೇಳು ವರ್ಷ ಆಗಿದ್ದೂ ಏನೂ ಫಲ ಕಂಡಿರಲಿಲ್ಲ. ಅವರಿವರು ಆಡೊ ಮಾತಿಗೆ ಅವಳ ಘಟ ರೋಸಿ ಆ ಕಿಚ್ಚಿಗೆ ಮಾಡಬಾರದ್ದನ್ನೆಲ್ಲ ಮಾಡಿಯೂ ನೋಡಿದಳು. ಆದರೂ ಫಲ ಕಾಣಲಿಲ್ಲ. ಅವಳ ವಾರಿಗೆಯವರು ಮುವ್ವತ್ತರ ಸುತ್ತಿಗೆ ಮುಪ್ಪು ಹಿಡಿಸಿಕೊಂಡಿದ್ದರೂ ಅವಳೂ ಇನ್ನೊಂದು ಮದುವೆ ಮಾಡಿಕಳಿಸುವಂತೆ ಇದ್ದಳು. ಅವಳ ಕಂಡವರಿಗೆ ಅರಗಳಿಗೆಯಾರು ಆಸೆಯಾಗುವಂಥ ಬಿನ್ನಾಣ ಅವಳಿಗಿತ್ತು. ಅದಿರಲಿ, ಆದರೂ ಫಲ ಕಾಣಲಿಲ್ಲ. ಆದರೆ ಅವಳ ರೀತಿಯೂ ಹೆಚ್ಚು ದಿನ ಮುಂದುವರೆದುಕೊಂಡೂ ಹೋಗಲಿಲ್ಲ. ರಾತ್ರಿಯಾಯ್ತು ಅಂದರೆ ಹಟ್ಟಿಗೆ ಒಂದೊಂದಾಗಿ ಕಲ್ಲು ಬೀಳಲು ತೊಡಗಿದವು. ಅವಳ ಗಂಡ ಬಂಗಾರಿ ಬೆನ್ನಿಗೆ ಬಾಸುಂಡೆ ಬರಿಸಿ ತಲೆ ಚಚ್ಚಿಕೊಂಡು ಹೊರಕ್ಕೆ ಮೊಖ ಹಾಕದೆ ಕುಂತನು. ಆಮೇಲ ಕಲ್ಲು ಬೀಳುವುದು ನಿಂತು ಈಗ ಮರೆತು ಹೋಗುವಷ್ಟು ಆಗಿತ್ತು. ಅವಳ ಕಣ್ಣುಗಳ ಒಳಗೆ ಅಮಾಸ ಥರಾವರಿ ಕುಣಿಯುತ್ತಿತ್ತು.

ಮೇಲಿನಂತೆ ಆಗುತ್ತಿದ್ದ ಸಂದರ್ಭದಲ್ಲೇ ಇಬ್ಬರು ಯಜಮಾನರು ಕೊಬ್ಬಿದ ಎರಡು ಹೋತಗಳನ್ನು ಅಲ್ಲಿಗೆ ಸೆಳತಂದರು. ಆಗ ಅಲ್ಲಿದ್ದ ಗುಂಪು ಎರಡಾಗಿ ಸೀಳಿತು. ಐಕಳು ಮಕ್ಕಳು ಅತ್ತಗು ಇತ್ತಗು ಚೆಲ್ಲಿಕೊಂಡವು. ಹೋತಗಳೊ ತಮ್ಮಟೆ ಬಿರುಸಿಗೆ ದಿಕ್ಕಾಪಾಲು ಎಳೆಯತೊಡಗಿದವು. ಆ ಬಲಕ್ಕೆ ಹಿಡಿದವರು ಅಲ್ಲಾಡಲು ಮತ್ತೂ ಇಬ್ಬರು ಸೇರಿ ಅವ ಹಿಡಕಂಡು ಮಿಸುಕಾಡದಂತೆ ಮಾಡಿ ಮಾರಿಗುಡಿ ಮುಂದೆ ತಂದು ನೇರಕೆ ನಿಲ್ಲಿಸಿದರು. ಹೊರಗೆ ಹುಮ್ಮಸ್ಸಿನಿಂದ ತಮ್ಮಟೆ ಬಡಿಯುತ್ತಿತ್ತು. ಹೋತಗಳು ಅಲುಗದೆ ಮಿಸುಕದೆ ಕಣ್ಣುಗಳನ್ನು ಮಾತ್ರವೆ ಸುತ್ತಗು ತಿರುಗಿಸುತ್ತಿದ್ದವು. ಎದುರಾ ಗುಡಿ ಬಾಗಿಲು ತೆರದಿದ್ದು ಬೆಳ್ಳಿ ದೇವರು ಹೊಳೆಯುತ್ತಿತ್ತು. ಗುಡಿ ಒಳಗಿಂದ ಪೊದೆಯಾಗಿ ಊದುಬತ್ತಿ ಹೊಗೆ ಹೊರಕ್ಕೆ ತೇಲಿಕೊಂಡು ಬರುತ್ತಿತ್ತು. ಒಳಗಿದ್ದ ಸೊಂಟದಿಂದ ಕೆಳಕ್ಕೆ ಮಂಡಿಯಿಂದ ಮೇಲಕ್ಕೆ ಬಟ್ಟೆ ಸುತ್ತಿದ್ದ ಒಬ್ಬನು

ತೀರುತ ಮಾರು ಹೂವ ತಂದು ಹೋತಗಳ ಮುಂದೆ ನೆಟ್ಟಗೆ ನಿಂತು, ಕ್ಷಣ ಕಣ್ಣು ಮುಚ್ಚಿ ತುಟಿ ಅಲುಗಿಸುತ್ತ ವಟ ವಟ ಆರಂಭಿಸಿದನು. ಅವನ ಮಯ್ಯ ಕಪ್ಪುಗಿದ್ದು ಮೈಯೆಲ್ಲ ನರ ನರವೆ ಹಬ್ಬಿತ್ತು . ವಟಗುಟ್ಟುವುದಕ್ಕೆ ತಕ್ಕಂತೆ ಅವು ಹಿಗ್ಗುತ್ತ ಕುಗ್ಗುತ್ತ ಇದ್ದವು. ಆಮೇಲ ಅವ ಹೂವ ಎರಡು ಮಾಡಿ ಹೋತಗಳ ಕೊರಳಿಗೆ ಬಿಗಿದನು. ಅದಾದ ಮೇಲ ಬಿಡಿ ಹೂವ ಹೋತಗಳೆರಡರ ನೆತ್ತಿಯ ಮೇಲೆ ಇಟ್ಟು ತೀರುತವನ್ನು ಮೈಮೇಲೆಲ್ಲ ಎರಚಿ ಕೈ ಮುಗಿದು 'ಏನಾರ ತಪ್ಪಿದ್ದರ ಹೊಟ್ಟ ಒಳಕ ಹಾಕವ್ವ ಒಪ್ಪಿಗೆ ಕೊಡು' ಅಂದನು. ಅವನ ಆ ಚೂಪು ದನಿ ಮಾರಿಗುಡಿ ತುಂಬ ದನಿಗುಟ್ಟಿತು. ದೂರದಲ್ಲಿ ಗಲಭೆ ಬಿಟ್ಟರೆ ಮಾರಿಗುಡಿ ಒಳಗೆ ಎಲ್ಲರು ಉಸುರುಕಟ್ಟಿ ನಿಂತಿದ್ದರು. ಅವರು ಹಾಗೆ ನಿಂತಿರುವುದು ಹೋತಗಳು ಕಣ್ಣುಗಳನ್ನು ಮಾತ್ರವೆ ಸುತ್ತು ತಿರುವಿಸುತ್ತ ನೋಡುವುದು ಸ್ವಲ್ಪ ಹೊತ್ತು ನಡೆಯಿತು. ಆಮೇಲ ಹೋತಗಳು ಒಂದೆ ಸಮಕ್ಕೆ ತಲಮಯ್ಯ ವದರಿದವು. ತಮ್ಮಟೆ ದನಿಯು ಅಲ್ಲಿಂದ ಏಳುತ್ತಿದ್ದ ಗಲಗು ಗದ್ದಲವನ್ನು ನುಂಗಲು ಆರಂಭಿಸಿತು. ಒಂದಿಷ್ಟು ಐಕಳೂ ಅಮಾಸನೂ ದೊಡ್ಡವರು ಗದರಿಸಿದರೂ ಅವರು ಅತ್ತ ತಿರುಗಿದಾಗ ಇತ್ತ ಚಿಗಿದು ಮುತ್ತುತ್ತಿದ್ದವು. ಕೊಂಟನ ಪಕ್ಕವೆ ಬಲವಾಗಿದ್ದ ಒಬ್ಬನು ಚೂರಿ ಹಿಡಿದು ಲೀಲಾಜಾಲವಾಗಿ ನಿಂತಿದ್ದನು. ಇಬ್ಬರು ಹೋತಕ್ಕೆ ಹಿಂಗಾಲು ಮುಂಗಾಲು ಮಾಡಿ ಬಿಮ್ಮಗೆ ಹಿಡಿದು ಅದರ ಕತ್ತನ್ನು ಕೊಂಟಗೆ ತರುತ್ತಲೆ ಕಾಯುತ್ತಿದ್ದ ಚೂರಿಯವ ಚಕ್ಕನೆ ಹೋತದ ಕತ್ತಿಗೆ ಚೂರಿಯಿಂದ ಒಂದೇಟು ಹಾಕಿ ಚುರು ಚುರು ಅನ್ನಿಸಿಬಿಟ್ಟಾಗ ದೇಹ ತಲೆ ಎರಡಾದವು. ಕತ್ತರಿಸಿ ಒಕ್ಕಡೆ ಬಿದ್ದ ತಲೆಯ ಬಾಯಿಗೆ ಒಬ್ಬ ನೀರು ಹಾಕಿದನು. ಒಂದೆರಡು ಸಲ ಬಾಯಿ ಪಕ ಪಕ ಅಂದು ಮುಚ್ಚಿತು. ಆ ಕಡೆ ಅದರ ದೇಹ ಎಷ್ಟೆಷ್ಟೋ ಒದ್ದಾಡಲು ಒದ್ದಾಡುತ್ತಿತ್ತು. ತಲೆ ಮಾತ್ರ ಕಣ್ಣುಗಳ ಮೇಲಕ್ಕೆ ಅಗಲಿಸಿ ಆಗಲೆ ಸ್ತಬ್ದವಾಗಿಬಿಟ್ಟಿತ್ತು. ಒದ್ದಾಡುವ ದೇಹದಿಂದ ರಕ್ತ ಚಲಚಲನೆ ಚಿಮ್ಮುತ್ತ ನೆಲಕ್ಕೆ ದೊದದೊದನೆ ಸುತ್ತಲೂ ಕೆಂಪಗಾವರಿಸಿತು. ಯಾರೊ ಒಂದು ಹೈದ ತವಕನೆ ಓಡಿ ಹೋತಗಳ ಕತ್ತಿಗೆ ಸುತ್ತಿದ್ದ ರಕ್ತ ಸೋರುತ್ತಿದ್ದ ಹೂವಸರವ ತಂದುಬಿಟ್ಟನು. ಅವ ಸುಮ್ಮನಿರದೆ ಅದ ಅಮಾಸನ ಕತ್ತಿಗೆ ಸುತ್ತಿಬಿಟ್ಟು ಕುಣಿ ಅಂತಂದನು. ಅಮಾಸನಿಗೆ ಕತ್ತಿನ ಸುತ್ತೆಲ್ಲ ತಣ್ಣಗುಟ್ಟ ಅವನ ಕತ್ತಿನಿಂದಲೂ ರಕ್ತ ತೊಟ್ಟಕ್ಕುತ್ತ ಅಮಾಸ ಬೆದರಿ ಬೆಚ್ಚಿ ಅಲ್ಲಿಂದ ಕಂಬಿಕಿತ್ತನು. ಅವನಂತೆಯೆ ಒಂದಿಬ್ಬರು ಹಾಗೆ ಮಾಡಿದರು. ಮಲಗಿದರೂ ಎಷ್ಟೋ ಹೊತ್ತಿನವರೆಗೆ ಇದೇನೆ ಅಮಾಸನ ಕಣ್ಣಿಗೆ ಕಟ್ಟಿತ್ತು. ಅದರೊಳಗೆ ಅವನು ಬೆಚ್ಚಿ ಬೆದರಿ ಎಷ್ಟೋ ಸಲ ಎದ್ದು ಕೂತನು. ಅವತ್ತು ರಾತ್ರಿಯೆಲ್ಲ ಬೆಳಕು ಹಚ್ಚಿದ್ದರು. ಪರ ಊರಿನವರು ಹೆಚ್ಚಾಗಿ ಬಿಳಿ ದುಪ್ಪಟ್ಟು ಹೊದ್ದು ಮಾರಿಗುಡಿ ತುಂಬಾ ಏಕಾ ಮಲಗಿದ್ದರು. ಅದೆಲ್ಲ ಸೇರಿಕೊಂಡು ಮಾರಿಗುಡಿಗೆ ಮಾರಿಗುಡಿಯ ಬೆಳ್ಳಗಿತ್ತು .

ಅವತ್ತು ರಾತ್ರಿ ರೈಲ್ವೆ ಗ್ಯಾಂಗ್‌ಮನ್ನು ಸಿದ್ದಪ್ಪನು ವೋಪವರಾಗಿ ಹೊಟ್ಟೆ ತುಂಬ ಪರಮಾತ್ಮನನ್ನು ಹಾಕೊಂಡು ಬಂದಿದ್ದನು. ಅವನ ತಪ್ಪಲ್ಲದಿದ್ದರೂ ಅದು ಅವನನ್ನು ಆ ರಾತ್ರಿ ತುಂಬ ಆಡಿಸತೊಡಗಿತು. ಅವನಿಗೋ ಕಣ್ಣು ಮುಚ್ಚಿದರೆ ಪ್ರಳಯ ಆಗುತ್ತಿತ್ತು. ಅದಕ್ಕೇ ಅವನು ಕಣ್ಣು ಮುಚ್ಚದೆ ತೂರಾಡುವ ಹಾದಿ ಒಳಗ, ಹಿಡಿದಿದ್ದ ಕೋಲು

ಊರುತ್ತ ದಿಕ್ಕಾಪಾಲು ನಡೆದಾಡತೊಡಗಿದನು. ಹಾಗೆ ನಾಡದಾಡುತ್ತಿರುವಲ್ಲಿ ಉರಿಯೊ ಲೈಟುಕಂಬ ಕಂಡುಬಂದಲ್ಲಿ ಅವನಿಗೆ ರೋಷ ಹೊಮ್ಮುತ್ತಿತ್ತು. ಝಾಡಿಸಿ ಅದಕ್ಕೆ ಒದ್ದು ಬಿದ್ದು ಕೋಲಲ್ಲಿ ಜೋರು ಬಡಿಯುವನು. ಅಲ್ಲಾಗುವ ಸದ್ದು ಸುತ್ತಮುತ್ತನ್ನೆಲ್ಲ ನಡುಗಿಸುತ್ತ ಏಳುತ್ತಿತ್ತು. ಅಷ್ಟಕ್ಕೂ ಮುಗಿಸದೆ ಹಾಹೊ ಚೀರುತ್ತ ಅದನ್ನು ರಾಜಕಾರಣಿಯನ್ನೂ ಕಂಟ್ರಾಕ್ಟರನ್ನೋ ರೈಲ್ವೇ ಬಾಸನ್ನೂ ಆಣಿ ಬಡ್ಡಿ ಸಾಲ ಕೊಡೊ ಮಾದಪ್ಪನನ್ನೂ ಮಾಡಿಕೊಂಡು - 'ಹೊ ಸೂಳೆಮಗ್ನ, ಬಿಳಿ ಬಟ್ಟ ಹಾಕ್ಕೊಂಡು ದೇಸ ಸುತ್ತಿ ದೊಡ್ಡವ ಆಗಿ ಏನೇ ? ನನ್ನ ಕಂಡ್ರೆ ನೀನು ಮೂಗ ಮುಚ್ಚಳೀಯ ? ನಾವಾದ್ರ ಪರದೇಸಿಗಳಪ್ಪ, ಎಲ್ಲಂದ್ರ ಅಲ್ಲಿ ಬೀದಿಲಿ ಬಿದ್ದಿದ್ದೀವಿ' ವೊ ಎಂದು ದೊಡ್ಡದಾಗಿ ಬಾಯಿ ದನಿ ತೆಗೆದು ಗೋಳೋ ಎಂದು ಅತ್ತನು. ಮತ್ತೂ ಮಾತು ಜೋರು ಮುಂದುವರಿಸಿದನು. ನಿಮ್ಮ ಕಾರ ನಮ್ಮ ಮೇಲ ಬುಡಬೇಡ್ರಪ್ಪೋ . ನನ್ಮಾತ ಕೇಳಿ ನಗ್ತಾನೆ ನೋಡ್ರಪ್ಪೋ, ನಗಪ್ಪಾ ನಗು. ನಿಂಗ ನಗೊ ಕಾಲ. ನೀ ಏನ ಮಾಡ್ತಿ ನಗ್ನ' . ನಗು ಮಗ್ನ, ಬಡವ ಉದ್ದಾರ ಮಾಡವ ನೀನು. ನಗು ಮಗ್ನ. ಕಮುನಿಸಮು ಬರೇಕು. ಆಗ ನೀ ನಗೋದು ಹೋಗೋಕು. ಅಲ್ಲಿಗಂಟಾನು ನೀ ನಗ್ತಿ. ನಗಪ್ಪೋ ನಗು - ಅಲ್ಲಿ ಅಲ್ಲೋಲ ಕಲ್ಲೋಲ ಎಳಿಸುತ್ತ ಅವನ ಮಾತು ನಗು ಎಲ್ಲವು ಬೀದಿ ತುಂಬೆಲ್ಲ ಬಿದ್ದು ಎದ್ದು ಆ ಕೊರೆಯುವ ರಾತ್ರಿ ಕತ್ತಲ ಒಳಗ ಒದ್ದಾಡುತ್ತಿದ್ದವು. ಆ ಮಾತು ನಗುಗೆಲ್ಲ ನಿದ್ದೆ ಬಾರದಿದ್ದ ಅಮಾಸ ಬೆಚ್ಚಿ ಬೆಚ್ಚಿ ಕೂರುತ್ತಿದ್ದನು. ಹೀಗೆ ಎಷ್ಟೋ ಹೊತ್ತು ನಡೆದು ಆಮೇಲ ಸಿದ್ದಪ್ಪನ ದೇಹ ಎಲ್ಲಿ ಬಿತ್ತೋ ಹೇಗೆ ಬಿತ್ತೊ ಏನು ಕಥೆಯೊ ಅವನ ಮಾತು ಅವನ ನಗು ನಿಂತವು.

ಮಾರನೆ ದಿನ ಬಂತಲ್ಲ, ಆವತ್ತು ಊರು ಆಕಳಿಸುತ್ತ ಕಳೆಯಿತು. ಯಾವಾಗ ಜಗುಲಿ ನೋಡಿದರೂ ಜನವೆ ತುಂಬಿತ್ತು. ಅಷ್ಟಕ್ಕೂ ಎಷ್ಟೋ ಜನ ಇನ್ನೂವೆ ಎದ್ದೆ ಇರಲಿಲ್ಲ. ಉದಾಃ ಸಿದ್ದಪ್ಪ, ಮಧ್ಯಾಹ್ನ ಬಂತಲೆ ಹುಲಿಯಾಸದವರಿಂದ ಚಲನ ವಲನ ಮಾರಿಗುಡಿಗೆ ಬಂತು. ಗೌಡರ ಜೀತದಾಳು ಬಂದು 'ಗೌಡ್ರ ಹಟ್ಟಿಗೆ ತಿಂಗ ಕಾಯಿ ಬೇಕಂತೆ' ಎಂದು ಅಂದು ಕುರಿಯಯ್ಯ 'ಕಿತ್ಸೆ ಅಂತಲೆ' ಅವು ಮರವ ನಿಮಿಷಕ್ಕೆ ಹತ್ತಿ ಉದುರಿಸಿಕೊಂಡು ಹೋದನು. ಅತ್ತ ಹಟ್ಟಿಗಳ ಒಳಗ ಹೆಂಗಸರು ಚೆಂದಾಗಿ ತಲೆಬಾಕ್ಕೊಂಡು ಹೂ ಮುಡ್ಕಂಡು ಹೊರಕ್ಕು ಒಳಕ್ಕು ಓಡಾಡುತ್ತಿದ್ದರು. ಪ್ರಾಯದ ಹುಡುಗರಂತು ಆಗೀಗ ಆಡೋ ತುಡುಗು ಹುಡಿಗೇರ ರೇಗಿಸುತ್ತ ಅವುಗಳಿಂದ ಬೈಸಿಕೊಳ್ಳುತ್ತ ಇದ್ದವು. ಮಾರಿಗುಡೀಲಿ ಹುಲಿಯಾಸದ ತಮ್ಮಟೆ ಸದ್ದು ಎಲ್ಲರನ್ನು ಒಕ್ಕಡೆಗೆ ಸೆಳೆಯುತ್ತಿತ್ತು. ಎಲ್ಲರು ಬರೊ ಹುಲಿಗಳನ್ನೇ ಕಾಯುತ್ತ ಕಾದಿದ್ದರು. ಹಾಗೆ ಇದ್ದು ಒಮ್ಮೆಗೆ ಹುಲಿಮನ ಬಾಗಿಲು ತೆರಕೊಂಡಿತು. ಎಲ್ಲರ ಕಣ್ಣುಗಳೂ ದಬ ದಬ ಅಲ್ಲಿಗೆ ಬಿದ್ದವು. ಒಂದು ದೊಡ್ಡಯಾಸದ ಹುಲಿ ನಿಂಬೆಹಣ್ಣ ಬಾಯಲ್ಲಿ ಕಚ್ಚಿ ಒಳಗಿನಿಂದ ಹೊರಕ್ಕೆ ನೆಗೆದು ಬಂತು. ಬರುತ್ತಲೆ ಜನವೆಲ್ಲ ಹೌಹಾರಿ ಚದುರಿ ಸರಿದು ಸರಿದು ಅಲ್ಲೆ ರೌಂಡಾಗಿ ಜಾಗವಾಯ್ತು. ಅದಾದ ಮೇಲ ನಾಕಾರು ದೊಡ್ಡ ಹುಲಿಗಳು, ಕತ್ತೆ ಕಿರುಬ, ನಗುಸೊ ಕೋಡಂಗಿ ಒಂದಾದ ಮೇಲೊಂದು ಬಂದುವು. ಬಂದವುಗಳಲ್ಲಿ ಒಂದು ಮರಿ ಹುಲಿಯೂ ಇತ್ತು. ಎಲ್ಲ ಒಂದಾದ ಮೇಲ ಸಾಲಾಗಿ ನಿಂತು ದೇವರಿಗೆ

ಕೈ ಜೋಡಿಸಿ ತೀರುತ ತಕ್ಕಂದರು. ಆಮೇಲ ಅಲ್ಲಿಂದಲೆ ಕುಣಿತ ಆರಂಭ ಆಯ್ತು. ಕತ್ತೆ ಕಿರುಬನು ಎಲ್ಲರಿಗಿಂತಲು ಜೋರಾಗಿ ಮಜಬೂತವಾಗಿದ್ದು, ಅವನಿಗೆ ಯಾಸ ಥೇಟಾಗಿತ್ತು . ಅವು ಮರಿ ಕಡಿಯುವಾಗ ಲೀಲಾಜಾಲವಾಗಿ ಕತ್ತಿ ಹಿಡಿದು ನಿಂತಿದ್ದಲ್ಲ ಅವು. ಅವ, ತಮ್ಮಟೆ ದನಿಗೆ ಹೆಜ್ಜೆ ಹಾಕುತ್ತ ಬಂದ ಅಂದರೆ ಜನಕ್ಕೆ ಜನವೆ ಫರ್ಲಾಂಗು ದೂರ ಚಿಗಿಯುತ್ತಿತ್ತು. ಕುಣಿತ ಬೀದಿಗೆ ಬಂದಾಗ ಹೆಂಗ್ಸು ಮಕ್ಕಳು ಜಗಲಿ ಇಳಿದೇನೆ ಜೀವ ಹಿಡಕಂಡು ನೋಡುತ್ತಿದ್ದರು. ಏನಾರು ಕುಣಿತ ಅವರ ದಿಕ್ಕ ಬಂದರೆ ಗುಡಕ್ಕಂತ ಒಳಕ್ಕೋಗಿ ಚಿಲಕ ಹಾಕ್ಕೊಂಡು ಬುಡುವರು. ಸಣ್ಣ ಹೈಕಳಂತು ದೂರ ದೂರವೆ ಇದ್ದು ಕುಣಿತ ಹೋದತ್ತ ಹೋದವು. ಹಾಗೆ ಕುಣಿತ ನಡೆದು ಒಕ್ಕಲಗೇರಿಗು ಬಂದು ಅಲ್ಲಿ ಚಾವಡಿ ಮುಂದ ಕುಣೀತು. ಕುಣಿತಕ್ಕೆ ಗೌಡರು ಶಾನುಭೋಗರು ಎನ್ನದೆ ಮುಂತಾದ ಮೇಲು ಜಾತಿ ಮೊಖಂಡರು ಸೇರಿದ್ದರು. ಅವರೆಲ್ಲ ಕುಣಿತದವರಿಗೆ ತಂತಮ್ಮ ಸ್ಥಾನಮಾನಕ್ಕೆ ತಕ್ಕಂತ ಇನಾಮು ಕೊಟ್ಟು ಶಭಾಷಗಿರಿ ಪಡಕಂಡರು. ಊರ ಮೇಲಕ್ಕೆ ಕತ್ತಲು ಬಿದ್ದು ಕುಣಿತ ಮುಗಿದರೂ ಆದರೂ ಊರವರ ಕಣ್ಣು ಎತ್ತ ಹೋದರೂ ನಿದ್ದೆ ಮಾಡಲು ಕಣ್ಣು ಮುಚ್ಚಿದರೂ ಅಥವಾ ಹೆಂಡ್ತಿಗೆ ಸೀರೆ ಬಿಚ್ಚಿ ಬೆತ್ತಲೆ ಮಾಡಿ ನೋಡಿದರೂ ಕುಣಿತವೆ ಢಂಗು ಢಂಗು ಢಂಗುಚುಕ್ಕಿ ತಮ್ಮಟೆ ದನಿ ಜೊತೆಲೇನೆ ಕಾಣುತ್ತಿತ್ತು.

ಗೌಡರು ಮಲಗಿದರೂ ನಿದ್ದೆ ಬಾರದ್ದಕ್ಕೆ ಅಡ್ಡಾಡಲು ಬಂದರು. ಅವರ ಹಟ್ಟಿ ಜೀತಗಾರನು ಎಚ್ಚರವಾಗೆ ಇದ್ದುದರಿಂದ ಗೌಡರು ಬಂತಲೆ ಎಂದು ಕುಂತನು. ಗೌಡರು ಬೀಡಿನ ಬಾಯಿಗೆ ಸಿಕ್ಕಿಸಿ ಕಡ್ಡಿಗೀರಲು ಆ ಬೆಳಕಿಗೆ ಆ ಕತ್ತಲಿಗೆ ಅವರ ಮುಖವಷ್ಟು ಕೆಂಪಗೆ ಕಂಡು ನಂದಿತು. ಗೌಡರು ಹೊಗೆ ನುಂಗುತ್ತ ಇದ್ದು ಆಮೇಲ ಜೀತಗಾರನ ದಿಕ್ಕ ತಿರುಗಿ 'ಅದೇ ಆ ಮರಿ ಹುಲಿ ಮಾಡ್ತಿಲ್ಲ ಆ ಹೈದ ಯಾರ ಎಂದರು. ಜೀತಗಾರ 'ಅದೇ ಅಳಿ, ಅಮಾಸ' ಅಂತ ಅಂದನು. “ಅಮಾಸ ಅಂದ್ರ?' ಎಂದು ಮತ್ತೂ ಕೇಳಿದರು. ಅದಕ್ಕವ ಅದೇ ಅಳಿ, ಆ ಕುರಿಯಯ್ಯನ ಜೊತೇಲಿ ಒಂದು ತಾಯಿ ತಂದೆ ಇಲ್ಲ ತಬ್ಬಲಿ ಹೈದ ಇತ್ತಲ್ಲ ಬುದ್ಧಿ, ಅದೇನೆ ಅಂದನು. ಗೌಡರು ಕೇಳಿದವರೆ ಅತ್ಯಾಶ್ಚರ್ಯ ಆದರು. ಎಲಾ ಅವ, ಆ ಮಠದ ಮುಂದ ಹೋಗ್ ಬರೋರ ಕಾಸ್ ಕೇಳ ನಿಂತ್ಕಳೊ ಆ ಅಬ್ಬೇಪಾರಿನ ! ಹುಲಿಯಾನ್ದಲ್ಲಿ ಎಷ್ಟು ಬೆಳೆದಂತೆ ಕಾಣ್ಣನೆ ನೋಡು' ಅಂದರು. ಗೌಡರ ಕಣ್ಣುಗಳ ಮುಂದಕ್ಕೆ ಅಮಾಸ ಹುಲಿಯಾಸ ಹಾಕಿ ಬಗೆಬಗೆಯಾಗಿ ಕುಣಿಯತ್ತ ಬಂತೊ.

## ೧. ಕಪ್ಪು ನೆಲದ ಕೆಂಪು ಕಾಲು

• ಬರಗೂರು ರಾಮಚಂದ್ರಪ್ಪ

ಏನಾದ್ರೂ ಕತೆ ಬರೀಬೇಕೂಂತ ಅಂಡ್ಕೊಂಡೆ ನನಗೆ ನನ್ನವೇ ಕೆಲ ವಿಚಾರಗಳಿದ್ದವು. ಏನೇ ಬರೀಲಿ ಅದು ನನ್ನ ಕಾಲದ್ದಾಗಬೇಕು. ವಿಮರ್ಶಕವರೇಣ್ಯರು 'ಸಾರ್ವಕಾಲಿಕ ಆಶಯ' ಹುಡಿಕಿ ಸುಸ್ತಾಗಿ ಕಡೆಗೆ ಇದನ್ನು ತಿಪ್ಪೆಗೆಸೆದರೂ ಚಿಂತೆಯಿಲ್ಲ, ನಾನು ನನ್ನ ಕಾಲದಲ್ಲಿ ಕಂಡುಂಡುದನ್ನು ಬರೀಬೇಕು. ಇವತ್ತಿನಲ್ಲಿ ಬೇರು ಬಿಡಬೇಕು. ಅವತ್ತಿನ, ಇವತ್ತಿನ ಮತ್ತು ಯಾವೊತ್ತಿನದೊ ವಿಚಾರಗಳನ್ನೆಲ್ಲ ನುಡಿಯೋಕೆ ನಾನೇನು ಬೀದಿ ಬದೀಲಿ ಕೂತ ಜ್ಯೋತಿಷಿಯೂ ಅಲ್ಲ, ಪೊಳ್ಳು ಪ್ರವಾದಿಯೂ ಅಲ್ಲ ಮುಂದೆಂದಿನದೊ ಬದುಕಿನ ಒಲವು ನಿಲುವುಗಳನ್ನು ಕುರಿತು ಸುಳ್ಳೇ ಯಾಕೆ ಬರೀಲಿ? ಬರೆದು ದೊಡ್ಡ ದಾರ್ಶನಿಕನಂತೆ ಯಾಕೆ ಫೋಜು ಕೊಟ್ಟು ಗಡ್ಡ ಕೆರಕೊಳ್ಳಲಿ ? ನನ್ನಲ್ಲಿರೋ ನಿಲುವಿಗೆ, ನಾನು ತೋರಿಸೊ ಒಲವಿಗೆ ಪ್ರೇರಣೆ ನನ್ನ ಕಾಲದಲ್ಲಿ ಕಂಡ ಸತ್ಯದಲ್ಲಿದೆ. ಸತ್ಯಾನ್ವೇಷಣೆಯ ನಿಯತ್ತಿನಲ್ಲಿದೆ. ಈ ನಿಯತ್ತಿನೊಳಗೆ ಮಿಡಿಯುವ ನಾಡಿಯ ನೆಲೆಯಲ್ಲಿದೆ....

ಹೌದು, ಇಂಥ ವಿಚಾರಗಳೇನೊ ಇವೆ. ಆದರೆ ಕತೆ ಇಂಕಿನಲ್ಲಿ ಹರೀತಿಲ್ಲ. ಎಲ್ಲೊ ಆಳದಲ್ಲಿ ಆವರಿಸಿಕೊಳ್ಳೋ ಕ್ರಿಯೆಯ ಆರಂಭ ಮಾತ್ರ ಅನುಭವಕ್ಕೆ ಬರಿದೆ. ಈ ಅನುಭವದಲ್ಲಿ ಒಂದು ರೀತಿಯ ಹಿಂಸೆ.. ಹಿಡಿದು ಕಾಡುವ ಎಳೆಯೆಳೆಗಳೆಲ್ಲ ಒಟ್ಟಾಗಿ ಒಂದು ರೂಪಕ್ಕೆ ಬರಬಾರದೆ ? ಒಳತೋಟಿಯ ವೇದನೆಗೆ ಒಂದು ನಿಲುಗಡೆ ಸಿಗಬಾರದೆ ? ತಲೆ ತುಂಬ ಕಾಡುವ ಇದು ಮನತುಂಬ ಆವರಿಸಿ ಹೊರದಾರಿ ಹುಡುಕಿಕೊಳ್ಳಬಾರದೆ?...

ಟೇಬಲ್ಲಿನ ಮೇಲೆ ತಲೆಯಿಟ್ಟು ಹಾಗೇ ಕೂತೆ. ಮನಸ್ಸಿನಲ್ಲೇನೋ ಆಂದೋಲನದ ಅನುಭವ. ಸ್ವಲ್ಪ ಹೊತ್ತಾಗಿರಬೇಕು. ಇದ್ದಕ್ಕಿದ್ದಂತೆ ದಡಾರನೆ ಸದ್ದಾಗಿ ಬೆಚ್ಚಿ ಬಿದ್ದು ನೋಡಿದರೆ ಕರಿಯ ಕದ ಕಿತ್ತು ಒಳಬಂದಿದ್ದ ! ಅವನ ಮುಖದಲ್ಲಿ ಭಯ ಕುಣೀತಾ ಇದೆ. ಗುಳಿಬಿದ್ದ ಕಣ್ಣುಗಳು, ಅವಿತುಕೊಳ್ಳೋ ಜಾಗಕ್ಕೇನೋ ಅತ್ತಿತ್ತ ಹೊರಳಾ ಇವೆ. ಮೈ ನಡುಗ್ತಾ ಇದೆ. ಬೆವರು ಸುರೀತಾ ಇದೆ.

ಎಲ್ಲಿ ಹೋಗಲಿ, ಏನು ಮಾಡ್ಲಿ ಅಂತ ಗೊತ್ತಾಗದೆ, ಕರಿಯ, ವಿಲವಿಲನೆ ಅತ್ತಿತ್ತ ಅಡ್ಡಾಡ್ತ ಇರುವಾಗ ದುಡಮ್ಮನೆ ಬಂದು ಎದುರಿಗೆ ಬಿದ್ದದ್ದೇನೆಂದು ನೋಡ್ತಾನೆ: ತನ್ನ ಹೆಂಡತಿ ! ಅರೆ ! ಇದೇನು ಅಂತ ಅವಳನ್ನು ಮೇಲೆತ್ತೋಕೆ ಹೋಗುವಾಗ “ನಿಲ್ಲ ಬೇವರ್ಸಿ ನನ್ ಮಗ್ನೆ” ಅನ್ನೊ ಆರ್ಭಟ ಕೇಳಿ... ಅದೇ... ಅವನದೇ ಈ ಆರ್ಭಟ

ಅಂತ ಬೆದರಿ ಹಾಗೇ ನಿಂತ ಅಷ್ಟರಲ್ಲೊಬ್ಬ ಧಡೂತಿ ಆಸಾಮಿ, ನೋಡೋಕೆ ಜಮೀನ್ದಾರನೊ, ಕಾರ್ಖಾನೆ ಮಾಲೀಕನೊ ಇದ್ದ ಹಾಗೆ ಕಾಡ್ತಾನೆ, ಅವನು ಹತ್ತಾರು ಜನ ದಾಂಡಿಗರ ಜೊತೆ ಬಂದು ಕರಿಯನ ಕಪಾಳಕ್ಕೆ ಬಾರಿಸಿದ. ದಾಂಡಿಗರು ಹೆಂಡತಿನ ಎಳೆದು ಮೇಲೆತ್ತಿ ಹಿಡಕೊಂಡು ನಿಂತರು. ಆಕೆ ಅತ್ತೂ ಕರೂ ಕೊಸರಾಡಿದರೂ ಬಿಡದಾಗ ಧೈರ್ಯಮಾಡಿ ಮುನ್ನುಗ್ಗಿದ. ಆದರೆ ದಾಂಡಿಗರ ಸೆರೆಗೆ ಸಿಕ್ಕದ ಧಡೂತಿಯ ಬಾಯಿ ದೊಡ್ಡದಾಯ್ತು. "ಕೊಟ್ಟ ಸಾಲಕ್ಕೆ ದುಡ್ಕಂಡ್ ಬಿದ್ದಿರೋ ಬಡ್ಡಿಮಗೆ ಅಂದ್ರೆ ಅವ್ರವ್ರ ಮಾತ್ ಕಟ್ಕಂಡ್ ಎದುರುತ್ತರ ಕೊಡ್ತೀಯೇನೆ ? ನಿನ್ ಹೆಂಡ್ತಿ ನನ್ ಮನ್ಯಾಗ್ ಬಿದ್ದಿಲ್ಲ ಬಿಡೋ ನನ್ ಹತ್ರ ಎಂದರೆ ಕೆನ್ನೆಗೆ ಹೊಡೀತೀಯ ? ಬಿಗೀರೊ ಈ ಬೋಳಿಮಗುನ್ನ ಮರಕ್ಕೆ" ದಾಂಡಿಗರು ಮಿಕಿಮಿಕಿ ಅಂತ ಮರ ಹುಡುಕಿದು. ಕಾಣದೆ ಕಣ್ ಕಣ್ ಬಿಟ್ಟರು. ಹೇಗೆ ಹೇಳೋದು ದಣಿಗಳಿಗೆ ಅಂತ ಮುಖ ಮುಕ ನೋಡ್ಕಂಡರು. ತಲೆ, ಮೈ, ಕೈ, ಎಲ್ಲಾ ಕೆರಕೊಳ್ತ ಉಗುಳೂ ನುಂಗಿಕೊಂಡರು. ಇವರ ಚಡಪಡಿಕೆ ನೋಡಿ ಉರಿಯದ್ದು ದಣಿಯೇ ಕೇಳಿದ: "ಏನಾಯ್ಕೆ ನಿಮ್ಗೆ, ಒಳ್ಳೆ ತೊಣಚಿ ಹೊಕ್ಕೋರ್ ಥರಾ ಆಡ್ತಿದ್ದೀರ?" ಒಬ್ಬ ದಾಂಡಿಗ "ಮರ, ಮತ್ತೆ ಮರ ಇಲ್ಲ" ಅಂತ ತೊದಲಿದ. ಧಡೂತಿ ದಣಿಗೆ ಎಲ್ಲಿಲ್ಲದ ಸಿಟ್ಟು ಬಂತು.

"ಸುಖ ಸಮೃದ್ಧಿ ತುಂಬಿರೊ ನಮ್ಮ ನಾಡಿನಲ್ಲಿ ಒಂದು ಮರಕ್ಕೆ ಗತಿಯಲ್ಲ ಅಂದ್ರೇನಲ್ಲಿ ? ಮರ ಬೆಳೋದ್ ಬಿಟ್ಟು ಮಕ್ಕಳನ್ ಹಡೋಕ್ ಮಲ್ಬಾರೆ ನಮ್ ಜನ. ನನ್ಗೊಂದ್ ಮರ ದಿಕ್ಕಲ್ಲ ಅಂದ್ರೆ ಗ್ರಾಚಾರ ಬಿಡಿಸ್ಬಿಡ್ತೀನಿ, ಆ ಫಾರೆಸ್ಟ್ ಡಿಪಾರ್ಟ್‌ಮೆಂಟ್ನೋರೆಲ್ಲ ಫನಾ ಅನ್ನಿಸ್ಬಿಡ್ತೀನಿ..."

ಹೀಗೆ ಧಡೂತಿ ದಣಿ ಮನಸೋ ಇಚ್ಚೆ ರೇಗಾಡ್ತಾ ಇರುವ ಸುಮುಹೂರ್ತದಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಕುರ್ಚಿಗಳಷ್ಟೇ ಅಲ್ಲ, ಕಾಡು-ಕೊಂಪೆಗಳೆಲ್ಲ ಅಲುಗಾಡಿದವು.

ತಕ್ಷಣ ಅಲ್ಲೊಂದು ಮರ ಪ್ರತ್ಯಕ್ಷವಾಯ್ತು! ಅದೊಂದು ದೊಡ್ಡ ಮರ. ಎಷ್ಟೋ ಕಾಲದ ಮರ ಅನ್ನೋದು ನೋಡಿದ ಕೂಡ್ಲೆ ಗೊತ್ತಾಗಿತ್ತು. ಅದರ ಮೈಯೆಲ್ಲ ಗಡುಸಾಗಿತ್ತು. ದಾಂಡಿಗರು ಕರಿಯನನ್ನು ಎಳೆತಂದು ಕಟ್ಟಿದ್ದರು. ಕರಿಯನ ಜೊತೆ ಮರವೂ ಕಟ್ಟಿಸ್ಕೊಂಡಿತ್ತು. ಕಟ್ಟಿದ್ದಾದ ಮೇಲೆ ಧಡೂತಿ ದಣಿ "ಈಗೇನಾಗುತ್ತೆ ನೋಡ್ತಿರೋ ಬಡ್ಡಿಗಂಡ" ಎಂದು ದಾಂಡಿಗರಿಗೆ ಸನ್ನೆ ಮಾಡಿದ. ದಾಂಡಿಗರು ಇದಕ್ಕೇ ಕಾಯ್ತಿದ್ದರೇನೊ ಎಂಬಂತೆ ಕರಿಯನ ಹೆಂಡತಿಯ ಹರಕು ಸೀರೆಗೆ ಕೈ ಹಾಕಿದರು. ದರದರ ಎಳೆದರು. ಸೀರೇನ ಚೂರು ಮಾಡಿದರು. ಕಿರುಚೆ ಬಾಯಿಗೆ ಬಟ್ಟೆ ತುರುಕಿದರು. ಅಷ್ಟರಲ್ಲಿ ಧಡೂತಿ ಆಸಾಮಿ ಆರ್ಭಟಿಸಿದ. "ನಾನ್ ಬೇಕು ಅಂದೋಳ ನನ್ನದುರೇ ಮಜಾ ಮಾಡ್ತಿರೇನೋ ಸೂಳೇಮಕ್ಕ? ಮೊದೆಗಳಿಗೇನು ಬಂತೂ ಬರ ? ಇಲ್ಲೆಲ್ಲೂ ಇಲ್ವೇನೊ?"

ದಾಂಡಿಗರು ನಿಂತಲ್ಲಿಂದಲೆ ಸುತ್ತಮುತ್ತ ಹುಡುಕಿದರು ಕೂಡಲೆ ಹತ್ತಿರದಲ್ಲೊಂದು ಹುಡುಕಿದರು ಪೊದೆ ತೆವಳ್ತಾ ಇರೊ ಹಾಗೆ ಕಾಣಿಸ್ತು, ಧಡೂತಿ ದಣಿಯ

ಆರ್ಭಟಕ್ಕೆ ಅಲ್ಲಾಡಿದ ಗಾಳಿಯ ಸದ್ದು ನಿಂತಾಗ ಮೊದೇನೂ ಕೂತ್ಕಂಡು, ನಿಲ್ಲದೆ ಕೊಸರಾಡಿ ಕೂತು ಇದ್ದಬದ್ದದ್ದರಲ್ಲಿ ಮಾನ ಮುಚೊಳ್ಳೋ ಪ್ರಯತ್ನ ಮಾಡ್ತಿದ್ದ ಕರಿಯನ ಹೆಂಡ್ತೀನ ಎಳಕೊಂಡು ಪೊದೆ ತೂತಿದ್ದ ಜಾಗಕ್ಕೆ ಹೋದರು-ಆ ದಾಂಡಿಗರು. ಆಕೆ ಅಳ್ತಾ ಕೆಲವರನ್ನು ನೂಕ್ತಾ ಇದ್ದಾಗ ಕರಿಯ ತನ್ನ ಕಟ್ಟುಗಳನ್ನು ಕಿತ್ತೆಸೆಯೋಕೆ ಹಲ್ಲು ಕಚ್ಚಿ ಪ್ರಯತ್ನಿಸಿದ. ಶಕ್ತಿಗುಂದಿ ಒದ್ದಾಡಿದ. ಆದರೆ ಆಗಲಿಲ್ಲ. ಧಡೂತಿ ಆಸಾಮಿ ಅವನ ಜುಟ್ಟು ಹಿಡಿದು ಅಲ್ಲಾಡಿಸಿ ಹೆಮ್ಮೆಯಿಂದ ನಕ್ಕ. ಕರಿಯ ಪ್ರಯತ್ನ ಪಡ್ತಾನೇ ಇದ್ದ. ಇದ್ದಕ್ಕಿದ್ದಂತೆ ಕಿಟಾರನೆ ಕಿರುಚಿದ ಹೆಂಡತಿಯ ದನಿ ಕೇಳಿಸಿ ಸ್ತಂಭಿತನಾಗಿ ನಿಂತ. ಗೆಲುವಿನಿಂದ ಬರಿರೊ ದಾಂಡಿಗರನ್ನು ಕಂಡು ಕಣ್ಣುಮುಚ್ಚಿ ಮರಕ್ಕೆ ಒರಗಿದ,

.....ಈಗ ಬೀದಿ ದೃಶ್ಯ ಅದೂ ನಗರದ ಬೀದಿ, ಅಲ್ಲೊಂದು ಮೆರವಣಿಗೆ, “ಕರಿಯನ ಮೇಲಿನ ದೌರ್ಜನ್ಯಕ್ಕೆ ಧಿಕ್ಕಾರ. ಆತನ ಹೆಂಡತಿಯ ಮೇಲಿನ ಅತ್ಯಾಚಾರಕ್ಕೆ ಧಿಕ್ಕಾರ. ಕೊಲೆಗಡುಕರಿಗೆ ಶಿಕ್ಷೆಯಾಗಲಿ...” ಮುಂತಾದ ಘೋಷಣೆಯ ಮೆರವಣಿಗೆಯ ಹಿಂದೆ ಮುಂದೆ ಪೋಲೀಸು ವ್ಯಾನುಗಳು. ಇದು ಹೀಗೆ ನಡೆಯುತ್ತಿರುವಾಗ.....

....ದೃಶ್ಯ ಬದಲಾಗುತ್ತೆ. ಮೊದಲಿನ ಜಾಗ. ಅಲ್ಲ ಕರಿಯನ ಹೆಣ ಬಿದ್ದಿದೆ. ಪ್ಲಾ ಕರಿಯ ಹೋಗೇ ಬಿಟ್ಟ ಅಂತ ನೋಡೇನೆ.... ಕರಿಯ ಕರಿಯ ಇನ್ನೊಬ್ಬ ಮರಕ್ಕೆ, ಅದೇ ಮರಕ್ಕೆ ಬಿಗಿಯಲ್ಪಟ್ಟಿದ್ದಾನೆ ! ಆ ಸತ್ತ ಕರಿಯನಿಗೂ ಈ ಕರಿಯನಿಗೂ ಏನು ವ್ಯತ್ಯಾಸ ಅಂತ ನಾನು ಹುಡುಕ್ತಾ ಹೋಗೇನೆ. ಬುದ್ಧಿಜೀವಿಯ ಬುತ್ತಿಕಳ್ಕೊಂಡು, ಅದೇ ಸಂದರ್ಭದಲ್ಲಿ ಪರಿಸ್ಥಿತಿಯ ಸೂಕ್ಷ್ಮ ಸಂವೇದನೆಗೂ ಒಳಗಾಗೇನೆ. ಬರಬರಾ ಬುದ್ದಿಜೀವಿ ಸ್ವಲ್ಪ ಹಿಂದಕ್ಕೆ ಸರಿದು, ಸಂವೇದಕ ಮುಂದೆ ಬಾನೆ. ಸರಿಯಾಗಿ ಸೂಕ್ಷ್ಮ ಸ್ಪಂದನದಿಂದ ತಿಳ್ಕೊಳ್ತಾನೆ “ಆ ಕರಿಯ ಈ ಕರಿಯ ಬೇರೆ ಅಲ್ಲ.” ಆದರೆ ಹಿಂದಿದ್ದ ಬುದ್ಧಿಜೀವಿ ದೊಡ್ಡ ಕಂಠದಲ್ಲಿ ಕೂಗಿದ:

“ಅವ್ರು ಐದಡಿ ಉದ್ದ ; ಇನ್ನು ಐದೂಕಾಲಡಿ, ಅವು ಪೂರ್ತಿ ಕಪ್ಪು. ಇವನು ಕಡಿಮೆ ಕಪ್ಪು. ಅವನ ಮೂಗು ಮೊಂಡು. ಇವನ ಮೂಗು ಉದ್ದ ಅವನ ಕಣ್ಣು ಕಾಲಿಂಚು ಒಳಗೆ ಹೋಗಿದ್ದರೆ ಇವನ ಕಣ್ಣು ಮುಕ್ಕಾಲಿಂಚು ಒಳಗಿದೆ. ಆಮೇಲೆ ಕೆನ್ನೆ ಮೇಲೆ ಏಟು ತಿಂದ ಬಾವು ಅವನಿಗಿಂತ ಎರಡು ಸೆಂಟಿಮೀಟರ್ ಹೆಚ್ಚಾಗಿದೆ....”

ಇನ್ನೂ ಸಾಗ್ತಾ ಇತ್ತೇನೊ ಬುದ್ದಿಜೀವಿಯ “ಸೂಕ್ಷ್ಮ” ವಿಶ್ಲೇಷಣೆ, ಆದರೆ ಸಂವೇದಕ ಅಡ್ಡಗಾಲು ಹಾಕಿದ. “ನಿನ್ನ ಸೆಂಟಿಮೀಟರ ಸುಟ್ಟು ಹಾಕು. ಅಳೆಯೋ ಕಣ್ಣಿಗೆ ಸ್ವಲ್ಪ ಮನುಷ್ಯತ್ವ ತುಂಬು. ಇಲ್ಲಿ ಯಾರಿಗೆ ಮುಖ ಇದೆ, ಯಾರಿಗೆ ಇಲ್ಲ, ಯಾರಿಗೆ ಬದುಕಿದೆ ಯಾರಿಗೆ ಇಲ್ಲ ಅಂತ ಸತ್ಯಾಗಿ ನೋಡು. ನಿನ್ನ ಬುದ್ದಿಯ ಸೂಕ್ಷ್ಮತ್ವ ಸೆಂಟಿಮೀಟರ್ ಜೊತೆಗಿದ್ದೆ ನನ್ನ ಜೊತೆಗಿಲ್ಲ. ಆಗ ನೋಡು ಆ ಕರಿಯ ಈ ಕರಿಯ ಯಾರಿಗೇ ಆಗ್ಲಿ ಬದುಕು ಇದೆಯಾ? ಇಂಥವರಿಗಿಲ್ಲಿ ಮುಖ ಇದೆಯಾ? ಇವರೆಲ್ಲ ಮುಖವಿಲ್ಲದವರು....”

****

ಬುದ್ಧಿಜೀವಿ ಸ್ವಲ್ಪ ತಬ್ಬಿಬ್ಬಾದ, ಗೊಂದಲಗೊಂಡ. ಸಂವೇದಕನ ಮಾತು ಮೆಲಕು ಹಾಕಿದ. ಮೆಲುಕುವಿಕೆಯೊಂದಿಗೆ ಅವನಲ್ಲಿ ಹೊಸ ಮನಸ್ಸು ಮೂಡ್ತಾ ಇತ್ತು.....

ನನ್ನೊಳಗಿನ ತಿಕ್ಕಾಟದೊಂದಿಗೆ ಈ ಕರಿಯನೂ ಅಲ್ಲಿರಲಿಲ್ಲ. ಇವನೂ ಸತ್ತು ಬಿದ್ದದ್ದ, ಧಡೂತಿ ಆಸಾಮಿಯೊಬ್ಬ ದಾಂಡಿಗರೊಂದಿಗೆ ಗಹಗಹಿಸ್ತಾ ಇದ್ದ. ಆಶ್ಚರ್ಯ ಆತಂಕಗಳಿಂದ ದಿಟ್ಟಿಸಿದೆ. ಇನ್ನೊಬ್ಬ ಕರಿಯ ಕಟ್ಟುಗಳಿಂದ ಬಿಡುಗಡೆಗೆ ಪ್ರಯತ್ನಿಸುತ್ತಾ ಇದ್ದ. ಪೊದೆಯೊಳಗಿನಿಂದ ನರಳಾಟ ಸೀಳಿ ಬಾ ಇತ್ತು!

ಈಗಲು ಬುದ್ಧಿಜೀವಿ ಸುಮ್ಮಿರಲಿಲ್ಲ. ಮೊದಲಿನ ಗಟ್ಟಿತನವಿಲ್ಲದೆ ಮೆಲ್ಲಗೆ ಹೇಳಿದ "ಈ ಕೂಲಿ ಹೆಂಡತಿ ಕಿರುಚಿದ ಲಯಕ್ಕೂ ಹಿಂದಿನವನ ಹೆಂಡತಿ ಕಿರುಚಿದ ಲಯಕ್ಕೂ ವ್ಯತ್ಯಾಸವಿದೆ. ಅವಳು ಸುಮ್ಮನೆ ಕಿರುಚಿದರೆ ಇವಳು ನಾಲಗೆ ಹೊರಡೆ ಹಾಕಿ...."

ಸಂವೇದಕನಿಗೆ ಸಿಟ್ಟು ಬಂದಿತ್ತು. 'ನಿನ್ನ ನಾಲೆ ಬಿದ್ದು ಹೋಗ' ಎಂದ. ಬುದ್ಧಿಜೀವಿ ಸುಮ್ಮನಿದ್ದಾನೆ ? "ಯಾಕಯ್ಯ" ಅಂತ ಕೆರಳಿ ಕೇಳಿದ. ಯಾಕೇಂದ್ರೆ? "ಕೇವಲ ಹೊರಗಡೆ ನೋಡಿ ನಿಲುವು ತಾಳೊ ನೀನೆಂಥ ಬುದ್ಧಿಜೀವಿ." ಕ್ಷಣಕಾಲ ಕಣ್ಮುಚ್ಚಿ ಹೇಳತೊಡಗಿದ "ಅವರು ಇವಳ ಸೀರೆ ಕಿತ್ತು ಎಸ್‌ದಾಗ ನನಗೆ ಒಳಗಡೆ ಕಂಡದ್ದು ಬೇಲೂರು ಶಿಲಾಬಾಲಿಕೆಯಂಥ...."

ಸಂವೇದಕ ತಕ್ಷಣ ಸಿಡಿದು "ಬಾಯುಚ್ಚು, ನಿಂದೇನ್ ಬುದ್ದೀನೊ ಇಲ್ಲ ಲದ್ದೀನೋ?" ಇವರ ಸಿಡಿತಕ್ಕೆ ಅವನು ತಣ್ಣಗಾದ. ಎಷ್ಟಾದರೂ ಬುದ್ಧಿಜೀವಿ! ಒಂದು ಕ್ಷಣ ರುದ್ರಮೌನ, ಕದನವಿರಾಮ, ಆಮೇಲೆ ಸಂವೇದಕ ಮುಂದುವರೆಸಿದ: "ಅವತ್ತೂ ಇಂಥ ಜನವೇ ದುಡಿದು ನೆಲಕ್ಕೆ ಬಿದ್ದು ನರಳಿದ್ದು, ಮರಕ್ಕೆ ಬಿಗಿಸ್ಕೊಂಡು ಬಾಳಿಗೆ ಬೆಂಕಿ ಇಡಿಸ್ಕೊಂಡಿದ್ದು...." ಹೀಗೆ ಒಂದೇ ಉಸಿರಿನಲ್ಲಿ ಏನೇನೊ ಇತಿಹಾಸ ಹೇಳಿದ. ಅವನ ಮಾತುಗಳಿಗೆ ಇವನು ಕರುಗ್ತಾಹೋದ. ಹಿಂದೆ ಇವನಲ್ಲಿ ಮೂಡ್ತಾ ಇದ್ದ ಹೊಸ ಮನಸ್ಸಿನೊಳಗೆ ಮನುಷ್ಯತ್ವದ ನಿರ್ದಿಷ್ಟ ನೆಲೆ ಒದುಗ್ತಾ ಬಂತು. ಗೊಂದಲ ಮರೆಯಾಗ್ತ ಬಂತು. ಇದ್ದಕ್ಕಿದ್ದಂತೆ ಕಿರುಚಿದ:

"ಅದೊ ಕರಿಯ ನಮ್ಮ ಕರಿಯ"

ಬುದ್ಧಿಜೀವಿಯ ಬಾಯಿಗೆ ಬೆಚ್ಚಿ ಸಂವೇದಕ ನೋಡಿದ. ಮೂರನೇ ಕರಿಯನೂ ಸತ್ತು ಬಿದ್ದಿದ್ದ. ಇನ್ನೊಬ್ಬ ಮರಕ್ಕೆ ಬಿಗಿಸಿಕೊಂಡಿದ್ದ ಇವನನ್ನು ನೋಡಿ ಕಿರುಚಿದ್ದ ಬುದ್ಧಿಜೀವಿ ಮನಸ್ಸು ತುಂಬಿ ಮಾತಾಡ್ತ ಹೋದ

"ಇವನೂ ಹಾಗೇ, ಅದೇ ಸ್ಥಿತಿ. ಅದೇ ಯಾತನೆ, ಅದೇ ಹಿಂಸೆ..."

ಸದ್ಯ, ಇಬ್ಬರ ಸಂಘರ್ಷ ಬೇಗ ನಿಂತು ಇವನು ಅವನೊಂದಿಗೆ ಒಂದಾದದ್ದು ನನಗೊಂದು ನಿರ್ದಿಷ್ಟ ನೆಲೆ ಸಿಕ್ಕಂತಾಯ್ತು. ಏನೇ ವಿಚಾರಗಳಿದ್ದರೂ ಬರಹಗಾರ ಖಚಿತವಾಗೋದು ಸೃಜನಶೀಲ ಕ್ರಿಯೆಗೆ ಕೂತಾಗ ನೋಡಿ, ಈಗ ಅವರಿಬ್ಬರೂ ಸೇರಿದ ನಾನು ನೋಡ್ತಾ ಹೋದೆ.



ನೋಡ್ತಾ ಹೋದಂತೆ ಆ ಮರ, ಮೊದೆ, ಮತ್ತೆ ಮತ್ತೆ ಮೂಕ ಸಾಕ್ಷಿಯಾದವು. ನರಳುವ ನೋವಿಗೆ, ಮುಚ್ಚಿದ ಬಾಯಿಗೆ, ಕಟ್ಟಿದ ಮೈಗೆ ಕಣ್ಣಾಗಿ ಕಪ್ಪಿಟ್ಟವು, ಅವುಗಳು ಹಸಿರು ನಿಟ್ಟಿಸಿರಾಯ್ತು.

ಒಬ್ಬನಾದ ಮೇಲೊಬ್ಬ ಕರಿಯ. ಅದೇ ಲಕ್ಷತಿ ಧಡೂತಿಗಳು. ನಡು ನಡುವೆ ಪುರೋಹಿತ ಧಡೂತಿಗಳು. ಜನಿವಾರ, ಶಿವದಾರ, ಅಷ್ಟೇಕೆ, ಉಡಿದಾರದ ಪುರೋಹಿತ ಪುಣ್ಯ ಪುರಷರು ! ಅವರ ಗಂಟೆಯಂಥ ಬಾಯಿಗಳು. ಅವುಗಳೊಳಗೆ ಗಂಟೆ ಬಾರಿಸುವ ನಾಲಗೆಗಳು, ಲಕ್ಷತಿ ಧಡೂತಿಗಳದೊಂದು ಮಾದರಿಯಾದರೆ, ಇವರದು "ಮಾದಿಗ ಮುಂಡೇದ, ಹೊಲೆ ಮುಂಡೇಗಂಡ" ಮುಂತಾದ "ಸಂಸ್ಕೃತ" ಸವಿನುಡಿಗಳ ಸುರಿಮಳೆ, ಹೀಗೆ ನಾನಾ ರೀತಿಯ ಬೊಜ್ಜುರಾಜರು. ಹಿಂದೆ ಮುಂದೆ. ಅಕ್ಕಪಕ್ಕಗಳಲ್ಲಿ ಟೊಂಕ ಕಟ್ಟಿ ನಿಂತು ಸೇವೆ ಸಲ್ಲಿಸವ, ಕರಿಯರನ್ನು ಮರಕ್ಕೆ ಕಟ್ಟುವ, ಹೊಟ್ಟೆಪಾಡಿನ "ಕರಿಯ ಕಟ್ಟಾಳುಗಳು" ಕಟ್ಟಿಸಿಕೊಂಡು ಕೈ ಬಾಯಿ ಬಂದಾಗಿರುವ ಕರಿಯರು, ಕರಿಯರ ಹೆಂಡತಿಯರು, ಅಳುತ್ತ ಬರುವ ಮಕ್ಕಳು ಒಂದೇ ಗದರಿಕೆಗೆ ಬೆದರಿ ಬೆಂಡಾಗಿ, ಎಸೆಯಲ್ಪಟ್ಟು ಅಪ್ಪ ಅಮ್ಮಂದಿರ ಮೈಗಳ ಮೇಲೆ ಹೊರಳಾಡುವ ಕಂದಮ್ಮಗಳು. ಮತ್ತೆ ಮತ್ತೆ ಅದೆ ನೋಡಲಾಗದ, ದೃಶ್ಯ-ಧ್ವನಿಗಳು.

ದಣಿ-ದಾಂಡಿಗರು ಒಟ್ಟಾಗಿ ಕಟ್ಟಿಬಡಿದು ಸುಲಿದ, ಮೈಗಳು ಮೈಲಿ ಗಟ್ಟಲೆ ಬಿದ್ದವು. ಆದರೂ ಆ ಹಳೇಮರಕ್ಕೆ ಬುಡುವು ಸಿಗಲಿಲ್ಲ. ನಡುನಡುವೆ ಬಿಡುವಾಯಿತೇನೊ ಎಂದು ಸಮಾಧಾನ ಪಟ್ಟುಕೊಳ್ಳುವ ಮೊದೆಗೆ ಸ್ವಲ್ಪ ಹೊತ್ತಿನಲ್ಲೇ ದರದರ ಸದ್ದು. ಎಷ್ಟೋ ಕರಿಯರ ಕತ್ತು ಕೊಯ್ದರೂ ಇಂಥ ಕ್ರಿಯೆ ಮಾತ್ರ ನಿಲ್ಲಲಿಲ್ಲ. ಕಾಲಿಡಲು ಜಾಗವಿಲ್ಲ. ಜಾಗವಿಲ್ಲದ ಜಾಗಕ್ಕೆ ದೌಡಾಯಿಸುವ ಧಡೂತಿಗಳು ಬಿದ್ದ ದೇಹಗಳ ಮೇಲೆ ಓಡಾಡುತ್ತ ಹೊಸಬರಿಗೆ ರುಚಿ ತೋರಿಸಿದರು. ಇವರು ಓಡಾಡ್ತ ಇದ್ದಾಗ ರಾಶಿ ಮೈಗಳ ಮಧ್ಯೆ ಎಲ್ಲೊ ನರಳುವಿಕೆ. ಬರಬಾ ಬಣವೆಯಂತೆ ಬೆಳೆದ ದೇಹಗಳು ಸರದಿ ಮೇಲೆ ಬಂದು ಬಿದ್ದ ಕರಿಯರು.....

ಇದೀಗ ಕರಿಯನೊಬ್ಬ ಮರಕ್ಕೆ ಮರವಾಗಿದ್ದಾನೆ. ಧಡೂತಿಗಳು ತುಳಿದಾಡುವ ಮೈಗಳಲ್ಲಿ ಪಚಪಚ ರಕ್ತ, ಆದರೂ ಹಾಗೇ ತುಳಿದಾಡಿದರು. ಒಟ್ಟಿದ ರಾಶಿ ಮೈಗಳ ಮೇಲೆ ಓಡಾಡ್ತ ಪಚಗುಟ್ಟುವ ನೆತ್ತರಿನಿಂದ ಸಿಟ್ಟು ನೆತ್ತಿಗೆ ಹತ್ತಿದವರಂತೆ ಎಗರಾಡಿದರು. ಹಿಂಬಾಲಕರುಗಳಂತೂ ಸಿಡಿಯುವ ರಕ್ತಕ್ಕೆ ಪಿತ್ತ ನೆತ್ತಿಗೇರಿದಂತಾಗಿ ಆ ಮೈಗಳ ಮೇಲೆ ಕುಣಿದು ಕುಪ್ಪಳಿಸಿದರು.

ನೋಡಲಾಗಲಿಲ್ಲ. ಸುಮ್ಮನೆ ನೋಡುತ್ತ ನಿಲ್ಲಲಾಗಲಿಲ್ಲ. ಅವರನ್ನೆಲ್ಲಾ ತೊಲಗಿ ಅನ್ನಬೇಕು, ಕತ್ತುಹಿಡಿದು ದಬ್ಬಬೇಕು ಎಂದುಕೊಂಡರೂ ಮುಂದಡಿಯಿಡಲಾಗದೆ ಎದೆ ಬಿರಿತದಲ್ಲಿ ನಿಂತಿದ್ದಾಗ, ನಿಂತು ಕಣ್ಣುಮುಚ್ಚಿ ಕಂಡದ್ದೆಲ್ಲವನ್ನೂ ನನ್ನದಾಗಿಸಿ ಕೊಳ್ಳುತ್ತಿದ್ದಾಗ ಹಾಡು ಕೇಳಿಸಿ ಆಶ್ಚರ್ಯದಿಂದ ನೋಡ್ತೀನೆ.

ಬಿದ್ದಿರೊ ರಾಶಿ ಮೈಗಳ ಮಧ್ಯದಲ್ಲಿ ಎತ್ತರದ ವೇದಿಕೆ. ಅದರ ಮೇಲೆ ಮೈಗಳನ್ನಿಟ್ಟು ನಿರ್ಮಿಸಿದ ಸಿಂಹಾಸನಗಳು, ಅವುಗಳಲ್ಲಿ ತರಾವರಿ ಧಡೂತಿಗಳು.



ಅವರ ಮುಖದಲ್ಲಿ ಅದೆಂಥ ಅಟ್ಟಹಾಸ ! ಅವರ ನಗುವಿನ ಹಿಂದೆ ಅದೆಷ್ಟು ಕರಿಯರ ಕಪ್ಪು ಕತೆ ! ಏನೂ ಆಗಿಲ್ಲವೆಂಬಂಥ ಮಂದಸ್ಮಿತ ಮುಖಭಾವ ! ಇದಕ್ಕೆ ಕಿರೀಟವಿಟ್ಟಂತೆ ದಾಂಡಿಗರ ಕುಣಿತ, ಹಾಡು. ರಕ್ತದಲ್ಲಿ ಅದ್ದಿ ಕೆಂಪಾದ ಕೈಗಳು ಕುಣೀತಾ ಇರೋದ್ರಿಂದ ನೆತ್ತರಾದ ಕಾಲ್ಗಳು. ಕುಣೀತಿರೊ ಆವೇಶವೋ ಹೇಳತೀರದು. ಲಯಬದ್ಧವಾಗಿ ಕುಣಿತ, ನಡು ನಡುವೆ ಕೇಕೆ ಹಾಕ್ತ ಇರೊ ಇವರನ್ನು ನೋಡಿ ಚಪ್ಪಾಳೆ ತಟ್ಟಿ ತಮತಮಗೇ ಮುಖ ನೋಡ್ಕೊಂಡು ಹೆಮ್ಮೆ ಪಡೋ ಧಡೂತಿಗಳಿಗೆ ಸ್ವರ್ಗಸುಖವೆಂದರೂ ಸರಿ.

ದರ್ಬಾರು ನಡೀತಾನೆ ಇತ್ತು. ಮರದಲ್ಲಿ ಮರವಾಗಿ ನಿಂತ ಕರಿಯ ನೋಡ್ತಾನೆ ಇದ್ದ. ಇವರ ಕುಣಿತ ಕುಪ್ಪಳಿಸುವಿಕೆಯಿಂದ ತನ್ನ ಮುಖ ಮೈಗಳಿಗೆ ಸಿಡಿಯೊ ರಕ್ತ ಅವನನ್ನು ಆಗಾಗ್ಗೆ ಎಚ್ಚರಿಸಿತು. ಕುಣಿಯೊ ದಾಂಡಿಗರು ಬಗ್ಗೆ ಕೈಗೆ ಸಿಕ್ಕಿದ್ದನ್ನು ಕಿತ್ತು ಕರಿಯನ ಮುಖಕ್ಕೆ ಎಸೆದರು. ಅವರು ಕಿತ್ತಾಗ ದಡೂತಿಗಳು ತಮ್ಮ ಕೈಗೆ ತೆಗೆದುಕೊಂಡು ಝಡಿಸಿ ಎಸೆದು ಖುಷಿಪಟ್ಟರು. ದಾಂಡಿಗರು ಕುಣಿದರು. ಕಿತ್ತರು, ಕಿತ್ತುಕೊಟ್ಟರು. ಕೈ ಸಿಕ್ಕದರೆ ಕೈ, ಕಿವಿ ಸಿಕ್ಕಿದರೆ ಕಿವಿ, ಕಣ್ಣೆಂದರೆ ಕಣ್ಣು. ಮಕ್ಕಳದಾಗಲಿ, ದೊಡ್ಡವರದಾಗಲಿ ಕಿತ್ತು ಕಿತ್ತು ಎಸೆದರು. ಸಿಂಹಾಸನಾರೂಢ ಧಡೂತಿಗಳು ಕೂತಲ್ಲೆ ಕುಣಿದು ಖುಷಿಪಟ್ಟರು. ತಲೆ ತಗ್ಗಿಸಿ ಜೋತಾಡುತ್ತಿದ್ದ ಕರಿಯನಿಗೆ ಕರುಳು ಬಾಯಿಗೆ ಬಂದಂತಾಯ್ತು. ತನ್ನ ಮೇಲೆ ಬೀಳೊ ಒಂದೊಂದು ರಕ್ತದ ಹನಿಯಲ್ಲೂ ಚುಚ್ಚಿ ಸಿಡಿಸೋ ಶಕ್ತಿಯಿದ್ದಂತೆ ಭಾಸವಾಯ್ತು. ಬಂದು ಬೀಳೋ ಅಂಗಾಂಗಗಳಲ್ಲಿ ಬಡಿದೆಬ್ಬಿಸೊ ಬಲ ಕಾಣಿಸ್ತು. ಯಾಕೆಂದರೆ ಅವುಗಳು ಇವನನ್ನು ಕೆದಕಿ ಪ್ರಶ್ನೆಯ ಮೇಲೆ ಪ್ರಶ್ನೆ ಕೇಳಿದ್ದವು. ಕರುಳಿನ ಇಂಚಿಂಚನ್ನು ಕೆರಳಿಸುತ್ತಾ ಇದ್ದವು. ಸುಮ್ಮೆ ಇರೋದಿನ್ನು ಸಾಧ್ಯವಾಗಲಿಲ್ಲ. ಸತ್ತಾದ್ರೂ ಹೋಗಿದ್ರೆ ಅದು ಬೇರೆ. ಬದುಕಿದ್ದೂ ಇದನ್ನೆಲ್ಲ ನೋಡೋದು, ಸಹಿಸಿಕೊಂಡು ಸುಮ್ಮಿರೋದು ಹೇಗೆ ? ಅಸಹಾಯಕತೆ, ಆಕ್ರೋಶ ಬೆರತ ವಿಚಿತ್ರ ಯಾತನೆಯಲ್ಲಿ ಆತ ಒದ್ದಾಡ್ತಿದ್ದ.

ಇತ್ತ ಇವರ ಆಸ್ಥಾನದಲ್ಲಿ ಉತ್ಕಟಾವೇಶ ಆವರಿಸಿ ಉನ್ನತ ಸ್ಥಿತಿ ತಲುಪಿತ್ತು. ದಾಂಡಿಗರ ಕುಣಿತ ಧಡೂತಿಗಳ ಮೆಚ್ಚುಗೆಯ ಅಟ್ಟಹಾಸ ಒಟ್ಟಿಗೆ ಸೇರಿ ಸಭೆ ಎಲ್ಲಿಲ್ಲದ ರಂಗಿನಲ್ಲಿದ್ದಾಗ, ಸಿಡಿಲು ಬಡಿದಂತೆ ಬಂತು ಆ ಕಡೆಯ ಕೂಗು:

"ಸಿಗ್ದ್ ಬಿಡ್ತೀನ್ರೊ ಕಳ್‌ನನ್ ಮಕ್ಕುಳ್ರ ನಿಮ್ಮನ್ನ ಇವತ್ತಿಲ್ಲ ಇಲ್ಲ ಅನ್ನಿಸ್ಬಿಡ್ತೀನ್ರೊ."

ಕರೆಂಟು ಹೋದಂತೆ ಆಸ್ಥಾನದ ಆವೇಶ ಕಟ್ಟಾಯ್ತು. ಎಲ್ಲಿದಿದು ದನಿ ಅಂತ ಈ ದಣಿಗಳು ನೋಡಿದರು. ಕರಿಯ ಕಟ್ಟುಗಳಿಂದ ಬಿಚ್ಚಿಕೊಳ್ಳೋಕೆ ಕೊಸರಾಡ್ತ ಮೈಯೆಲ್ಲ ಬಾಯಾದಂತೆ ಕೂಗ್ತಾ ಇದ್ದ: "ತಾಯ್ಕಂಡ ನನ್ ಮಕ್ಕಳು ಸಿಕ್ಸ್ ಸತ್ತೋಗೀನ್ರಿ. ನಿಮ್ಮನ್ ಸಿಗ್ ಸತ್ತೋಗ್ತಿನಿ. ಸಾಯೋಕ್ಮುಂಚೆ, ಆಗ್ಲೆ ಸತ್ತೊಗಿರೊ ನಮ್ಮೋರೆಲ್ಲ ಜೀವ ಕೊಟ್ಟು ಸಾಯ್ತಿನಿ. ಧಿಕ್ಕಾರ ಕಣೋ ನಿಮಗೆ ಧಿಕ್ಕಾರ...."

ಧಡೂತಿಗಳು ತಮ್ಮ ಹಿಂಬಾಲಕರುಗಳು ಕಡೆ ನೋಡಿದರು. ಇದು ಕರಿಯನ ಬಾಯಿ ಮುಚ್ಚಲು ಸೂಚನೆ ಎಂದು ಅರಿತು ಒಬ್ಬ, ಆಸ್ಥಾನದಿಂದ ಚಂಗನೆ ನೆಗೆದ.



ಕರಿಯನ ಬಾಯಿಗೆ ಕೈ ಇಟ್ಟ. ಆದರೆ ಕರಿಯ ತಲೆ ಕೊಸರಿ ಕೈ ಬೀಳುವಂತೆ ಮಾಡಿದ. ಇವನು ಮತ್ತೆ ಮತ್ತೆ ಬಾಯಿ ಮುಟ್ಟೋಕೆ ನೋಡಿದರೂ ಧಿಕ್ಕಾರದ ದನಿ ನಿಲ್ಲಲಿಲ್ಲ. ಇದರಿಂದ ಸಹನೆ ಕಳಕೊಂಡು ಸಿಟ್ಟಿಗೆದ್ದ ಇನ್ನೊಬ್ಬ ದಾಂಡಿಗ ಬಿದ್ದಿದ್ದ ಒಬ್ಬನ ಮೈ ಮೇಲಿನ ಬಟ್ಟೆ ಹರಕೊಳ್ಳೋಕೆ ಹೋದ. ಮುಟ್ಟಿದ ಮೈ ಮಿಸುಗಾಡಿತು; ಬಟ್ಟೆ ಹರಿಯೋಕೆ ಬಂದ ಕೈಯನ್ನು ಕಚ್ಚಿ ಕಪಾಳಕ್ಕೊಂದು ಬಾರಸ್ತು. ದಾಂಡಿಗನ ಕೈ ಅಲ್ಲೇ ನಿಂತೋಯ್ತು. ಕರಿಯನ ಕೂಗು ನಿಲ್ಲಲಿಲ್ಲ. ಗಂಟಲು ಕಿತ್ತು ಬರೋ ಹಾಗೆ ಕೂಗ್ತಾ ಇದ್ದ ಕರಿಯನ ದನಿ ಬಿದ್ದಿದ್ದ ಮೈಗಳಲ್ಲಿ ಮಾರ್ದನಿಸಿತು. ಮೊದಮೊದಲು ಅವನದೇ ಹೀಗೆ ಕೇಳುತ್ತೆ ಎಂದು ಭಾವಿಸಿದ ಈ ಧಡೂತಿ ಗುಂಪಿಗೆ ದಂಗಾಗುವ ದೃಶ್ಯ, ಮೆಲ್ಲಗೆ ಧಿಕ್ಕಾರದ ದನಿ ಮಾಡ್ತಾ ಮಿಸುಗಾಡ್ತ ಮೇಲೇಳುವ ಮೈಗಳು ದಿಗ್ಗನೆ ಎದ್ದು ಕರಿಯನ್ನಷ್ಟೇ ಗಟ್ಟಿಯಾಗಿ ಕೂಗಿದಾಗ ದಿಕ್ಕು ತೋಚದ ಸ್ಥಿತಿ ! ಹೌದು ; ಬಿದ್ದಿದ್ದ ಕರಿಯರು ಮೇಲೆದ್ದು ಕೂಗಿದ್ದರು. ಕೂಗುತ್ತಾ ಧಡೂತಿ ದಾಂಡಿಗರನ್ನು ಸುತ್ತುವರಿದರು. ಇವರಿಗೆ ದಿಕ್ಕು ತಪ್ಪಿದಂತಾಯ್ತು, ಸಂಭಿತ ಮನಸ್ಸಿನಲ್ಲಿ ಬಡಕೊಳ್ಳೋ ಎದೆ ಸದ್ದು ಧಿಕ್ಕಾರದ ದನಿಯಲ್ಲಿ ನುಚ್ಚುನೂರಾಗಿ ಎದೆ ಹಾರಿದಂತಾಯ್ತು. ಹೇಗೋ ಇಲ್ಲಿಂದ ತಪ್ಪಿಸಿಕೊಳ್ಳಲು ಅನಿಸಿ ಸಿಕ್ಕಿದತ್ತ ಓಡೋಕೆ ನೋಡಿದರು. ಎಲ್ಲಿ ಹೋದರೂ ಎದ್ದು ಬರೊ ಹೆಣಗಳು, ಗುಂಪುಗುಂಪಾಗಿ ಎದ್ದು ಗಟ್ಟಿಯಾಗಿ ಕೂಗಿ ಕಲ್ಲೆದೆಯನ್ನು ಝಲ್ಲೆನ್ನಿಸೊ ದನಿಗಳು. ಕೆಲವರು ಹರಸಾಹಸ ಬಿದ್ದು ತಪ್ಪಿಸ್ಕೊಂಡು ಆ ದೊಡ್ಡ ಮರದ ಮರೆಗೆ ಹೋದರೆ ಅದರಿಂದಲೂ ಅದೇ ದನಿ. ಮರದ ಕೊಂಬೆ ಕೊಂಬೆಯಲ್ಲಿ ಎಲೆಯೆಲೆಯಲ್ಲಿ ಮಾರ್ದನಿಸುವ ಅದೇ ಮಾತು. ಅಲ್ಲಿಂದ ಪೊದೆಯ ಮರೆಗೆ ನುಗ್ಗಿದರೆ ಅದು ರೊಯ್ಯನೆ ಅಪ್ಪಳಿಸಿತು. ತನ್ನ ಹರಡಿದ ಮೈಯೊಳಗೆ ಹುದುಗಿಸಿಕೊಂಡು ಹಿಂಸೆ ಕೊಟ್ಟಿತು. ಗೋಡೆಯೊಳಗೆ ಸಿಕ್ಕಿದ ಕೋಳಿಗಳಂತೆ ಪತರುಗುಟ್ಟುವ ಧಡೂತಿಗಳನ್ನು ತನ್ನ ಮೈ ಸಂಕುಚಿತಗೊಳಿಸಿ ಹಿಚುಕಿತು. ಅವರಿಗನ್ನಿಸಿತು ತಾವೆಲ್ಲಿ ಬಂದರೂ ತಮ್ಮ ವಿರುದ್ಧದ ದನಿಯಿದೆ; ಮರ, ಮೊದೆ ಎಲ್ಲೂ ಇರಲಾಗದ ಸ್ಥಿತಿ. ಯಾವುದೂ ತಮ್ಮ ರಕ್ಷಣೆಗಿಲ್ಲ ಅನ್ನೋ

ಭಾವನೇಲಿ ಮರ ಮತ್ತು ಪೊದೆಯೂ ಮಾತಾಡಿ ಧಿಕ್ಕಾರ ಕೂಗ್ತಿರೋ ಹಾಗೆ. ತಮ್ಮ ಮೈಗಳನ್ನು ಹಣ್ಣುಗಾಯಿ ನೀರುಗಾಯಿ ಮಾಡ್ತಿರೋ ಹಾಗೆ, ಅನ್ನಿಸಿ ತಪ್ಪಿಸಿಕೊಳ್ಳೋ ಪ್ರಯತ್ನ ಮಾಡಿದರೂ ಆಗಲಿಲ್ಲ. ಅವು ತಮ್ಮನ್ನು ಹಿಡಕೊಂಡಿವೆ ಅನ್ನೋ ಅನುಭವವಾಗಿ ಕಾಲೆತ್ತಿಡೊಕಾಗಲಿಲ್ಲ. ದಿಕ್ಕಾರದ ಕೂಗಿನಲ್ಲಿ ದಿಕ್ಕು ತೋಚದೆ ಇರುವಾಗ ಎಲ್ಲೆಲ್ಲಿಂದಲೊ ಮೆರವಣಿಗೆಗಳು ಬಾ ಇದ್ದವು. ಪ್ಲಕಾರ್ಡು ಹಿಡಿದು ಘೋಷಣೆ ಕೂಗ್ತ, ಸಣ್ಣ, ದೊಡ್ಡ ಮೆರವಣಿಗೆಗಳು ಬಾ ಇದ್ದವು. ನೋಡ್ತಾರೆ; ಇದ್ದುದರಲ್ಲೇ ಸಂದಿ ಮಾಡ್ಕೊಂಡು ನೋಡ್ತಾರೆ; ಒಂದೇ ಎರಡೇ ಹತ್ತಾರು ಅಥವಾ ಅದಕ್ಕಿಂತ ಹೆಚ್ಚು ಮೆರವಣಿಗೆಗಳು. ಎಲ್ಲೆಲ್ಲಿಂದಲೋ ಬಂದು ಇಲ್ಲಿ ಒಟ್ಟಿಗೆ ಸೇರಿರೊ ಸಾಲು ಸಾಲು ಮೆರವಣಿಗೆಗಳು.... ಇನ್ನು ಹೀಗಿದ್ದರೆ ಕತೆ ಮುಗೀತು ಅನ್ನಿಸ್ತು. ಇಲ್ಲಿನ ಇಡೀ ವಾತಾವರಣವೇ ತಮ್ಮ ವಿರುದ್ಧ ಸೆಟೆದಿದೆ ಅಂತ ಗೊತ್ತಾದ ಮೇಲೆ ಬೇರೆ ದಾರಿ ಹುಡುಕಲೇ ಬೇಕಿತ್ತು.

ನೋಡ್ತಾ ಇದ್ದಂತೆ ಒಂದಿಬ್ಬರು ಧಡೂತಿಗಳು ಪಂಚೆ ಮೇಲೆತ್ತಿ ಹಿಡಕೊಂಡು ಓಡ್ತಾ ಇದ್ದಾರೆ. ಓಡಿದರು, ಓಡಿದರು, ಓಡಿದರು, ಓಡ್ತಾನೆ ಇದ್ದು "ಫೋನ್ ಫೋನ್"



ಅಂತ ಅರುಚಿದರು. ನೋಡಿದ್ರೆ ಅಲ್ಲೊಂದು ಪಬ್ಲಿಕ್ ಟೆಲಿಫೋನ್ ಬೂತ್ ಪ್ರತ್ಯಕ್ಷವಾಯ್ತು. ನುಗ್ಗಿದರು "ಹಲೊ.... ಹಲೋ... ಹಲ್ಲೆ, ಹಲ್ಲೆ ಆಗ್ತಿದೆ ನಮ್ಮ ಮೇಲೆ... ಬೇಗ, ಬೇಗ ಬನ್ನಿ..." ಬಡಬಡಿಸಿದರು. ಇನ್ನು ಹೋಗೋದ್ ಬೇಡಾಂತ ಟೆಲಿಫೋನ್ ಬೂತಲ್ಲೇ ನಿಂತರು. ಅಲ್ಲಿ ಎದ್ದು ಕೂಗೊ ಭೂತಗಳಿಗಿಂತ ಈ ಬೂತೇ ಉತ್ತಮ ಅನ್ನಿಸ್ತು. ಅಲ್ಲಿ ನಿಂತು ದೇಶನಾಯಕರಿಗೂ ಫೋನಾಯಿಸಿ ತೀವ್ರ ಕ್ರಮಕ್ಕೆ ಕೋರಿಕೆ ಸಲ್ಲಿಸಿದರು.

ಇಲ್ಲಿ ಬಂದು ಸೇರೋ ಜನ ನಿಲ್ಲಿಲಿಲ್ಲ. ಜನರ ಕೂಗು ನಿಲ್ಲಲಿಲ್ಲ. ಇವರ ನಡುವೆ ಸಿಕ್ಕಿದ ಧಡೂತಿಗಳ ಕತೆ, ವ್ಯಥೆಯ ವ್ಯಗ್ರತೆಗೆ ಸಿಕ್ಕಿ ಏನಾಗುತ್ತೋ ಎನ್ನುವಷ್ಟರಲ್ಲಿ ಭರನೆ ಪೊಲೀಸ್ ವ್ಯಾನುಗಳ ದಂಡು ಬಂತು. ದಢಾರನೆ ಬಾಗಿಲು ಬಿಚ್ಚಿಕೊಂಡ ವ್ಯಾನುಗಳಿಂದ ಮೇಲಿನವರ ಆಜ್ಞೆ ಹೊತ್ತ ಲಾಠಿ, ಬಂದೂಕು, ಬೂಟುಗಳ ಖಾಕಿಗಳು ಇಳಿದವು. ಹಿಂದೆ ಮುಂದೆ ನೋಡದೆ ಹಸಿದ ಹುಲಿಯಂತ ನುಗ್ಗಿದವು: ಎಗರಿದವು; ಬಡಿದವು; ಬಡಿದೇ ಬಡಿದವು; ಜಗ್ಗದ ಜನರ ಮೇಲೆ ಬಂದೂಕಿನ ಬಾಯಿ ತೆಗೆದವು. ಬಗ್ಗು ಬಡಿಯುತ್ತ ಬಂದವು. ಧಿಕ್ಕಾರದ ದನಿಯನ್ನು ಕುಗ್ಗಿಸಿದವು. ಜನ ದಿಕ್ಕಾಪಾಲಾದರು. ಆಶ್ರಯ ಹುಡುಕಿ ಓಡುವ ಅರಬರೆ ಗಾಯದ ಜನರೊಂದು ಕಡೆ, ಗುಂಡಿಗೆ ಸಿಕ್ಕಿ ಗುಂಡಿಗೆಯೊಡೆದು ಸಾಲು ಸಾಲಾಗಿ ಉರುಳಿದ ಮಂದಿ ಇನ್ನೊಂದು ಕಡೆ.

ಸ್ವಲ್ಪ ಹೊತ್ತಿನಲ್ಲಿ ಜನವೇ ಇಲ್ಲವಾದರು. ಜನರ ಜಾಗದಲ್ಲಿ ರಕ್ತ; ತುಂಬಿ ಉಕ್ಕುವ ರಕ್ತ ; ಕಣ್ಣು ಕತ್ತಲೆಯಿಡಿಸುವ ಕೊತಕೊತ ರಕ್ತ, ಅದರಲ್ಲಿ ತೇಲುವ ಮುಳುಗುವ ಹೆಣಗಳು; ಅರೆ ಜೀವದಲ್ಲಿ ನರಳುವ ಕೂಗುವ ಹಾಗೇ ಕರಗಿಹೋಗುವ ದೇಹಗಳು. ಸತ್ತವರನ್ನೆಲ್ಲ ಸುತ್ತಿಟ್ಟುಕೊಂಡು, ಅವರ ಸಿಟ್ಟಿನ ರೂಪವಾಗಿ ಕುದಿಯುವ ರಕ್ತ,

ಅದಷ್ಟೇ ಇಂಚಿಂಚು ತುಂಬಿದೆ. ಈ ತುಂಬು ನೆತ್ತರ ಕೆರೆಯಲ್ಲಿ ವ್ಯಾನುಗಳು ನಿಂತಿವೆ. ಧಡೂತಿಯಗಳನ್ನು ರಕ್ಷಿಸಿಟ್ಟ ಕಾರುಗಳು ಕೂತಿವೆ. ಕುದಿವ ರಕ್ತದಲ್ಲಿ ಬೂಟುಗಾಲಿಟ್ಟುಕೊಂಡು ಬಂದೂಕದಿಂದ ಬಡಿಯುತ್ತ ಖಾಕಿಗಳು ನಡೆಯುತ್ತವೆ. ಇನ್ನೇನು ವ್ಯಾನು ಹತ್ತಬೇಕೆನ್ನುವಾಗ ಯಾರೊ ಗಹಗಹಿಸಿ ನಕ್ಕಂತೆ, ಛೇಡಿಸಿದಂತೆ, ಚುಚ್ಚಿದಂತೆ ಆಗಿ ಸುತ್ತಮುತ್ತ ನೋಡುತ್ತಾ ಒಂದೂ ಗೊತ್ತಾಗದೆ ಬಂದೂಕು ಹಿಡಿದು ದಿಟ್ಟಿಸುತ್ತಾರೆ. ಏನೂ ಇಲ್ಲ ಎನ್ನಿಸಿ ಮತ್ತೆ ಹತ್ತಲು ನೋಡುವಾಗ ಮುಸಿಮುಸಿ ನಕ್ಕ ಸದ್ದು. ತಕ್ಷಣ ಶಿಸ್ತಿನಿಂದ ಬಂದೂಕು ಮುಂದುಮಾಡಿ ನಿಲ್ಲುತ್ತಾರೆ. ಜನರೇ ಇಲ್ಲದ ಕಡೆ ಏನಿದು ಕಿಡಿಗೇಡಿತನ ಎಂದು ಕೊಳ್ಳುವಾಗ ಕಾರಿನ ಧಡೂತಿಗಳು ಹತ್ತಿರ ಕರೆದು ಕದ್ದು ನೋಡುವ ನೋಟದಲ್ಲಿ ತೋರಿಸುತ್ತಾರೆ. ಇವರಿಗೆ ಆಶ್ಚರ್ಯ ಹಾಗೂ ನಗು. ಯಾಕೆಂದರೆ ಅವರು ತೋರಿಸಿದ್ದು ಮರ ಮತ್ತು ಮೊದೆ. ಖಾಕಿಗಳು ನಗುತ್ತಿರುವಾಗಲೇ ಭರನೆ ಬೀಸಿದ ಗಾಳಿಯಲ್ಲಿ ಅದು ಮುಚ್ಚಿಹೋಗಿ ಮರ ಮತ್ತು ಮೊದೆಯ ದನಿ ಹೆಚ್ಚಾಯ್ತು. ಖಾಕಿಗಳು ಕೆಕ್ಕರಿಸಿ ನೋಡಿದಂತೆಲ್ಲ ಹೆಚ್ಚಾಗ್ತನೇ ಹೋಯ್ತು. ರೊಚ್ಚಿಗೆದ್ದು ಲಾಠಿಯಲ್ಲಿ ಬಡಿದರು; ಬಂದೂಕದಲ್ಲಿ ಚುಚ್ಚಿದರು. ದನಿ ನಿಲ್ಲಲಿಲ್ಲ. ಒಂದೊಂದು ಏಟೂ ಇವರನ್ನೇ ಅಣಕಿಸಿದಂತಾಯ್ತು. ಧಡೂತಿಗಳು ಹತ್ತಿರ



ಕರೆದು “ಕೊಡಲಿ, ಕೊಡಲಿ” ಎಂದು ಪಿಸುಗುಟ್ಟಿದರು. ಕೂಡಲೆ ಕೊಡಲಿ ಬಂತು. ಖಾಕಿಗಳ ಕೈಯಲ್ಲಿ ಕೊಡಲಿಗಳು, ಕಡಿಯುತ್ತ ಹೋದರು. ಅಯ್ಯೋ ಅನ್ನುತ್ತ ಮರ ಅತ್ತಿತು. ನಡುನಡುವೆ ಕೋಪದಲ್ಲಿ ಮೈಕೊಡವಿತು. ಆದರೆ ಏಟು ಬಿದ್ದೇ ಬಿತ್ತು. ಬುಡಕ್ಕೆ ಬಲವಾಗಿ ಒಂದರ ಮೇಲೊಂದು ಕೊಡಲಿಯೇಟು. ಕಡೆಗೆ ಮರ ದುಡಮ್ಮನೆ ಬಿತ್ತು. ಅದು ಬಿದ್ದ ರಭಸಕ್ಕೆ, ಬಿದ್ದು ಮತ್ತೆ ಮೇಲೇಳಲು ಶತಪ್ರಯತ್ನ ಮಾಡುವಾಗ ಹೊಮ್ಮಿದ ಆಕ್ರಂದನ ಆಕ್ರೋಶಗಳಿಗೆ, ರಕ್ತ ಮುಗಿಲೆತ್ತರಕ್ಕೆ ಚಿಮ್ಮಿ, ಕಾರು, ವ್ಯಾನುಗಳು ಕ್ಷಣಹೊತ್ತು ಮುಚ್ಚಿಹೋದವು. ಚಿಮ್ಮಿದರಕ್ತದಲ್ಲಿ ಹಾರಿದ ಹೆಣಗಳು ಮತ್ತೆ ಬಿದ್ದು, ಎದ್ದು ಕಡೆಗೆ ಹೂತುಹೋದ ದೃಶ್ಯಕ್ಕೆ ಧಡೂತಿಯೊಬ್ಬ ಚೀರಿ ಸತ್ತುಹೋದ. ಉಳಿದವರು ಹಾರೊ ಎದೇನ ಭದ್ರವಾಗಿ ಹಿಡಕೊಂಡು ಕೂತಿದ್ದರು. ಮರ ಕೊನೆಯುಸಿರೆಳೆಯುವವರೆಗೆ ಉಸಿರು ಹಿಡಿದು ನಿಂತಿದ್ದ ಖಾಕಿಗಳು ಆಮೇಲೆ ಮುಸಿಮುಸಿ ಸದ್ದಿನ ಪೊದೆ ಬಳಿ ಬಂದು ಇದ್ದಬದ್ದ ಧೈರ್ಯ ತುಂಬಿಕೊಂಡು ತರಿದುಹಾಕಿದ್ದರು. ತರಿದು ಹಾಕುತ್ತಾ ಹೋದಂತೆ ರಕ್ತದೊಳಗೆ ಜುಳಜುಳ ಮುಳಗಿದ ಪೊದೆ ಗಳಗಳನೆ ಅತ್ತ ಸದ್ದಿಗೆ ಕೊಡಲಿಯ ಕೊನೆಯಲ್ಲಿ ಹನಿ ತೊಟ್ಟಿಕ್ಕಿತು.

ಕೆಲಸ ಮುಗಿದಿತ್ತು. ಕಾರುಗಳ ರಕ್ಷಣೆಯಲ್ಲಿ ವ್ಯಾನುಗಳು ರಕ್ತವನ್ನು ಸೀಳಿಕೊಂಡು ಸಂಭ್ರಮದಿಂದ ಹೊರಟುಹೋದವು. ಠೀವಿಯಿಂದ ಹಾರನ್ ಮಾಡುತ್ತ ಹೋದ ವ್ಯಾನು ಮತ್ತು ಕಾರುಗಳ ಸದ್ದು ಸಣ್ಣಗಾದಂತೆ ಆಕಾಶವಾಣಿ ಅತ್ಯುತ್ಸಾಹದಿಂದ ಬಿತ್ತರಿಸಿತ್ತು:

"ಸಮಾಜ ಸೇವಾ ಧುರಂಧರರ ಸಮೂಹದ ಮೇಲೆ ಹಲ್ಲೆ ನಡೆಸಿದ ಸಮಾಜ ವಿರೋಧಿಶಕ್ತಿಗಳನ್ನು ಚದುರಿಸಲು ಅನಿವಾರ್ಯವಾಗಿ ಲಾಠಿಚಾರ್ಜ್ ಮತ್ತು ಗೋಳಿಬಾರ್ ನಡೆದು ಐವತ್ತು ಜನಕ್ಕೆ ಗಾಯಗಳಾಗಿವೆ. ಐದಾರು ಜನರು ಸತ್ತರೆಂದು ವರದಿ ಯಾಗಿದೆ...."

ಪತ್ರಿಕಾ ಪ್ರಿಂಟಿಂಗ್ ಮಿಷನ್‌ಗಳು ಒಂದೇ ಸಮ ಸದ್ದು ಮಾಡಿದವು. ಚಕಚಕನೆ ಅಚ್ಚಾದ ಪತ್ರಿಕೆಗಳ ಪ್ರತಿಗಳ ರಾಶಿ ಬಂದು ಬಿದ್ದವು. ಮೊದಲು ಸ್ವಲ್ಪ ಸದ್ದು ಮಾಡಿ ನೆತ್ತರೊಳಗೆ ನಿಶ್ಯಬ್ದವಾದವು.

ಹೀಗೆ ಸುದ್ದಿಯೋ ಸುದ್ದಿ ದೇಶಾದ್ಯಂತ ಸುದ್ದಿ. ಅದಕ್ಕೆ ನಾನಾ ಮುಖಗಳು. ವಾದ ವಿವಾದಗಳು, ಕೊನೆಗೆ ದೇಶದ ನಾಯಕ ಮಣಿಗಳಿಂದ ಸ್ಥಳದ ಸಾಕ್ಷಾತ್ ದರ್ಶನಕ್ಕೆ ನಿರ್ಧಾರ ತಕ್ಷಣ ಹೆಲಿಕಾಪ್ಟರಿನ ಸದ್ದು.

ಹೆಲಿಕಾಪ್ಟರ್ ಆಕಾಶದಲ್ಲಿ ಹಾರಾಡುತ್ತ ಬಂತು. "ಗಲಭೆ" ನಡೆದ ಸ್ಥಳದ ಮೇಲೆ ಸುತ್ತು ಹೊಡೆಯಿತು. ಸ್ಥಳದರ್ಶನಕ್ಕೆ ಬಂದ ನಾಯಕಮಣಿಗಳಿಗೆ ತಮ್ಮ ದಿವ್ಯದರ್ಶನ ನೀಡುವ ಬಯಕೆಯಾಗಿ ಹೆಲಿಕಾಪ್ಟರ್ ಸ್ವಲ್ಪ ಕೆಳಕ್ಕೆ ಇಳಿಯಿತು. ಮತ್ತೆ ಸುತ್ತತೊಡಗಿತು. ನಾಯಕರು ಮೇಲೆ ಹಾಯಾಗಿ ಹಾರಾಡುತ್ತಿರುವಾಗ ಕೆಳಗೆ ಹೆಪ್ಪು ಗಟ್ಟಿದ ರಕ್ತ, ಅತ್ತ ಇತ್ತ ಕದಲದೆ ಗಟ್ಟಿಯಾದ ರಕ್ತ ಹೆಣಗಳನ್ನು ಒಡಲೊಳಿಟ್ಟುಕೊಂಡು ಒಂದೇ ಮೈಯಾಗಿ ಮಲಗಿದ್ದ ರಕ್ತ.



ಹೆಲಿಕಾಪ್ಟರ್ ತೀರಾ ಹತ್ತಿರಕ್ಕೆ ಬಂದು ನೆತ್ತರನ್ನು ನೋಡಬಯಸಿತು. ನಿಧಾನವಾಗಿ ನೆಲದ ಬಳಿ ಬಂತು. ನಾಯಕ ಮಣಿಗಳ ಕಣ್ಣಿಗೆ ಹೆಪ್ಪುಗಟ್ಟಿದ ರಕ್ತ ಬಿತ್ತು. ಅವರ ಕಣ್ಣು ತಿರುಗಿದಂತಾಯ್ತು. ಹೊಟ್ಟೆ ತೊಳಸಿತು. ನೋಡಲಾಗದೆ ಕಣ್ಣು ಮುಚ್ಚಿ ಮುಖ ಸಿಂಡರಿಸಿಕೊಂಡು ಮತ್ತೆ ಕಣ್ಣು ಬಿಡಬೇಕೆನ್ನವಷ್ಟರಲ್ಲಿ ಕೇಳಿಸಿದ "ಧಿಕ್ಕಾರ" ಅನ್ನೊ ಆಸ್ಫೋಟನೆಗೆ ರಪ್ಪನೆ ರೆಪ್ಪೆ ಬಿಟ್ಟು ದಿಟ್ಟಿಸಿದರು.

ರಕ್ತದೊಳಗಿಂದ ರೂಪೊಂದು ಸ್ಫೋಟಿಸಿ ನಿಂತಿತ್ತು. ಕೈ ಮೇಲಕ್ಕೆತ್ತಿ ಕೂಗ್ತಾ ಇತ್ತು. ಮುಖ ಮೂಗು ಒಂದು ಗೊತ್ತಾಗದ ನೆತ್ತರ ಮೂರ್ತಿ ! ಕರಿಯ ಕೆಂಪಾಗಿದ್ದ. ಧಿಕ್ಕಾರದ ದನಿ ಮಾಡುತ್ತ ನಿಂತಿದ್ದ.

ಅದರ ದನಿಗೆ ದಂಗಾದ ನಾಯಕ ಮಣಿಗಳ ಹಲಿಕಾಪ್ಟರ್ ಎದ್ದೆನೋ ಬಿದ್ದನೊ ಎಂದು ದಿಗ್ಭ್ರಾಂತಿಯಿಂದ ಹಕ್ಕಿಯಂತೆ ಹಾರಿ ಹೋಯ್ತು. ಅದು ಮರೆಯಾಗೋವರೆಗೆ ನೋಡ್ತಿದ್ದ ನಾನು ಈಗ ನೆಲದ ಕಡೆ ನೋಡಿದೆ. ರಕ್ತ ಇಷ್ಟಿಷ್ಟೆ ಕಡಿಮೆಯಾಗಿದೆ. ಯಾಕೆ?.. ಹೀಗೆ ? ಒಂದೂ ಅರ್ಥವಾಗಿಲ್ಲ. ಎಲ್ಲಾ ವಿಚಿತ್ರ ಅನ್ನುಸ್ತಿದೆ. ನನ್ನೆಲ್ಲ ಸೂಕ್ಷ್ಮತೇನ ಕಣ್ಣಿಗೆ ತಂದುಕೊಂಡು ನೋಡಿದೆ... ಏನಾಗಿದೆ ನಿಂತಿದ್ದ ನೆತ್ತರು?.... ನೆಲವೇ ತೆವಳಿದಂತೆ ಹೋಗ್ತ ಕೆಂಪಾದ ಕರಿಯನಲ್ಲಿ ಒಂದಾಗಿದೆ.

ರಕ್ತ ಕಡಿಮೆಯಾಗುತ್ತ ಕೆಂಪು ಕರಿಯನ ರೂಪ ಬಲವಾಗಿದೆ. ಬೆಳೀತಾ ಇದೆ. ಬೃಹದಾಕಾರವಾಗಿ ನೆಲಮುಗಿಲೊಂದು ಮಾಡೊ ಹಾಗೆ ಬೆಳೀತಿದೆ. ಎಂದೂ ಎಲ್ಲೂ ಕಾಣದ ಭಯಂಕರ ರೂಪ.

ನೋಡ್ತಾ ಇದ್ದಂತೆಯೇ ಪೂರ್ತಿ ಇಲ್ಲವಾದ ರಕ್ತ ನೆತ್ತರ ಮೂರ್ತಿಯನ್ನು ಮಾತ್ರ ನಿಲ್ಲಿಸಿದೆ. ಹೆಪ್ಪುಗಟ್ಟಿದ ನೆತ್ತರು ನೆಲವೇ ನಡೆದಂತೆ ಹೋಗಿ ಕರಿಯನನ್ನು ಸೇರಿದ ರೀತಿಗೆ ತಲ್ಲಣಗೊಂಡು, ಅದನ್ನು ಅರಗಿಸಿಕೊಳ ಒಳಗಿನ ತಳಮಳ ತಡೆಯಲಾರದೆ “ಕರಿಯ” ಅಂತ ಕೂಗಿದೆ. ಅದು ನಿಂತೇ ಇತ್ತು. ತಡೀಲಾರದೆ ಇನ್ನೊಂದ್ದಾರಿ ಕೂಗಿದೆ.

ನೆತ್ತರ ಮೂರ್ತಿ ಇತ್ತ ತಿರುಗಿತು. ಮುಖದ ಕೆಂಪಲ್ಲಿ ಕಣ್ಣಿನ ಜಾಗದಲ್ಲಿ ಏನೊ ಪಿಟಪಿಟ ಎಂದಂತಾಯ್ತು. ಅದು ನನ್ನಡೆಗೆ ನೋಡು, ಸರಿಯಾಗಿ ನೋಡು. ಮೆಲ್ಲಗೆ ಇತ್ತ ಕಾಲು ಹಾಕ್ಕು. ಕರೆದ ನನಗೆ ಕ್ಷಣಕಾಲ ದಿಗಿಲಾಯ್ತು ಅದರ ದಾಪುಗಾಲು, ಕಾಲಿಟ್ಟ ಕಡೆ ಅಚ್ಚೊತ್ತುವ ಕೆಂಪು ಹೆಜ್ಜೆ ನೋಡ್ತ ತಲೆಸೂತ್ತೊ ಹಾಗಾಯ್ತು. ಆದರೂ ತಡಕೊಂಡ ಅದರ ಮುಖ, ಮೈ ನೋಡಲಾರದೆ ಬರೀ ಕಾಲು ನೋಡ್ತ ನಿಂತೆ. ಕಪ್ಪು ನೆಲವೆಲ್ಲ ಕೆಂಪು ಕಾಲುಗಳಾಗಿ ಬರ್ತಿದ್ದಂತೆ ಭಾಸವಾಯಿತು. ಆ ಕಾಲುಗಳಲ್ಲಿ, ಇಡೊ ಹೆಜ್ಜೆಗಳಲ್ಲಿ, ದೃಢತೆ ಇತ್ತು. ತಲೆ ಮೇಲೆತ್ತದೆ ನೋಡಿದೆ ಕಾಲುಗಳು ಹತ್ತಿರಕ್ಕೆ ತೀರಾ ಹತ್ತಿರಕ್ಕೆ, ತೀರಾ... ತೀರಾ ಹತ್ತಿರಕ್ಕೆ.... ಕಡೆಗೆ ನನ್ನ ಕಾಲಿನ ಹತ್ತಿರಕ್ಕೆ ಬಂದೇ ಬಿಟ್ಟುವು. ತಲ್ಲಣಗೊಳಿಸಿದವು. ಒಂದು ಕ್ಷಣ ಮೈಮರೆವು ಬಂದಂಥ ಸ್ಥಿತಿ.

ತಲೆಯೆತ್ತಿ ನೋಡುತ್ತೇನೆ:



ಕರಿಯ ಇಲ್ಲ ! ಹೌದು ನನ್ನ ಕೆಂಪುಕರಿಯ ಇಲ್ಲ ! ಎಲ್ಲಿ? ಎಲ್ಲಿ ಹೋದ ? ಏನಾದ ?

ಒಂದೂಗೊ ತ್ತಾಗದ ಕಳವಳದಲ್ಲಿರುವಾಗ ನನ್ನೊಳಗೆ ನಡೆದಾಡಿದಂತೆ; ಒಂದಾದ ಮೇಲೊಂದು ಹೆಜ್ಜೆಯಿಟ್ಟು ಒಳಗೆಲ್ಲ ಓಡಾಡಿದಂತೆ; ಬರಬರುತ್ತ ಭದ್ರವಾಗಿ ತಳವೂರಿ ನಿಂತಂತೆ; ವಿಚಿತ್ರ ಅನುಭವ.

ವಿಚಿತ್ರ ಅನುಭವದಿಂದ ಹೊರಬಂದು ನನ್ನನ್ನು ನಾನು ನೋಡಿಕೊಳ್ಳುತ್ತೇನೆ: ನಾನೆ ಕೆಂಪಾಗಿದ್ದೆ!

ಕೂಡಲೇ ಕತೆ ಬರೆಯಲು ಕೂತೆ.

## ೩. ಲೂಟಿ

· ಬಿ.ಟಿ. ಲಲಿತಾ ನಾಯಕ್

ಪ್ರಕೃತಿ ಕೆಂಡ ಉಗುಳಿದಂತೆ ಇಡೀ ವಾತಾವರಣವೇ ಬಿಸಿಲಿನಿಂದ ಕಾದು ಹಬೆಯಾಡತೊಡಗಿತ್ತು. ಕಣ್ಣು ಹಾಯಿಸಿದಲ್ಲೆಲ್ಲ ಬಿರುಕು ಬಿಟ್ಟ ಒಣ ನೆಲ, ಇನ್ನೇನು ಸಿಡಿದುಬಿಡಬಹುದು ಎನಿಸುವಂತೆ ಅಲ್ಲಲ್ಲಿ ಗೋಚರಿಸುವ ಕರಿಯ ಕಲ್ಲಬಂಡೆಗಳು, ಇವುಗಳ ನಡುವೆ ತಾನೂ ಒಂದು ಉರಿವ ಕೊಳ್ಳಿಯಾಗಿ, ಎಡಹೆಗಲ ಮೇಲೆ ಕೈಗೊಡಲಿ ಇಟ್ಟು ಸರಸರನೆ ಮುನ್ನಡೆಯತೊಡಗಿದ್ದಳು ರಾಮಿ,

ಹೆಜ್ಜೆ ಇಟ್ಟಾಗೊಮ್ಮೆ ಕಾಲಂದುಗೆಯ ಕಿರುಗೆಜ್ಜೆಗಳು ಸಣ್ಣದಾಗಿ ದನಿ ಕೊಡುತ್ತಿದ್ದುವಾದರೂ ಅದರತ್ತ ಅವಳಿಗೆ ಲಕ್ಷವಿರಲಿಲ್ಲ. ತನ್ನ ಅಂದುಗೆಯ ನಾದಕ್ಕೆ ತಾನೇ ರೋಮಾಂಚಿತಳಾಗುತ್ತಿದ್ದ, ಪುಲಕಗೊಳ್ಳುತ್ತಿದ್ದ ಕಾಲವೂ ಒಂದಿತ್ತು.

ಸುಮಾರು ಹತ್ತು ವರ್ಷಗಳ ಹಿಂದೆ ಅವಳು ಬೀರುವಿನ ಕೈ ಹಿಡಿದಾಗ ಅಂತಹ ಸುಖವನ್ನು ಅನುಭವಿಸಿದ್ದಳು. ತೌರುಮನೆಯವರು ಕೊಟ್ಟಿದ್ದ ಕೆಲವೇ ಬೆಳ್ಳಿ ಆಭರಣಗಳನ್ನು ಧರಿಸಿಕೊಂಡು ಹುರುಪಿನಿಂದ ಓಡಾಡುತ್ತಿದ್ದಳು. ಹರ್ಷದಾಯಕ ವಾಗಿದ್ದ ವರ್ತಮಾನ ದಿನಗಳ ಹೊರತು ತಪ್ಪಿಯೂ ಭೂತ ಭವಿಷ್ಯತ್ತುಗಳ ಚಿಂತೆ ಆಗ ಅವಳ ಮನದಲ್ಲಿ ಸುಳಿಯುತ್ತಿರಲಿಲ್ಲ.

ವರುಷಗಳು ಉರುಳಿದವು. ಆಕೆ ಮೇಲೆ ಮೇಲೆ ಬಸುರಿ-ಬಾಣಂತಿಯಾಗಿ ನಾಕೈದು ಮಕ್ಕಳ ತಾಯಿಯೂ ಆದಳು. ತನ್ನಲ್ಲಿ ಪುಟಿಯುತ್ತಿದ್ದ ಸುಖ-ಸಂಭ್ರಮದ ಸೆಲೆಯೊಂದು ಸುಳಿವು ಕೊಡದೆ ಬತ್ತಿ ಹೋಗಿದ್ದರ ಬಗ್ಗೆ ಯೋಚಿಸಲೂ ಅವಳಿಗೆ ಬಿಡುವಿರಲಿಲ್ಲ.

ಹೆಂಡತಿಯನ್ನು ಹೊಡೆದು ಬಡೆದು ಪೀಡಿಸುವ ಬೇರೆ ಗಂಡನಿಗೆ ಹೋಲಿಸಿದರೆ, ಖೀರು ಅವರುಗಳಿಗಿಂತ ಎಷ್ಟೋ ಪಾಲು ಒಳ್ಳೆಯವನು. ಭಾರೀ ಸಿಟ್ಟು ಬಂದ ಹೊರತು ಆತ ಹೆಂಡತಿಯ ಮೇಲೆ ಕೈ ಮಾಡುತ್ತಿರಲಿಲ್ಲ . ಸ್ವಂತ ಜಮೀನು ಇಲ್ಲದ್ದರಿಂದ ಕೂಲಿನಾಲಿ ಮಾಡಿ ಹೆಂಡತಿ, ಮಕ್ಕಳ ಹೊಟ್ಟೆ ತುಂಬಿಸಲು ಹೆಣಗಾಡುತ್ತಿದ್ದ .

ರಾಮಿ ಐದನೆಯ ಹೆರಿಗೆಯಲ್ಲಿ ಆಪರೇಷನ್ ಮಾಡಿಸಿಕೊಂಡ ನಂತರ ದಂಪತಿಗಳಿಗೆ ಮಕ್ಕಳಾಗುವ ಆತಂಕ ದೂರವಾಗಿತ್ತು. ಇನ್ನು ತಾವಿಬ್ಬರೂ ದುಡಿದುಮಕ್ಕಳನ್ನು ಸಾಕಬಹುದೆಂಬ ಧೈರ್ಯ ಉಂಟಾಗಿತ್ತು. ಆರು ತಿಂಗಳ ಕೂಸಿಗೆ

ಹೊಟ್ಟೆ ತುಂಬ ಎದೆ ಹಾಲುಣಿಸಿ, ಎಂಟೊಂಬತ್ತು ವರ್ಷದ ತನ್ನ ಹಿರಿಯ ಮಗಳ ವಶಕ್ಕೆ ಅದನ್ನು ಒಪ್ಪಿಸಿ, ಆಕೆ ಗಂಡನೊಡನೆ ಕೂಲಿಗೆ ಹೊರಡುತ್ತಿದ್ದಳು.

ಆ ಕಾಲ ಕಳೆದು ಮಗು ಒಂದೂವರೆ ವರುಷದ್ದಾಗಿದೆ. ತಾಯಿಯ ಎದೆಹಾಲು ಅದಕ್ಕೇನೇನೂ ಸಾಲದು. ಉಣ್ಣುವ ಆರೇಳು ಬಾಯಿಗಳಲ್ಲಿ ಈಗ ಅದೂ ಒಂದು. ಹೀಗಾಗಿ ತಿನ್ನುವುದರಲ್ಲಿ ಕೂಡುಲೆಕ್ಕವಾದರೆ, ದುಡಿಯುವ ಕೈ ಮುರಿದು ಮೂಲೆ ಸೇರಿದೆ!

ಕಳೆದ ಮೂರು ವಾರಗಳ ಹಿಂದೆ ಖೀರು ಗೌಡರ ಹೊಲಕ್ಕೆ ಗೊಬ್ಬರ ಹೇರಲು ಒಪ್ಪಿಕೊಂಡಿದ್ದ. ತಿಪ್ಪೆಯಿಂದ ಮೈಲು ದೂರದಲ್ಲಿದ್ದ ಹೊಲಕ್ಕೆ ಹೆದ್ದಾರಿಯಿಂದಲೇ ಹೋಗಬೇಕಾಗಿತ್ತು. ಬಂಡಿ ಹೊರಳಿಸಲು ಒಂದೆರೆಡು ಮಾರು ದೂರ ಮಾತ್ರ ಉಳಿದಿರುವಾಗ, ಹಿಂದಿನಿಂದ ಬಂದ ಲಾರಿಯೊಂದು ಬಂಡಿಯ ಒಂದು ತುದಿಗೆ ಗುದ್ದಿ ಉರುಳಿಸಿ ಅದೇ ವೇಗದಲ್ಲಿ ಮುಂದೆ ಹೊರಟು ಹೋಗಿತ್ತು.

ಪ್ರಜ್ಞೆ ತಪ್ಪಿ ಬಿದ್ದಿದ್ದ ಬೀರುವನ್ನು ಗೌಡರು ಸರ್ಕಾರಿ ದವಾಖಾನೆಗೆ ಒಯ್ದು, ಪ್ರಥಮ ಚಿಕಿತ್ಸೆ ಕೊಡಿಸಿ, ಮನೆಗೆ ಕಳುಹಿಸಿ ಕೈ ತೊಳೆದುಕೊಂಡರು. ಪಕ್ಕೆ ನೋವೆಂದು ಗೋಳಾಡುವ ಗಂಡನನ್ನು ರಾಮಿ ವೈದ್ಯರ ಬಳಿ ಕರೆದೊಯ್ದು ತೋರಿಸಿದಾಗ, "ಪಕ್ಕೆಲೆಬು ಮುರಿದಿರಬಹುದು. ಇಲ್ಲಿ ಗುಣ ಆಗೋದಿಲ್ಲ. ಪಟ್ಟಣದ ದೊಡ್ಡ ದವಾಖಾನೆಗೆ ಒಯ್ಯಿ" ಎಂದು ಸಲಹೆ ಮಾಡಿದರು.

ರಾಮಿಗೌಡರ ಪಾದ ಹಿಡಿದು ಸಹಾಯ ಕೋರಿದಳು. "ಖರೆ ಬಿಡು, ನೀ ಹೇಳ್ದಂಗ ಅಂವ ಗುಣ ಆದನಂದ್ರ ನನ್ನ ಮನಿ ಜೀತ ಗೇಯ್ದಾರೆ ಸಾಲ ತೀರಸ್ತಾನ. ಆದ್ರ ಸತ್ತನಂದ್ರ ಯಾರು ತೀರಸ್ತಾರೆ? ನೀ ಅನಕ ಮಕ್ಕಳಾಕಿ, ಅವರ ದೇಖು ರೇಖು ಮಾಡೂದ ರಗಡಾಗದ ಇನ್ನ ನನ್ನ ಸಾಲದ ಗತಿ?"

"ಹೆಂಗಾರ ತೀರಿಸ್ತೀನಿ ಒಡೆಯ. ಕಷ್ಟದ ಕಾಲದಾಗ್ ಕೈಹಿಡಿರಿ ಧಣಿ!" ಎಂದು ರಾಮಿ ಪರಿಪರಿಯಾಗಿ ಬೇಡಿದ್ದು ವ್ಯರ್ಥ ಪ್ರಲಾಪವಾಗಿ ಗೌಡನಿಂದ ಬೈಗುಳ ತಿಂದು ಹಿಂದಿರುಗಬೇಕಾಯಿತು.

ತನ್ನ ಮುಂದಿನ ಹಾದಿ ಎರಡು ಕವಲಾಗಿ ಸೀಳಿದ್ದನ್ನು ಗಮನಿಸಿದ ಆಕೆ ನಡಿಗೆಯನ್ನು ನಿಧಾನಗೊಳಿಸಿ ಯೋಚಿಸತೊಡಗಿದಳು. ಯಾವ ಹಾದಿ ಹಿಡಿಯಲಿ? ನದಿ ದಂಡೆಯದೋ, ದುರ್ಗದ್ದೋ ? ಯಾವುದನ್ನೂ ಬೇಗನೆ ನಿರ್ಧರಿಸಲಾಗದೆ ಗೊಂದಲಕ್ಕೆ ಬಿದ್ದಳು.

ಇದುವರೆಗೂ ತಾನೆಂದೂ ಒಂಟಿಯಾಗಿ ದುರ್ಗದ ಅಡವಿಗೆ ಹೋಗಿಲ್ಲ . ತಾಂಡದ ಹತ್ತಾರು ಹೆಂಗಸರು-ಗಂಡಸರು ಒಟ್ಟಾಗಿ ಹೊರಡುವಾಗ ತಾನೂ ಅವರೊಂದಿಗೆ ಹೋಗಿ ಕಟ್ಟಿಕೊಂಡು ಗುಂಪಿನೊಡನೆ ಹಿಂದಿರುಗುತ್ತಿದ್ದಳು. ಆದರೆ ಈ ದಿನ ಜೊತೆಗಾರ್ತಿಯರೆಲ್ಲ ಹೊರೆ ಕಟ್ಟಿಕೊಂಡು

ಹಿಂದಿರುಗಿಬಿಟ್ಟದ್ದಾರೆ.. ಕೆಲವರಾಗಲೇ ಪೇಟೆಗೆ ಹೋಗಿ ಹೊರೆ ಮಾರಾಟ ಮಾಡಿ ಮನೆ ಸೇರಿಕೊಂಡಿದ್ದೂ ಆಗಿದೆ.

ತಾಂಡದ ಕಡೆಯಿಂದ ಯಾರೋ ಗಂಡಸೊಬ್ಬ ವೇಗವಾಗಿ ಬರುತ್ತಿರುವುದು ಕಾಣಿಸಿದಾಗ, ದುರ್ಗದ ಕಡೆ ಹೊಂಟವನೇ ಇರಬಾರದೇಕೆ? ಎಂಬ ಆಶಾಭಾವದಿಂದ ಅತ್ತ ದಿಟ್ಟಿಸಿ ನೋಡಿದಳು. ಬರುತ್ತಿರುವವನು ಕಾಳು ಎಂಬುದು ತಿಳಿದು ಅವಳ ಮುಖ ಒಂದಷ್ಟು ಅರಳಿತು. ಆದರೆ ಅವನ ಕೈಲಿ ಕೊಡಲಿ ಇಲ್ಲದನ್ನು ಕಂಡು ನಿರಾಶೆಯಾಯಿತು.

"ಯಾಕೆ ಬಾಯಿ, ಒಬ್ಬಾಕಿನ್ಯ ಹೊಂಟೀಯಲ ಕಟಗಿಗಿ?" ಎಂದು ಕಾಳು ವಿಚಾರಿಸಿದ.

"ಏನ್ಮಾಡಲಣ್ಣಾ , ನನ್ನ ನಸೀಬು ಆಗದಿ ಖುಟ್ಟೆ ಐತಿ, ಹಿರಿಯಗೆ ಇನ್ನಾದರೂ ಆರಾಮ ಆಗೂವಲ್ಲು . ಪಕ್ಕೆ ಬ್ಯಾನೆ ಅಂತ ಒಂದೇ ಸವನೆ ಒದರಾಡ್ತಾನ. ಸಣ್ಣ ಕೂಸಿಗೆ ಜ್ವರ ಬ್ಯಾರೆ ಬಂದಾವ. ಅದಕ್ಕೇ ಮುಂಜಾನೆ ಎಲ್ಲರ ಕೂಡ ಹೊಂಡಲಿಕ್ಕಾಗಲಿಲ್ಲ !" ಎಂದು ತನ್ನ ಸಂಕಟ ತೋಡಿಕೊಂಡಳು.

"ದುನಿಯಾದೊಳಗ ಯಾರೂ ಬಂಡಿಯಿಂದ ಬೀಳಂಗೇ ಇಲ್ಲೀನು ಬಾಯಿ?! ಚಾಲು ಇದ್ದ ಮೋಟಾರ್‌ಗಾಡಿಯಿಂದ ಬಿದ್ರೂ ಸೈತ ಒಂದು ವಾರಕ್ಕೆಲ್ಲ ಆರಾಮವಾಗಿ ಕುಂಟಿ ಹಿಡಿದು ದಗದ ಮಾಡಲಿಕ್ಕ ಹತ್ಯಾನ ಆ ಭೀಮಪ್ಪನ ಮಗ! ಈತಗೇನಾತು ಅಂತೀನಿ!"

"ಏಂಥ ಮಾಯದ್ದು ಬಂದು ಅಮರಿಕೊಳ್ಳು ಅಂತ ಹೇಳಣ್ಣಾ ! ದೊಡ್ಡ ದವಾಖಾನಿಗ ಒಯ್ಯುಬೇಕಂದ್ರ ಕೈಯಾಗ ರೊಕ್ಕಿಲ್ಲ. ಗೌಡ್ರ ಬಲ್ಲಿ ಬೇಡಾಕ ಹ್ವಾದ್ರೆ ಬೇದು ಕಳಿಸಿಬಿಟ್ರು.

"ಮೈ ಮುದ್ದು ದಗಾದ ಮಾಡಿದೋರಿಗೆ ರೊಕ್ಕ ಬಿಚ್ಚಲಿಕ್ಕೆ ವಲ್ಲೆ ಅಂತಾನ ಆ ಮಗ : ಇನ್ನು ನಿನಗೆ ಹ್ಯಾಂಗ ಕೊಟ್ಟಾನು ಬಿಡು.. ಹೆಂಗಾರ ಇರಲಿ.. ಸೇವಾಲಾಲನ ಗುಡಿಗ ಹೋಗಿ ಬೀರುಗ ಒಂದಿಷ್ಟು ಧುಳ್ತಾ (ಬೂದಿ) ಪರಸಾದ ಕೊಡು, ನಮ್ಮಜ್ಜ ಮುತ್ತಜೊರೆಲ್ಲಾ ಜಡ್ಡಾದ್ರ ದವಾಖಾನಿಗೆ ಹೋಗ್ತಿದ್ರೇನು? ಎಷ್ಟೊತ್ತಾಗ್ಲಿ ಆ ಸ್ವಾಮಿ ಪಾದಕ್ಕೆ ಶರಣಾಗ್ತಿದ್ರು, ಹೌದಿಲ್ಲೋ ?"

"ಈಗ ನಾ ಆದ್ರೂ ಅಷ್ಟೇ ಮಾಡ್ತೀನಲ್ಲ ಕಾಳಣ್ಣ, ಬರೋ ಅಮಾಸಿಗ ಗದ್ದಮ್ಮಗ ಒಂದ ಹುಂಜ ಕೊಡ್ತೀನಿ ಅಂತ ಬೇಡಿಕೊಂಡೀನಿ ; ಮಠದಯ್ಯಗ ಮುಡಿಪು ಕಟೀನಿ" .

"ಬಾಬಣ್ಣನ ಹತ್ರ ಒಂದಿಷ್ಟು ಮಂತ್ರ ಹಾಕ್ಸಿಬಿಡು ಬಾಯಿ, ಗಾಳಿಗೀಳಿ ಮೆಟ್ಟಿಕೊಂಡೈತೋ ಏನೋ... ಎಂದು ಆತ ಮತ್ತೊಂದು ಹೊಸ ಸೂಚನೆ ನೀಡಿದಾಗ ಆಕೆ ನಿರಾಕರಿಸುವ ಸ್ಥಿತಿಯಲ್ಲಿರಲಿಲ್ಲ. ಈಗಾಗಲೇ ತನ್ನ ಮೂಗಿನಲ್ಲಿದ್ದ ಚಿನ್ನದ

ಮುಕುರವನ್ನೂ ಗಂಡನ ಸಲುವಾಗಿ ಮಾರಿದ್ದಾಗಿತ್ತು. ಈಗ ಉಳಿದಿರುವುದು ಇದೊಂದು ಎಂದು" ತನ್ನ ಕಾಲಂದುಗೆಯನ್ನು ನೋಡಿಕೊಂಡಳು.

"ರಸ್ತೆ ದಗದ ಸುರುವಾಗತೈತಿ ಅಂತ ಆವತ್ತು ನೀ ಅಂದಿದ್ಯಲ್ಲಣ್ಣಾ ? ಎಂದು ಆಕೆ ಪ್ರಶ್ನಿಸಿದಾಗ ಬರೋ ಸ್ವಾಮಾರದಿಂದ ಸುರುವಾಗತೈತಿ. ಅದರ ಸಂಬಂಧನೇ ಮೇಸ್ತ್ರಿ ಕಡೆ ಹೊಂಟೀನಿ. ಎಷ್ಟು ಅಳು ಬೇಕೆಂಬೊದನ್ನು ಕೇಳಿ, ಹೆಸರು ಹಚ್ಚಿಸಿ ಬತ್ತೇನಿ ಎಂದ ಕಾಳು" .

"ಹಂಗಾದ್ರ ನಿನಗೆ ಪುಣ್ಯ ಬರದ, ನನದೊಂದ್ ಹೆಸರು ಹಚ್ಚಿ ಬಾಯಣ್ಣ, ನನಪಾಡು ಏನಂಬೂದು ನಿನಗೆ ? ಚಲೊತ್ತನಾಗಿ ತಿಳಿದೈತಿ!" ಎಂದು ವಿನಂತಿಸಿಕೊಂಡಳು.

"ಯದಕ್ಕೆ ಗೊತ್ತಿಲ್ಲ ಬಿಡು ತಾಯಿ, ನಮ್ಮಂಥ ಗರೀಬರ ಹಣೆಬರವೆಲ್ಲಾ ಈಟೇನೋಡು, ಏಳು ಗುಡ್ಡ ಸುತ್ತಾಡಿ ತುಕಡಿ ರೊಟ್ಟಿಕಾಣ ಬೇಕಾಗೈತಿ" ಎಂದು ನಿಟ್ಟಿಸಿರಿಟ್ಟು, "ನೀ ಏನು ಈಗ ನದಿ ದಂಡಿಗ ಹೊಂಟಿದಿ?" ಎಂದು ವಿಚಾರಿಸಿದ.

"ಇಲ್ಲಣ್ಣ ದುರ್ಗಕ್ಕೆ ಹೋಗಬೇಕಂತ ಮಾಡ್ತೀನಿ" ಎಂದು ಆಕೆ ಹೇಳಿ ದೊಡನೆ ಕಾಳು ಆತಂಕದಿಂದ ನುಡಿದ. - "ಬ್ಯಾಡ ಬಾಯಿ, ಒಬ್ಬಾಕಿನೇ ಅಲ್ಲಿಗ್ ಹೋಗಬ್ಯಾಡ, ಅಡವಿಗೆ ತೋಳ ಬಂದಾವ, ಕಲ್ಲಿ ಬಂದಾವ, ಮನ್ನರನ್ನ ಎತ್ತಿಕೊಂಡ್ ಹೋಗಲಿಕ್ಕ ಹತ್ಯಾವಂತ ಮಂದಿ ಹೇಳಿಕ್ಕ ಹತ್ಯಾರ. ಈ ರಬಾಯಿ ಧೀರಜ್ಜಿ ಎಲ್ಲು ಕಣ್ಣಾರೆ ಕಂಡು ಬಂದಾರಂತ ಸುಮ್ಮ ನದಿ ದಂಡಿಗ ಹೋಗು" ಎಂದು ಸಲಹೆ ನೀಡಿ ಆತನ ತನ್ನ ದಾರಿ ಹಿಡಿದ.

ರಾಮಿ ಪುನಃ ಗೊಂದಲಕ್ಕೀಡಾದಳು. ಸಮೀಪದ ನದಿ ದಂಡೆಗೆ ಹೋದರೆ ದಪ್ಪ ಕಟ್ಟಿಗೆಯಂತೂ ಸಿಗುವುದಿಲ್ಲ . ಬರೀ ಪುರಲೇ ಕಟ್ಟಿಗೆಯಷ್ಟೇ ಆಯ್ದು ತರಬೇಕು. ಕೊಳ್ಳುವ ಗಿರಾಕಿಗಳು ಅದನ್ನು ಒಂದೆರೆಡು ರೂಪಾಯಿಗಿಂತಲೂ ಹೆಚ್ಚು ಬೆಲೆಗೆ ಕೇಳುವುದೇ ಇಲ್ಲ. ಅಷ್ಟು ಕಡಿಮೆ ರೊಕ್ಕದಲ್ಲಿ ಜೋಳ ಕೊಳ್ಳುವುದೆಂತು? ಉಪ್ಪು ಮೆಣಸಿಗೂ ಸಹಿತ ಸಾಲುವುದಿಲ್ಲ . ದುರ್ಗಕ್ಕೆ ಹೋದರೆ ದಪ್ಪ ದಪ್ಪನೆಯ ಒಣ ಕಟ್ಟಿಗೆ ತರಬಹುದು. ಐದು ರೂಪಾಯಿಗಳವರೆಗೂ ಗಳಿಸಬಹುದು! ತೋಳ-ಕರಡಿ ಅಂತ ಅಂಜಿಸುತ್ತಿದ್ದಾರಲ್ಲಾ .. ಹಾಡು ಹಗಲಿನಾಗ ಅವು ತನ್ನನ್ನೇನು ಮಾಡಿಯಾವು? ಹಂಗೇನಾದರೂ ಕಾಣಿಸಿದರೆ ಓಡಿ ಬಂದು ಬಿಟ್ಟಾರಾಯಿತು... ರಾಮಿ ದೃಢ ನಿರ್ಧಾರ ತಳೆದು ಸರಸರನೆ ಹೆಜ್ಜೆ ಹಾಕಿದಳು.

ಚಿರಪರಿಚತವಾದ ಹಾದಿ ಅರ್ಧ ತಾಸಿನಲ್ಲಿ ಸವೆದು, ಕಾದು ಹೋಗಿದ್ದ ಭೂಪ್ರದೇಶ ಕೊನೆಗೊಂಡಿತೆಂಬಂತೆ ವಿರಳವಾಗಿ ಗಿಡಗಂಟೆಗಳು ಕಾಣಿಸ ತೊಡಗಿದವು! ಎತ್ತೆತ್ತರಕ್ಕೆ ಬೆಳೆದುನಿಂತ ವಿವಿಧ ಜಾತಿಯ ಮರಗಿಡ, ಮುಳ್ಳು

ಬೇಲಿ, ಮಳೆ-ಪೊದೆಗಳು ದಟ್ಟೆಸುತ್ತು ಬಂದು ಆಕೆಯ ನಡಿಗೆ ನಿಧಾನಗೊಂಡಿತು. ಅಂಕುಡೊಂಕಿನ ಏರು ತಗ್ಗಿನ ಕಠಿಣವಾದ ಮಾರ್ಗದಲ್ಲಿ ಅತಿ ಎಚ್ಚರಿಕೆಯಿಂದ ಕ್ರಮಿಸುತ್ತ ಕಟ್ಟಿಗೆ ಶೋಧೆಗೆ ತೊಡಗಿದಳು.



ಅಲ್ಲೊಂದು ಇಲ್ಲೊಂದು ಒಣ ಕಟ್ಟಿಗೆಯ ತುಂಡುಗಳು ಕಾಣಿಸಿದ್ದನ್ನೂ ಹಿಗ್ಗಿನಿಂದ ಸಂಗ್ರಹಿಸತೊಡಗಿದಳು. ದೊಡ್ಡದೊಂದು ಪೊದೆಯ ನಡುವೆ ಗೆದ್ದಲು ಹತ್ತಿದ ಒಣಮರವೊಂದನ್ನು ಕಂಡು ಲಗುಬಗೆಯಿಂದ ಅದರತ್ತ ನುಗ್ಗಿದಳು. ಕೈಗೆಟುಕುವ ರೆಂಬೆ ಟೊಂಗೆಗಳನ್ನೆಲ್ಲ ಕೊಡಲಿಯಿಂದ ಕಡಿಕಡಿದು ಒಂದೆಡೆ ರಾಶಿ ಹಾಕುತ್ತಿರುವಾಗ ಪೊದೆಯಲ್ಲಿ ಯಾವುದೋ ಪ್ರಾಣಿ ಚಲಿಸಿದಂತೆ ಕಂಡುಬಂದು ಅವಳ ಎದೆಬಡಿತ ದ್ವಿಗುಣಿಸಿತು.

ಗಾಬರಿಯಿಂದ ಹಿಂದಕ್ಕೆ ಜಿಗಿದು ಕಣ್ಣಗಲಿಸಿ ನೋಡಿದಳು. ಮೈತುಂಬ ದಟ್ಟವಾದ ಕಪ್ಪು ಕೂದಲುಳ್ಳ ಆಳೆತ್ತರದ ಪ್ರಾಣಿಯೊಂದು ತನ್ನತ್ತಲೇ ನೋಡತೊಡಗಿದೆ! ರಾಮಿಯ ಜಂಘಾಬಲ ಉಡುಗಿತು. ಗಂಟಲ ಪಸೆ ಆರಿ, ಮೈಯೆಲ್ಲಾ ಬೆವತು ನೀರಾಯಿತು. ಕೂಗಿಕೊಳ್ಳಲಾಗಲಿ, ಓಡಿಹೋಗ ಲಾಗಲಿ ಸಾಧ್ಯವಾಗದೆ ಕಂಪಿಸುತ್ತ ನಿಂತುಬಿಟ್ಟಳು.

“ಕಲ್ಲಿ ಮನ್ನರನ್ನ ಕಂಡ್ರೆ ಸುಮ್ಮೆ ಬಿಡೋದಿಲ್ಲ . ಅದರಾಗೂ ಗಂಡು ಕಲ್ಲಿ ಕೈಗೆ ಹೆಣ್ಣು ಮಕ್ಕಳೇನಾರ ಸಿಕ್ಕಿಹಾಕ್ಕೊಂಡ್ರೆ ಕಥೆ ಮುಗಿದೇ ಹೋಯ್ತು ! ಅದು ಮಾನಭಂಗ ಮಾಡಿ ಮಾಡಿ ಸಾಯಿಸಿಬಿಡತೈತಿ!” ಎಂದು ಜನಗಳು ಹೇಳುವುದನ್ನು ಕೇಳಿದ್ದ ರಾಮಿ, ತನಗೆ ಅಪಮೃತ್ಯು ಸಮೀಪಿಸಿತೆಂದೇ ತೀರ್ಮಾನಿಸಿದಳು. ಮಂದಿ ಹೇಳಿದ್ದ ಬುದ್ಧಿ ಮಾತು ಕೇಳಬೇಕಾಗಿತ್ತು. ಉಪವಾಸ ಸತ್ತರೂ ಚಿಂತಿಲ್ಲ. ಒಬ್ಬಾಕಿನ ಇಲ್ಲಿಗೆ ಬರಬಾರದಾಗಿತ್ತು ! ಎಂದು ಒಳಗೊಳಗೇ ಪೇಚಾಡಿಕೊಂಡಳು.

ಹುಲ್ಲು ಜೋಪಡಿಯ ಮೂಲೆಯಲ್ಲಿ ಮುದುಡಿ ಮಲಗಿರುವ ಗಂಡ, ತನ್ನ ಬರುವಿಕೆಗಾಗಿ ಎದುರು ನೋಡುತ್ತ ಹಚ್ಚೆ ಬಾಗಿಲಲ್ಲಿ ಹಸಿದು ಕುಳಿತರಬಹುದಾದ ಬಡಕಂದಮ್ಮಗಳನ್ನು ನೆನೆದು ಅವಳ ಕಣ್ಣು ಒದ್ದೆಯಾದವು.

ಕರಡಿ ತನ್ನ ಮೇಲೆ ಆಕ್ರಮಣ ಮಾಡಲು ಸಜ್ಜಾಗುತ್ತಿರುವುದು ಸ್ಪಷ್ಟವಾದೊಡನೆ ರಾಮಿ ಜಾಗೃತಳಾದಳು. ತನ್ನ ಮಕ್ಕಳ ಆರೈಕೆಗಾಗಿಯಾದರೂ ತಾನು ಬದುಕಬೇಕು ಎಂಬ ಹಂಬಲ ಅವಳನ್ನು ಅಲ್ಲಿಂದ ತಪ್ಪಿಸಿಕೊಂಡು ಓಡಲು ಪ್ರೇರೇಪಿಸಿತು. ಹಿಡಿತದಿಂದ ಜಾರುತ್ತಿದ್ದ ಕೊಡಲಿಯನ್ನೆತ್ತಿ ಹೆಗಲಿಗೇರಿಸಿಕೊಂಡು ಓಡಲೆಂದು ರಭಸದಿಂದ ಹಿಂದಿರುಗಿದಳು.

ಆದೇ ಸಮಯಕ್ಕೆ ಪಟ್ಟಣದ ನಾಗರಿಕನಂತೆ ಕಾಣುವ ತರುಣನೊಬ್ಬ ತೀರ ಸನಿಹದಲ್ಲೇ ಬರುತ್ತಿರುವುದನ್ನು ಕಂಡು ಅವಳಿಗೆ ತುಸು ಧೈರ್ಯ ಬಂದಂತಾಯಿತು. ಅಯ್ಯೋಯಪ್ಪಾ ! ಕಲ್ಲಿ ! ಎಂದು ಜೋರಾಗಿ ಕೂಗಿಕೊಂಡಳು.

ಅದನ್ನು ಕೇಳಿದ ತರುಣ ತಟ್ಟನೆ ಅಲ್ಲಿಯೇ ನಿಂತ, ಕರಡಿ ಆಕೆಯತ್ತ ನುಗ್ಗಿ ಬರುತ್ತಿರುವುದನ್ನು ಕಂಡು ಅಪ್ರತಿಭನಾದರೂ, ಕ್ಷಣದಲ್ಲಿಯೇ ಸಾವರಿಸಿಕೊಂಡು ತನ್ನ ಪ್ಯಾಂಟಿನ ಜೇಬಿನಿಂದ ಬೆಂಕಿ ಪೊಟ್ಟಣವನ್ನು ತೆಗೆದು ಛಕ್ಕನೆ ಕಡ್ಡಿಗೀರಿದ. ಬಗಲ ಚೀಲದೊಂದ ಹೊರಗಿಣುಕುತ್ತಿದ್ದ ಪತ್ರಿಕೆಯೊಂದನ್ನು ಹೊರಗೆಳೆದು ಅದಕ್ಕೆ ಕಡ್ಡಿ ಮುಟ್ಟಿಸಿದ. ಕಾಗದ ಭರಭರನೆ ಹೊತ್ತಿಕೊಂಡಿತು.



ಕಣ್ಣೆವೆ ಮುಚ್ಚುವುದರೊಳಗೆ ಕರಡಿ ಎತ್ತಲೋ ಮಾಯವಾಯಿತು. ರಾಮಿ ಪುನರ್ಜನ್ಮ ಪಡೆದವಳಂಗ ನಿಟ್ಟಿಸಿರಿಟ್ಟಳು. “ನನ್ನ ಪಾಲಿನ ದೇವು ಬಂದಂಗ ಬಂದ್ರೀಯವಾ! ಇಲ್ಲಿಕ್ಕಂದ್ರ ಈವತ್ತು ನನ ಕತಿಮುಗೀತಿತ್ರಿ!” ಎನ್ನುತ್ತ ತರುಣನಿಗೆ ಕೈಮುಗಿದಳು.

“ಒಬ್ಬಳೇ ಬಂದಿದ್ದೀಯಾ ಅಥವಾ ಜೊತೇಲಿ ಯಾರಾದ್ರು ಬಂದಿದ್ದಾರಾ?” ಎಂದು ಆತ ಕೇಳಿದಾಗ ನಿಜ ಹೇಳಬೇಕೋ-ಬಾರದೋ ಎಂದು ಅವಳ ಮನಸ್ಸು ತೊಳಲಾಡಿತು. ಈತನ ಮಾರಿ ನೋಡಿದ್ರ ಚಲೋ ಮನ್ಷ್ಯಂಗ ಕಾಣಿಸ್ತಾನ, ಖರೆ ಹೇಳಿದರಾಯ್ತು ಎಂದುಕೊಂಡು “ಒಬ್ಬಾಕೀನೇ ಬಂದ್ರೀ” . ನನ್ನ ಹಿರಿಮಗ ಆರಾಮ ಇಲ್ಲದ ಸಲುವಾಗಿ ನನ್ನ ಜೋಡಿ ಬಂದಿಲಿ” ಎಂದು ಕಾರಣ ನೀಡಿದಳು.

ಆಗ ನಾಲಿಗೆಯಿಂದ ಲೊಚಲೊಚನೆ ಶಬ್ದ ಹೊರಡಿಸಿ ಮರುಕ ಸೂಚಿಸುತ್ತ “ನಿನ್ನ ಗಂಡನಿಗೆ ಏನು ಕಾಯಿಲೆ? ಎಂದು ಪ್ರಶ್ನಿಸಿದಾಗ ನೀವು ಡಾಕುಟ್ರು ಅದಿರೇ ಸಾಹೇಬ್ರೆ ? ಎಂದು ಮರುಪ್ರಶ್ನೆ ಹಾಕಿದಳು ರಾಮಿ.

“ಇಲ್ಲಮ್ಮ ನಾನು ಡಾಕ್ಟಲ್ಲ . ನಾನೊಬ್ಬ ವರದಿಗಾರ, ದುರ್ಗಾ ನೋಡಬೇಕು ಅಂತ ಬಂದಿದ್ದೆ… ಎಂದು ತನ್ನನ್ನು ಪರಿಚಯಿಸಿಕೊಂಡ ಆತ, ರಾಮಿಯ ಒಂದೆರೆಡು ಫೋಟೋ ತೆಗೆದುಕೊಂಡ. “ಅದನ್ನು ಒಯ್ದು ಏನು ಮಾಡ್ತೀರಿ ಸಾಹೇಬ್ರೆ ?” ಎಂದು ಆಕೆ ಕೇಳಿದಾಗ “ಪೇಪರ್‌ನಲ್ಲಿ ಹಾಕ್ತಿವಿ. ನಿಮ್ಮಂಥ ಬಡಜನಗಳ ಕಷ್ಟ-ಸುಖ ಕೇಳಿ ತಿಳ್ಕೊಂಡು ಅದನ್ನು ಪೇಪರಲ್ಲಿ ಬರೆಯೋದು ನಮ್ಮಂಥವರ ಕೆಲಸ. ಕೆಲವು ಸಾರಿ ಇದು ಸರ್ಕಾರದ ಗಮನಕ್ಕೆ ಬಂದು, ನಿಮಗೇನಾದ್ರು ಸೌಲತ್ತುಗಳು ಸಹ ಸಿಗಬಹುದು!” ಎಂದು ಆತ ವಿವರಿಸಿದಾಗ ರಾಮಿಗೆ ಆತನ ಬಗ್ಗೆ ಗೌರವ ಹುಟ್ಟಿತು. ತನ್ನ ಸಂಸಾರದ ಯಾವತ್ತೂ ಕಷ್ಟ ಸಂಕಟಗಳನ್ನು ಆತನ ಮುಂದೆ ತೆರೆದಿಟ್ಟಳು.

“ನಿನ್ನ ಗಂಡ ಖೀರು-ಗೌಡನ ಹೊಲದಲ್ಲಿ ಕೆಲ್ಸ ಮಾಡ್ತಿರುವಾಗ ಅಪಘಾತಕ್ಕೊಳಗಾಗಿರುವುದರಿಂದ ಆತನೇ ಖರ್ಚು ಹಾಕಿ ಇವನನ್ನು ಬದುಕಿಸಬೇಕು. ಇಲ್ಲವಾದ್ರೆ ಕಾನೂನಿನ ಪ್ರಕಾರ ಗೌಡ ತಪ್ಪಿತಸ್ಥನಾಗುತ್ತಾನೆ. ಇದನ್ನೆಲ್ಲ

ನಾನು ಪೇಪರಿಗೆ ಬರೀತೀನಿ, ನೀನು ಚಿಂತೆ ಮಾಡೇಡ" . ಆತ ಅಭಯ ನೀಡಿದಾಗ, ಇಂದಿನಿಂದ ತನ್ನ ಕಷ್ಟ ಕೋಟಲೆಗಳೆಲ್ಲ ಕೊನೆಗೊಂಡಂತೆ ಅನ್ನಿಸಿ ರಾಮಿಯ ಮನ ಹಗುರವಾಯಿತು.

ಆಕೆ ಹುರುಪಿನಿಂದ ಕಟ್ಟಿಗೆ ಸಂಗ್ರಹಿಸಿ ಭಾರಿ ಹೊರೆ ಕಟ್ಟಿದ್ದನ್ನು ವರದಿಗಾರ ಅತ್ಯಂತ ಶ್ರಮದಿಂದ ಅವಳ ತಲೆಗೆ ಹೊರಿಸಿದ. ಆಕೆ ಕೃತಜ್ಞತೆಯಿಂದ ಕೈ ಮುಗಿದು ಅವನನ್ನು ಬೀಳ್ಕೊಟ್ಟು ತನ್ನ ಹಾದಿ ಹಿಡಿದಳು.

ಎರಡಾಳು ಹೊರುವ ಹೊರೆ ಹೊತ್ತಿದರೂ ರಾಮಿಯ ಮುಖದಲ್ಲಿ ಆಯಾಸದ ಛಾಯೆ ಮೂಡಿರಲಿಲ್ಲ. ಆ ಕಗ್ಗ ಬರೆಯೋ ಮನ್ಷ ಬರಲಿಲ್ಲಂದರ ಈ ದೆವ್ವನಂಥಾ ಹೊರೆಯನ್ನು ನಾ ಒಬ್ಬಾಕೆನೇ ಹೊತ್ತು ಕೊಳ್ಳೋದ್ ಆಗ್ತಿರಲಿಲ್ಲ. ಎತ್ತಾಗಿಂತ ಬಂದನೋ ಪುಣ್ಯಾತ್ಮ ದೇವರ ಹಂಗ... ಅವನ ಹೆಂಡ್ತಿ ಮಕ್ಳು ತಣ್ಣಗಿರಲಿ! ಈವತ್ತು ಈ ಹೊರೆಯನ್ನು ಐದು ರೂಪಾಯಿಗೆ ಕಡಿಮೆ ಹಾಕಲೇಬಾರು .



ಅಂಗ್ಡಿಯಿಂದ ಎರಡು ಕಿಲೊ ಜ್ವಾಳ ಕೊಂಡು, ಸುಣ್ಣದಂಥ ನುಣ್ಣನೆಯ ಹಿಟ್ಟು ಮಾಡ್ಲಿ, ಗಂಡ ಮಕ್ಕಳಿಗೆ ಬೆಳ್ಳನೆಯ ಭಕ್ತಿ ತಟ್ಟಿ ಕೊಡಬೇಕು. ಪಾಪ್ಲಿ ರೊಕ್ಕ ಕೊಟ್ಟು ಬೆಳ್ಳುಳ್ಳಿ ಒಯ್ಯಬೇಕು. ಹಿರಿಯಗ ಬೆಳ್ಳುಳ್ಳಿ ಕಾರ ಅಂದ್ರ ಬಲು ಪಿರೀತಿ! ಹಂಗೇ ರೊಕ್ಕ ಉಳುದ್ರೆ ಒಂದರ್ಧ ಮಾಪು ಸರಾಯಿಯನ್ನೂ ಒಯ್ಯಬೇಕು. ಅದನ್ನು ಕುಡಿದು ಮಕ್ಕೊಂಬಿಟ್ರೆ ಮೈ ಬ್ಯಾನಿಯೆಲ್ಲಾ ಮರಂಗ ಆಗ್ತದಂತೆ. ಪಾಪ! ಹಂಗಾದ್ರು ಗ್ವಾಡೆ ಹೊತ್ತು ಮರೀಲಿ...

ಒಮ್ಮೆಲೆ ಅವಳಿಗೆದುರಾಗಿ ಇಬ್ಬರು ವ್ಯಕ್ತಿಗಳು ಅಡ್ಡ ನಿಂತು "ಏಯ್ ಯಾಡಿ, ಹೊರೆಯನ್ನು ಕೆಳಕ್ಕೆ ಒಗಿ!" ಎಂದು ಗಡಸು ಧ್ವನಿಯಲ್ಲಿ ಆಜ್ಞಾಪಿಸಿದಾಗ, ಆಕಾಶದಲ್ಲಿ ಗರಿಗೆದರಿ ಹಾರಾಡುತ್ತಿದ್ದ ಪಕ್ಷಿ ಕ್ಷಣಾರ್ಧದಲ್ಲಿ ರೆಕ್ಕೆ ಮುರಿದು ನೆಲಕ್ಕೆ ಬೀಳುವಂತೆ ರಾಮಿ ಸುಂದರ ಕಾಲ್ಪನಿಕ ಲೋಕದಿಂದ ಕಟು ವಾಸ್ತವಕ್ಕೆ ಜಾರಿದಳು.

ಕತ್ತಿನವರೆಗೂ ಕೂದಲು ಬಿಟ್ಟು ಹುಲುಸಾಗಿ ಗಡ್ಡ ಮೀಸೆ ಬೆಳೆಸಿದ್ದ, ಚಿತ್ತಾರದ ಅಂಗಿ ದೊಗಳೆ ಪ್ಯಾಂಟು ಹಾಕಿಕೊಂಡಿದ್ದ ಮಧ್ಯ ವಯಸ್ಸಿನ ಆ ಗಂಡಸರಿಬ್ಬರೂ ಕುಡಿದು ಮತ್ತರಾಗಿ ತನ್ನನ್ನೇ ನುಂಗುವಂತೆ ನೋಡುತ್ತಿರುವುದನ್ನು ಕಂಡು, ಎರಡನೇಯ ಬಾರಿ ಕರಡಿಯ ದರ್ಶನವಾದಂತೆ ಅನ್ನಿಸಿ, ರಾಮಿ ಬೆಚ್ಚಿದಳು.

"ಏನ್ ನೋಡ್ತೀರಿ ? ಹೊರೆ ಕೆಳಕ್ಕೆ ಒಗಿ ಅಂದಿದ್ದು ಕೇಳಸಲಿಲ್ಲಾ ?" ಎಂದು ಮತ್ತೊಮ್ಮೆ ಗದರಿಸಿದಾಗ "ಯದ್ದಕ್ಕ ಒಗಿಬೇಕ್ರಿಯಪ್ಪಾ? ಕತ್ತಲಾಗದ ಲಗೂ ಲಗೂ ನಾ ಮನಿಗೆ ಹೋಗಬೇಕ್ರಿ" ಎಂದಳು ಹೊರೆಯನ್ನು ಮತ್ತಷ್ಟು ಬಿಗಿಯಾಗಿ ಹಿಡಿದುಕೊಳ್ಳುತ್ತ.

“ಪುಕ್ಕಟೆ ಕಟಗಿ ಹಿಡಿದು ಹೂಂ ಅಂತರ ಹೊರೆ ಮಾಡ್ಕೊಂಡಿದ್ದಿ, ಲಮನಿಗೆ ಹೋಗಲಾರದ ಮತ್ತೇನು ಮಾಡ್ತಿದ್ದಿ !” ಎನ್ನುತ್ತ ಒಬ್ಬ ಅವಳು ಹೊತ್ತ ಹೊರೆಯನ್ನು ಎಳೆದಾಡಿ ನೆಲಕ್ಕೆ ಬೀಳಿಸಿದರೆ, ಮತ್ತೊಬ್ಬ ಅವಳ ಕೈಯ ಕೊಡಲಿಯನ್ನು ಕಸಿದುಕೊಂಡ. “ದಿನಾ ಹಿಂಗ್ ಬಂದ್ ಬಂದು ಕಳುವಿಲೆ ಕಟಗಿ ಕಡಕೊಂಡ

ಹೋಗ್ತಿರಲ್ಲಾ, ಗುತ್ತಿಗೆ ತಗೊಂಡಿರೋ ನಾವೇನು ಬಾಯಾಗ್ ಮಣ್ ಹಾಕ್ಕೊಂಡ್ ಹೋಗಬೇಕಂತಿರೇನು?!” ಒಬ್ಬರೋಷದಿಂದ ಮೂದಲಿಸಿದ.

“ಭಾಳ ಕಡಿದಿಲಿಯಪ್ಪಾ, ಕೆಳಗೆ ಬಿದ್ದೋವನ್ನೇ ಆಡ್ಕೊಂಡೀ ಒಬ್ರು ಕಾಗದ ಬರೆಯೋ ಸಾಹೇಬ್ರು ಇಲ್ಲೇ ಎಲ್ಲೋ ಆದಾರ ; ಬೇಕಾದ್ರ ಅವರನ್ನು ಕೇಳಿ ನೋಡ್ರಿ.!”

ಯಾ ಸಾಹೇಬನ ಸಾಕ್ಷಿನೂ ಬೇಕಾಗಿಲ್ಲ ನಮಗ, ನಮ್ಮ ಪರವಾನಗಿ ಇಲ್ಲ ಅಡವಿಯೊಳಗೆ ಕಾಲಿಟ್ಟಿದ್ದಿ . ಮತ್ತ ಕೈಯಾಗ ಕೊಡಲಿ ಹಿಡಿದಿದ್ದೆ. ಇದೇ ಸಾಕ್ಷಿ ಸಾಕು. ತೆಗಿ ತೆಗಿ ರೊಕ್ಕ. ಒಂದ್ ಕೊಡ್ಲಿಗ ಇಪ್ಪತ್ತು ರೂಪಾಯಿ ದಂಡ ತೆರಬೇಕಾಗ್ತದ. ಅಷ್ಟು ಕೊಟ್ಟು ನಡೆ”  ಇಲ್ಲಿಂದ!

ರಾಮಿ ಗಾಬರಿಗೊಂಡಳು. “ಬಡವಿ ; ಇಪ್ಪತ್ತು ರೂಪಾಯಿ ಎಲ್ಲಿಂದ ತಲ್ಲಿ ಧಣಿ! ಇದೊಂದು ಸರ್ತಿ ದೊಡ್ಡ ಮನಸ್ಸು ಮಾಡಿ ಬಿಟ್ಟುಬಿಡ್ರಿ, ಇನ್ನೊಮ್ಮೆ ಈಕಡೆ ಬರೆಂಗಿ !” ಎಂದು ದೀನಳಾಗಿ ಬೇಡಿದಳು.



“ಬಿಟ್ಟಿದ್ದೀವಿ ಹೋಗು, ಕಟಿಗೆ-ಕೊಡ್ಲಿ ಎರಡನ್ನೂ ದಂಡಕ್ಕೆ ಹಾಕ್ಕೊಂಡಿದೀವಿ! ಎಂಬುದನ್ನು ಕೇಳಿ ಆಕೆ ಹೌಹಾರಿದಳು.

“ಅಯ್ಯಯ್ಯೋ ! ನಿಮ್ಮ ದಮ್ಮಯ್ಯ, ಹಂಗ್ ಮಾಡಬ್ಯಾಡ್ರಿ ಒಡೆಯ ! ಕೊಡ್ಲಿ ನನ್ನ ಬಲಗೈ ಇದ್ದಂಗ, ಕಡೇಕ ಅದೊಂದನಾದ್ರು ಕೊಟ್ಟುಬಿಡ್ರಿ, ನಾ ಹೊಂಟೋಗ್ತಿನಿ..”

“ಅದ್ದೆಂಗ್ ಹೊಂಟೋಗ್ತಿದ್ದಿ ನಿಂದ್ರು, ಚಲೋದೊಂದು ಮೊಲದ ಬ್ಯಾಟೆ ಸಿಕ್ಕೇತಿ, ಹೆಂಗೂ ಒಣ ಕಟಗಿ ಜಮಾಯಿಸಿದ್ದಿ ಅದರಾಗ ಹುರಿದು ತಿಂದು ಮಜಾ ಮಾಡಾಮಂತ!”

“ಏಯ್ ಯಾಡಿ, ನಿನ್ನ ಕಾಲಾಗ ಅದಾವಲ್ಲ ಅವು ಬೆಳ್ಳಿದೇನ?” ಇಬ್ಬರೂ ವಿಧವಿಧವಾಗಿ ಬಡಬಡಿಸಲಾರಂಭಿಸಿದಾಗ ರಾಮಿ ಭೀತಿಯಿಂದ ಕಂಪಿಸುತ್ತ ನಿಂತಳು.

“ನಿನ್ನ ಸಂಚಿನಾರ ಹೊರಗ ತೆಗಿಯ... ಐದ್ದತ್ತು ರೂಪ್ಪಾಯಾರೆ ಸಿಗತಾವೇನು ನೋಡಾಮ..” ಎನ್ನುವ ಅವರಿಬ್ಬರೂ ಸನಿಹಕ್ಕೆ ಬಂದು ಸಂಚಿ ಎಳೆಯುವ ನೆಪದಲ್ಲಿ ಅವಳ ಲಂಗದ ಲಾಡಿಯನ್ನು ಬಿಚ್ಚಿಹಾಕಿ, ಮೆಲ್ಲುಸುಕನ್ನು ಕಿತ್ತೆಸೆದರು.

“ಬಿಡ್ರಿ ! ನನ್ನ ಬಿಟ್ಟು ಬಿಡ್ರಿ !” ಎಂದು ಆಕೆ ಕೂಗಾಡಿ ಪ್ರತಿಭಟಿಸಿದಾಗ “ನೀ ಹಿಂಗ್ ಗಲ್ಲಾ ಹಾಕಿದ್ಯಂದ್ರ ಕೊಡ್ಲಿ ಕಟಗಿ ಎರಡನ್ನೂ ಒಯಿದು ಬಿಡ್ತೀನಿ ನೋಡು” ಎಂದು ಬೆದರಿಸಿದರು.

“ಒಯ್ದ್ರಿ ಒಯ್ಯುವಲ್ಲಯ್ಯಾಕೆ, ನನ್ನನ್ನು ಬಿಟ್ಟುಬಿಡಿ, ನಾ ಹೊಂಟೋಗ್ತಿನಿ” ಎಂದು ಕೊಸರಾಡಿದಳು ರಾಮಿ.

“ಬಿಡುಹಂಗ ಇತ್ತಂದ್ರ ಹಿಡೀತಾನೇ ಇದ್ದಿಲ್ಲಬೇ! ಈ ಅಡವಿಯಾಗ ನೀ ಎಷ್ಟು ಒದರಿದರೂ ಏನು ಸುಖ ಇಲ್ಲ ಬಿಡು” ಎಂದು ಅಟ್ಟಹಾಸ ಮಾಡುತ್ತಾ ಅವಳ ಮೇಲೆರಗಿದರು.

ಎಷ್ಟೋ ಹೊತ್ತಿನ ಮೇಲೆ ರಾಮಿ ದುಷ್ಟರಿಂದ ಬಿಡುಗಡೆ ಪಡೆದು ಪ್ರಯಾಸದಿಂದ ಎದ್ದು ತನ್ನ ಕೊಡಲಿ ಕಟ್ಟಿಗೆಗಾಗಿ ಹುಡುಕಾಡಿದಳು. ಅವೆರಡೂ ಮಾಯವಾಗುವುದರ ಜೊತೆಗೆ ತನ್ನ ಕಾಲಿನ ಗೆಜ್ಜೆಗಳೂ ಕಾಣೆಯಾಗಿದ್ದವು. ರಾಮಿಯ ಎದೆತುಂಬ ರೋಷ ಹೆಡೆಯಾಡಿತು. ಮುಷ್ಟಿಗಳು ಬಿಗಿದುಕೊಂಡವು.

“ನೀವು ಯಾವ ಗವಿಯಾಗ ಹೋಗಿ ಅವಿತುಕೊಂಡೂ ನಾ ಬಿಡಂಗಿ ! ನನ್ನ ಕೊಡ್ಲಿ ಕಸಗೊಂಡು, ಅದರಿಂದ ನಿಮ್ಮನ್ನು ಸಣ್ಣಗ್ ಕಡಿದು ಚೂರ್‌ಚೂ ಮಾಡಿದಮ್ಯಾಲೇ ನಾ ಮನಿಗೆ ಹೋಗ್ತಿನೋ ”! ಎಂದು ಕಾಡು ನಡುಗುವಂತೆ ಚೀತ್ಕರಿಸುತ್ತದಟ್ಟಡವಿಯಲ್ಲಿ ಓಡತೊಡಗಿದಳು.

## ೪. ತೂತಿನ ದುಡ್ಡು ಮತ್ತು ನೀರು

· ಅರವಿಂದ ಮಾಲಗತ್ತಿ

ಕಿಸಕ್ಕನೆ ನಗುತ್ತಿದ್ದರು ಆ ಜನ. ಅವರ ನಗುವಿಗೆ ಎಂಥ ಅರ್ಥ ಎನ್ನುವುದು ತಿಳಿಯುತ್ತಿರಲಿಲ್ಲ. ಪ್ರಶ್ನಿಸುವವರು ಮೇಲುಕೇರಿಯವರಾಗಿದ್ದು, ಗಂಭೀರ ಮುಖ ಮುದ್ರೆಯನ್ನು ಹೊತ್ತವರಾಗಿದ್ದರು. ಅಷ್ಟೇ ಗಂಭೀರವಾಗಿ ಉತ್ತರಿಸುತ್ತಿದ್ದರು. ಅವರು ಬೆನ್ನು ತೋರಿದರೆ ಸಾಕು ಬಾಗಿ ಬಾಯಿ ಮುಚ್ಚಿ ಗೊಳ್ಳನೆ ನಗುತ್ತಿದ್ದರು.

"ಮಠದ ಬಾವಿಯಲ್ಲಿ

ಹಂದಿ ಬಿದ್ದಿದೆಯಂತೆ ಹೌದೆ ?"

ಎನ್ನುವ ಪ್ರಶ್ನೆಗೆ ಮೇಲಿನ ನಗೆಯೇ ಕಾರಣವಾಗಿತ್ತು.

ಆ ಹಿಂದಿನ ಪ್ರಶ್ನೆ ಹರಿಜನ ಕೇರಿಯ ಬಾಗೋಡಿ ಪರಸಪ್ಪನಿಂದ ಮಠದ ಬಾವಿಯಲ್ಲಿ ಬಿದ್ದ ಹಂದಿಯನ್ನು ಹೊರತೆಗೆಸಿ ಇದು ಲಕ್ಷ್ಮಿ ಬೇರೆಡೆ ಹುಗಿಯುವುದು ಸರಿಯಲ್ಲವೆಂದು ಮಠದ ಮೂಲೆಯೊಂದರಲ್ಲೇ ಹುಗಿದ ಸುದ್ದಿ . ಆ ಕೇರಿಯಲ್ಲಿ ಯಾರಿಗೂ ಗೊತ್ತಾಗಲಿಲ್ಲ . ಸ್ವತಃ ಬಾಗೋಡಿ ಪರಸಪ್ಪನಿಗೆ ಕೇಳಿದರೂ ನನಗೊತ್ತಿಲ್ಲಪ್ಪ ಎಂದು ಹೇಳುವ ಉಪ್ಪು ತಿಂದ ವಿಧೇಯ ಜೀವಿ ಅದು. ಮಠದ ಬಾವಿಗೆ ಇಳಿಯುವ ಮುನ್ನ ಈತನ ಎಲುದೊಗಲಿನ ಮೈಗೆ ಎರಡು ಕೊಡ ನೀರು ಹಾಕಿ ಅವನನ್ನು ಬಾವಿಗೆ ಇಳಿಯಕೊಟ್ಟು ಹಂದಿಯನ್ನು ತೆಗೆಯಿಸಿ ಹೂಳಿಸಿದ್ದರು.

ಸೂರ್ಯನ ಮೊದಲ ಕಿರಣ ನೆಲ ಮುಟ್ಟುವ ಮುನ್ನವೇ, ಕೂಡಲ ಸಂಗಮದ ಹತ್ತಿರದ ಊರಾದ ಮುದ್ದೇನೂರಲ್ಲಿ ಇದೆಲ್ಲ ನಡೆದು ಹೋಗಿತ್ತು . ಬೆಳಕು ಮುಷ್ಠಿಯಲ್ಲಿ ಕಟ್ಟಿಡಲಾಗದು. ಹಾಗೆಯೇ ಸುದ್ದಿಯೂ ಕೂಡ. ಹನಿಹನಿಯಾಗಿ ಸೇರಿದ ಸುದ್ದಿ ಹನಿಗೆ ಸಾವಿರಾರು ಸುಳ್ಳಿನ ಕಂತೆಗಳು ಅರಳುತ್ತವೆ. ಮರುಕ್ಷಣವೇ ಬಾಡುತ್ತವೆ. ಒಂದು ಸತ್ತರೆ ಮತ್ತೆರೆಡು ಜೀವಂತವಾಗುತ್ತವೆ. ಹಾಗೆಯೇ ಕತ್ತಲಾದರೂ ಬಾವಿಯ ಗಡಗಡಿಗಳು, ಕೊಡೆಗಳು, ಹಗ್ಗಗಳು.

"ಮಠದ ಬಾವಿಯಲ್ಲಿ

ಹಂದಿ ಬಿದ್ದಿದೆಯಂತೆ ಹೌದೆ ?"

ಎನ್ನುವ ಪ್ರಶ್ನೆಯನ್ನು ಕೇಳದಿರಲಿಲ್ಲ, ಮಡಿವಂತರ ಬಾಯಲ್ಲಿ

"ಅಯ್ಯೋ ಬಿದ್ದಿದ್ದು ಹಂದ್ಯಲ್ಲ

ಯಾರೋ ಕಿಡಿಗೇಡಿಗಳು ಕರೀ ಅರಿವ್ಯಾಗ ಹುಲ್ಲು ಕಟ್ಟಿ ವಗದಾರ..."

ಮುದ್ದೇನೂರಿನ ಸೂರ್ಯ ಸಾಯುವ ದಿಕ್ಕಿಗೆ ದಲಿತರ ಮನೆಗಳಿದ್ದರೆ ಸೂರ್ಯ ಹುಟ್ಟುವ ದಿಕ್ಕಿಗೆ ಅವರು ನೀರುವ ತರುವ ಎರಡು ಬಾವಿಗಳಿದ್ದವು. ನಡುವೆ ಮುದ್ದೇನೂರು ಜೋಳದ ಮುದ್ದೆಯಂತೆ ಅರಳಿತ್ತು.

ದನಗಳನ್ನು ಮಾರಾಟ ಮಾಡುವ ಸ್ಥಳವೇ ದನಗಳ ಅಡ್ಡೆ . ಈ ಅಡ್ಡೆಯಲ್ಲಿಯೇ ಮೈಸೂರು ಅರಸರು ಎರಡು ಬಾವಿಗಳನ್ನು ಕಟ್ಟಿಸಿಕೊಟ್ಟಿದ್ದು, ಹೊಲೆ ಮಾದಿಗರ ಬಾವಿಯನ್ನು ಗುರುತಿಸಲು ಎಮ್ಮೆಯ ಕೋಡನ್ನು ಕಟ್ಟಿ ಜೋತು ಬಿಟ್ಟಿದ್ದರು, ಇನ್ನುಳಿದ ಕೆಳಜಾತಿಯವರ ಬಾವಿಯನ್ನು ಗುರುತಿಸಲು ಎತ್ತಿನ ಕೋಡನ್ನು ಕಟ್ಟಿ ಜೋತು ಬಿಟ್ಟಿದ್ದರು. ಊರ ದನಗಳನ್ನು ಮಾರಾಟ ಮಾಡುವಾಗ ದನಗಳಿಗಾಗಿ ನೀರು ಬೇಕೆಂದು ಬಾವಿ ಕಟ್ಟಿಸಿದ್ದರೂ, ಸಂತೆಯ ದನಗಳು ವಾರಕ್ಕೊಮ್ಮೆ ಮಾತ್ರ ನೀರು ಕುಡಿದರೆ, ವಾರದ ಎಲ್ಲಾ ದಿನಗಳೂ ದನಗಳ ಅಡ್ಡೆಯ ಬಾವಿಯ ನೀರನ್ನು ದಲಿತರೇ ಕುಡಿಯುತ್ತಿದ್ದರು. ಹೀಗಿದ್ದರೂ ದಲಿತರಿಗೆ ಪ್ರತ್ಯೇಕ ಬಾವಿಗಳಿವೆಯೆಂದು ಮತ್ತು ದನಗಳ ಸಂತೆಯ ಮೇಲಿಂದಲೂ ಹಿರೇಪ್ಯಾಟಿಯೆಂದೇ ಕರೆಸಿಕೊಂಡಿತ್ತು.

ದಲಿತರು ಒಂದು ಧ್ರುವದಿಂದ ಇನ್ನೊಂದು ಧ್ರುವಕ್ಕೆ ಹೋಗಿ ನೀರು ತರುವುದೆಂದರೆ ಮರುಭೂಮಿಯಲ್ಲಿ ನೀರು ಹುಡುಕಿ ತಂದ ಅನುಭವವಾಗುತ್ತಿತ್ತು. ಬೇಸಿಗೆಯಲ್ಲಿಯೂ ಈ ಅನುಭವ ಹೆಜ್ಜೆ ಹೆಜ್ಜೆಗೂ ಆಗುತ್ತಿತ್ತು .

ಸ್ವಾಭಿಮಾನವಿಲ್ಲದವರು, ವಯಸ್ಸಾದವರು, ಮೇಲುಜಾತಿಯವರ ಊರಬಾವಿಯ ಎದುರು ಕುಳಿತು ಹೋಗು ಬರುವವರಿಗೆ

"ಯಪ್ಪಾ ನಷ್ಟೊಂದು ಕೊಡ

ನೀರು ಸೇದು ಹಾಕಿ"

ಎಂದು "ಜೀ" ಎಳೆಯುತ್ತಿದ್ದರು. ಪ್ರಯೋಜನವಾಗುತ್ತಿರಲಿಲ್ಲ . ಗಂಟೆಗಟ್ಟಲೆ ಕಾದು ಹೇಳಿದ್ದನ್ನೇ ಹೇಳಿ ಗಂಟಲು ಒಣಗಿ ಹೋದರೂ ಕೊಡಕ್ಕೆ ನೀರು ಸಿಕ್ಕುವುದು ಬಿಡಿ, ಬಾಯಿಗೂ ನೀರು ಸಿಗುತ್ತಿರಲಿಲ್ಲ. ಒಂದು ಕೊಡ ನೀರು ಸಿಕ್ಕರೆ ದೇವರೇ ಬಂದು ನೀರು ಹಣಿಸಿದಂತಾಗುತ್ತಿತ್ತು.

ಜವ್ವನೆಯರಿಗೆ, ಸುಂದರಿಯರಿಗೆ ದೇವರು ಬೇಗನೆ ಪ್ರತ್ಯಕ್ಷವಾಗುತ್ತಿದ್ದ.

ಮುದ್ದೇನೂರಿನ ಇನ್ನೂ ಕೆಲವರಿಗೆ ಮೈಗಳ್ಳರೆನ್ನಬೇಕೆ? ಬ್ಯಾರೇನನ್ನಬೇಕೋ, ಬಂಡುಕೋರರೆನ್ನಬೇಕೋ ಸ್ಪಷ್ಟವಾಗುವುದಿಲ್ಲ . ಅಂಥವರಲ್ಲಿ ದುಗ್ಗ, ಸೈದ, ಬಾಬು, ಲಚುಮುರಂಥವರು ಎತ್ತಿದ ಕೈ.

ಇವರು ಊರಲ್ಲಿ ಮುಟ್ಟದೇ ಇರುವ ಬಾವಿಗಳೇ ಇರಲಿಲ್ಲ. ಎಷ್ಟೋ ಬಾರಿ ಹರಿಜನ ಕೇರಿಯ ಜನ ನಮ್ಮ ಬಾವಿಯಲ್ಲಿ ನೀರು ತುಂಬಿಕೊಂಡು ಹೋಗುತ್ತಾರೆ ಎನ್ನುವುದು ಊರಿನ ಮೇಲು ಕೇರಿಯ ಜನಗಳಿಗೆ ಗೊತ್ತೇ ಆಗುತ್ತಿರಲಿಲ್ಲ. ಒಬ್ಬರಿಗೊಬ್ಬರು ಮುಖ ಕಾಣುವ ಮುನ್ನವೇ ನೀರು ತಂದು ಮಲಗುತ್ತಿದ್ದರು.



ನೀರು ತರುವ ಎಲ್ಲ ಜನಗಳಲ್ಲಿ ಪಳಗಿದ ಗಡಿ ಎಂದರೆ ಸೈದಪ್ಪ, ಈತನ ರಾಮಬಾಣಗಳು ಎಂದೂ ಹುಸಿ ಹೋಗುತ್ತಿರಲಿಲ್ಲ. ನಾಯಿಗಳಂಥವೂ ಬಾಯಿ ಮುಚ್ಚಿ ಬಿಡುತ್ತಿದ್ದವು.

ಬೆಳ್ಳಿ, ಚುಕ್ಕಿ, ಮೂಡುವ ಮುನ್ನವೇ ನೀರು ತಂದು ಮುಗಿಸುವ ಸೈದನಿಗೆ ಅಂದು ಎಚ್ಚರಾದದ್ದು ಬೆಳ್ಳಿ ಚುಕ್ಕಿ ಮೂಡಿದ ನಂತರವೇ ; ಕಾರಣ ನಿನ್ನೆ ರಾತ್ರಿ ಈಚಲವ್ವ ಮತ್ತು ಕಾಳವ್ವ ಒಟ್ಟಿಗೆ ಸೇರಿದುದೇ ಆಗಿತ್ತು. ಹೀಗಾಗಿ ಸೈದ ಹೆಗಲ ಮೇಲೆ ಜೋಡಿ ಕೊಡ ಹೊತ್ತು ಅವಸರವಸರದಲ್ಲಿ ಬಸವೇಶ್ವರ ಮಠದ ಬಾವಿಗೆ ನಡೆದಿದ್ದ. ಕತ್ತಲಿದ್ದರೂ ಕಣ್ಣಿಗೆ ಕಾಣುವಷ್ಟು ಬೆಳಕು ಮಾತ್ರ ಮುಖದೆದುರು ಮಸುಕಾಗಿ ಹಾಸಿದಂತಿತ್ತು .

ಪ್ರಪಂಚದ ಮಹತ್ತರವಾದ ಕೆಲಸಗಳೆಲ್ಲ ನಡೆಯುವುದು ಬೆಳಕಿಗೆ  ಬಡತನವಿದ್ದಾಗಲೇ ಅಲ್ಲವೇ? ಹಾಗೆಯೇ ಸೈದ ಬೆಳಗಿನ ಶ್ರೀಮಂತಿಗೆ ಎದುರಾಗಿ ವಟಗುಟ್ಟುತ್ತಾ ದಿನದ ಮಹತ್ತರವಾದ ಕೆಲಸಕ್ಕೆ ಹೆಜ್ಜೆ ಹಾಕುತ್ತಿದ್ದ.

ಮಾಂಸದ ತುಂಡುಗಳನ್ನು ಹಾಕಿ ಊರ ನಾಯಿಗಳನ್ನು ಪಳಗಿಸಿದ್ದರಿಂದ ಒಂದೊಂದಾಗಿ ಕುಂಯ್ ಗುಟ್ಟುತ್ತಾ, ಅವನ ಹಿಂದೆ ದುಂಬಾಲು ಬಿದ್ದು ತಮ್ಮ ಸೀಮೆ ಮುಗಿದಾಗ ಹಿಂದಕ್ಕೆ ಸರಿಯುತ್ತಿದ್ದವು. ಸೈದ ಊರ ಅಗಸಿಯ ಬಾಗಿಲನ್ನು ದಾಟಿ ಒಳಗೆ ಕಾಲಿಟ್ಟನೆಂದರೆ ಸಾಕು ಅವನ ಬಾಯಿಯಿಂದ ಪಂಚಾಕ್ಷರಿಯ ಮಂತ್ರ ಹೊರಡುತ್ತಿತ್ತು .

"ಓಂ ನಮಃ ಶಿವಾಯ"

ಓಂ ನಮಃ ಶಿವಾಯ....

ಎಂದು ಪಕ್ಕದಲ್ಲಿ ಹೋಗುವವರಿಗೆ ಮಾತ್ರ ಕೇಳಿಸುವಂತೆ ಲಯಬದ್ಧವಾಗಿ ಹೇಳುತ್ತಿದ್ದ. ಈ ನಾಮಸ್ಮರಣೆಯಲ್ಲಿ ಪಳಗಿದ ನಾಲಿಗೆಗೆ ಶೈವರ ನಾಲಿಗೆಯೂ ಸಲಾಮು ಹಾಕುವಂತಿತ್ತು. ಅಗಸೆಯ ಕಲ್ಲು ದಾಟುತ್ತಿದ್ದಂತೆ ಸೇದುವ ಹಗ್ಗ ಕಾಲಲ್ಲಿ ಸಿಕ್ಕಿ ಸೈದ ಎಡವಿದೆ. ಹೆಬ್ಬೆರಳು ಒಡೆದು ರಕ್ತ ಸೋರತೊಡಗಿತು. ನಾಲಿಗೆಯಿಂದ ಪಂಚಾಕ್ಷರಿಯ ಮಂತ್ರ ಜಾರಿ

"ಅಯ್ಯಯ್ಯಪ್ಪಾ,

ಯವ್ವಾ ..."

ಎಂದು ಹೇಳುತ್ತಿದ್ದಂತೆಯೇ ಮೆಲ್ಲಗೆ ಪ್ರಜ್ಞಾಪೂರ್ವಕವಾಗಿ ನೋವಿನಲ್ಲೂ ಧ್ವನಿ ಬದಲಾಗಿ

ಓ ಶಿವ ಶಿವಾ

ಶಿವ ಶಿವಾ...

ಏನು ಕಾದಿದೆಯೋ, ಪರಮೇಶ್ವರಾ

ಮೈಲಾರಾ...'



ಎನ್ನುತ್ತಲೇ ಕೊಡಗಳನ್ನು ಹೆಗಲಿನಿಂದ ನೆಲಕ್ಕಿಳಿಸುವುದರಲ್ಲಿಯೇ ನಾಯಿಯೊಂದು ಬಂದು ಅವನ ಪಕ್ಕದಲ್ಲಿ ನಿಂತಿತ್ತು. ಸೈದ ನಾಯಿಯನ್ನು ಓಡಿಸುತ್ತಲೇ ತನ್ನ ಹೆಬ್ಬೆರಳನ್ನು ಹಿಡಿದುಕೊಂಡ. ಅಲ್ಲಿಯೇ ಬಿದ್ದಿದ್ದ ಕಲ್ಲ ಮೇಲೆ ಕಾಲಿಟ್ಟು ತನ್ನ ಪಟಗದ ಚುಂಗನ್ನು ಹರಿದು ಕಾಲ ಹೆಬ್ಬೆರಳಿಗೆ ಬಿಗಿದು ಕುಂಟುತ್ತಲೇ ಹೆಜ್ಜೆ ಮುಂದಿಟ್ಟ. ನಾಯಿ ಬಂಡೆ ಮೇಲೆ ಬಿದ್ದ ರಕ್ತವನ್ನು ನೆಕ್ಕಿ ಮತ್ತೆ ದುಂಬಾಲು ಬೀಳತೊಡಗಿತು.

ಬಸವೇಶ್ವರ ಮಠ ತುಂಬಾ ಹೆಸರುವಾಸಿ. ನಕ್ಷೆಯನ್ನು ಕೆತ್ತಿದ್ದ ಕಟ್ಟಿಗೆಯ ಕಂಬಗಳು ಒಬ್ಬನು ತೋಳ ತೆಕ್ಕೆಯಲ್ಲಿ ಹಿಡಿದರೂ ಹಿಡಿತಕ್ಕೆ ಸಿಗುತ್ತಿರಲಿಲ್ಲ. ಅಂತಹ ಹನ್ನೆರೆಡು ಕಂಬಗಳ ಸಾಲು ಮಂಟಪ, ಎದುರಿಗೆ ಮೂರು ಸುತ್ತಿನ ಕೋಟೆಯಂತೆ ಮಠ ಕಟ್ಟಲ್ಪಟ್ಟಿತ್ತು. ನಡುವೆ ಮಠದ ಸ್ಥಾನವಾದರೆ ಮೂರು ಸುತ್ತಿನ ಕೋಟೆಯ ಹೊರಗಡೆ ಗಚ್ಚಿನ ಬಾವಿ. ಅದಕ್ಕೆ ಎರಡು ಗಡಗಡಿಗಳು. ಈಗ ಇಂಥವುಗಳಿಂದ ಗಮನ ಸೆಳೆದರೂ, ಒಂದು ಕಾಲಕ್ಕೆ ಕಂಬಗಳಷ್ಟೇ ಬಲವಾಗಿ ನೆಲೆಯೂರಿನಿಂತ ಮಠವಾಗಿತ್ತು. ಅಂತೆಯೇ ಬಾವಿಯ ನೀರು ಬಲವಾಗಿಯೇ ಇದ್ದರೂ ಊರವರ ಬಳಕೆ ಕಡಿಮೆಯಾಗಿತ್ತು. ಕಾರಣ, ಸುತ್ತೆಲ್ಲ ಮತ್ತೆ ಬಾವಿಗಳು ಹುಟ್ಟಿಕೊಂಡಿದ್ದವು. ನಾಲ್ಕನೆಯ ಸುತ್ತಿನ ಕೋಟೆಗೋಡೆಯಂತೆ ಮಠದ ಬೇಲಿಗೋಡೆ ಅದಕ್ಕೊಂದು ಹಿರಿದಾದ ಬಾಗಿಲು ಅದರ ಹೊಸ್ತಿಲು ಮಠದ ಕಂಬಗಳ ಅರ್ಧ ಶರೀರವೇ ಆಗಿತ್ತು.

ಸೈದ ಕುಂಟುತ್ತಾ ಖಾಲಿ ಕೊಡಗಳನ್ನು ಹೊತ್ತು ನಿಧಾನವಾಗಿ ಕಳ್ಳ ಹೆಜ್ಜೆ ಹಾಕುತ್ತಲೇ ಬರುತ್ತಿದ್ದ. ಬೆಳ್ಳಿ ಚುಕ್ಕಿ ಮೂಡುವುದರೊಂದಿಗೆ ಮಠದ ಚಟುವಟಿಕೆಗಳು ಆರಂಭವಾಗುತ್ತಿದ್ದವು. ಮೊದಲಿಗೆ ಏಳುವವರು ಮುದುಕಿಯರೆ, ಮಠದ ಗೋಡೆ ಬಿರುಕು ಬಿಟ್ಟು ಹಳತಾಗಿದ್ದರೂ ಮುದುಕಿಯರಿಂದ ಶುಚಿಯಾಗಿರುತ್ತಿತ್ತು. ನೀಲಪ್ಪ ಮುದುಕಿ ಮಠದ ಕಸಗುಡಿಸಿ, ಕಂದಿಯೊಂದಿಗೆ ಮಠದ ಮಂಟಪವಿಳಿದು ನಡು ಬಯಲಿನಲ್ಲಿ ಕಂದಿಲನಿಟ್ಟು, ಕಸ ಚೆಲ್ಲಲು ಹೆಬ್ಬಾಗಿಲನ್ನು ದಾಟಿ ಹೊರಬರುತ್ತಿದ್ದಂತೆ, ಸೈದ ಶಿವ ಶಿವ. ಎನ್ನುತ್ತಲೇ ಮುದುಕಿಯನ್ನು ನೋಡಿಯೂ ನೋಡದವನಂತೆ ಮಠವನ್ನು ಪ್ರವೇಶಿಸಿದ. ಮುದುಕಿ ತಕ್ಷಣವೇ

'ಯಾರು...ನಿಂಗಯ್ಯನಾ ??

ಎಂದು ಪ್ರಶ್ನಿಸಿದಳು. ಸೈದ ಮೌನವಾಗಿಯೇ ಮುಂದುವರೆದ. ಅನಿರೀಕ್ಷಿತವಾಗಿ ಬಂದ ಪ್ರಶ್ನೆ ಎದೆ 'ಜಲ್' ಎನಿಸಿತು. ಅಂಗಳದಲ್ಲಿರುವ ಕಂದಿಲನ್ನು ನೋಡಿ, ಗಂಗವ್ವ ಮುದುಕಿ ಇರಬಹುದೆಂದು ಸಂದೇಹ ಇಣುಕಿ ಇಳಿದು ಹೋದ. ಒಳಗೆ ಮೂಡಿದ ಸಂದೇಹವೆಂಬ ಅಂಜಿಕೆಗೆ ಅಂತರಾತ್ಮದ ಕುಡ್ಡುದೀಪ ಹತ್ತಿದಂತಾಯಿತು.

ಬಾವಿಗೆ ಕೊಡ ಬಿಡುವುದೋ ಬೇಡವೋ ಎಂದು ಮನಸ್ಸು ಉಯ್ಯಾಲೆ ಆಡತೊಡಗಿತು. ನಡುಗುವ ಕೈಯಲ್ಲಿಯೇ ಯಾಂತ್ರಿಕವಾಗಿ ತನಗರಿಯದಂತೆ ಕೊಡ ಬಾವಿಯಲ್ಲಿ ಇಳಿದಿತ್ತು. ಉರಿಯುತ್ತಿದ್ದ ಹೆದರಿಕೆಯ ದೀಪದ ಬತ್ತಿ ಏರಿ ಏರಿ ಬೆಳಕಿಗಿಂತ



ಹೊಗೆಯೇ ಹೆಚ್ಚು ಬಿಡತೊಡಗಿತು. ಕೊಡ ಮೇಲಕ್ಕೆ ಜಗ್ಗುವಾಗ ಗಡಗಡಿಯ 'ಕಿ ಕಿರ್' ಎಂದು ಸದ್ದು ಮಾಡುತ್ತ

'ನೀರು ಕದ್ದು ಕದ್ದು

ತೆಗೆದುಕೊಂಡು ಹೋಗುತ್ತೀಯೋ ಜಗ್ಗು ಜಗ್ಗು

ಎಂದು ಹೇಳುವಂತಿತ್ತು. ಹೀಗೆ ಈ ಗಡಗಡಿ ಗೀಳಿಡುವಾಗ ಅದರ ಬಾಯಿಗೆ ನೀರು ಹಾಕಿ ಎಷ್ಟೋ ಬಾರಿ ಸದ್ದಾಗದಂತೆ ಜಗ್ಗಿದ್ದ. ಆದರೆ ಇಂದು ಅದೂ ಜಾರಿತು. ಸದಾಕಾಲ ನೀರಿನೊಂದಿಗೆ ಕೊಡಕ್ಕೆ ಮಾತನಾಡಲು ಅವಕಾಶವೇ ಕೊಡುತ್ತಿರಲಿಲ್ಲ. ಆದರೆ ಇಂದು ಮನ ತುಂಬುವಂತೆ ಮಾತನಾಡಿ, ಸಂತೃಪ್ತಿಯಿಂದ ಮೇಲಕ್ಕೆ ಬರುತ್ತಿತ್ತು. ಏನು ಮಾತನಾಡಿರಬೇಕು ಈ ಕೊಡ ಆ ನೀರಿನೊಂದಿಗೆ

ನಿಂಗವ್ವ, ಮುದುಕಿ ಒಳಗೆ ಬಂದು

"ಅಲ್ಲಾ ನಿಂಗಯ್ಯ ಬೆಳಗಾದ್ರೆ ಪಂಚಾಕ್ಷರಿ ಮಂತ್ರ ಪಟಸ್ತೀಯಾ ಕತ್ತಲಾದ್ರೆ

ಸಾಕು ಹೆಂಡ ಕುಡ್ದು ಬತ್ತೀಯಲ್ಲಾ. ಇದು ನಿನಗ ಹ್ಯಾಂಗ ಸರಿ ಕಾಣದೆ?

ಹಂಗ ಕುಡ್ದು ಬರಾಂವ ಮಠದ ಹೊಸ್ತಿಲ ತುಳೀಬಾರು... ಆದರೂ ನಾನು ಸುಮ್ಮ ಆದೀನಿ ಯಾಕೆ ?...

ದೀಪವಾಗಿ

ಎಂದು ಪ್ರಶ್ನಿಸುತ್ತಲೇ, ಕಂದಿಲನ್ನು ಎತ್ತಿ ಕೈಯಲ್ಲಿ ಹಿಡಿದು ಅಂಗಳದ ಕಸ ಗುಡಿಸುತ್ತ ನಡೆದಳು. ಸೈದನ ಕುಡ್ದು ದೀಪ, ಸಂಪೂರ್ಣ ಬೆಳಗತೊಡಗಿದರೂ ಒಮ್ಮೆ ಪ್ರಕಾಶಿಸುವ ಮತ್ತೊಮ್ಮೆ ನಂದುವ ಹಾಗೆ ಭಾಸವಾಗುತ್ತಿತ್ತು. ಎದೆ ಒಂದೇ ಸಮನೇ ಹೊಡೆದುಕೊಳ್ಳುತ್ತಿತ್ತು. ಕೊಡ ಜಗ್ಗುವುದನ್ನು ಗಮನಿಸಿದ ಮುದುಕಿ ಉತ್ತರಕ್ಕಾಗಿ ಕಾಯದೆ ಮಾತು ಮುಂದುವರೆಸಿದಳು. ಮತ್ತೆ ಸೈದ ಬಾವಿಗೆ ಮತ್ತೊಂದು ಕೊಡ ಬಿಡಬೇಕೋ ಬೇಡವೋ ಎನ್ನುತ್ತಲೇ ಬಿಟ್ಟ. 'ಬುಡು ಬುಡು'ಸದ್ದು ಮಾಡಿ ಮಾತನಾಡುತ್ತ ಕೊಡ ತುಂಬುತ್ತಿತ್ತು. ಮುದುಕಿ

"ಅಲ್ಲೊ ನಿನ್ನ ಹೆಂಣಿಗೆ, ಆ ಪರಿ ಹೊಡೀತಾರ?

ಸಾದ ಹೆಣ್ಣಿನ ಮ್ಯಾಲಿ ಹಂಗ ಕೈ ಎತ್ತಾರ?

ಅದೇನು ಕೈಯೋ ಕಟ್ಟಿನ ಬಡಿಗೋ?

ಎನ್ನುತ್ತಲೇ ಕಸಗುಡಿಸುತ್ತ ಬಾವಿಯ ಹತ್ತಿರ ಹತ್ತಿರಕ್ಕೆ ಬರುತ್ತಿದ್ದಳು. ಸೈದನ ಎದುಸಿರು ಹೆಚ್ಚಿತು. ಜಂಘಾಬಲವೇ ಅಡಗಿದಂತಾಗತೊಡಗಿತು. ಸೇದುವ ಕೊಡ ಮೇಲಕ್ಕೆ ಬರುತ್ತಲೇ ಇರಲಿಲ್ಲ. ಮುದುಕಿ ಮಾತ್ರ ಬೇಗ ಬೇಗ ಬಾವಿಯ ಹತ್ತಿರ ಬರುತ್ತಿದ್ದಳು. ಕೈಯಲ್ಲಿಯ ಹಗ್ಗ ಮುಗಿಯುತ್ತಲೇ ಇರಲಿಲ್ಲ. ನಡುಕ ಮತ್ತಿಷ್ಟು ಹೆಚ್ಚಿತು. ಕಾಲು ಹಿಂದಕ್ಕೆ ಮಾಡಿ ಕೈಯಿಂದ ಹಗ್ಗ ಎಳೆದು ಹಾಕುತ್ತಿದ್ದಾಗ ಕಾಲು ಸೇದಿಟ್ಟ ಕೊಡಕ್ಕೆ ತಾಕಿತು. ಹೆಬ್ಬೆರಳು ಮತ್ತಷ್ಟು, ನೋವಾಗಿ ಸೈದ 'ಹಾಂ ' ಎಂದಾಗ, ಆತನ ಎದೆಯ ದೀಪ ಉರುಳಿ ಬಿದ್ದು, ಎಣ್ಣೆ ಎಲ್ಲ ಹರಡಿ ದೀಪ 'ಪುಕು ಪುಕು' ಮಾಡತೊಡಗಿತು.

ಆಗಲೇ ಕೊಡ ಮೇಲಕ್ಕೆ ಬಂದಿತ್ತು. ಬೆರಳು ಹಿಡಿಯಬೇಕೋ ಕೊಡ ತೆಗೆಯಬೇಕೋ ಗೊತ್ತಾಗಲಿಲ್ಲ. ಅಂತಹದರಲ್ಲಿ ನೀಲವ್ವ, ಮುದುಕಿ ಕಂದಿಲನ್ನು ಹಿಡಿದುಕೊಂಡು ಮುಂದೆ ಬಂದು-

'ಏನಾಯ್ತು ನಿಂಗಯ್ಯ...?'

ಎಂದು ಪ್ರಶ್ನಿಸಿದಳು. ಕಪ್ಪ ಮೈ ದಾಂಡಿಗತನದ ಶರೀರ ನೋಡಿ

'ಯಾರು ನೀನು ?....

ನಿಂಗಯ್ಯ ಅಲ್ಲ...

ಯಾರು ...ದುಗ್ಗನ ಸೈದನ ??

ಎಂದು ಕಂದಿಲನ್ನು ಎತ್ತಿ ಮುಖ ನೋಡಲು ಪ್ರಯತ್ನಿಸಿದಳು. ಸೈದನಿಗೆ ಏನು ಮಾಡಬೇಕೆಂದು ತೋಚಲೇ ಇಲ್ಲ. ಟೂಬಿನಲ್ಲಿಯ ಗಾಳಿ ಹೋದಂತಾಗಿ ಮುದ್ದೆಯಾದ. ಕೈಯಲ್ಲಿಯ ಹಗ್ಗ ಜಾರಿತು. ಗಡಗಡಿ ಚಪ್ಪಾಳೆ ತಟ್ಟಿ ನಗುವಂತೆ ಭಾಸವಾಗಿತ್ತು. ಗಡಿಬಿಡಿಯಲ್ಲಿ ಹಗ್ಗ ಹಿಡಿಯಲು ಹೋಗಿ ಬೆದರಿದ ಜಿಂಕೆಯಾಗಿದ್ದ, ಕಾಲು ತಟ್ಟಿದ ಕೊಡ ಉರುಳಿ ನೀರು ಚೆಲ್ಲುತ್ತಿತ್ತು. ಕಾಲ ಬೆರಳಿನಿಂದ ರಕ್ತ ಮತ್ತೆ ಇಳಿಯುತ್ತಿತ್ತು. ಮುದುಕಿಯ ಕಂದಿಲು ಮುಖಕ್ಕೆ ರಾಚುತ್ತಿತ್ತು. ಇವೆಲ್ಲವುಗಳ ನಡುವೆ, ಬಾವಿಯೇ ಸ್ವರ್ಗವೆಂದು ಮಾತನಾಡಿಕೊಂಡಿದ್ದ ಕೊಡ, ನೀರಿಗೆ ಇಳಿಯುತ್ತಿರುವಾಗ ಹಿಡಿಯಲು ಹೋಗಿ, ಜೋಲಿ ತಪ್ಪಿ ಹಗ್ಗ ಹಿಡಿದುಕೊಂಡೇ ಬಾವಿಯಲ್ಲಿ ಬಿದ್ದ !

ಒಟಗುಟ್ಟುತ್ತಿದ್ದ ಮುದುಕಿಯ ಬಾಯಿ ನಿಂತಂತಾದರೂ ಕೆಂಗಣ್ಣಿನ ಬಣ್ಣ ಇಳಿಯಲಿಲ್ಲ. ಗಡಗಡಿಯ ನಾಲ್ಕು ಹಲ್ಲು ಸಡಿಲಲಿಲ್ಲ. ಬಾವಿಯನ್ನೊಮ್ಮೆ ಇಣುಕಿ

ದಡದಲ್ಲಿರುವ ಆತನ ಕೊಡಕ್ಕೊಮ್ಮೆ ದಿಟ್ಟಿಸಿ ನೋಡಿ, ಕೈಯಲ್ಲಿದ್ದ ಪೊರಕೆಯನ್ನು ಕೊಡದಲ್ಲಿ ತುರುಕಿದಳು. ಅಷ್ಟರಲ್ಲಿ ನಿಂಗಯ್ಯ ನೀರಿಗಾಗಿ ಮಠಕ್ಕೆ

ಬಂದ.

ಸೈದ ಅಪರಾಧಿಯಂತೆ ನಿಂತಿದ್ದ. ಮಠದ ಎದುರು ಊರ ಪ್ರಮುಖರೆಲ್ಲ ಸೇರಿ ನ್ಯಾಯ ಮಾಡಿ ಅದಕ್ಕೊಂದು ಪರಿಹಾರ ಕಂಡುಕೊಂಡರು.

“ಏತದಿಂದ ಬಾವಿಯ ನೀರು ತೆಗೆದು ಶುದ್ಧ ಮಾಡುವುದು.

ಅದರ ಖರ್ಚು ಸೈದ್ಯಾನೇ ಭರಿಸಬೇಕು'

ಎನ್ನುವ ನಿರ್ಣಯ ಹೊರ ಬಂದಿತ್ತು

ಸೈದ ಬಾಗೋಡಿ ಪರಸಪ್ಪನ ಮಗ, ಪರಸಪ್ಪ ಮಠದಲ್ಲಿಯ ದನಗಳನ್ನು ಕಾಯುವ, ಹೆಂಡಿ -ಕಸದ ಕೆಲಸ ಮಾಡುತ್ತಿದ್ದ. ವರ್ಷಕ್ಕೊಮ್ಮೆ ಆಯ ಪಡೆಯುತ್ತಿದ್ದ. ಮಠಕ್ಕಾಗಿಯೇ ತನ್ನ ವಯಸ್ಸು ಸವೆಸಿದ್ದ.

'ಹಣ ಅವನತ್ರ ಇಲ್ಲಂದ್ರ

ಮನ್ಯಾನ ದನ-ಕರು ಮಾರಿ ಕೊಡ್ಲಿ....'



ಎನ್ನುವ ಮಾತು ಹೊರಬಿತ್ತಾದರೂ, ಈ ಸಲಹೆಗಳಿಗೆ ಮಠದ ಹಿರಿಯರಾರೂ ಒಪ್ಪಲಿಲ್ಲ.

'ಇಂಥವರಿಂದ ದಂಡ ತಗೊಂಡು ಮಠದ ಬಾವಿ ಶುದ್ಧ ಮಾಡುದಂದ್ರ

ಕಾಲ ಮುರಕೊಂಡ ಆಕಳಾನ

ಕಸಾಯಿ ಖಾನಿಗೆ ಕೊಟ್ಟಂಗ....'

ಎಂದು ನಿರಾಕರಿಸಿದರು. ಕೊನೆಗೆ ಬಂದ ತೀರ್ಮಾನದಂತೆ ನಾಯಿಂದರ ಯಂಕನಿಗೆ ಕರೆಯಿಸಿ, ಸೈದನ ಮೀಸೆ ತಲೆ ಬೋಳಿಸಿದರು. ಪರಸಪ್ಪ ಶರಗೊಡ್ಡಿ ಬೇಡಿಕೊಂಡು ಹೇಳಿದ.

ಯಪ್ಪಾ....ತಂದೇ

ದುಡ್ಡಿನ ದಂಡ ಕಟ್ಟಿ ಮಾನ ಕಳಿಬ್ಯಾಡ್ರಿ...

ಮಾನ ಕಳಿಬ್ಯಾಡಿಯಪ್ಪಾ... ಕಳಿಬ್ಯಾಡ್ರಿ...

ಎಂದು ಬೇಡಿಕೊಂಡರೂ ಪ್ರಯೋಜನವಾಗಲಿಲ್ಲ. ಕೊನೆಗೆ ದೈವಕ್ಕೆ ಒಂದು ತೂತಿನ ದುಡ್ಡು ದಂಡವನ್ನಾಗಿ ಕೊಟ್ಟು ಕೈ ಮುಗಿದ.

ಆ ದುಡ್ಡನ್ನು ಮಠದ ಹೆಬ್ಬಾಗಿಲ ಹೊಸ್ತಿಲಿಗೆ ಮೊಳೆಯಿಟ್ಟು, ಆತನ ಅಪರಾಧ ತಲೆ ತಲಾಂತರ ಸಾರಿ ಹೇಳುವಂತೆ ಬಡಿದರು. ಈಗಲೂ ಆ ದುಡ್ಡ ಮುದ್ದೇನೂರಿನ ಮಠದ ಹೊಸ್ತಿಲಲ್ಲಿ ಐತಿಹಾಸಿಕ ದಾಖಲೆಯಾಗಿ ಉಳಿದಿದೆ. ಆದರೆ ಬಾವಿಯಲ್ಲಿ ಸತ್ತ ಹಂದಿಯ ಅವಶೇಷ ಸಿಗುವುದು ಕಷ್ಟ!.

## ೫. ಮೂಗನ ಪಾಡು

**• ಮೂಡ್ನಾಕೂಡು ಚಿನ್ನಸ್ವಾಮಿ**

ರಾಚಮ್ಮನ ಏಕೈಕ ಪುತ್ರ ಬಸವ. ಮಾತು ಬಾರದ ಬಸವ, ಮೂಗಬಸವನಾಗಿ ನಂತರ ಕೇವಲ 'ಮೂಗ'ನಾಗಿ ಎಲ್ಲರಿಂದಲೂ ಕರೆಸಿಕೊಳ್ಳುತ್ತಿದ್ದ. ತಾಯಿಯ ಅಕ್ಕರೆಯ ಬಾಯಿಯು ಮಾತ್ರ ಒಮ್ಮೊಮ್ಮೆ 'ಬಸವ' ಎಂದು ಕೂಗಿದಾಗ ಇವನ ಕಣ್ಣರಳುತ್ತಿತ್ತು.

ಮಾತು ಬಾರದ ಮೂಗ ತನ್ನ ಅಳಲನ್ನು ಮುಖಭಾವದಿಂದಲ್ಲೇ ತೋಡಿಕೊಳ್ಳಬಲ್ಲವನಾಗಿದ್ದ. ತನ್ನ ಸುತ್ತಲಿನವರು ರೇಗಿಸುವುದು ಹಾಗೂ ಚುಡಾಯಿಸುವುದನ್ನು ಬಿಟ್ಟರೆ ಬೇರೆಯವರ ಗಂಭೀರ ಪ್ರತಿಕ್ರಿಯೆ ಅವನಿಗೆ ಪರಿಚಯವಿರಲಿಲ್ಲ. ತನ್ನ ಅಪ್ಪ ಸತ್ತ ಮಾರನೆಯ ದಿನದಿಂದಲೇ ಪಿತ್ರಾರ್ಜಿತವೆನ್ನುವಂತೆ ಒಡೆಯರ ನೇಗಿಲಿಗೆ ಹೆಗಲುಕೊಟ್ಟಿದ್ದ. ಅವನ ಅಪ್ಪನ ಅಪ್ಪನೂ ಇದೇ ಹಟ್ಟಿಯಲ್ಲಿ ಜೀತ ಮಾಡುತ್ತಿದ್ದ ಎಂಬುದು ಮೂಗ ಬಸವನಿಗೂ ಮನವರಿಕೆಯಾಗಿತ್ತು. ಆದ್ದರಿಂದಲೇ ಅಪ್ಪನ ಆಸ್ತಿಯನ್ನು ನಿಭಾಯಿಸುವಂತೆ ನಿಷ್ಠೆ, ಜವಾಬ್ದಾರಿಗಳಿಂದಲೇ ಒಡೆಯರ ಹಟ್ಟಿಯಲ್ಲಿ ಒಕ್ಕಲುತನ ಒಪ್ಪವಾಗಿರುವಂತೆ ನೋಡಿಕೊಳ್ಳುತ್ತಿದ್ದ. ಚಲುವೇಗೌಡರಿಗೆ ಇವನು ತೊತ್ತಿನ ಮಗನ ಮಗ.

ರಾಚಮ್ಮನಿಗೆ ಬಸವ ಕರುಳಾದರೆ, ಮೂಗ ಬಸವನಿಗೆ ಕಾಳ ಕೊರಳು. ಮಜಬೂತಾಗಿ ಬೆಳೆದು ನಿಂತಿದ್ದ ಮೂಗನ ಆಜ್ಞಾಪಾಲಕನಾಗಿದ್ದ ಕಾಳ ಕಣ್ಣು ಕುಕ್ಕುವ ಹೋರಿ, ಕಾಳನಿಗೆ ಜೋಡಿ ಹುಡುಕಲು ಮೂಗ ತನ್ನ ದೊಡ್ಡಪ್ಪನ ಮಗಳಿಗೆ ಗಂಡು ಹುಡುಕಿದ್ದಕ್ಕಿಂತಲೂ ಹೆಚ್ಚಾಗಿ ಹೆಣಗಿದ್ದ. ಅವನು ಸುತ್ತಾಡದ ಸಂತೆಯಿರಲಿಲ್ಲ. ತಿರುಗದ ಊರಿರಲ್ಲಿಲ್ಲ. ಕೊನೆಗೂ ಆ ಬೆಳ್ಳಿ ಹೋರಿ ಜತೆಯಾಗಿ ಬಂದಿತ್ತು.

ಕಾಳ ತುಡುಗು ಮಾಡುವುದನ್ನು ಜನ ನೋಡಿ ಆನಂದಿಸುತ್ತಿದ್ದರು. ಬಾಲವನ್ನು ಮೇಲೆ ಎತ್ತಿ ಕೊಂಬು ಕೆಳಗೆ ಮಾಡಿ ಮೂಗನನ್ನು ತಿವಿದೇಬಿಡುವಂತೆ ಬಂದು `ಮೂತಿಗೆ ಮೂತಿ ಕೊಟ್ಟು ಮತ್ತೆ ಚಂಗನೆ ನೆಗೆದು ಮೂಗನ ಕೈಯಿಂದ ತಪ್ಪಿಸಿಕೊಳ್ಳುತ್ತಿತ್ತು. ಊರೊಳಗಿನ ದಾರಿಯಲ್ಲಿ ಕಾಳನನ್ನು ಕರೆತರುವುದೆಂದರೆ ಮೂಗನಿಗೆ ಕಷ್ಟವೋ ಕಷ್ಟ ಕಾಳ ಒಮ್ಮೆ ದುರುಗುಟ್ಟಿದರೆ ಸಾಕು; ಊರಿನ ಪೋರಿಯರ ಸೊಂಟದ ಮೇಲಿನ ತುಂಬಿದ ಕೊಡಗಳು ದೊಪ್ಪನೆ ಕೆಳಗೆ ಬೀಳುತ್ತಿದ್ದವು. ಮಣ್ಣಿನ ಹರಿವೆಗಳಾದರೆ ಒಡೆದು ಹೋಳಾಗುತ್ತಿದ್ದವು. ಅವರ ಹಿಡಿಶಾಪ ಮೂಗನಿಗೆ ಯಾವಾಗಲೂ ಇದ್ದೆದ್ದೆ. ಕಾಳನಿಗಾಗಿ ಅದನ್ನೆಲ್ಲ ಸಹಿಸುತ್ತಿದ್ದ. ಮಕ್ಕಳು ಮರಿ ಕಂಡರೆ ಕಾಳನ ಮೂಗುದಾರ ಹಿಡಿದು ನಡೆಯುತ್ತಿದ್ದ ಮೂಗ,

ಮೂರು ದಿವಸಗಳಿಂದ ಮೂಗ ಮಂಕಾಗಿದ್ದ. ಇಂದು ಇನ್ನೂ ಆ ದುಗುಡ ಹೆಚ್ಚಾದಂತಿತ್ತು. ಕಾಳ ನೀರು ಕುಡಿದು ಮೂರು ದಿನವಾಗಿತ್ತು. ಕಲಗಚ್ಚಿಗೆ ಎಳೆದು ತಂದರೂ ಬಾಯಿಯನ್ನು ಮಾತ್ರ ಬಿಚ್ಚುತ್ತಿರಲಿಲ್ಲ. ಕಣ್ಣಲ್ಲಿ ಜೀರು ನೀರು ಸುರಿಯುತ್ತಲೇ ಇತ್ತು. ಇತರೆ ರಾಸುಗಳೊಂದಿಗೆ ಮೇಯುವಾಗ ಗತ್ತಿನಿಂದಿರುತ್ತಿದ್ದ ಈ ಹೋರಿ ಇದ್ದಕ್ಕಿದ್ದಂತೆಯೇ ಹೀಗೇಕಾಯಿತು ಎಂಬ ಚಿಂತೆ ಮೂಗನನ್ನು ಕಾಡತೊಡಗಿತು. ಇದು ಮೇವಿಗೂ ಬಾಯಿ ಹಾಕುತ್ತಿರಲಿಲ್ಲ ಎಂದು ಅಂದೇ ತಿಳಿದದ್ದು. ಇಂದು ಹಟ್ಟಿಗೆ ಹಿಂದಿರುಗುತ್ತಿರುವಾಗ ಎರಡು ಮೂರು ಬಾರಿ ಮುಗ್ಗರಿಸಿತ್ತು ಕೂಡ. ಹೋರಿಯ ಮೈಮೇಲಿನ ಬರೆಗಳು ಮೂಗನ ಕೋಪಕ್ಕೆ ಮೂಕ ಸಾಕ್ಷಿಯಂತಿದ್ದವು. ನಮ್ಮ ಒಡೆಯರೇನಾದರೂ ನೋಡಿದರೆ ಅದೇ ಬಾರು ಕೋಲಿನ ತಿರುಗೇಟು ಗ್ಯಾರಂಟಿ ಎಂಬುದೂ ಮೂಗನಿಗೆ ಗೊತ್ತಿತ್ತು. ಹೋರಿಗೆ ಹಿಡಿಮೇವು ತಿನ್ನಿಸಲು ಮಾಡಿದ ಮೂಗನ ಕೊನೆಯ ಪ್ರಯತ್ನ ಅದಾಗಿತ್ತು.

ಚಲುವೇಗೌಡರ ಹಟ್ಟಿಯ ಇತರ ಮೂಕ ಪ್ರಾಣಿಗಳ ಜತೆ ಮೂಗನೂ ಒಂದಾಗಿ ಬಹಳ ವರ್ಷಗಳೇ ಕಳೆದಿದ್ದವು. ಇವನ ದುಃಖ ಸಂತೋಷಗಳಿಗೆ ಹಸು- ಕರುಗಳು ಆಡು-ಕುರಿಗಳು ಪ್ರತಿಸ್ಪಂದಿಸುವುದನ್ನು ಅರಿತಿದ್ದವು. ಅದೆಷ್ಟೋ ಬಾರಿ ಬಯಲಲ್ಲಿ ಮೇಯಿಸುವಾಗ ಮಳೆ ಬಂದುಬಿಟ್ಟರೆ ಎಮ್ಮೆಯ ಕಾಲುಗಳ ಮಧ್ಯೆ ಕುಕ್ಕರಗಾಲೂರಿ ಕೂತುಬಿಡುತ್ತಿದ್ದ. ಅನೇಕ ಸಲ ಅದರ ಮೇಲೆ ಮಲಗಿ ನಿದ್ರಿಸುತ್ತಾ ಮನೆ ಸೇರಿದ್ದೂ ಉಂಟು. ಇವನಿಗೆ ತುಂಬಾ ಬೇಸರವಾದಾಗ ಒಂದು ಕುರಿಮರಿಯನ್ನು ಹಿಡಿದು ಬಾಯಿ ಅಗಲಿಸಿ ಹಲ್ಲುಗಳನ್ನು ಎಣಿಸುತ್ತಿದ್ದ. ಓಡಾಡಿಸುವುದಕ್ಕೆ ಆಡುಗಳಿದ್ದವು. ಹಟ್ಟಿ ಸೇರಿದ ಕೂಡಲೇ ರಾಸುಗಳಿಗೆ ನೀರು ಕುಡಿಸಿ ಕಲಗಚ್ಚಿಗೆ ಹಿಂಡಿ ಕಲಸಿ ಹಾಕಿ, ಚರುಣಿಗೆಯ ಒಳಗೆ ಮತ್ತಷ್ಟು ಹುಲ್ಲು ಬಿಡಿಸಿ ಹಾಕಿ, ಕುರಿಗಳನ್ನು ಹುಂಡಿಗೆ ದಬ್ಬಿ, ಹಿತ್ತಲಲ್ಲಿ ಕೈಕಾಲು ಮುಖ ತೊಳೆದು ಒಡತಿಯ ಎದುರಿಗೆ ನಮ್ರನಾಗಿ ನಿಂತು, 'ಹೋಗ್ ಬತ್ತಿನವ್ವ' ಎನ್ನುತ್ತಿದ್ದ. ಒಡತಿ 'ಇರು' ಎಂದು ಸನ್ನೆ ಮಾಡಿದರೆ ಇವನ ಹೆಗಲ ಮೇಲಿನ ಚೌಕ ಅಗಲವಾಗುತ್ತಿತ್ತು. ಮೂಗನ ಖುಷಿಗೆ ಪಾರವೇ ಇರುತ್ತಿರಲಿಲ್ಲ.

ಮೂಗ ಇಂದು ಅಷ್ಟೇ ಯಾಂತ್ರಿಕವಾಗಿ ಮನೆ ಸೇರುವಂತಿರಲಿಲ್ಲ. ಕಾಳನ ಮೈ ತಡವುತ್ತಾ ಮುಖ ಸವರುತ್ತಾ ನಿಂತುಬಿಟ್ಟಿದ್ದ. ಇವನ ಕಣ್ಣಿನ ಸುತ್ತಲೂ ನೀರಿನ ಝರಿಗಳು ಜಾಗೃತವಾಗಿದ್ದವು. ಕುರುಡನ ಕೈಗೋಲನ್ನು ಮತ್ತೊಬ್ಬ ಕುರುಡ ಹಿಡಿದು ನಡೆಸಿದಂತಿತ್ತು ಇವನ ಸ್ಥಿತಿ. ಬೇರೆ ಯಾವುದೇ ಪಂಚಾಯಿತಿಯ ಯಜಮಾನಿಕೆಯಿಂದ ಆಗತಾನೇ ಹಿಂತಿರುಗಿದ ಗೌಡರು ಮೂಗನನ್ನು ನೋಡಿ ಸ್ವಲ್ಪ ವಿಚಲಿತರಾದರು.

"ಯಾಕ್ಲ ಗರಬಡಿದ್ದಂಗ್ ನಿಂತಿದ್ದೀಯಾ" ಗೌಡರ ಗಡಸು ಧ್ವನಿ.

"ಆ್ಯ. ಊ..." ತಲೆತಗ್ಗಿಸಿದ ಮೂಗ, ಬೈಯುತ್ತಲೇ ಹತ್ತಿರ ಬಂದರು ಗೌಡರು. ಮಂಕಾಗಿ, ಕಣ್ಣಲ್ಲಿ ನಿರು ಸುರಿಸುತ್ತ ನಿಂತಿದ್ದ ಹೋರಿಯ ಕಂಡು."ಎಲಾ ಬಡ್ಡೈದ್ನೆ, ಎಷ್ಟೋ ದಿನದಿಂದ ಇದು ಹಿಂಗೈತ್ಲ . ಹೇಳ್ತಾರ್ದೇನ್ಲ " ಎಂದು ಹಳಹಳಿಸಿದರು.

"ಒಳ್ಳೆಮೂಗ್ ಬಡ್ಡಿದ್ ಕಟ್ಕಂಡ್ನಲ್ಲ ನಾನು" ಮತ್ತೊಮ್ಮೆ ಮೂಗನತ್ತ ದುರುಗುಟ್ಟಿದರು. ಮೂಗನಿಗೆ ಪ್ರಾಣವೇ ಉಡುಗಿದಂತಾಯಿತು. ಅಳುವುದಕ್ಕೆ ಶುರು ಮಾಡಿದ.

ಕಾಳನ ಓರಗೆಯ ಜತೆ ಹೋರಿ ಬೆಳ್ಳಿ ಬೆದರಿ ನಿಂತಿತ್ತು. ಗೌಡರು ಒಮ್ಮೆ ಅದರತ್ತ ನೋಡಿ ನಿಟ್ಟುಸಿರುಬಿಟ್ಟರು. ಬರುವ ದೀಪಾವಳಿ ಜಾತ್ರೆಗೆ ಎಡಿಯೂರು ಸಂತೆಗೆ ಹೊಡೆಯಬೇಕು ಎಂದು ಅವರ ತೀರ್ಮಾನವಾಗಿತ್ತು. ಅಷ್ಟುಹೊತ್ತಿಗೆ ಅವು ಗಡದ್ದಾಗಿ ಬೆಳೆದು ನಿಂತಿರುತ್ತವೆ ಎಂದು ಅವರ ಲಕ್ಕಾಚಾರ, ಕನಿಷ್ಟವೆಂದರೂ ಮೂರುವರೆ ಸಾವಿರಕ್ಕೆ ಹೋಗುತ್ತವೆಂದು; ಎರಡು ಸಾವಿರದಲ್ಲಿ ಒಂದು ಎಳೆ ಜೋಡಿಯನ್ನು ಕೊಂಡು, ಉಳಿದ ಒಂದೂವರೆ ಸಾವಿರ ಲಾಭದತ್ತ ಕಣ್ಣು ಹಾಕಿದ್ದರು ಗೌಡರು. ಪ್ರತಿ ದೀಪಾವಳಿಗೂ, ಮೂಗನಿಗೆ ಒಂದು ಜೊತೆ ಚಡ್ಡಿಚೊಗೆಯನ್ನು ತೆಗೆಯಲು ಅವರು ಮರೆಯುತ್ತಿರಲಿಲ್ಲ. ಮೂಗನ ಕೈಯಲ್ಲಿ ದನಕರುಗಳ ಮೈ ಹತ್ತುವುದೆಂದು ಅವರಿಗೆ ತಿಳಿದಿತ್ತು. ಶನಿವಾರ ಸಂತೆಗೆ ಕುರಿ ಹೊಡೆಯುವಾಗ ಪ್ರತಿಬಾರಿಯೂ ಹುಂಡಿಯಿಂದ ಮೂಗನೇ ಕುರಿಯನ್ನು ಆರಿಸುತ್ತಿದ್ದ. ಮೂಗ ತೊಳ್ಳೆಯನ್ನು ಹಿಡಿದು ನೋಡುವುದರಲ್ಲಿ ನಿಸ್ಸಿಮ. ಒಂದೆರಡು ಬಾರಿ ಸಂತೆಗೆ ಹೋಗಿ ಆ ಕಸಾಯಿ ಸಾಬರು ಕುರಿಗಳನ್ನು ಪರೀಕ್ಷಿಸುವ ಎಲ್ಲ ವಿಧಗಳನ್ನು ನೋಡಿದ್ದರಿಂದ ಅವರ ನಿರೀಕ್ಷೆಯಂತೆ ಕುರಿಯನ್ನು ಆರಿಸುತ್ತಿದ್ದ. ಮೂಗನಿಲ್ಲದೆ ಯಾವ ಕುರಿಯೂ ಸಂತೆಯ ಕಡೆಗೆ ಮುಖ ಮಾಡುವಂತೆ ಇರಲಿಲ್ಲ. ಮೂಗನನ್ನು ಅನುಮಾನಿಸುವಂತೆಯೇ ಇರಲಿಲ್ಲವಾದ್ದರಿಂದ ಗೌಡರು ದನ-ಕರುಗಳ ವಿಚಾರದಲ್ಲಿ ನಿಶ್ಚಿಂತೆಯಿಂದಿದ್ದರು. ಹೋರಿಗೆ ರೋಗ ತಗುಲಿರಬಹುದೆಂದು, ಗೌಡರಿಗೆ ಅನ್ನಿಸಿತು. "ಸುತ್ತಲ ಹಳ್ಳಿಗಳಲ್ಲಿ ಏನಾದರೂ ದನಕರ ಸತ್ತವೇನ್ತಾ" ಪಕ್ಕದಲ್ಲಿ ನಿಂತಿದ್ದ ಭಾಮೈದ ಶಿವೇಗೌಡನ್ನ ಕೇಳಿದರು.

"ಸುದ್ದಿಯಾದಂಗಿಲ್ಲ ಭಾವ. ಉತ್ತರ ಬಂತು"

"ಸೈಕಲ್ಲು ತೆಗಹೋಗು, ಆ ಪಂಡಿತನ್ನ ಕರಂಬಾ" ಎನ್ನುತ್ತಿದ್ದಂತೆ ಶಿವೇಗೌಡ ಸೈಕಲ್ಲು ಹಿಡಿದು ಹೊರಟಿದ್ದ.

ಗೌಡರಿಗೆ ಆತಂಕ ಹೆಚ್ಚುತ್ತಾ ಹೋಯಿತು. ಅವರ ಪತ್ನಿ ಚೆನ್ನಮ್ಮನೂ ಕಾಳನ ಆರೈಕೆಗೆ ಸಹಾಯಕಳಾಗಿ ಬಂದಳು. ಅಸಹಾಯಕತೆಯ ಪ್ರತಿರೂಪದಂತಿದ್ದ ಮೂಗನನ್ನ ನೋಡಿ ಚನ್ನಮ್ಮನಿಗೆ ಅನುಕಂಪ ಉಂಟಾಗುತ್ತಿತ್ತು. ಮಂಪರಿನಲ್ಲಿದ್ದಂತೆ ಕಾಣುತ್ತಿದ್ದ ಹೋರಿಯ ಬಾಯೊಳಗಿಂದ ಈಗ ನೊರೆಯಾದ ಜೊಲ್ಲು ಸುರಿಯಲು ಪ್ರಾರಂಭವಾಯಿತು.

"ನಮಸ್ಕಾರ ಗೌಡ್ರೆ" ಪಂಡಿತರು ಪ್ರತ್ಯಕ್ಷರಾದರು.

"ಹೋ, ನಾಮಸ್ಕಾರ, ಬನ್ನಿ ಪಂಡಿತ್ರೆ ಬನ್ನಿ, ಈ ಮೂಗ್ ಪ್ರಾಣಿಯ ಪ್ರಾಣವನ್ನು ಉಳ್ಸಿ *

"ಶಿವ ಇದಾನೆ. ತಾಳ್ಕೆ ವಹಿಸ್ಕಳಿ, ಮೊದ್ಲು ಏನು ಅಂತ ತಿಳ್ಕೊಳಣ" ಪಂಡಿತರಿಂದ ಸಾಂತ್ವನದ ಮಾತುಗಳು ಬಂದವು.

"ಅದೂ ಪ್ರಾಣಿ, ಈ ಮೂಗ್ ಬಡ್ಡೆತ್ತದೂ ಒಂದ್ ಪ್ರಾಣಿ, ನಮ್ಗೆ ವಿಷಯ



ಗೊತ್ತಾಗ್ನೆಲ್ಲ ಬುದ್ಧಿ, ಏನಾದ್ರೂ ಮಾಡಿ" ಮೂಗನತ್ತ ದಿಟ್ಟಿಸುತ್ತಾ ಅಂದರು ಗೌಡರು. ದನ-ಜನವೆನ್ನದ ಔಷಧಿ ಸಿದ್ಧಪಡಿಸುತ್ತಾ ಇದ್ದ ಆ ಪಂಡಿತರು ಹೋರಿಯ ಬಾಯಿ ತೆರೆದು ನೋಡಿದರು. ಆದರೆ ಹೆಕ್ಕತ್ತಿನ ಹಿಂಭಾಗವನ್ನು ಅಮುಕಿದರು. ಏನೋ ಹೊಳೆಯಿತೆಂದು ಯಾರಿಗೂ ಹೇಳಲಿಲ್ಲ. ತಮ್ಮ ಕೈ ಚೀಲವನ್ನು ಬಿಡಿಸಿ ಅದರೊಳಗಿದ್ದ ಐದಾರು ವಿಧದ ಸೊಪ್ಪನ್ನು ಮೂಗನ ಕೈಗಿತ್ತು. ಚೆನ್ನಾಗಿ ಅರೆದು ರಸ ತೆಗ ಹೋಗು. ಅಂದರು. ಬೆಪ್ಪಾದ ಕಣ್ಣುಗಳನ್ನು ಬಿಡುತ್ತಿದ್ದ ಮೂಗನ ಕೈಯಿಂದ ಸೊಪ್ಪಿನ ಗಂಟುಗಳನ್ನು ಗೌಡತಿ ಕಸಿದುಕೊಂಡು ತಾನೇ ಅರೆಯಲು ಮುಂದಾದಳು.

ಹಸಿರುಸೊಪ್ಪುಗಳ ರಸದ ಜತೆಗೆ ಸ್ವಲ್ಪ ನೀರನ್ನು ಬೆರೆಸಿ ಕೊಟ್ಟೆಯೊಳಗಡೆ ತುಂಬಿದರು. ಗೌಡರು ಹೋರಿಯ ದವಡೆಯನ್ನು ಎಡಗೈಯಲ್ಲಿ ಹಿಡಿದು ಬಲಗೈಯಲ್ಲಿ ಕೊಟ್ಟೆಯನ್ನು ಬಾಯೊಳಗೆ ತೂರಿಸಲು ಪ್ರಯತ್ನಿಸುತ್ತಿದ್ದರೆ ಮೂಗ ಮುಂಬಾಯನ್ನು ಮೇಲೆತ್ತುತ್ತಿದ್ದ. ಆಗಲೇ ನಿತ್ರಾಣವಾಗಿದ್ದ ಕಾಳನಿಗೆ ತನಗೇನಾಗುತ್ತಿದೆ ಎಂಬುದು ತಿಳಿಯದೆ ಬೆಚ್ಚುತ್ತಿತ್ತು. ಕುಡಿಸಿದ ರಸವೆಲ್ಲವೂ ಕಟಬಾಯಿಯಿಂದ ಹೊರಗೆ ಬರುತ್ತಾ ಇದ್ದುದನ್ನು ಗಮನಿಸಿದ ಗೌಡರು ಮತ್ತೊಂದು ನಿಟ್ಟುಸಿರುಬಿಟ್ಟು ಔಷಧಿ ಕುಡಿಸುವುದನ್ನು ನಿಲ್ಲಿಸಿಬಿಟ್ಟರು. ಅಷ್ಟರಲ್ಲಾಗಲೇ ಚೆನ್ನಮ್ಮ ನಂಜುಂಡೇಶ್ವರನಿಗೆ ಹರಕೆ ಹೊತ್ತು, ಅರಿಶಿನ ಸವರಿದ ಬಟ್ಟೆಯೊಳಗೆ ನಾಲ್ಕಾಣೆ ಪಾವಲಿಯನ್ನು ಕಟ್ಟಿ ತೊಲೆಗೆ ಬಿಗಿದಿದ್ದಳು. ಹಟ್ಟಿಯ ಒಳಗಡೆ ಮೌನ ಆವರಿಸಿತು.

"ಬಹಳ ತಡವಾಗಿ ಹೇಳಿಕಳಿಸಿದ್ರಲ್ಲಾ...." ರಾಗ ಎಳೆದರು ಪಂಡಿತರು. 'ಶಿವನಿಚ್ಚೆ' ಎನ್ನಾಡಾಕಾಯಿತದೆ.... ನೀವಿನ್ನು ಹೊರಡಬಹುದು ಪಂಡಿತ್ರೆ ಎಂದು ಕೈಯಲ್ಲಿ ಐದರ ಎರಡು ನೋಟುಗಳನ್ನು ತುರುಕಿದರು. ದುಃಖದೊಡನೆ ಕತ್ತಲೂ ಏರುತ್ತಿತ್ತು. ಮಿಕ್ಕ ರಾಸುಗಳ ಗೆಜ್ಜೆನಾದ ಗೊರಸಿನ ಧ್ವನಿ ಕರುಗಳ ಕೆನೆದಾಟ ಮೌನದಾಳದ ತಿಳಿನೀರಿನಲ್ಲಿ ಪ್ರತಿಫಲಿಸುತ್ತಿದ್ದವು.

ಅಷ್ಟರಲ್ಲಿ ಮೂಗನ ಅವ್ವ ರಾಚಮ್ಮ ಮಗನನ್ನು ಹುಡುಕುತ್ತಾ ಬಂದು ಗೌಡರ ಹಟ್ಟಿಯೊಳಗೊಮ್ಮೆ ಇಣುಕಿ ನೋಡಿ ಹೋರಿಯ ಸ್ಥಿತಿಯನ್ನರಿತು ದಿಗಿಲಿನಿಂದ ಹಿಂದಿರುಗಿದ್ದಳು. ಕೊಟ್ಟಿಗೆಯಲ್ಲಿ ಬಿದ್ದುಕೊಂಡಿದ್ದ ಕಾಳನ ಸುತ್ತಲೂ ನಿಂತಿದ್ದವರು ಅಲ್ಲೇ ಕುಳಿತುಕೊಂಡರು. ಗೌಡರು ಸಹ. ಮೂಗ ಕಾಳನ ಮೈದಡವುದನ್ನು ನಿಲ್ಲಿಸಲೇ ಇಲ್ಲ. ಹಸಿವು

ಅಂದು ಹಟ್ಟಿಯೊಳಗೆ ಪ್ರವೇಶ ಪಡೆಯಲು ಅಸಾಧ್ಯವಾಯಿತು. ಲಾಂಟೀನಿನ ಮಂದ ಬೆಳಕಿನಲ್ಲಿ ಎಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡುತ್ತ ಕಂಗಾಲಾಗಿ ಕುಳಿತಿದ್ದರು. ಆಗ ನಡುನೆತ್ತಿಯ ಮೇಲೆ ಕಾಣಿಸುತ್ತಿದ್ದ ಚಂದ್ರ ಹದಿನಾರು ಕಂಬದ ಹಟ್ಟಿಯೊಳಗೆ ತನ್ನ ಕಿರಣಗಳನ್ನು ತೂರಿ ಕೊಟ್ಟಿಗೆಯನ್ನು ಬೆಳಕು ಮಾಡಿದ್ದ. ಆಕಾಶದಲ್ಲಿ ತೇಲುವ ಕರಿಮೋಡಗಳೆಲ್ಲವೂ ಮೂಗನಿಗೆ ಕಾಳನಂತೆ ಕಾಣಿಸಿಕೊಳ್ಳುತ್ತಿದ್ದವು. ಮಧ್ಯರಾತ್ರಿ ಸಮೀಪಿಸಿರಬಹುದು. ಕಾಳನ ಬಾಗಿದ ಗೋಣು ಕೊಟ್ಟಿಗೆಯ ನೆಲವನ್ನು ತಬ್ಬಿತು. ಮೂಗನ ಪಾಡನ್ನು ನೋಡುವಂತೆ ಇರಲಿಲ್ಲ.



"ಬೆಳಗಾದ್ಮ್ಯಾಲೆ ಹೊಲಗೇರಿಗೆ ಹೇಳಿ ಕಳ್ಳರಲಾ" ಎನ್ನುತ್ತಾ ಹೆಗಲ ಮೇಲಿದ್ದ ಟವಲನ್ನು ಕೊಡವಿ ಗೌಡರು ತಮ್ಮ ಮಲಗುವ ಕೋಣೆಯ ತಾಳ ಜಡಿದಿದ್ದರು. ಮೂಗ ತನ್ನ ಅಳುವನ್ನು ಅದುಮಿಟ್ಟುಕೊಂಡು ಬಿಕ್ಕುತ್ತಿದ್ದನು. ಅವನ ಕಣ್ಣೀರಿಗೆ ಭಾಷೆಯಿರಲಿಲ್ಲ. ಭಾವನೆಯ ಮಹಾಪೂರವಿತ್ತು. ಸಂಕ್ರಾಂತಿಯ ದಿನದಂದು ತಾನೇ ಇದರ ಮೈತಿಕ್ಕಿ ತೊಳೆದು ಕೊಂಬಿಗೆ ಬಣ್ಣ ಹಚ್ಚಿದ್ದನ್ನು ನೆನೆಸಿಕೊಂಡು ಕೊಂಬಿಗೆ ಒಮ್ಮೆ ಮುತ್ತಿಟ್ಟನು. ಎಲ್ಲರೂ ತಮ್ಮ ತಮ್ಮ ಬಿಡಾರ ಸೇರಿದರು. ಕಾಳನನ್ನು ಒರಗಿ ಕೂತ ಮೂಗ ಒಬ್ಬನೇ ಬೆಳಗು ಮಾಡಿದ.

ದೇವರ ಮುಂದೆ ತಮಟೆಯವನು ಸಾಗುವಂತೆ ಸೂರ್ಯದೇವರ ಮುಂಚೆ ಮಾರನೆಯ ದಿನವನ್ನು ಸಾರುವ ಕಾಗೆಗಳು ಹೇಗೋ ಹೊಲಗೇರಿಗೆ ಹೋರಿ ಸತ್ತ ಸುದ್ದಿಯನ್ನು ಮುಟ್ಟಿಸಿದ್ದವು. ಸತ್ತ ಸಾವಿಗೆ ಗೌಡರ ಹಟ್ಟಿಯನ್ನು ಸುತ್ತುತ್ತಿದ್ದ ಕಾಗೆಗಳು ಹೊಲಗೇರಿಯತ್ತ ಹಾರುವಾಗ ಬಿಳಿಯ ಪಾರಿವಾಳಗಳಾಗುತ್ತಿದ್ದವು. ಚಾವಡಿಯ ಕಟ್ಟೆ ಜಗುಲಿಗಳ ಮೇಲೆ ತಮ್ಮನ್ನು ತಾವೇ ಅಮಲಿನಲ್ಲಿ ಎಸೆದುಕೊಂಡಿದ್ದ ಪಡ್ಡೆ ಹುಡುಗರಿಗೆ ಅಂದು ಮಬ್ಬಿನಲ್ಲಿ ಕನಸು ಬಿದ್ದಂತೆ ಭಾಸವಾಗುತ್ತಿತ್ತು. ಮಲಗಿದ್ದಲ್ಲೇ ಮುಸುಮುಸು ಗುಸುಗುಸು ಮಾಡುತ್ತಿದ್ದರು. ಒಬ್ಬನ ವಿಷ ಇನ್ನೊಬ್ಬನ ಮೃಷ್ಟಾನ್ನವಾಗಬಹುದು' ಎಂಬುದು ಕೇವಲ ಗಾದೆಯ ಮಾತಲ್ಲ. ಸತ್ತ ಹೋರಿ ಒಕ್ಕಲಗೇರಿಯಲ್ಲಿ ಮೌನಾಚರಣೆಗೆ ವಸ್ತುವಾಗಿದ್ದರೆ, ಅದೇ ಹೋರಿ ಹೊಲಗೇರಿಯಲ್ಲಿ ಮಾರನೋಮಿಯ ಸಡಗರವನ್ನು ಹುಟ್ಟುಹಾಕುತ್ತಿರುವುದು ವಿಪರ್ಯಾಸವಲ್ಲದೆ ಇನ್ನೇನು.

ಮರಿಯ ಮತ್ತು ಕೆಂಚ ಎತ್ತಿನಗಾಡಿಯನ್ನು ಸಿದ್ಧಮಾಡುತ್ತಿದ್ದರು. ಅಂದು ಯಾರು ಯಾರು ಕೂಲಿಗೆ ಹೋಗಬಾರದೆಂದು ಅಲ್ಲೇ ತೀರ್ಮಾನವಾಯಿತು. ವೃದ್ಧ ಕರಿಬಸವ ತನಗೆ ಹೋರಿಯ ಯಾವ ಭಾಗ ಬೇಕಾಗಿದೆಯೆಂದು ಕೆಂಚನ ಕಿವಿಯಲ್ಲಿ ಉಸುರುತ್ತಿದ್ದ.

'ಮನಲಿ ಬಾಣತಿ ಅವ್ಳೆ ಕೂಸು, ಒಸಿ ನನ್ ನೋಡ್ಕೊ' ದೈನ್ಯದಿಂದ ಬೇಡಿದ.

'ವರ್ಸೊಂಬತ್ಕಾಲುವೆ ನಿಮ್ಮನಲಿ ಬಸಿರು ಬಾಣ್ತೇರು ಇದ್ದೆ ಇರ್ತರಲ್ಲ ತಾತ ಕೆಂಚ ಕಿಚಾಯಿಸಿದ.

'ನಾಕ್ ಮಂದಿ ಸೊಸೆರು, ಯಾನಪ್ಪ ಮಾಡದು' ತಾತ ತನ್ನ ಗೋಳಿಟ್ಟ.

'ಮನಿಕಳಕೆ ಜಾಗವಿಲ್ಲ ಅಂತ ನಿನ್ ಗಂಡ್ಮಕ್ಕು ಜಗ್ಲಿ ಪಗ್ಲಿ ಹಿಡ್ಕತರಲ್ಲ ತಾತ?' ಮರಿಯನೂ ಕೊಸರಾಡಿದ. ಗುಂಪು ಕಿಸಕಿಸ ನಕ್ಕಿತು.

ನೆರೆದಿದ್ದ ಪಡ್ಡೆಯವರ ಮಧ್ಯೆ ಆ ಹೋರಿಯನ್ನು ಕೊಯ್ದು ಎಷ್ಟು ಪಾಲು ಹಾಕಬಹುದು, ಅದರಲ್ಲಿ ಯಜಮಾನ ಸಿದ್ಧನಿಗೆ ಎಷ್ಟು ಕೊಡಬೇಕು ಎಂಬ ಜಿಜ್ಞಾಸೆ ನಡೆದಿತ್ತು. ಆಗಲೇ ಪೀರ್‌ಸಾಬನು ಹಾಜರಾಗಿ, "ಚರ್ಮದ ಬೆಲೆ ಏನು ಅಂತ ಹೇಳ್ಬುಡ್ರಯ್ಯ" ಎಂದ ಇವನ ತಕರಾರು ತಿಳಿದಿದ್ದ ಕೆಂಚ. ಮಡ್ಗಯ್ಯ ಅಡ್ವಾನ್ಸ ಎಂದ. ಗಾಡಿ ಸಿದ್ಧವಾಗಿ ಗೌಡರ ಹಟ್ಟಿಯ ಕಡೆಗೆ ಹೊರಟಿತು.



ಸುಮಾರು ಮೂವತ್ತು ಗುಡಿಸಲುಗಳಿದ್ದ ಹೊಲಗೇರಿಯಲ್ಲಿ ಯಜಮಾನ ಸಿದ್ದನದೊಂದೇ ನಾಡಂಚಿನ ಮನೆ. ಚಾವಡಿ ಕಟ್ಟೆಯ ಒಂದು ಬದಿಯಲ್ಲಿ ಸಣ್ಣಗೋಪುರದೊಳಗೆ ಉರಿಕಾತವ್ವ ಎಂಬ ಮಾರಿ ಒಕ್ಕಲಾಗಿದ್ದಳು. ಅವಳೇ ಕೇರಿಯ ಉಸಾಬರಿಯನ್ನು ನೋಡಿಕೊಳ್ಳುವ ಏಕೈಕ ದೇವತೆ. ಇಲ್ಲಿ ಏನೇ ವಿಶೇಷ ನಡೆದರೂ ಅವಳ ಮುಂದೆಯೇ ನಡೆಯಬೇಕು. ಅಲ್ಲಿ ಅನ್ಯಾಯ ಸಲ್ಲದು. ಎಲ್ಲರೊಡನೆ ಬೆರೆತು ಬಾಡು ಬಳ್ಳ ತಿಂದು ಗಟ್ಟಿಮುಟ್ಟಾಗಿದ್ದಳು ಉರಿಕಾತವೆ. ಇಂದು ಈ ಜನರನ್ನು ಮಾತಾಡಿಸಲಾಗದು ಎಂದು ಮೊದಲೇ ಗೊತ್ತಿದ್ದರಿಂದಲೋ ಏನೋ ಯಾರು ಆಳುಗಳನ್ನು ಎಬ್ಬಿಸುವುದಕ್ಕೆ, ಹೊಲಗದ್ದೆಗಳ ಕಡೆಗೆ ಹೊರಡಿಸುವುದಕ್ಕೆ ಬಂದಿರಲಿಲ್ಲ.

ಹೆಂಗಸರು ಏಳುತ್ತಿದ್ದಂತೆಯೇ ಈ ಶುಭ ಸಮಾಚಾರವನ್ನು ಕೇಳಿ ಸೂರ್ಯನಿಗೊಂದು ನಮಸ್ಕಾರ ಮಾರಿಗುಡಿಗೊಂದು ನಮಸ್ಕಾರ ಹಾಕಿ, ದೂಳು ಹಿಡಿದಿದ್ದ ದೊಡ್ಡ ಚರಕು ಮಸಿ ಮೆತ್ತುಕೊಂಡಿದ್ದ ಬೋಸಿ ಇತ್ಯಾದಿಯನ್ನು ಅಟ್ಟದಿಂದ, ಇಳಿಸಿ ತೊಳೆಯಲು ತೊಡಗಿದ್ದರು. ಊರ ಹೆಬ್ಬಾಗಿಲಿಗೆ ಅಂಟಿಕೊಂಡಂತಿದ್ದ ಸಾರಾಯಿ ಅಂಗಡಿಯ ರಾಜಪ್ಪನಿಗೆ ವಿಷಯ ತಿಳಿದು ಒಂದು ಪಿಪಾಯಿಯನ್ನು ಹೆಚ್ಚುವರಿಯಾಗಿ ತರಿಸಿದ. ಹೆಂಡದ ನಿಂಗನು ಮತ್ತೊಂದು ಚೀಲಕ್ಕಾಗಿ ಕತ್ತೆಯನ್ನು ಪಕ್ಕದ ಊರಿಗೆ ಓಡಿಸಿದ.

ಮಾರಿಹಬ್ಬ ಕಳೆದು ತಿಂಗಳುಗಳು ಉರುಳಿದ್ದರಿಂದ ಕೇರಿಯ ಜನರಿಗೆ ಈ ಸಂಭ್ರಮ ಮತ್ತೊಮ್ಮೆ ಮಾರಿಹಬ್ಬವನ್ನು ನೆನಪಿಸುತ್ತಿತ್ತು. ಜಡ್ಡುಗಟ್ಟಿದ ನಾಲಗೆಗಳು ಬೆಳಗಿನಿಂದಲೂ ಚಪ್ಪರಿಸಿಕೊಳ್ಳುತ್ತಿದ್ದವು. ಹೋರಿಯ ಬಾಡಿನ ಚಪಲ ಮೂಗನ ಅವ್ವ ರಾಚಮ್ಮನನ್ನೂ ಬಿಡಲಿಲ್ಲ.

“ವಾಪಸು ಬಾ ಅಂದ್ರೆ ಬಂದದ ತಕ್ಕ. ಒಂದೊತ್ ಊಟನಾದ್ರೂ ಸರಿಯಾಗಿ ಉಣ್ಣವು. ನನ್ ಗಂಡ ಆ ಹಟ್ಟಿ ಜೀತಗಾರಾಗಿ ದುಡ್ಡು ದುಡ್ಡು ದಣಿದದೆ. ಆ ಗೌಡಗೇ ಜೀವನೆಲ್ಲ ತೇಯ್ದಾ ಅದಲ್ಲ.” ಎಂದು ಗೊಣಗುತ್ತಾ ಒಲೆ ಹಚ್ಚಲು ಬೇಲಿ ಮರೆಯಲ್ಲಿ ಪುಳ್ಳಿ ಆಯುವುದಕ್ಕೆ ಹೊರಟಳು.

ಹೊತ್ತು ಮಾರು ದೂರ ಸಾಗಿ ಬಂದಿತ್ತು. ಸಿಳ್ಳೆಕ್ಯಾತನೆಂಬ ಹುಡುಗ ಕೇರಿಯೆಲ್ಲ ಓಡಾಡಿಕೊಂಡು ಅವರವರ ಮನೆಯ ಪಾಲನ್ನು ಹಂಚುತ್ತಿದ್ದ. ಅಯ್ಯೋವ್.... ರಾಚಮ್ಮನ ಕಿವಿ ನೆಟ್ಟಗಾಯಿತು.

“ನಾನು ಸಿಳ್ಳೆಕ್ಯಾತ, ಪಾಲ್ ತಂದಿ ತಕಾ” ಎಂದ.

“ಅಯ್ಯೋ ನನ್ನ ಕಂದ, ಬಂದ್ಯ ಬಾ. ಎಷ್ಟೊತ್ತಿಂದ್ ಕಾಯ್ತಿದ್ದಿ ಚೆಂದಾಗಿರ ಪಾಲ್ ತಂದಿದ್ದರು ಕೂಸು” ಎಂದಳು.

“ಮೂಗ್ ಬಸವಣ್ಣ ಸಾಕಿದ ಹೋರಿ ಅಂತ ಚೆಂದಾಗಿರ ಪಾಲ್ನ ಆರಿಸ್ಕಂಡ್ ಕೊಟ್ಟವೆ, ನೋಡು ಈಲಿ ಗುಂಡ್ಯಾಯಿ ಎಲ್ಲ ಅದೆ ತಕಮ್ಮೋ” ಸಿಳ್ಳೆಕ್ಯಾತನ ಬಣ್ಣನೆ ರಾಚಮ್ಮನ ಬಾಯಿಗೆ ಬೆಣ್ಣೆಯಂತೆ ತಾಗಿ ನೀರೂರಿತು.



“ಎಳೆಯದು ಕಣಾ ಮೂಗನಿಗೆ ಒಸಿ ಸಾರಾಯಿ ಉಯಿಸ್ಕಂಡ್ ಬಾ ಅನ್ಬೇಕು.” ಎನ್ನುತ್ತಾ ಮಾಂಸವನ್ನು ಗೋರಿ ಹಿಡಿದ ಮಕ್ಕರಿಗೆ ಸುರಿದುಕೊಂಡಳು. ತಕ್ಷಣವೇ ಅಂಗಡಿಯ ನೆನಪಾಗಿ ಹೊರಟಳು.

`ಶೆಟ್ಟರ ಅಂಗಡಿ ಒಕ್ಕಲಗೇರಿಯಲ್ಲಿ ಇದ್ದುದರಿಂದ, ಸಣ್ಣಪುಟ್ಟ ಸಾಮಾನು ಬೇಕಾದರೂ ಎಲ್ಲರೂ ಅಲ್ಲಿಗೆ ಎಡತಾಕಬೇಕಾಗಿತ್ತು. ಅಂಗಡಿಯಲ್ಲಿ ಖರೀದಿಸಿದ ಖಾದ್ಯವಸ್ತುಗಳನ್ನು ತನ್ನ ಮಡಿಲಸೆರಗಿಗೆ ಕಟ್ಟಿ ಗಂಟು ಹಾಕಿಕೊಂಡು ಮಗನ ನೆನಪಾಗಿ ಗೌಡರ ಮನೆಯತ್ತ ನಡೆದಳು ರಾಚಮ್ಮ.

` “ಒಸಿ ಬೇಗನೆ ಬಾ ಕಂದ, ಸಂದೆನಾಗ ಮನೆಲೆ ಉಣ್ಣವು” ಎಂದು ಹೇಳಬೇಕೆಂಬ ಹಂಬಲ ಅವಳಿಗೆ

`ಬೆಳಗಿನಿಂದಲೂ ಮನೆಯಿಂದ ಕದಲದ ಗೌಡರು ಬೇಸರ ದುಃಖಗಳಿಂದ ಜರ್ಜರಿತರಾಗಿದ್ದರು. ಹೊತ್ತೇರಿದ್ದ ಪರಿವೆ ಇಲ್ಲದಿದ್ದರೂ ಬಯಲ ಕಡೆ ಹೋಗುವ ತುರ್ತಿನಿಂದ ಹಟ್ಟಿಯ ಮೆಟ್ಟಿಲಿಳಿದು ಹೊರ ನಡೆಯುತ್ತಿದ್ದರು. “ಮೂಗ....ಮೂಗ....ಬಸವಾ ರಾಚಮ್ಮನ ಸ್ವರ ಕೇಳಿ ಕ್ಷಣ ನಿಂತುಕೊಂಡರು. ಎದುರಿಗೆ ಸಿಕ್ಕಿದವಳ ಮಡಿಲಗಂಟೇ ಗೌಡರ ಗಮನಕ್ಕೆ ಮೊದಲಾಯಿತು.

“ಏನಮ್ಮಿ ಅದು..” ಎಂದರು. ಅಮಾಯಕ ರಾಚಮ್ಮ ಏನು ಅರಿಯದವಳಂತೆ “ಕಳ್ಳೆಕಾಯ್‌ಚೂರು ಬುದ್ದಿ” ಎಂದಳು. ಗೌಡರ ಕಣ್ಣಿಗೆ ಕತ್ತಲಿಡಿದಂತಾಯಿತು. “ಹೂ...ನಿಮ್.....” ಮೈಯೆಲ್ಲ ಹೆಪ್ಪುಗಟ್ಟಿದಂತಾಗಿ ರಾಚಮ್ಮನತ್ತ ದುರುಗುಟ್ಟುತ್ತಿದ್ದರು. ರಾಚಮ್ಮ ಗೂಳಿ ಎದುರಾದಂತೆ ಕಂಡು ಓಡಿದಳು.

ಇತ್ತ ಮೂಗ ಹೊಲದ ಕಡೆ ಹೊರಟ್ಟಿದ್ದ. ಕಾಳ ಮೇಯುವ ಜಾಗದಲ್ಲೆಲ್ಲ ಕೂತು ಅತ್ತು ಕಣ್ಣೀರ ತರ್ಪಣವಿಟ್ಟು ಸೂರ್ಯ ಕರಿಕಂಬಳಿ ಹೊದ್ದು ಮಲಗಿದ ಮೇಲೆ ಮನೆಗೆ ಬಂದ. ಬಂದವನೇ ರಾಗಿ ಕಲ್ಲಿನ ಮೂಲೆಯಲ್ಲಿ ಮಲಗಿಬಿಟ್ಟಿದ್ದ.

ರಾಚಮ್ಮ ಊರೆಲ್ಲಾ ಅಲೆದು “ನನ್ನ ಮಗನ್ನ ನೋಡಿದ್ರೆಪ್ಪ” ಎಂದು ಸಿಕ್ಕಿದವರನ್ನೆಲ್ಲ ಕೇಳುತ್ತ ಬರುತ್ತಿದ್ದಳು. ಹಸಿದಿದ್ದರೂ ಮಗನಿಲ್ಲದೆ ಉಣ್ಣಲು ರಾಚಮ್ಮನ ಮನಸ್ಸು ಮಾತ್ರ ಒಲ್ಲೆ ಎನ್ನುತ್ತಿತ್ತು. ಕಾಲೆಳೆದುಕೊಂಡು ಬಂದು ತನ್ನ ಗುಡಿಸಲು ಬಾಗಿಲೆಂಬ ನೆರಕೆಯ ಮುಂದೆ ಕುಳಿತಳು. ಕುಳಿತವಳ ಮೂಗನ ಜಾತಕ ಜಾಲಾಡಲು ಶುರುಮಾಡಿದಳು.

“ಒಂದೇ ಕುಡಿ ಅಂತ ಸಾಕ್ಷಿ.... ಜಾತ್‌ಗೆಟ್ಟದು.... ನನ್ ಹೊಟ್ಟೆ ಉರಿಸಕೇ ಅಂತ ಹುಟ್ಟದಲ್ಲವ್ವ...” ಅಷ್ಟುಹೊತ್ತಿಗೆ ಎಚ್ಚರಗೊಂಡ ಮೂಗ ಒಳಗಿನಿಂದಲೇ 'ಅವ್ವೋವ್....' ಎಂದು ಕೂಗಿದ. ಅಂಬಾ ಎಂದ ಕರುವನ್ನು ತಡಕುವ ಹಸುವಿನಂತೆ ರಾಚಮ್ಮ ಎದೆಯೊಳಗೆ ಪುಳಕಗೊಂಡು ಗುಡಿಸಲನ್ನು ಹೊಕ್ಕಳು.

“ಅಯ್ಯೋ ನನ ಕಂದ, ಎಲ್ಲೋಗಿದಪ್ಪ? ಕಾದು ಕಾದು ಸುಸ್ತಾದಲ್ಲ ನಾನು. ಹೊಟ್ಟೆಲ್ಲದೆ ಎಲ್ಲಿ ತಿರಿತ್ತಿದ್ದ ಕಂದಾ” ಎಂದು ಮೈದಡವಿದಳು. ಮೂಗ ಹತಾಶ



ಕಣ್ಣುಗಳಿಂದ ಒಮ್ಮೆ ಅವ್ವನನ್ನು ನೋಡಿದ. “ಇರು ನನ್ನಂದ ಉಣ್ಣಕಿಕ್ಕಂಡ್ ಬತ್ತಿನಿ, ಕೈ ತೊಳ್ಳ ಏಳು” ಎಂದು ಮೆಲೆದ್ದಳು. ನಿದ್ದೆಯ ಮಂಪರಿನಲ್ಲಿ ಮೂಗ ಕೈಬಾಯಿ ತೊಳೆದು ತಣಿಗೆಯ ಮುಂದೆ ಕೂತ.

“ಒಸಿ ಸಾರಾಯಿ ತಂದಿದ್ದಿ ಕುಡಿ” ಎಂದು ಸೀಸೆಯೊಂದನ್ನು ಮುಂದಿಟ್ಟಳು. ಇಂದೇನು ವಿಶೇಷ ಎಂದು ಯೋಚಿಸುವಷ್ಟರಲ್ಲಿಯೇ ಕ್ವಾಣೆಯಿಂದ ಗಮಲು ಮೂಗಿಗೆ ಬಡಿಯಿತು. ಬಳಲಿದ್ದ ದೇಹಕ್ಕೆ ಇಂದು ಒಳ್ಳೆಯ ಔತಣವೆನಿಸಿ ಸೀಸೆಯನ್ನು ಮೇಲಕ್ಕೆತ್ತಿದ್ದ ಮೂಗ. “ತಕ್ಕ ನಂಜಂಡ್ ತಿನ್ನು' ಎಂದು ಕೊತಕೊತ ಕುದಿದು ಆರದ ಮಾಂಸವನ್ನು ತಣಿಗೆಗೆ ಸುರಿದಳು ಅವ್ವ, ಏನೋ ಮಿಂಚಿನಂತೆ ಮನಸ್ಸಿಗೆ ಬಡಿಯಿತು ಮೂಗನಿಗೆ, ಲಕ್ವ ಹೊಡೆದಿರಬಹುದೆ ಎಂದು ಹೆದರಿದ. ತಣಿಗೆಯಿಂದ ಕಾಳ ಚಂಗನೆ ನೆಗೆದು ಕೊಂಬುಗಳಿಂದ ಎದೆಗೆ ತಿವಿದಂತೆ ಆಯಿತು. ಹೌಹಾರಿ ಮೇಲೆದ್ದ ಹಾರಾಡಿದ. ಕಣ್ಣು ಮಂಜಾಯಿತು. ಮತ್ತೊಮ್ಮೆ ತಣಿಗೆಯತ್ತ ದಿಟ್ಟಿಸಲು ಯತ್ನಿಸಿದ ತಾವು ಕುಡಿದ ಸಾರಾಯಿ ಬೊದಮೊದನೆ ಹೊರಚೆಲ್ಲಿತ್ತು. 'ಮೂಗ... ಬಸವಾ...' ಅವ್ವನ ಚೀರಾಟ ಮುಗಿಲು ಮುಟ್ಟಿತ್ತು.

# ೬. ಕಾಲ

· ಮ.ನ.ಜವರಯ್ಯ

ಇಲ್ಲಿಗೆ ಸರಿಯಾಗಿ ಐದು ವರ್ಷ. ಇದೇ ಸಾತನೂರ ರಾಜಪುರೋಹಿತರ ಮುಖಂಡತ್ವದಲ್ಲಿ, ಇದೇ ಊರೊಟ್ಟಿನ ಸಿದ್ದಪ್ಪಾಜಿ ಗುಡಿಯ ಸಭಾಂಗಣದಲ್ಲಿ, ಇದೇ ಥರದ ಮುನಸಿಪಾಲಿಟಿ ಎಲೆಕ್ಷನ್ ವಿಚಾರದಲ್ಲಿ, ಭಾರೀ ಸಭೆಯೇ ಸೇರಿತ್ತು. ಸಭಾಂಗಣದ ಮೇನ್‌ರೋಡ್ ತಲಬಾಗಿಲ ಮೇಲೆ ಅಂಬೇಡ್ಕರರ ಅದೇ ಆಳೆತ್ತರದ ಫೋಟೋ ; ಅದರ ಎದುರು ಬದರಿಗೆ ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ಅಷ್ಟೇ ಎತ್ತರದ ಫೋಟೋ. ಈ ಕಡೆ, ತಲೆಬೋಳಿಸೋ ಮಾದಯ್ಯನ ಮನೆಕಡೆಗಾದಂಗೆ ಇನ್ನೊಂದು ಬಾಗಿಲಿದೆಯಲ್ಲ. ಅದರ ಮೇಲೆ ಸಿದ್ದಪ್ಪಾಜಿ ಗರ್ಭಗುಡಿಯ ಬಾಗಿಲ ಮೇಲೆ ಅದೇ ಬ್ರಿಟೀಷರ ಕಾಲದ ದೊಡ್ಡ ಗಡಿಯಾರ, ಗಂಟೆ ಗಂಟೆಗೆ ಮತ್ತು ಅರ್ಧ ಗಂಟೆಗೆ ಅದು ಹೊಡೆಯುವ ಢಣಾರ್ ಢಣಾ ಅನ್ನುವ ಅದರ ಗಂಟೆ ಸದ್ದು ಸದಾ ಒಂದೇ ಥರವಾದರೂ, ಇಲ್ಲಿ ನಡೆಯುವ ಥರಾವರಿ ಸಭೆಗಳಿಗೆ ಥರಾವರಿ ಅರ್ಥಭಾವಗಳನ್ನು ಅದು ಬಿಡುತ್ತದೆ. ಈ ಗಡಿಯಾರ ಬ್ರಿಟಿಷರ ಕಾಲದಾದ್ದರಿಂದಲೋ ಅಥವಾ ಅದನ್ನು ಹಳೇ ಮೈಸೂರು ಪ್ರಾಂತದ ಪೊಲಿಟಿಕಲ್ ಏಜೆಂಟ್ ಆಗಿದ್ದ ಕ್ಯಾಪ್ಟನ್ ಕ್ರಿಸ್ಟ್ ಅದನ್ನು ಈ ಊರಿಗೆ ಉಡುಗೊರೆಯಾಗಿ ಕೊಟ್ಟಿದ್ದರಿಂದಲೋ ಏನೋ, ಅದರ ಕೆಳಗೆ ಕಾಳಬೈರ ಕಾಲದೂತ ಅಂತ ಬರೆದಿದ್ದ. ಯಾಕೆಂದರೆ, ಇಲ್ಲಿ ಲೋಕಲ್ ಫಂಡ್ ಆಸ್ಪತ್ರೆ ಮತ್ತು ಪ್ರೈಮರಿ ಸ್ಕೂಲು ಬಂದದ್ದೂ ಕೂಡ ಆ ಗಡಿಯಾರ ಊರೊಳಗೆ ಕಾಲು ಮಡಗಿದ ನಂತರವೆ. ಈ ಸಲದ ಮೀಟಿಂಗ್‌ನಲ್ಲಿಯೂ ಹೀಗೆಯೇ ಬೇಜಾನ್ ಜನ ಸೇರಿದ್ದರು. ಆದರೂ ಆಕ್ಕೂ ಈಕ್ಕೂ ವ್ಯತ್ಯಾಸ ಏನಪ ಅಂತಾಂದರೆ, ಆ ಸಭೆಯಲ್ಲಿ ಕವಾಲಿ ಕಾಳಬೈರನ ಸಲು ಸಾಧಾರಣದ ಒಂದೇ ವಾರಿಗೆ ಪರಾಯದ ಹುಡುಗರ ಬಲವಾದ ಗುಂಪಿತ್ತು. ಅಲ್ಲಾಕಡೆ ಆಗಲೂ ಇದೇ ಮರಿತಿಮ್ಮಯ್ಯನೆ ಗ್ರಾಮದ ಚೇರ್ಮನಾಗಿದ್ದನು. ಅದೇ ಥರವಾಗಿ ಊರಾದ ಊರಿಗೆಲ್ಲ ಇಲ್ಲಾಕಡೆ ಅಂಬೇಡ್ಕರ್ ಯಾರು ಅಂತ ತಿಳಿಸಿಕೊಟ್ಟವನು ಕೂಡ ಈ ಕವಾಲಿ ಕಾಳಬೈರನ. ಆದರೆ ಈಗಿನ ಸಭೆಯಲ್ಲಿ ಕಾಳಬೈರನಂಥವರು ಎಷ್ಟೋ ಇದ್ದರೂ ಕಾಳಬೈರ ಮಾತ್ರ ಇರಲಿಲ್ಲ. ಆ ಸಲದ ಬಾಬಯ್ಯನ ಹಬ್ಬಕ್ಕೆ ಇದೇ ಊರೊಟ್ಟಿನ ಸಿದ್ದಪ್ಪಾಜಿ ಗುಡಿಯ ಮುಂದೆ ಕಟ್ಟಿದ್ದ ರಂಗದಲ್ಲಿ ಕವಾಲಿ ಕಾಳಬೈರನ ಕವಾಲಿ ಏರ್ಪಾಟಾಗಿತ್ತು. ಪಕೀರ ಸಾಬರ ಗರಡಿಯ ಉಸ್ತಾದ್ ಅಮೀರ್‌ಜಾನ್ ಸಾಹೇಬರು ಆ ಸಲದ ಬಾಬಯ್ಯನ ಹಬ್ಬಕ್ಕೆ ಊರಿಗೆ ನಂಟರಾಗಿ ಬಂದಿದ್ದರು. ಅಡಿಕೆ ಅಂಗಡಿ ಅಜೀಜು ಉರ್ದು ಕವಾಲಿ ಹಾಡಿದರೆ,

ಕವಾಲಿ ಕಾಳಬೈರ ಕನ್ನಡ ಕವಾಲಿ ಹಾಡಿದ್ದ. ಪುಟ್ಟಸ್ವಾಮಿ ಮೇಸ್ತ ಹಾರ್ಮೋನಿಯಂ, ಪಿಟೀಲು ಮಂಚಯ್ಯನವರು ಪಿಟೀಲು, ಯುಸೆಫು ತಬಲ, ಚರ್ಚ್ ಬೀದಿಯ ಲಾರೆನ್ನು ಕ್ಲಾರಿನೇಟು.

ಅಡಿಕೆ ಅಂಗಡಿ ಅಜೀಜು ಎಷ್ಟೇ ಹಾಡಿದರೂ ಅವನ ಗಂಟಲು ಗೊರಗರಿಯುತ್ತಿದ್ದುದರಿಂದ ಬಲು ಸುಂದರವೂ ಸೂಕ್ಷ್ಮವೂ ಆದ ಭಾವಗಳ ಉರ್ದು ಕವಾಲಿಗಳನ್ನು ಕೇಳಿದ ಜನ ಕೈಯನೂ ತಟ್ಟಲಿಲ್ಲ. ಸಿಳ್ಳೇನೂ ಹೊಡೆಯಲಿಲ್ಲ. ಆದರೆ ಕವಾಲಿ ಕಾಳಬೈರನ ಗಂಟಲು ಹಾಂಗಲ್ಲ. ಮೈಸೂರು ಪಟ್ಟಣದಲ್ಲಿ ಕನ್ನಡ ಕವಾಲಿ ಒಂದು ಜಮಾನ ಮುಟ್ಟಿದ್ದೇ ಕವಾಲಿ ಕಾಳಬೈರನಿಂದ ಕಾಳಬೈರನಿಂದ ಅಂಬೋದನ್ನು ಊರಿಗಿಂತಲೂ ಹೆಚ್ಚಾಗಿ ಲಷ್ಕರ್ ಮೊಹಲ್ಲಾದಲ್ಲಿ ಕೇಳಿ ತಿಳಿಯಬೇಕು. ಉರ್ದು ಭಾಷೆಗೇ ಸಹಜವಾದ ಕವಾಲಿಯ ಆರೋಹಣ ಅವರೋಹಣಗಳು ಮಾತ್ರವಲ್ಲದೆ ಆಲಾಪನೆಯಲ್ಲೂ, ಕನ್ನಡ ಕವಾಲಿಗಳನ್ನು, ಕಾಳಭೈರ ಅಷ್ಟರ ಮಟ್ಟಿಗೆ ಪದ ಜೋಡಿಸಿಕೊಂಡು ಹಾಡುತ್ತಿದ್ದರಿಂದಲೇ ಅವನ ಹೆಸರಿನೊಡನೆ ಕವಾಲಿಯು ಸೇರಿಕೊಂಡು ಕವಾಲಿಯಿಂದಲೇ ಅವನ ಹೆಸರು ಮೊದಲಾಗುತ್ತಿದ್ದುದು. ಕಾಳಬೈರ ಕವಾಲಿಯ ಇನ್ನೊಂದು ಮೇರ್ಮಾನಿಯೆಂದರೆ, ಉರ್ದು ಕವಾಲಿಗಳನ್ನು ಬಹುಪಾಲುಬಲ್ಲ ಅವನು ಕನ್ನಡ ಕವಾಲಿಗಳನ್ನು ತಾನೇ ಬರೆದು ಹಾಡುತಿದ್ದುದು.

ಕವಾಲಿ ಕಾಳಬೈರನ ಕವಾಲಿ ಪದಗಳು, ಟೇಜಿನ ಮೇಲೆ ಮೈಮರೆತು ಹಾಡುವ ಅಥವಾ ಗಾನಮೋಹ ಚೇರ್ಮನ್ ಮರಿತಿಮ್ಮಯ್ಯನ ಮಗಳು ಗೌರಿಯನ್ನು ಮೋಹಿಸಿತು. ಇಲ್ಲಿ ಆಡಬೇಕಾದ ಇನ್ನೆರೆಡು ಮಾತು ಅಂತಂದರೆ, ಬೈರ ಮತ್ತು ಪರಸ್ಪರ ಮೆಚ್ಚಿಕೊಂಡಿದ್ದನ್ನೇನೋ ಎಡಬಲದ ದಂಡೆಯಲ್ಲಿದ್ದವರಿಗಿಂತಲೂ ದೂರದಲ್ಲಿದ್ದವರು ಕೂಡ ಕಂಡೇ ಇದ್ದರು. ಆ ಕಡೆ ಗೌರಿ ಮನೆಯವರು ಆಸ್ತಿ ಪಾಸ್ತಿವುಳ್ಳವರು ಎನ್ನುವುದು ಹೆಂಗೋ, ಹಂಗೆಯೇ, ಈ ಕಡೆ ಬೈರ ಇಂಟರ್‌ಮೀಡಿಯೇಟ್ ಓದಿದವನು. ಹಂಗಾಗಿ ಕಡೆಗೆ ಆಚೋರಿಯ ಗೌರಿ ಈಚೋರಿಯ ಬೈರ ಇಬ್ಬರ ಮನಗಳೂ ಪರಸ್ಪರ ಚೋರ ಚೋರಿ ಮಾಡಿಕೊಂಡಿದ್ದವು. ಇಷ್ಟರ ಮ್ಯಾಲೆ ಯಜಮಾನ್ ಮರಿತಿಮ್ಮಯ್ಯನ ಖಾಸ ಗೆಣೆಕಾರರಾದ ಪಕೀರ ಸಾಬರ ಗರಡಿಯ ಉಸ್ತಾದ ಅಮೀರ್‌ಜಾನ್ ಸಾಹೇಬರು ಮರಿತಿಮ್ಮಯ್ಯನಿಗೆ ಒಂದು ಮಾತು ಹಾಕಿಬಿಟ್ಟಿದ್ದರೆ, ಬೈರ ಗೌರಿಯ ಮದುವೆ ಕಳೆದ ಗೌರೀ ಮಾಸದಲ್ಲೇ ನಡೆದು ಬಿಟ್ಟಿರುತ್ತಿತ್ತು. ಈಗ್ಗೆ ಐದು ವರ್ಷಗಳ ಹಿಂದೆ ಹಿಂಗೇ ಒಂದು ಮುನಿಸಿಪಾಲಿಟಿಯ ಎಲೆಕ್ಷನ್ ಟೇಮಿನಲ್ಲಿ ಅದೇ ಸಿದ್ದಪ್ಪಾಜಿ ಗುಡಿಯಲ್ಲಿ ಸಭೆ ಸೇರಿದ್ದಿತು. ಕಾಲು ಮಡಗಕ್ಕೂ ಜಾಗಿಲ್ಲದಂತೆ ಗುಡಿಯ ಒಳಾಂಗಣವೆಲ್ಲ ಭರ್ತಿಯಾಗಿತ್ತು. ಆದರೆ ಆ ಸಭೆ ಕಾಳಬೈರನ ಬದುಕಿಗೆ ಅಕಾಲವಾದೀತೆಂದು ಅವನು ಎಣಿಸಿರಲಿಲ್ಲ.

ಇಲ್ಲಿಗೆ ಐದೊರ್ಷದ ಹಿಂದೆ, ಎಲೆಕ್ಷನ್ನು ಅಂದರೆ ಏನಂತ ಊರಲ್ಲಿ ಬಹಳ ಜನಕೆ ಗೊತ್ತಿದ್ದರಿಂದ ಇವತ್ತಿನ ಸಭೆಗೆ ಭಾರಿ ಜನವೇ ಸೇರಿತ್ತು. ಕೂಲಿನಾಲಿ ಕೆಲಸ

ಬೊಲಸದವರೆಲ್ಲ ಒಂದೆಡೆ ಸೇರಿದ್ದರೆ, ತ್ವಾಟಾತುಡಕೆಗೆ ಹೋಗುವವರು ಇನ್ನೊಂದು ಕಡೆಗೆ ಕುಂತಿದ್ದರು. ಮುದುಕರು ಮೋಟರು ಒಂದೆಡೆಗೆ ಕುಂತಿದ್ದರೆ, ಒಂದಿಷ್ಟು ಪುಡಿ ಐಕಳು ಕೂಡ ಒಟ್ಗೋರಿ ಕುಂತಿದ್ದರು. ಆದಾಗಿ ಇವತ್ತಿನ ಈ ಸಭೆಯಲ್ಲಿ ಫಳಾರನೆ ಕಾಣುತ್ತಿದ್ದ ಗುಂಪೆಂದರೆ ಕವಾಲಿ ಕಾಳಬೈರನ ಕಾಲೇಜು ಓದಿದ ಪರಾಯದ ಗಂಡೈಕಳ ಗುಂಪು, ತಲಬಾಗಿಲ ಮೇಲಿದ್ದ ಅಂಬೇಡ್ಕರರ ಆಳೆತ್ತರದ ಫೋಟೋ ಬರೆದವನು ಶಿವರಾಜು, ಘನಂದಾರಿ ಚಿತ್ರಗಳನ್ನೇ ಬರೆದು ಬರೆದು ಅದೆಲ್ಲೆಲ್ಲೋ ಬಹುಮಾನ ಪಡೆದಿದ್ದ ಅವನು ಅಂಬೇಡ್ಕರರ ಈ ಚಿತ್ರ ಬರೆಯುವಾಗ ವಸಿ ಎಡವಟ್ಟು ಮಾಡಿಬಿಟ್ಟಿದ್ದನು. ಆ ಫೋಟೋವನ್ನು ಈ ಬಾಗಿಲಿನಿಂದ ನೋಡಿದರೆ ಅಂಬೇಡ್ಕರರ ಮುಖದ ಮೇಲೆ ವಿಷಾದವೂ, ಮರಿತಿಮ್ಮಯ್ಯ ಕುಂತಿದ್ದ ಕಿಟಗಿ ಕಡೆಯಿಂದ ನೋಡಿದರೆ ಆಕ್ರೋಶವೂ, ಕಾಳಬೈರನ ಗುಂಪು ನಿಂತಿದ್ದ ಕಡೆಯಿಂದ ನೋಡಿದರೆ ಅಪಾರ ಗಾಂಭೀರವೂ ಕಾಣುತ್ತಿತ್ತು. ಅಂತೂ ಆ ಗೋಡೆ ಮೇಲಿಂದ ಅಂಬೇಡ್ಕರರು ಸಭೆಯನ್ನು ನೋಡುತ್ತಿದ್ದರೆ, ಈ ಗೋಡೆ ಮೇಲಿಂದ ನಾಲ್ವಡಿ ಕೃಷ್ಣರಾಜು ಒಡೆಯರು ನೋಡುತ್ತಿದ್ದರು. ಮಧ್ಯದಲ್ಲಿ ಗಾಂಧಿತಾತರು ನಗುತ್ತಿದ್ದರು. ಜನಗಳು, ಮನಗಳು ಬಾಯಿಗಳು, ಸಮಾಚಾರಗಳು ಇಷ್ಟೆಲ್ಲಾ ಇದ್ದರೂ ಈಗ ಸಭೆಯಲ್ಲಿ ಸದ್ದು ಸಟಿಗೆ ಇಲ್ಲದೆ, ಮಾತುಗಳೆಲ್ಲ ಅಡರಿ ನೆಲ ಅಪ್ಪರಿಕೊಂಡಿದ್ದವು. ಹೀಂಗಿರೋ ಟೇಮಿನಲ್ಲೂ ಸರಿಯಾಗಿ ಸಾತನೂರ ರಾಜಪುರೋಹಿತರು ಭಾಷಣಕ್ಕೇರಿಕೊಂಡರು. 'ಆತ್ಮೀಯ ಬಂಧುಗಳೇ, ಕಳೆದ ಚುನಾವಣೆ ಥರದಲ್ಲೇ ಈ ಸಲವೂ ಸಹ ನಿಮ್ಮೂರ ಚೇರ್ಮನ್‌ರಾದಂತಹ ಶ್ರೀಮಾನ್ ಮರಿತಿಮ್ಮಯ್ಯನವರ ಮಾತಿನ ಪರಕಾರವೇ ನಾವು ಒಪ್ಪಿಕೊಂಡಿದ್ದೇವೆ. ಆದ್ರಿಂದ ತಾವೆಲ್ಲರೂ ಚರಕದ ಗುರ್ತಿಗೇ ಓಟು ಕೊಡಬೇಕೂಂತ ನಾನು ಕೇಳಿಕೋತೀನಿ' ಎಂದು ಮಾತು ಮುಗಿಸುತ್ತಿದ್ದಂತೇನೆ ಸಭೆಯಲ್ಲಿ ಯಾರೋ "ಸ್ವಾಮಿ ರಾಜ್‌ಪುರೋಹಿತೇ, ಮರಿತಿಮ್ಮಯ್ಯನೋರ್ಗೂ ನಿಮ್ಗೂ ಆಗಿರೋದು ಅದೇನ್ ಮಾತು ಅಂತ ಸಲುಪ ಬಿಡ್ಸೇಳಿಮಂತೆ. ಯಾಕಂದ್ರ ಅವರೊಬ್ರೇ ಅಂತ ನಿಮಗೆ ಓಟ್ ಕೊಡೂರು' ಎಂದು ಕೇಳೇಬಿಟ್ಟರು. ಮಾತು ಕೇಳಿ ಸಭೆಗೆ ಸಭೆಯೇ ದಂಗು ಬಿದ್ದು ಹೋಯಿತು. ಯಾರು ಅಂತ ನೋಡಿದರೆ ಕವಾಲಿ ಕಾಳಬೈರ ; ಅದರಾಗೂ ತಮ್ಮ ಹೆಸರಿನೊಂದಿಗೆ ಚೇರ್ಮನ್‌ಗಿರಿಯೂ, ಅದರೊಂದಿಗೆ ಶ್ರೀಮಾನ್ ಅಂತಲೂ ರಾಜಪುರೋಹಿತರು ತಮ್ಮ ಭಾಷಣದಲ್ಲಿ ಸೇರಿಸಿದ್ದರಿಂದ ಕೆಳೊಟ್ಟೆಗೆ ಕಚಗುಳಿ ಕೊಟ್ಟಂತೆ ಪುಳಕಗೊಂಡಿದ್ದ ಚೇರ್ಮನ್ ಮರಿತಿಮ್ಮಯ್ಯನವರ ಕಣ್ಣುಗಳ ಕಾಳಬೈರನ ಮಾತು ಕೇಳಿ ಮಾದೇಶ್ವರನ ಕೊಂಡವಾಗಿದ್ದವು. ಕಿಡಿಕಿಡಿಯಾದ ಯಜಮಾನ್ ಮರಿತಿಮ್ಮಯ್ಯನವರು 'ಲೇ ಕಾಳಬೈರ, ಎನ್ ಮಸ್ಗಿರೀ ಆಡ್ತಾ ಇದ್ದಯೇನಲ್ಲಾ? ಮನೇಮಠನೆಲ್ಲ ಮಾರ್ಸೀ ಊರಿಂದ ಬಯಿಸ್ಕಾರ ಹಾಕಿಸ್ಬಿಟೇನೊ ಉಸಾರ್, ಮಾದರ್‌ಜೋತ್', ಚೇರ್ಮನ್ನರ ದನಿ ಕೇಳಿ ಸಭೆ ಹೆದರಿ ಹೆಪ್ಪಳಿಸಿ ಹೋಯಿತು. ಅದಕ್ಕೆ ಕವಾಲಿ ಕಾಳಬೈರ 'ರೀ ಚೇರ್ಮನ್ರೆ ನಾಲಿಗೆ ತಡೆದು ಮಾತಾಡ್ರಿ, ಅರ್ಥ ಗೊತ್ತಿಲ್ದೆ ಮಾದರ್‌ಜೋತ್ ಗೀದರ್‌ಜೋತ್ ಅನ್ಬ್ಯಾಡ್ರಿ, ನಮ್ಮನೇಮಾರ್ಸಕ್ಕೆ ನೀವಲ್ಲ ನಿಮ್ಮಪ್ಪನ್ ಕೈಲೂ ಆಗಕ್ಕಿಲ್ಲ' ಅನ್ನುತ್ತಿದ್ದಂತೆ ಅವನ ಗುಂಪಿನ ಗಂಡೈಕಳ

ಗುಂಪು ಕೈತಟ್ಟಿಕೊಂಡು, ಸಿಳ್ಳೆ ಹೊಡೆದುಕೊಂಡು ಕುಣಿದಾಡತೊಡಗಿದರು. ಅಂತೂ ಈ ಸಭೆ ಗಲಾಟೆ, ಕಿರಚಾಟ, ಸಿಳ್ಳೆ ಇವೆಲ್ಲ ಅದು ಮುಗಿಯಿತು. ಯಾವ ತೀರ್ಮಾನಕ್ಕೂ ಬರಲಾಗನಿಲ್ಲ. ಕಾಳಬೈರನ ಮನೆಮಠ ಮಾರಿ ಊರಿಂದ ಆಚೆಗಾಕಿಸುವ ಚೇರ್ಮನರ ದನಿಯಿಂದ ಕೆಲವರ ಮನಗಳು ಮಳೆಗಾಲದಲ್ಲಿ ಕೋಳಿ ಪುಕ್ಕಗಳಂತೆ ಪೊತರಗರಿಯುತ್ತಿದ್ದರೆ, ಬೈರನ ಗುಂಪಿನ ಗಂಡೈಕಳ ಮನಗಳು ಕರೆಂಟುಗಳಾಗಿ ರಾಜಪುರೋಹಿತರು ಮತ್ತು ಮರಿತಿಮ್ಮಯ್ಯರ ನಡುವೆ ನಡೆದಿದ್ದ ಎಲೆಕ್ಷನ್ ಮರ್ಮದ ಕತ್ತಲೆ ಕಡೆಗೆ ಬೆಳಕು ಬೀರುತ್ತಿದ್ದವು.

ಕಡೆಗೆ ಬೈರನ ಗುಂಪಿನ ಗಂಡೈಕಳು ಪತ್ತೆ ಮಾಡಿದ್ದೇನೆಂದರೆ, ಒಂದೋಟಿಗೆ ಒಂದು ರೂಪಾಯಿಯಂತೆ ಮಾತಾಗಿ, ಊರಲ್ಲಿ ಎಷ್ಟು ಓಟು ಇವೆಯೋ ಅಷ್ಟಕ್ಕೆ ದುಡ್ಡು ಅಂತ ರಾಜಪುರೋಹಿತರಿಗೂ ಗ್ರಾಮದ ಚೇರ್ಮನ್‌ರಿಗೂ ಮಾತಾಗಿತ್ತು. ಜೊತೆಗೆ ಹೊಲೇರ ಮಸಾಣದಲ್ಲಿದ್ದ ಒಂದು ನೇರಳೇಮರ ಮತ್ತು ಒಂದು ಬೇವಿನ ಮರ ಇವೆರಡನ್ನೂ ಕಡಿಸಿ ರಾಜಪುರೋಹಿತರಿಗೆ ಮುಪ್ಪತ್ತಾಗಿ ಕೊಡುವುದು ಅಂತ ಕೂಡ ಮಾತಾಗಿತ್ತು. ಆದರೆ ಅದೂ ಆಗಲಿಲ್ಲ. ಪುರೋಹಿತರಿಗೆ ಓಟೂ ಸಿಗಲಿಲ್ಲ.

ಅದಾದ ಮ್ಯಾಲೆ, ಇಂಥ ಪೋಕ್ರಿ ಮುಂಡೇದಕ್ಕೆ ನಿನ್ನ ಮಗಳಾ ಮದ್ವೇ ಮಾಡ್ತೀಯ ಮರಿತಿಮ್ಮಯ್ಯ ಅಂತ ಅಂದಿದ್ದ ಪುರೋಹಿತರ ಮಾತು ಕಡ್ಡಿ ಮುರಿದಂತೆ ಬೈರ, ಗೌರಿಯರ ಮದುವೆ ಆಗುವುದು ಕೂಡ ಮುರಿದೇ ಹೋಯಿತು. ಅದಾದ ಮೇಲೆ ಮನೆ, ಮಠ, ಬದುಕು, ಬಾಳನ್ನೆಲ್ಲಾ ತೊರೆದ ಕವಾಲಿ ಕಾಳಬೈರ, ಕವಾಲಿ ಹಾಡಿಕೊಂಡು ಊರೂರು ಮೇಲೆ ಕಾಲ ಕಳೆಯುವ ಗೀಳು ಅವನ ಜೀವವನ್ನು ಇಲ್ಲೀತಂಕ ಎಳೆತಂದಿತ್ತು. ದಿನಗಳೆದಂತೆ ಕಾಳಬೈರನ ಹೆಸರು ಕಾಳಬೈರನಾಗಿರದೆ ಕಯಾಲಿ ಕಾಳಬೈರ ಅನ್ನುವ ದಾರಿ ಹಿಡಿದುಬಿಟ್ಟಿತ್ತು. ಕಾಳಬೈರನ ಅಪ್ಪ ಅವ್ವ, ಬೇರೊಂದು ಹೆಣ್ಣು ತಂದು ಕಡೆಗೂ ಅವನಿಗೊಂದು ಮದುವೆ ಅಂತ ಮಾಡಿದರು. ಆದರೆ ಅತ್ತ ಕೊಟ್ಟ ಮನೆಯಲ್ಲಿ ಗೌರಿಯ ಬಾಳಾಟ ಹದವಿರಲಿಲ್ಲ. ಇತ್ತ ಬೈರನ ಬಾಳಾಟ ಬಟ್ಟೆಗೆಟ್ಟಿತು. ಅಪ್ಪನ ಅವ್ವನ ಜುಲುಮಿ ಮೇಲೆ ಒಂದು ಮದುವೆ ಅಂತ ಆಗಿ, ಆಡು ಮರಿ ಹಾಕಿದಂತೆ ನಾಕ್ಕೈಕಳೇನೂ ಆದೊ. ಒಂದು ಕೆಲಸಿಲ್ಲದೆ ಬೊಲಸಿಲ್ಲದೆ ಅದೇ ಒಂದು ವರ್ಷದಿಂದ ಕಂಜರಿ ಥರದ ಕಪಾಲ ಬಾರಿಸಿಕೊಂಡು, ಅದೇ ಸಿದ್ದಪ್ಪಾಜಿ ಗುಡಿ ಹಿಂದಿರುವ ತನ್ನಪ್ಪ ಅವ್ವ, ಮನೆ ಅಂತ ಕಟ್ಟಿದ್ದ ಮಟ್ಟೆನೆರಕೆಯಲ್ಲಿ ಕುಂತು ಎಷ್ಟೊತ್ತಿನಲ್ಲೂ ಕವಾಲಿ ತಿಂದು ತಿಂದು ನೂರು ಕುಡಿದು ಜೀವ ಸಾಕಿದ್ದ, ಹೆಂಡತಿ ಭಾಗ್ಯ, ಸಂಪತ್ತಯ್ಯಂಗಾರ್ ಫ್ಯಾಕ್ಟರಿಯಲ್ಲಿ ಗಂಧದ ಕಡ್ಡಿ, ಉಜ್ಜಿ ಕೂಲಿ ತಂದರೆ ಉಂಟು, ತರದಿದ್ರೆ ಇಲ್ಲ, ಕಳೆದ ಐದು ವರ್ಷ ಕಾಲದಲ್ಲಿ ಕಾಲವಾದಂತಿದ್ದ ಕಾಳಬೈರನ ಡಂಬ ಮಾತ್ರ ಅವನೊಡನಿತ್ತು. ಆದರವನಾತ್ಮವು ಸದಾ ಅವನಾತ್ಮ ಸಂಗಾತಿ ಕಾಲದೂತನೊಡನೇ ಇದ್ದು ಕಾಲಕಾಲಕ್ಕೆ ತಕ್ಕಂತೆ ಕಾಲವನ್ನದು ಸೂಸಿಸುತ್ತಾ ನಡೆದಿತ್ತು.

ಐದು ವರ್ಷ ಆದ ಮೇಲೂ ಇವತ್ತೂ ಅದೇ ಸಿದ್ದಪ್ಪಾಜಿ ಗುಡಿ, ಅದೇ ಚೇರ್ಮನ್ ಮರಿತಿಮ್ಮಯ್ಯ, ಅದೇ ಸಾತನೂರ ರಾಜಪುರೋಹಿತರು, ಅದೇ ಸಭೆ,

ಕಾಲದೂತ ಗಡಿಯಾರವು, ಢಣಾರ್ ಢಣಾರ್ ಅಂತ ಹನ್ನೆರಡು ಬಾರಿಸಿ, ಹಿಂದಿನದ ಹಿಂದುಕ್ಕೆ ಹಾಕಿ, ಮುಂದಿನ ದಿನಕೆ ಆಣಿಯಾಯಿತೋ ಅಥವಾ ಅಲ್ಲಿ ನಡೆದಿದ್ದ ಸಭೆಯ ಬಗೆಗೆ ಅವನೆದೆಯೊಳಗಿದ್ದ ತಿರಸ್ಕಾರವನ್ನು ಬಡಿದೋಡಿಸಿ ಸಭೆಗೆ ಮುನ್ನಡೆಸುವುದು ಆ ಕಾಲದೂತನ ಇಂಗಿತವಾಗಿತ್ತೋ ಹೇಳುವುದು ಕಠಿಣ.

ಆದರೆ ಇದ್ದಕ್ಕಿದ್ದಂತೇ ಕಿರಿಚಾಟ ಕೂಗಾಟ ಸದ್ದು, ಗುಡಿಯ ಗೋಡೆ ಸಿಡಿದು ಹೋಗುವಂತೆ ಸಭೆ ಗುಡುಗಾಡುತ್ತಿತ್ತು. ಅದರಲ್ಲಿ ಒಂದು ದನಿ ಮಾತ್ರ ಕಾಲದೂತ ಗಡಿಯಾರದ ದನಿಗಿಂತಲೂ ಘೋರವಾಗಿತ್ತು. ಅದು ಯಾರದ್ದಿರಬೇಕೆಂದು ಕಾಳಬೈರ ನೆರಕೆಯೊಳಗೆ ಕುಂತೇ ಒಂದು ಚಣ ಆಲಿಸಿದ. ಅದು ನಿಸ್ಸಂದೇಹವಾಗಿ ರಾಮಕ್ಕನ ಶಿವನಂಜುವಿನದು. 'ಮಸಾಣದಲ್ಲಿದ್ದ ನೇರಮರ ಬೇವಿನ ಮರಗಳ ಯಾರನ್ ಕೇಳಿ ಕಡೀಸ್ಥೆ?' ಐದು ವರ್ಷಗಳ ನಂತರ ಆ ಮರಗಳ ಮಾತುಗಳನ್ನು ಯಾರಾದರೂ ಹೀಂಗೆ ಕೇಳಬಹುದೆಂದು ಕಾಣದಿದ್ದ ಚೇರ್ಮನ್ ಮರಿತಿಮ್ಮಯ್ಯ, ತಿಕದ ಮೇಲೆ ಬರೆ ಹಾಕಿಸಿಕೊಂಡ ಚೊಂಗೆತ್ತಿನಂತೆ ಸುಮ್ಮನಾಗಿಬಿಟ್ಟ, ನಾಳೆ ಮೀಟಿಂಗ್‌ನಲ್ಲಿ 'ಈ ಚೇರ್ಮನ್ ಬಟ್ಟೆ ಸುಮ್ಮೆ ಬಿಡಾದಿಲ್ಲ ಬೈರಾ' ಎಂದು ನೆನ್ನೆ ತಾನೆ ಕಾಳಬೈರನ ತಾಂವು ಮಾತಾಡಿದ್ದ ಶಿವನಂಜುವಿನ ದನಿ ಕೇಳಿದ. ಅವನಾತ್ಮದ ಗೆಣೆಕಾರ ಕಾಲದೂತ ಕರೆದುದನ್ನು ಮರೆತು ಮಂಕಾಗಿ ಕುಂತಿರುವೆನಲ್ಲ ಎಂದು ನೆನೆದವನಂತೆ, ತಕ್ಷಣ ಕಂಜರ ಹಿಡಿದು ಮೇಲೆದ್ದ ಕಾಳಬೈರ, ನೆರಕೆಯಿಂದ ಆಚೆಗೆ ಬಂದು ಕಾಲುಗಳನ್ನು ಮೆಲ್ಲ ಮೆಲ್ಲಗೆ ಮಡಗುತ್ತ ಅದೇ ಐದು ವರ್ಷಗಳ ನಂತರದ, ಅದೇ ಮುನಿಸಿಪಾಲಿಟಿ ಎಲೆಕ್ಷನ್ ಸಭೆಗೆ ಅದೇ ಗ್ರಾಮದ ಚೇರ್ಮನ್, ಅದೇ ಸಾತನೂರ ರಾಜಪುರೋಹಿತರಿದ್ದ ಸಭೆಗೆ, ಕವಾಲಿ ಕಾಳಬೈರ ಮುಂದಾದ. ಕಾಳಬೈರ ಸಿದ್ದಪ್ಪಾಜಿ ಗುಡಿಯ ಹಂತಗಳನ್ನು ಒಂದೊಂದರಂತೆ ರಾಜಠೀವಿಯಲಿ ಅತ್ತಿ ಅತ್ತ ದೊಡ್ಡ ಹೊಸ್ತಿಲು ದಾಟುತ್ತಿದ್ದಂತೆಯೇ ಸಭೆಯ ಒಟ್ಟೋರಿ ಸೇರಿದ್ದ ಪರಾಯದ ಗಂಡೈಕಳ ಗುಂಪು 'ಲೋ ಬೈರಣ್ಣನಿಗೆ ಜಾಗ ಬಿಡಲ್ಲ.. ಲೋ ಬೈರಣ್ಣ ಬಂದಾ ಜಾಗ ಕೊಡೊ' ಎನ್ನತೊಡಗಿದರು. ಜಾಗ ಬಿಡಿಸಿಕೊಂಡು ಮುಂದೆ ಬಂದು ಶಿವನಂಜನ ಬಲಗೈ ಹತ್ತಿರವೇ ನಿಂತ ಕಾಳಬೈರ ಮಸಾಣದಲ್ಲಿದ್ದ ಮಕ್ಕಳ ಯಾರನ್ನು ಕೇಳಿ ಕಡೀ? ಊರ ಮಾನನೆಲ್ಲ ಮಾರಿ ಕೇರಿ ದುಡ್ಡಗಾರರಾಗೋ ನಿಮ್ಮಂತೋ ಇನ್ನು ಸುಮ್ಮೆ ಬಿಡೋದಿಲ್ಲ. ಇವತ್ತು ಎರಡರೊಳಗೆ ಒಂತೀರ್ಮಾನ ಆಗ್ಲೆಬೇಕು' ಎಂದವನು ಸವಾಲು ಹಾಕಿದೇಟಿಗೆ, ನೂರಾರು ಕೈಗಳು ಚಪ್ಪಾಳೆ ತಟ್ಟೇಬಿಟ್ಟವು. ಆ ಭಾರಿ ಚಪ್ಪಾಳೆ ನಿಂತದಕ್ಕೂ ಕಾಲದೂತ ಗಡಿಯಾರ ಢಣಾರ್ ಅಂತ ಹನ್ನೆರಡೂವರೆ ಗಂಟೆ ಬಾರಿಸಿದ್ದಕ್ಕೂ ಒಂದೇ ಆಯಿತು. ಸದ್ದುಗದ್ದಲವೆಲ್ಲ ಅಡಗಿ, ಮೌನವೇ ಎದ್ದು ನಿಂತಂತೆ ಸಭೆಯು ಮಾತಿಲ್ಲದ ಮೌನಿ ಬೆಟ್ಟದಂತಿರಲು ಕಾಲದೂತನಾತ್ಮದಲ್ಲಿ ತನ್ನಾತ್ಮದ ದಿಟ್ಟ ನೆಟ್ಟು ನಿಂತು, ಎಡಗೈಯಲ್ಲಿದ್ದ ಕಂಜುರವನ್ನು ಎದೆಮಟ್ಟಕ್ಕೆತ್ತಿಕೊಂಡ ಕಾಳಬೈರನು

ಧಿಮ್ಮ ಧಿಂ ತಕಿಟ

ಧಿಮ್ಮ ಧಿಂ ತಕಿಟ ಧಿಮ್ಮ ಧಿಂ ತಕಿಟ ಧಿಮ್ಮ ಧಿಂ ಧಿಂ

ಎಂದು ತಾಳದ ಸಮತೋಲನ ಪಲ್ಲವಿ ನುಡಿಸಿದ ಕಾಳಭೈರನು, ಭಾರೀ ಎತ್ತರದ ಸೊರದಲ್ಲಿ ತನ್ನ ಒಂದು ನೂತನ ಗಜಲ್ ಹಾಡತೊಡಗಿದನು.

ಪ್ರೇಮಿಗಳ ಪ್ರಾಣ ತೆಗೆದೆ ಮೊಗಲ್ ಬಾದಷ

ಪ್ರೇಮಹತ್ಯೆ ಪಾಪ ನಿನ್ನ ಬೆನ್ನ ಬಿಡದೊ ಮೊಗಲ್ ಬಾದಷ |

ಧನವಸತ್ಯ ಪ್ರೇಮನಿತ್ಯ ಮೊಗಲ್ ಬಾದಷ

ಖುರಾನು ತೊರೆದು ಕುರುಡನಾದ ಮೊಗಲ್ ಬಾದಷ

ಪ್ರೇಮಕ್ಕಾಗಿ ಪ್ರಾಣತ್ಯಾಗಿ ಅವಳೆ ನಿತ್ಯ ಅನಾರ್ಕಲಿ

ಜೊತೆಗೆ ನಡೆದ ಸಲಿಮ್ ನಿಂದ ನಿತ್ಯಸತ್ಯ ಪ್ರೇಮಕಲಿ

ಸದ್ದೆಲ್ಲ ಅಡಗಿಹೋಗಿದ್ದ ಭಾರಿ ಸಭೆಯ ನಡುಮಧ್ಯೆ ಕಾಲದೂತನೆಡೆಗೆ ಅಂತು ನಿಂತ ಕಾಳಭೈರನ ಆತ್ಮವು ಗೌರಿಯ ಜೊತೆಗೂಡಿ ಪ್ರೇಮದ ತೆಜಿಯನೇರಿ, ಕಾಮನ ಬಿಲ್ಲಿನ ಪಥದಲಿ ಸಾಗುತಿರಲು, ಚೇರ್ಮನ್ ಮರಿತಿಮ್ಮಯ್ಯನು 'ತಿನ್ನೋ ಹಿಟ್ಟಿಗೇ ಗತೀಯಿಲ್ಲ ತಿರ್ಕೆ ಬಡ್ಡೆತ್ತದೆ. ಪ್ರೇವ್ವಂತೆ ಪ್ರೇಮ... ನಿನ್ನಂತಾ ಹುಚ್ಚು ಬಡ್ಡೈಕ್ಕಿಂದಾಗಿ ಊರೊಳ್ಗೆ ಇದ್ಯಾಬುದ್ದೀ ಎನೂಯಿಲ್ಲ...' ಅನ್ನಬೇಕಿದ್ದ ಅವನ ಮಾತುಗಳು, ಗಂಟಲಲ್ಲೇ ಸಿಕ್ಕಿಕೊಂಡು ಅವನ ಕತ್ತಿನ ಮ್ಯಾಳೆ ಊದಿಕೊಂಡಿತ್ತು. ಸೂಜಿ ಸದ್ದೂ ಪುಟಿವ ನಿಃಶಬ್ದದ ಭಾರಿ ಕಟ್ಟಡದೊಳಗೆ ಮಾರ್ಮೊಳಗಿದ ಕಾಳಭೈರನ ಗಜಲ್‌ನಿಂದಾಗಿ ಮೊಗಲರ ಪ್ರಾಚೀನ ಕಟ್ಟಡದ ಕಂಬಗಳಿಗೆ ಜೀವ ಬಂದು ಉಸಿರಾಡುತ್ತಿವೆಯೋ ಎಂಬಂತೆ, ಸಭೆಯ ಜನವೆಲ್ಲ ನಿಂತುಬಿಟ್ಟಿತ್ತು. ಕಾಳಭೈರನ ಬಾಳನ್ನು ಬಹುವಾಗಿಯೇ ಬಲ್ಲ ಆ ಸಭೆಯಲ್ಲಿ ಆ ಹೊತ್ತಿನಲ್ಲಿ ಎಂದಿಲ್ಲದ ಭಾವಾವೇಷದ ಭಾರೀ ಅಲೆಯೆದ್ದು, ಆ ಅಲೆಯನ್ನು ಭೇದಿಸಲಾರನೆಂದು ಮನಗಂಡು ರಾಜಪುರೋಹಿತರು ಕುಂತ ಜಾಗದಿಂದ ಮೇಲೇಳಲಾಗದೆ, ಬದಲಾಗಿ ಅಂಗುಲ ಅಂಗುಲವೇ ಅವರು ಪಾತಾಳಕ್ಕಿಳಿಯುತ್ತಿರುವುದು ಕಾಣುತ್ತಿತ್ತು. ಊರೆಲ್ಲ ಅನ್ನುತ್ತಿದ್ದಂಥ ಮಸಾಣದ ನೇರಳೆಮರ ಮತ್ತು ಬೇವಿನ ಮರದ ಮೇಲಿದ್ದ ಜೋಡಿಪೀಡೆಗಳು ಅವರ ಪಕ್ಕದಲ್ಲೇ ಕುಂತಿದ್ದ ಚೇರ್ಮನ್ ಮರಿತಿಮ್ಮಯ್ಯನ ಮೆಟರೆ ಮಿಸುಗುತ್ತಿದ್ದುದರಿಂದ, ಅವನೆರಡು ಕಣ್ಣಿನ ಗುಡ್ಡೆಗಳು ಇನ್ನೇನು ಧರೆಗುರುಳುವಂತೆ ಕಾಣುತ್ತಿದ್ದವು.

## ೬. ಕಳ್ಳುಬಳ್ಳಿ

**ಬಿ.ಟಿ.ಜಾಹ್ನವಿ**

ಕೆಂಚನಿಗೆ ಕಣ್ಣು ಎಳೆಯುತ್ತಿದ್ದವು. ಗಂಟೆ ಆಗಲೇ ಹತ್ತಾಗಿತ್ತು. ಆದರೂ ಉಣ್ಣುವವರಿನ್ನೂ ಇದ್ದರು. ಎಲ್ಲರೂ ಉಂಡ ಮೇಲೆ ಪಾತ್ರೆಗಳನ್ನೆಲ್ಲ ಬೆಳಗಿ, ನೆಲ ಗುಡಿಸಿ, ಒರೆಸಿ ಮಗ ತಿದ್ದ ನೆಲ ಕಾಣುವ ಹೊತ್ತಿಗೆ ಹನ್ನೊಂದಾದರೂ ಆಯ್ತು ಹನ್ನೆರಡಾದರೂ ಆಯ್ತು. ಹತ್ತು ವರ್ಷದ ತಿಪ್ಪ ಬೆಳಗ್ಗಿನಿಂದ ಈ ಮನೆಯ ಕೆಲಸ ಮಾಡಿ, ಮಾಡಿ ಸೋತು ಸುಣ್ಣ ಆಗಿದ್ದ .

ಈ ಮನೆಯ ಯಜಮಾನರು ಶಿವಣ್ಣ ಮತ್ತು ಇಂದ್ರ, ನಾಳೆಯೇ ಅವರ ಒಬ್ಬನೇ ಮಗ ರಾಜುವಿನ ಹನ್ನೆರಡನೇ ವರ್ಷದ ಹುಟ್ಟುಹಬ್ಬ ಇಂದೇ ಬಂಧು ಬಳಗವೆಲ್ಲ ಬಂದಿಳಿದಿತ್ತು. ಅವರುಗಳೆಲ್ಲ ಉಂಡು ಮುಗಿಸುವ ತನಕ ತಿಪ್ಪನ ಹೊಟ್ಟೆಯೂ ಖಾಲಿ.

ಹೆಂಡತಿ ಬಸ್ವಿಯ ಬಳಿ ತಿಪ್ಪನನ್ನು ಕರೆತರುವೆ ಉಗಾದಿ ಹಬ್ಬಕ್ಕೆ ಅಂತ ಹೇಳಿ ಬಂದಿದ್ದ. ಆದರೆ ಶಿವಣ್ಣನ ಮನೆಗೆ ಬಂದಾಗ ಆ ವಿಷಯ ಮಾತಾಡಲೇ ಇಲ್ಲ. ಬದಲಿಗೆ ದುಡ್ಡಿಗಾಗಿ ಬಂದಿದ್ದೆ ಎಂದಿದ್ದ. ತಿಪ್ಪನನ್ನು ಊರಿಗೆ ಕರೆದುಕೊಂಡು ಹೋಗಬಾರದೆಂದೇನೂ ಇರಲಿಲ್ಲ ಅವನಿಗೆ. ಆದರೆ ಮಗನನ್ನು ನೋಡಿ ಬಸ್ವಿ ಮತ್ತೆಲ್ಲಾದರೂ ಮನಸ್ಸನ್ನ ಬದಲಾಯಿಸಿ, ರಂಪ ತೆಗೆದು ಗಲಾಟೆ ಮಾಡಿದರೆ ಎಲ್ಲಿ ಸಹವಾಸ ಅಂತ ಆ ವಿಚಾರವನ್ನೇ ಕೈಬಿಟ್ಟಿದ್ದ. ಸಾಮಾನ್ಯವಾಗಿ ಅವನು ಶಿವಣ್ಣನ ಮನೆಯ ಬಳಿಗೆ ಬರುತ್ತಿರಲಿಲ್ಲ. ಆಫೀಸಿನ ಬಳಿಯೆ ಹೋಗಿಬರುತ್ತಿದ್ದ. ಆದರೆ ಇಂದು ರಜೆವಿದ್ದುದರಿಂದ ಮನೆಗೆ ಬಂದಿದ್ದ. ಇಲ್ಲಿ ಮಗನ ದುಡಿತದ ಅಂದಾಜು ಈಗವನಿಗೆ ಅರಿವಾಗಿತ್ತು . ಒಳಗೊಳಗೇ ಸಂಕಟವೂ ಆಯ್ತು.

ಕೆಂಚನಿಗೆ ನಾಲ್ಕು ಮಕ್ಕಳು, ರತ್ನ, ಮಲ್ಲಿ ಕೆಂಚಿ, ತಿಪ್ಪ , ತಿಪ್ಪನೇ ಕಿರಿಯವನು. ಅಂತೆಯೇ ಅವ್ವನ ಕಣ್ಮಣಿ, ಕಿರಿಮಗಳು ಕೆಂಚಿಯೊಬ್ಬಳೇ ಉಳಿದು ಇನ್ನಿಬ್ಬರು ಹಿರಿಯರಿಗೆ ಮದ್ದೆಯಾಗಿತ್ತು . ಕೈಯಲ್ಲಿ ಬಿಡಿಗಾಸು ಇರಲಿಲ್ಲವಾದ್ದರಿಂದ ಮುಂದಿನ ವರ್ಷಕ್ಕೇ ಅವಳ ಮದುವೆ. ಹುಡುಗನೂ ಗೊತ್ತಾಗಿದ್ದ. ಆದರೆ ಅಷ್ಟರೊಳಗೆ ಬೆಳಗ್ಗೆ ಚೆಂಬು ತೆಗೆದುಕೊಂಡು ಹೋದಾಗೋ, ಮಧ್ಯಾಹ್ನ ಅಪ್ಪಯ್ಯನಿಗೆ ಬುತ್ತಿ ಒಯ್ದಾಗ ಬಂಡೆ ಅಡಿಯಲ್ಲೋ, ಬಣವೆ ಮರೆಯಲ್ಲೋ ಕೆಂಚಿ, ಅವಳ ಭಾವಿ ಗಂಡ ಕೂಡಿ ಮಾಡಿದ ಪ್ರೀತಿಯ ಕಾವಿಗೆ ಕೆಂಚಿ ಕಕ್ಕಿಕೊಳ್ಳತೊಡಗಿದ್ದಳು. ಆ ಕ್ಷಣವೇ ಮದುವೆ ಮುಗಿಸಬೇಕಿತ್ತು. ಎಲ್ಲೂ ದುಡ್ಡು ಸಿಗದಿದ್ದಾಗ ಆ ಊರಿನ ಲಿಂಗಾಯತರ ರಾಮಣ್ಣನ

ಸಲಹೆಯಂತೆ, ಸ್ಕೂಲಿಗೆ ಹೋಗುತ್ತಿದ್ದ ತಿಪ್ಪನನ್ನು ಅವರ ಮನೆಯಲ್ಲಿ ಇಟ್ಟು, ದುಡ್ಡು ಇಸಿದುಕೊಂಡು ಬಂದಿದ್ದ ಕೆಂಚ. ತನ್ನ ಕರುಳನ್ನು ಬಗಿದು ಒಯ್ಯುತ್ತಿರುವರೇನೋ ಎಂಬಂತೆ ಗೋಳಾಡಿದ್ದಳು ಬಸ್ವಿ ತಿಪ್ಪನ್ನ ಕರೆದೊಯ್ಯುವಾಗ!

"ನಮ್ ಪಡಿಪಾಟ್ಲು ನಮ್ ಬವಣೆ ಆ ಮಗಿಗೆ ಬ್ಯಾಡ ಅಂತ ಇಸ್ಕೂಲಿಗಾಕಿದ್ರೆ ಇವತ್ತು ಅದಕ್ಕೂ ಕಲ್ಲು ಬಿತ್ತು. ನನ್ನಗನಿಗೂ ಕಂಡೋರ್ಮನೆ ಚಾಕರೀನೆ ಗತಿಯಾಯ್ತಲ್ಲಾ ".. ಅಂತ ಬಡಬಡಿಸಿದ್ದಳು.

ಹೇಗೋ ಆರು ತಿಂಗಳು ಕಾಲ ಹಾಕುವ ಹೊತ್ತಿಗೆ ಸಾಕುಸಾಕಾಯ್ತು. ಅಳುತ್ತ ಕರೆಯುತ್ತ ಉಪವಾಸ ವನವಾಸ ಮಾಡಿ ನೆಲ ಕಚ್ಚಿ ಮಲಗಿಬಿಟ್ಟಳು ಆಕೆ. ಮೊಮ್ಮಕ್ಕಳನ್ನ ಕಂಡಿದ್ದರೂ ಇನ್ನೂ ಗಟ್ಟಿಮುಟ್ಟಾಗಿ ಬಿರುಸಾಗಿದ್ದ ಬಸ್ವಿ, ನಾಲ್ಕಾಳು ಕೆಲಸವನ್ನು ಒಬ್ಬಳೇ ಮಾಡಿ ಬಿಸಾಕುವಂತಹ ಹೆಣ್ಣು, ಆಕೆ ಮೇಲೇಳದ ಹಾಗೆ ಮಲಗಿದಾಗ ಕೆಂಚ ನಿಜಕ್ಕೂ ಹೆದರಿದ.

ಕೆಂಚನಿಗೆ ಅವಳೆಂದರೆ ಒಂಥರ ಭಯ ಸಿಟ್ಟು, ಪ್ರೀತಿ ಎಲ್ಲವೂ ಇತ್ತು. ಅವಳ ಜೊತೆಯಿಲ್ಲದ ಅವನಿಂದ ಏನೊಂದು ಕೆಲಸವೂ ಸಾಧ್ಯವೇ ಇರಲಿಲ್ಲ. ಆದರೀಗ ಪೂರ್ತಿ ಹೆದರಿದ. ಎದ್ದೆನೋ ಬಿದ್ದೆನೋ ಅಂತ ತನ್ನ ಹಿರಿಮಗಳು ರತ್ನಿಯ ಊರಿಗೆ ಓಡಿದ, ಅಳಿಯ ವೀರೇಶಿ ಮುನ್ಸಿಪಾಲಿಟಿ ಕ್ಲೀನರೂ ಕೆಲಸ ಸಿಕ್ಕು ಎರಡು ವರ್ಷಗಳಾಗಿದ್ದವು. ಆ ಮೊದಲು ಈರೇಸಿ ಆಗಿದ್ದೋನು ಕೆಲಸ ಸಿಕ್ಕನಂತರ ವಿರೇಶಿ ಆಗಿದ್ದ . ಮಗಳು ಆಳಿಯನ ಎದುರಿಗೆ ತನ್ನ ಕಷ್ಟ ಹೇಳಿಕೊಂಡ ಕೆಂಚ

"ಏನನ ಮಾಡ್ರಪ್ಪ.. ಬಸ್ವಿ ನೆಲ ಹಿಡ್ದು ಮಲ್ಗಿದ್ರೆ ನನ್ ಕೈಕಾಲು ಬಿದ್ದೋದಂಗೆಯ" ಅಂದ.

"ಸುಮ್ಕೆ ನಾನೆಳ್ದಂಗೆ ಮಾಡ್ಮಾವ, ಎಲ್ಲಾನ ಒಂದೈನೂರು ಜೋಡಿಸ್ಕೆಂಡು ಹೋಗಿ ಮಗನ್ನ ಕರ್ಕಂಡಾ, ಯಂಗ ಆರ್ತಿಂಗ್ಳು ಆಗೋಗ್ಯೆತೆ. ಇನ್ನಾರ್ತಿಂಗ್ಳುಗೆ ಐನೂರು ಸರಿವೋಗ್ಯೆತೆ.." ಅಂತ ಸಲಹೆ ಕೊಟ್ಟ ವೀರೇಶಿ.

"ಅಯ್ಯೋ ನನ್ತಾವೆಲ್ಲೆದೋ ವಿರೇಸಿ ಆಟೋಂದುಡ್ಡು ನಾನೆಲ್ಲಿಂದ ವೊಂದ್ಸಾನೇಳು ?" ಕೆಂಚ ಗೋಳಾಡಿ, ಕಾಡಿ ಬೇಡಿದಾಗ ವೀರೇಶಿ ಒಂದಿನ ತಡೆದು ಮಾವನ ಕೈಗೆ ಐನೂರು ಕೊಟ್ಟು ಹೇಳಿದ.

"ನೋಡ್ಮಾವ ಯೇನೋ ಸ್ನೇಹಿತ ಅಂತ ಹುಸೇನಣ್ಣ ಮೂರ್ತಿಂಗ್ಳು ಗಡುವು ಹೇಳಿ ಬಡ್ಡಿಯಿಲ್ಲದಂಗೆ ದುಡ್ಡು ಕೊಟ್ಟವ್ನೆ ಆಡ್ರೊಳ್ಗೆ ನೀನೇನ ದುಡ್ಡು ವೊಂದಿಸಿಲ್ಲಾಂದ್ರೆ ನೂರಕ್ಕೆ ಹತ್ತರಂಗೆ ಬಡ್ಡಿಯಾಗ್ಯೆತೆ ನೋಡ್ಮತ್ತೆ

"ಇಲ್ಲಪ್ಪ ಆಟೋತ್ತಿಗೆ ಯಂಗಾನ ಮಾಡಿ ನಾನೆಲ್ಲ ವೊಂದುಸ್ತೀನಿ" ಅಂತ ಹೇಳಿ ಊರ ಕಡೆಗೆ ಓಟಕಿತ್ತಿದ್ದ ಕೆಂಚ.

ಅವನಿಗೆ ಕೊನೆಗೂ ತಿಳೀಲಿಲ್ಲ ಐನೂರು ವೀರೇಶಿಯ ಅಣ್ಣ ಮಾರಪ್ಪ ಕೊಟ್ಟಿದ್ದು ಅಂತ. ತನ್ನದು ಅಂತ ಹೇಳಿದರೆ ದುಡ್ಡು ವಾಪಸ್ಸು ಬರುತ್ತೋ ಇಲ್ಲವೋ



ಅಂತ ಮಾರಪ್ಪನೇ ವೀರೇಶಿ ಕೈಲಿ ಹಾಗೇ ಹೇಳಿಸಿದ್ದ. ಅದಕ್ಕೆ ರತ್ನಿಯೂ ಸಮ್ಮತಿಸಿದ್ದಳು.

ಕೆಂಚ ತಿಪ್ಪ ನ್ನ ಕರೆದುಕೊಂಡು ಬಂದ ದಿನ ನೋಡಬೇಕಿತ್ತು ತಾಯಿ ಮಗನ ಸಂತೋಷನ.

"ಅವ್ವಾ " ಅಂತ ಓಡಿಬಂದ ಮಗನನ್ನು "ತಿಪ್ಪಾ ಬಂದ್ಯಾ ಸಾಮಿ.." ಅಂತ ಎದೆಗೆ ಅವಚಿಕೊಂಡು, ಮುಖದ ತುಂಬಾ ಮುತ್ತು ಸುರಿಸಿದ್ದು ಬಸ್ವಿ, ಅವ ಅಪ್ಪುಗೆಯಲ್ಲಿ ಕರಗಿ, ಅವಳೆದೆಯಲ್ಲಿ ಮುಖವುದುಗಿಸಿದ್ದ ತಿಪ್ಪ .

ಹಿಂದಿನ ನೆನಪಿನಲ್ಲಿ ಎಲ್ಲೋ ತೇಲಿ ಹೋಗಿದ್ದ ಕೆಂಚನನ್ನು ಶಿವಣ್ಣನ ದನಿ ಎಚ್ಚರಿಸಿತು. "ಹೋಗಯ್ಯ ನೀನೆದ್ದು ಹೋಗಿ ಮಲ್ಕೋ ಹೋಗು ಇಲ್ಲಿ ಕುಂತ್ಕಂಡು ಏನ್ಮಾಡ್ತಿದ್ದ ? ನಾನು ಮಧ್ಯಾಹ್ನವೇ ನಿನಗೆ ಹೇಳಿದ್ದೀನಿ ಈಗ ನನ್ನತ್ರ ದುಡ್ಡಿಲ್ಲ" ಅಂತ ಇವನನ್ನು ನೋಡಿ ಶಿವಣ್ಣ ಹೇಳಿದ.

"ಅಂಗದ್ಗೆಂಗಣ್ಣಾ ? ವೋಗ್ಲಿ ಐನೂರಿಲ್ದಿದ್ರೋಟೆವೋತು ಒಂದಿನ್ನೂರಾನ ಕೊಡು

ತಲೆ ಕೆರೆಯುತ್ತಾ ಕೇಳಿದ ಕೆಂಚ

"ಏನೂ? ಮಾತ್ಮಾತಿಗೂ ದುಡ್ಡು, ದುಡ್ಡು ಅಂತೀರಲ್ಲ ನಾನೇನಿಲ್ಲಿ ದುಡ್ಡಿನ್ಮರಗಿರ ಹಾಕಿದ್ದೀನಿ ಅಂದ್ಕಂಡಿರೇನು?" ಕೆರಳಿದ ಶಿವಣ್ಣ, "ಅಂಗಲ್ಲಣ್ಣಾ .." ಅಂದ ಕೆಂಚನನ್ನು ಅರ್ಧಕ್ಕೆ ತಡೆದು "ನೋಡು ಕೆಂಚ ಹಂಗೂ ಇಲ್ಲ ಯಂಗೂ ಇಲ್ಲ. ಈಗ ಇಲ್ಲಾಂದ್ರೆ ಇಲ್ಲಿ ಅಷ್ಟೆ. ಆ ಹುಡುಗನನ್ನು ಕರ್ಕಂಡು ಬಂದ ದಿನವೇ ಒಂದು ಸಾವಿರ ಇಸ್ಕಂಡೋದ್ರಿ ನೀವು. ಮತ್ತೆ ಆಫೀಸಿನತ್ತ ಒಂದಿನ ಬಂದು ಮುನ್ನೂರು ಇಸ್ಕಂಡಿದ್ದೀಯ ಮತ್ತೆ ಕೊಡು ಅಂದ್ರೆ ಯಂಗೆ.. ? ಇನ್ನೇನಿದ್ರೂ ಈ ವರ್ಷದ ಕೊನೆಗೆ, ಅಲ್ಲಿಯವರೆಗೂ ಏನೂ ಇಲ್ಲ

ಅಷ್ಟೇಳಿ ಶಿವಣ್ಣ ತನ್ನ ಕೋಣೆಯತ್ತ ಹೊರಟ.

ಯಾಕೋ ತಾನು ಬಂದ ಕೆಲಸ ಎಡವಟ್ಟಾಗಿ ಕಾಣಿಸ್ತು ಕೆಂಚನಿಗೆ.

"ಯಂತಾ ಕೆಲ್ಸ ಆತಲ್ಲ ಆ ವುಡ್ಕನ್ನಾರ ಊರಿಗೆ ಕರ್ಕಂಡೋಗ್ತಹುದಿತ್ತು . ಕೆಂಚ ಒಬ್ಬನೆ ಒದ್ದಾಡಿಕೊಂಡ.

ಅಡುಗೆ ಮನೆಯಲ್ಲಿ ನಿದ್ದೆ ಮೆತ್ತಿದಂತಿದ್ದ ಕಣ್ಣುಗಳ ರೆಪ್ಪೆಯನ್ನು ತೆರೆಯಲಾರದೆ ತೆರೆಯುತ್ತ ಕಸಗುಡಿಸುತ್ತಿದ್ದ ತಿಪ್ಪನನ್ನೇ ನೋಡಿದ. ಹುಡುಗ ಬಹಳ ಸೊರಗಿದ್ದ. ಕಣ್ಣು, ಗಲ್ಲ ಎಲ್ಲಾ ಒಳಕ್ಕೋಗಿ, ಗುಳಿ ಬಿದ್ದಿದ್ದವು. ಹೇಗೋ ಆಡಿಕೊಂಡು ಮಾಡಿಕೊಂಡು ಶಾಲೆಗೆ ಹೋಗುತ್ತಿದ್ದ ಅವನು ರಾಮಣ್ಣನ ಮನೇಲಿ ಬಿಡೋಕ್ಕುಂಚೆ. ಬಿಡಿಸಿದ್ದೆ ಬಂತು ಆಮೇಲೆ ಅತ್ತ ಕಡೆ ತಲೆ ಹಾಕಲಿಲ್ಲ. ಅವನು ಆನಂತರ ಹಳ್ಳಿಯಲ್ಲಿ ಇದ್ದಿದ್ದಾರೂ ಕೇವಲ ಮೂರು ತಿಂಗಳು ಅಷ್ಟೆ .



ಕೆಂಚನಿಗೆ ಬಸ್ವಿಯ ಮಾತುಗಳು ನೆನಪಾದವು.

"ನನ್ ಮಗಿನ ಮತ್ತೆ ದೂರ ಮಾಡ್ಬಿಟ್ಯಲ್ಲಾ ..? ನಿನಗೆಂಗೆ ಅರಿವಾದೀತೇಳು ನನ್ ವಟ್ಟೆ ಸಂಕ್ಟಾ ನೀನೇನ್ ವತ್ಗಂಡನಲ್ಲ . ಹಡ್ದನಲ್ಲ "

ಎಂದು ಮಗನ ನೆನಪು ಬಂದಾಗಲೆಲ್ಲ ಗೋಳಾಡುತ್ತಿದ್ದಳಾಕೆ. ಆದರೆ ಇದ್ದ ಅಲ್ಪಸ್ವಲ್ಪ ಭೂಮಿಯ ಬಗೆಗಿದ್ದ ಮಮಕಾರ, ಅದಕ್ಕೇ ಬಿತ್ತುವ ಬೀಜ, ಹಾಕುವ ಗೊಬ್ಬರಕ್ಕೆ ದುಡ್ಡಾಗುವುದಲ್ಲ ಎಂಬ ಆಸೆ ತನ್ನನ್ನು ನಿಷ್ಠೂರನನ್ನ ಮಾಡಿದ್ದವು.

ರಾಮಣ್ಣನ ಮನೆಯಿಂದ ಬಂದ ಮೇಲೆ ಅವ್ವನ ಆರೈಕೆಯಲ್ಲಿ ತಿಪ್ಪ ಬಲು ಕಳೆಕಳೆಯಾಗಿದ್ದ. ಆಕೆ ಹಟ್ಟಿಯಲ್ಲಿ ಸಾಕಿದ್ದ ಕೋಳಿಗಳನ್ನು ವಾರಕ್ಕೊಂದರಂತೆ ತಿಪ್ಪನಿಗಾಗಿ ಕೊಯ್ದು, ಬಿಸಿಯಾದ ಮುದ್ದೆ ಇಕ್ಕಿದರೆ ಸರಿಯಾಗಿ ಹೊಡೆಯುತ್ತಿದ್ದ. ಬಸ್ವಿಯಾದರೂ ಮಗನಿಗೆ ಬರಿಯ ಉಣ್ಣಿಸುತ್ತ ಸುಮ್ಮನಿರಲಿಲ್ಲ. ರಾಮಣ್ಣನ ಮನೆಯಿಂದ ಬಂದೊಡನೆ ಆ ಊರಿನ ಸ್ಕೂಲಿನ ಮೇಷ್ಟರ ಬಳಿಗೆ ಕರೆದೊಯ್ದುಳು. ಆದರೆ "ಈ ವರ್ಷ ಮುಗಿಯಲಿ" ಎಂದು ಹೇಳಿದ್ದರವರು. ಅಪ್ಪ ಅವ್ವನ ಜೊತೆಯಲ್ಲಿ ಉಂಡಾಡಿಕೊಂಡು ಹೇಗೋ ಮಜವಾಗಿದ್ದ ತಿಪ್ಪ ಅವನ ಅಕ್ಕ ರತ್ನ ಊರಿನಿಂದ ಬಂದು ಅಪ್ಪನನ್ನು ಜೊತೆಯಲ್ಲಿ ಊರಿಗೆ ಕರೆದೊಯ್ಯುವ ತನಕ, ಅಲ್ಲಿಂದ ವಾಪಸ್ಸು ಬಂದಾಗ ಅವನು ಸುಮ್ಮನೆ ಬರಲಿಲ್ಲ. ಬದಲಾಗಿದ್ದ . ಹೆಂಗೋ ಇದ್ದ ಚೂರುಪಾರು ಹೊಲದಲ್ಲಿ ಗಂಡ ಹೆಂಡತಿ, ಮಗನಿಗೆ ಎರಡು ಹೊತ್ತಿನ ಊಟಕ್ಕೆ ಆಗುವಷ್ಟು ಕಾಳುಕಡ್ಡಿ ಬೆಳೆದುಕೊಂಡು ತನ್ನ ಪಾಡಿಗೆ ತಾನು ಕಾಲ ಹಾಕುತ್ತಿದ್ದ. ಆದರೆ ವೀರೇಶಿ ಅವನ ಅಣ್ಣ ಮಾರಣ್ಣ ಇಬ್ಬರು ಸೇರಿ ಕೆಂಚನ ತಲೆಯನ್ನು ಕೆಡಿಸಿಟ್ಟಿದ್ದರು. ಶಿವಣ್ಣ ಮೇಲಧಿಕಾರಿ ಮಾರಣ್ಣನಿಗೆ ತನ್ನ ಮನೆಯಲ್ಲಿ ಒಬ್ಬ ಹುಡುಗ ಕೆಲಸಕ್ಕೆ ಬೇಕು, ನಮ್ಮ ಪೈಕಿನೆ ಯಾರಾದರು ಇದ್ದರೆ ಹೇಳು" ಎಂದಿದ್ದ ಮಾರಣ್ಣನ ಬಳಿ, ಶಿವಣ್ಣ ಕೆಂಚನಿಗೂ ದೂರದ ಸಂಬಂಧಿ.

ಮಾರಣ್ಣ ಆ ಮಾತನ್ನು ವೀರೇಶಿ, ರತ್ನಿ ಮುಂದೆ ಹೇಳಿದಾಗ ರತ್ನಿಗೆ ತಕ್ಷಣವೆ ತಿಪ್ಪನ ನೆನಪಾಗಿ

“ಸುಮ್ಕೆ ತಿಂದ್ತಿಂದು ತಿರುಗಾ ಬದ್ಲು ಅವರ್ಮನೆಯಾಗೆ ಬಿದ್ದಿರ್ಲೇಳು. ಕೈಯಾಗ್ನಾಕು ಕಾಸರ ಅಕ್ತಾವೆ..” ಅನ್ನುತ್ತ ಹಿಂದೆಯೇ ಊರಿಗೆ ಹೊರಟು ಬಂದು ಅಪ್ಪನ್ನ ಜೊತೆಗೆ ಕರೆದೊಯ್ದಿದ್ದಳು. ಅಣ್ಣ ತಮ್ಮ ಇಬ್ಬರು ಸೇರಿ ಹೇಳಿದ್ದರು ಕೆಂಚನಿಗೆ

“ನೋಡು, ಬಂಗಾರ ಬೆಳಿಯಾಂತ ಭೂಮಿ ಐತೆ. ಸುಮ್ಕೆ ಯಾಕೆ ಅನ್ಯಾಯ ಮಾಡ್ಕಂತಿಯಾ ? ಶಿವಣ್ಣನಿಗೆ ಬೇಕಾದಂಗೈತೆ. ಹೆಣ್ತೆನೂ ದುಡೀತಾಳೆ. ಇರಾನೊಬ್ಬಗ ಅವ್ರಿಗೆ. ನಿನ್ನಗೆ ಅವರ ಮನ್ಯಾಗ ಚೂರ್ವಾರು ಮೇಲಿನ ಕೆಲ್ಸ ಮಾಡ್ಕಂಡು ಬಿದ್ದಿದ್ರೆ ಸಾಕು.. ದುಡ್ಡಿನ ಯೋಚೆನೇ ಮಾಡ್ಯಾಡ್ರಿ ನೀವು.. ಅವೇನೆಂಗೂ ಬ್ಯಾರೆಯಲ್ಲ ನಮ್ಮೋರೆ ಕಳ್ಳುಬಳ್ಳಿ . ಮಗ ನಮ್ಮನ್ಯಾಗೆ ಇದ್ದಂಗೇ ಇರ್ತಾನೆ.. ಬರ ದುಡ್ಡ ವೊಲಕ್ಕೊಗ್ದು ವಳ್ಳೆ ಬೆಳೆ ಬೆಳ್ಕಂಡು ಬಂಗಾರಂಗಿರ್ಬಹ್ದು. ಖರೆಯಾಗ್ಲು ಮಾವಯ್ಯ ನೀನಾ ಮನೆ ನೋಡ್ಬೇಕು ದಂಗಾಗೋಗ್ತಿ . ಆ ಮನ್ಯಾಗಿರಾಕೆ ನಿನ್ಮಗ ಪುಣ್ಯ ಮಾಡಿರ್ಬೇಕು"



ಕೆಂಚ ಅವರುಗಳು ಹೇಳೋದನ್ನ ಕೇಳಿಯೇ ದಂಗಾಗಿದ್ದ. “ನಂದೇನೈತಪ್ಪ ನಾನೀಗ್ಲೆ ಕಳುಸ್ತಿ. ಆದ್ರೆ ನಮ್ ಬಸ್ವಿನ್ ವೊಪ್ಸಾದೇ ಬಲು ಕಷ್ಟ.” ಅಂದ.

“ನಿನಗ್ಯಾಕ ಯೋಚೆ ಬಿಡ್ಮಾವ.. ನೀನ್ಸುಮ್ನೆ ಏನೂ ಗೊತ್ತಿಲ್ದಂಗಿರು. ಅಷ್ಟರ ಮ್ಯಾಲೆ ಅತ್ತೆ ಯಾಕೋಗಿದ್ದೆ ಅಂತೇಳಿದ್ರೆ ವೀರೇಶಿ ದುಡ್ಡಿಗೆ ಹೇಳಿ ಕಳಿಸಿದ್ದ ಅಂತೇಳು. ಮುಂದಿಂದು ನಮುಗ್ಬಿಡು..” ವೀರೇಶಿ ಹೇಳ್ದಾಗ ಕೆಂಚ ಅದಕ್ಕೆ ತಲೆಯಾಡಿಸಿದ್ದ .

ಅಂದ ಹಾಗೆ ಮರುದಿನವೇ ಮಾರಣ್ಣ ಊರಿಂದ ಬಂದಿಳಿದ. ಬಹಳ  ವರ್ಷಕ್ಕೆ ಬಂದ ಮಾರಣ್ಣನ ನೋಡಿ ಸಡಗರಪಟ್ಟಳು ಬಸ್ವಿ . ರಾತ್ರಿ ಕೋಳಿ ಕೊಯ್ದು, ಎಸರಿಟ್ಟು ಮುದ್ದೆ ಮಾಡಿ, ಅವರಿಬ್ಬರನ್ನು ಊಟಕ್ಕೆಬ್ಬಿಸಿದ್ದು, ತಿಪ್ಪ ಹೊಟ್ಟೆಯ ತುಂಬ ಬರಿ ತುಂಡು ತಿಂದು ಮಲಗಿದ್ದ ಆಗಲೇ ಮುದ್ದೆ ಮುರಂಡು, ಸಾರಿನಲ್ಲಿ ಹೊರಳಾಡಿಸುತ್ತ ಹೇಳಿದ ಮಾರಣ್ಣ. “ವೀರೇಶಿ ಬಹಳ ಬೇಜಾರಾಡ್ಕೊಂಡವನೆ ಕೆಂಚ ಯಂಗನ ಮಾಡಿ ಆ ಸಾಬಿ ದುಡ್ಡು ಕೊಡು..”

“ಅಲ್ಮಾರಣ್ಣ ನೀನೂ ವೀರೇಸಿಯಂಗೇ ಮಾತಾಡ್ತಿಯಲ್ಲ ..? ಆಟೋಂದುಡ್ಡು ನಾನೆಲ್ಲಿಂದ ವೊಂದುಸ್ಲಿಲ್ಲೆಯೇಳು?” ಬಾಯಿ ಜೋರಾಗೇ ಮಾಡಿದ್ದ ಕೆಂಚ.

“ಅಲ್ಲಪ್ಪ ಎಲ್ಲಿಂದ ತರ್ಲಿ   ಅಂದ್ರೆಂಗ ? ಕೊಡಕಾಗ್ದಿದ್ಯಾಕೆ ಯಾಕೆ ಇಸ್ಕಂಡೆ ? ಇಸ್ಕಂಡ್ಮ್ಯಾಕೆ ಯಂಗನ ಮಾಡಿ ಕೊಡ್ಬೇಕಪ್ಪ . ಇಲ್ಲಾಂತಂದ್ರೆ ಯಾರ್ಕೇಳ್ತಾರೆ?”

ಕೆಂಚ ಮೂಳೆ ಕಟಕಟ ಕಡಿದ. "ನಾನೇನ್ಮಾಡನ ಮಾರಣ್ಣ ? ಇರಾದೀಟು ಭೂಮಿಯ ಯಾರಾವನ ಅಡವಿಡ್ಬೇಕಟೆಯ "

ಈ ಮಾತು ಕೇಳಿದ್ದೆ ಮಾರಣ್ಣ ಹಲ್ಲಿಯಂಗೆ ಲೊಚುಗುಟ್ಟಿದ.

"ಅಯ್ಯ ಇಷ್ಟೊಂದು ಸಣ್ಣಿಷ್ಯಕ್ಕೆ ಏಟೊಂದು ತಲೆಕೆಡ್ಲಿಕೆಂತಿಯಲ್ಲಾ ನೀನೂ .?"

"ನೋಡ್ಕೆಂಚ ನಾನೊಂದ್ಮಾತು ಹೇಳ್ತಿನಿ ಕೇಳಿಯಾ? ನಾನೇಳಾದು ನಿನ್ನ ಬಲಕ್ಕೈಯಾ ಮತ್ತೆ ನೀನು ಮತ್ತು ಸಣ್ಣಿಗ್ಮಾಡ್ಕೆಬಾರ್ದು

ಈ ಮಾತು ಕೇಳಿದ ತಕ್ಷಣ ಹೇಳಿದ್ದ ಕೆಂಚ

"ಅಯ್ಯ ಎಲ್ಲಾದ್ರುಂಟೇನಣ್ಣಾ ? ಅದೇನೋಳು.." ಹೇಳುತ್ತಲೇ ಹೆಂಡತಿಯನ್ನು ಕೂಗಿ ಕರೆದ ಲೇ ಬಸ್ವಿ ಮಾರಣ್ಣನಿಗೆ ಇನ್ನೊಂದಾಕು ತುಂಡಾಕೆ ಅಂದ.

ತಟ್ಟೆಗೆ ತುಂಡು ಬೀಳುತ್ತಲೇ ಶುರುಮಾಡಿದ ಮಾರಣ್ಣ "ನಮ್ಮ ಅಫೀಸರು ಶಿವಣ್ಣ ಗೊತ್ತೆತಲ್ಲ ಕೆಂಚ ? ಅದೇ ನಿಮ್ ಬಸಜ್ಜನ ಮೊಮ್ಮಗ"

ಅಲೆ ಗೊತ್ತಿಲ್ಲೇನೇಳು ಮಾರಣ್ಣ ನೋಡಿ ಭಾಳ ವರ್ಸಾತು ಅಂದ್ರೆ

ಅವರಿಬ್ಬರ ಮಾತುಗಳನ್ನು ಆಲಿಸಿ ಬಸ್ವಿ ಕಿವಿ ನಿಮಿರಿಸಿ ಕೂತಳು.

"ಶಿವಣ್ಣನ ಮನ್ಯಾಗೆ ಇರೋರು ಮೂರ್ಜನ, ಗಂಡಯೆಣ್ತಿ, ಮಗ, ಆಯಮ್ಮನೂ ಹೊರಗೆ ದುಡೀತೈತೆ, ಅದ್ಕೆ ಮ್ಯಾಲಿನ್ಕೆಲ್ಸಕ್ಕೆ ಒಬ್ಬ ಹುಡ್ಗ ಬೇಕಂತೆ. ಅವ್ನು

ನಮ್ಮ ಪೈಕಿನೇ ಆದ್ರೆ ಚೆನ್ನಾಗಿರ್ತೇತಿ ನೋಡು ಅಂತ ಶಿವಣ್ಣ ಮೊನ್ನೆ ಆಫೀಸನ್ತಾವ ಹೇಳಿದ್ದೇಳು. ನನಿಗೆ ನಿಮ್ಮುಡುಗುನ್ನು ನೆಪ್ಪಾಗಿ ಹೇಳ್ದೆ ಅವಣ್ಣನಿಗೆ." ಅದಕ್ಕಾತ

"ದುಡ್ಡಿಗೇನು ಯೋಚೆ ಮಾಡ್ಬೇಡ್ರಿ" ಅಂದು

"ನೀನೋಗಿ ಹುಡ್ಗನ್ನ ಕರಂಡ್ಬಾ ಬಾ ಅಂದ.. ನೋಡು ಹೆಂಗ್ಮಾಡ್ತಿ"

ಮಾರಣ್ಣ ಮಾತು ನಿಲ್ಲಿಸಿದ್ದೆ ತಡ ಬಸ್ವಿ ದಡಕ್ಕನೆ ಎದ್ದು ಬಂದು

"ಅಯ್ಯೋ ಅದೆಲ್ಲದಚ್ಚಿದೆ ಏಳಾನಮ್ಮಪ್ಪ .. ಇರಾದೊಂದು ಕೂಸಿನೇಲೆ ಅದೇನ್ಕಣ್ಣು ನಿಮ್ದೂ? ಬ್ಯಾರೇನರ ಇದ್ರೆಯೇಳು ಇಲ್ಲಂದ್ರೆ ಸುಮ್ಕಿರು.." ಅಂದು ಕೈತೊಳೆದಿದ್ದ ತಟ್ಟೆ ಎತ್ತಿಕೊಂಡು ಹೊರಗೋದಳು.

ಗಂಡಸರಿಬ್ರು ಸ್ವಲ್ಪ ಹೊತ್ತು ಮೌನವಾಗಿ ಕುಳಿತರು. "ಮನ್ಸಿಗೇನು ತಿಳ್ಕಬ್ಯಾಡ ಮಾರಣ್ಣ" ಅಂದ ಕೆಂಚ. ಮಾರಣ್ಣ ಟವೆಲ್ ಕೊಡವಿ ಏಳುತ್ತ

"ಏನೋ ನಿಮ್ಮ ಒಳ್ಳೇದಕ್ಕಂತ ಹೇಳ್ದೆ ನೋಡಪ್ಪ.. ನಮ್ಗೇನೋ ನಮ್ ಕಳ್ಳುಬಳ್ಳಿ ಉದ್ಧಾರಾಗ್ಲಿ, ಒಂದು ಮಟ್ಟಕ್ಕೆ ಬರ್ಲಿ ಅಂಬ ಆಸೆ. ನಿಮ್ಮಿಷ್ಟ ನಿಮಿಗೆ ತಿಳದಂಗ್ಮಾಡ್ರಿ .. ಶಿವಣ್ಣನಿಗೇನ್ ಕೆಂಚ ಬೇಕಾದಂಗೈತೆ.. ನಿನ್ಮಗ ಇಲ್ಲಿದೆ ಬ್ಯಾರೆ ಯಾರನ ಬಾರ್ತಾರೆ.."

ಅಂದು ಹೊರಡುತ್ತಾ "ವೀರೇಶಿನ ಕಳುಸ್ತಿ ನಾಳೆ ನೋಡ್ರಿ ಏನ್ಮಾಡ್ತೀರಿ ಅಂದು ಬಸ್ಸತ್ತಿದ್ದ .

ಇವತ್ತು ಇಲ್ಲಿಗೆ ಸರ್ಯಾಗಿ ರಿಪೇರಿ ಮಾಡೇಬಿಡ್ತೀನಿ ಅಂದುಕೊಳ್ಳುತ್ತ ಮನೆ ಸೇರದ ಕೆಂಚ. ಆದರೆ ಬಸ್ವೀನ ನೋಡಿದ್ದೇಲೆ ಒಂದು ಮಾತೂ ಬರಲಿಲ್ಲ. ಬಸ್ವಿ ಮುಖ ಊದಿತ್ತು. ಮಾರಣ್ಣನ ಮಾತು ಕೇಳಿ ಅವಳ ಹೊಟ್ಟೆಯಲ್ಲಿ ಬೆಂಕಿ ಬಿದ್ದಂಗಾಗಿತ್ತು. ಮಗನ್ನ ಗಟ್ಟಿಗ ತಬ್ಬಿಕೊಂಡು ಸೆರಗಿನಲ್ಲಿ ಮುಚ್ಚಿಕೊಂಡು ಮಲಗಿದ್ದು ರಾತ್ರಿಯೆಲ್ಲಾ ಕಣ್ಣಾಗಿನ ನೀರು ತಪ್ಪಲೇ ಇಲ್ಲ .

ಕೆಂಚನಿಗೋ ಒಳ್ಳೆಯ ಪೀಕಲಾಟ, ಆ ಕಡೆ ಸಾಲಗಾರನ ಕಾಟ. ಒಂದೆಡೆ ಅವ್ವ ಮಗನ ಯೋಚ್ನೆ, ಇನ್ನೊಂದೆಡೆ ವೀರೇಶಿ, ಮಾರಣ್ಣನ ಮಾತುಗಳು. ಅವ್ನು ಅತ್ತ ಇತ್ತ ಹೊಯ್ದಾಡುತ್ತಿದ್ದಾಗಲೇ ವೀರೇಶಿ, ರತ್ನಿ ಬಂದಿಳಿದರು. ವೀರೇಶಿಯಂತೂ ಕೂಗಾಡುತ್ತಲೇ ಮನೆಯೊಳಗೆ ಕಾಲಿರಿಸಿದ್ದ .

"ಅಲ್ಮಾವ ದುಡ್ಡಿಸ್ಕಂಡು ಬಂದೋನು ಮತ್ತೆ ಆ ಕಡಿಗೆ ತಿರ್ಗಿ ನೋಡ್ದಂಗಿದ್ರೆ ಏನ್ಗತಿ? ವಟ್ಟಿಗೇನ್ ತಿನ್ತಿ ಮಾವ ನೀನೂ? ಇಸಕಬೇಕಾದ್ರೆ ಇರೋ ತೆವ್ಲು ಕೊಡ್ಬೇಕಾರೆ ಇರಲ್ನೋಡು.. ಅಲ್ಲಾ ಜನ ಸಾಲ ಸಾಲ ಅಂತ

ನಮ್ಮನಿಗೆ ಅಲೆದಾಡಿದ್ರೆ ನನ್ನ ಪ್ರಿಸ್ಟೇಜೆನಾಗ್ಯೆತೆ ಯೇಳು? ಏಟನಾಗ್ಲಿ ಮಾನ ಮರ್ವಾದೆ ಇಲ್ಲದ ಜನ ನೀವೂ ” ಅಂತ ಒಂದೇ ಸಮನೆ ಒದರಾಡಿದ.



ಇತ್ತ ರತ್ನ ಅವ್ವನ ಬಳಿ “ಯೇನವ್ವಾ ಯಿಂಗೆಲ್ಲಮಾಡಿದ್ರೆಂಗವ್ವಾ ಅಲ್ಲಾ ಆ ಸಾಬಿ ವತಾರೆ ಮನೆಗ್ತಾವ ಬಂದಿದ್ದೆ ಸ್ಯೆ ನೋಡು, ವಳ್ಳೆ ದನಕ್ಕೆ ಬಡ್ಡಂಗೆ ಬಡ್ದೂ, ಬಾಯಿಗ್ಬಂದಂಗೆ ಬ್ಯೆದೂ ನಿಂತ ನಿಲುವಿನ್ಯಾಗ ಕರ್ಕಂಡದೇ ಬಂದ್ರು ” ಅಂತ ಸೊರಸೊರ ಅಂದ್ಲು, ಕಣ್ಣು, ಮೂಗು ಒರೆಸಿಕೊಂಡು.

“ಮಾರಣ್ಣ ಬಂದ್ರೆ ಬ್ಯೆದು ಕಳ್ಸಿದ್ಯಂತೆ..? ಅಲ್ಲವ್ವ, ಆ ಹುಡ್ಗನ್ನ ಮನ್ಯಾಗಿಟ್ಟಂಡ ಏನ್ಮಾಡ್ತೀಯೇಳವ್ವಾ? ಇತ್ಲಾಗೆ ಓದು ಬರಹ ಕಲ್ತಂಗರ ಅಲ್ಲ ಅತ್ಲಾಗೆ ವೊಲಮನಿ ಕೆಲ್ಸನರ ಕಲ್ತಂಗಲ್ಲ. ಸುಮ್ಕೆ ಪೋಲಿ ತಿರ್ಗಾಕೆ ಬಿಟ್ಟಿಯಲ್ಲಾ ? ಹತ್ತೊರ್ಷದ ಕತ್ತೆ ಅದು. ಈಗನ ದುಡ್ಕಂಡು ತಿಂಬಾದನ್ನ ಕಲ್ಸು ..?” ರತ್ನ ಮೂಗು ಮುಸುಡಿ ತಿರುವಿದ್ದು .

“ಹೊಲನ ಅಡವಿಟ್ಟಾನ ದುಡ್ಡಂದು ಒಪ್ಸಿದ್ರೆ ಸರಿ..” ಅಂತ ಗಂಡ ಹೆಂಡ್ತಿ ಇಬ್ಬರು ನಿಷ್ಠುರವಾಗಿ ಹೇಳಿ ಹೋದಾಗ ಬಸ್ವಿ ಮೆತ್ತಗಾದ್ದು . ತಿಪ್ಪ ಶಿವಣ್ಣನ ಮನೆ ಸೇರಿದ್ದ.

“ಏಯ್ ತಿಪ್ಪೇಶಿ ಕಿಚನೆಲ್ಲಾ ಕ್ಲೀನ್ಮಾಡ್ದೇನೋ ?” ಕೂಗುತ್ತಲೇ ಬಂದಳು ಇಂದ್ರ, “ಹೂಂನಕ್ಕೆ ಆತು ಅಂದು ಹಿತ್ತಲ ಕಡೆಗೆ ಓಡಿ ಕ್ಯೆನಲ್ಲೊಂದು ಅಲ್ಯುಮಿನಿಯಂ ತಟ್ಟೆ, ಲೋಟ ಹಿಡಿದುಕೊಂಡು ಬಂದ ತಿಪ್ಪ . ಇಂದ್ರ ಒಳಗಿನಿಂದ ಒಂದು ಪಾತ್ರೆಯಿಡದು ಬಂದು. ಅದರಲ್ಲಿನ ಅನ್ನಸಾರನ್ನು ಆ ತಟ್ಟೆಗೆ ಸುರುವಿ “ಬೇಗ ತಿಂದು ಮಲ್ಕೊ..” ಎಂದು ಅಡುಗೆ ಮನೆಯು ಬಾಗಿಲಿಕ್ಕಿ ಹೋದಳು. ತಟ್ಟೆ ಹಿಡಿದುಕೊಂಡು ಹಿತ್ತಲಿನತ್ತ ಹೋದ ತಿಪ್ಪ. ಕೆಂಚನಿಗೆ ಬಲು ಸೋಜಿಗವಾಯ್ತು . ಅವನೆಂದೂ ಇಲ್ಲಿ ಉಳಿದಿರಲಿಲ್ಲ . ಮನೆಯ ಒಳಗಿನದೇನೂ ಅವನಿಗೆ ಗೊತ್ತಿರಲಿಲ್ಲ.

“ಅದ್ಯಾಕ್ಮಗ ನಿನಿಗೆ ಬ್ಯಾರೆ ಸಿಲವರುದ್ದಟ್ಟೆ ?” ಅಂತ ತಿಪ್ಲನನ್ನು ಕೇಳಿದ. ಇಲ್ಲಂಗೆಯಾ ಅಂದ ತಿಪ್ಗ ತಟ್ಟೆಯಲ್ಲಿನ ಅನ್ನವನ್ನ ಗಬಗಬನೆ ತಿನ್ನುತ್ತಿದ್ದ. ಅವನು ಹಸಿದಿದ್ದ.

“ವೋಗ್ಲೋಗು ಇನ್ನಂದ್ಸಲ್ಪ ಅನ್ನಯಿಕ್ಕಂಡು ತಿನ್ನೋಗು ಅಂದ ಕೆಂಚ. “ಇಲ್ಯಣಪ್ಪ ಎಲ್ಲಾ ಖಾಲಿ ಆಗ್ಯೆತೆ. ನಾನೇ ಯಲ್ಲಾ ಕಿಲೀನ್ಮಾಡ್ಡೆ ” ಅಂದು ಸರಸರ ಎದ್ದು, ತಟ್ಟೆ ಲೋಟ ತೊಳೆದಿಟ್ಟು, ಅಲ್ಲೇ ಮೂಲೆಯಲ್ಲಿ ನಿಲ್ಲಿಸಿದ್ದ ಚಾಪೆ, ಚಾದರ ಹಿಡಿದು “ಬಾರಪ್ಪ ಮಲ್ಗನಾ.” ಅಂತ ಹೊರಟ ತಿಪ್ಪ .

ಬಸವಿ ಮಗನ ನೆನಪಾಗಿ ಕಣ್ಣೀರು ಹಾಕಿದಾಗಲೆಲ್ಲ ಯಾಕಳಿಯೇ ಬಸ್ವಿ ಸುಮ್ನೆ, ನಿನ್ನನ್ನೇನು ಬ್ಯಾರೆ ಮನ್ಯಾಗದನೇನು? ನಮ್ ಕಳ್ಳುಬಳ್ಳಿ ಮನ್ಯಾಗಿರಾದು.. ಅಲ್ಲಿ ಇಲ್ಲಗಪ್ಪನಂಗೆ ಉಂಡು ತಿನ್ನಂದು ಇರಾನೇಳು.. ಅಂತಿದ್ದ ಕೆಂಚ ಅನ್ನಿಗ್ಯಾಕೋ ಕಣ್ಣು ಮುಚ್ಚಲು ಆಗಲೇ ಇಲ್ಲ . ಕಣ್ಣು ಮುಚ್ಚಿದೊಡನೆ ತಟ್ಟೆ ತುಂಬಾ ಸಾರು ಹಾಕಿ, ಬಿಸಿ ಮುದ್ದೆಯಿಟ್ಟು ಪಕ್ಕದಲ್ಲಿ ಕೂತು ಮಗನಿಗೆ ಉಣ್ಣಿಸುತ್ತಿದ್ದ ಬಸ್ವಿಯ ಚಿತ್ರ ಅವನನ್ನ ಬಿಚ್ಚಿ ಬೀಳಿಸುತ್ತಿತ್ತು.

ಪಕ್ಕದಲ್ಲಿ ಮಲಗಿದ್ದ ತಿಪ್ಪ “ಅಪ್ಪಾ ಹಬ್ಬಕ್ಕೆ ಊರಿಗೆ ಕರ್ಗಂಡೋಗು.. ಅವ್ವನ್ನ ನೋಡಂಗಾಗೈತೆ..” ಅಂದಾಗ ಕೆಂಚನಿಗೆ ಸ್ವರ ಹೊರಡದಾಯ್ತು . ಮತ್ತೆ ತಿಪ್ಪನೇ ಹೇಳಿದ



“ಮೊನ್ನಿನಾಗ ವೀರೇ ಶ್ಮಾವ, ಮಾರಪ್ಮಾವ ಬಂದಿದ್ರ. ಅಯಕ್ಕನ್ಮಾವ ಏನೇನ ಯೇಳಿ ದುಡ್ಡಿಸ್ಕಂಡೋದ್ರು ” ಯಾರೋ ಎದೆಗೆ ಗುದ್ದಿದ ಹಾಗಾಯ್ತು ಕೆಂಚನಿಗೆ. “ಅದ್ರೆ ಸಿವಣ್ಣಂಗೆ ಮಾತಾಡ್ದಬಿಡು, ಯಂಗೋ ಇನ್ನೊಂದ್ನಾಕ್ದಿವ್ಸ ಇರು ಆಮ್ಯಾಕೆ ಊರಿಗೋಗನ ಅತ್ಲಾಗೆ ” ಅಂದು ನಿಟ್ಟುಸಿರಿಟ್ಟ ಕೆಂಚ.

ಮಾರನೆಯ ದಿನ ಪುರುಸೊತ್ತೆ ಇಲ್ಲದಷ್ಟು ಕೆಲಸ ಅವರಿಗೆ ಒಂದೈವತ್ತು ಜನ ಬಂದಿದ್ದರು ಊಟಕ್ಕೆ. ತಿಪ್ಪ ಹೊರಗೆ ತಟ್ಟೆಗಳನ್ನು ತೊಳೆಯುತ್ತಿದ್ದ. ಕೆಂಚ ಎಲ್ಲರೂ ಉಂಡುಬಿಟ್ಟ ತಟ್ಟೆಗಳನ್ನು ಎತ್ತಿಕೊಂಡು ಹೋಗಿ ಮಗನಿಗೆ ಕೊಡುತ್ತಿದ್ದ. ಎಲ್ಲಾ ಮಾಂಸದಡುಗೆ, ಆದರೆ ಯಾರೂ ಸರಿಯಾಗಿ ತಿನ್ನದೆ ಎಲ್ಲಾ ಹಾಗೆಯೇ ಬಿಟ್ಟು ಕೈ ತೊಳೆದಿದ್ದರು.

“ಬಲೇ ಅನ್ಯಾಯದ ಜನ ಕಣ್ಲೆ ತಿಪ್ಗ ಈ ಪ್ಯಾಟೆ ಜನ. ಅಲ್ಲಾ, ಬರೇ ಇದ್ರೆ ಎನ್ನಂತೇಳು ಸಾಗಿ ಉಣ್ಣಾತಿನ್ನಾಕೆ ಬರ್ಕಿದ್ಮ್ಯಾಕೆ ” ಅಂದು. ತಿಪ್ಪ ತೊಳೆದಿಟ್ಟಿದ್ದ ತಟ್ಟೆಗಳನ್ನು ಎತ್ತಿಕೊಂಡು ಒಳ ಹೋದ.

ಅಡುಗೆ ಮನೆಯಲ್ಲಿ ಇಂದ್ರ ಇದ್ದಳೆಂದು ಬಾಗಿಲಲ್ಲೆ ನಿಂತ. ಅವಳು ಇವನನ್ನು ನೋಡಲಿಲ್ಲ. ಅಲ್ಲಿಯೇ ಕಟ್ಟೆಯ ಮೇಲೆ ನಾಲ್ಕು ಎಂಜಲು ತಟ್ಟೆಗಳಿದ್ದವು. ಆ ತಟ್ಟೆಗಳಲ್ಲಿ ಹಾಕಿದ್ದ ಮಾಂಸದ ತುಂಡುಗಳೆಲ್ಲ ಹಾಗೆಯೇ ಇದ್ದು, ಆದರಲ್ಲಿಯೇ ಕೈ ತೊಳೆದಿದ್ದರು. ಯಾರೋ ಪುಣ್ಯಾತ್ಮರು. ಇಂದಿರ ಆ ತಟ್ಟೆಗಳಲ್ಲಿನ ಎಂಜಲು ನೀರನ್ನೆಲ್ಲ ಬಸಿದು, ತುಂಡುಗಳನ್ನೆಲ್ಲ ಮೇಲಿಟ್ಟಿದ್ದ ಹಳೆಯದಾದ ಒಂದು ಅಲ್ಯುಮಿನಿಯಂ ಪಾತ್ರೆಯೊಳಗೆ ಹಾಕಿಟ್ಟಳು. ಎಲ್ಲವನ್ನು ನೋಡಿದ ಕೆಂಚ

“ಈ ಮನೆಯ ನಾಯಿಗಳೇ ಪುಣ್ಯದವು .”

ಎಂದುಕೊಳ್ಳುತ್ತ ಮೆಲ್ಲನೆ ಒಳಹೋಗಿ ತಟ್ಟೆಗಳನ್ನಿಟ್ಟು ಹೊರಬಂದ. ಬಂದವರ ಊಟವೆಲ್ಲ ಮುಗಿದ ಬಳಿಕ ಕೆಂಚನಿಗೆ ತಟ್ಟೆ ಬಂತು. ತಿಪ್ಪ ಇನ್ನೂ ಹೊರಗೆ ಏನೋ ಮಾಡುತ್ತಲಿದ್ದ . ಕೆಂಚ ತಾನುಂಡ ತಟ್ಟೆಯನ್ನು ಎತ್ತಿಕೊಂಡು ಹೋಗುವ ಹೊತ್ತಿಗೆ ತಿಮ್ಮ ಕೆಲಸವನ್ನೆಲ್ಲ ಮುಗಿಸಿ, ಹಿತ್ತಲಲ್ಲಿದ್ದ ತನ್ನ ತಟ್ಟೆ, ಲೋಟ ಹಿಡುದು ಹೊರಟಿದ್ದ. ಕೆಂಚ

ತಟ್ಟೆಯನ್ನು ತೊಳೆದು, ಅದನ್ನು ಅಡುಗೆಯ ಮನೆಯಲ್ಲಿಟ್ಟು ಹೊರಗೆ ಉಣ್ಣುತ್ತಿದ್ದ ತಿಪ್ಪನ ಪಕ್ಕಕ್ಕೆ ಹೋಗಿ ಕೂತ. ತಿಮ್ಮನ ತಟ್ಟೆಯಲ್ಲಿ ಅನ್ನ, ಸಾರು ಒಂದ್ನಾಲ್ಕು ಎಲುಬಿನಂತ ತುಂಡುಗಳಿದ್ದವು.

"ಬೆಳಂದ ಮುಕ್ಕಿ ಮುರಿಯಂಗೆ ದುಡುದ್ರೂ ವಟ್ಟೊಂಬಾ ಉಣ್ಣಾಕ್ಕಿಕಾಕೆ ಯಂಗಾಡುತ್ತಲ್ಲ ಈ ಯಂಗ್ಸೂ ? ಯೇಟೊಂದು ಜನ ಪುಕ್ಸಟ್ಟೇರು ಬಂದು ತಿಂದು ಬಿಸಾಕಿ ವೋದ್ರೆ ಖುಸಿ ಇವ್ರಿಗೆ ದುಡಿಯ ಮಕ್ಕಿಗೆ ವಟ್ಟೆ ತುಂಬ ಇಕ್ಕಾಕೇನ್ ಧಾಡಿಯಿಕೀಗೆ ?"



ಸಂಕಟದಿಂದ ಮಗನ ಮುಂದೆ ಒದರಾಡಿದ ಕೆಂಚ. ಅವನ ಹೊಟ್ಟೆಯಲ್ಲಿ ಉರಿ ಎದ್ದಿತ್ತು. ಆ ಹೊತ್ತಿಗೆ ಸರಿಯಾಗಿ ಒಳಗಿಂದ ಇಂದ್ರ ತಿಪ್ಲನ್ನ ಕೂಗಿದಳು. "ಬಂದೇ " ಎನ್ನುತ್ತ ಉಣ್ಣುವುದನ್ನು ನಿಲ್ಲಿಸಿ ಓಡಿದ ತಿಪ್ಪ, ಬರುವಾಗ ಅವನ ಕೈಯಲ್ಲಿ ಒಂದು ಸಣ್ಣ ಹಳೆಯ ಅಲ್ಯುಮಿನಿಯಂ ಪಾತ್ರೆಯಿತ್ತು. ಅದರ ತುಂಬಾ ತುಂಡುಗಳಿದ್ದು ಅವುಗಳನ್ನು ತನ್ನ ತಟ್ಟೆಗೆ ಸುರುವಿಕೊಂಡ ತಿಪ್ಪ, ಕೆಂಚ ಕಣ್ಣು ಕೆಕ್ಕರಿಸಿ ನೋಡಿದ. ಇಂದ್ರ ಎಂಜಲು ತಟ್ಟೆಯ ನೀರು ಬಸಿದು, ಅದರಿಂದ ಆಯ್ದು ಇಟ್ಟಿದ್ದ ತುಂಡುಗಳಿದ್ದ ಪಾತ್ರೆಯಿದು ! ಬರಿಯ ಒಗ್ಗರಣೆಯಲ್ಲಿ ಕೋಳಿಯನ್ನು ಉಪ್ಪಾಕಿ ಮೆತ್ತಗೆ ಬೇಯಿಸಿ ಮಗನ ಮುಂದೆ ಇಡುತ್ತಿದ್ದ ಬಸ್ವಿಯ ನೆನಪಾಯ್ತು. ಅವನ ಕರುಳು ಕಿವುಚಿದಂಗಾಯ್ತು .

"ಉಣ್ಬೇಡ ಬಿಡಲೇ.." ಅಂತ ತಿಪ್ಪನ ತಟ್ಟೆಯನ್ನು ಕಸಿದುಕೊಂಡ.

"ಅಪ್ಪಾ ಕೊಡಪ್ಪ . ಬಾಳ ವಟ್ಟೆ ಹಸದೈತೆ ಕೊಡಪ್ಪಾ.."

ಅಂತ ತಿಪ್ಲಾ ತಟ್ಟೆಗೆ ಕೈ ಹಾಕುತ್ತಿದ್ದಂತೆ ಅವನಿಗೊಂದು ಎತ್ತಿ ಬಾರಿಸಿದ.

"ವೋಗಲೇ ಒಂದಿನ ಉಣ್ಣಿದ್ರೇನು ಸಾಯಲ್ಲ ವೋಗ.. ವೋಗಿ ಕೈಚೀಲ ವೊಂದಿಸ್ಕ.."

ಅಂದವನೆ ತಟ್ಟೆಯನ್ನು ಸೀದಾ ಶಿವಣ್ಣನ ಮುಂದೆ ಎತ್ತಿಕೊಂಡು ಹೋದ. ಹಾಲ್‌ನಲ್ಲಿ ಎಲ್ಲರೂ ಕೂತು ತಾಂಬೂಲ ಮೆಲ್ಲುತ್ತ ಮಾತಿನಲ್ಲಿ ತೊಡಗಿದ್ದರು. ಅಲ್ಲಿದ್ದ ಇಂದನ್ನ ನೋಡಿ.

"ಯೇನಪ್ಪ ಯಿಂದ್ರಪ್ಪ ನಿನ್ನ ದೊಡ್ಡ ಗನಸ್ತೆ ಅಂದ್ರಂಡಿಲ್ಲವ್ವಾ .. ನನ್ ಮಗುನ್ನ ನಿನ್ ಮನೆ ಕಾಯೋ ನಾಯಿ ಅಂತ ತಿಳ್ಕೊಂಡೇನವ್ವಾ..?" ಅಂದಾಗ ಅಲ್ಲಿ ಕುಂತಿದ್ದವರೆಲ್ಲ ಒಮ್ಮೆಲ್ಲೆ ಎಗರಿಬಿದ್ದರು.

"ಏಯ್ ಏನೋ ಅದು ಗಲಾಟೆ ? ಏನಾಯ್ತಿಗ?" ಶಿವಣ್ಣ ರೇಗಿದ.

“ಯೇನಾಗ್ಯೆತೆ ಅಂತ ನಿನ್ನೆಣ್ಣಿನ್ಕೇಳು. ಅಲ್ಲಾ ಯಾರೋ ಉಂಡು, ಕೈ ತೊಂಡು ಬಿಟ್ಟಿದ್ದ ತಟ್ಯಾಗಿಂದ ತುಂಡು ಆಯ್ಕಂಡು, ನನ್ಮಗನಿಗೆ ತಿನ್ನು ಅಂತ ಕೊಟ್ಟಿದ್ದಾಳಲ್ಲ. ವಟ್ಟಗೆ ಅನ್ನ ತಿಂಬಾರಾಡ ಕೆಲ್ಸನಯಿದೂ ?”" ಕೆಂಚ ಆವೇಶಗೊಂಡಿದ್ದ .

“ಏಯ್ ನೆಟ್ಟಗೆ ಮಾತಾಡೋ” ಕೆಂಪಾಗಾಗಿದ್ದು ಇಂದ್ರ.

“ಯೇನ್ ನೆಟ್ಟವ್ವ..? ನೀನ್ಮಾಡಿರ ಬದ್ಕು ನೆಟ್ಟಗಿದ್ದಿದ್ರೆ ನನ್ಮಾತೂ ನೆಟ್ಟಿರಾವು.. ಅಲ್ಲವ್ವ ನನ್ಮಗನ್ಗೆ ನೀನೇನ್ ಬಿಟ್ಟಿ ಕೂಳಾಕ್ತಿಯಾ? ಯೇನ್ ವೊದಿದ್ರೇನ್ ಬರುದ್ರೇನ್ ವಳ್ಳಿ ಗುಣ ಇಲ್ಲಿದ್ಮಾಕೆ” ಅಂದ ಕೆಂಚ.

“ಸಾಕ್ಮುಚ್ಕೊ ಬಾಯಿ * ಶಿವಣ್ಣ ಗದರಿದ.



“ಅದ್ಯಾಕಪ್ಪ ನಾನೇನು ನಿನ್ನ ಮನ್ನಾಗೆ ಕಳ್ತನ ಮಾಡಿಲ್ಲ ಬಾಯ್ಮುಚ್ಚಾಕೆ. ನನಗೇನು ತಿಂಬಾಕೆ ಗತಿಯಿಲ್ಲ ಅಂತ ನನ್ಮಗುನ್ನ ನಿನ್ ಮನ್ಯಾಗೆ ಬಿಟ್ಟೇನಿ ಅಂದ್ಕಂಡಿಯಾ? ಇಲ್ಲಾ, ನಿನ್ದುಡ್ಡು ದೊಡ್ಡಸ್ತಿಕೆ ನೋಡಿ ನನ್ಮಗುನ್ನ ನಿನ್ ಮನ್ಯಾಗೆ ಬಿಟ್ಟೇನಿ ಅಂದ್ಕಂಡಿಯಾ? ಯೇನೋ ನಮ್ ಜನ ನಮ್ ಕಳ್ಳುಬಳ್ಳಿ . ನಿಮ್ಗೂ ಒಂದು ಆಸರ, ನನ್ ಮಗುನ್ಗೂ ಒಂದು ಆಸರ ಅಂತ ಬಿಟ್ಟೆ. ನೀನಿವತ್ತು ಯೇಟು ದೊಡ್ಮನ್ಸ ಯಾಕೆ ಆಗಿರ್ವಲ್ಲಿ ಯೇಳು ನಿಮ್ಮಪ್ಪ, ನಿಮ್ಮಜ್ಜ ಸಣ್ಣೊಯ್ಸನಾಗೆ ಗೌಡ್ರ ಮನ್ಯಾಗೆ ಸಗ್ಣಿ ಬಾಚಿ, ಎಂಜಲೆತ್ತಿ ಬದುಕ್ಯಾರು ಅನ್ನದು ಮರಿಬಾರ್ದು ಮರಿಬಾರ್ದಪ್ಪ ಶಿವಣ್ಣ ಮೂಲ ಮರಿಬಾರ್ದು, ಏನಿದ್ಯೆ ಬುದ್ದಿ ಕಲ್ತು, ದೊಡ್ಡ ದೊಡ್ಡ ಜನರು ಜತೀಗೆ ಕುಂತೆದ್ರೂ ಸಣ್ತನ ಸಣ್ ಬುದ್ದಿ ತನ್ನ ರಕುತದಾಗೆ ಹರೀತ್ಯೆತೆ ಅಂತು ತೋರ್ಸಿದ್ಲು ನಿನ್ನೆಣ್ತಿ ಇವತ್ತು. ಬರ್ತೀನಪ್ಪ, ನಾನು ನನ್ಮಗನ್ನ ಕರ್ಕಂಡು ವೋಗ್ತಿನಿ..” ಅಂತ ಹೊರಟ ಕೆಂಚ

“ಕರ್ಕಂಡು ಹೋಗೋ ಯಾರು ಬೇಡಾಂತರೆ ನಿನಗೆ? ನಿಮ್ಮೆಲ್ಲ ಹೊರಗಡೆ ನಿಲ್ಲಿಸಿ, ಎತ್ತಿ ಕೂಳಾಕಿ ದೂರ ಸರೀತಾರಲ್ಲ ಅವ್ರ ಸರಿ ಅವ್ರ ಸರಿ ನಿಮಗೆ.. ಅಲ್ಲಿಗೆ ಲಾಯಕ್ಕು ನೀವೂ..” ಇಂದ್ರ ಬುಸುಗುಟ್ಟಿದಳು.

ಕೆಂಚ ನಿಂತು “ಹೌದವ್ವ ನೀನು ಯೇಳಾದು ಸರಿನೇಯ, ಯೇನೋ ನಾಕು ಅಕ್ಷರ ಕಲ್ತೆ ನಾಕ್ದುಡ್ಡು ಸಂಪಾದಿಸ್ಥೆ ಅಂತ ನೀನೆ ನಮ್ಗೆ ಅನ್ನ ಎತ್ಯಾಕ್ತಿ. ಬ್ಯಾರೆ ತಟ್ಟೆ ಲೋಟ ಇಟ್ಟಿದಿ, ಹೊರಗೆ ಉಣ್ಣಾಕೆ ಕುಂದು ಎಂಜಲು ತಿನ್ನಕಾಕ್ತಿ ಅಂದ್ಮೈಕೆ ಆನಾದಿ ಕಾಲದಿಂದ ನಡೆಸ್ಕೊಂಡು ಬಂದಿರಾರು ಯಾವ ಲೆಕ್ಕಯೇಳು? ವರಾಗಿ ಉಣ್ಣಾಕಾಕರೂ, ನಮ್ಮನ್ನನೋಡಿ ದೂರ ಸರಳಾರೂ ಬ್ಯಾರರವ್ವಾ.. ಅವೆಲ್ಲ ಬ್ಯಾರೆ. ಆದ್ರೆ ನೀವೂ..? ನೀವು ನಮ್ಮರವ್ವ ! ನಮ್ಮ ಜನ, ನಮ್ ಕಳ್ಳುಬಳ್ಳಿ ಕಣವ್ವ ನೀವೂ ನಮ್ ಕಳ್ಳುಬಳ್ಳಿ .”

ಕಣ್ಣಲ್ಲಿ ತುಂಬಿ ಬಂದ ಕಂಬನಿಯನ್ನು ತೊಡೆದುಕೊಂಡು ಕೈಚೀಲ ಹಿಡಿದು ನಿಂತಿದ್ದ ತಿಪ್ಪನ ಕೈ ಹಿಡಿದುಕೊಂಡು ಹೊರಟ ಕೆಂಚ. ಮಗನನ್ನು ನೋಡಿ ಬಸ್ವಿ ಹೇಗೆ ಖುಷಿಪಡಬಹುದು! ಎಷ್ಟು ಸಂಭ್ರಮ ಪಡಬಹುದು! ಎಂಬುದನ್ನು ಕಲ್ಪಿಸಿಕೊಳ್ಳುತ್ತ ತನ್ನೆದೆಯಲ್ಲಿನ ತಳಮಳ, ನೋವು, ತನ್ನ ಹೊಟ್ಟೆಯಲ್ಲಿನ ಸಂಕಟವನ್ನು ಮರೆಯುವುದಕ್ಕೆ ಪ್ರಯತ್ನಿಸಿದ.

+

# ೮. ಮಾನಿ

**ಸಣ್ಣರಾಮ**

"ಅಪ್ಪ ಏ.. ಅಪ್ಪಯ್ಯ, ನಿಲ್ ಅಪ್ಪಯ್ಯ ನಿಲ್ಲು" . ಲಂಗೋಟಿ ಅಜ್ಜನ ವೇಗಕ್ಕೆ ನಡೆಯಲಾಗದ ನಾಗರಾಜ, ಒಂದು ರೀತಿಯಲ್ಲಿ ಓಡುತ್ತೋಡುತ್ತಲೇ ಅಪ್ಪನನ್ನು ಕೂಗಿದ. ಮಗನ ಕೂಗಿಗೆ ಲಂಗೋಟಿ ಅಜ್ಜನ ಅಂತರಾಳ ಕರಗಿತು. ಅವನು ಹಿಂದಿರುಗಿ ಒಂದು ಕ್ಷಣ ನಿಂತು ನೋಡಿದ. ಆ ನೋಟದಲ್ಲಿ ನೋವೋ, ದುಃಖವೋ, ಸಂತೋಷವೋ ಬಲ್ಲವರಾರು? ಬಲದ ಕೈಯಲ್ಲಿ ಮಾರುದ್ದದ ಬಿದಿರಿನ ತೆಳ್ಳನೆಯ ಬೆತ್ತ. ಅದರ ತುದಿಗೆ ಕಟ್ಟಿದ ಒಂದು ತುಂಡು ನೈಲಾನ್ ದಾರ, ದಾರದ ತುದಿಗೆ ಕಟ್ಟಿದ ಗಾಣ, ಎಡದ ಕೈಯಲ್ಲಿ ಪ್ಲಾಸ್ಟಿಕ್ಕಿನ ಕೊಳೆ ಕಟ್ಟಿದ, ಜಿಡ್ಡಿಡಿದ, ಜೀವಂತ ಚಿಟ್‌ಗಪ್ಪೆಗಳಿಂದ ಬುಳು-ಬುಳು ಅನ್ನುತ್ತಿದ್ದ ಕೈ ಚೀಲ. ನಸುಬಾಗಿದ ಬೆನ್ನು, ದಿನಕ್ಕೆ ಹತ್ತು ಬಾರಿಯಾದರೂ ಬಿಚ್ಚಿ ಸುತ್ತಿ ಬಿಚ್ಚಿ ಸುತ್ತಿ ಜೀರ್ಣವಾಗಿ ಕುರಿ ಕರುಳಿನಂತಾಗಿದ್ದ ರುಮಾಲು, ಹೆಗಲಿನಿಂದ ಮೊಣಕಾಲಿನವರೆಗೆ ಇಳಿ ಬಿದ್ದಿದ್ದ ಅಂಗಿ, ಸೊಂಟಕ್ಕೆ ಸುತ್ತಿರುವ ಲಂಗೋಟಿ, ಬಿಸಿಲಿರಲಿ, ಮಳೆ, ಚಳಿಯಿರಲಿ ಇದೇ ಅವನ ವೇಷ. ಅದಕ್ಕೆ ಕೇರಿಯ ಹಿರಿ ಕಿರಿಯರೆಲ್ಲ ಅವನನ್ನು ಲಂಗೋಟಿಅಜ್ಜ ನೆಂದೇ ಕರೆಯುತ್ತಾರೆ. ಅಪ್ಪ ಅಮ್ಮ ಇಟ್ಟ ಹೆಸರು ಏನೆಂದು ಅವನೂ ಸೇರಿದಂತೆ ಕೇರಿಯ ಯಾರಿಗೂ ಗೊತ್ತಿಲ್ಲ. ಮಗನ ಕೂಗಿಗೆ ಒಂದು ಕ್ಷಣ ಹಿಂದಿರುಗಿ ಮೌನವಾಗಿ ನೋಡಿ, ಮತ್ತೆ ಮುನ್ನಡೆದ. ತನ್ನ ಕೂಗಿಗೆ ನಿಲ್ಲದ ಅಪ್ಪಯ್ಯನನ್ನು ಕಂಡು ಮತ್ತೆ ಕೂಗದೇ ನಾಗರಾಜ ಹಿಂಬಾಲಿಸಿದ.

ಮಳೆಗಾಲದಲ್ಲಿ ಭೋರ್ಗರೆದು ಉಕ್ಕಿ ಹರಿಯುವ ದಂಡಾವತಿ ಹಳ್ಳ, ಬೇಸಿಗೆಯಲ್ಲಿ ಬಾಣಂತಿ ಬಚ್ಚಲಮನೆ ನೀರಿನಂತೆ, ರಾಡಿಯಾಗಿ ತೆಳ್ಳಗೆ ಜುಳುಜುಳು ಹರಿಯುತ್ತಿತ್ತು. ಅದರ ಎರಡೂ ಕಡೆ ಆಳೆತ್ತರದ ದಂಡೆಗಳಲ್ಲಿ ಕಾರೆಡಿಗಳ ಬಿಲಗಳು ಹೇರಳವಾಗಿದ್ದವು.

ಲಂಗೋಟಿ ಅಜ್ಜನ ದಿನದ ಹಲವು ಕಾಯಕಗಳಲ್ಲಿ ಕಾರೆಡಿಗಳನ್ನು ಹಿಡಿಯುವುದೂ ಒಂದು. ಅವನು ಒಂದೊಂದೇ ಬಿಲಗಳನ್ನು ಸೂಕ್ಷ್ಮವಾಗಿ ಗಮನಿಸಿ ಏಡಿಗಳಿರುವ ಬಿಲಗಳನ್ನು ಗುರುತಿಸಿ, ಗಾಣಕ್ಕೆ ಕಪ್ಪೆಗಳನ್ನು ಪೋಣಿಸಿ ಆಡಿಸುತ್ತಿದ್ದ. ಏಕೆಂದರೆ ಎಲ್ಲಾ ಬಿಲಗಳಲ್ಲಿ ಏಡಿಗಳಿರುತ್ತಿರಲಿಲ್ಲ. ಏಡಿಗಳಿಲ್ಲದ ಬಿಲಗಳಲ್ಲಿ ಕಪ್ಪೆ ಆಡಿಸುವುದರಿಂದ ಸಮಯವು ಹಾಳು, ಅಲ್ಲದೆ ಕೆಲವೊಮ್ಮೆ ಬಿಲಗಳಲ್ಲಿ ಹಾವುಗಳೂ ಇರುತ್ತಿದ್ದವು. ಒಂದು ಸಾರಿ ಹಾಗೆಯೇ ಆಯಿತು. ಕಪ್ಪೆ ಪೋಣಿಸಿ ಗಾಣ ಬಿಟ್ಟ ಸ್ವಲ್ಪ ಹೊತ್ತಿಗೆ ಗಾಣ ಬಿಗಿಯಾಯಿತು. ನಿಧಾನಕ್ಕೆ ಗಾಣ ಒಳಗೆ ಸರಿಯಿತೇ ಹೊರತು ಹೊರಗೆ ಬರಲಿಲ್ಲ. ದೊಡ್ಡ ಏಡೀನೆ ಇರಬೇಕೆಂದುಕೊಂಡ ಲಂಗೋಟಿ ಅಜ್ಜ

ಅವಸರದಿಂದ ಬಿಲಕ್ಕೆ ಕೈ ಹಾಕಿದ. ತಕ್ಷಣವೇ ಬೆರಳಿಗೆ ಸೂಜಿಯಿಂದ ಚುಚ್ಚಿದಂತಾದಾಗ ಬೆಚ್ಚಿ ಬಿದ್ದು ತನ್ನ ಶಕ್ತಿಯನ್ನೆಲ್ಲಾ ಬಿಟ್ಟು ಎಳೆದಾಗ ಕೈಯ ಜೊತೆಯಲ್ಲಿ ಮಾರುದ್ದ ಕೇರೆಹಾವು ಹೊರಕ್ಕೆ ತೂರಿ ಬಂತು. ಬೆರಳಿನಿಂದ ರಕ್ತ ದಬದಬನೆ ಸುರಿಯುತ್ತಿತ್ತು. ತಕ್ಷಣವೇ ಮೂರು ಗುಟುಕು ರಾಡಿ ನೀರನ್ನು ಕುಡಿದು, ತನಗೆ ಗೊತ್ತಿದ್ದ ವಿಷಮಂಡಲ ಗಿಡದ ಬೇರನ್ನು ಜಗಿದು ನುಂಗಿದ. ಆದಾಗಿನಿಂದ ಅವನು ಬಿಲವನ್ನು ಪರೀಕ್ಷಿಸದೆ ಗಾಣ ಬಿಡುತ್ತಿರಲಿಲ್ಲ, ಬಿಲದ ಬಾಯಿಯಲ್ಲಿ ಗೀರು ಗೀರು ಇದ್ದರೆ ಅದು ಏಡಿ ಓಡಾಡಿದ ಗುರುತು. ಅದಿಲ್ಲದೆ ಸಪಾಟಾಗಿದ್ದರೆ ಅವುಗಳಲ್ಲಿ ಹಾವು ಗ್ಯಾರಂಟಿ ಎಂಬುದು ಅವನ ಅನುಭವ.

ಕಪ್ಪೆ ಬಿಲಕ್ಕೆ ಇಳಿ ಬಿಡುತ್ತಿದ್ದಂತೆ ತಿನ್ನುವ ಆಸೆಗೆ ನಿಧಾನಕ್ಕೆ ಮೇಲೆ ಬರುವ ಕಾರಡಿಗಳು ಕೊಕ್ಕಿನಿಂದ ಗಾಣವನ್ನು ಕಚ್ಚಿ ಹಿಡಿದಾಗ, ಎಚ್ಚರಿಕೆಯಿಂದ ಗಾಣವನ್ನು ಎಳೆಯುತ್ತಿದ್ದಂತೆ ಒಂದೊಂದೆ ಹೆಜ್ಜೆ ಇಡ್ತಾ ಬಿಲದಿಂದ ಸ್ವಲ್ಪ ಸ್ವಲ್ಪ ಮೇಲೆ ಮೇಲಕ್ಕೆ ಬರುತ್ತಿದ್ದಂತೆ ಲಂಗೋಟಿ ಅಜ್ಜನ ಕೈ ಮಿಂಚಿನಂತೆ ಸರಿದು ಅದರ ಬೆನ್ನಿನ್ನತ್ತ ನುಗ್ಗಿ ಗಬಕ್ಕನೆ ಗಟ್ಟಿಯಾಗಿ ಹಿಡಿದು ಬಿಡುತ್ತಿದ್ದ. ಬಿಲದಿಂದ ಹೊರಕ್ಕೆ ಎಳೆದ ನಂತರ ಚಿಕ್ಕ ಚಿಕ್ಕ ಕಾಲುಗಳನ್ನು ಲಟಲಟನೆ ಮುರಿದು, ಎಸೆದು ದೊಡ್ಡ ಕೊಂಬುಗಳೆರಡನ್ನೂ ಸೇರಿಸಿ ಪ್ಲಾಸ್ಟಿಕ್ ದಾರದಿಂದ ಕಟ್ಟಿ ಚೀಲಕ್ಕೆ ಇಳಿಬಿಡುತ್ತಿದ್ದ. ಲಂಗೋಟಿ ಅಜ್ಜನ ಕೈ ಎಷ್ಟು ಚುರುಕಾಗಿ ಸರಿದಾಡಿದರೂ ಕೆಲವು ಏಡಿಗಳೂ ಒಮ್ಮೊಮ್ಮೆ ತಕ್ಷಣವೇ ಗಾಣವನ್ನು ಬಿಟ್ಟು ಕೈ ಬೆರಳಿಗೆ ಕೊಂಬು ಹಾಕುವುದೂ ಉಂಟು. ಒಮ್ಮೆ ಹಾಗೇ ಆಯಿತು. ಆಮೆಯಷ್ಟಗಲದ ಕಛೇಡಿ. ಅದರ ಚಿಪ್ಪಿಗೆ ಕೈ ಸರಿಯುವ ಮೊದಲೇ ಲಂಗೋಟಿ ಅಜ್ಜನ ಕಿರುಬೆರಳು ಅದರ ಕೊಂಬಿನ ಮಧ್ಯದಲ್ಲಿ ಸಿಕ್ಕಿಕೊಂಡಿತ್ತು. ಅದರ ಗರಗಸದಂತಹ ಕೊಂಬಿನ ಬಿಗಿಯಾದ ಹಿಡಿತಕ್ಕೆ ಲಂಗೋಟಿ ಅಜ್ಜನ ಪ್ರಾಣ ಬಾಯಿಗೆ ಬಂದಂತಾಯಿತು. ಯಾರೋ ಗರಗಸದಿಂದ ಕೈ ಬೆರಳನ್ನು ಕತ್ತರಿಸುವಂತೆ ಹರಿತವಾದ ಕುಡುಗೋಲಿನಿಂದ ಸ್ವಲ್ಪ ಸ್ವಲ್ಪವೇ ಹೆಚ್ಚಿದಂತೆನಿಸಿ ಅವನಿಗೆ ಅಳು ಬರದಿದ್ದರೂ ಕಣ್ಣೀರು ಬುಳುಬುಳು ಸುರಿಯಿತು. ಅಂತಹ ಸಂದರ್ಭದಲ್ಲಿ ಅವನು ತಾನು ತನ್ನ ಅನುಭವದಿಂದ ಕಲಿತ ಜಾಣತನವನ್ನು ಮಾಡುತ್ತಿದ್ದ. ಮರದ ದಿಮ್ಮಿಯಂತೆ ಸುಮ್ಮನೆ ಬಿದ್ದು ಬಿಡುತ್ತಿದ್ದ. ಎಷ್ಟೇ ನೋವಾದರೂ ಮಿಸುಕಾಡುತ್ತಿರಲಿಲ್ಲ. ಸ್ವಲ್ಪ ಸಮಯದ ಮೇಲೆ ಏಡಿಗೆ ಅನುಮಾನ ಬಂದು ಯಾವುದೋ ನಿರ್ಜಿವ ವಸ್ತುವಿರಬೇಕೆಂದು ಸ್ವಲ್ಪ ಸಡಿಲ ಬಿಡಲು ತಕ್ಷಣವೇ ಬೆರಳನ್ನು ಎಳೆದುಕೊಂಡು ಬಿಡುತ್ತಿದ್ದ. ಅವತ್ತು ಆ ದಪ್ಪ ಏಡಿಯಿಂದ ಕೈಬೆರಲು ಬಿಡಿಸಿಕೊಂಡು ಬರಲು ಕಡಿಮೆ ಎಂದರೆ ಒಂದು ಗಂಟೆಯಾಗಿತ್ತು .

ನಾಗರಾಜ ಅಪ್ಪನನ್ನು ಹಿಂಬಾಲಿಸುತ್ತಾ ಹಳ್ಳಕ್ಕೆ ಬಂದು ದಂಡೆಯ ಮೇಲೆ ಕುಳಿತುಕೊಂಡ. 25 ವರ್ಷಗಳ ಹಿಂದೆ ಶಾಲೆಗೆ ರಜಾ ಸಿಕ್ಕಾಗಲೆಲ್ಲಾ ಈ ಅಪ್ಪನ ಜೊತೆ ಬಂದು ಹೀಗೆ ದಂಡೆಯ ಮೇಲೆ ಬಿಸಾಕುತ್ತಿದ್ದ ಒಂದೊಂದೇ ಏಡಿಗಳನ್ನು ಆಯ್ದು ಚೀಲದಲ್ಲಿ ತುಂಬಿಕೊಳ್ಳುತ್ತಿದ್ದದ್ದು ನೆನಪಿಗೆ ಬಂತು. ಅಂದಿನಿಂದ ಇಂದಿನವರೆಗೆ ಈ

ಅಪ್ಪ ಹೀಗೆ ಇದ್ದಾನಲ್ಲಾ, ಅದೇ ಗಾಣ. ಅದೇ ಚೀಲ, ಅದೇ ಬಟ್ಟೆ, ನೋವಿನಿಂದ ನಾಗರಾಜ ಮುಂದೆ ಯೋಚಿಸದೆ ತಲೆ ಕೊಡವಿದ. ಚೀಲದ ತುಂಬ ಕಲ್ಲೇಡಿ ತುಂಬಿಕೊಂಡು ಮನೆ ಕಡೆ ಹೊರಟ ಅಪ್ಪನನ್ನು ನಾಗರಾಜನೂ ಹಿಂಬಾಲಿಸಿದ.

ಕಲ್ಲೇಡಿಗಳ ಚಿಪ್ಪು ಸ್ವಚ್ಛ ಮಾಡಿ, ಒಳ ಕಲ್ಲಿಗೆ ಹಾಕಿ ಜಜ್ಜಿ, ಅದಕ್ಕೆ ಹದವಾಗಿ ಮಸಾಲೆ ಹಾಕಿ ಗಮ ಗಮಾಯಿಸೋ ಹಾಗೆ ಎಸರು ಮಾಡಿ, ಎಸರಿಗೆ ಮುದ್ದೆ ಮಾಡಿ ಲಂಗೋಟಿ ಅಜ್ಜ ಮಗನನ್ನು ಊಟಕ್ಕೆ ಕರೆದ, 'ಬಾ-ಮಗ ಉಂಬೋಕೆ, ಕಲ್ಲೇಡಿ ಎಸರು, ಎಲ್ಲಾ ಕಾಯಿಲೆಗೆ, ಕಸಾರೆಗೆ ಮದ್ದಂತೆ ವರ್ಷಕ್ಕೊಂದ್ರಪಾನಾದ್ರೂವೆ ತಿನ್ನೇಕಂತ ಹಿರಿಕರು ಹೇಳಿದ್ರು-ಬಾ' ಎಂದು ತಾನು ಒಂದು ತಟ್ಟೆಯಲ್ಲಿ ಮುದ್ದೆ ಕಲ್ಲೇಡಿ ಎಸರನ್ನು ಬಡಿಸಿಕೊಂಡು ಮಗನಿಗೂ ಬಡಿಸಿ ಕುಳಿತುಕೊಂಡ. ನಾಗರಾಜ ಕಲ್ಲೇಡಿ ಎಸರಿನಲ್ಲಿ ಬಿಸಿ ಬಿಸಿ ಮುದ್ದೆಯನ್ನು ಅದ್ದಿ ನಾಲಗೆಯ ಮೇಲೆ ಅಲ್ಲಾಡಿಸಿ ಅದರ ಸ್ವಾದವನ್ನು ಸವಿದು ಗುಳುಂನೆ ನುಂಗಿದ, ಚಿಕ್ಕವನಿದ್ದಾಗ ಹಳದಿ ಕೊಬ್ಬನ್ನು ತೆಗೆದು ಬಾಯಿಯೊಳಗಿಡುತ್ತಿದ್ದ. ಕಣ್ಣೇಡಿಯ ಕೊಬ್ಬು ಎಂತಹ ರುಚಿ, ಅದರ ರುಚಿ ನಾಲಗೆ ಮೇಲೆ ಇನ್ನೂ ಹಾಗೆಯೇ ಇರುವಂತೆ ಭಾಸವಾಯಿತು ನಾಗರಾಜನಿಗೆ. ಅದರೊಟ್ಟಿಗೆ ಒಂಟಿಯಾಗಿರುವ ಅಪ್ಪ, ವಯಸ್ಸಾಗಿದೆ ಬೇರೆ. ಅವನ ಸ್ಥಿತಿಗೆ ಥಟ್ಟನೆ ಕಣ್ಣೀರು ಬಂತು. ಉಣ್ಣುತ್ತಲೇ ಮಗನ ಮುಖದ ಕಡೆ ದೃಷ್ಟಿ ಹಾಯಿಸಿದ ಅಜ್ಜ . ಮಗ ಕಣ್ಣೀರು ಹಾಕುವುದು ಕಂಡು 'ಯ್ಯಾಕೆ... ಯ್ಯಾಕೆ ಮಗ, ಎಸರು ಖಾರ ಆಗೈತ' ಎಂದು ಮುಗ್ಧವಾಗಿ ಕೇಳುತ್ತಿದ್ದಂತೆ ನಾಗರಾಜನಿಗೆ ಅದೆಲ್ಲಿತ್ತೋ ದುಃಖ ಒತ್ತರಿಸಿ ಬಂದು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ.

“ಯ್ಯ .. ಯ್ಯಾಕೆ ಮಗ ಅಳ್ತದೀಯಾ.. ಏನಾಯ್ತು ?' ಮಗನ ಕಣ್ಣೀರಿಗೆ ಕರಗಿದ ಲಂಗೋಟಿ ಅಜ್ಜ ಉದ್ವೇಗದಿಂದ ಉಣ್ಣುವುದನ್ನು ನಿಲ್ಲಿಸಿ ಕೇಳಿದ.

“ಅಲ್ಲ ಅಪ್ಪಯ್ಯ, ಇನ್ನೆಷ್ಟು ದಿನಾಂತ ಹಿಂಗೇ ಒಂಟಿಯಾಗಿ ಇರ್ತೀ . ಅಮ್ಮನ ಮುಖ ಅಂತು ನೋಡೋ ಭಾಗ್ಯ ಸಿಗಲಿಲ್ಲ. ಚಿಕ್ಕಂದಿನಿಂದ ಸಾಕಿ ಬೆಳ್ಸಿ, ಓದ್ಸಿದಿ. ಈಗ ನಾ ದೂರದ ದೇಶದಾಗ ಇಂಜಿನಿಯರ್ ಆಗೇನಿ, ಕೈತುಂಬಾ ದುಡ್ಡಿದೆ ನಾ ಅಲ್ಲಿ ಹೆಂಡ್ತಿ ಮಕ್ಕಳ ಜೊತೆ ಚೆಂದಾಗಿವ್ನಿ, ನೀ ಇಲ್ಲಿ ಮುಪ್ಪಿನಾಗ್ ಮುಳ್ಳಾಗ ಬಿಸ್ಲಾಗ್ ಹೊಟ್ಟೆಪಾಡಿಗೆ ಒಂದ್ದಾಡ್ತಿದ್ರ ಅದೇನ್ ಚಂದಾಗಿರ್‍ತೈತಿ ಹೇಳು ಮತ್ತೆ '.

ಲಂಗೋಟಿ ಅಜ್ಜನ ಇಡೀ ಬದುಕಿನ ಬವಣೆ ಎಲ್ಲ ನಾಗರಾಜನ ಮಾತಿನಲ್ಲಿ ಮೂರ್ತರೂಪ ಪಡೆದಿತ್ತು. ತಾಯಿಯಿಲ್ಲದ ತಬ್ಬುಲಿಗೆ ಸಾಕಿ ಬೆಳೆಸಿದ ಅಪ್ಪನನ್ನು ಮುಪ್ಪಿನಲ್ಲಿ ಚೆನ್ನಾಗಿ ನೋಡಿಕೊಳ್ಳಬೇಕೆಂಬ ಬಯಕೆ ಆತನಲ್ಲಿತ್ತು. ನಾಗರಾಜನ ಮನದ ಇಂಗಿತ ಅಜ್ಜನಿಗೆ ಗೊತ್ತಿಲ್ಲ ಅಂತ ಏನಲ್ಲ . ಹಾಗಂದುಕೊಂಡು ತನ್ನ ಮನದ ವಿರುದ್ಧದ ಬದುಕನ್ನು ಅವನೆಂದೂ ಇಷ್ಟಪಟ್ಟವನಲ್ಲ. ಚಿಕ್ಕವಯಸ್ಸಿನಲ್ಲಿ ಹೆಂಡತಿಯನ್ನು ಕಳೆದುಕೊಂಡಾಗ ಕೇರಿ ಜನರೆಲ್ಲಾ ಮತ್ತೊಂದು ಮದುವೆಗೆ ಒತ್ತಾಯಿಸಿದ್ರು. ಆದ್ರೆ ಅದೇಕೋ ಅವನಿಗೆ ಅದು ಒಗ್ಗಲಿಲ್ಲ. ಮಗನಲ್ಲಿಯೇ

ಎಲ್ಲವನ್ನೂ ಕಂಡು ತೃಪ್ತಿ ಪಟ್ಟ. ಮಗ ಬೆಳೆದು ಓದಿ ಕೈತುಂಬಾ ಸಂಪಾದಿಸುತ್ತಿರುವುದನ್ನು ಕಂಡು ಸಂತೋಷಪಟ್ಟ. ಅವನು ಮಗನನ್ನು ಕುರಿತು

"ಅದೇನೋ ಹೇಳ್ತಾರಲ್ಲ ಮಗ, ಯೋಗಿ ಪಡ್ಡಿದ್ದು ಯೋಗಿಗೆ, ಜೋಗಿ ಪಡ್ಡಿದ್ದು ಜೋಗಿಗೆ ಅಂತ. ಹಂಗೆ ನೀ ಓದಿ ದೂರದ ದೇಸ್ದಾಗ ಕೆಲಸ ಮಾಡ್ತಿ. ನೀ ಪಡ್ಡಿ ನಿಂಗೆ ಮಗ, ನಂಗೆಲ್ಲಿ ಆ ಭಾಗ್ಯ ಉಣ್ಣು ಮಗ ಉಣ್ಣು' ನಕ್ಕ ಲಂಗೋಟಿ ಅಜ್ಜ, ಅಪ್ಪನ ಮಾತು ಕೇಳಿದ ನಾಗರಾಜನಿಗೆ ಸಿಟ್ಟೆ ಬಂತು.

"ನೀ ಹಂಗ ನನ್ನ ಮಾತ್ರ ಅಸಡ್ಡೆ ಮಾಡ್ಬೆಡ ತಿಳೀತ" , ಊಟದ ತಟ್ಟೆಯನ್ನು ತಳ್ಳಿ ಎದ್ದು ಎಂಜಲು ಕೈಯಲ್ಲಿಯೇ ಜಗುಲಿ ಮೇಲೆ ಹೋಗಿ ಕುಳಿತ.

"ಸಿಟ್ಟಾಗ ಬ್ಯಾಡ ಮಗ, ಸಿಟ್ಟಾಗ ಬ್ಯಾಡ" ಎಂದು ಮಗನ ಹಿಂದಿಂದೆ ತಾನೂ ಎಂಜಲು ಕೈ ಎತ್ಕಂಡು ಹೋಗಿ ಎಡಗೈಯಿಂದ ಮಗನ ನೆತ್ತಿ ಸವರಿ ಎದೆಗವಚಿಕೊಂಡ. ಅಪ್ಪನ ಎದೆಯ ಮೇಲೆ ತಲೆಯಿಟ್ಟ ನಾಗರಾಜನ ಸಿಟ್ಟು ಝುರನೆ ಇಳಿದು ಹೋಯ್ತು. ನಾಗರಾಜ ಚಿಕ್ಕವನಿದ್ದಾಗ, ಸಿಟ್ಟು ಮಾಡಿದಾಗಲೆಲ್ಲ ಅಪ್ಪ ತೋರಿಸುತ್ತಿದ್ದ ವರಸೆ ಅದು. ಅವ್ವನ ಮಮತೆಯ ಮಡಿಲನ್ನು ಕಾಣದ ನಾಗರಾಜನಿಗೆ ಅಪ್ಪನ ಎದೆಯ ಸಾಗರದಲ್ಲಿ ಅದೇನೋ ಅರಿಯದ ಮೋಡಿ ಇದೆ ಎಂದು ಅನಿಸುತ್ತಿತ್ತು. ಅವನು ಕ್ಷಣಕಾಲ ಹಾಗೆ ಅಪ್ಪನ ಎದೆಯ ಮೇಲೆ ಒರಗಿಯೇ ಇದ್ದ . ನೀರವ ಮೌನ. ನನ್ನಿಂದ ಈ ಶ್ರಮಜೀವಿ ಏಕೆ ಹಸಿದಿರಬೇಕು ಎಂದು ನಾಗರಾಜನಿಗೆ ಅನ್ನಿಸುತ್ತಿದ್ದಂತೆ ಎದ್ದು ಕಣ್ಣೀರು ಒರೆಸಿಕೊಂಡು ತಟ್ಟೆಯ ಮುಂದೆ ಹೋಗಿ ಮೌನವಾಗಿ ಊಟ ಮಾಡಲಾರಂಭಿಸಿದ.

ಮಗನೊಂದಿಗೆ ಸಂತೃಪ್ತಿಯಿಂದ ಉಂಡ ಲಂಗೋಟಿ ಅಜ್ಜ, ಹಿತ್ತಲಕಡೆ ಹಲಸಿನ ಮರದ ನೆರಳಲ್ಲಿ ಅಡ್ಡಾದ. ಬಿರು ಬಿಸಿಲು, ಹಲಸಿನ ಮರದ ನೆರಳ ತಂಪು ಹಾಯ್ ಎನಿಸಿತು. ಹಿತ್ತಲು ತುಂಬಾ ಕೊಂಬೆ ರಂಬೆಗಳನ್ನು ಚಾಚಿ ನಿಂತ ಹಲಸಿನ ಮರವನ್ನು ಮಲಗಿದ್ದಲ್ಲಿಂದಲೇ ಕಣ್ಣಾಡಿಸಿದ. ಮರದ ಕೊಂಬೆ ರಂಬೆಗಳೆಲ್ಲಾ ಕಾಯಿ ಕಚ್ಚಿದ್ದವು. ಹಲಸಿನ ಹೂವಿನ ಒಂದು ಬಗೆಯ ಮಂದ ಸುವಾಸನೆ ಹಿತ್ತಲ ತುಂಬಾ ಹರಡಿತ್ತು. ಅವನು ಮದುವೆಯಾದ ವರ್ಷ ಹೊಸಬಿಸಿಯಲ್ಲಿ ಮಾವನ ಮನೆಯವರು ಕಳಿಸಿದ ಹಲಸಿನ ಹಣ್ಣು ತಿಂದು ಎಸೆದ ಬೀಜ ಮೊಳೆತು ಸಸಿಯಾಗಿತ್ತು. ಸಸಿಯನ್ನು ದನ-ಕುರಿ ತಿನ್ನದಂತೆ ಬಹಳ ಎಚ್ಚರಿಕೆಯಿಂದಲೇ ಜೋಪಾನ ಮಾಡಿದ ಅವಳು, ಅದು ಮರವಾಗಿ ಕಾಯಿ ಕಚ್ಚಿ ಫಲ ಬಿಡುವ ಮೊದಲೇ ಮಗನನ್ನು ಕೈಯಲ್ಲಿಟ್ಟು ಕಣ್ಮರೆಯಾಗಿದ್ದಳು. ಕಾಲದ ಖಡ್ಗದ ಧಾರೆಗೆ ಎದುರು ಯಾರು? ಅವಳ ನೆನಪು ಕಾಡುತ್ತಲೇ ಅವನ ಅಂತರಂಗವನ್ನೇ ಭೇದಿಸಿದ ನಿಟ್ಟುಸಿರೊಂದು ಹೊರಬಿತ್ತು .

ಬೇಸರವಾದಗಲೆಲ್ಲ ಆ ಮರದ ಕೆಳಗೆ ಬಂದು ಅಡ್ಡಾಗಿ ಕನಸು ಕಟ್ಟೋದು ಅವನಿಗೊಂದು ಅಭ್ಯಾಸವಾಗಿತ್ತು. ನಾಗರಾಜ ಬೆಳೆದು ದೊಡ್ಡವನಾದ ಮೇಲೆ ಪಕ್ಕದ

ಕೇರಿ ಕೆಂಚನ ಮಗಳು ಚೆಂದುಳ್ಳಿ ಚೆಲುವಿ ಚೆನ್ನಿಯೊಂದಿಗೆ ಮದ್ವೆ ಮಾಡಿ, ಮೊಮ್ಮಕ್ಕಳನ್ನು ಎತ್ತಾಡಿಸುವ ಕನಸು ಕಟ್ಟಿದ್ದು ಈ ಮರದ ಕೆಳಗೆನೇ. ಚನ್ನಿ ಎಂತಹ ಗುಣಗಾತಿ ಹುಡ್ಗಿ. ನಾಗರಾಜನಿಗೆ ಹೇಳಿ ಮಾಡಿಸಿದ ಜೋಡಿ. ಆದರೆ ಮಗ ಓದ್ಕೊಂಡು ಕೆಲಸಕ್ಕೆಂದ ಹೊರದೇಶಕ್ಕೆ ಹೋದವನು ಒಂದೇ ವರ್ಷದಾಗ ಆ ಬೆಳ್ಳಾನೇ ಹುಡ್ಗೀನ ತನ್ನೊಟ್ಟಿಗೆ ಕರ್‍ಕೊಂಡು ಬಂದು 'ಅಪ್ಪ ನಿನ್ನ ಸೊಸೆ ಆಶೀರ್ವಾದ ಮಾಡು' ಎಂದಾಗ ಏನು ಮಾಡೋಕು ಅಂತ ಗೊತ್ತಾಗದೆ ತಡಬಡಾಯಿಸಿದ್ದ. ಅಂದು ಹೋದ ಮಗ ಇಂದು ಬಂದಾನೆ. ತಾನಿರುವಲ್ಲಿಗೆ ಬಾ ಅಂತ ಕರೆಯುತ್ತಿದ್ದಾನೆ. ಹೆಂಗೆ ಹೋಗೋದು? ದೇಶ ಎಂತದೋ, ಜನ ಎಂತವರೋ? ನನ್ನ ಜನ, ನನ್ನ ಮಣ್ಣು, ನೀರು – ನೆಡಿ ಅಲ್ಲಿಲ್ಲ . ಇಲ್ಲ.... ಇಲ್ಲ .. ಹೋಗೋದು ಸಾಧ್ಯವಿಲ್ಲ . ನೋಡಿದಿಯಾ ಸಾತು, ನಿನ್ನಗ ಕಾಣದ ಊರಿಗೆ ನನ್ ದೂಡಾಕ್ ಹೊಂಟ. ನಾಹ್ಯಾಂಗ್ ಹೋಗ್ಲಿ ಹೇಳು ಎಂದು ಮರದ ಬೊಡ್ಡೆಯ ಮೇಲೆ ಕೈಯಾಡಿಸುತ್ತಿದ್ದವನಿಗೆ ಹಂಗೆ ಜೊಂಪು ಹತ್ತಿತ್ತು . ಕೆಳಗಿನ ಕೇರಿಯ ಶಿವನಿಯ ಮಗ ಬಂದು.

"ಅಜ್ಜ ... ಅಜ್ಜ .. ಅಮ್ಮ ಕರೀತಾನೆ' ಎಂದು ಕೂಗಿದಾಗ ತಟ್ಟನೆ ಕಣ್ಣು ತೆರೆದ ಲಂಗೋಟಿ ಅಜ್ಜ .

'ಯ್ಯಾಕಂತೆ'.

"ಏನೋ – ಗೊತ್ತಿಲ್ಲಜ್ಜ'

"ನಡಿ ಬಂದೆ' ಎಂದವನೆ ಕೈಕಾಲಿಗಂಟಿದ ಸಣ್ಣ ಸಣ್ಣ ಕಲ್ಲರಳು, ಮಣ್ಣು, ಕಸ - ಕಡ್ಡಿಯನ್ನು ಝಾಡಿಸಿಕೊಂಡು ಎದ್ದ. ಶಿವನಿ ಮನೆಗೆ ಬಂದಾಗ ಆಕೆ, ಚಿಕ್ಕ ಮಗೂನ ಮಡಿಲಲ್ಲಿ ಹಾಕ್ಕೊಂಡು ಕಣ್ಣೀರು ಹಾಕ್ತ ತಲೆ ಮೇಲೆ ಕೈ ಹೊತ್ಕೊಂಡು ಕೂತ್ಕೊಂಡಿಳಿದ್ಲು .

'ಏನಾಯ್ತು ಮಗೂಗೆ'

ಏನೂ ತಿಳಿಯಾಕ್‌ವಲ್ದು ಅಜ್ಜ ಎಂದು ಕಣ್ಣೀರು ಒರೆಸಿಕೊಂಡಳು. ಮಗು ಹೊಟ್ಟೆ ಮೇಲಿನ ಬಟ್ಟೆ ಸರಿಸಿ ನೋಡಿದ. ಮಗು ದೀರ್ಘವಾಗಿ ಉಸಿರು ಎಳೆದು ಎಳೆದು ಬಿಡುತ್ತ, ಆ ಕಡೆ ಈ ಕಡೆ ಗುಡ್ಡೆ ತಿರುಗಿಸುತ್ತಾ, ಆಗಾಗ ಬೆಚ್ಚಿ ಬಿದ್ದು ಕಿರುಚುತ್ತಿತ್ತು . ಲಂಗೋಟಿ ಅಜ್ಜನಿಗೆ ಅದು ಬಾಲಗ್ರಹ ಕಾಯಿಲೆ ಅಂತ ಗೊತ್ತಾಗುತ್ತಲೆ, 'ಶಿವನಿ ಮಗೂಗೆ' ಬಾಲಗ್ರಹ ಸೇರ್‍ಕೊಂಡೈತಿ ನೀ ಹಿಂಗ್ ಕೂತ್ಕೊಂಡಿದ್ರ ಮಗೂನ ಕಳ್ಕಂತ್ತೀಯ ತಗೊಂಡೋಗ್ ಆಸ್ಪತ್ರೆಗೆ' ಜೋರು ಮಾಡಿದ.

'ನೀ ಬಾಲಗ್ರಹಕ್ಕೆ ಔಷ್ಧಿ ಕೊಡ್ತಿ ಅಂತ ಪಕ್ಕದ್ಮನಿ ಗಂಗವ್ವ ಹೇಳ್ತು ಅಜ್ಜ ಅದಕ್ಕೆ ಹೇಳಿ ಕಳಿಸಿವ್ನಿ'.

"ಹೌದು ಔಷಧ ಕೊಡ್ತೀನಿ, ಆದ್ರೆ ಬಾಲಗ್ರಹ ಬಂದು ಮೀರೈತಿ. ಈಗ ಔಷಧಿ ನಾಟಾಂಗಿಲ್ಲ . ನೀ ಆಸ್ಪತ್ರೆಗೆ ತಗೊಂಡು ಸರ್‍ರನೆ ನಡಿ' - ಎಂದವನೇ ಎದ್ದು ನಿಂತ.

'ಆಸ್ಪತ್ರೆಗೆ ದುಡ್ಡೆಲಿಂದ ತರ್ಲೋ ಶಿವನೆ ಈ ಹಾಳಾದವ ಸಂಕಟಕಿಲ್ಲ ಅಂತ ಮಡಗಿದ್ ನಾಕ್ಕಾಸನ್ ಕಿತ್ತೊಂಡೋಗಿ ಹೊಟ್ಟೆಗ್ ಹೆಂಡ ಸುರ್ಕೊಂಡು ಬಂದ ಕುಂತವ್ನೆ . ಅವನೊಟ್ಟೆ ಸೀದ್ ಹೋಗಾ' ಅಂತ ಮೂಲೆ ಹಿಡ್ಕೊಂಡ್ ತೂಗಡಿಸುತ್ತಾ ಕುಂತಿದ್ದ ಗಂಡನ ಕಡೆ ತಿರುಗಿ ಲಟಿಗಿ ಮುರಿದು ಸಾಪಳಿಸಿದ್ಲು. ಲಂಗೋಟಿ ಅಜ್ಜನಿಗೆ ಪಿಚ್ಚೆನಿಸಿತು. ಕುಡಿದು ಮೂಲೆಯಲ್ಲಿ ಕುಳಿತು ತೊದಲಿಸುತ್ತಿದ್ದವನ ಕಡೆ ಒಮ್ಮೆ ನೋಡಿ ಹೇಸಿ ಲಂಗೋಟಿಯಲ್ಲಿ ಕಟ್ಟಿದ ಗಂಟು ಬಿಚ್ಚಿ ಸ್ವಲ್ಪ ದುಡ್ಡು ಶಿವನಿ ಕೈಗಿಟ್ಟು .

“ಏಳು ಮೊದ್ಲು ಮಗೂನ ಆಸ್ಪತ್ರೆಗೆ ಕರ್ಕೊಂಡೋಗು' ಒತ್ತಾಯಿಸಿ ಮನೆ ಕಡೆ ಹೆಜ್ಜೆ ಹಾಕುತ್ತಲಿದ್ದವನಿಗೆ ನಾಳೆ ಗುರುವಾರ ಎಂಬುದು ಥಟ್ಟನೆ ನೆನಪಿಗೆ ಬಂತು. ಪ್ರತಿ ಗುರುವಾರ-ಭಾನುವಾರ ಲಂಗೋಟಿ ಅಜ್ಜ ಮುಡದೋಷದ ಔಷಧವನ್ನು ಕೊಡುತ್ತಾನೆ. ಬಾಣಂತಿಯರಿಗೆ, ಎಳೆ ಮಕ್ಕಳಿಗೆ ಹಸಿರೆಲೆ ಔಷಧಿ ಕೊಡುತ್ತಾನೆ. ಅದರಿಂದ ಬಾಳ ಜನರಿಗೆ ಗುಣವೂ ಆಗಿರುವುದುಂಟು. ತೋಟದ ಬೇಲಿಸಾಲಿನ ಮೇಲೆ ಹಬ್ಬಿದ ಬಳ್ಳಿಯ ಸೊಪ್ಪಿಗಾಗಿ ಹುಡುಕಾಡುತ್ತಾ ನಡೆದ.

ಬೆಳಗ್ಗೆ ಏಳುತ್ತಲೇ ಮನೆ ಮುಂದೆ ಹೆಂಗಸರು ಮಕ್ಕಳು ಸುಮಾರು ಜನ ಸೇರಿದ್ರು. ಸೂರ್ಯನಿಗೆ ಎದುರಾಗಿ ಪೀಠ ಇಟ್ಟು ಒಬ್ಬೊಬ್ಬರನ್ನೇ ಪೀಠದ ಮೇಲೆ ಕುಳ್ಳಿರಿಸಿ, ಸೊಪ್ಪನ್ನು ಚೆನ್ನಾಗಿ, ಕೈಯಿಂದ ಉಜ್ಜಿದ. ಅದರ ರಸವನ್ನು ಮೊದಲು ಬಾಯಿಗೆ ಆಮೇಲೆ ಒಂದೆರಡು ಹನಿಯನ್ನೂ ಕಣ್ಣಿಗೂ, ಮೂಗಿನ ಹೊಳ್ಳೆಗೂ ಬಿಡುತ್ತಿದ್ದ. ಒಂದು ಬೇರಿನ ತುಂಡನ್ನು ಕೊರಳಿಗೆ ಕಟ್ಟಿ 'ಮೂರು ದಿನ ಹಿಂಗೆ ಮಾಡ್ಬೇಕು. ನಾಕದಿನಕ್ಕೆ ಬೇರು ಬಿಚ್ಚಿ ಹಸಿರು ಮರಕ್ಕೆ ಕಟ್ಟಬೇಕು' ಎಂದು ಹೇಳಿದ. ಹಿಂಗೆ ಬಂದ ಬಂದವರಿಗೆ ಔಷಧಿ ಕೊಡೋದು ನಡೆಯುತ್ತಿತ್ತು. ಒಂದೆರಡು ಬಾರಿ ನಾಗರಾಜ ಹೊರ ಒಳಗೆ ಓಡಾಡಿದ. ಅಪ್ಪನ ಸೇವಾಕಾರ್ಯ ಸದ್ಯಕ್ಕೆ ಮುಗಿಯುವಂತೆ ಕಾಣಲಿಲ್ಲ. ತಾಳ್ಮೆಕೆಟ್ಟು .

“ಬಿಡು ಅಪ್ಪಯ್ಯ ನಿನ್ ಕೆಲ್ಸ, ನಂಗೆ ಟೈಮಿಲ್ಲ, ಬಸ್ಸಿಗೆ ಹೊರಡ್ಬೇಕು' ಎಂದು ಒತ್ತಾಯಿಸಿದ. 'ಇರು ಮಗ ದೂರ ದೂರದಿಂದ ಬಂದವ್ರೆ. ಪಾಪ ಹಸ್ಕೊಂಡು ಬಂದಿರ್ತವ್ರೆ ಮಕ್ಕುಮರಿಗಳೂ' - ತನ್ನ ಕಾರ್ಯದಲ್ಲಿ ಮಗ್ನನಾದ. ಇನ್ನೊಂದೆರಡು ಜನರಿಗೆ ಔಷಧ ಕೊಡುವುದಿರುವಾಗಲೇ ನಾಗರಾಜ ಸೂಟಕೇಸ್ ಹಿಡಿದುಕೊಂಡು ಹೊರಬಂದ.

“ಅಪ್ಪಯ್ಯ ನಂಗೆ ಟೈಮಾತು ನಾ ಇನ್ ಬರ್ತೀನಿ' –ಎಂದು ಹೊರಡಲನುವಾದ. ತಡಿ ಮಗ ಎಂದು ಲಂಗೋಟಿ ಅಜ್ಜ ಕೈಯಲ್ಲಿದ್ದ ಔಷಧಿಯನ್ನು ಹೋಗಿ ಹಳೆಯ ಟ್ರಂಕನ್ನು ಅಲ್ಲಿಯೇ ತಟ್ಟೆಯಲ್ಲಿಟ್ಟು ಓಡೋಡಿ ಮನೆಯೊಳಗೆ ತಡಕಾಡಿ ಬೆಳ್ಳಿಯ ಕುಂಕುಮದ ಬಟ್ಟಲನ್ನು ತಂದು ಮಗನ ಕೈಯಲ್ಲಿಟ್ಟ. ಅವರ ಮದುವೆಯಲ್ಲಿ ಹೆಂಡತಿಯ ತೌರೂರಿನವರು ಕೊಟ್ಟ ಕಾಣಿಕೆ ಅದು. ಎಂತಹ ಕಷ್ಟದ ಕಾಲದಲ್ಲೂ ಅದನ್ನು ಮಾರದೆ ಹೆಂಡತಿಯ ನೆನಪಿನ ಗುರುತಾಗಿ ಕಾಪಾಡಿಕೊಂಡು ಬಂದಿದ್ದ.

ಬಟ್ಟಲನ್ನು ಕೈಯಲ್ಲಿ ಹಿಡಿದುಕೊಂಡ ನಾಗರಾಜ ಬಟ್ಟಲನ್ನೊಮ್ಮೆ ಅಪ್ಪನನ್ನೊಮ್ಮೆ ನೋಡಿದ. ಕರುಳು ಕಿತ್ತು ಬಂದಂತಾಯಿತು. ಆ ಅಮೇರಿಕಾ, ಉದ್ಯೋಗ, ಆ ಹೆಂಡತಿ ಆ ಮಕ್ಕಳು ಯಾರು ಬೇಡವೆಂದು ಸೂಟ್‌ಕೇಸನ್ನು ಮನೆಯಲ್ಲಿ ಬಿಸಾಕಿ ಅಪ್ಪನ ಸೇವೆ ಮಾಡಿಕೊಂಡಿದ್ದು ಬಿಡಬೇಕೆಂದುಕೊಂಡ. ಆ ಕ್ಷಣ ಬಿಕ್ಕಳಿಸಿದ ಮಗನನ್ನು ಅಜ್ಜ ಎದೆಗವಚಿ ಸಂತೈಸಿದ. ಒಂದು ಕ್ಷಣ ಮಗ ಹೋಗುವುದನ್ನು ನೋಡುತ್ತಾ ಕಣ್ಣು ತುಂಬಿಕೊಂಡ. ಮರುಕ್ಷಣ ಅರ್ಧಕ್ಕೆ ನಿಲ್ಲಿಸಿದ ಕೆಲಸವನ್ನು ಧ್ಯಾನಿಸಿ ಆ ಕಡೆ ಹೆಜ್ಜೆ ಹಾಕಿದ.

# ೯. ಊರನ್ನಾದರೂ ತೊರೆದೇವು ಪ್ರಾಣವನ್ನಾದರೂ ಬಿಟ್ಟೇವು, ಆದರೆ....

· ಎಸ್.ಆರ್.ಗುರುನಾಥ

ರಾತ್ರಿ ಉಂಡು ಮಲಗುವ ಹೊತ್ತು, ಮಲ್ಲೇಗೌಡರ ಮನೆಯ ಅಂಗಳದಲ್ಲಿ ಊರುಕೇರಿಯ ಜನರೆಲ್ಲಾ ಸೇರಿದರು. ಇದ್ದ ಒಂದೇ ಒಂದು ಭರ್ಜರಿ ಕುರ್ಚಿಯಲ್ಲಿ ಸರಿಯಾಗಿ ಕುಳಿತುಕೊಂಡ ಮಲ್ಲೇಗೌಡರು "ನಾನು ನಿಮ್ಮನ್ನೆಲ್ಲಾ ಇಲ್ಲಿಗೆ ಕರೆಸಿದ್ದು ಯಾಕೆ ಅಂತಾ ನಿಮಗೆಲ್ಲಾ ಗೊತ್ತೈತೆ. ನಾಲ್ಕೈದು ವರ್ಷದಿಂದ ಈ ಊರಾಗೆ ಮಾರಿ ಪರಿಸೆ ನಡೀಲಿಲ್ಲ, ಅದಕೋಸ್ಕರವಾಗಿ ಊರಾಗೆ ಏನೇನಾತು ಅಂಬೋದೆಲ್ಲಾ ನಿಮಗೆ ಗೊತ್ತೈತೆ. ಇನ್ನು ಮುಂದೂ ಇಂಗೆಲ್ಲಾ ಆಗೋದು ಬ್ಯಾಡ, ಈ ಬಾರೀನಾದರೂ ಪರಿಸೆ ಮಾಡನ. ಮಂಡಾಟ ಆಡಬ್ಯಾಡ್ರಿ. ಮತ್ತೆ ಯಾರೂ ಅಡ್ಡ ಬಾಯಿ ಹಾಕಬಾರ್ದು" ಎಂದರು. ಈ ಮಾತುಗಳು ನೆಟ್ಟಗೆ ಕೆಳಗೇರಿಯ ಜನರನ್ನು ತಟ್ಟಿದವು. ಗುಂಪಿನಲ್ಲಿ ಗುಜುಗುಜು ಸುರುವಾಯಿತು. ಕದರ, ಪಾತಲಿಂಗ, ಮುಸುವ, ಸುಂಕಜ್ಜ ಮತ್ತಿತರರು ಕುಂತಲ್ಲೇ ಹೊಸಕಾಡಿದರು. ಯಾರೂ ದನಿಯೆತ್ತಲಿಲ್ಲ.

ಪರಮೇಶಣ್ಣ ಎದ್ದು ನಿಂತು "ಪರಿಸೆ ನಿಂತ ನಾಕೈದು ವರ್ಷದಿಂದ ಊರು ತಣ್ಣಗಿತ್ತು ಮತ್ತೆ ಗದ್ದಲ ಶುರು ಹಚ್ಚಿಕೊಳ್ಳೋದು ಯಾಕೆ? ಪರಿಸೆ ಜಾತ್ರೆಗಿಂತ ಊರ ನೆಮ್ಮದಿ ಮುಖ್ಯ . ಮತ್ತೆ ಗಲಾಟೆ ಗದ್ದಲಕ್ಕೆ ಅವಕಾಶ ಮಾಡೋದು ಬೇಡ?" ಎಂದ.

ಮಲ್ಲೇಗೌಡ್ರು ದನಿ ಎತ್ತಿದರು. "ಹಿರೀಕರು ಮಾಡಿಕೊಂಡು ಬಂದಂತಹ ಪರಿಸೇನ ನಿಲ್ಲುಸ್‌ಬಾರ್ದು, ಅಂಗೆ ನಿಲ್ಲಿದ್ರೆ, ನಾಕೈದು ವರ್ಸದಿಂದ ಊರಾಗ ಏನೇನಾತು ಅಂಬದ್ನೆಲ್ಲಾ ನಾನೇ ಬಾಯ್ದಿಟ್ಟು ವದರ್ಬೇಕಾ?!"

"ಪರಮೇಶಣ್ಣ ಊರಾಗೆ ನಡೆದದ್ದಕ್ಕೂ ಪರಿಸೆ ನಿಂತದ್ದಕ್ಕೂ ಎಲ್ಲಿಗೆಲ್ಲಿಯ ಸಂಬಂಧ? ಈ ಕಾಲದಲ್ಲೂ ಅಂಥದ್ದೆಲ್ಲಾ ನಂಬೋದು ಬೇಡ. ಒಂದಿಷ್ಟು ಬೇರೆ ರೀತಿ ಯೋಜನೆ ಮಾಡ್ಬೇಕು" , ಮಲ್ಲೇಗೌಡ್ರು ಕೆರಳಿ ಕೆಂಡ]ದಂತಾಗಿ ದಡಗ್ಗನೆ ಎದ್ದು ನಿಂತು "ಪ್ಯಾಟ್ಯಾಗೆ ನಾಕಕ್ಷಾರ ಕದಿನಂತ ಬಾಯಿಗೆ ಬಂದಂತೆ ಮಾತಾಡ್ತೀಯಾ ? ನಿಮ್ಮಂಥರಿಂದ್ದೇ ಊರೂ ಕೇರಿ ಕೆಟ್ಟು ಹಾಳಾಗಿ ಹೋಗಿರಾದು. ಮೊದಲೆಲ್ಲಾ ನಿಮ್ಮಂಥವರು ಇರ್ಲಿಲ್ಲ. ಊರಾಗೆ ಸಾಂಗವಾಗಿ ಹಬ್ಬ, ಜಾತ್ರೆ, ಪರಿಸೆಗಳು ತಂಟೆ ತಕರಾರು ಇಲ್ದಂಗೆ ನಡೀದಿದ್ದು, ಗುರು ಹಿರೇರಿಗೆ ಗೌರವ ಇರ್ತಿತ್ತು. ಈಗ ನೋಡ್ರಿ !" ಎಂದೆಲ್ಲಾ ಗುಡುಗಿದರು.

ಒತ್ತಟ್ಟಿ ವಾರೆಗೆ ಕುಂತಿದ್ದ ಕೆಳಗೇರಿ ಜನರ ನಡುವೆ ಮತ್ತೆ ಅದೇ ಗುಜುಗುಜು! ಮುಂದಾಳುಗಳಂತಿದ್ದ ಬಂಗಾರಿ, ಜಡಿಯಾ, ರಾಜ, ದುರುಗೇಶಿ ಮೊದಲಾದವರು ಕುಂತಲ್ಲೇ ಹೊಸಕಾಡಿದರು. ಎದ್ದು ನಿಲ್ಲಲಿಲ್ಲ. ಬಾಯಿ ಬಿಡಲಿಲ್ಲ! ಒಟ್ಟಾರೆ ಮಾರಿ ಪರಿಸೆ ಮಾಡಬೇಕೆಂಬ ಇರಾದೆ ಯಾರಿಗೂ ಇದ್ದಂತೆ ಕಾಣಲಿಲ್ಲ . ನಾಕೈದು ವರ್ಷಗಳ ಹಿಂದೆ ಇವರು ಪರಿಸೆಗೆ ಕೈ ಜೋಡಿಸಿರಲಿಲ್ಲ. ನಾವು ಊರು ಮಂದಲ ಕಸ ಹೊಡೆಯಲ್ಲ, ಮಾರಮ್ಮನ ಗುಡಿ ಮುಂದೆ ಕುರಿ ಕ್ವಾಣ ಕಡಿಯಲ್ಲ. ಸರಗ ಹಾಕಲ್ಲ, ಉರಮೆ ತಪ್ಪಡಿ ಬಡಿಯಲ್ಲ ಎಂದು ಮುಂತಾಗಿ ಹಠ ಹಿಡಿದುಬಿಟ್ಟರು. ! ಇದ್ದಕ್ಕಿದ್ದಂಗೇ ಹಿಂಗ್ಯಾಕೆ ಗುಂಜ್ಯಾಡ್ತಾರೆ ಎಂಬುದೇ ಒಂದು ಸೋಜಿಗದ ಸಂಗತಿ. ಇದೆಲ್ಲಾ ದಲಿತ ಸಂಗದವರ ಇಕ್ಮತ್ತು ಅನ್ನಿಸಿತು. ಕೆಳಗೇರಿಯ ಜನರನ್ನು ಕುರಿತು ಊರಾಗ್ನ ಕೆಲಸ ಕಾರ್ಯಗಳಿಗೆ ಹಿಂಜರೀಬಾರ್ದು. ಎಲ್ಲರೂ ಒಗ್ಗಟಾಗಿರಬೇಕು. ಅದುಬಿಟ್ಟು ಹಿಂಗೆಲ್ಲಾ ನೀವು ಕಣೇವು ಹಾಕ್ಕೊಂಡ್ರೆ ಪರಿಸೆ ನಡೆಯಾದೆಂಗೆ? ಯಥಾಪ್ರಕಾರವಾಗಿ ಕುರಿ ಕ್ವಾಣ ಕೊಡ್ತೀವಿ. ರಗಳೆ ಮಾಡಬ್ಯಾಡ್ರಿ ಎಂದದ್ದೆಲ್ಲಾ ವ್ಯರ್ಥವಾಯಿತು. ಕಡೆಗೂ ಕೆಳಗೇರಿ ಜನ ದಾರಿಗೆ ಬರಲಿಲ್ಲ. ಸರಿ, ಊರು ಕೇರಿಲಿ ಸಿಟ್ಟು ದ್ವೇಷದ ಬಿಸಿ ಏರಲಾರಂಭಿಸಿತು. ಸಣ್ಣಪುಟ್ಟ ವಿಷಯಗಳಿಗೆಲ್ಲಾ ಪರಸ್ಪರ ಬೈದಾಟ, ಗುದ್ದಾಟ ಶುರುವಾಯಿತು. ಇನ್ನೇನು ಹೊಡೆದಾಟ ಬಡಿದಾಟ ಭುಗಿಲೇಳಬಹುದು ಅನ್ನುವುದರೊಳಗೆ ಮಾಂತಿಯ ಮುಂದಾಳತ್ವದಲ್ಲಿ ಹತ್ತಿರದ ನಗರದಿಂದ ಜಿಲ್ಲಾ ಮಟ್ಟದ ದಲಿತ ಮುಂದಾಳುಗಳೂ ತಹಶೀಲ್ದಾರರೂ ಪೊಲೀಸರೂ ಬಂದು ಶಾಂತಿ ಸಭೆ ನಡೆಸಿ “ಸದ್ಯಕ್ಕೆ ನೀವು ಪರಿಸೆ ಮಾಡಿದ್ದರೂ ಪರವಾಗಿಲ್ಲ. ಊರಲ್ಲಿ ಗಲಾಟೆ ಗದ್ದಲ ಮಾತ್ರ ಮಾಡ್ಕೊಬೇಡಿ. ಎಲ್ಲರೂ ಅಣ್ಣ ತಮ್ಮಂದಿರಂಗೇ ನಡ್ಕೊ ಬೇಕು” ಎಂದೆಲ್ಲಾ ಭಾಷಣ ಮಾಡಿ, ಪರಸ್ಪರ ಎಲೆ ಅಡಿಕೆ ಕೊಡಿಸಿ ಹೋಗಿದ್ದರು.

ಸದ್ಯದ ಬಿಸಿ ತಣ್ಣಗಾದರೂ ಪರಿಸೆಯಂತೂ ನಡೆಯಲಿಲ್ಲ. ಇದರ ದೆಸೆಯಿಂದೆಂಬಂತೆ ಮುಂದಲ ವರ್ಷಗಳಲ್ಲಿ ಮಳೆ ಬೆಳೆ ಕಡಿಮೆಯಾಗಿ ದನಕರುಗಳಿಗೆ ಮೇವು ನೀರಿಲ್ಲವಾಗಿ ತರಾವರಿ ಪಡಿಪಾಟಲು ಶುರುವಾಯಿತು. ಊರಾಗಳ ಹಲವಾರು ಎಮ್ಮೆ ಹಸುಗಳು ಇದ್ದಕ್ಕಿದ್ದಂಗೆ ಸತ್ತು ಹೋದವು. ಕೆಲವರು ವಾಂತಿ ಭೇದಿಯಿಂದ ಮಣ್ಣಾದರು. ಅಡಿಕೆ ತೆಂಗಿನ ಮರಗಳಿಗೆ ರೋಗ ಅಡರಿ ತೋಟಗಳು ಹಾಳಾದವು. ಮಲ್ಲೇಗೌಡರ ಚಿಕ್ಕ ಹೆಂಡತಿ ಯಾರೊಂದಿಗೋ ಓಡಿ ಹೋದಳು. ಇವಕ್ಕೆಲ್ಲಾ ಮಾರಮ್ಮನ ಪರಿಸೆ ಮಾಡ್ದೇ ಇರೋದೇ ಕಾರಣ. ಇನ್ನ ಏನೇನೂ ಗಾಚಾರ ಕಾದದವೋ ಏನೋ! ಇನ್ನು ಮ್ಯಾಲಾದರೂ ಪರಿಸೆ ಮಾಡಬೇಕು ಅಂದುಕೊಂಡದ್ದರ ನಿಮಿತ್ತವೇ ಮಲ್ಲೇಗೌಡರ ಊರ ಜನರನ್ನೆಲ್ಲಾ ಮನೆಯ ಬಳಿಗೆ ಕರೆಸಿಕೊಂಡದ್ದು .

ಇಲ್ಲೀತಂಕ ಜನರ ನಡುವೆ ತೆಪ್ಪಗೆ ಕುಂತಿದ್ದ ಮಾಂತಿ ಎದ್ದು ನಿಂತು “ಈ ಬಾರಿಯ ಪರಿಸೇನಾ ಹೆಂಗೆ ಮಾಡಬೇಕು ಅಂತಲಾದರೂ ಹೇಳ್ರಿ” ಎಂದು ಪ್ರಶ್ನಿಸಿದ. ಮಲ್ಲೇಗೌಡರು “ಸಿಮೇಲೆಲ್ಲಾ ಹೆಂಗೆ ಮಾಡ್ತರೋ ಅಂಗೇ ಮಾಡ್ಬೇಕು. ನಾವು ನಿಮಗೆ

ಕುರಿ ಕ್ವಾಣಾ ಕೊಡ್ತೀವಿ. ನೀವು ಸರಗ ಹಾಕಿ, ಊರ ಮುಂದಲ ಕಸ ಹೊಡುದು, ಕುರಿ ಕ್ವಾಣ ಕಡುದು, ತಪ್ಪಡಿ ಉರುಮೆ ಬಡೀಬೇಕು. ಇದೇ ನೀತಿ ನೇಮಕ, ನಮ್ಮ ಹಿರೀಕರು ನಡ್ಕಂಡಂಗೆ ನಾವೂ ನಡ್ಯಾಬೇಕು. ನಮ್ಮ ನಮ್ಮ ಸಂಪ್ರದಾಯನ ಯಾವತ್ತಿಗೂ ಕೈಬಿಡಬಾರು ... ಇದುನ್ನೇ ನಾನು ಹೇಳೋದು" ಎಂದರು.

ಗುಜು ಗುಜು ಸದ್ದು ಎಂಬುದು ಈಗ ಗದ್ದಲಾಗಿ ಪರಿಣಮಿಸಿತು.

"ನಾವು ಮೊದಲಿಂದಲೂ ಹೇಳೋದೂ ಇದೇ ಮಾತ್ನೆ. ಊರಿನ ಕೆಲಸ ಅಂದರೆ ಎಲ್ಲರಿಗೂ ಸೇರಿದ್ದು . ಕೆಳಗೇರಿ ಮ್ಯಾಗೇರಿ ಅಂಬೋ ಭೇದ ಭಾವ ಯಾಕೆ? ನಾವು ಇನ್ನು ಮುಂದೆ ಕುರಿ ಕ್ವಾಣಾನ ಬಲಿ ಕೊಡಲ್ಲ. ಸರಗ ಹಾಕಲ್ಲ, ಉರುಮೆ ತಪ್ಪಡಿ ಬಡಿಯಲ್ಲ, ಬನ್ನಿ ಎಲ್ಲರೂ ಸೇರಿ ಊರ ಮಂದಲ ಕಸ ಹೊಡೆಯೋಣ. ಮಾರಮ್ಮನ ಗುಡಿ ಬಳಿಯೋಣ.." ಎಂಬಂಥ ಮಾಂತಿಯ ಮಾತುಗಳನ್ನು ಪರಮೇಶಣ್ಣನೂ ಬೆಂಬಲಿಸಿದ.

ಕೆಳಗೇರಿಯ ಜನರಿಗೆ ಧೈರ್ಯ ಮೂಡಿದಂತಾಯಿತು. "ಹೌದು! ಹೌದು! ಮಾಂತಿ ಪರಮೇಶಣ್ಣ ಏಳ್ದಂಗಾದ್ರೆ ನಮ್ಮದೇನೂ ತಕರಾರಿಲ್ಲ" ಎಂದು ಮುಂತಾಗಿ ಧನಿಯೆತ್ತಿದರು. ಇದರಲ್ಲಿ ತಪ್ಪಡಿ ತಿಪ್ಪಗನ ದನಿಯೂ ಸೇರಿಕೊಂಡಿತು.

ಗದ್ದಲ ಶುರು! ಎಲ್ಲರೂ ಬಾಯಿ ಮಾಡುವವರೇ, ಪಡಸಾಲೆಯ ಜಮಖಾನದ ಮೇಲೆ ಕುಂತಿದ್ದ ಉತ್ತಮರು ಎದ್ದೆದ್ದು ನಿಂತರು. ಯಾರ ದನಿ ಯಾರಿಗೂ ಕೇಳದಂತಾಯಿತು! ಯಾರ ಮಾತು ಯಾರಿಗೂ ಅರ್ಥವಾಗದಂತಾಯಿತು ! ಕೆಲವರು ತೋಳು ಮೇಲೇರಿಸಿದರು. ಇನ್ನು ಕೆಲವರು ತಮ್ಮ ತಮ್ಮ ಲುಂಗಿ ಪಂಚೆಗಳನ್ನು ಮೇಲೇರಿಸಲಾರಂಭಿಸಿದರು. ಇನ್ನೇನು ಹೊಡೆದಾಟ ಬಡಿದಾಟ ಸುರುವಾಗುತ್ತದೆಂಬ ಭಯದಲ್ಲಿ ಮಾಂತಿ ಮತ್ತು ಪರಮೇಶಣ್ಣ ಎಲ್ಲರನ್ನೂ ತಡೆ ತಡೆದು ಸಮಾಧಾನಗೊಳಿಸಲೆತ್ನಿಸಿದರು. ಕಡೆಗೆ ಎರಡು ಗುಂಪಿನವರು ಪರಸ್ಪರ ರೋಷಾವೇಶದ ಕೆಂಡ ಕಾರುತ್ತಾ ಜಾಗ ಖಾಲಿ ಮಾಡಲಾರಂಭಿಸಿದರು. ಅಷ್ಟರಲ್ಲಿ ಸರಿ ಹೊತ್ತು ಮೀರಿ ಹೋಗಿತ್ತು.

ಹೊತ್ತು ಮೂಡಿದರೂ ಊರಲ್ಲಿ ಬೆಳಕಾಗಲಿಲ್ಲ . ಉತ್ತಮರ ಸಿಟ್ಟು ! ಕೆಳಗೇರಿ ಜನರ ಹಠ, ಭಯ! ಪರಿಸೆ ಮಾಡದಿದ್ದರೆ ಊರೇನು ಮುಳುಗಿ ಹೋಗೋದಿಲ್ಲ ಎಂಬಂಥ ಪರಮೇಶಣ್ಣನ ವಿಚಾರಪರ ಮಾತುಗಳೂ ನಾವು ಕೀಳು ಕೆಲಸನ ಮಾಡೋದೆ ಇಲ್ಲ ಎಂಬಂಥ ಮಾಂತಿಯ ಸ್ವಾಭಿಮಾನದ ಹಠವೂ ಮುಂದುವರಿಯಿತು. ಆದ್ದರಿಂದ ಕೆಳಗೇರಿಯ ಜನರನ್ನು ಕೂಲಿ ಕೆಲಸಗಳಿಗೆ ಸಾಮಾನುಗಳ ಕೊಡುವುದನ್ನೂ ಕರೆಯುವುದನ್ನೂ ಅಂಗಡಿಗಳಲ್ಲಿ ದಿನಸಿ ನಿಲ್ಲಿಸಿದರು. ಮಾರ್ಗ ಮಧ್ಯದ ಹೊಲಗಳಲ್ಲಿ ಅಪ್ಪಿತಪ್ಪಿ ಕಾಲು ಹಾಕಿದರೂ ಹಿಡಿದು ಬಡಿಯಲಾರಂಭಿಸಿದರು. ಇದನ್ನೆಲ್ಲಾ ಹೇಗೆ ಹದ್ದು ಬಸ್ತಿಗೆ ತರಬೇಕೆಂಬುದೇ ತಿಳಿಯದೇ ಪರಮೇಶಣ್ಣ ಹಾಗೂ ಮಾಂತಿ ಚಡಪಡಿಸಲಾರಂಭಿಸಿದರು.

ಪರಮೇಶಣ್ಣ ಮತ್ತು ಮಾಂತಿ (ಮಹಾಂತೇಶ) ಕೆಲವು ಶಾಲೆಗಳಲ್ಲಿ ಒಟ್ಟಿಗೆ ಓದಿದವರು. ಸಭೆ, ಸಮಾರಂಭ ಅಂದುಕೊಂಡು ನಗರದಲ್ಲಿ ಒಂದಾಗಿ ಓಡಾಡಿದವರು. ಹೋಟಲು, ಮನೆಗಳಲ್ಲಿ ಜೊತೆಯಾಗಿ ಕುಂತು ಕಾಫಿ ಕುಡಿದವರು. ಪರಸ್ಪರ ಹೆಗಲ ಮೇಲೆ ಕೈ ಹಾಕಿ ನಡೆದಾಡಿದವರು. ಅಂದ ಹಾಗೆ ಇಬ್ಬರಿಗೂ ಓದಿಗೆ ತಕ್ಕಂಥ ನೌಕರಿ ಸಿಗಲಿಲ್ಲ. ಅದಕ್ಕಾಗಿ ಪರಮೇಶಣ್ಣ ತಮ್ಮ ತೋಟ ಹೊಲ ಮನೆ ನೋಡಿಕೊಂಡು ಊರಲ್ಲೇ ನೆಲೆ ನಿಂತ. ಆದರೆ ಮಾಂತಿಗೆ ಯಾವ ತೋಟ! ಯಾವ ಹೊಲ! ಹೀಗಾಗಿ ಸಮಾಜಸೇವೆ ಎಂಬ ಓಡಾಟವೇ ಅವನ ಸದ್ಯದ ಬದುಕಾಯಿತು. ನಗರದ ದಲಿತರೊಂದಿಗೆ ಅನ್ಯಾಯಗಳ ವಿರುದ್ಧ ಹೋರಾಟ, ಪ್ರತಿಭಟನೆ ಅಂತೆಲ್ಲಾ ಓಡಾಡುವ ಇವನ ನಡೆ ನುಡಿಗಳೆಂದರೆ ಕೆಳಗೇರಿಯ ಜನರ ಪಾಲಿಗೆ ಬಲು ಗೌರವ. ಜಾತಿಗೆ ಸಂಬಂಧಿಸಿದ ಕೀಳುಕೆಲಸ ಮಾಡಬಾರದು. ಮೌಢ್ಯ ಕಂದಾಚಾರಗಳನ್ನು ಆಚರಿಸಬಾರದು. ಕುರಿ, ಕ್ವಾಣಾನ ದೇವರಿಗೆ ಬಲಿ ಕೊಡಬಾರದು, ಕೆಳಜಾತಿ ಎಂಬ ಕಾರಣಕ್ಕೆ ಊರ ಮುಂದಲ ಕಸ ಹೊಡೀಬಾರದು ಎಂದು ಮುಂತಾಗಿ ಕೆಳಗೇರಿ ಜನರಿಗೆ ಹೇಳಿರುವವನು ಇವನೇ. ಕೆಳಗೇರಿಯಲ್ಲಿ ಇವನ ಮಾತು ನಡೆಯುತ್ತದೆ. ಇವನನ್ನು ಮೊದಲು ದಾರಿಗೆ ತಂದುಕೊಂಡರೆ ಎಲ್ಲಾ ಸರಿಯಾದೀತು ಅಂದುಕೊಂಡ ಮಲ್ಲೇಗೌಡರು ತಮ್ಮ ಮನೆಯ ಬಳಿಗೆ ಕರೆಸಿಕೊಂಡು ಹೇಳಿದರು. “ನೋಡೋ ಮಾಂತಿ, ಹಿಂದೆ ಊರಾಗೆ ನಿಮ್ಮಂಥ ಜನ ಇಲ್ಲಿಲ್ಲ. ಕುಂತ ಅಂದ್ರೆ ಕುಂತೋತಿದ್ರು, ನಿಂತ ಅಂದ್ರೆ ನಿಂತ್ಯೋತಿದ್ರು, ಕಾಲಾಗೆ ತೋರಿಸಿದ ತಲೆ ಮೇಲೆ ಹೋಗ್ತಿದ್ರು .. ಕಾಲ ಕೆಟ್ಟೋಯ್ತು .. ನೀನು ಇದ್ಯಾವಂತ, ಒಂದೀಟು ಸರಿಯಾಗಿ ಯೋಚೆ ಮಾಡು. ಸುಮ್ಮೆ ಹಟ ಮಾಡಿ ಕುಲಸ್ತರನ್ನೆಲ್ಲಾ ಹಾಳು ಮಾಡಬ್ಯಾಡ. ಇದಕ್ಕೂ ಮೀರಿ ನಮ್ಮೋರ ಮಾತು ಕೇಳದೆ ಸರಿಯಾದ ದಾರಿಗೆ ಬಲ್ಲೆಲ್ಲ ಅಂದ್ರೆ ಕೆಳಗೇರಿ ಅಂಬೋ ಕೆಳಗೇರಿ ಒಂದು ಎಳನೀರು ಕುಡಿಯೋದರೊಳಗೆ ಉರುದು ಭಸ್ಮ ಆಗಬೌದು. ನನ್ಮಾತು ಕೇಳು. ಹಿಂದೆಲ್ಲಾ ಒಂದು ಕುರಿ ಒಂದು ಕ್ವಾಣಾ ಕೊಡ್ತಿದ್ವಿ. ಈ ಬಾರಿ ಎಳು ಕುರಿ ಎಳ್ಳು ಕ್ವಾಣ, ಜತಿಗೆ ರಾಗಿ, ಅಕ್ಕಿನೂ ಕೊಡ್ತೀವಿ. ಏನಂತಿಯಾ?” ಎಂದು ಕೇಳಿದರು.

ಮಾಂತಿ ಏನೋ ಗಟ್ಟಿ ಧೈರ್ಯ ಮಾಡಿಕೊಂಡವನಂತೆ.. “ಊರನ್ನಾದರೂ ತೊರೆದೇವು ಪ್ರಾಣವನಾದರೂ ಬಿಟ್ಟೆವು, ಆದ್ರೆ ನೀವು ಹೇಳ್ದಂಗೆ ನಡ್ಕೋಳಾಕೆ ನಾವು ಸಿದ್ಧರಿಲ್ಲ ” ಎನ್ನುತ್ತಾ ಅಲ್ಲಿಂದ ಕಾಲ್ತೆಗೆದು, ಕೇರಿಯಲ್ಲಿ ಹತಾಶನಂತೆ ತಲೆಯ ಮೇಲೆ ಕೈ ಹೊತ್ತು ಕುಂತುಕೊಂಡ. ನಾಡಿನ ಇಂಥ ಹಲವಾರು ಪ್ರಕರಣಗಳನ್ನು ಕೇಳಿದ್ದ - ನೋಡಿದ್ದ. ಆದರೆ ಈಗ ಅಂಥದ್ದೇ ಪರಿಸ್ಥಿತಿ ತನ್ನ ತಲೆಯ ಮೇಲೆ ಎರಗಿ ಕುಂತಂತಾಗಿದೆ. ಇದು ಸಂಪರ್ಕ ಮಾಧ್ಯಮಗಳಿಲ್ಲದ ಹಿಂದಿನ ಕಾಲದಂತಲ್ಲ . ನಾಡಿನ ಯಾವುದೇ ಮೂಲೆಯ ಯಾವುದೇ ಹಳ್ಳಿಗಾಡಿನ ಸಣ್ಣ ಸಂಗತಿಯಾದರೂ ಬೆಳಗಾಗುವುದರೊಳಗೆ ದೇಶದಲ್ಲೆಲ್ಲಾ ಸುದ್ದಿಯಾಗುವಂಥ ಈ ಕಾಲದಲ್ಲಿ ಊರಿನ, ಈ ಪರಿಸ್ಥಿತಿಯು ಹತ್ತಿರದ ನಗರದ ದಲಿತ ಸಂಘಗಳಿಗೆ ತಲುಪದಂತಿರುವುದು ಕೆಲವರ ಪಾಲಿಗೆ ಸೋಜಿಗದ ಸಂಗತಿ, ಯಾವ ಕ್ಷಣದಲ್ಲಿ ಯಾವ ಗಂಡಾಂತರವೋ ಎಂಬಂಥ ಪ್ರಾಣ ಭಯದಲ್ಲಿ ತಲ್ಲಣಿಸುತ್ತಿದ್ದ ಕೆಲವರು “ಏನು ಮಾಂತಿ ನೀನೇ ಹಿಂಗೆ ಕುಂತ್ಕಡ್ರೆ

ಯಂಗೆ?!" ಎಂದು ಜಗ್ಗಾಡಿದರು. ಅವನು ಬಿಡಲಾರದೆ ಬಾಯ್ದಿಟ್ಟ "ನನ್ನ ಮಾತುಗಳು ನಿಮಿಗೆ ಅರ್ಥವಾಗ್ತವೋ ಇಲ್ವೊ ತಿಳೀದು. ಈಗಾಗಲೇ ದಲಿತ ಸಂಘಗಳು ಎಡಗೈ-ಬಲಗೈ ಎಂಬ ಗುಂಪುಗಾರಿಕೆಯಿಂದ ಹೊಡೆದು ಪೀಸ್ ಪೀಸಾಗಿವೆ. ಅಲ್ಲದೇ ಕೆಲವು ಮುಂದಾಳುಗಳು ರಾಜಕೀಯ ಶಕ್ತಿಯನ್ನು ಪಡೆದುಕೊಳ್ಳಬೇಕೆಂದು ಮುಂದಲ ಎಲೆಕ್ಷನ್ನಿನಲ್ಲಿ ಸ್ಪರ್ಧಿಸುವ ಸಿದ್ಧತೆಯಲ್ಲಿದ್ದಾರೆ. ಹೀಗಾಗಿ, ಪಾರ್ಟಿಯನ್ನು ಬೆಳೆಸಬೇಕು. ಓಟು ಗಿಟ್ಟಸಬೇಕು ಎಂಬ ಉದ್ದೇಶದಿಂದ ಹಳ್ಳಿಯ ಮುಖ್ಯಸ್ಥರೂ ಬಹುಸಂಖ್ಯಾತರೂ ಆದಂಥ ಮೇಲ್ಜಾತಿಯವರ ವಿರೋಧ ಕಟ್ಟಿಕೊಳ್ಳೋದು ಬ್ಯಾಡ ಅಂತ ಹಳ್ಳಿ ಹಳ್ಳಿಗಳಲ್ಲಿ ನಡೆಯುವ ಇಂಥ ವಿಷಯಗಳತ್ತ ಗಮನ ಕೊಡ್ತಿಲ್ಲ ! ನೀವು ನೀವೆ ಅಡ್ಜೆಸ್ಟ್ ಮಾಡ್ಕೊಳ್ರಿ ಅಂತಿದ್ದಾರೆ. ನನಗೂ ಏನು ಮಾಡಬೇಕೂಂತಲೇ ತಿಳಿಲ್ಲ" .

ಕದರ, ತಪ್ಪಡಿ ತಿಪ್ಪಗ, ಪಾತಲಿಂಗ, ನುಂಕಜ್ಜ ಮುಂತಾದವರು ಮಕ ಮಕ ನೋಡಿ ಕೊಂಡರು. ಎಲ್ಲರಲ್ಲೂ ಭಯ ಭೀತಿ, ಯಾರು ಯಾರಿಗೂ ಧೈರ್ಯ ಹೇಳುವ ಸ್ಥಿತಿ ಇಲ್ಲವಾಗಿದೆ. ಕೇರಿಯನ್ನೇ ಕೊಚ್ಚಿಕೊಂಡು ಹೋಗುವಂಥ ಹೊಳೆ ಬಂದರೂ ಸಾಲು ಗುಡಿಸಲುಗಳಿಗೆ ಬೆಂಕಿ ಬಿದ್ದರೂ ಇಷ್ಟು ತತ್ತರಿಸುತ್ತಿರಲಿಲ್ಲ. ಕೆಳಗೇರಿ ಎಂದರೆ ಸುಮಾರು ಏಳೆಂಟು ಗುಡಿಸಲುಗಳ ಒಂದು ಗುಂಪು, ಗೋಡೆ ಅಥವಾ ಹೆಂಚಿನ ಮನೆ ಎಂಬುದು ಒಂದೂ ಕಾಣಿಸುತ್ತಿಲ್ಲ . ಯಾರೊಬ್ಬರಿಗೂ ಗೇಣು ಹೊಲವಾಗಲಿ, ದನಕರುಗಳಾಗಲಿ ಇಲ್ಲ ! ಇರುವ ಆಸ್ತಿ ಎಂದರೆ ಒಂದೆರಡು ಕೋಳಿ ಪಿಳ್ಳೆಗಳು ಮಾತ್ರ. ಅಂದಿನ ಹೊಟ್ಟೆ ಪಾಡಿಗೆ ಅಂದೇ ಮೈ ಮುರಿದು ದುಡಿಯುವ ಈ ಜನರಿಗೆ ನಗರದ ದಲಿತ ಸಂಘಗಳ ಒಂದಿಷ್ಟು ಸಂಪರ್ಕ ಉಂಟು. ಆದ್ದರಿಂದ ಈಗ ತಾವು ಹೇಗಿದ್ದೇವೆ ! ಹೇಗಿರಬೇಕು! ಎಂಬಂಥ ತಿಳುವಳಿಕೆ ಬೆಳೆದುಬಿಟ್ಟಿದೆ. ಹಟ್ಟಿಯ ಮುಂಬದಿಯಲ್ಲಿ ದಲಿತ ಸಂಘದ ಒಂದು ಬೋರ್ಡು ಇತ್ತು. ಸಂಜೆ ಮುಂದವರಿದು ಮಬ್ಬು ಅಡರುವುದರೊಳಗೆ ಅದೂ ಕಾಣ ದಂತಾಯಿತು.

ಮಾರನೆಯ ಮುಂಜಾನೆ ಪರಮಾತ್ಮನ ಬೆಳಕು ಮೂಡಿದರೂ ಮಾರಮ್ಮನ ಗುಡಿ ಯಲ್ಲಿಯ ತಪ್ಪಡಿ ತಿಪ್ಪಗನ ವಿನಃ ಕೆಳಗೇರಿಯಲ್ಲಿ ಒಬ್ಬನೇ ಒಬ್ಬ ನರಮಾನವನೂ ಕಾಣಲಿಲ್ಲ . ಕೆಲವು ಗುಡಿಸಲುಗಳಿಗೆ ಬೀಗ ಹಾಕಲಾಗಿತ್ತು . ಇನ್ನೂ ಕೆಲವು ಗುಡಿಸಲು ತಡಿಕೆಗಳಿಗೆ ಹಗ್ಗ ಕಟ್ಟಲಾಗಿತ್ತು. ಇನ್ನುಳಿದ ಒಂದೆರಡು ಜೋಪಡಿಗಳಿಗೆ ಬಾಗಿಲ ತಡಿಕೆಗಳೇ ಇರಲಿಲ್ಲ. ಎಲ್ಲರೂ ಎಲ್ಲಿಗೆ ಹೋದರು? ಏನಾದರೂ? ಎಂಬುದೇ ಒಂದು ಬಲುಭಾರಿ ಪ್ರಶ್ನೆಯಾಯಿತು. ಪರಮೇಶಣ್ಣನಿಗಂತೂ ಬಲು ಬೇಸರ. ನನಗಾದರೂ ವಿಷಯ ತಿಳಿಸಲಿಲ್ಲವಲ್ಲ ಎಂದು ನೊಂದುಕೊಂಡ. ಮಾರನೆಯ ದಿನ ವಿಷಯ ತಿಳಿಯಿತು. ಕೆಳಗೇರಿಯ ಜನರೆಲ್ಲಾ ಹತ್ತಿರದ ನಗರದಲ್ಲಿದ್ದಾರಂತೆ! ಕೆಲವರು ಕಾಟನ್ ಮಿಲ್ಲಿಗೆ ಸೇರಿಕೊಂಡರೆ ಮತ್ತೆ ಕೆಲವರು ಇಟ್ಟಿಗೆ ಸಿಮೆಂಟ್ ಹೊರುತ್ತಿದ್ದಾರಂತೆ. ಹಾಳು ಗುಡಿಯಲ್ಲಿ ನೆಲೆ ನಿಂತರೂ ಹಾಯಾಗಿದ್ದಾರಂತೆ! ಕಣ್ಣುಂಬ ನಿದ್ದೆ ಮಾಡ್ತಿದಾರಂತೆ!

ವಿಷಯ ತಿಳಿದ ಮಲ್ಲೇಗೌಡರು ಮತ್ತಿತರರು ಹಲ್ಲು ಹಲ್ಲು ಮಸೆದುಕೊಂಡರು. ಕೈ ಕೈ ಹಿಸುಕಿಕೊಂಡರು. "ಲೋಪರ್ ನನ್ನಕ್ಳು ಕಡೆಗೂ ಕೈಕೊಟ್ಟುಬಿಟ್ಟಲ್ಲಾ !" ಎಂದೆಲ್ಲಾ ರೋಷಾವೇಶದಿಂದ ಕುದಿಯಲಾರಂಭಿಸಿದರು. ಕೆಳಗೇರಿಯ ಜನ ಸತ್ತ ದನ ಹೊರುವುದನ್ನೂ ಮೆಟ್ಟು ಮುಟ್ಟು ಹೊಲೆಯುವುದನ್ನೂ ಬಿಟ್ಟು ಎಷ್ಟೋ ವರ್ಷಗಳಾಗಿದ್ದವು. ಉತ್ತಮವರೇ ತಮ್ಮ ಸತ್ತ ದನಗಳನ್ನು ಹೊತ್ತೊಯ್ದು ಗತಿ ಕಾಣಿಸುತ್ತಿದ್ದರು. ಕಡೆಗೆ ಪರಿಸರ ಮಾಡಕ್ಕೂ ಹಿಂಗೆ ಮಾಡಿದ್ರಲ್ಲಾ ಏನ್ಮಾಡೋದು! ಅಂದುಕೊಂಡು ವಿಲವಿಲನೆ ಒದ್ದಾಡಿದರು. ಊರಿನ ಯಜಮಾನರಾಗಿ, ಸುತ್ತೇಳು ಹಳ್ಳಿಗಳಿಗೆಲ್ಲಾ ಹೆಸರಾದಂಥ ಮಲ್ಲೇಗೌಡರು ತಲೆಯ ಮೇಲೆ ಕೈಹೊತ್ತು ಕುಂತುಕೊಂಡರು. ಕಡೆಗೆ ಒಂದು ಉಪಾಯ ಹೊಳೆಯಿತು. ತಪ್ಪಡಿ ತಿಪ್ಪಗನ ಕೈಯಿಂದ ಶಾಸ್ತ್ರಕ್ಕಾದರೂ ಒಂದಿಟು ಊರ ಮುಂದಲ ಕಸ ಹೊಡೆಸಿ ತಪ್ಪಡಿ ಬಡಿಸಿಬಿಟ್ಟರಾಯ್ತು ಎಂಬಂಥ ನಿರ್ಧಾರಕ್ಕೆ ಬಂದರು.

ತಪ್ಪಡಿ ತಿಪ್ಪಗ ಯಾರು? ಅವನ ಅಪ್ಪ, ಆವ್ವ ಯಾರು? ಯಾವೂರು? ಎಂಬುದು ಊರ ಜನರಿಗಿರಲಿ, ಸರಿಯಾಗಿ ಅವನಿಗೇ ತಿಳಿಯದು. ಸುಮಾರು ೩೦ ವರ್ಷದ ಅವನು ೧೫ ವರ್ಷಗಳಿಂದಲೂ ಕೆಳಗೇರಿಯಲ್ಲೇ ನೆಲೆ ನಿಂತಿದ್ದಾನೆ. ಎರಡೂ ಕಾಲುಗಳು ಸೊಟ್ಟ ಸೊಟ್ಟ ಇರುವುದರಿಂದ ಒಂದು ರೀತಿಯಲ್ಲಿ ವಿಚಿತ್ರವಾಗಿ ಕುಂಟುತ್ತಾನೆ. ಇದನ್ನು ಕಂಡ ಸಣ್ಣ ಹುಡುಗರು ಅಪಹಾಸ್ಯ ಮಾಡುವುದೂ ಉಂಟು. ಆದರೆ ಅವರಿವರ ಮನೆಯ ಸಗಣಿ ಎತ್ತುವುದು, ಕಸ ಗುಡಿಸುವುದು ಮೊದಲಾದಂಥ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿ, ಹಾಕಿದ್ದು ತಿಂದು, ಮಾರಮ್ಮನ ಗುಡಿಯಲ್ಲಿ ಹೊತ್ತು ಕಳೆಯುವನು. ತಪ್ಪಡಿ ಬಡಿಯುವುದರಲ್ಲಿ ಮಾತ್ರ ಇವನೊಬ್ಬ ಕಲಾಕಾರ! ತಪ್ಪಡಿಯನ್ನು ಎದೆಗೇರಿಸಿ ಬಾರಿಸಲಾರಂಭಿಸಿದನೆಂದರೆ ಚಿಕ್ಕವರು ಕುಣಿದಾಡುವರು ; ದೊಡ್ಡವರು ತಲೆದೂಗುವರು!

ಇವನನ್ನು ಮನೆಯ ಬಳಿಗೆ ಕರೆಸಿಕೊಂಡ ಮಲ್ಲೇಗೌಡರು ಹೇಳಿದರು "ನಿನ್ನ ಕುಲಸ್ಥರೆಲ್ಲಾ ಕಡೆಗೂ ಕೈಕೊಟ್ಟುಬಿಟ್ರು. ದೇವುರ ದಯದಿಂದ ನೀನೊಬ್ಬನಾದರೂ ಉತ್ಕಂಡಿದೀಯ. ಪರಿಸೆಗೆ ನೀನು ಶಾಸ್ತ್ರಕ್ಕಾದರೂ ಒಂದೀಟು ಕಸ ಹೊಡದು, ತಪ್ಪಡಿ ಬಡಿದುಬಿಡು, ನಿನಗೇನು ಬೇಕೊ ಎಲ್ಲಾ ಕೊಡ್ತೀವಿ. ಹಿಂದೇಟು ಹಾಕಬೇಡ. ಅಂಗೇನಾದರೂ ಆದ್ರೆ ನಿನ್ನ ಗತಿ ದೇವರೆ ಗತಿ."

ತಪ್ಪಡಿ ತಿಪ್ಪಗ ತಲೆಯೆತ್ತಲಿಲ್ಲ . ಉಸುರು ಬಿಡಲಿಲ್ಲ . ಅಲ್ಲೇ ಇದ್ದ ಪರಮೇಶಣ್ಣನ ಮುಖ ನೋಡಿದ. ಪರಮೇಶಣ್ಣನೂ ತಿರುಗಿ ಇವನ ಮುಖ ನೋಡಿದ. ಏನೂ ಮಾತಾಡಲಿಲ್ಲ. ಪರಿಸ್ಥಿತಿಯೆಂಬುದು ಪರಿಹಾರವೇ ಇಲ್ಲದಂಥ ಸಮಸ್ಯೆಯಾಗಿ ಮೆರೆದಾಡಿತು.

ಪರಿಸೇಲಿ ಈ ಬಾರಿ ಕುರಿ ಕ್ವಾಣ ಕಡೀದಿದ್ರೇನಂತೆ ಅನ್ನದ ಸರಗ ಹಾಕಿ, ಪರಿಸರ ಶಾಸ್ತ್ರ ಮಾಡಿ ಮುಗಿಸಬೇಕೆಂದು ಊರ ಪ್ರಮುಖರು ನಿರ್ಧರಿಸಿದರು. ಮೈಸೂರಿನಲ್ಲಿ ಓದಿದವನೂ ತಿಳಿವಳಿಕಸ್ತನೂ ಆದ ಪರಮೇಶಣ್ಣ ಯಾವುದಕ್ಕೂ ತಲೆ

ಹಾಕಲಿಲ್ಲ . ತಾನಾಯಿತು ತನ್ನ ಮನೆಯಾಯಿತು ಎಂಬಂತೆ ತೆಪ್ಪಗಾದ. ನಿರ್ಧರಿಸಿದಂತೆ ಪರಿಸೆಯ ಓಜು ಶುರುವಾಯಿತು. ಹಾಳಾಗಿ ಹೋಗಲಿ ಅಂದುಕೊಂಡ ಊರ ಉತ್ತಮವರೇ ಮಾರಮ್ಮನ ಗುಡಿಯನ್ನು ಶುದ್ಧಗೊಳಿಸಿ ಸುಣ್ಣ ಕೆಮ್ಮಣ್ಣು ಬಳಿದರು.

ಅಷ್ಟರಲ್ಲಿ ಇದ್ದಕ್ಕಿದ್ದಂತೆ ಸುದ್ದಿಯೊಂದು ಊರಿಗೆ ಅಪ್ಪಳಿಸಿತು. ತಪ್ಪಡಿ ತಿಪ್ಪಿಗ ತನ್ನ ಏಕೈಕ ಆಸ್ತಿಯಾಗಿದ್ದ ತಪ್ಪಡಿಯನ್ನು ಹೊಡೆದು ಹಾಕಿದನಂತೆ!! “ಆ ಸೂಳೇಮಗನಿಗೇನಾತ್ರೆ,” ಅಂದುಕೊಂಡ ಮಲ್ಲೇಗೌಡರು ಅವನನ್ನು ಕಂಬಕ್ಕೆ ಕಟ್ಟಿಸಿ ಗಾಬು ಹರಿಯಬೇಕೆಂಬ ನಿಟ್ಟಿನಲ್ಲಿ ಪಂಚೆಯನ್ನು ಅಡರುಗಟ್ಟಿಕೊಂಡು ಮಾರಮ್ಮನ ಗುಡಿಯ ಬಳಿಗೆ ಧಾವಿಸಿದರು! ಅಲ್ಲಿಗಾಗಲೇ ಊರ ಜನರೂ ಓಡಲಾರಂಭಿಸಿದ್ದರು. ಏನು ಏನೆಂದು ನೋಡಲಾಗಿ ಗುಡಿಯ ತೊಲೆಗೆ ನೇಣು ಹಾಕಿಕೊಂಡಿದ್ದ ತಪ್ಪಡಿ ತಿಪ್ಪಗನ ಹೆಣ ನೇತಾಡುತ್ತಿತ್ತು .

+

## ೧೦. ಕರುಳಲಿಯುವ ಹೊತ್ತು

**· ಡಾ.ಎಚ್.ಟಿ.ಪೋತೆ**

ಮಳೆಗಾಲದ ಹೊಣಾರ, ಗಂಟು ಕಟ್ಟಿಕೊಳ್ಳುತ್ತಿರುವ ಮೋಡಗಳು, ಸುಂಟರಗಾಳಿ ಸುಳಿಸುಳಿದು ಎಲ್ಲರನ್ನು ಎಚ್ಚರಿಸುತ್ತಿತ್ತು. ಮಿರಗ ಫಡಕಂದರ ಭೂಮಿ ಸಣ್ಣಾಗ್ತದ ಮಳಿ ಬಂದ್ರ ಮನಿ ಸೋರದರ ಮಕ್ಕಳ ಮರಿ ಹೈರಾಣಾಗತಾವ ಕಾಳುಕಡಿ ತೊಯಿತಾವ ಎಂದ ಮಾಳವ್ವ "ಆಗಾ ನೋಡು ಶರಣಪ್ಪ ಮಾಳಿಗಿ ಏರದ್ದಂಗ ಕಾಣಸ್ತದ ನೀ ನೋಡದ್ರ ಬೀಡಿ ಸೇದಕೊಂತ ಕುಂತಿ" ಅಂತ ಗಂಡನ ಕಡೆ ದುರುಗಟ್ಟಿ ನೋಡಿದಳು.

"ಹಂಗ್ಯಾಕ " ನೋಡಾಕ್ಹತ್ತಿ ಕೊರಗಿತಾಳ, ಕುಂಟಿ ಸಜ್ಜ ಮಾಡಿಸಿ, ಹೊಲಕ್ಕಹೋಗಿ ಈಗರೇ ಬಂದೀನಿ, ಒಂದೀಟು ತಡಿ, ಮಗಾ ಬರಲಿ, ಇಬ್ಬರೂ ಏರಿ ಹಸನ ಮಾಡತೀವಿ" , ಅಂತ ಪತಿರಾಯ ಲಗಸೆಪ್ಪ ಹೆಂಡತಿ ಮಾಳವ್ವಗ ಹೇಳಿದ.

"ಇದಾತು ಮುಂದಿನವಾರ ಹೊರ್ತಿ ಸಂತಿಗಿ ಹೋಗಾನು ಕುರಿಕೋಳಿ ಮಾರಿದ್ರ ಮಗನ ಸಾಲಿ ಪೀಸ್ ಕಟ್ಟಲಕ ಅನುಕೂಲ ಆಕ್ಕೈತಿ" ಎನ್ನುತ್ತಾ ಲಗಸಪ್ಪ ನಿಚ್ಚಣಕಿ ತಂದು ಮನೆ ಗೋಡೆಗೆ ಆಣಿಸಿದ. ಇನ್ನೇನ ಮಾಳಗಿ ಏರಬೇಕು, ಹುಲ್ಲ ಕಿತ್ತಬೇಕು, ಮಾಡ ಬ್ಯಾರೆ ಆಗ್ಯಾದ ಎಂದು ಅಂದುಕೊಂಡು ಗಂಡಗಚ್ಚಿ ಹಾಕಿದ್ದ. ಅಷ್ಟರಲ್ಲಿ ಮಾಳವ್ವ "ಎಲ್ಲಿ ಕಲಿತಾನ ಬಿಡು, ಅಂವಾ ಓದಿಬರ್ದು ನಮಗ ತಂದ ಹಾಕಾದು ಅಷ್ಟರಾಗೈತಿ ? ಇನ್ನೊಂದ ಕುರಿ ಮಾರ್ದರ ನಮಗೇನ ಉಳಿತದ ಹೇಳು. ಕುರಿಯಾಕ ಮಾರ್ತಿ, ನಿಮ್ಮೌವಗ ಹೇಳಿ ಸಾಲಿ ಮಾಮಾಗ ಪತ್ರ ಬರಸಬಾರ್ದ" ಎಂದು ಬ್ಯಾಳಿ ನೀರಾಗ ಹಾಕುತ್ತಾ ಒಲಿ ಹೊತ್ತಿಸಲು ಒಳ ನಡೆದಳು.

ಮ್ಯಾಳಗಿ ಹತ್ತಿದ ಲಗಸೆಪ್ಪ ಹುಲ್ಲು ಕಿತ್ತುತ್ತ ಶಿಕ್ಷಣ ಅಕ್ಷರ ಅದರ ಮಹತ್ವವನ್ನು ತನ್ನ ಮಗನಿಗೆ ಹೇಳಿದ. ಸೂರ್ಯ ತಾಯಿ ಹೊಟ್ಟೆ ಸೇರುತ್ತಿದ್ದಂಗ ಬಾಳವ್ವ "ಏ ಸಾಗರಾ ಹೊತ್ತ ಮುಣಗೇತಿ ನಿಮ್ಮಪ್ಪನ ಕರಕೊಂಡಬಾ! ಕಣ್ಣ ಬೆಳಕೇಲೆ ಕೆಳಗಿಳೀರಿ" ಎಂದು ಜೋರಾಗಿ ಅಂಗಳದಾಗ ಕುಂತವರಿಗೆಲ್ಲ ಕೇಳಿಸುವಂಗ ಹೇಳಿದಳು.

ಎಂದೂ ಜೋರಾಗಿ ಹೇಳದ ಮಾಳವ್ವ ಇದ್ಯಾಕ ಕೂಗಕ್ಹತ್ಯಾಳ ಎಂದು ಮೊಮ್ಮಗನ ಕರೆದು ಅಜ್ಜಿ "ಸಾಗರಾ ನಿಮ್ಮವ್ವ ಚೀರಕ್ಹತ್ಯಾಳ ಏನೋ ಬಾಳಾ ಏನಾಗ್ಯಾದ" ಎಂದು ಕೇಳಿದಳು.

"ಏನಿಲ್ಲ ಆಯಿ, ಸಾಲಿಗೆ ಹೆಸರ ಹಚ್ಚಾಕಂತ ಕುರಿ ಮಾರನು ಅಂತ ಅಪ್ಪ ಹೇಳ್ಯಾನ ಅದಕ್ ಸಿಟ್ಟ ಮಾಡಕೊಂಡಾಳ" ಎಂದು ಸಾಗರ ಹೇಳಿದ. "ಅದಕ್ ನಿಮ್ಮಪ್ಪ ಏನಂದಾನ" : ಎಂದು ಹೊರಳಿ ಮೊಮ್ಮಗನಿಗೆ ಕೇಳಿದಳು.

“ಏನಿಲ್ಲ ಆಯಿ ಹೂಂ ಅಂದ್ರ ಬಾಬಾಗ ಪತ್ರ ಬರೀತಿನಿ. ಅವರು ರೊಕ್ಕಾ ಕಳಸ್ತಾರ್ ಬಾರ್ತಾವ” ಎಂದು ಮೊಮ್ಮಗ ತನ್ನ ಆಯಿಗೆ ಹೇಳುತ್ತ ಮಗ್ಗಲ ಬಂದು ಕುಂತ.

“ಹೂಂ ಅಲ್ಲಿ ರೊಕ್ಕ ಬಿದ್ದಾವ, ಇವರಿಗೇನ ಆಗ್ಯಾದ ದುಡದರ ರೊಕ್ಕ ಬರಂಗಿಲ್ಲೇನ?” ಎಂದು ಸಿಡಿಮಿಡಿಗೊಂಡಳು.

“ಓಡು! ಹೋಗಿ ಪೋಟಮನ್‌ಗೆ ಹೇಳಿ ಒಂದು ಪತ್ರ ತಗೊಂಡು ಬಾ!” ಅಂತ ಸನ್ನೆ ಮಾಡಿದಳು.

ಸಾಗರ ಓಡಿ ಹೋದವನ ಪತ್ರ ತಗೊಂಡು ಬಂದ. ಆಯಿ ಹೇಳಿದಂಗ ಪತ್ರ ಬರೆದು ಮಡಚಿ ಪುಸ್ತಕದಾಗಿಟ್ಟು,

“ ಬಾಳಾ! ಮರಿಲಾರ್ದ ಮುಂಜಾಳಿ ಹೋಗಿ ಪೋಟ ಮಾಸ್ತರ್ ಕೈಯಾಗ ಕೊಡು, ನಾ ಹೇಳೀನಿ ಅಂತ ಹೇಳು” ಎಂದು ಸೊಸಿಗೆ ಕೇಳಿಸುವಂಗ ಅಜ್ಜಿ ಒತ್ತಿ ಹೇಳಿದಳು.

ಇದು ತನ್ನನ್ನೇ ಉದ್ದೇಶಿಸಿ ಹೇಳಿದ್ದಾಳಂತ ತಿಳಿಕೊಂಡ ಮಾಳವ್ವ ಕುರಿ ಮಾರಾಟದು ನಿಂತಂಗಾತು ಎಂದು ಒಳಗೊಳಗೆ ಖುಷಿಪಟ್ಟಳು. ಅಡಗಿ ಆಗಿತ್ತು. ಉಳ್ಳಕ್ ಕರಿಬೇಕು ಅನಕೊಂಡು ಭಾಳ ಪ್ರೀತಿಯಿಂದ ಸಾಗರ್ “ಆಯಿಗಿ ಎಬುಸು, ಹಂಗ ನಿಮ್ಮಪ್ಪ ಏಲ್ಯಾನ ನೋಡು, ಉಳ್ಳಕ್ ಬರ್ರಿ ಎಲ್ಲಾರು” ಎಂದಳು. ಊಟಾ ಮುಗಿತು ಆಯಿ ಮೊಮ್ಮಗನ ಕೂಡ ಮಾತಾಡ್ತ ಯಾವಾಗ ನಿದ್ದೆಗೆ ಜಾರಿದ್ರು ಗೊತ್ತಿಲ್ಲ. ಬೆಳಗಾಗಿತ್ತು ಎದ್ದಕ್ಕಿನ ಸಾಗರಗೂ ಎಬ್ಬಿಸಿ “ಹೋಗೆಪ್ಪ ಆಯಿ ಬರಸಿದ ಕಾಗದ ತಗೊಂಡು ಹೋಗಿ ಡಬ್ಯಾಗ ಹಾಕಿ ಬಾ” ಎಂದು ನೆನಪಿಸಿದಳು.

“ಹೂಂ ಬಿಟ್ಟಿ ಬರ್ತದಂದ್ರ ಹಿಂಗ” ಎಂದು ಹಲ್ಲು ತಿಕ್ಕೋತ ಕುಂತಿದ್ದ ಅತ್ತಿ ಛೇಡಿಸಿದಳು. ಸಾಗರ ಸರ್‍ರನ ಹೋಗಿ ಪೋಸ್ಟ್ ಮಾಸ್ತರಿಗೆ ಕೊಟ್ಟು ಬಂದು ವಿಷಯವನ್ನು ಆಯಿಗೆ ತಿಳಿಸುತ್ತಿದ್ದ. ಅದನ್ನು ಕಿವಿಗೊಟ್ಟು ಮಾಳವ್ವ ಕೇಳಿಸಿಕೊಂಡಳು.

ಮಾಳವ್ವ ದಿನಾ ಹೊತ್ತ ಹೊಳ್ಳಿತಂದರ ಪೋಸ್ಟ್ಮನ್ ಬರೋದಾರಿನೇ ಕಾಯುತ್ತಿದ್ದಳು. ಮಗನ್ನ ಹ್ಯಾಂಗರ ಮಾಡಿ ಸಾಲಿಗೆ ಕಳಿಸಿದ್ರ ವರ್ಷದ ಭಾರ ಕಡಿಮೆ ಆದೀತೆಂದು ಪೋನಿಸಿ ಅತ್ತಿಗೆ ಒಂದು ಕಪ್ಪು ಚಹ ತಂದು ಕೊಡುತ್ತ “ಸಾಲಿ ಮಾಮಾಗ ಪತ್ರ ಮುಟ್ಟಿರಬೇಕ” ಎಂದು ಕೇಳಿದಳು.

“ಮುಟ್ಟತದೇಳೂ, ನೀಯಾಕ ಚಿಂತಿ ಮಾಡ್ತಿ ನನ್ಮಗಾ ಹಂತವನಲ್ಲ, ಕಳಸ್ತಾನ ಸುಮ್ಮನಿರು ಬಾಳಾಗ ಸಾಲಿಗೆ ಖಳವಾದು ನಂಗಬಿಡು ನೀ ದಗದಾ ಮಾಡು” ಎಂದು ಗಟ್ಟಿ ಧ್ವನಿಯಲ್ಲಿ ಹೇಳಿದಳು. ನನ್ನ ಮಗ ಬೇಗ ರೊಕ್ಕ ಕಳಿಸಿದ್ರನ ಸೊಸಿ ಮುಂದ ವಾರಿಗಿಯವರ ಮುಂದ ನನ್ನ ಮಾನ ಉಳದಂಗಾಗತೈತಿ ಎಂದು ಎದ್ದು ಹೋಗಿ ಕುರಿಗೆ ಮೇವು ಹಾಕಿ ಮೊಮ್ಮಗನ ಕೂಡ ಮಾತಿಗಿಳಿದಳು.

ಬೆಳಿಗ್ಗೆ ಹೊತ್ತು ಕಛೇರಿಗೆ ಹೋಗುವಾಗ ಏನೂ ತಿಂದು ಹೋಗಿಲ್ಲ. ಇನ್ನೂ ಯಾಕ ಬರಿಲ್ಲವರು ಎಂದು ಅಡುಗೆ ಮನಿಯಲ್ಲಿದ್ದುಕೊಂಡೇ ಗೇಟಿನ ಸದ್ದು ಕೇಳು



ಕಡೆ ಕಿವಿಗೊಟ್ಟಿದ್ದಳು. ಲಲಿತಮ್ಮ ಅಷ್ಟೊತ್ತಿಗೆ ಯಾರೋ ಗೇಟು ಬಡಿದಂಗಾಯಿತು. ಅವಸರದಿಂದ ಹೋಗಿ ನೋಡಿದ್ರ "ನಾನ್ರಿ ಅಮ್ಮಾ! ಪೋಸ್ಟ್ ಮ್ಯಾನ" ಎಂದು ನಮಸ್ಕರಿಸುತ್ತ ಕಾಗದ ಕೈಗಿಟ್ಟು ಸೈಕಲ್ ಪೈಡಲ್ ತಿರುಗಿಸಿದ. ಪತ್ರ ಕೈಯಾಗ ಹಿಡಿದುಕೊಂಡು ಯಾರದಿರಬೇಕು! ಎಂದು ಕುತೂಹಲದಿಂದ ತಿರವಿ ನೋಡಿ ಅತ್ತಿನ ಬರಸಿದ್ದಂಗಿದಾಳ ಎಂದುಕೊಳ್ಳುತ್ತ ಲಲಿತಮ್ಮ ಪತ್ರ ಒಳಗೆ ತಂದಿಟ್ಟಳು.

ಗಂಡನ ಹೆಸರಿಗೆ ಬಂದ ಪತ್ರಗಳನ್ನು ಎಂದೂ ಓದಿದವಳಲ್ಲ. ಆದರೂ ಪತ್ರ ಓದದೇ ಅದರಲ್ಲೇನಿದೆ ಎನ್ನವುದನ್ನು ಲಲಿತಮ್ಮ ಊಹಿಸಿ ಮತ್ತೇನ ಬರಿತಾರ ರೊಕ್ಕ ಕಳಿಸಿ ಅಂದಿದ್ದಾರೆಂದು ಗೊಣಗುತ್ತ ಗಂಡನ ದಾರಿ ಕಾದು ಕುಂತಳು. ಗಾಡಿ ಸದ್ದು ಮಾಡಿತು. ಹೋಗಿ ಗೇಟ್ ತೆರೆದಳು. ಗಾಡಿ ಒಳಗೆ ಬಂದ ಮೇಲೆ ಗೇಟ ಹಾಕಿ ತಾನೂ ಒಳಗೆ ಬಂದು ಗಂಡಗ ಊಟಕ್ಕ ತಾಟು ಹಚ್ಚಿದಳು.

ಊಟ ಮಾಡ್ತಾ ಊರಿಂದ ಅತ್ತಿ ಪತ್ರ ಬಂದಾದ ಎಂದು ಗಂಡನಿಗೆ ನೆನಪಿಸಿದಳು.

"ಏನಂತ ಬರದಾಳವ್ವ" ಅನ್ನುವಷ್ಟರಲ್ಲಿ "ಇನ್ನೇನ ಬರೀತಾರ ರೊಕ್ಕಗಿಕ್ಕಾ ಬೇಕಾದರ ಮತ್ತೆದಕ ಪತ್ರ ಬರಿತಾರು" ಎಂದಳು.

"ನೀ ಯಾವಾಗಲೂ ಹಿಂಗ ರೊಕ್ಕಬೇಕಂತ ಬರೆದರೇ ಏನಾತ್ಹೇಳು" ಎಂದು ಹೆಂಡತಿ ಕಡೆಗೆ ನೋಡಿದ.

ಊಟ ಮುಗಿತು ಪತ್ರ ತಂದು ಕೊಡುತ್ತಾ "ರೊಕ್ಕಾನ ಕೇಳಿದ್ದಾರನೋಡ್ರಿ" ಎಂದು ಮಾತಿನಲ್ಲೇ ಹೆಂಡತಿ ತಿವಿದಳು.

"ಹೌದು ಅದ... ಪಾರಗೊಳ ಸಾಲಿಗೆ ಹೆಸರ ಹಚ್ಚಬೇಕು ಬಟ್ಟೆಬರಿ, ಪುಸ್ತಕ, ಪಾಟಿ ಖರೀದಿ ಮಾಡಬೇಕು ರೊಕ್ಕ ಕಳಿಸಿಕೊಡು ಅಂತ ಬರದಾಳ" ಎಂದು ಪತ್ರ ಬದಿಗಿಟ್ಟು ಸುಮ್ಮನಾದ.

"ಇನ್ನೇನ ಮಾಡ್ತಿರಿ ನಾಳಿಗೆ ಯಾರಿಗರೆ ಕೇಳ್ರಿ, ಅನ್ನುತ್ತ ಬಿಸಲ ಭಾಳ ಐತಿ ಒಂದೀಟ ಅಡ್ಡಾಗರಿ" ಎಂದು ಲಲಿತಮ್ಮ ಬಟ್ಟೆ ಭಾಂಡೆ ತೊಳಿಯುವ ಹೆಣ್ಮಗಳ ಹಿಂದ ಹೋಗಿ ನಿಂತು ಸಾವುಕಾಸ ಬೀಡವಾ, ಸರ್ ಮಲಗ್ಯಾರ ಎಂದಳು.

ಕೊಳನಿದ್ದಿ ಒಂದೀಟು ಜೋರಾಗಿ ಜಂಪ ತಂಗೊಡಿತ್ತು. ಲಲಿತಮ್ಮ ಎಬ್ಬಿಸುವ ಗೊಡವೆಗೆ ಹೋಗಲಿಲ್ಲ. ಅಪ್ಪನನ್ನ ನೆನೆಸುತ್ತಲೆ ನಿದ್ದಗೆ ಜಾರಿದ್ದರಿಂದ ಸ್ವಪ್ನದಲ್ಲಿ ಅಪ್ಪನಿಗೆ ಪತ್ರ ಬರದಂಗಾಗಿತ್ತು.

ಅಪಾ! ಅಪಾ! ಅಕ್ಷರ ಶಿಕ್ಷಣದ ಬಗ್ಗೆ ನಿನ್ನಲ್ಲಿರುವ ಅದರ ಗೌರವ ಬಹಳ ದೊಡ್ಡದಪಾ! ನಮಗಾಗ ನಿಲುಕುತ್ತಿರಲಿಲ್ಲ. ಆ ನಿನ್ನ ಹಂಬಲ ಕಾಳಜಿ, ಹೋರಾಟ, ಶ್ರಮದ ಕಾರಣಕ್ಕನ. ಜಗತ್ತನ್ನು ಅರ್ಥೈಸುವ ಪ್ರಶ್ನಿಸುವ ಹಕ್ಕನ್ನು ಪಡೆದಿದ್ದೇನೆ. ನಿನ್ನ ಸ್ವಂತ ಸುಖ ನೆಮ್ಮದಿ ಬದಿಗಿಟ್ಟು ಹಸಿವು ಬಡತನದಂತಹ ದಾರಿದ್ರಗಳನ್ನು



ಆಹ್ವಾನಿಸಿಕೊಂಡು ನಮ್ಮೆಲ್ಲರನ್ನು ಅಕ್ಷರಲೋಕಕ್ಕೆ ತಂದು ಸುಖಸಾಗರದಲ್ಲಿ ತೇಲುವಂತೆ ಮಾಡಿದೆ. ದೀನ, ದರಿದ್ರ ಬದುಕಿನಿಂದ ಹೊರತೆಗೆದು ಅಕ್ಷರದ ಅರಿವಿನಿಂದ ಸುಖದ ನೆಲೆಗೆ ನಿಲ್ಲಿಸಿ ಮನುಷ್ಯ ಬದುಕನ್ನು ಬಾಳುವಂತೆ ಮಾಡಿದ್ದು ನೀನೇ ಅಲ್ಲೇನಪಾ!

ಅಪಾ! ನಾನಿಂದು ಗುಡಿಸಲು ಬಿಟ್ಟು ಗಚ್ಚಿನ ಮನೆಯಲ್ಲಿ ಮಳೆ, ಗಾಳಿ, ಬಿಸಿಲು ಹತ್ತದ ಹಾಗೆ ಮಣ್ಣು - ಸೋಂಕದ ಹಾಗೆ ಮೆತ್ತನೆಯ ಮಂಚ ದ ಮೇಲೆ ಬೆಚ್ಚಗೆ ಮಲಗುತ್ತಿದ್ದೇನೆ. ಮನೆಯಲ್ಲೇನಾದರೂ ವಾಸನೆ ಬಂದರೆ ಸಾಕು! ಹೆಂಡತಿ ಸುಗಂಧ ದ್ರವ್ಯವನ್ನು ಸಿಂಪಡಿಸಿ ಸುಖನಿದ್ರೆ ಬರುವ ಹಾಗೆ ಮಾಡುತ್ತಾಳೆ. ಮಕ್ಕಳಿಗೆ ಫ್ಯಾನಿಲ್ಲಂದರ ನಿದ್ದೆಯೇ ಬರುವುದಿಲ್ಲ. ನಿನಗೆ ಗೊತ್ತಲ್ಲಪಾ! ನಾವು ಗುಡಿಸಲಿನಲ್ಲಿ ಮಲಗಿದರೆ ಕುರಿ ಉಚ್ಚೆ ಒಂದೆಡೆ, ರಾತ್ರಿ ಹಿಕ್ಕಿದ ಹಿಕ್ಕಿ ಕಾಳು ಹಾಸಿಗೆ ತುಂಬ ನಾಯಿ ನಮ್ಮೊಂದಿಗೆ ಕೌದಿಯಲ್ಲಿ ಸೇರಿ ಮಲಗಿದರೂ ಬೆಚ್ಚನೆಯ ಹಿತವಾದ ಅನುಭವ. ಬೆಳಗಾಗಿ ನಾಯಿ ಎದ್ದು ಮೈ ಜಾಡಿಸಿದಾಗ, ಅವ್ವ ನೋಡಿ “ಖೋಡಿ ನಾಯಿ! ಮಕ್ಕಳ ಹಾಸಿನ್ಯಾಗ ಮಲಗ್ಯಾದ ಬಾಯಾಗ ಮಣ್ಣು” ಎಂದು ಕಸಬಾರಗಿಲೆ ಹೊಡದ ಮ್ಯಾಲ ಕುಂಇ ಕುಂಇ ಎಂದು ಬಾಲಾ ಮುದುರಿಕೊಂಡು ಓಡುತ್ತಿತ್ತು. ನಾವು ಮಾತ್ರ ಘಾಟು ವಾಸನೆಯಿಂದ ಏಳುವ ಮನಸ್ಸು ಮಾಡುತ್ತಿರಲಿಲ್ಲ. ಅದು ಬಿಡಪಾ! ಈಗ್ಯಾಕ? ಅದು ನೆನಪಿಸಿಕೊಂಡರೆ ಮೈ ಜುಮ್ಮಂತದ.

ಅಪ್ಪಾ ನಿನಗೆ ನೆನಪಿದಯಾ?

ನಾನು ಸರಿಯಾಗಿ ಓದಲಿಲ್ಲ, ಬರಿಲಿಲ್ಲಂತ ಮಗಾ ಅನ್ನುವುದು ಮರತು ಖುರುಪಿಯ ಹಿಡಿಯಿಂದ ಡುಬ್ಬದ ಮೇಲೆ ಹೊಡೀತ್ತಿದ್ದಿ, ಸದಾ ನಿನ್ನೊಂದಿಗೆ ಇರುವ ನಿನ್ನ ಪ್ರೀತಿಯ ತಮ್ಮ ಯಲ್ಲಪ್ಪಕಾಕಾ ಕೈಯಾಗಿಂದ ಖುರುಪಿ ಕಸಗೊಂಡು “ಓದದರ ಓದತಾನ ಇಲ್ಲಂದ್ರ ಇಲ್ಲ, ಹಿಂಗ ಹೊಡ್ಯಾದೇನು?” ಎಂದು ಗೋಡೆಗೆ ಒರಗಿ ಸಿಟ್ಟ ಮಾಡಿಕೊಂಡು ಕುಂಡತ್ತಿದ್ದ, ಅವ್ವ, ಮತಳವ್ವ, ಜನವ್ವ ಯಾರೂ ನಿನ್ನ ವಿರುದ್ಧ ಮಾತಾಡ್ತಿರಲಿಲ್ಲ. ಸೆರಗ ಮುಖಕ್ಕೆ ಹಾಕ್ಕೊಂದು

ಒಳಗೊಳಗ ಆಳ್ತಿದ್ರು ಅದು ನಿನಗೆ ತಿಳಿದರೂ "ಓದು ಓದೋ ಸರಿಯಾಗಿ ಓದು ಸಂಬಳ ಸೀಟಗೋರೋ, ಓದೋ," ಎಂದು ಸಿಟ್ಟ ತಾಳಲರದಕ್ಕ ಬೀಸುಕಲ್ಲಿನ ಗುಂಜಿಯಿಂದ ಹೊಡೆಯುತ್ತಿದ್ದಾಗ ಪಡಸಾಲಿ ಮನಿಯಲ್ಲಿ ಎಲ್ಲವೂ ಮೌನ, "ಆಯಿ ಎದ್ದು ಬಂದು ಬಿಡೋ ತಿಪ್ಪಣ್ಣ ಮಮ್ಮಗಗ ಕೊಂದಿಗಿಂದ. ಏನರ ಖಬರದ ನಿನಗ!" ಎಂದು ತನ್ನ ಸೀರೆಯ ಸೆರಗಿನಿಂದ ಮಾರಿ ಸೀಟಿ ಬಿಕ್ಕುತ್ತಿದ್ದ ನನ್ನವುಚಿ ಬಾಚಿಕೊಂಡಿದ್ದಳು. ನಿನಗೆ ನೆನಪಿರಬೇಕಲ್ಲ. ಏನೋಪಾ ನನಗೆ ನೆನಪಾಗ್ತಿಲ್ಲ. ನೀನೆ ಹೇಳಪಾ! ನನಗೆಲ್ಲಿ ನೆನಪಿರಬೇಕು? ಅಂದೇನಪಾ! ಹೂಂನಪಾ! ಹೇಳ್ತಿನಿ! ಅಪಾ! ಕೇಳಪಾ!

ಆ ದಿನ ಮುಂಜಾನೆ ಸೂರ್ಯ ತಾಯಿ ಹೊಟ್ಟೆಯಿಂದ ಹೊರ ಬರುವ ಅವಸರದಲ್ಲಿರಬೇಕಾದ್ರ ಮಳಿ ಹೊಂಟ ಹೋಗಿತ್ತು. ಬರಗಾಲ ಬೀಳುವ ಹೊಣಾರಿತ್ತು. ಅಡ್ಮಾಡ ಮೂಡಿಲ್ಲ ಎಂದು ಗೊಣಗುತ್ತ ಅಂಗಳದಾಗ ಕುಂತು ಬೀಡಿ ಸೇದುತ್ತ



"ಯಲ್ಲಪ್ಪ ಮಳಿ ಬರಂಗ ಕಾಣಸಾಂಗಿಲ್ಲ ದನಗೋಳಿಗೆ ಮೇವು ಮಿಡಚಿ ಹೆಂಗಪಾ! ದನಕರ ಬಿಡಣ್ಣ, ಜೇನು ಹುಳದಂಗಿರುವ ಮಕ್ಕಳನ್ನು ಸಲುವೋದು ಹ್ಯಾಂಗೋಳು!" ಎಂದು ಉತ್ತರಿಸಿದ್ದ.

ಅದೇ ಚಿಂತೆಯಲ್ಲಿರ ಬೇಕಾದರೆ ಆಯಿ "ತಿಪ್ಪಣ್ಣಾ!! ನೀ ಪಾರಗ ಹಂಗೆನಪಾ ಹೊಡ್ಯಾದು, ಸೊಸದ್ಯಾರಾರೂ ಉಂಡಿಲ್ಲ ಹಂಗ ಎದ್ದು ಹೆಂಡಿಕಸಾ ಮಾಡಕತ್ಯಾರ" ಎಂದಳು.

ಅರ್ದಮರ್ದ ಕೇಳುತ್ತ ಕೌದಿಯಲ್ಲಿ ಮಲಗಿದ್ದ ನಮ್ಮನ್ನು ನೋಡ್ತ "ಏನಮಾಡ್ಲಿ ನಮ್ಮ ಮಕ್ಕಳು ನಸಕಿನ್ಯಾಗ ಎದ್ದು ಓದಾಂಗಿಲ್ಲ! ಬಾಂಗಿಲ್ಲ ಹುಚ್ಚಪ್ಪನ ಮಗಾ ಭಾಷಾ ಹ್ಯಾಂಗೋದತಾನ ನೋಡು" ಎಂದು ಹಳಹಳಿಸಿದ.

"ಏ ಯಲ್ಲಪ! ನಿನಗ ಗೊತ್ತದೇನೋ?"

"ಏನೆಣ್ಣಾ?"

"ಏನೆಣ್ಣಾ ಅಂತಿಯಲ್ಲೊ ಹುಚ್ಚ ಶಿಕ್ಷಣದ ಮಜಕೊರ ನಿಂಗೊತ್ತಿಲ್ಲ. ತಮಾ.. ನನ್ನ ಅಪ್ಪ ಏನೂ ಓದಲಾರ್ದಂವ. ನನಗ ನಾಲ್ಕಕ್ಷರ ಕಲಿಸ್ಯಾನಂತ ಊರವರ ಸಂಗಟ ಹೊಡದಾಡಿ ಬಡದಾಡಿ, ಹೋಗಿದ್ದ ಹೊಲಾ ಉಳಿಸಿ ಕೊಳ್ಳಂಗಾತಪಾ! ಇಲ್ಲಂದ್ರ ಎಲ್ಲಿ ಆಗ್ತಿತ್ತು" ಎಂದಾಗ "ಹೌಂದೆಣ್ಣಾ" ಎಂದು ಯಲ್ಲಪ್ಪ ತಲೆ ಅಲ್ಲಾಡಿಸಿದ.

"ಅದಕ್ಕ ಬಡಕೊಳ್ಳಾದು ನನಗೇನ ಮಕ್ಕಳ ಮ್ಯಾಲ ಹಂಬಲ ಇಲ್ಲೇನ. ಭಾಳ ನಿಷ್ಕಾಳಜಿ ಐತಿ ಅಂತಿಯೇನ? ಮಗಾ ಓದಲಿಲ್ಲ ಅಂತ ಹೊಡದು ಮರಗಾಂಗಿಲ್ಲನ ಬ್ಯಾಡ. ನಾನು ಮನಸ್ಯಾನ ಅದೇನಪಾ! ನಾಲ್ಕಕ್ಷರ

ಕಲೀಲಿ, ಓದಲಿ, ಬರೀಲಿ ಅನ್ನುವ ಕಾಳಜಿಯಿಂದನ ಹೊಡದೀನಿ. ನಿನಗೊತ್ತದಿಲ್ಲೊ ಹೊಲಾಮನಿ ಏಟ್ಟಿದ್ದರೇನ ? ಬಂಗಾರ ಬೆಳ್ಳಿ ಇವೆಲ್ಲ ಯಾರದರ ಪಾಲಾಗ್ತವ ಯಾರರ ಕಸಗೊಂಡು ಹೋಗ್ತಾರೆ. ಅದರ ಅಕ್ಷರ ಕಲಿತ್ತಿದ್ದು ಓದಿದ್ದು ಬರದಿದ್ದು ಯಾರೂ ಕಸಗೊಳ್ಳಂಗಿಲ್ಲ. ಸಂಪತ್ತಂದ್ರ ಅಕ್ಷರ ಜ್ಞಾನಪಾ ! ಅದು ಕದಿಲಾರು, ಕಸಗೋಲಾರು ಹಾಳಾಗಲಾರು ಗೊತ್ತೇನಪಾ !?"

"ನೋಡು ಈಗ ಬರಗಾಲ ಬಿದ್ದದ ದನಗೋಳಗಿ ಮೇವಿಲ್ಲ ಮಿಡಚಿಲ್ಲ, ಜ್ವಾಳಿಲ್ಲ, ಕಾಳಿಲ್ಲ ಮಕ್ಕಳ ಸಲುವೋದು ಜಡಾಐತಿ" ಎಂದು ಕೈಕೈ ಹಿಚಕಕೊಂಡು, ಕೈಯಾಗಿನ ಬೀಡಿ ನೆಲಕ್ಕ ತಿವಿದು ಅದರ ಹೆಡಕ ಮುರುದು, ಬೆಂಕಿ ಆರಿಸಿ ಸಿಟ್ಟಿತೀರಿಸಿಕೊಂಡು ಹೀಂಗ ಕೂತಿರಬೇಕಾದರ "ಐ ತಿಪ್ಪಣ್ಣಾ ಇಟ್ಟಲಗ ಹೇಳು. ಗಳ್ಯಾ ಹೂಡಿ ಬೋದ ಮಾಡಿ ನಾಕ್ಮಡಿ ಗೆಣಸ ಹಚ್ಚಾಕ ಹೇಳಪಾ ! ನಾಳಿ ಹಡ್ಡದರ ಮಕ್ಕಳು ಮರಿ ತಿಂದು ನೀರರೆ ಕುಡಿದು ಬದಕತಾವ" ಅಂತ ಆಯಿ ಹೇಳಿದ್ದು ಕೇಳಿ, ಹೂಂ ಎನ್ನುತ್ತ ಬೈಲಕಡಿಗೆ ಹೊರಟ್ಹೋಗಿದ್ದಿ ಹೌದಲ್ಲಾ !

ಆ ನಿನ್ನ ಕಾಳಜಿಯಿಂದಾಗಿ ನಾನು ನೆಮ್ಮದಿಯಿಂದ ಇರಂಗಾಗ್ಯಾದ ನೀನೊಂದು ವೇಳೆ ಹಾಗೆ ಮಾಡದೇ ಇದ್ದಿದ್ರ ? ನಮ್ಮ ಗತಿ ಏನಾಗುತ್ತಿತ್ತ ಹೇಳಪಾ!



ಅಪಾ ನಿನ್ನ ಮುಂದಾಲೋಚನೆಯಿಂದ ನಾ ದೊಡ್ಡ ಸಾಹೇಬ ಆದೆ. ಆದರೆ ನೀ ನೋಡಲಿಲ್ಲ. ಅವ್ವ ನೋಡ್ಯಾಳ, ಆದರ ಏನ ಮಾಡುದು ಬೆಳ್ಳಕ್ಕಿ ಬಣ್ಣದಂಗ ಇದ್ದ ನನ್ನ ಬದುಕಿಗೆ ಕಪ್ಪು ಮಸಿ ಬಳದಾರಪಾ ! ಅಪಾ! ಈ ಹಿಂದೆ ಪತ್ರ ಬರೆದಿದ್ದೆ . ಓದಿ ನಿನಗೆ ಹೇಗನಿಸಿತೊ! ನಾನೊಬ್ಬ ಹುಚ್ಚ. ಓದಲು ನಿನಗೆ ಕಣ್ಣು ಕಾಣಸಿಕ್ಕಿಲ್ಲ ! ನೀ ಕನ್ನಡಕ ತಗೊಂಡ ಹೋಗಿಲ್ಲ. ಅದರ ಏನಾತಪಾ ನನ್ನ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ಹೃದಯದ ಕಣ್ಣೆಂದಿರುತ್ತದಲ್ಲಪಾ ಯಾಕೆಂದರ ನಾನ ನಿನ್ನ ಕಳ್ಳಾಗಿನ ಕಳ್ಳಲೇನಪಾ! ಅಪಾ ! ನೀನು ಕೈಪರ ಅಲ್ಲೇನಪಾ, ಈಗ ಬಡವರ ಶೋಷಿತರ ನಾಯಕರಿರುವ ಸರಕಾರ ದೇಶದಲ್ಲಿ ಇಲ್ಲ ! ಅದರ, ಹೋಗಲಿ ಬಿಡಪ್ಪಾ !

ಅಪಾ ನಿನಗೆ ಗೊತ್ತಿರಬೇಕಲ್ಲ, ನಮ್ಮೂರಾಗ ನಮ್ಮ ಜನಾ ದಿನಬೆಳಗಾದರೆ ಹೆಗಲಮ್ಯಾಲೊಂದು ಹೆಡಗಿ ಇಟ್ಟುಕೊಂಡು ತಲಿಗೊಂದು ಹರದ ಟವಲ್ ಸುತಗೊಂಡು, ಕೈಯಾಗೊಂದು ಉದ್ದನ ಬಡಗಿ ಹಿಡಕೊಂಡು ಹೋಗಿ ನಾಟೀಕಾರಕಿ ರೊಟ್ಟಿ ಬೇಸಕೊಂಡು ಬಂದು ದನದ ಒಣಗ್ಯಾಗ ಕುದಿಸಿ ತಿಂತ್ತೀರು. ಅದೂ ನಾಟೀಕಾರಕಿ ರೊಟ್ಟಿ ಸುಮ್ಮನ ಕೊಡತಿರಲಿಲ್ಲ. ಊರ ಕಸಾ ಹೊಡಿಬೇಕು. ಸತ್ತದನಗೋಳೆಳದು ಎಳದ ಊರ ಹೊರಗೆ ಹಾಕಬೇಕು. ಸತ್ತ ಸುದ್ದಿ ಊರಿಂದೂರಿಗೆ ಮುಟ್ಟಿಸಬೇಕು. ಊರವರ ಹೆಣಾ ಹೊಂಟಾಗ ಹಲಗಿ ಬಡಕೋತ ಮುಂದ, ಮುಂದ

ಸಾಗಬೇಕಲ್ಲ ! ಇದೆಲ್ಲ ನೋಡದ್ರ ಇಂತಹ ಜಾತಿಯಲ್ಲಿ ಯಾಕರ ಹುಟ್ಟಿದೇವು ಅನಸ್ತದ. ಬೋಧಿಸತ್ವರಿಗೆ ರಾಮಜಿಬಾಬಾನಂತ ಅಪ್ಪಿದ್ದ ಅಂತಹವರ ಹೊಟೇಲಿ ಮತ್ತೆ ಮತ್ತ ಹುಟ್ಟಬೇಕನಸ್ತದ ನೀನೂ ರಾಮಜಿಬಾಬಾನಂಗ ನಿನ್ನಂತಹ ಅಪ್ಪ ಎಲ್ಲರಿಗೂ ಸಿಗಬೇಕಲ್ಲ. ಇಲ್ಲಿ ಬಿಡಪ್ಪ ಯಾವುದೋ ಹೇಳಿಕ್ಕೆ ಹೋಗಿ ಏನೋ ಹೇಳಕತ್ತೀನಿ ನೋಡು ನಾನೊಬ್ಬ ಮಳ್ಳ ...?

ಅಪಾ ಈಗ ದೇಶದ ತುಂಬೆಲ್ಲ ಕಸಬಾರಿಗಿ ಹಿಡಿದು ಕಸಾ ಹೊಡದವರಂಗ ನಾಟಕ ಮಾಡಾಕತಾರ. ಇನ್ನು ಕೆಲವರು ಗಾಂಧಿ ಆಗಾಕ ಹೊಂಟಾರ, ಚರಂಡಿ ಬಳ್ಯಾಕತ್ಯಾರ, ಅವರ ಹುಸಿನಾಟಕ ನೋಡಿ ಮೈಯೆಲ್ಲ ಉರಿತದಪಾ! ಅಪಾ! ನನ್ನ ಮನಸ್ಸಿನ್ಯಾಗ ಆಗಾಗಾ ಅನಸ್ತದ ಅನಾದಿ ಕಾಲದಿಂದ ಊರ ಚಾಕ್ರಿ ಮಾಡ್ತ ಬಂದೀವಲ್ಲ ಅವುಗಳನ್ನು ಅವರು ಒಂದತ್ತವರ್ಷ ಯಾಕ ಮಾಡಬಾರದು. ಅವು ಮಾಡು ಕೆಲಸಾ ನಾವು ಮಾಡದ್ರ ಹೆಂಗಾಗಂಗಿಲ್ಲಪಾ? ಇದು ಸಾಧ್ಯ ಅಂತೀಪಾ! ಇಲ್ಲಂತೀಯಾ ಹೋಗಲಿಬಿಡು.

ಅಪಾ ಊರಿಗಿ ಹೋದಾಗಲೆಲ್ಲ ಅವ್ವ ನೆನಪಮಾಡ್ತಾಳ ಹಂಗ ಹುಟ್ಟಿದ ಮಕ್ಕಳೆಲ್ಲ ಬದುಕ್ತಿ ಈಗಿರುವ ಹದಿಮೂರು ಮಕ್ಕಳ ಬದಲಿಗೆ ಹದಿನೆಂಟು ಮಕ್ಕಳು ಇರಿದ್ದು ಅಂತಾಳ ಅಪಾ ನಿನಗೆ ನೆನಪಾದೊ ಇಲ್ಲೊ ಆಯಿ ಒಂದಿನಾ ನನ್ನ ಬಾಲ್ಯದ ಗುಟ್ಟ ಹೇಳಿದ್ದಳು. “ಈಗ ಹೇಳ್ತಿನಿ ಕೇಳಪಾ!”

ಮುತ್ತಾ ನನಗ “ರಡ್ಯಾ” ಅಂತ ಕರೀತಿದ್ರಂತ ಅದು ನಿನಗೂ ಗೊತ್ತಿರಬೇಕಲ್ಲ . ಹುಟ್ಟಿದ ವರ್ಷದೊರಸದ ಮ್ಯಾಲ ನನಗೆ ಕಾಮಣಿ ರೋಗ ಆಗಿ ಎಲ್ಲಿ ಬೇಕೆಂದ್ರಲ್ಲಿ

ಆಯಿ ಹೊತ್ತಕೊಂಡು ಹೋಗಿ ಔಷಧ ಕೊಡಿಸಿದ್ರೂ ಲಗೂನ ಆರಾಮ ಆಗಲಿಲ್ಲಂತ. ಒಂದಿನಾ ಹಳಗುಣಕಿಗಿ ಹೋಗಿ ಇದೊಂದು ಕಡೀ ಸಾರಿ ತಪ್ಪಲ ಹಿಂಡಸಕೊಂಡು ಬರಾನು ಅಂತೇಳಿ ಅವ್ವ, ಆಯಿ ಹೋಗಿ ತಪ್ಪಲ ಹಿಂಡಸಗೊಂಡು ಹೊಳ್ಳಿ ಬರುವಾಗ, ಅವ್ವ, "ಆಯಿ ಸೊಂಟದಾಗಿನ ಕಡಚಗಿ ನೋಡಿ ಅತ್ತಿ ಕಡಚಗಿ ಎದಕ ತಂದೀರಿ" ಎಂದು ಕೇಳಿದ್ರ "ಏನ ಮಾಡಾದ ಅಂಬವ್ವ ಎಟ್ಟ ಊರ ತಿರುಗಿದರೂ ಪಾರಗ ನೆಟ್ಟಗಾಗೊಲ್ಲದು ಇನ್ನೇನ. ಸತ್ತಗಿತ್ತರ ಹಾದ್ಯಾಗ ಕೆದರಿ ಮಣ್ಣಕೊಟ್ಟ ಹ್ವಾದ್ರಾತು" ಎಂದು ಹೇಳಿದಳಂತ. ಈಗ ನೋಡು ನೀ ಏಟ ದೊಡ್ಡಾಂವ ಆಗಿದಿ ಅಂದಿದ್ದಳಪಾ! ಅಪಾ ಅಕಸ್ಮಾತ ಆಯಿ ಹೇಳದಂಗ ಆಗಿದ್ರ ಏನೂ ಅನಾಹುತ ಆಗಿರಲಿಲ್ಲ ಹೌದಲ್ಲಪಾ

ಮಗಾ ಹಂಗನಬ್ಯಾಡಪಾ! ನಿನಗೊತ್ತಿಲ್ಲ, ಯಾರಿಂದ ಏನೇನ ಒಳ್ಳೇದಾಗದ ಅಂತ ಹೆಂಗ ಹೇಳಲಿಕ್ಕಾಗದ, ನೋಡು, ನೀನೀಗ ಬರೀತಿ, ನಾಕಮಾತ ಹೇಳ್ತಿ. ನೂರಾರ ಜನ ನಿನ್ನ ಮಾತ ಕೇಳ್ತಾರು. ನಿಮ್ಮ ಅಮ್ಮಂದಿರ ಕಷ್ಟನಪ್ಪಾ ಅಂತ ಚಿಂತಿ ಮಾಡ್ತಿ ಸಾಕಪಾ, ಒಬ್ಬ ತಂದೆಗೆ ಇನೇನು ಬೇಕುಪಾ!

ಅಪಾ ನೀನೇನೋ ತೃಪ್ತಿ ಅಂತ ಹೇಳಿ, ಖರೆ, ನಮ್ಮ ಸಮಾಜ ಬೋಧಿಸತ್ವರಿಗೇನೇ ದೇಶದ್ರೋಹಿ ಎಂಬ ಹಣೆ ಪಟ್ಟಿ ಕಟ್ವಾದ, ಗಾಂಧೀಜಿಗೆ ಗುಂಡಿಟ್ಟ ಕೊಂದರಪಾ! ಅವರ ಯಾಕ ಕಲ್ಯಾಣ ಕ್ರಾಂತಿ ಪುರುಷನಿಗೂ...? ಏನ ಮಾಡ್ತಿ ಬಿಡು.

ಇಲ್ಲಿಮಗಾ ಜೀವನಾನೇ ಹೋರಾಟ ಅಂದೊರಿಗೆ ಅವೆಲ್ಲ ಬಂದಬರತಾವ. ಬೋಧಿಸತ್ವ ಹೆಂಗ ಓದ್ಯಾರ ಬರದಾರ ನೋಡಪಾ! ನಿನ್ನ ಮುಂದ ನಾನೇನ ದೊಡ್ಡ ಬುದ್ಧಿವಂತನಲ್ಲ. ನೀ ಓದೀದಿ! ಬರದೀದಿ! ಜಗತ್ತು ಹೆಂಗದ ಅನ್ನೊಂದು ನಿನಗ ಗೊತ್ತದ. ಸಮಾಜದ ಭಾರ ತೀರಸಾಕ ನಿನ್ನ ಹತ್ಯಕ ಶಕ್ತಿ ಅದ. ಅದನ್ನು ಉಪಯೋಗ ಮಾಡು. ಯಾವುದಕ್ಕೂ ಸಮಾಜಕ್ಕೆ ಬೆನ್ನ ಮಾಡಬ್ಯಾಡ, ಸತ್ಯಕ್ಕ ಹೆಗಲ ಕೊಡು, ಸುಳ್ಳಿಗಿ ತಲಿಬಾಗಬ್ಯಾಡ. ನಾನ ಬದುಕಿರಲಿಲ್ಲಂದ್ರ ಅಂದೆಲ್ಲ ! ಹೇಡಿಗಳು ಸಾವಿರ ಮಂದಿದ್ದರ ಮಾಡದೇನು ? ನಿನ್ನಂತಹ ಒಬ್ಬ ಮಗ ಒಬ್ಬೊಬ್ಬ ತಾಯಿ ತಂದಿಗೆ ಇದ್ದರೆ ಸಾಕು ಹೋರಾಟದ ರಥ ತಾನ ಸಾಗತದ.

ಹಂಗಲ್ಲ ನಾನು ಪರಿಪೂರ್ಣ ಅಲ್ಲಪಾ

ಏನಂದೀ ಪರಿಪೂರ್ಣ ಹೌದು ಯಾರೂ ಪರಿಪೂರ್ಣ ಅಲ್ಲ ನೋಡ ಮಗಾ! ಯಾರ ಏನೇ ಅನ್ನಲ್ಲಿ ಮುನ್ನುಗ್ಗಿ ನಡಿಬೇಕು ಎಂದಿದ್ದಲ್ಲಪ್ಪ.

ಅಪಾ! ಅಪಾ! ನೀನು ಬಾರದಲೋಕಕ್ಕೆ ಹೋಗಿದ್ದಿಯಾ ಅಲ್ಲೆನಪಾ! ಹೌದು ಅಂತ ಹೇಳಲಿಕ್ಕೆ ನನ್ನೆದುರಿಗೆ ನೀನಿಲ್ಲ. ಆದರೂ ನನಗೆ ನೋವಾದಾಗ, ಮನಸ್ಸಿಗಿ ಆಘಾತವಾದಾಗ ನಿನಗೆ ಏನರೆ ಹೇಳಬೇಕು. ಬರದ ತಿಳಿಸಬೇಕು

ಅನಸ್ತದ. ಹೇಳದಿದ್ರ ಮನಸ್ಸಿನ್ಯಾಗ ಚಡಪಡಿಕೆ ಹತ್ತದ. ಆ ನೋವು ದೂರಾಗಬೇಕಾದರ ನಿನ್ನೊಂದಿಗೆ ಒಬ್ಬನೇ ಸಂವಹನ ಮಾಡಬೇಕು ಅನಸ್ತದ. ಅದಕ್ಕ ನಿನಗೆ ಬೇಸರ ಆಗಾಂಗಿಲ್ಲೇನಪಾ!



ಹೇಳಂದಿಯೇನಪಾ! ಟೈಮಸಿಕ್ಕಾಗ ಪತ್ರ ಬರಿತೀನಿ ನೀನೂ ಪತ್ರ ಬರಿಬೇಕಾ. ಮರಿಬ್ಯಾಡ ಎಂದಾಗ ಆಯಿತ್ಮಗಾ ಒಳ್ಳೇದಾಗಲಿ ಎಂದು ಹೇಳಿದಂತಾಯಿತು.

ದಿನಗಳು ಗಾಲಿಯಂತೆ ಉರುಳಿದವು.

ಮಗಾ...! ನಿನ್ನ  ಪತ್ರಗಳೆಲ್ಲವು ಕೈ ಸೇರಿವೆ. ನಾನು ಕನ್ನಡಕ ತಂದಿಲ್ಲ. ಓದಲು ತೀರ ಕಷ್ಟವಾಗುತ್ತಿದೆ. ಆದರೂ ನಿನ್ನ ಪತ್ರವೆಂದರೆ ಹಸಿವು ಮರಸ್ತದ. ನನಗೆ ಓದಲು ಎಷ್ಟೇ ಕಷ್ಟವಾದರೂ ಓದುತ್ತೇನೆ. ಸಹಪಾಟಿಗಳು ಸಾಕಷ್ಟಿದ್ದಾರೆ. ಅವರಿಂದ ಓದಿಸಿ ಆನಂದ ಪಡುತ್ತೇನೆ. ನನ್ನೂರಿನ ಸುತ್ತಮುತ್ತಲಿನ ಅನೇಕರು ನಿನ್ನ ಪತ್ರದ ಬಾತ್ಮಿಕೇಳಿ ಕಣ್ಣೀರಿಡ್ತಾರು. ಅವರು ಹೊಗಳುವುದು ನೋಡಿ ನನಗ ಕರಳುಬ್ಬಿಬರದ ನೀನು ಕುಟುಂಬ, ಸಮಾಜ ಅಲ್ಲದ ಬೋಧಿಸತ್ವರ ಸಿದ್ಧಾಂತದ ಬಗ್ಗೆ ಇಟ್ಟುಕೊಂಡಿರುವ ಕಾಳಜಿಗಳನ್ನು ಎಲ್ಲರ ಮಕ್ಕಳೇಕೆ ಹೊಂದುವುದಿಲ್ಲಂತ ಹಳಹಳಿಸ್ತಾರ. ದಿನದಲ್ಲಿ ಮೂರನಾಲ್ಕು ಬಾರಿ ನಿನ್ನ ಪತ್ರವನ್ನು ಓದಿ ನಾವೆಲ್ಲ ಖುಷಿ ಪಡ್ತೀವಿ.

ಹೌದು! ಅಂದಂಗ ಮಗಾ ಇತ್ತೀಚೆಗೆ ಕನ್ನಡದವರು ಯಾರೋ ಸಂಗ ಮೂರ್ತಿ ಏನೋ ಅನ್ನವರು ಬಂದಾರಂತ ಹೇಳಿದ್ದಿ ಅವರ ಹೆಸರು ಪಕ್ಕಾ ಗೊತ್ತಾ ಗೊಲ್ಲದು. ಅವರು ನೇರುಶರ್ಟು, ಜಾಕೇಟ್ ಹಾಕೊಂಡಿರತಾರ, ದಾಡಿ ಬಿಟ್ಟ ಕೊಂಡಾರ. ಅವರೊಬ್ಬ ಚಿಂತಕ, ಭಾಳ, ಭಾಳ ಪುಸ್ತಕ ಬರದು ಪ್ರಸಿದ್ಧರಾಗ್ಯಾರ! ಅವರನ್ನು ಭೇಟಿಯಾಗು ಅಂತ ಬರದಿದ್ದೆಲ್ಲ . ತತಕ್ಷಣದಿಂದ ಚಿತ್ರಗುಪ್ತರ ದಾಖಲೆ ಎಲ್ಲಿ ಯಾವ ಗುಂಪಿಗೆ ಸೇರಿಸಬೇಕು ಎನ್ನುವುದು ಆರಂಭಿಕ ಹೇರಿಂಗನಲ್ಲಿದೆ. ಭೇಟಿಯಾಗುವವರು ಅವರಿರುವ ಜನರಲ್ ಸೆಲ್ಲಿಗೆ ಹೋಗಬಹುದು ಎಂದು ಹೇಳಿದ್ದೇಲೆ ನಾನು ಅಲ್ಲಿಗೆ ಹೋದೆ.

ನನ್ನ ವೇಷ ಭೂಷಣ ನೋಡಿ ನೀವು ಉತ್ತರ ಕರ್ನಾಟಕದವರಾ! ಎಂದು ಕೇಳಿದರ.

ಹೌದು ಎಂದ್ದೇಳಿದೆ. ನೋಡಲು ಒಳ್ಳೆಯ ಮನುಷ್ಯ .

ನಿಮಗಿನ್ನು ಏಕೆ ಪ್ರಧಾನ ವೇದಿಕೆಗೆ ಪ್ರವೇಶ ಸಿಕ್ಕಿಲ್ಲವೆಂದೆ.

ಆಗ ಅವರು ಯಜಮಾನ್ರೆ ನಾನು ಹುಟ್ಟಿದ್ದು ವರ್ಣದ ಮೂಲ ಸಾಲಿನಲ್ಲಿ, ಕಟ್ಟಿಕೊಂಡುದ್ದು ಹೊರ ಧರ್ಮದ ಹೆಣ್ಣನ್ನು, ಬರೆದದ್ದೂ ಧರ್ಮದ ಕಂದಾಚಾರಗಳ ವಿರುದ್ಧ, ವೈದಿಕ ವ್ಯವಸ್ಥೆಯ ವಿಚಾರಗಳನ್ನು ಹೊರಹಾಕಿದ್ದಕ್ ವಿಪ್ರಸಂಘದವರು ನನ್ನನ್ನು ಸೇರಿಸಿಕೊಳ್ತಾಯಿಲ್ಲ. ಅನೇಕರನ್ನೆಲ್ಲ ಸೇರಿಸಿಕೊಂಡಾರ. ಇನ್ನು ನಾನು ಮೊದಲ ವರ್ಣದವ ಅನ್ನುವ ಕಾರಣಕ್ಕ ಎಡಪಂಥಿಯರು ಹಿಂದು ಮುಂದು ನೋಡಾಕತ್ಯಾರ, ಹಂಗೇನ ಪ್ರಯತ್ನ ನಾನ ಬಿಟ್ಟಿಲ್ಲ. ಬೋಧಿಸತ್ವರು ವೇದಿಕೆಯ ಮುಖ್ಯಸ್ಥರದಾರ, ಹರವೆ, ತ್ಯಾಗಿ ಮತ್ತು ಕುವೆಂಪು ಅವರ ಮೂಲಕ ಬೋಧಿಸತ್ವರಿಗೆ ನನ್ನ ಮನವಿಯನ್ನು ಸಲ್ಲಿಸಿದ್ದೇನೆ. ಕೊನೆಯದಂದು ಹೇರಿಂಗ ಮುಗಿಬೇಕು.



ಅದೇನು ಸಾಹೇಬರ ಹೇರಿಂಗು?

ಅದೇರಿ ದಲಿತ ನೌಕರರು ಲಂಚ ಸ್ವೀಕರಿಸಲು ಕಾರಣಗಳೇನು? ಅದರ ಬಗ್ಗೆ ನಾನು ಮಾತಾಡಿದ್ದೆ ಅಲ್ಲದೆ, ಕೈ ಪ್ರಚಾರದಲ್ಲಿ ತೊಡಗಿದ್ದೆ ಅನ್ನುವುದನ್ನು ಸಾಕ್ಷೀಕರಿಸಬೇಕು. ಕೋಮುವಾದಿಗಳ, ನರಹಂತಕರ ಸರ್ಕಾರದ ಆಡಳಿತದಲ್ಲಿ ನಾನಿರಲಾರೆ ಎಂದು ಹೇಳಿದ್ದು ಬೋಧಿಸತ್ವರಿಗೆ ಮೆಚ್ಚುಗೆಯಾಗಿದೆ. ನಾಳೆ ನಾಡಿದ್ದು ಅನ್ನುವುದರೊಳಗೆ ನನಗೆ ಎಡಪಂಥೀಯ ಗುಂಪಿನ ಪ್ರವೇಶ ಸಿಗಬಹುದು.

ಹಾಗಿದ್ದರೆ ಸಂಗಮೂರ್ತಿಗಳೆ ನಿಮಗೆ ಒಳ್ಳೆಯದಾಗಲಿ ಎಂದು ಎದ್ದು ಹೊರಟಿದ್ದೆ . .

ಮೂರ್ತಿಗಳು ನನ್ನ ಕೈಯಲ್ಲಿರುವ ನೀನು ಬರೆದ ಪತ್ರ ತಗೊಂಡು ಓದಿ ಸಂತೋಷಪಟ್ಟರು. ನಿಮ್ಮ ಮಗ ಚೆಂಗೆ -ಭಂಗೂನ ಬಗ್ಗೆ ಬರೆದಿದ್ದಾರೆ. ಅವರಿನ್ನು ಬಂದಿಲ್ಲ. ಬರುವವರಿದ್ದಾರೆ. ನಿಮ್ಮ ಮಗ ಬರೆದಂತೆ ಅವರು ಮನುಷ್ಯಮುಖಿ ಜನರಲ್ಲ ಅವರು ಎಡಪಂಥೀಯ ಗುಂಪಿಗೂ ಸೇರಿದವರಲ್ಲ ಸಂಘಕ್ಕೆ ಸೇರಿದವರು.

ಹಾಗಿದ್ದರೆ ನಾನೀಗಲೆ ದಸಂಸದ ಗೆಳೆಯರೆಲ್ಲರಿಗೆ ಈ ವಿಷಯವನ್ನು ತಿಳಿಸುವೆ ಎಂದು ಎದ್ದು ಹೊರಟೆ.

ಅಯ್ಯೋ ತ್ಯಾಗಿ ಹರವೆ, ಕೃಷ್ಣಪ್ಪ ಅವರಿಗೆಲ್ಲ ಗೊತ್ತಿದೆ ಯಜಮಾನೆ! ಎಂದು ನನಗೆ ನೆನಪಿಸಿದರು.

ಹಾಗಲ್ಲ ಸಂಗಮೂರ್ತಿಗಳೆ ಭೀಮಸೇನಾನಿ, ದೇವರಾಯರಯವರಿಗೂ ತಿಳಿಸುತ್ತೇನೆ. ನಿಮಗೆ ಒಳ್ಳೆಯದಾದರೆ, ಒಳ್ಳೆಯದಾಗಲಿ,

ಅಂದಾಂಗ ಅವರ್‍ಯಾರು?

ಅವರು ನಮ್ಮ ಭಾಗದ ದೊಡ್ಡ ಹೋರಾಟಗಾರರು.

ಹೌದಾ! ಎಂದು ಸುಮ್ಮನಾದರು. ಆಗ ನಾನು ಹೊರಟು ಬಂದೆ. ಇಲ್ಲಿ ಮಗಾ! ನೀನು ನಿನ್ನ ಪತ್ರದಲ್ಲಿ ತಾಪತ್ರಯಗಳನ್ನು ಬರದೀದಿ. ಅದಕ್ಕೆಲ್ಲ ಉತ್ತರ ನಿನ್ನ ಓದಿನಲ್ಲಿದೆ. ತಥಾಗತರು ಬೋಧಿಸಿದ್ದಾರೆ, ಬೋಧಿಸತ್ವರು ದಿಟಗೊಳಿಸಿದ್ದಾರೆ. ಅದು ನಿನಗೆ ನಾನು ಹೇಳಬೇಕಾ? ಮಗಾ ಧೈರ್ಯಗೆಡಬೇಡ, ಹೋರಾಡು ಹೋರಾಟ ನಿಲ್ಲಿಸಬೇಡ. ಇಷ್ಟರಲ್ಲಿ ಬೋಧಿಸತ್ವರಿಗೆ ಭೇಟಿಯಾಗುತ್ತೇನೆ. ನೀನೂ ಕಳುಹಿಸಿದ ಪುಸ್ತಕ ಅವರಿಗೆ ಕೊಡುತ್ತೇನೆ. ಇನ್ನೊಂದು ಮಾತು, ಲೈಬ್ರರಿಯೊಳಗ ಕುವೆಂಪು ಪುಸ್ತಕಗಳಿಲ್ಲ . ವಚನಗಳ ಪುಸ್ತಕನೂ ಇಲ್ಲ. ಅದೇ ಯಾವದೋ ಹೊಸ ಪುಸ್ತಕ ಬಂದಾದಂದೆಲ್ಲ . ಅದರ ಹೆಸರು? ಎದೆಗೆಬಿದ್ದ ಅಕ್ಷರ ಹಾಂ ಅದನ್ನು ಕಳಸಪಾ ಎಂಬ ಪತ್ರದ ಸಾಲು ಮುಗಿದು, ಇಂತಿ ನಿನ್ನ ಅಪ್ಪ ಎಂಬ ಪದ ಓದಿ ಮುಗಿಸಿರ ಬೇಕಾದರೆ....

"ಅಫೀಸಿಗೆ ಹೋಗಲೇ ಏಳಿ, ಏಳಿ" ಎಂದು ಲಲಿತಮ್ಮ ಜೋರಾಗಿ ಮೈ ಅಲಗಾಡಿಸಿದಾಗ ಗಡಬಡಿಸಿ ಎದ್ದು ನೋಡ್ತೀನಿ ಪೆನ್ನು ಪತ್ರ ಯಾವುದೂ ಇಲ್ಲ.



"ಏನ್ರಿ ಹಗಲ ಕನಸ ಕಾಣಕತ್ತಿರೇ ಏ ಮುಖ ತಕ್ಕೊಳ್ಳಿ" , ಬಟ್ಟೆ ಧರಿಸಿ ಹೊರಟು ನಿಂತೆ.

"ಅಫೀಸಿಗೋ, ಪೋಸ್ಟ್ ಆಫೀಸಿಗೋ" , ಎಂದಳು ಲಲಿತಾ.

ಹೌದಲ್ಲ ಊರಿಗೆ ದುಡ್ಡಿ ಕಳಸಬೇಕಲ್ಲ ಎಂದು ಸೀದಾ ಅಂಚೆ ಕಛೇರಿಗೆ ಹೋಗಿ ಮನಿಯಾರ್ಡರ್ ಮಾಡಿದೆ. ಸಂಜೆಗೆ ಬಂದು ಸಂದಾಯ ಮಾಡಿದ ಚೀಟಿಯನ್ನು ನನ್ನವಳ ಕೈಗಿಟ್ಟೆ .

ಇದೇ ಆಯಿತು ನಿಮ್ಮದು, ಎನ್ನುವಂಗ ನೋಡಿ ಸುಮ್ಮನಾದಳು.

ಕನಸಲ್ಲಿ ಅಪ್ಪನನ್ನು ನೋಡಿದ್ದು ! ಸಂವಹನ ಮಾಡಿದ್ದು ಮನಸ್ಸಿಗೆ ಒಂದಿಷ್ಟು ಹಿತವಾದಂತಾಗಿತ್ತು ! ದಿನಗಳು ಕಳೆದರೂ ಅಪ್ಪನೊಂದಿಗೆ ನಡೆಸಿದ ಸಂವಾದ ಮರುಕಳಿಸುತ್ತಲೇ ಇತ್ತು.

ಅವ್ವ ಹಣ ಸ್ವೀಕರಿಸಿದ ಪರತಪಾವತಿ ಬಂದು ಕೈ ಸೇರಿತು. ಅವ್ವ ಮೊಮ್ಮಗನಿಂದ ಬರೆಸಿದ ಒಕ್ಕಣಿಕೆಯಲ್ಲಿ ಲೆಕ್ಕವೆಲ್ಲ ತಿಳಿಸಿದ್ದಳು. ಆರಾಮದಿಂದ್ದಿದ್ದೇನೆಂದೂ ಬರೆದಿದ್ದಳು.

+

# ೧೧. ಗುರುತಿರದ ವಿಳಾಸ

ದು. ಸರಸ್ವತಿ

**ಜಾತಿ ಬಿಡಿ ಮತ ಬಿಡಿ : ಮಾನವತೆಗೆ ಜೀವ ಕೊಡಿ**

**ನಮ್ಮಲಿಲ್ಲ ಹಿಂದೂ ರಕ್ತ**

**ನಮ್ಮಲಿಲ್ಲ ಮುಸ್ಲಿಂ ರಕ್ತ**

**ನಮ್ಮಲಿಲ್ಲ ಕ್ರೈಸ್ತ ರಕ್ತ**

**ನಮ್ಮಲ್ಲಿರುವುದು ಒಂದೇ ರಕ್ತ**

**ಅದುವೇ ಮಾನವ ಕೆಂಪುರಕ್ತ**

ಎಂಬ ಘೋಷಣೆಗಳನ್ನು ಚಿಕ್ಕಮಗಳೂರಿನ ಬೀದಿಗಳಲ್ಲಿ ಸಿದ್ರಾಮನು, ಯಲ್ಲಮ್ಮನು ಜಿದ್ದಿಗೆ ಬಿದ್ದವಂತೆ ಕೂಗುತ್ತಿದ್ದರು. ಉರಿ ಬಿಸಿಲಿನಲ್ಲಿ ನೆತ್ತಿ ಕಾದು, ಮೈಯಲ್ಲೆಲ್ಲ ಬೆವರು ಕಿತ್ತು ಬರುತ್ತಿದ್ದರೂ ದನಿ ಮಾತ್ರ ಗಟ್ಟಿಯಾಗಿ ಹೊಟ್ಟೆಯಿಂದ ಎದ್ದೆದ್ದು ಬರುತ್ತಿತ್ತು. ಇವನನ್ನು ನೋಡಿ ಅವಳು, ಅವಳನ್ನು ನೋಡಿ ಇವನು ಉತ್ಸಾಹಗೊಂಡು ಹುಮ್ಮಸ್ಸಿನಿಂದ ಕೂಗುತ್ತಿದ್ದರು. ಅವರ ಜೋಷನ್ನು ನೋಡಿದರೆ, ಎಂಥದೇ ಜಾತಿ, ಮತದ ಕಂದಕ ಕಂಡರೆ ಚಕ್ಕನೆ ನೆಗೆದು ಮುಗಿಲಿಗೆ ಹಾರಿಬಿಡುವರೇನೋ ಎನಿಸುವಂತಿತ್ತು. ಆ ಕ್ಷಣದಲ್ಲಿ ಅವರೂ ಸಹ ತಮ್ಮನ್ನು ರಕ್ತ ಮಾಂಸವಿರುವ ಮನುಷ್ಯರೆಂದುಕೊಂಡಿರಲಿಲ್ಲ. ಜಾತಿ – ಮತಗಳ ಭೇದಭಾವಕ್ಕೆ ಸವಾಲೊಡ್ಡಿ ನಿಲ್ಲದಿದ್ದರೆ ಈ ದೇಹವೆಂಬ ಮಾಂಸಕ್ಕೂ, ಅದರೊಳಗಡೆ ಹರಿವ ರಕ್ತಕ್ಕೂ ಅದರೊಳಗೆ ಸಂಚರಿಸುವ ಪ್ರಾಣಕ್ಕೂ ಬೆಲೆ ಇದೆಯಾ? ಎಂದು ಆವಿಯಾಗಿ ಹೋಗಲು ಸಿದ್ಧವಾದ ಹುತ ಆತ್ಮಗಳಂತೆ ಕಾಣಿಸುತ್ತಿದ್ದರು.

ಅವರಿಬ್ಬರೂ ಕೋಮು ಸಾಮರಸ್ಯದ ಸಮಾವೇಶಕ್ಕೆಂದು ಚಿಕ್ಕಮಗಳೂರಿಗೆ ಹೋಗಿದ್ದರು. ಸಮಾವೇಶ ನಡೆಯಲಿದ್ದ ಮೈದಾನಕ್ಕೆ ಜನರೆಲ್ಲ ಮೆರವಣಿಗೆಯಲ್ಲಿ ಸಾಗುತ್ತಿದ್ದರು. ಮೆರವಣಿಗೆಯಲ್ಲಿದ್ದ ಜನ ಉತ್ಸಾಹವೇ ಇಲ್ಲದಂತೆ ಕೈಲಿದ್ದ ಪ್ಲಕಾರ್ಡ್‌ಗಳನ್ನು ಬಿಸಲಿಗೆ ಅಡ್ಡ ಹಿಡಿದು ನೀರಸವಾಗಿ ನಡೆಯುತ್ತಿದ್ದರು. ಸಂಘಟನೆಯ ಹುಡುಗ-ಹುಡುಗಿಯರೆಲ್ಲ ರಾತ್ರಿ ಎಲ್ಲ ನಿದ್ದೆಗೆಟ್ಟು ಫಕಾರ್ಟ್‌ಗಳನ್ನು ಬರೆದಿದ್ದರು. “ಮನುಜ ಮತ ವಿಶ್ವಪಥ ಕುಲ ಕುಲವೆಂದು ಹೊಡೆದಾಡದಿರಿ, ಬೇಡ ನಮಗೆ ಭೇದಭಾವ, ಬೇಕು ನಮಗೆ ಪ್ರೀತಿ ಭಾವ, ಭೇದ ಭಾವ ಒದ್ದೋಡಿಸೋಣ, ಮಾನವತೆಯ ಆದರಿಸೋಣ..” ಘೋಷಣೆಗಳನ್ನು ಭಾವುಕ ಮನಸ್ಸಿನ ಯಲ್ಲಮ್ಮ ಬರೆದಿದ್ದಳು. ಸದಾ ತಿಂದಕ್ಕೆ ಅಂಗೆ ಚಡಪಡಿಸುವ ಸಿದ್ರಾಮ ಫ್ಯಾಸಿಸ್ಟ್ ಶಕ್ತಿಗಳಿಗೆ ಧಿಕ್ಕಾರ, ಜಾತಿವಾದಿಗಳಿಗೆ ಧಿಕ್ಕಾರ, ಸಾಮ್ರಾಜ್ಯಶಾಹಿ ಏಜೆಂಟರುಗಳಾದ

ಮನುವಾದಿಗಳಿಗೆ ಧಿಕ್ಕಾರ ಎಂದು ಬರೆದಿದ್ದ. ಆದರೆ ಈಗ ನೋಡಿದರೆ, ಜನರ ನೀರಸತೆಯಿಂದ ಘೋಷಣೆಗಳು ಸಹ ಉತ್ಸಾಹ ಕಳಕೊಂಡಂತೆ ಮಂಕಾಗಿ ಕಾಣಿಸುತ್ತಿದ್ದವು. ನಾವು ಈಗಾಗಲೇ ರಣರಂಗದಲ್ಲಿದ್ದೇವೆ ಶತ್ರುವಾಗಲೇ ನೀರಸತೆಯ ರೂಪದಲ್ಲಿ ನುಸುಳಿ ದಾಳಿ ಇಟ್ಟಿದ್ದಾನೆ. ನಾವೀಗ ಕಾರ್ಯಪ್ರವೃತ್ತರಾಗಿ ಮರುದಾಳಿ ಮಾಡಿ ನೀರಸತೆಯನ್ನು ಒದ್ದೋಡಿಸಿ ಉತ್ಸಾಹವನ್ನು ಮರಳಿ ಪಡೆಯಬೇಕು ಎಂದು ಪಣತೊಟ್ಟ ಕಾರಣಕ್ಕೆ ಅವರಿಬ್ಬರು ಶಕ್ತಿಯನ್ನೆಲ್ಲ ತುಂಬಿ ಘೋಷಣೆಗಳನ್ನು ಬೀಸುತ್ತಿದ್ದರು.

ಬೆಂಗಳೂರಿನ ಬಸ್ ಹತ್ತುವ ಮೊದಲು ಸಂಘಟಕರೊಬ್ಬರ ಮನೆಯಲ್ಲಿ ನಾಟಿ ಕೋಳಿ ಸಾರು, ಮುದ್ದೆಯನ್ನು ಸಿದ್ರಾಮ, ಯಲ್ಲಮ್ಮ ಚಪ್ಪರಿಸಿ ಉಣ್ಣುತ್ತಿದ್ದರು. ಉಣ್ಣುತ್ತಾ ಒಡಕಲು ಗಂಟಲಲ್ಲೇ ಸಮಾವೇಶದ ಯಶಸ್ಸನ್ನು ಕುರಿತು ಖುಷಿಯಾಗಿ ಮಾತನಾಡುತ್ತಿದ್ದರು. ನೀರಿಕ್ಷೆಗೂ ಮೀರಿ ಜನ ಸೇರಿದ್ದರು. ಕರಪತ್ರವನ್ನು ಕೇಳಿ ತೆಗೆದುಕೊಂಡು ಓದಿದ್ದರು. ಹುಂಡಿಗೆ ತಾವಾಗಿ ಬಂದು ಕಾಸು ಹಾಕಿದ್ದರು. ಊಟ ಮುಗಿಸಿ ಬಸ್ಸು ಹತ್ತಿದ ಮೇಲೆ ಸಮಾವೇಶದ ಯಶಸ್ಸು, ಕೋಳಿ ಬಾಡಿನ ರುಚಿ, ದಣಿವು ಎಲ್ಲ ಸೇರಿಕೊಂಡು ಉಂಟು ಮಾಡಿದ ಸಂತೃಪ್ತಿಯಿಂದ ಅಮಲೇರಿದಂತಾಗಿ ಘೋಷಣೆಯಷ್ಟೇ ಜೋರಾಗಿ ಗೊರಕೆ ಹೊಡೆಯುತ್ತ ನಿದ್ರಿಸಿದರು. ಬೆಂಗಳೂರಿಗೆ ಬಂದಾಗಲೇ ಎಚ್ಚರವಾಗಿದ್ದು, ಬಸ್ಸಿಳಿದು ಸಿಗುತ್ತೇನೆಂದು ಹೇಳಿ ತಮ್ಮ ತಮ್ಮ ಮನೆ ಕಡೆಗೆ ನಡೆದರು. ಹೀಗೆ ಅವರಿಬ್ಬರು ಸಂಘಟನೆಯ ಕಾರ್ಯಕ್ರಮಗಳಿಗೆ ಒಟ್ಟೊಟ್ಟಿಗೆ ಹೋಗುವುದು ಅದೆಷ್ಟನೆಯ ಬಾರಿಗೂ ಗೊತ್ತಿಲ್ಲ. ಸಂಘಟನೆಯ ಕೆಲಸವನ್ನು ಬಲು ಉತ್ಸಾಹದಿಂದ ಅವರಿಬ್ಬರು ಮಾಡುತ್ತಿದ್ದರು. ಪರಸ್ಪರರ ಕಂಪನಿಯಿಂದ ಸಖತ್ ಎಂಜಾಯ್ ಮಾಡುತ್ತಿದ್ದರು. ತಾನು ಓದಿ ಮೆಚ್ಚಿದ ನೆರೆದನ ಪದ್ಯವನ್ನು ಮೆಜೆಸ್ಟಿಕ್ ಬಸ್ ಸ್ಟಾಂಡಿನ ಗದ್ದಲದಲ್ಲೂ ಸಿದ್ರಾಮ ಓದಿ ಹೇಳುತ್ತಿದ್ದ. ರೈಲಿನಲ್ಲೊ, ಬಸ್ಸಿನಲ್ಲೊ ಯಲ್ಲಮ್ಮ ಗುನುಗುತ್ತಿದ್ದಳು. ಹಿಂದಿ ಅರ್ಥವಾಗದ ಅವನು "ಕೇಳಕೆಷ್ಟೇ ಚೆನ್ನಾಗಿದೆ ವಸಿ ಅರ್ಥ ಹೇಳು ಮಾರಾಯ್ತಿ" ಎಂದು ಕೇಳುತ್ತಿದ್ದ. ಇವಳು ನಾನು ಗುನುಗುನಿಸಲಾಗದ ಗೀತೆಯನ್ನು ಕಾಲ ಏಕೆ ಹಾಡುತ್ತಿದೆ... ಎಂದು ಅರ್ಥ ಹೇಳುತ್ತಿದ್ದಳು.

ಗಂಭೀರವಾದ ವಿಷಯಗಳನ್ನು ಚರ್ಚೆ ಮಾಡುವಾಗ ಇಬ್ಬರೂ ಉತ್ಕಟಿತರಾಗಿ ಮಾತನಾಡುತ್ತಿದ್ದರು. ಚೈನಾ ಕ್ರಾಂತಿ ಕುರಿತು ಅವರು ಆವೇಶದಿಂದ ಮಾತನಾಡಿದರೆ, ಇವಳು ಹೋರಾಟ ತೀವ್ರವಾಗಿರಬೇಕೆ ಹೊರತು ಹಿಂಸೆಯನ್ನು ತಂತ್ರವಾಗಿ ಬಳಸಬಾರದೆನ್ನುತ್ತಿದ್ದಳು. ಹಿಂಸೆಯ ಪರಿಣಾಮ ಸಮಾನತೆ, ಸಹಬಾಳ್ವೆ ಎಂದಾದರೆ ಪರವಾಗಿಲ್ಲ ಎಂದು ಅವನು ಹೇಳಿದರೆ, ಅವರು ಗುರಿಯಷ್ಟೇ ದಾರಿಯೂ ಮುಖ್ಯ, ಮನುಷ್ಯರನ್ನು ಬೆಸೆಯುವುದು, ಪರಿವರ್ತಿಸುವುದು ವಿಶ್ವಾಸ, ಪ್ರೀತಿಯ ಹೊರತು...

"ಇವೆಲ್ಲಾ ಹೊಟ್ಟೆ ತುಂಬಿದ ಬೂರ್ಶ್ವಾ ಜನರ ಆಲೋಚನೆ, ನೀನು ನಗರದ ಅಪ್ಪರ್ ಮಿಡ್ ಕ್ಲಾಸ್ ದಲಿತಳು ; ನೀವು ಫ್ಯೂಡಲ್ ಗೌಡ ಕಾಮ್ರೇಡ್" .

ಇಂತಹ ಚರ್ಚೆಗಳು ಅವರಿಬ್ಬರಲ್ಲಿ ಲೆಕ್ಕವಿಲ್ಲದಷ್ಟು ನಡೆದಿವೆ.

ಅವನು ಸಂಪಾದನೆ ಮಾಡಲು, ವೈನ್ ಶಾಪಿನಲ್ಲಿ ಲೆಕ್ಕ ಬರೆಯುವುದರಿಂದ ಹಿಡಿದು ಲೇಖನ ಬರೆಯುವವರೆಗೂ ಮಾಡದ ಕೆಲಸಗಳಿಲ್ಲ. ಕಡು ಬಡತನದ ಕುಟುಂಬ ಸಲಹುವ ಹೊರೆ ಹೊತ್ತಿದ್ದ ಮತ್ತು ಅತ್ಯಂತ ಸ್ವಾಭಿಮಾನಿಯಾಗಿದ್ದ ಅವನು ಅವರೆಡನ್ನೂ ಬ್ಯಾಲೆನ್ಸ್ ಮಾಡಲೇನೋ ಎಂಬಂತೆ ಕೊಂಚ ಎದೆ ಉಬ್ಬಿಸಿ ನಡೆಯುತ್ತಿದ್ದ. ಬಡತನ ಹುಟ್ಟಿಸುವ ಕಾಂಪ್ಲೆಕ್ಸ್‌ನಿಂದಾಗಿ ಸದಾ ಚಡಪಡಿಸಿಕೊಂಡು ಉರಿದು ಬೀಳುತ್ತಿದ್ದ . ಹೀಗೆ ಉರಿಯುವುದರಿಂದಾಗಿ ಅವನ ಅತಿಯಾದ ಸ್ವಾಭಿಮಾನ ಎಷ್ಟೋ ಸಾರಿ ದುರಹಂಕಾರ ಎನಿಸಿಕೊಂಡುಬಿಡುತ್ತಿತ್ತು. ಅವಳು ಎಲ್.ಐ.ಸಿ. ಉದ್ಯೋಗ, ಕೈತುಂಬ ಸಂಬಳ, ಕುಟುಂಬದ ಹೊರೆ ಹೆಚ್ಚೇನೂ ಇರಲಿಲ್ಲ.

`ಅವನ ಸ್ವಭಾವವನ್ನು ಸೂಕ್ಷ್ಮವಾಗಿ ಅರಿತಿದ್ದ ಅವಳು, 'ಬೂರ್ಶ್ವಾ', ಇಂಗ್ಲಿಷ್ ಕಲಿತ ಸಾಮ್ರಾಜ್ಯಶಾಹಿ ಗುಲಾಮರು, ಇತ್ಯಾದಿ ಹೇಳಿಕೆಗಳನ್ನು ಅವನು ಉದುರಿಸಿದರೆ, ಹೆಕ್ಕಿ ಮನಸ್ಸಿನಲ್ಲಿಟ್ಟುಕೊಳ್ಳುತ್ತಿರಲಿಲ್ಲ. ಅವನೂ ಸಹ, ಇವಳ ಜೊತೆ ಇರುವಾಗ ಚಡಪಡಿಕೆಗೆ 'ಕೊಮ' ಇಟ್ಟವನಂತೆ ಇರುತ್ತಿದ್ದ. ಅವರಿಬ್ಬರೂ ಜನಪರ ಸಂಘಟನೆಯೊಂದರ ಸಾಂಸ್ಕೃತಿಕ ವಿಭಾಗದಲ್ಲಿ ಸಕ್ರಿಯರಾಗಿದ್ದರು. ಹಾಡು, ನಾಟಕ, ಕರಪತ್ರ ಯಾವುದಕ್ಕಾದರೂ ಮುನ್ನುಗುತ್ತಿದ್ದರು.

ಮತ್ತೊಮ್ಮೆ ಯಾವುದೋ ಊರಿಗೆ ನಾಟಕ ಪ್ರದರ್ಶನಕ್ಕೆಂದು ಹೋಗಿದ್ದರು. ಅದೊಂದು ಹೊಸ ನಾಟಕ. ಆಕೆ ಮುಖ್ಯ ಪಾತ್ರವೊಂದರಲ್ಲಿ ಅಭಿನಯಿಸಿದ್ದಳು. ಕೆಲಸವಿದ್ದುದರಿಂದ ಅವನು ನಾಟಕದಲ್ಲಿ ಭಾಗಿಯಾಗಿರಲಿಲ್ಲ. ಆ ಊರಿನಲ್ಲಿ ನಾಟಕ ಪ್ರದರ್ಶನವನ್ನು ಅವನೇ ಏರ್ಪಡಿಸಿದ್ದರಿಂದ ಜೊತೆಯಲ್ಲಿ ಬಂದಿದ್ದ. ನಾಟಕ ಪ್ರದರ್ಶನ ಬಹಳ ಚೆನ್ನಾಗಿ ಆಯಿತು. ಜನ ಸದ್ದಿಲ್ಲದೆ ತದೇಕ ಚಿತ್ತರಾಗಿ ನಾಟಕವನ್ನು ನೋಡಿದರು. ವಿಷಯ ಹೆಣ್ಣುಭ್ರೂಣ ಹತ್ಯೆದು. ನಾಟಕ ಮುಗಿದ ಮೇಲೆ ಯಲ್ಲಮ್ಮನಿಗೆ ಮಾತನಾಡಲು ಹೇಳಿದರು. ಆಕೆ ಭಾಷಣ ಹೊಡೆಯದೇ 'ನಾಟಕದಿಂದ ನಿಜವಾಗಿಯೂ ನಿಮ್ಮ ಮನಸ್ಸಿಗೇನಾದರೂ ಅನಿಸಿದ್ದರೆ, ಸದ್ದಿಲ್ಲದೆ ನಿಮ್ಮೆದೆಯೊಳಗೊಂದು ಶಪಥ ಮಾಡಿಕೊಳ್ಳಿ ಯಾವ ಕಾರಣಕ್ಕೂ ಹೆಣ್ಣು ಮಗುವನ್ನು ಭ್ರೂಣದಲ್ಲಿ ಹೊಸಕಿ ಹಾಕುವುದಿಲ್ಲ' ಎಂದು ಹೇಳಿ ಕೂತಳು. ಜನ ಮೌನವಾಗಿದ್ದರು. ಮರು ದಿನದ ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳಲು ನಾಟಕ ತಂಡದವರು ಅಲ್ಲಿ ಉಳಿದರು. ಯಲ್ಲಮ್ಮ ಬೆಂಗಳೂರಿಗೆ ಒಬ್ಬಳೆ ವಾಪಸ್ಸು ಹೋಗಬೇಕಾಗಿದ್ದರಿಂದ ಬೇಗನೆ ಹೊರಡುವ ತರಾತುರಿಯಲ್ಲಿದ್ದಳು. ಬಸ್ ಸ್ಟಾಂಡಿನಿಂದ ದೂರವಿದ್ದ ಹಳ್ಳಿಯದು. 'ಚಿಂತೆ ಮಾಡಬೇಡ, ಬೈಕಿನಲ್ಲಿ ಸ್ಟಾಂಡಿಗೆ ಬಿಡುತ್ತೇನೆ' ಎಂದು ಯಾರದೋ ಬೈಕು ಕೇಳಿ ತೆಗೆದುಕೊಂಡು ಬಸ್ ಸ್ಟಾಂಡಿಗೆ ಕರೆದುಕೊಂಡು ಬಂದ ಸಿದ್ರಾಮ. ಪುಟ್ಟ ಊರಾದ್ದರಿಂದ ಬಸ್ ಸ್ಟ್ಯಾಂಡ್ ಬಿಕೋ ಎನ್ನುತ್ತಿತ್ತು. ಬೆಂಗಳೂರು ತಲುಪುವ ಹೊತ್ತಿಗೆ ಹತ್ತುಗಂಟೆ ಆಗಿಬಿಡುತ್ತದೆ ಎಂಬ ಆತಂಕದಲ್ಲಿ ಯಲ್ಲಮ್ಮ ನಿಂತಿದ್ದಳು. 'ಬೇಗ ಹೋಗಿಬಿಡುತ್ತೀಯ' ಎಂದ ಸಿದ್ರಾಮ ಮೊದಲ ಬಾರಿಗೆ ಹೊಸದಾಗಿ ನೋಡುತ್ತಿರುವವನಂತೆ ಅವಳ ಮುಖವನ್ನೇ ದಿಟ್ಟಿಸಿ

ನೋಡುತ್ತಿದ್ದ. ನಾಚಿಕೆಯಾಗಲಿ, ಮುಜುಗರವಾಗಲಿ ಎಳ್ಳಷ್ಟೂ ಇರಲಿಲ್ಲ. ಏನೋ ಹೊಸದೆನಿಸಿ ಇವಳಿಗೆ ಕಸಿವಿಸಿಯಾಯಿತು. ನೋಟ ತಪ್ಪಿಸಬೇಕೆಂದರೆ, ಹಿಡಿದಿಡುವವನಂತೆ ನೆಟ್ಟ ನೋಟದಿಂದ ಸ್ಟೇಜಿನ ಮೇಲೆ ನಿನ್ನ ನೋಡೋದೆ ಒಂದು ಐಭೋಗ ಅದೆಂತ ಚೆನ್ನಾಗಿ ಕಾಣಿಸ್ತಾ ಇದ್ದೆ. ಅದೆಷ್ಟು ಲೀನವಾಗಿದ್ದೆ ಎಂದರೆ, ಕಣ್ಣು ಕದಲಿಸದೆ ನಿನ್ನನ್ನೆ ನೋಡುತ್ತಿದ್ದೆ . ನಿರಾಯಾಸವಾಗಿ ಕಳೆದು ಹೋಗಿಬಿಡುವ ನಿನ್ನ ನೋಡಿ ಅಸೂಯೆಯೂ ಆಯಿತು'. ಎಂದಾಗ ಯಲ್ಲಮ್ಮ ಅವನ ಹೊಸಪರಿಯನ್ನು ಬಿಟ್ಟ ಕಣ್ಣುಗಳಿಂದ ನೋಡುತ್ತಿದ್ದಳು. ಬಸ್ ಬಂತು. ಮಾಮೂಲಿನಂತೆ ಕೈ ಕುಲುಕಿ ಥ್ಯಾಂಕ್ಸ್ ಎನ್ನಲಿಲ್ಲ. ಬಸ್ಸಿನಲ್ಲಿ ಕೂತು ಕೈ ಬೀಸಲಿಲ್ಲ. ಬಸ್ ಮರೆಯಾಗುವವರೆಗೂ ಅವನು ನಿಂತೇ ಇದ್ದ.

ಈ ಘಟನೆಯ ನಂತರ ಅವರಿಬ್ಬರಿಗೂ ಮಾಮೂಲಿನಂತಿರಲಾಗಲಿಲ್ಲ . ಕೆಲಸದ ಒತ್ತಡವೂ ಇದ್ದುದರಿಂದ ಎಷ್ಟೋ ದಿನಗಳ ಕಾಲ ಭೇಟಿಯಾಗಿರಲೇ ಇಲ್ಲ. ಮತ್ತೊಂದು ದಿನ ಮಾಮೂಲಾಗಿ ಭೇಟಿಯಾಗುತ್ತಿದ್ದ ರಂಗಮಂದಿರದಲ್ಲಿ ಆಕಸ್ಮಿಕವಾಗಿ ಸಿಕ್ಕರು.

ಇಬ್ಬರಿಗೂ ಖುಷಿಯಾಯ್ತು. ಕ್ಯಾಂಟೀನ್‌ನಲ್ಲಿ ಹೊಟ್ಟೆತುಂಬ ತಿಂಡಿ ತಿಂದು ಕಾಫೀ ಕುಡಿದರು. ಅವನು ದುಡ್ಡು ಕೊಡಲು ಹೋದ. ಅವನನ್ನು ತಡೆದ ಯಲ್ಲಮ್ಮ 'ಫ್ಯೂಡಲ್ ಲಾರ್ಡುಗಳ ಹೊಟ್ಟೆಯನ್ನು ಸಂತೃಪ್ತಿಗೊಳಿಸಿದ ಪುಣ್ಯಭೂಶ್ರ್ವಾ ಪರ್ಸಿಗಿರಲಿ' ಎಂದು ನಾಟಕೀಯವಾಗಿ ಹೇಳಿದಾಗ, ಅವನು ಮನಸಾರೇ ನಕ್ಕ. ಹಾಗೇ ಮಾತನಾಡಿಕೊಂಡುಬಯಲು ರಂಗಮಂದಿರಕ್ಕೆ ಬಂದು ಕೂತರು. ಹೊಟ್ಟೆ ತುಂಬಿಸಿದ್ದಕ್ಕೆ ಪದ್ಯವೆರಡನ್ನು ಓದುವ ಸೇವೆ ನೀಡಿ ಎಂದು ಅವನೂ ನಾಟಕೀಯವಾಗಿ ಹೇಳುತ್ತಾ ಹೊಸದಾಗಿ ಓದಿದ ಲಲಿತ ಸಿದ್ಧಬಸವಯ್ಯನವರ 'ಹಿತುಕವರೆ' ಮತ್ತು 'ಕಾಕಡ ಮಲ್ಲಿಗೆ' ಕವನಗಳನ್ನು ಓದಿದ. ಯಲ್ಲಮ್ಮ ಪೂರ್ತಿ ಅರಳಿದ ಹತ್ತು ಕಾಕಡ ಮಲ್ಲಿಗೆಯಷ್ಟು ಅಗಲದ ನಗೆ ಅರಳಿಸುವುದರ ಜೊತೆಯಲ್ಲಿ ಹಿತುಕವರೆ ಗಮ್ ಅಂತಿದೆ ಎಂದು ಮೂಗಿನ ಹೊಳ್ಳೆಯನ್ನು ಅರಳಿಸಿದಳು.

ಮಳೆ ಬರತೊಡಗಿತು. ಇಬ್ಬರೂ ಎದ್ದು ಬಯಲು ರಂಗಮಂದಿರದ ಹಿಂಬದಿಗೆ ಹೋದರು. ಅವಳು ಖುಷಿಯಲ್ಲಿದ್ದಳು. ಕಾಕಡ ಮಲ್ಲಿಗೆ, ಹಿತುಕವರೆ, ಸಿದ್ರಾಮನೊಂದಿಗೆ ಮಾಮೂಲಿಯಾಗಲು ಸಾಧ್ಯವಾಗಿದ್ದು, ಇದೆಲ್ಲದರ ಜೊತೆ ಈ ಮಳೆ ಗಮಲು ಹುಟ್ಟಿಸಿದ ಪುಳಕ. ಹೊಟ್ಟೆತುಂಬಾ ನಕ್ಕಳು. ಮತ್ತೆ ಅವನು ಅವಳನ್ನೇ ದಿಟ್ಟಿಸಿ ನೋಡುತ್ತಿದ್ದ. ನಗೆಯ ಅಲೆಗಳು ಎರಡೂ ಕೆನ್ನೆಯ ಮೇಲೆ ಮೂಡಿಸಿದ ಗುಳಿಗಳನ್ನು ನೋಡುತ್ತಾ ಬೆರಳುಗಳಿಂದ ಗುಳಿಗಳನ್ನು ಒತ್ತಿ 'ಯಲ್ಲೋ ನೀನು ಬಲು ಸುಂದ್ರಿ ಎಂದ'. ಯಲ್ಲಮ್ಮ ತಟಕ್ಕನೆ 'ಸೂಳೆಮಗ್ನೆ ಎಷ್ಟೊ ಧೈರ್ಯ ನಿಂಗೆ ಮುಟ್ಟೋಕೆ ಎಂದುಬಿಟ್ಟಳು.

ಕ್ಷಣಕಾಲ ಅವನು ಶಿಲೆಯಂತೆ ನಿಂತಿದ್ದ. ನಂತರ ನಿಧಾನವಾಗಿ ಸ್ಪಷ್ಟವಾಗಿ ಹೇಳಿದ 'ನನ್ನದು ಎನಿಸುವುದನ್ನು ಮುಟ್ಟಲು ಧೈರ್ಯ ಯಾಕೆ ಬೇಕು? ನೀನು ನನಗಿಷ್ಟ. ನಿನ್ನ ಜೊತೆಯಲ್ಲಿರುವಾಗ ಚಡಪಡಿಕೆಗಳು ಸಿಡಿಯದೆ ಸುಮ್ಮನಿರುತ್ತವೆ.



ನೆಮ್ಮದಿ ಅನ್ನಿಸುತ್ತೆ. ನೀನು ಸಿಗುವುದಿಲ್ಲವೆಂದರೆ, ಒಳಗೆ ಕುದಿವ ಕುಲುಮೆಯೊಳಗೆ ಕರಗಿ ಇಲ್ಲವಾಗಿ ಬಿಡುತ್ತೇನೇನೋ ಅನ್ನಿಸುತ್ತೆ. ಒಳ್ಳೆಯದೊಂದು ಕೆಲಸ ಹಿಡಿದು, ಮನೆಯ ಹೊರೆ ಕಡಿಮೆ ಮಾಡಿಕೊಂಡು ನಿನ್ನನ್ನು ಮದುವೆ ಮಾಡಿಕೊಳ್ಳಬೇಕೆಂದು ಬಯಸಿದೆ. ಅದನ್ನೇ ನಿನ್ನ ಬಳಿ ಹೇಳಲು ಕಾಯುತ್ತಿದ್ದೆ. ನಿನ್ನ ನಗುವಲ್ಲಿ ಮೂಡುವ ಗುಳಿಗಳು ನನ್ನನ್ನು ಯಾವಾಗಲೂ ಸೆಳೆಯುತ್ತವೆ. ಬದುಕೆಂದರೆ ಹೋರಾಟವಷ್ಟೇ ಅಲ್ಲ ಇನ್ಯಾವುದೋ ಆನಂದವೂ ಅಡಗಿದೆ ಎಂಬುದರ ಸುಳಿವಿನ ಸೂಚನೆಯಂತಿವೆ ಅವು. ತಡೆಯಲಾರದೆ ಮುಟ್ಟಿದೆ.ಕ್ಷಮಿಸು. ಸೂಳೆಮಗ್ನೆ ಅಂದಿದ್ದಕ್ಕೆ ನೀನು ಕ್ಷಮೆ ಕೇಳು. ಅವ್ವ ಅಂದ್ರೆ ನನಗೆ ಜೀವ, ಇನ್ಯಾರಾದ್ರೂ ಅಂದಿದ್ರೆ ಒಂದಲ್ಲೂ ಇಲ್ದಂಗೆ ಉದುಸಿರಿದ್ದೆ . ಕೈ ಕಟ್ಟಿಕೊಂಡು ತಲೆ ತಗ್ಗಿಸಿಕೊಂಡು ಸ್ಕೂಲು ಹುಡುಗನಂತೆ ನಿಂತು ಹೇಳುತ್ತಿದ್ದ. ಹೊಸದಾಗಿ ನೋಡುತ್ತಿರುವವಳಂತೆ ಈಗ ಯಲ್ಲಮ್ಮ ಅವನನ್ನು ದಿಟ್ಟಿಸಿ ನೋಡುತ್ತಿದ್ದಳು. ಕಕ್ಕಾಬಿಕ್ಕಿಯಾಗುವುದರ ಜೊತೆಯಲ್ಲೇ ಅವನ ಬಗ್ಗಿದ ತಲೆ ಎತ್ತಿ ಮುದ್ದಿಸಿ ತಪ್ಪಾಯ್ತು ಎಂದು ಹೇಳಬೇಕೆನಿಸಿತು. ಏಕ ಕಾಲಕ್ಕೆ ಉದ್ಭವಿಸಿದ ಎರಡೂ ಭಾವವನ್ನು ಸಮತೂಗುವಂತೆ ನೆಟ್ಟಗೆ, ಗಟ್ಟಿಯಾಗಿ ನಿಂತಳು. ಸ್ವಲ್ಪ ಹೊತ್ತು ಬಿಟ್ಟು 'ಸೂಳೆ ಮಗ ಅಂದಿದ್ದಕ್ಕೆ ಕ್ಷಮಿಸು' ಎಂದು ಹೇಳಿ ಹೊರಟಳು ಬಸ್ ಸ್ಟಾಪಿನತ್ತ. ಅವನೂ ಜೊತೆಯಲ್ಲೆ ಬಂದ. ಬಸ್ ಬರುವವರೆಗೂ ಜೊತೆಯಲ್ಲಿ ನಿಂತಿದ್ದ. ಬಸ್ ಹತ್ತುವ ಮುನ್ನ 'ಯೋಚನೆ ಮಾಡಿ ಹೇಳ್ತಿನಿ' ಎಂದಷ್ಟೇ ಹೇಳಿ ಹೊರಟು ಹೋದಳು.

ಒಂದು ತಿಂಗಳು ಬಿಟ್ಟು ರೈಲ್ವೇ ಸ್ಟೇಶನ್ನಿಗೆ ಬಾ ಎಂದು ಅವನ ಕಛೇರಿಗೆ ಫೋನ್ ಮಾಡಿ ಕರೆದಳು. ಅವನು ಕೂಡಲೇ ಹೊರಟು ಬಂದ. ಅವಳು ಹೇಳಿದ ಜಾಗಕ್ಕೆ ಬಂದು ಕಣ್ಣಾಡಿಸಿ ಹುಡುಕುತ್ತಿದ್ದ . ಚಡಪಡಿಸುತ್ತಿದ್ದ. ಏ.ಸಿ. ಭೋಗಿಯಲ್ಲಿದ್ದ ಇವಳು ಎದ್ದು ಹೊರಬಂದು, ಬಾಗಿಲಲ್ಲಿ ನಿಂತು ಕೂಗಿದಳು. ಹತ್ತಿ ಬಂದ. ಹತ್ತುವವರಿಗೆ ತೊಂದರೆಯಾಗದಂತೆ ವಾಶ್ ಬೇಸಿನ ಬಳಿ ಎದುರು - ಬದುರು ನಿಂತರು. ಇವಳೇ ಮಾತನಾಡಿದಳು. 'ಗಿಲೀಟು, ಕಿಕ್ಕು, ಆಕರ್ಷಣೆ... ಯಾವುದೂ ಪ್ರೀತಿ ಅಲ್ಲ ಎನ್ನುವುದು ಗೊತ್ತಾಗುತ್ತದೆ. ಆದರೆ ಯಾವುದು ಪ್ರೀತಿ ಎಂಬುದು ಗೊತ್ತಿಲ್ಲ. ತಿಳಿಯಲು ಮೌನ, ದೂರ ಸಹಾಯ ಮಾಡಬಹುದೆನಿಸಿತು. ಅದಕ್ಕೆ ಹೈದ್ರಾಬಾದಿಗೆ ಟ್ರಾನ್ಸ್‌ಫರ್ ತೆಗೆದುಕೊಂಡಿದ್ದೇನೆ. ಮೂರು ವರ್ಷ, ಖಂಡಿತ ಇದು ಪಲಾಯನವಲ್ಲ . ಪರೀಕ್ಷೆ. ಇದರಿಂದ ನಿನ್ನ ಜವಾಬ್ದಾರಿಗಳಿಗೆ ಧಕ್ಕೆ ಮಾಡಿಕೊಳ್ಳಬೇಡ. ಜವಾಬ್ದಾರಿಗಳನ್ನೆಲ್ಲ ಮುಗಿಸಿಕೊ ನಂತರವೂ ಒಟ್ಟಿಗೆ ಬದುಕಲೇಬೇಕೆಂದು ಅನ್ನಿಸಿದರೆ,

ಮದುವೆಯಾಗೋಣ'. ಅವನು ತಲೆ ತಗ್ಗಿಸಿಕೊಂಡು ಕೇಳಿಸಿಕೊಳ್ಳುತ್ತಿದ್ದ . ಯಲ್ಲಮ್ಮ ಅವನ ಬಗ್ಗಿಸಿದ್ದ ತಲೆಯನ್ನು ನೆತ್ತಿಯ ಕೂದಲಿಡಿದು ಎತ್ತಿದಳು. ತಟಕ್ಕನೆ ತನ್ನತ್ತ ಬಗ್ಗಿಸಿಕೊಂಡು ಅಲ್ಲಿದ್ದವರನ್ನು ಲೆಕ್ಕಿಸದೆ ಅವನ ಕಣ್ಣುಗಳನ್ನು ಮುದ್ದಿಸಿ, ರೆಪ್ಪೆ ಕೂದಲನ್ನು ತುಟಿಯಲ್ಲಿ ಸವರಿದಳು. ಗಾಡಿ ಹೊರಡುವ ಸದ್ದಾಯಿತು. ಒತ್ತಾಯ ಮಾಡಿ ಇಳಿಸಿದಳು. ಇಳಿದವನೆ ಹರಿಯುತ್ತಿದ್ದ ಕಣ್ಣೀರನ್ನು ಅವಳ ಹೊಟ್ಟೆಗೆ ಒರೆಸಿ ಹೊರಟು ಹೋದ.



ಮೂರು ವರ್ಷಗಳ ನಂತರ ಮನೆಯವರನ್ನು ಒಪ್ಪಿಸಿ ಅವರಿಬ್ಬರೂ ಮದುವೆಯಾದರು. ಸಿದ್ರಾಮ ತಂಗಿಯರ ಮದುವೆಯ ಜವಾಬ್ದಾರಿ ಮುಗಿಸಿದ್ದ. ಅವನಿಗೆ ರಿಸರ್ ಅಸಿಸ್ಟೆಂಟ್ ಆಗಿ ಕೆಲಸ ಸಿಕ್ಕಿತ್ತು. ಯಲ್ಲಮ್ಮನನ್ನು ಮದುವೆಯಾದ ಮೇಲೆ ಸಂಭ್ರಮದಲ್ಲಿ ತೇಲುತ್ತಿದ್ದ. ವ್ಯಾನ್‌ಗಾಗನ ಹಳದಿ ಸೂರ್ಯಕಾಂತಿ ಹೂವು, ಬಣ್ಣಗಳೆರೆಡನ್ನೂ ಇಷ್ಟಪಡುತ್ತಿದ್ದ ಸಿದ್ರಾಮ, ಪ್ರೀತಿ ಹೆಚ್ಚಾದಾಗಲೆಲ್ಲ ಯಲ್ಲೋ ಎಂದು ಯಲ್ಲಮ್ಮನನ್ನು ಕರೆಯುತ್ತಿದ್ದ. ಯಲ್ಲಮ್ಮನೂ ಯಲ್ಲಮ್ಮನೂ ಖುಷಿಯಾಗಿದ್ದಳು. ಅವಳಿಗಿದ್ದ ಒಂದೇ ಅಳುಕು ಎಂದರೆ ಸಿದ್ರಾಮನ ಮನೆಯವರು ಹೇಗೆ ನಡೆದುಕೊಳ್ಳುತ್ತಾರೆ ಎಂಬುದು. ಬೆಂಗಳೂರಿನಲ್ಲೇ ಹುಟ್ಟಿ, ಬೆಳೆದು, ಸ್ಥಿತಿವಂತರ ಮನೆಯವಳಾಗಿದ್ದರೂ ಅವಳಿಗೆ ಜಾತಿಯ ಅವಮಾನದ ಪರಿಚಯವಿತ್ತು . ಅಪ್ಪ-ಅಮ್ಮನ ಊರಿನಲ್ಲಿ ಊರ ಗೌಡರೂ ಸೇರಿದಂತೆ ಇತರೆ ಮೇಲ್ಜಾತಿಯವರು ಗೌರವದಿಂದ ಮನೆಯವರನ್ನು ಮಾತನಾಡಿಸುತ್ತಿದ್ದುದು ನಿಜವೆ. ಆದರೆ ಈಗಲೂ ಮಾದಿಗರ ಅಟ್ಟಿಗಳಿರುವುದು ಊರಾಚೆಯೆ. ದೇವಸ್ಥಾನದ ಒಳಗೆ ಅಟ್ಟಿಯವರಾರೂ ಹೋಗುತ್ತಿರಲಿಲ್ಲ . ಹೋಟೆಲಿನಲ್ಲೂ ಕೂತುಕೊಳ್ಳಲು ಬೇರೆ ಜಾಗವಿತ್ತು. ಕುಡಿಯಲು ತಿನ್ನಲು ಲೋಟ- ತಟ್ಟೆಗಳು ಬೇರೆ ಇರುತ್ತಿದ್ದವು. ಬೇರೆ ಜಾತಿಯವರ ಮನೆಗೂ, ಹೋಟೆಲಿಗೂ ಅವರು ಹೋಗುತ್ತಲೇ ಇರಲಿಲ್ಲ. ವರ್ಷಕ್ಕೊಮ್ಮೆ ಬರುವ ಜಾತ್ರೆಯ ಸಮಯದಲ್ಲಿ ದೇವಸ್ಥಾನಕ್ಕೆ ಹೋದಾಗ, ಹೊರಗೆ ನಿಂತು ಪೂಜೆ ಮಾಡಿಸಿಕೊಂಡು ಬರಬೇಕಿತ್ತು. ದೇವಸ್ಥಾನದ ಗೋಪುರ ಕಟ್ಟಿಸಲು ಅವಳ ಮನೆಯವರೆಲ್ಲ ದೊಡ್ಡ ಮೊತ್ತವನ್ನೇ ಕೊಟ್ಟಿದ್ದರು. ಹಿಂದಿನಿಂದ ಬಂದಿರುವುದೆಂದು, ಯಾವ ತಕರಾರು ತೆಗೆಯದೆ ಗೌರವದಿಂದ ನಡೆದುಕೊಂಡು ಬಂದಿರುವವರೆಂಬ ಹೆಸರಿದ್ದ ಕಾರಣಕ್ಕೆ ಗುಡಿಯೊಳಗೆ ಹೋಗಿ ಬಂದು ಬಿಡುತ್ತಿದ್ದಳು. ಯಾರಿಗೂ ಹೇಳುತ್ತಿರಲಿಲ್ಲ.. ಪುಟ್ಟ ಹುಡುಗಿ ಯಿಂದಲೂ ಅಪ್ಪ, ಅಮ್ಮ ದೊಡ್ಡಮ್ಮರಿಂದ ಅಟ್ಟಿಯ ಬಂಧುಗಳಿಂದ ಕೆಂಪಮ್ಮನ ಕತೆಯನ್ನು ಕೇಳಿದಂತೆಲ್ಲ ಅವಳು ತನ್ನ ಕಳ್ಳು ಬಳ್ಳಿಯ ಬಂಧುವೆಂದು ಭಾವಿಸಿದ್ದಳು. ಅವಳನ್ಯಾಕೆ ಹತ್ತಿರದಿಂದ ನೋಡಿ ಕಣ್ಣು ತುಂಬಿಕೊಳ್ಳಬಾರದೆನಿಸಿತ್ತು .

ಅವಳು ತನ್ನ ಅಳುಕನ್ನು ಹೇಳಿಕೊಂಡಾಗ, 'ನನ್ನ ಮನೆಯವರು ಜಾತಿ ಆಚರಣೆಯನ್ನು ಸಂಪೂರ್ಣವಾಗಿ ಬಿಟ್ಟಿಲ್ಲ . ಆದರೂ ಸಂಘಟನೆಯ ವಿಷಯಗಳನ್ನು ಪದೇ ಪದೇ ಹೇಳಿರುವುದರಿಂದ ಅವರಲ್ಲೂ ಸ್ವಲ್ಪ ಬದಲಾವಣೆ

ಆಗಿದೆ. ಊರ ಅಟ್ಟಿಯ ಜನ ಪಡಸಾಲೆಯವರೆಗೂ ಬರುತ್ತಾರೆ. ತಿಂದು, ಕುಡಿದು ಹೋಗುತ್ತಾರೆ. ಕಡು ಬಡತನದ ಕಾಲದಲ್ಲಿ ದುಡಿದು ಸಹಾಯ ಮಾಡಿದ ಮಾದಿಗರನ್ನೇ ನಮ್ಮವ್ವ ಬಂಧುಗಳೆಂದು ಭಾವಿಸುತ್ತಾಳೆ ಹೊರೆತು ಹೊಟ್ಟೆ ಉರಿಸಿಕೊಂಡ ಸಂಬಂಧಗಳನ್ನಲ್ಲ. ನೀನು ಸಹಜವಾಗಿರು, ಆರಾಮವಾಗಿರು. ನಮ್ಮ ಮನೆಯಲ್ಲಿ ಸಂಪೂರ್ಣವಾಗಿ ನಾವಂದುಕೊಂಡಂತೆ ಇರೋಣ. ಊರಿಗೆ ಹೋದಾಗ ಹೆಚ್ಚೇನು ನಿರೀಕ್ಷೆ ಇಟ್ಟುಕೊಳ್ಳಬೇಡ ಸಮಯ ಬಂದರೆ, ನಿನಗೂ ಹಕ್ಕಿದೆ ಮುಲಾಜಿಲ್ಲದೆ ಚಲಾಯಿಸು ಎಂದಿದ್ದ ಸಿದ್ರಾಮ. ಆಗಲಿ ಎಂದು ತಲೆಯಾಡಿಸಿದ್ದಳು. ಆಗೀಗ ಅಳುಕಾದರೆ ಕಾಡುತ್ತಿದ್ದಳು. ಊರಿಗೆ ಹೋದರೆ ಜೊತೆಯಲ್ಲೇ ಇರು ಎಂದು ಒತ್ತಾಯಿಸುತ್ತಿದ್ದಳು.



ಹೋಗಲೇ ಬೇಕಾದ ಪರಿಸ್ಥಿತಿ ಬಂದರೆ ಚಡಪಡಿಕೆ ಹೆಚ್ಚಾಗಿ ರೂಮಿನೊಳಗೆ ಹೋಗಿ ಪುಸ್ತಕ ಹಿಡಿದುಕೊಂಡು ಕೂತು ಬಿಡುತ್ತಿದ್ದಳು. ಆಗಾಗ ಸಿದ್ರಾಮನಾಡುವ ಧೈರ್ಯದ ಮಾತುಗಳನ್ನು ಕೇಳಿಸಿಕೊಂಡು ಆರಾಮವಾಗಿರಲು ಹೊಂದಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಸಿದ್ರಾಮನ ಮನೆಯವರಾರೂ ಎಂದೂ ಅವಮಾನವಾಗುವಂತೆ ನಡೆದುಕೊಂಡಿರಲಿಲ್ಲ, ಪ್ರೀತಿಯಿಂದಲೇ ಕಾಣುತ್ತಿದ್ದರು.

ಅಮ್ಮ ಒಂದು ದಿನ, 'ಮರಿ ಮದ್ವೆ ಆದೆ. ಊರ್ ಜನ್ಕೆ ಊಟ ಆಕ್ಸ್‌ಲಿಲ್ಲ ದುರುಗಮ್ಮನ ಕರ್‍ಸಿ ಉತ್ಸವ ಮಾಡ್ಸಿ ಊಟ ಆಕ್ಸ್‌ಬೇಕ್ ಕಣ್ಣಾ, ಮನ್ಸಗೆ ಅಂದ್ಕಂಡಿದ್ದೆ. ಅದೊಂದು ಕಾರ್ಯ ಮಾಡಪ್ಪ' ಅಂತು. “ಆಕ್ಸೆ ಬುಡನ ಬುಡು, ನಿನ್ನಾಸೆ ದೊಡ್ಡ ಉತ್ಸವ ದೊಡ್ಡ' ಎಂದ ಸಿದ್ದರಾಮ ಎಂದು? ಹೇಗೆ? ಎಂದು ಪ್ಲಾನ್ ಹಾಕಿಯೇ ಬಿಟ್ಟ. ಎರಡೇ ವಾರದ ಅವಧಿಯಲ್ಲಿ ದೇವರನ್ನು ಕರೆಸಿ ಉತ್ಸವ ಮಾಡಿದರು. ದೇವರಿಗೆ ಮಾಡಿದ ಹೂವಿನ ಅಲಂಕಾರ ಕಣ್ಣಿಗೆ ಹಬ್ಬವಾಗಿತ್ತು. ತಮಟೆ ಹೊಡೆಯುವ ಮಾದಿಗರ ದಂಡೆ ಇತ್ತು. ತಂಬಿಟ್ಟಿನ ಆರತಿ ಹೊತ್ತಹೆಂಗಸರೊಂದಿಗೆ ದೇವರ ಮೆರವಣಿಗೆ ಇಡೀ ಊರನ್ನೇ ತಿರುಗಿತು. ಬಲವಂತ ಮಾಡಿ ಯಲ್ಲಮ್ಮನನ್ನು ಜೊತೆಯಲ್ಲಿ ಕರೆದೊಯ್ದು ಸಿದ್ರಾಮ. ಊರ ಜನರ ನೋಟಗಳನ್ನೆಲ್ಲ ತಪ್ಪಿಸಿಕೊಳ್ಳಲು ತಮಟೆಯ ಸದ್ದಿನೊಳಗೆ ಅವಳು ಲೀನವಾಗಿಬಿಟ್ಟಿದ್ದಳು. ಊರೆಲ್ಲ ಸುತ್ತಿದ ಮೇಲೆ ಮಾದಿಗರ ಅಟ್ಟಿಯ ಕಂಬಕ್ಕೆ ಮೆರವಣಿಗೆ ಬಂತು ಅಟ್ಟಿಯೊಳಕ್ಕೆ ಹೋಗಲಿಲ್ಲ. ಅಲ್ಲಿಗೆ ಅಟ್ಟಿಯವರೆಲ್ಲ ಬಂದು ಪೂಜೆ ಮಾಡಿಸಿದರು. ಮಾದಿಗರ ಅಟ್ಟಿಯ ಮುಂದೆ ತಮಟೆ ಸದ್ದಿನೊಂದಿಗೆ ಕುಣಿಯಲು ಬಾರದ ಸಿದ್ರಾಮನು ಕುಣಿದಾಗ ಇವಳಿಗೆ ಖುಷಿಯಾಯಿತು. ಎಷ್ಟು ಚೆನ್ನಾಗಿ ಬಾರಿಸುತ್ತಿದ್ದರೆಂದರೆ ಅವಳಿಗೂ ಅವನೊಂದಿಗೆ ಕುಣಿಯಬೇಕೆಂದು ಉತ್ಕಟವಾಗಿ ಅನ್ನಿಸಿತು.

ಮೆರವಣಿಗೆ ಅರಳಿಕಟ್ಟೆಯ ಬಳಿ ಬಂದಾಗ ಮತ್ತೊಮ್ಮೆ ತಮಟೆ ಹೊಡೆಯುತ್ತ ಕುಣಿದರು. ಆ ವೇಗದ ಕುಣಿತವದು. ಏಟುಗಳನ್ನು ಬದಲಾಯಿಸಿದಂತೆಲ್ಲ ಲಯ ಬದಲಾಗುತ್ತಿತ್ತು. ಏಟಿನ ವೇಗ ಹೆಚ್ಚಿದಂತೆಲ್ಲ ಕುಣಿವ ವೇಗವೂ ಹೆಚ್ಚಾಗುತ್ತಿತ್ತು. ತಾಳವು ಲಯ, ವೇಗ ಚೂರೂ ತಪ್ಪುತ್ತಿರಲಿಲ್ಲ .

ಡಿಮ್ಮು ಟಕ್ಕು : ಟಕ್ಕು ಡೀಂ

ಡಿಮ್ಮು ಟಕ್ಕು : ಟಕ್ಕು ಡೀಂ

ಧಿಮ್ಮು ತಕ್ಕು ಧೀಮ್ಮ : ತಕ್ಕು ತಕ್ಕೂಕು ತಕದಿನ

ಧೀನ್ ತಕನ ತಕೂನ: ತಕೂನ್‌ಕ್ ದಿನದಿನ್

ಕೆದರಿದ ಕೂದಲು ಕೆಂಪು ಕಣ್ಣುಗಳು, ಕುಣಿವ ಕರಿಯ ಅರೆ ಬೆತ್ತಲೆ ಮೈ ನೋಡುಗರಲ್ಲಿ ಆವೇಶ ಹುಟ್ಟಿಸಿ ಅವರೂ ಕುಣಿವಂತೆ ಮಾಡುತ್ತಿತ್ತು. ಎಲ್ಲರನ್ನು ಕುಣಿಸಲು ಇರುವುದು ಇದೊಂದೆ ಅವಕಾಶವೆಂಬಂತೆ ಅವರೆಲ್ಲ ಹುಚ್ಚೆದ್ದು ತಮಟೆ ಹೊಡೆಯುತ್ತಿದ್ದರು. ಮಿಕ್ಕ ಸಮಯ ದೈನೇಸಿಗಳಂತೆ ಮುದುಡಿ ನಿಲ್ಲುವವರು ಇವರೇಯಾ? ಎನ್ನಿಸುತ್ತಿತ್ತು. ನಡುವೆ ಯಾರೋ ನೂರರ ನೋಟೊಂದನ್ನು ನೆಲದ



ಮೇಲಿಟ್ಟರು. ಒಬ್ಬ ಕುಣಿಯುತ್ತಲೇ ಬಾಗಿ, ಕಣ್ಣ ರೆಪ್ಪೆಯಲ್ಲಿ ನೋಟನ್ನು ಎತ್ತಿದಾಗ ಎಲ್ಲರೂ ಹೋ ಎಂದು ಕಿರುಚಿದರು. ಇಟ್ಟ ನೋಟುಗಳನ್ನೆಲ್ಲ ಬಿಟ್ಟರೆ ಸಿಗದೆಂಬಂತೆ ಎತ್ತಿಕೊಳ್ಳುತ್ತಿದ್ದರು. ಕಣ್ಣುಗಳು ರಕ್ತ ಸುರಿವಂತೆ ಕೆಂಪಾಗುತ್ತಿದ್ದವು. ಇವಳಿಗೆ ಅಲ್ಲಿ ನಿಲ್ಲಲಾಗಲಿಲ್ಲ. ಮನೆಗೆ ಬಂದು ಬಿಟ್ಟಳು. ಮನೆಗೆ ಉತ್ಸವ ಬರುವ ಹೊತ್ತಿಗೆ ಗಂಟೆ ಹನ್ನೊಂದಾಗಿತ್ತು. ದೇವರನ್ನು ಚಪ್ಪರದಡಿ ನಿಲ್ಲಿಸಿದ ಮೇಲೆ ಮನೆಯವರು, ಸಂಬಂಧಿಕರೆಲ್ಲ ಮನೆಯೊಳಗೆ ಬಂದು ಉಂಡರು. ನಂತರ ಮಲಗಲು ಜಾಗ ಹುಡುಕಿಕೊಂಡು ಹೊರಟರು. ತಮಟೆಯವರಿಗೆ ಮನೆಯ ಹೊರಗೆ ಕಾಂಪೌಂಡಿನೊಳಗೆ ಕೂರಿಸಿ ಎಲೆಯಲ್ಲಿ ಊಟ ನೀಡಿದರು. ಪ್ಲಾಸ್ಟಿಕ್ ಲೋಟದಲ್ಲಿ ನೀರು ಕುಡಿದರು. ಗಬಗಬನೆ ಉಂಡು ಮುಗಿಸಿದ ಅವರೆಲ್ಲರೂ ಮಣ್ಣು ನೆಲದ ಮೇಲೆಯೇ ತಮಟೆಯನ್ನೇ ತಲೆಯಡಿ ಇಟ್ಟು, ದೊಡ್ಡದೊಂದು ಪ್ಲಾಸ್ಟಿಕ್ ಶೀಟನ್ನೇ ಎಲ್ಲರೂ ಹೊದ್ದು ಮಲಗಿ ಬಿಟ್ಟರು. ಯಲ್ಲಮ್ಮನಿಗೆ ವಿಚಿತ್ರ ಸಂಕಟವಾಯಿತು. ಊಟ ಮಾಡಲು ಸಿದ್ರಾಮನಿಗಾಗಿ ಕಾಯುತ್ತಿದ್ದವಳಿಗೆ ಅವನ ಜೊತೆ ಕೂತಾಗ ಅನ್ನ ಇಳಿಯಲಿಲ್ಲ . ಸುಮ್ಮನೆ ಎದ್ದಳು. ಸುಸ್ತಾಗಿದ್ದ ಸಿದ್ರಾಮ ಊಟ ಮುಗಿಸಿ ಬಂದವನೆ ಹಾಸಿಗೆಯ ಮೇಲೆ ಮಲಗಿ ಊಟ ಯಾಕೆ ಮಾಡಲಿಲ್ಲ . ಬಾ ಮಲಗು ಎನ್ನುತ್ತಿದ್ದಂತೆ ಗೊರಕೆ ಹೊಡೆಯತೊಡಗಿದ. ಇವಳಿಗೆ ಹಾಸಿಗೆಯೇ ಚುಚ್ಚತೊಡಗಿತು. ಎದ್ದು ಬಂದು ಕಿಟಕಿಯಲ್ಲಿ ನೋಡಿದಳು. ತಮಟೆಯವರ ದಣಿದ ಹೋದ

ದೇಹಗಳು ಮಣ್ಣು ನೆಲದ ಮೇಲೆ ಹಾಯಾಗಿ ನಿದ್ರಿಸುತ್ತಿದ್ದವು. ಭೇದವೆಣಿಸದ ಭೂಮಾಯಿಗೆ ಶರಣೆಂದಳು. ಮನೆಯ ಒಳಗೂ ಹೊರಗೂ ಇದ್ದ ಅಂತರ ಕೆಲವು ಅಡಿ ಅಷ್ಟೆ. ಆದರೆ ಮನುಷ್ಯ ಮನುಷ್ಯರ ನಡುವಿನ ಅಂತರ ಲೆಕ್ಕಕ್ಕೂ ಮೀರಿದ್ದು ಅನಿಸಿತು. ನಾನು ಓದಿಲ್ಲವೆಂದರೆ, ಕೆಲಸವಿಲ್ಲದಿದ್ದರೆ ಇವನ ಹೆಂಡತಿ ಆಗಿರುತ್ತಿದ್ದೆನೆ?

ಹೇಗಿರುತ್ತಿದ್ದೆ ? ಎಲ್ಲಿರುತ್ತಿದ್ದೆ. ಜಾತಿಯ ಅವಮಾನದಿಂದ ಪಟ್ಟ ಪಾಡಿನ ನೆರಳೂ ಸೋಕದಂತೆ ಬೆಳೆಸಿದ ಅಪ್ಪ ನೆನಪಾದ. ನನ್ನಪ್ಪ ತಂಪಾಗಿರಲೆಂದು ಬೇಡಿಕೊಂಡಳು. ಒಳ ಬಂದು ಬರಿಯ ನೆಲದ ಮೇಲೆ ಮಲಗಿದಳು. ಅಳು ಬರುವಂತಾಯಿತು. ಅಪ್ಪ ಎದೆಯ ಮೇಲೆ ಮಲಗಿಸಿಕೊಳ್ಳುವಂತೆ ಗಂಡನೂ ತನ್ನನ್ನು ಮಲಗಿಸಿಕೊಳ್ಳಬೇಕೆನಿಸಿತು. ಅವನು ಸೊಂಪಾಗಿ ನಿದ್ರಿಸುತ್ತಿದ್ದ. ನನಗೆ ನೋವಾಗುತ್ತಿರುವುದು ಇವನಿಗೆ ಗೊತ್ತೆ ಆಗುತ್ತಿಲ್ಲವಲ್ಲ ಎನಿಸಿ ವಿಚಿತ್ರ ಕಸಿವಿಸಿಯಾಯ್ತು. ಮಜ್ಜುಗೆ ಬೀಳುತ್ತಿದ್ದ ಬಾಸುಂಡೆಗಳು ಎಷ್ಟೋ ದೂರದಲ್ಲಿದ್ದ ಲೈಲಾ ಮೈ ಮೇಲೂ ಬೀಳುತ್ತಿದ್ದ ದೃಶ್ಯವನ್ನು ತೆರೆಯ ಮೇಲೆ ನೋಡಿ ಭಾವುಕಳಾಗಿ ಪ್ರೀತಿಸಿದರೆ ಹಾಗೆ ಪ್ರೀತಿಸಬೇಕೆಂದುಕೊಂಡಿದ್ದು ನೆನಪಾಗಿ ನಗು ಬಂತು ಅವಳಿಗೆ.

ಮಾರನೆಯ ದಿನ ದೇವರನ್ನು ಬಿಟ್ಟು ಬರುವ ಕಾರ್ಯವಿತ್ತು. ಆರತಿ, ಪೂಜೆಯನ್ನೆಲ್ಲ ಮುಗಿಸಿ ದೇವರನ್ನು ಹೊರಡಿಸಿದರು. ದೇವರನ್ನು ಹೊತ್ತವರು ಕೊಂಚ ದೂರ ಹೋಗಿ ಹೋದಷ್ಟೇ ವೇಗವಾಗಿ ವಾಪಸ್ಸು ಬಂದುಬಿಟ್ಟರು. ಮುಟ್ಟು- ಚಿಟ್ಟು ಆದರೆ, ಹರಿಸಿಕೊಂಡಿರುವವರು ಪೂಜೆ ಸಲ್ಲಿಸದಿದ್ದರೆ, ದೇವರುಗಳು ಮುನಿಸಿಕೊಂಡು ಮುಂದೆ ಹೋಗುವುದಿಲ್ಲವಂತೆ. ದೇವರ ಪೂಜಾರಿ ನೇಮದಲ್ಲಿದ್ದು,



ಇಡೀ ದಿನ ಊಟ ಮಾಡದೆ, ಹಾಲು ಬಾಳೆಹಣ್ಣು, ಎಳೆನೀರಿನಲ್ಲೇ ಇದ್ದು ಪೂಜೆ ಮಾಡುತ್ತಾನೆ. ಆತ 'ಯಾರಾದ್ರು ಏನಾದ್ರು ಬಾಕಿ ಇದ್ರೆ ಮುಗ್ಸಿ' ಎಂದ. ಮತ್ತೊಮ್ಮೆ ಆರತಿ ಎತ್ತಿ ಹೊರಟರು. ಈ ಸಾರಿ ಸುಮಾರು ದೂರ ಹೋಗಿದ್ದವರು ಮತ್ತೆ ದಡ ದಡನೆ ಹಿಂದೆ ಬರುತ್ತಿರುವುದನ್ನು ಹೊರಗೆ ನಿಂತಿದ್ದ ಯಲ್ಲಮ್ಮ ಆತಂಕದಿಂದ ನೋಡಿದಳು. ಅವಳಿಗೆ ಮನಸ್ಸಿನಲ್ಲಿ ಎಂಥದೋ ಕಳವಳ, ನಾಲಗೆಯ ಪಸೆ ಆರಿ ಎದೆ ಧಡಧಡನೆ ಹೊಡೆದುಕೊಳ್ಳುವ ಸದ್ದು ಕಿವಿಯಲ್ಲಿ ಕೇಳುತ್ತಿತ್ತು . ಪೂಜಾರಿ ಏನಾದರೂ ಮಾದಿಗರ ಹುಡುಗಿಯನ್ನು ಮದುವೆಯಾಗಿ ಮೈಲಿಗೆಯಾಯ್ತು ಎಂದು ನೆರೆದವರೆದುರಲ್ಲಿ ಕೇಳಿಬಿಟ್ಟರೆ? ಮರುಕ್ಷಣವೇ ಸಾವರಿಸಿಕೊಂಡಳು. ನೆಟ್ಟಗೆ ನಿಂತು ಪೂಜಾರಿಯನ್ನು ದಿಟ್ಟಿಸುತ್ತಾ ನಿಂತಳು. ಅಷ್ಟರಲ್ಲಿ ಸಿದ್ರಾಮ ಚಚ್ರೋ ತಮ್ಟೆನಾ ಎಲ್ಲ ದೇವರು ಒಯ್ತುವೆ' ಎಂದ ಕೂಡಲೇ ತಮಟೆ ಹೊಡೆಯಲು ಪ್ರಾರಂಭಿಸಿದರು. ಸಿದ್ರಾಮನು ಅವರೊಂದಿಗೆ ಕುಣಿದ. ದೇವರುಗಳು ಕಾಟ ಕೊಡದೆ ಗುಡಿ ಸೇರಿದವು.

ಉತ್ಸವ ಮುಗಿಸಿ ಕಾರು ಮಾಡಿಕೊಂಡು ಯಲ್ಲಮ್ಮನ ಊರಿಗೆ ಹೋದರು. ಯಾವ ಶುಭಕಾರ್ಯವಾಗಲಿ ಕೆಂಪಮ್ಮನಿಗೆ ಅಣ್ಣಾಯಿ ಮಾಡಿಸಬೇಕೆನ್ನುವುದು ಅವಳ ಅಮ್ಮನ ತಾಕೀತು. ಹಾಗಾಗಿ ಅಲ್ಲಿಗೆ ಹೊರಟಿದ್ದರು. ಗುಡಿಗೆ ಹೋದಾಗ ಊರ ದೊಡ್ಡ ಗೌಡರುಗಳಿಬ್ಬರೂ ಸಿಕ್ಕಿದರು. ಪರಿಚಯ, ಮಾತುಕತೆ ಮುಗಿಯಿತು. ಊರ ಗೌಡರು ಎದುರಿಗೆ ಇರುವಾಗ, ಪೂಜೆ ಮಾಡಿಸಲು ಒಳಗೆ ಹೋಗಲಾ? ಇಲ್ಲ ಅಟ್ಟಿಯ ಜನರಂತೆ ಹೊರಗೆ ನಿಂತು ಪೂಜೆ ಮಾಡಿಕೊಡಿ ಎಂದು ಪೂಜಾರಿಗೆ ಬುಟ್ಟಿ ಕೊಡಲಾ? ಎಂಬ ಯೋಜನೆ ಶುರುವಾಯಿತು ಯಲ್ಲಮ್ಮನಿಗೆ. ಇದ್ಯಾವುದೂ ತಿಳಿಯದ ಸಿದ್ರಾಮ ಫೋಟೋ ತೆಗೆಯಲೆಂದು ಸೀದಾ ಒಳಗೆ ಹೋಗಿಬಿಟ್ಟ. ಅವನ ಹಿಂದೆ ಸುಮ್ಮನೆ ತಾನು ಒಳಗೆ ಹೋಗಿಬಿಡಬೇಕೆನಿಸಿದರೂ ಗೌಡರತ್ತ ನೋಡಿದಳು. ಅವರು ಹಿಂದ್‌ನಿಂದ್ ನಡ್ಕೊಂಡ್ ಬಂದಿರೊ ಆಚಾರ, ಒಂದಳ್ಳಿ ಎಂದಮೇಲೆ ಇವೆಲ್ಲಾ ಇರವಲ್ಲ ಎಂದರು. ಅವರ ಸೂಚನೆ ಅರ್ಥವಾದ ಅವಳು ಹೊರಗಡೆಯ ತಾನೇ ಕಾಯಿ ಒಡೆದು, ಊದುಕಡ್ಡಿ ಹಚ್ಚಿ ಬೆಳಗಿ, ಕೈ ಮುಗಿದು ಸರಸರನೆ ಹೊರಟುಬಂದು ಕಲ್ಲು ಬೆಂಚಿನ ಮೇಲೆ ಕೂತಳು. ಸಿದ್ರಾಮ ಫೋಟೋ ತೆಗೆದುಕೊಂಡು ಹೊರ ಬಂದವನು ಪೂಜೆ ಮಾಡಕಿಲ್ವ ? ಎಂದ. ಏನು ಉತ್ತರ ಹೇಳುವುದೆಂದು ತೋಚದ ಇವಳಿಗೆ ಒಳಗೊಳಗೆ ಸಿಟ್ಟು ಉಕ್ಕುತ್ತಿತ್ತು. ಗೌಡರೆದುರಿಗೆ ತೋರಿಸಿಕೊಳ್ಳಲಾಗದೆ, ನಾನು ಸಂತೇಲಿ ಸ್ವಲ್ಪ ತಾರಿ, ಸೊಪ್ಪು, ತಗೊಂಡು ಬರಬೇಕು ಎಂದು ಹೊರಟಳು. ಹಿಂದೆ ಅವನೂ ಬರುವನೆಂದು ನಿರೀಕ್ಷಿಸಿದ್ದಳು. ಇವಳ ಸಿಟ್ಟಿನ ಗಂಧವೇ ತಿಳಿಯದ ಅವನು 'ಹೋಗ್ತಾ ಇವರ ಹತ್ರ ಮಾತಾಡ್ತ ಇಲ್ಲೇ ಇದ್ದೀನಿ' ಅಂದ. ಅಳು ನುಂಗಿಕೊಂಡು ಯಲ್ಲಮ್ಮ ಸಂತೆಯತ್ತ ನಡೆದಳು. ಆ ಗೌಡರ ಹತ್ರಾನೇ ಬಿದ್ದಿರಿ ಎಂದುಕೊಂಡು ಬೇಕೆಂದೇ ನಿಧಾನವಾಗಿ ಓಡಾಡಿಕೊಂಡು ವ್ಯಾಪಾರ ಮಾಡಿದಳು. ಎಷ್ಟೊತ್ತಾದರೂ ಇವಳು ಬರಲಿಲ್ಲವಲ್ಲ ಎಂದುಕೊಳ್ಳುವಾಗ 'ಬರೀ ಒಂದ್ ಟೀ ಕುಡಿಯೋಣ' ಅಂತ ಊರಿನ ಗೌಡರು ಅವನನ್ನು ಕರೆದುಕೊಂಡು ಹೋದರು. ಸಿದ್ರಾಮನಿಗೇನೂ ಆಸಕ್ತಿ ಇರಲಿಲ್ಲ. ಆದರೂ ಯಲ್ಲಮ್ಮನ ಊರಿನವರು ತಪ್ಪು

ತಿಳಿಯಬಾರದೆನಿಸಿ ಅವರ ಜೊತೆ ಗುಡಿಯ ಎದುರೇ ಇರುವ ಹೋಟೆಲಿಗೆ ಹೋದ. ಇವಳು ಗುಡಿಯ ಬಳಿ ಬರುವುದಕ್ಕೂ ಅವರು ಹೊಟೇಲಿನಿಂದ ಹೊರಬರುವುದಕ್ಕೂ ಸಮನಾಯ್ತು. ಯಲ್ಲಮ್ಮನಿಗೆ ಉರಿಯೋ ಗಾಯದ ಮೇಲೆ ಉಪ್ಪು ಹಾಕಿದಂತಾಯಿತು.

ನಿನ್ನನ್ನು ಹೊರಗಿಟ್ಟಿರುವ ಜಾಗದಿಂದ ನಾನೂ ಹೊರಗುಳಿಯುತ್ತೇನೆ ಎಂದು ಆ ಗೌಡರುಗಳ ಎದುರಿಗೆ ದೇವಸ್ಥಾನದ ಹೊರಗೆ ನನ್ನೊಂದಿಗೆ ನಿಂತಿರಬೇಕಾಗಿತ್ತು . ಇಲ್ಲ ಅವನ ಸ್ಟೈಲ್‌ನಲ್ಲಿ ಇದೇ ನಿಮ್ಮ ಕಂದಾಚಾರ, ಅಸ್ಪೃಶ್ಯತೆ ನಿಷೇಧಿಸಿರೋದು ಗೊತ್ತಿಲ್ವಾ ನಿಮ್ಗ, ದಲಿತರನ್ನು ದೇವಸ್ಥಾನದ ಒಳಗೆ ಬಿಡುವ ಕ್ರಾಂತಿಕಾರಿ ಕಾರ್ಯಕ್ರಮವನ್ನು ನೀವೇ ನಿಂತು ಮಾಡಬೇಕು. ಎಂದು ಭಾಷಣವನ್ನಾದರೂ ಕುಟ್ಟಬೇಕಿತ್ತು ಎಂದು ನಿರೀಕ್ಷಿಸಿದ್ದಳು. ಸಿಟ್ಟು, ದುಃಖ ಒಳಗೊಳಗೆ ಸುತ್ತಿಕೊಂಡು ಉಮ್ಮಳಿಸುತ್ತಿತ್ತು. ಇದ್ಯಾವುದೂ ತಿಳಿಯದ ಸಿದ್ರಾಮ 'ಏನ್ ಯೆಲ್ಲೊ, ಫುಲ್ ರೆಡ್ಡಾಗಿದೀಯಾ?' ಎಂದು ನಗಿಸಲು ಪ್ರಯತ್ನಿಸಿದ. ಯಲ್ಲಮ್ಮ ಮಾತನಾಡಲೇ ಇಲ್ಲ. ಡ್ರೈವರ್ ಎದುರಿಗೆ ಮುಜುಗರವಾಗಬಾರದೆಂದು ವಿಷಯ ಬದಲಿಸಲು ಯಾವುದಾದರೂ ಒಳ್ಳೆ ಜನಪದ ಹಾಡು ಹಾಕಪ್ಪ, ಕೇಳಾಣ ಎಂದ. ಭಿನ್ನ ಭೇದವ ಮಾಡಬ್ಯಾಡಿ... ಹಾಡು ಕೇಳುತ್ತ ಆಹಾ, ಎನ್ ತತ್ವ ಕಟ್ಟಿದ್ದಾರಪ್ಪ ನಮ್ಮ ಜನಪದರು ಎನ್ನುತ್ತಾ ನಿದ್ದೆ ಹೋದ.

ಮನೆಗೆ ಬಂದ ಮೇಲೆ ಯಲ್ಲಮ್ಮನ ಮೌನ ಮುಂದುವರೆಯಿತು. ಕೈ-ಕಾಲು ಮುಖ ತೊಳೆದು ಅನ್ನಕ್ಕಿಟ್ಟಳು. ಗೊಜ್ಜು ಮಾಡಿದರೆ ಸಾಕೆಂದು ಟೊಮೆಟೋ, ಈರುಳ್ಳಿ ಹೆಚ್ಚಿ, ಒಗ್ಗರಣೆ ಹಾಕಿ ಕುದಿಸಿದಳು. ಮೌನದ ತಲೆ-ಬುಡ ತಿಳಿಯದ ಸಿದ್ರಾಮ, ಮಾತಿಗೆಳೆಯಲು ನೋಡುತ್ತಿದ್ದ 'ಏನ್ ತಪ್ಪಿ ಒಡುದ್ರು ಅಲ್ವ, ಸಕತ್ತಾಗಿ ಕುಣಿಸಿದ್ರಲ್ವಾ', ಎನ್ನುತ್ತ ಅಡ್ಡಿ ಡಬ್ಬದ ಮುಚ್ಚಳ ತೆಗೆದು ಬಾರಿಸತೊಡಗಿದ. ಸೀರೆ ಬಿಚ್ಚಿ ಮಡಿಸುತ್ತಿದ್ದ ಯಲ್ಲಮ್ಮ ಲಂಗ, ರವಿಕೆಯಲ್ಲಿ ಮುಚ್ಚಳದ ಸದ್ದಿಗೆ ಕುಣಿಯತೊಡಗಿದಳು. ನಿಧಾನವಾಗಿ ವೇಗ ಹೆಚ್ಚಿಸಿದಳು. ಬಾಗಿದಳು. ತಿರುಗಿದಳು, ಕೂತು, ಬಾಗಿ, ಚಕ್ಕನೆ ಎದ್ದು ಕುಣಿಯುತ್ತಿದ್ದಳು. ಗಂಡನ ತಮಟೆಯ ಸದ್ದಿಗಲ್ಲ, ತಲೆಯೊಳಗೆ, ಎದೆಯೊಳಗೆ ಧಿಮಿಗುಡುತ್ತಿದ್ದ ಮಾದಿಗರ ತಮಟೆಯ ಸದ್ದಿನ ಲಯಕ್ಕೆ ಪಕ್ಕಾಗಿ ಕುಣಿದಳು. ಲೀಲಾಜಾಲವಾಗಿ ಕುಣಿಯುತ್ತಿದ್ದಳು. ಸಿದ್ರಾಮನ ತಮಟೆಯ ಲಯ ಮೀರಿ ಕುಣಿಯುತ್ತಿದ್ದಳು. ಅವನ ಕಣೋಳಗೆಂತದೊ ಒಂದು ಉರಿವ ಉಲ್ಕೆ ಸರಿದು ಹೋಯಿತು. ತಕ್ಷಣ ಅವನು ಸಾವಿರ ರೂಪಾಯಿಯ ನೋಟೊಂದನ್ನು ನೆಲದ ಮೇಲಿಟ್ಟ . ಇವಳ ಹೊಟ್ಟೆಯೊಳಗಿಂದ ಬುಗ್ಗೆ ಎದ್ದಿತು. ಬುಗ್ಗೆಯ ಕುದಿ ಕಣೋಳಗಿಂದ ಚಿಮ್ಮತೊಡಗಿತು. ಬಗ್ಗಲಿಲ್ಲ . ನೆತ್ತಿ ಕೆಳಗೆ ಸೋಕಿಸಿ ರೆಪ್ಪೆಯಲ್ಲಿ ನೋಟನ್ನು ಎತ್ತಲಿಲ್ಲ . ಅದರ ಮೇಲೆ ಕಾಲಿಟ್ಟು ತುಳಿದಳು. ಹೊಸಕಿ ಎಗರಿಸಿದಳು. ಎಂತದೋ ಭಾವ ಸರ್ರನೆ ತಿರುತಿರುಗಿ ಹೆಡೆ ಎತ್ತುತ್ತಿತ್ತು. ಅದೆಂತ ಭಾವವೋ ಗುರುತಿಸಿ ಹೆಸರಿಕ್ಕುವ ಮುನ್ನ ಸೆಣಸಿ ನೆಲಕ್ಕೆ ಅಪ್ಪಳಿಸಿ ಮಣಿಸಲು ಕುಣಿದಳು.

ಎದೆಯ ತಮಟೆಯೊಳಗೆ ದಿಮಿಗುಡುತ್ತಿದ್ದ-

ದುಡ್ಡ ಧೀಮ್ಮು ತಕ್ಕು ದಮ್ಮು

ಶಾಲೆ ಭೀಮ್ಮು ತಕ್ಕು ಧಿಮ್ಮು

ಕಾಲೇಜು ಧೀಮ್ಮು ತಕ್ಕು ಧಿಮ್ಮು

ಇಂಗ್ಲಿಷು ಧೀಮ್ಮು ತಕ್ಕು ಧಿಮ್ಮು ಕೆಲ್ಲ ಧೀಮ್ಮು ತಕ್ಕು ಧಮ್ಮು

ದೀನ್ ತಕೂನ್ನ ತಕೂನ್ನ ತಕೂನ್ಸ್ ತಕ್ ದಿನ್ ದಿನ್ ... ಸದ್ದಿಗೆ ಕುಣಿದಳು.

ದಣಿದು ಕುಣಿತ ನಿಲ್ಲಿಸಿದಾಗ ಹಗುರಾಗಿದ್ದಳು. ಉಸ್ಸೆಂದು ಮಂಚದ ಮೇಲೆ ಕೂತಳು. ಅವನು ಹೊಸಕಿದ ನೋಟನ್ನು ಅವಳ ಪಾದದ ಮೇಲಿರಿಸಿ ಅವಳೆದುರು ಕೈ, ಕಟ್ಟಿ, ತಲೆ ಬಗ್ಗಿಸಿ ನಿಂತ ಸ್ಕೂಲು ಹುಡುಗನಂತೆ, ಅಯ್ಯೋ ಎನಿಸಿತು. ಅವನನ್ನು ಬಳಸಿ ಹಿಡಿದು ಬೆವರು ಕಣ್ಣೀರಿನಿಂದ ತೊಯ್ದ ಮುಖವನ್ನು ಅವನ ಹೊಟ್ಟೆಗೆ ಉಜ್ಜಿದಳು. ಅವಳ ಮುಖವನ್ನು ಬೊಗಸೆಯಲ್ಲಿ ಎತ್ತಿ 'ಯಾಕೆ ಕೋಪ? 'ನಾನೇನಾದರೂ ತಪ್ ಮಾಡಿನಾ?' ಎಂದು ಮುಗ್ಧ ಬಾಲಕನಂತೆ ಕೇಳಿದ. ಅವಳಿಗಾದ ನೋವಿನ ಗುರುತೇ ಅವನಿಗಿರಲಿಲ್ಲ. ಗುರುತೇ ಇಲ್ಲದೆ ವಿಳಾಸ ಹೇಗೆ ಸಿಕ್ಕೀತು? ಅವಳು ಅವನ ಬನೀನೊಳಗೆ ತಲೆ ತೂರಿಸಿ ಮೂತಿ ಉಜ್ಜಿದಳು. ಹೀಗೆ ಅವಳು ಸಾರಿ ಕೇಳುವ ರೀತಿ ಅವನಿಗಿಷ್ಟ. ಸಾಕು ಬಿಡೆ ಕಚ್ಚುಳಿ ಆಗುತ್ತೆ ಎಂದು ಅವಳನ್ನು ಒತ್ತಿ ಹೊಟ್ಟೆಗಾನಿಸಿಕೊಂಡ. ತಮಟೆ ಸದ್ದು ಮೆದುವಾಗಿ ನುಡಿತಿತ್ತು. ಚನ್ನ ಚಂಚನ, ಚನನ ಚಂಚನ...

## ೧೨. ಪ್ರಶ್ನೆ

· ಜಿ. ಪ್ರಶಾಂತನಾಯಕ

ಸುಮ ರಾತ್ರಿಯಿಂದಲೂ ತುಂಬಾನೇ ಚಡಪಡಿಸಿಯೇ ಬೆಳಗು ಮಾಡಿದ್ದಳು.

ಹೌದು ತಾನು ಏನು ನಡೆಯಬಾರದೆಂದುಕೊಂಡಿದ್ದಳೋ ಅದು ಘಟಿಸಿತ್ತು. ಅವಳಿಗೆ ಇದು ಬೇಕಿರಲಿಲ್ಲ. ಅದಕ್ಕಾಗಿಯೇ ನಿರಂತರ ಎಚ್ಚರವಾಗಿದ್ದಳು. ಆದರೆ ರಾಜೇಂದ್ರ ಆ ದಾರಿಯಲ್ಲೇ ಸಾಗಿ ಬಂದುಬಿಟ್ಟಿದ್ದ.

ನಿನ್ನೆ ತಾನೆ ಅದೆಷ್ಟು ತೀರಾ ಸಹಜ ಎಂಬಂತೆ ನುಡಿದಿದ್ದ. ಸುಮ ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ ನೀನು ನನ್ನನ್ನು ಸ್ವೀಕರಿಸುವೆಯಾ ಈ ಮಾತುಗಳ ಅಗತ್ಯವಾದರೂ ತನಗಿತ್ತೆ ?

ತಮ್ಮ ಪರಿಚಯದ ಪ್ರಾರಂಭದ ದಿನದಲ್ಲೇ ಅವನಿಗೆ ಎಲ್ಲವನ್ನೂ ಸ್ಪಷ್ಟಪಡಿಸರಲಿಲ್ಲವೆ? ಆದರೂ ರಾಜೇಂದ್ರ ಹೀಗೆ? ತಲೆ ತುಂಬಾ ನೋಯುತ್ತಿತ್ತು. ಸಿಡಿಯುವ ಅನುಭವ ರಾತ್ರಿಯಿಡೀ ನಿದ್ದೆ ಮಾಡಲಾಗದ ಕಾರಣ ಕಣ್ಣಳೂ ಉರಿಯುತ್ತಿತ್ತು . ಗಡಿಯಾರದಲ್ಲಿ ಗಂಟೆ ಐದು ಹೊಡೆಯಿತು. ಕಷ್ಟಪಟ್ಟು ಕಣ್ಮುಚ್ಚಿದಳು. ಮನಸು ನೆನಪಿನ ನೆನಪಿಗಾಗಿ ಹಿಂದೆ ಸರಿಯಿತು . ಕನಸಿಗಾಗಿ ಅಲ್ಲ ತನ್ನ ಬದುಕಿನ ಹಿನ್ನೋಟಕ್ಕೆ ಮಾತ್ರ .

ಸಾವಿರದಷ್ಟು ಜನರಿದ್ದಿರಬಹುದಾದ ಪುಟ್ಟಗ್ರಾಮ. ಅಲ್ಲಿ ಪುಟ್ಟದಾದ ಒಂದು ಮನೆಯೊಳಗೆ ಪುಟ್ಟದೊಂದು ಸಂಸಾರ. ರಾಮಣ್ಣ, ಲಕ್ಷ್ಮಿಯರ ಪುಟ್ಟ ಮಗಳು ಸುಮ. ಸುಮ ಒಬ್ಬಳೇ ಮಗಳು. ಸಾಹುಕಾರರಲ್ಲ. ಆದರೆ ಎರಡು ಹೊತ್ತಿನ ಹೊಟ್ಟೆ ಬಟ್ಟೆಗೆ ಕಷ್ಟವೇನಿರಲಿಲ್ಲ. ತಲೆಮಾರಿನಿಂದ ಬಂದ ಅಲ್ಪ ಸ್ವಲ್ಪ ಹೊಲವಿತ್ತು. ಹಾಗಾಗಿ ದೊಡ್ಡ ಸಮಸ್ಯೆಗಳೇನೂ ಆ ಕುಟುಂಬಕ್ಕಿರಲಿಲ್ಲ. ಎಲ್ಲರಂತೆ ಸುಮಾಳು ಸ್ಕೂಲಿಗೆ ಹೋಗುತ್ತಿದ್ದಳು. ಹಾಡಿನಲಿಯುತ್ತಿದ್ದ ಒಂದು ಪುಟ್ಟ ಜೀವ, ಪ್ರತಿಭಾವಂತೆ ಕಲಿಯುವಿಕೆಯಲ್ಲಿ ಆಸಕ್ತಿ, ಕುತೂಹಲ, ಹಾಗಾಗಿ ಎಲ್ಲ ಮೇಸ್ಟ್ರುಗಳ ಅಭಿಮಾನದ ಹುಡುಗಿ. ಆ ಪುಟ್ಟ ಹುಡುಗಿಯ ಕಣ್ಣಳಲ್ಲಿ ಅವೆಷ್ಟೋ ಸುಂದರ ಕನಸುಗಳಿತ್ತೋ, ತನ್ನ ಅಪ್ಪ, ಅಮ್ಮ ಎಲ್ಲವನ್ನೂ ಕೊಡಬಲ್ಲರೆಂಬ ಕಲ್ಪನೆಯೂ ಆ ಮನಸ್ಸಲ್ಲಿತ್ತು. ಇತರ ಎಲ್ಲಾ ಮಕ್ಕಳಂತೆ.

ಕಾಲ ಯಾರನ್ನೂ ಕಾಯಲಿಲ್ಲ . ಹಾಗೇ ಅವಳನ್ನೂ ಬಿಡಲಿಲ್ಲ. ತನ್ನೊಡನೆ ಅವಳನ್ನೂ ಬೆರೆಸಿಬಿಟ್ಟಿತು. ಒಂಭತ್ತನೇ ಕ್ಲಾಸಿಗೆ ಕಾಲಿಡುವ ಹೊತ್ತಿಗೆ ಅವಳಿಗೆ ಅರಿವಿರದ ದೊಡ್ಡವಳಾಗಿದ್ದಳು. ಹಾಗೆಂದು ಅವಳಿಗೆ, ಅವಳಮ್ಮನೆ ಹೇಳಿದ್ದು,

ಒಂದೆರೆಡು ಪ್ರಶ್ನೆಗಳಿಗೆ ಅಮ್ಮ ಉತ್ತರಿಸಲಿಲ್ಲ. ಹಾಗಾಗಿ ದಿಢೀರ್ ದೊಡ್ಡತನ ಅವಳಿಗೆ ಅರ್ಥವಾಗಲಿಲ್ಲ . ಆದರೆ ಅಲ್ಲಿಂದ ಪ್ರಾರಂಭವಾಗಿತ್ತು. ಅವಳಿಗೆ ಬಂಧನ, ಪ್ರತೀ ಹೆಜ್ಜೆಗೂ ಪರೀಕ್ಷೆ . ತಪ್ಪು ಒಪ್ಪುಗಳ ಪಾಠ ಅವಳ ಕನಸುಗಳ ಮೇಲೆ ಧಾಳಿ ಕೂಡ.

ಆ ಮನೆಯಲ್ಲೊಂದು ಸಮಸ್ಯೆ ಇಲ್ಲಿ ಪ್ರಾರಂಭವಾಗಿತ್ತು . ಮಗಳು ಬೆಳೆದಳು. ಮದುವೆ ಮಾಡಬೇಕು ಎಂದು, ನಿಂತಲ್ಲಿ ಕುಳಿತಲ್ಲಿ ಇದೇ ಮಾತುಗಳು, ಈ ನಡುವೆ ಅವಳು ಹತ್ತನೇ ತರಗತಿ ಪೂರೈಸಿದ್ದೇ ಒಂದು ಸಾಹಸವಾಗಿತ್ತು. ಅದೆಷ್ಟೋ ಜನರ, ಮಾಸ್ತರ, ಒತ್ತಾಯಗಳಿಲ್ಲವಾಗಿದ್ದರೆ ಅದೂ ಕಷ್ಟವೇ ಆಗುತ್ತಿತ್ತೇನೋ.

ಒಟ್ಟಾರೆಯಾಗಿ ತಾನು ಇನ್ನು ಓದುವುದಾಗದು ಎಂಬ ಅರಿವು ಮಾತ್ರ ಸ್ಪಷ್ಟವಾಗಿತ್ತು. ಸುಮಾಳಿಗೆ ಅದೆಷ್ಟೋ ಮಾತುಗಳು ವಾಸ್ತವಿಕತೆಯ ನಡುವೆ ಸ್ಪಷ್ಟವಾಗಿದ್ದರೂ ಹೇಳಲಾಗದ ಅರಿವಿತ್ತು. ಹೇಳಲಾಗದ ಸಮಸ್ಯೆಯಲ್ಲ . . ಕೇಳಬಹುದಾದ ಜನವಲ್ಲ . ತನ್ನ ತಂದೆ ತಾಯಿ ಎಂಬ ಸ್ಪಷ್ಟವಾದ ತಿಳಿವಳಿಕೆ.

ಹತ್ತನೇ ತರಗತಿಯ ಫಲಿತಾಂಶ ಬಂದಿತ್ತು. ತಾಲೂಕಿಗೆ ಉತ್ತಮ ಸಾಧನೆ ಸುಮಾಳದು. ಬಹುಶಃ ಆ ಕುಗ್ರಾಮಕ್ಕೆ ಮುಂದಕ್ಕೆ ಇತಿಹಾಸ ಕೂಡ. ಅದೊಂದೇ ಆಗಿ ಉಳಿಯಲೂ ಬಹುದು. ಯಾರಾರೋ ಸಂಭ್ರಮಪಟ್ಟರು. ಅವಳ ನಾಳಿನ ವಿದ್ಯಾಭ್ಯಾಸದ ಬಗೆಗೆಲ್ಲಾ ಮಾತಾಡಿದರು. ಎಲ್ಲ ಕಡೇ ಅವಳದೇ ಮಾತು, ಚರ್ಚೆ, ಆದರೆ ಆ ವಿಚಾರ ಹೆಚ್ಚು ಚರ್ಚೆಯಾಗಲೀ ಮಹತ್ವವಾಗಲೀ ಪಡೆಯದೇ ಹೋದದ್ದು ಅವಳ ಅಪ್ಪ ಅಮ್ಮನಲ್ಲಿ ಮಾತ್ರ ಎಷ್ಟಾದರೂ ಹೆಣ್ಣು ಮಗಳು ಅವಳಿಗ್ಯಾಕೆ ಓದು, ಯಾವ ರಾಜ್ಯ ಆಳಲಿಕ್ಕೆ, ನಿಜ ಅವರು ತಾನೇ ಈ ದೇಶದ ಬಹುಪಾಲು ಸಂಸಾರಗಳಿಗಿಂತ ಬೇರೆಯಾಗಿ ಯೋಚಿಸಲು ಅದು ಹೇಗೆ ಸಾಧ್ಯ ? ಸದ್ಯಕ್ಕೆ ಅವರ ಯೋಚನೆಯೆಲ್ಲಾ ಈ ವರ್ಷದ ಮದುವೆಯ ಕಾಲದಲ್ಲಿ ಮಗಳ ಮದುವೆ ಮಾಡಿಬಿಡಬೇಕೆಂಬುದರಲ್ಲೇ.

ಪಕ್ಕದ ಹಳ್ಳಿಯ ಕೃಷ್ಣ ಅನುಕೂಲಸ್ಥ, ಐದಾರು ಎಕರೆಯಷ್ಟು ಬೆಳೆ ಬೆಳೆಯುವ ಹೊಲಗದ್ದೆ, ದೊಡ್ಡದೆನ್ನಬಹುದಾದ ಮನೆಯಲ್ಲಿದ್ದವನು. ಅಲ್ಲಿ ಅವನ, ಅವ್ವಳನ್ನು ಬಿಟ್ಟರೆ ಬೇರಾರೂ ಇಲ್ಲ. ಅಪ್ಪ ಮೂರಾಲ್ಕು ವರ್ಷಗಳ ಹಿಂದೆಯಷ್ಟೇ ಈ ನೆಲದ ಋಣ ತೀರಿಸಿ ಸಾಗಿದ್ದ. ಆಕಸ್ಮಿಕವಾಗಿ ಒಮ್ಮೆ ಸುಮಾಳನ್ನು ಕಂಡಾಗ ಏಕೆ ಕೇಳಬಾರದು ಎನಿಸಿತ್ತು. ಕೇಳಿಸಿಯೂ ಬಿಟ್ಟ. ಉಸಿರೆತ್ತದೆ ಒಪ್ಪಿ ಬಿಟ್ಟರು ಹೆಣ್ಣು ಹೆತ್ತವರು. ತಮ್ಮ ಮಗಳಿಗೆ ಒದಗಿ ಬಂದ ಸೌಭಾಗ್ಯಕ್ಕಾಗಿ ಸಂಭ್ರಮಪಟ್ಟರು. ಆದರೆ ಅವಳನ್ನು ಕೇಳಬೇಕು ಎಂಬ ವಿಚಾರ ಅವರಿಗೆಂದೂ ಬರಲೇ ಇಲ್ಲ. ಸುಮಾಳಿಗೆ ತುಂಬಾನೇ ದುಃಖವಾಗುತ್ತಿತ್ತು. ಏನೇನೋ ಭಾವಗಳು, ಸ್ಪಷ್ಟ ಆಕಾರ ಕೊಡುವುದರಲ್ಲಿ ಸೋಲುತ್ತಿದ್ದಳು. ನಾಳೆಗಳೆನ್ನುವುದೆಲ್ಲಾ ಕತ್ತಲಾಗೇ ಕಾಣುತ್ತಿತ್ತು. ಅವಳಿಗೆ ಮುಂದೇನು?

ಆ ಆಲೋಚನೆ ಅವಳಿಗೆ ಬೇಕಿರಲಿಲ್ಲ. ಮುಂದಾದದ್ದು ಅವಳ ಮದುವೆ ಒಂದು ಸ್ಪಷ್ಟ ಕಲ್ಪನೆಯಾಗಲೀ ಕನಸಾಗಲೀ, ಯಾವ ಭಾವಗಳೂ ಇಲ್ಲದೇ ಕುಮಾರಿ ವಧುವಾಗಿ ಸಂಸಾರಿಯೂ ಆಗಿ ಹೋದಳು.

ಮೊದಲ ರಾತ್ರಿಯೆಂಬ ಆ ರಾತ್ರಿಯಂತೂ ಅವಳ ಪಾಲಿಗೆ ನರಕವಾಗಿತ್ತು. ದಿನವೆಲ್ಲಾ ಹೀಗೆ ಆದರೆ ಎನಿಸಿದಾಗ ಅಬ್ಬಾ ಎನಿಸಿತು. ಬದುಕಿನ ಬಗೆಗೆ, ಸಂಸಾರದ ಬಗೆಗೆ ದಿಗಿಲು ಹುಟ್ಟಿಬಿಟ್ಟಿತ್ತು. ಕೃಷ್ಣನಂತೂ ಅವಳಿಗೂ, ಮನಸಿದೆ ಕನಸಿದೆ ಎಂಬ ಯಾವ ಬಗೆಯ ಆಲೋಚನೆಯನ್ನೂ ಮಾಡಿದವನಲ್ಲ. ಅವನ ಕಲ್ಯಾಣ ಗುಣದೊಳಗೆ ಹೆಣ್ಣಿನ ಸಂಗದ ವಿಚಾರಕ್ಕೇನೂ ಬರವಿರಲಿಲ್ಲ. ಅವನಿಗೆ ಬೇಕಿದ್ದು ಆ ಮನೆಗೆ ದಿಕ್ಕಾಗಬಲ್ಲ ತನ್ನ ಅವ್ವನ ಮನಕಷ್ಟು ಸಂತಸ ತರಬಲ್ಲ ತನಗೂ ಒಂದು ಸಂಸಾರ ಎನಿಸಬಲ್ಲ ಒಂದು ಹೆಣ್ಣು ಅಷ್ಟೆ.

ಇವೆಲ್ಲವುಗಳ ಅರಿವಿದ್ದೂ, ಎಂದೂ ಪ್ರತಿಭಟಿಸದ ಪ್ರಶ್ನಿಸದ ಮೌನಗೌರಿಯಾಗಿಯೇ ಸುಮಾ ಬದುಕುತ್ತಿದ್ದುದು ಅವಳಿಗೆ ಒಗಟಾಗಿತ್ತು . ಅವಳತ್ತೆಗೋ ಈ ಸಂಸಾರ ವಿಚಿತ್ರ ಎನಿಸಿದ್ದರೂ ರಂಪಾಟಗಳ ಹಾವಳಿಯಿಲ್ಲದೆ ನಿರಾತಂಕವಾಗಿ ಸಾಗುತ್ತಿದ್ದ ಮನೆಯ ಕೆಲಸ ಕಾರ್ಯ, ಅಚ್ಚುಕಟ್ಟು ಎಲ್ಲದರಲ್ಲೂ ಸೊಸೆಯನ್ನು ಮನತುಂಬಿ ಹಾರೈಸುತ್ತಿದ್ದಳು. ಪ್ರೀತಿಸುತ್ತಿದ್ದಳು. ಅದೆಷ್ಟೋ ಬಾರಿ ಮಗನಿಗೆ, ಏನೋ ಅದೆಷ್ಟೋ ಹೇಳಬೇಕೆಂದು ಪ್ರಯತ್ನಿಸಿ ಹೇಳಲಾಗದೇ ಸೋತಿದ್ದಳು.

ಎರಡು ವರ್ಷ ಅಂತೂ ಇಂತೂ ಕಳೆದೇ ಹೋಗಿತ್ತು. ಯಾವುದೇ ಬದಲಾವಣೆಗಳಿಲ್ಲದೆ ದಿನನಿತ್ಯ ಸೊಸೆಯಿಂದ ಸಡಗರದ ಸುದ್ದಿಗಾಗಿ ಎದುರು ನೋಡುತ್ತಲೇ ಮುದುಕಿ ಕಾಲ ತಳ್ಳುತ್ತಿತ್ತು. ಆದರೆ ಆ ಮನೆಯ ಬದುಕಿನ ದಿಕ್ಕು ಬೇರೆ ಕಡೆಗಿತ್ತು. ಅಂದು ಪೇಟೆಯಿಂದ ಮರಳುತ್ತಿದ್ದ ಬಸ್ಸು ಅಪಘಾತದಲ್ಲಿ ನಾಲ್ಕಾರು ಜನರ ಪ್ರಾಣವನ್ನು ಕಸಿದುಕೊಂಡಾಗ ಅವರಲ್ಲಿ ಕೃಷ್ಣನೂ ಒಬ್ಬ. ಸುದ್ದಿ ಕೇಳಿ ಮುದುಕಿಯ ಎದೆಯೊಡೆಯಿತು. ಅದರ ದುಃಖದ ಆಳದ ಇತಿ ಮಿತಿ ಅಳೆಯಲಾಗದಷ್ಟಿತ್ತು. ಅದೂ ಸಹಜವೇ. ತನ್ನದೆಂದು ಬಹುಕಾಲ ಆಸರೆಯಾಗಿದ್ದ ತನ್ನದೇ ಕುಡಿ ಒಂದು ವಂಶದ ಬಳ್ಳಿಯನ್ನು ನೀಡಲಾಗದೆ, ಮಣ್ಣಿಗೆ ಮರಳಿದ್ದು ಈ ನೆಲದಲ್ಲಿ ದೊಡ್ಡ ಆಘಾತವೇ ಸರಿ.

ತನ್ನೊಳಗೆ ತನಗೇ ಅಚ್ಚರಿಯಾಯ್ತು. ಸುಮಾಗೆ, ಅವಳಿಗೆ ತೀರಾ ಸಂಕಟವೆಂದೇನೂ ಅನಿಸಲೇ ಇಲ್ಲ. ಎಲ್ಲರಂತೆ ತನಗೇಕೆ ಗೋಳಾಡಲಾಗುತ್ತಿಲ್ಲ . ಬಾಳಿನ ಗೆಣಿಕಾರ ಬದುಕಿನಿಂದ ಮರೆಯಾದ ಈ ಗಳಿಗೆ ತನ್ನ ಬಾಳಿನ ದುರಂತವಲ್ಲವೇ? ತಾನೇಕೆ ಹೀಗಿದ್ದೇನೆ? ತನಗೆ ತಾನೇ ಕೇಳಿಕೊಂಡಳು. ಹಾಗೇ ದಿನ ದೂಡುತ್ತಿದ್ದಳು.

ಮತ್ತೊಮ್ಮೆ ಅವಳ ಬದುಕಿನ ಗತಿ ಬದಲಾಗುವ ದಿನವೊಂದು ಬಂತು. ಗಂಡ ದೂರಾದ ಆರೇಳು ತಿಂಗಳು ಕಳೆದಂತೆ ಮುಪ್ಪು, ಆಲೋಚನೆ ಅನಾರೋಗ್ಯದ ನಡುವೆಯೇ ಅವಳ ಅತ್ತೆಯೂ ಸುಮಾಳಿಂದ ದೂರಾಗಿ ಮಗನನ್ನು ಸೇರಿದಳು. ಮತ್ತೆ ಸುಮ ತವರಿನ ಗೂಡಿಗೆ ಮರಳಿದಳು. ಆದರೆ ಈ ಬಾರಿ ಅವಳ ಮಾತುಗಳಿಗೆಲ್ಲಾ ಅಲ್ಲಿ ಬೆಲೆಯಿತ್ತು. ಇಲ್ಲವಾದಲ್ಲಿ ಸುಮ ತಮ್ಮಿಂದ ದೂರಾಗಬಹುದಾದ ಸಾಧ್ಯತೆ

ಅರಿವಿತ್ತು. ಅವಳ ಅಪ್ಪ, ಅವ್ವನಿಗೆ, ಅಷ್ಟಲ್ಲದೆ ಈಕೆ ಸುಮ ಒಂದಷ್ಟು ಸಂಪತ್ತಿನ ಒಡತಿ ಕೂಡ. ವಯಸ್ಸಾದ ಹಾಗೇ ತಮ್ಮ ಬದುಕಿನ ಗುರಿಗೊಂದು ಅರ್ಥ ಹುಡುಕಬಹುದಾದ ವಾಸ್ತವದ ಅರಿವೂ ಅವರಿಗಿತ್ತು . ಮತ್ತದೇ ಆ ಹಳ್ಳಿಯ ಪರಿಸರದಲ್ಲಿ ತನ್ನ ಹಳೆಯ ಮಾಸ್ತರುಗಳ ಸಹಾಯ- ಸಹಕಾರದಿಂದ ಅವಳು ಮುಂದೆ ಓದಲು ಸಾಧ್ಯವಾಯಿತು. ಓದುವಿಕೆ ಅವಳಿಗೆ ಮೊದಲಿಂದ ಆಸಕ್ತಿ ವಿಚಾರವಷ್ಟೇ ಅಲ್ಲ , ನಿನ್ನೆಗಳ ಮರೆಯುವಲ್ಲಿ ಅದು ಸಹಕಾರಿಯೂ ಆಯ್ತು.

ಓದು ಮುಗಿಸಿದ ಸಮಾಧಾನದೊಂದಿಗೆ ಸರ್ಕಾರಿ ಶಾಲೆಯ ಹುದ್ದೆಯೂ ದೊರಕಿದಾಗ ಸುಮಾಳಿಗೆ ತನ್ನ ಬದುಕಿನ ಸ್ಪಷ್ಟ ಪಥದ ದಿಕ್ಕು ಕಂಡಿತ್ತು. ಅದರೊಂದಿಗೆ ಅವಳ ಬದುಕು, ದೃಷ್ಟಿ ರೀತಿ ನೀತಿ ಎಲ್ಲವೂ ಬದಲಾಗಿತ್ತು. ಅವಳ ಯಾವ ನಡೆ ನುಡಿಗೂ ಎದುರಾಡಬಲ್ಲ ಶಕ್ತಿಯಂತೂ ಅವಳ ತಂದೆ ತಾಯಿಗಳಿಗಿರಲಿಲ್ಲ. ಅಪರಾಧಿ ಪ್ರಜ್ಞೆಯೋ? ಅಸಹಾಯಕತೆಯೋ? ಅವರಿಗಂತೂ ತಿಳಿಯುವ ಹಾಗಿರಲಿಲ್ಲ. ಇಲ್ಲೆಲ್ಲಾ ಸುಮಾ ಮಾತ್ರ ವಯಸ್ಸಿಗೆ ಮೀರಿದ ಗಾಂಭೀರ್ಯವನ್ನು ಸ್ಥಿತಿ ಪ್ರಜ್ಞೆಯನ್ನು ಕಾಯ್ದುಕೊಂಡಿದ್ದಳು. ಪ್ರಾಯಶಃ ಪುಟಕ್ಕಿಡುವ ಭಾವ ಇದೇ ಇದ್ದಿರಬಹುದು. ಸಮಾಜ ತನ್ನನ್ನು ಸ್ವೀಕರಿಸಬಹುದಾದ ಬಗೆ ಅವಳಿಗೆ ಚೆನ್ನಾಗಿಯೇ ಅರಿವಿತ್ತು.

ತನ್ನ ಮೊದಲ ಅಧ್ಯಾಪಕ ವೃತ್ತಿ ಪಟ್ಟದಲ್ಲೇ ಆದಾಗ ಅದು ಅವಳಿಗೆ ಅನುಕೂಲವೇ ಆಯ್ತು. ಎಲ್ಲರಿಂದ ದೂರಾಗುವ ಜೊತೆಗೆ ಹೊಸ ಜೀವನಕ್ಕೆ ಹೊಸಬಳಾಗಿಯೇ ಸಾಗುವ ತೀರ್ಮಾನ ಕೈಗೊಂಡೇ ಅವಳು ಶಾಲೆಗೆ ಬಂದಾಗ ಬೋಳು, ಹಣೆಯ, ಜಡೆಯಲ್ಲಿ ಹೂವಿಲ್ಲದ ಹೆಣ್ಣಾಗಿರಲಿಲ್ಲ. ಸರಳ ಮಾದರಿಯಾಗಿದ್ದಳು. ವಿಧವೆಯೆಂಬುದಂತಿರಲಿ, ಮದುವೆಯಾಗಿತ್ತೇ ? ಎಂಬುದೇ ನಂಬಲಾಗದ ವಿಚಾರವಾಗುವಂತಿತ್ತು.

ಅರ್ಥವಿಲ್ಲದ ಆಚಾರಗಳಿಗೆ ಪುಷ್ಟಿಕೊಡುತ್ತಾ ಸಾಗುವುದು ಸಂಸ್ಕೃತಿಯಾಗಬಲ್ಲದೆಂಬ ಹಳೆಯ ತಿರುಳಿಗೆ ಅವಳ ಮನಸ್ಸು ಒಪ್ಪುವ ಹಾಗಿರಲಿಲ್ಲ . ಬದುಕು ಮುಖ್ಯವಾಗುವಾಗ ಅಲ್ಲಿ ಮನಸ್ಸು ಪ್ರಜ್ಞೆಗಳು ಪ್ರಾಮಾಣಿಕವಾಗಿರಬೇಕಾಗುತ್ತದೆ. ಚಿಂತನೆಗಳು, ಬದುಕನ್ನು ನೋಡುವ ರೀತಿ, ನೀತಿ ಅಲ್ಲಿ ವ್ಯಕ್ತಿತ್ವವನ್ನು ನಿರ್ಧರಿಸುತ್ತಾ ಸಾಗುತ್ತವೆ ಎನ್ನುವುದು ಅವಳ ತರ್ಕ.

ಇಲ್ಲಿಯ ಶಾಲೆಯ ಪರಿಸರವೂ ಅವಳಿಗೆ ಪೂರಕವಾಗಿತ್ತು. ಎಲ್ಲರೂ ಹಿರಿಯರು, ತಮ್ಮ ತಮ್ಮ ಬದುಕಿನ ಜಂಜಾಟಗಳಲ್ಲೇ ಮುಳುಗಿದ್ದವರು. ಪರರ ಬಗೆಗೆ ನೋಡಿ ಕೇಳಬಲ್ಲವರೇ ವಿನಾ ಕೆದಕುವ ಜಾಯಮಾನದವರಲ್ಲ . ಇದ್ದ ನಾಲ್ವರಲ್ಲಿ ಒಬ್ಬ ಮಹಿಳೆ, ಮೂವರು ಗಂಡಸರು, ಬಹುಶಃ ಎಲ್ಲರೂ ನಲ್ವತ್ತಕ್ಕೆ ಹೆಚ್ಚಿನವರು. ಸುಮಾಳ ಬದುಕು ನಿರಾತಂಕವಾಗಿ ಬಯಸಿದಂತೆ ಸಾಗುತ್ತಿತ್ತು.

ರಾಜೇಂದ್ರ ಈ ಶಾಲೆಗೆ ಬರುವ ತನಕ...

ಅಂದು ದಿನಚರಿ ಎಂದಿನಂತೆಯೇ ಪ್ರಾರಂಭವಾಗಿತ್ತು. ರಾಜೇಂದ್ರ ಹೊಸ ಉಪಾಧ್ಯಾಯನಾಗಿ ಬಂದ ಆ ದಿನ ಅವನೊಂದಿಗೆ ಹೊಸತನವೊಂದು ಆ ಶಾಲೆಯ ಪರಿಸರಕ್ಕೆ ಪ್ರವೇಶವಾಯ್ತು. ನಗು, ತುಂಟತನ, ಹೃದಯವಂತಿಕೆ ಎಲ್ಲ .

ಇಲ್ಲಿ ತಾನಾದರೂ ಎಷ್ಟು ದಿನ ಗಾಂಭೀರ್ಯ ಕಾಪಾಡಿಕೊಳ್ಳಲಾಗುತ್ತಿತ್ತು . ಕ್ರಮೇಣ ಸುಮ ನಗುತ್ತಿದ್ದಳು. ನಗಿಸುತ್ತಿದ್ದಳು. ಪರಧರ್ಮ ಎಂಬಂತೆ.

ಸುಮಾರು ಮೂವತ್ತರ ಹರೆಯದ ರಾಜೇಂದ್ರ ನಗೆಯ ಕಣ್ಣಳ ತುಂಟ ಕನಸುಗಾರ. ಬದುಕನ್ನೂ ಹೀಗೂ ನೋಡಬಹುದೆಂಬುದಕ್ಕೆ ಆತನೊಬ್ಬ ಸಾಕ್ಷಿ. ಬಾಲ್ಯದಿಂದಲೇ ಕಷ್ಟದಲ್ಲಿ ಬೆಳೆದು ಓದಿ ತನ್ನವರೆಂದಿದ್ದ ತಾಯಿ ಮೂರು ಜನ ತಂಗಿಯರನ್ನು ಜೊತೆ ಜೊತೆ ಕರೆದು ಬೆಳೆಸಿ ತಂದಿದ್ದ, ಸಹಜ ಕರ್ತವ್ಯ ಎಂಬಂತೆ. ಆ ಮೂರು ಜನ ತಂಗಿಯರಿಗೂ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳುವ ಹೊತ್ತಿಗೆ ಅವನ ಈ ವಯಸ್ಸು ತುಂಬಿ ಬಂದಿತ್ತು. ಇಲ್ಲಿಯವರೆಗೆ ತಾನು ಹೆಂಡತಿ, ಸಂಸಾರ ಎಂದು ಚಿಂತಿಸಲಿಲ್ಲ. ಎಂದಲ್ಲ, ಚಿಂತಿಸಲಾಗಿರಲಿಲ್ಲ. ಇಷ್ಟೆಲ್ಲದರ ನಡುವೆ ಆತ ಉಳಿಸಿಕೊಂಡು ಬಂದಿದ್ದ ಆತನ ಆಸ್ತಿ. ಈ ಉತ್ಸಾಹ ಮಾತು ನಗು, ಅದೇ ಅವನ ಬಗೆಗೆ ಅಚ್ಚರಿ ಗೌರವವನ್ನೂ ಉಂಟು ಮಾಡುತ್ತಿದ್ದರೆ ಅದು ಅಚ್ಚರಿಯಲ್ಲ . ಸಮೀಪದಿಂದ ಬಲ್ಲವರಿಗಷ್ಟೇ . ಉತ್ತರ ಇಲ್ಲವಾದವರಿಗೆ ಅವನೊಬ್ಬ ಅದೃಷ್ಟವಂತ ನಗೆಗಾರ.

ನಗು ಎಲ್ಲರಿಗೂ ಸ್ವಭಾವಸಿದ್ಧ ನಿಜ. ಹಾಗೆಂದು ಎಲ್ಲರಿಗೂ ಅದನ್ನು ಬಳಸಿಕೊಳ್ಳಲು ಬರುತ್ತದೆಂದಲ್ಲ ಅದು ಕೆಲವರಿಗಷ್ಟೇ ಸಾಧ್ಯ. ನಗುವಿಗೂ, ನೂರಾರು ಅರ್ಥಗಳಿವೆ. ನೋವಲ್ಲೂ ನಗುವುದು ಸಾಮಾನ್ಯರಿಗೆ ಸಾಧ್ಯವಾಗಬಹುದಾದ ಸಂಗತಿಯಂತೂ ಅಲ್ಲವೇ ಅಲ್ಲ . ನೋವಿನಲ್ಲಿ ನಗುವುದು ನಗಿಸುವುದು ದೈವತ್ವ.

ಈ ಸರಳ- ಸಹಜ ಹೃದಯಿ ಸುಮಾಳಿಗೆ ಆತ್ಮೀಯನಾದದ್ದು . ಹತ್ತಿರವಾದದ್ದು ಆಶ್ಚರ್ಯವೇನೂ ಅಲ್ಲ. ಒಬ್ಬ ಗೆಳೆಯನಾಗಿ ಎಲ್ಲಕ್ಕಿಂತ ಹೆಚ್ಚಾಗಿ ಒಬ್ಬ ಸಹೃದಯನಾಗಿ ಸುಮಾಳ ಬದುಕಿನ ಒಳನೋಟ ಕಂಡಾಗ ಸಹಜವಾಗಿಯೇ ನೊಂದ. ಆದರೆ ಅವಳು ಇಂದು ಬದುಕನ್ನು ಇಷ್ಟು ಗಂಭೀರವಾಗಿ ಸ್ವೀಕರಿಸಿ ಸಾಗುತ್ತಿದ್ದ ಪರಿಮಾತ್ರ ಅವನಿಗೆ ಸರಿ ಎನಿಸಲಿಲ್ಲ. ಅದೆಷ್ಟೋ ಬಾರಿ ಅದನ್ನು ಪ್ರಸ್ತಾಪಿಸುವ ಪ್ರಯತ್ನ ಮಾಡಿದ್ದ . ಸುಮ ನಗುತ್ತಿದ್ದಳು. ಇಲ್ಲ ಮೌನವಾಗುತ್ತಿದ್ದಳು. ಆ ವಿಚಾರದಲ್ಲಿ ಎರಡು ಮಾತಾಡಲೇ ಇಲ್ಲ . ಇದೊಂದು ಸವಾಲಾಗುತ್ತಿತ್ತು. ಆತನಿಗೆ ಆದರೆ ಕಾಲ ಎಲ್ಲವನ್ನೂ ಬದಲಿಸಬಹುದೇ? ಎಂದು ಕಾಯುತ್ತಿದ್ದ ಅವನಿಗೆ ಭರವಸೆಯಿತ್ತು ಕಾಲದ ಮೇಲೆ. ಈ ಗೊಂದಲಗಳ ನಡುವೆಯೇ ಅವನಿಗೊಂದು ಪ್ರಶ್ನೆ ಕಾಡುತ್ತಿತ್ತು. ತಾನು ಸುಮಾಳನ್ನು ಪ್ರೀತಿಸುತ್ತಿರುವೆನೆ?

ಹೌದು ಎಂದಿತ್ತು ಪ್ರಾಮಾಣಿಕವಾಗಿ ಮನಸು.

ಪ್ರೇಮದ ಪರಿ ಅದೆಷ್ಟು ವಿಚಿತ್ರ ಎಂದೂ ಎಲ್ಲೂ ಕಾಡಲಾಗದ ಇದು ಹೀಗೇಕೆ



ಸುಮಾಳ ಕಂಡಾಗ ಎನಿಸಿದಾಗ ಅದು ಅನುಕಂಪವಿದ್ದಿತೆ ಎಂದು ಪ್ರಶ್ನಿಸಿಕೊಂಡಿದ್ದ. ಇಲ್ಲ ಅದು ಹಾಗಿರಲಿಲ್ಲ . ಆದರೆ ಸುಮಾಳ ನಿರ್ಲಿಪ್ತತೆ ಮಾತ್ರ ಅವನಲ್ಲಿ ಮತ್ತೆ ಮತ್ತೆ ಅಧೀರತೆಯನ್ನುಂಟು ಮಾಡುತ್ತಿತ್ತು. ಅವಳ ಆಲೋಚನೆಗಳು ರೀತಿ ನೀತಿಗಳು ಬದಲಾಗುವ ಸೂಚನೆಯನ್ನೇ ಕಾಣದೆ ಕೊನೆಗೂ ಧೈರ್ಯ ವಹಿಸಿದ್ದ.

ನಿನ್ನೆ ದಿನ ತೀರ್ಮಾನಿಸಿ ನೇರವಾಗಿಯೇ ಕೇಳಿದ್ದ.

"ಸುಮಾ ನಾವ್ಯಾಕೆ ಮದುವೆಯಾಗಬಾರದು. ನೀನು ನನ್ನನ್ನು ಸ್ವೀಕರಿಸುವೆಯಾ ಸುಮಾ ನಾನು ನಿನ್ನನ್ನು ತುಂಬ ಪ್ರೀತಿಸುತ್ತೇನೆ."

ಸುಮ ಮೊದಲ ಬಾರಿಗೆಂಬಂತೆ ಬೆಚ್ಚಿದ್ದಳು. ಇಂತಹ ಒಂದು ಗೊಂದಲ ಸಂದಿಗ್ಧತೆ ಅವಳ ಬದುಕಿನಲ್ಲಿ ಅವಳಿಗೆ ಎನಿಸಿದಂತಿಲ್ಲ. ಎಲ್ಲಾ ಸಮಸ್ಯೆಯನ್ನು ಸರಳವಾಗಿಯೇ ಸ್ವೀಕರಿಸಿದ್ದಳು. ಗೆದ್ದಿದ್ದಳು ಕೂಡ. ಆದರೆ ಇಲ್ಲಿ ಪರಿಸ್ಥಿತಿ ಭಿನ್ನವಾಗಿತ್ತು. ಈ ಪ್ರಶ್ನೆ ಎದುರಿಸಿದ ವಾಸ್ತವ ಮಾತ್ರ ಕಠೋರವೆನಿಸಿತು. ಇದು ನಿಜಕ್ಕೂ ಕನಸಲ್ಲ. ಆದರೆ ಈ ಮದುವೆಯ ಅಗತ್ಯತೆ ತನಗಿದೆಯೇ? ಒಮ್ಮೆ ಮದುವೆಯ ಬದುಕು ಕೊಟ್ಟ ಅನುಭವಗಳು ಬೇಸರದೊಳಗೇ ಅಪಾರವಾಗಿರುವಾಗ ಮತ್ತೊಮ್ಮೆ ಮದುವೆ ವಿಚಾರಕ್ಕೆ ಪ್ರಾಮಾಣಿಕವಾಗಲಾದೀತೆ, ಬದುಕು ಅಷ್ಟೊಂದು ಸರಳವೇ?

ಎಲ್ಲಾಗೊತ್ತಿದ್ದೂ ಈ ಪ್ರಶ್ನೆಯೇ? ಅವನನ್ನೇ ಕೇಳಿದ್ದಳು.

ನಿನ್ನೆಗಳಿಗೂ ಇಂದಿಗೂ ತಾಳೆ ಹಾಕುವುದರಲ್ಲಿ ಏನಾದರೂ ಅರ್ಥವಿದ್ದೀತೆ ಅವನೂ ಕೇಳಿದ್ದ.

"ನನ್ನಲ್ಲಿ ನಿನ್ನೆಗಳೇ ಸತ್ತಿಲ್ಲವಾದಾಗ ಇಂದಿಗೇನು ಅರ್ಥವಿದೆ" ಎಂದಳು. "ಬದುಕನ್ನು ಎಂದೂ ಮಡುಗಟ್ಟಿಸಬಾರದು ಸುಮ. ಅದು ನದಿಯಾಗಬೇಕು. ಸ್ವಲ್ಪ ಯೋಚಿಸಿ, ನಿಧಾನವಾದರೂ ಚಿಂತೆಯಿಲ್ಲ. ನಿಮ್ಮ ಉತ್ತರಕ್ಕಾಗಿ ಕಾದಿರುತ್ತೇನೆ" ಎಂದು ಹೊರಟುಹೋಗಿದ್ದ ಅವನ ಆ ಮಾತಿನಲ್ಲಿ ಆತ್ಮವಿಶ್ವಾಸವಿದ್ದಂತಿತ್ತು. ಅವಳೆದುರು ಸಮಸ್ಯೆಗಳ ತೆರೆದಿಟ್ಟು ಸಾಗಿ ಹೋಗಿದ್ದ.

ಈ ಪ್ರಶ್ನೆಗಳೇ ಅವಳನ್ನು ನಿದ್ದೆಗೆಡಿಸಿತ್ತು. ಕಾಡಿತ್ತು, ತಲೆ ನೋವ ತರಿಸಿತ್ತು. ವಾಸ್ತವಕ್ಕೆ ಬಂದ ಸುಮ ಮತ್ತಷ್ಟು ಒದ್ದಾಡಿದಳು. ಗಡಿಯಾರ ಏಳು ಗಂಟೆ ಹೊಡೆಯಿತು. ಅಷ್ಟೊತ್ತಿಗೆ ಅವಳ ನಿರ್ಧಾರವೂ ಸಿದ್ಧವಾಗಿತ್ತು .

ಅವಳು ಹೊರತಂದು ಹಗುರಾಗಬೇಕಿತ್ತು. ಎದ್ದು ಕುಳಿತು ಖಾಲಿ ಹಾಳೆಯನ್ನು ಕೈಗೆತ್ತಿಕೊಂಡಳು, ಬರೆಯಲು ಪ್ರಾರಂಭಿಸಿದಳು.

ಆತ್ಮೀಯ ರಾಜೇಂದ್ರರಿಗೆ,

ಇದು ನನ್ನ ಬದುಕಿನಲ್ಲಿನ ಮೊದಲನೇ ಪತ್ರ, ನಾನಾಗಿಯೇ ಬರೆದದ್ದು, ಅದೂ ಎದುರಿಗೆ ಹೇಳಲಾಗದು ಎಂಬ ಅಸಹಾಯಕತೆಯ ಕಾರಣಕ್ಕಾಗಿ, ನನ್ನ



ಉತ್ತರದೊಡನೆ ನಿಮ್ಮನ್ನು ಎದುರಿಸಲಾಗದು ಎಂಬ ಕಾರಣಕ್ಕೆ, ಮದುವೆ, ಕನಸು, ಮನಸು, ಪ್ರೇಮ ಇವೆಲ್ಲಾ ಬದುಕಿನೊಳಗೆ ಮಹತ್ವದ ಮೌಲ್ಯಗಳು ಎಂಬುದನ್ನು ಬಲ್ಲೆ ನಿಜ. ಆದರೆ, ಅವುಗಳನ್ನು ನನಗೆ ನಾನು ಆರೋಪಿಸಿ ಕೊಳ್ಳುವುದು ಮಾತ್ರ ಸಾಧ್ಯವಿಲ್ಲ. ಇದಕ್ಕೆ ನೀವು ಕೇಳುವ ಎಲ್ಲಾ ಪ್ರಶ್ನೆಗಳಿಗೂ ನಾನು ಉತ್ತರಿಸಲಾರೆನೆಂಬುದನ್ನು ಬಲ್ಲೆ. ಆದರೆ ಒಡೆದು ಹೋದ ಕನಸುಗಳನ್ನು ಮಾತ್ರ ನಾನು ಕಟ್ಟಲಾಗುವುದಿಲ್ಲ. ನನ್ನ ದಿನಗಳು, ನೆನಪುಗಳು, ಭಾವಗಳು, ಮಾಧುರ್ಯಗಳೆಲ್ಲಾ ನಾನು ನಾನಗಿ ಬಿಟ್ಟವಲ್ಲ. ಅವು ಕಸಿದುಕೊಂಡವುಗಳು ಹೌದು ನನ್ನಿಂದ ಅವೆಲ್ಲಾ ಕಸಿಯಲ್ಪಟ್ಟವು. ಅವುಗಳನ್ನು ಮತ್ತೆ ಪಡೆಯಲಾದೀತೆಂದು ಯೋಚಿಸಲೂ ನನ್ನಿಂದ ಸಾಧ್ಯವಿಲ್ಲ .

ನೀವು, ನಿಮ್ಮ ಬದುಕು ಎಲ್ಲವೂ ಅದ್ಭುತ ನಿಜ. ನೀವೊಬ್ಬ ಪರಿಪೂರ್ಣ ವ್ಯಕ್ತಿತ್ವದ ಪ್ರತೀ ಹೆಣ್ಣು ಬಯಸಬಲ್ಲ ಎಲ್ಲಾ ಗುಣಗಳ ಸಂಕೇತ. ಹಾಗೆಂದ ಮಾತ್ರಕ್ಕೆ ನನ್ನನ್ನೇ ಕಾಡಬಹುದಾದ ಅಪ್ರಾಮಾಣಿಕತೆಯಿಂದ ನಿಮ್ಮೊಡನೆ ಬದುಕಬಲ್ಲೆನೆ? ಎಂಬುದೇ ಕಷ್ಟ. ಹೃದಯವಂತರು ನೀವು, ನಿಮ್ಮ ಹೃದಯವಂತಿಕೆಗೆ ಸರಿಯಾದ ಬಾಳ ಗೆಳತಿಯೊಬ್ಬಳು ನಿಮ್ಮವಳಾಗಲಿ ಎಂಬುದಷ್ಟೇ ನನ್ನ  ಹಾರೈಕೆ. ಇದಿಷ್ಟೇ ನನ್ನಿಂದ ಸಾಧ್ಯವಾದದ್ದು. ನನ್ನ ಈ ನಿರ್ಧಾರದೊಂದಿಗೆ ನಿಮ್ಮನ್ನು ಎದುರಿಸುವುದಾಗಲೀ ಎದುರಿಗಿದ್ದು ನಿತ್ಯ ಕಾಡುವುದಾಗಲೀ ಸಾಧ್ಯವಾಗುವುದಿಲ್ಲ. ಹಾಗಾಗಿ ನಾನು ಈ ಪರಿಸರದಿಂದ ದೂರಾಗುತ್ತಿದ್ದೇನೆ. ಬಹುಶಃ ನೀವು ಇದನ್ನು ಪಲಾಯನ ಎಂದರೂ ಚಿಂತೆಯಿಲ್ಲ . ಇಲ್ಲಿ ನನಗೆ ಬದುಕಿನ ಜೊತೆ ರಾಜಿ ಸಾಧ್ಯವಿಲ್ಲ ಕ್ಷಮಿಸಿ.

ನಿಮ್ಮಿಂದ ದೂರಾಗುತ್ತ ನಿಮ್ಮ ಸ್ನೇಹದ ಮಾಧುರವನ್ನು ಜೊತೆಗೇ ಒಯ್ಯುತ್ತಿರುವೆ. ಮತ್ತೊಮ್ಮೆ ಕ್ಷಮಿಸಿ.

-ಸುಮಾ

ಓದಿದ, ಮತ್ತೆ ಮತ್ತೆ ಪದಗಳು, ಭಾವಗಳು ಬದಲಾಗುವುದು ಸಾಧ್ಯವಿರಲಿಲ್ಲ . ಇದಕ್ಕೇನು ಹೇಳಬಹುದು. ಯಾರಲ್ಲಿ ಹೇಗೆ? ಬರೀ ಪ್ರಶ್ನೆಗಳು,

ಇಲ್ಲ ಸುಮ ನೀನು ಹೀಗೆ ಮಾಡಬಾರದಿತ್ತು. ಒಮ್ಮೆ ನೀನೇ ನಿನಗೆ ಅವಕಾಶ ನೀಡಬೇಕಿತ್ತು ಸುಮಾ ಎಂದುಕೊಂಡ.

ಮನಸು ಭಾರವಾಯ್ತು, ಕಣ್ಣಳು ಮಂಜಾಯ್ತು, ಹೌದು ಅವಳೇನೋ ಸಹಜವಾಗಿ ದೂರವಾದಳು ತಾನು? ಪ್ರಶ್ನೆ ಸಮಸ್ಯೆಯಾಗುತ್ತಿತ್ತು ...

+

## ೧೩. ಬೋನಿಗೆ ಇದ್ದವರು

**· ಟಿ.ಕೆ. ದಯಾನಂದ**

ಅಲ್ಲಿಯವರೆಗೂ ಕಾಡು ನಂಬಿಕೊಂಡು ಬದುಕುತ್ತಿದ್ದ ಬುಡಕಟ್ಟುಗಳನ್ನು ಕಾಡುವಾಸಿಗಳ ಪುನರ್ವಸತಿ ಯೋಜನೆಯ ಹೆಸರಿನಲ್ಲಿ ಸರ್ಕಾರ ಮತ್ತು ಅರಣ್ಯ ಇಲಾಖೆಯು ಒಟ್ಟು ಸೇರಿ ಬುಡಬುಡಕೆಯವರು, ಹಕ್ಕಿಪಿಕ್ಕರು, ಗೊರವರು, ಕರಡಿ ಖಲಂದರ್‌ಗಳು, ಗಿಣಿ ಶಾಸ್ತ್ರದವರು, ಗೊಂಬೆಯಾಟದವರು, ಹಾವುಗೊಲ್ಲರು, ದೊಂಬರು, ಕೊರಚರು ಕೊರಮರಿತ್ಯಾದಿಯೆಲ್ಲರನ್ನೂ ಕಾಡು ಬಿಡಿಸಿ ಲಾರಿಯೊಳಗೆ ತುಂಬಿಕೊಂಡು ಬಂದು ಚೆಂಗಾವಿಯ ಊರಾಚೆಗೆ ಬಿಸಾಕಿ. ಹೋಗಿದ್ದರಲ್ಲ .. ಆವತ್ತಿನಿಂದಲೇ ಒಂದರ ಹಿಂದೊಂದು ಪೀಕಲಾಟಗಳು ಚೆಂಗಾವಿಯೆಂಬ ಪಟ್ಟಣಕ್ಕೆ ಅಮರಿಕೊಂಡಿದ್ದವು.

ಮೊದಮೊದಲಿಗೆ ಲಾರಿಯಿಂದ ಕಸದಂತೆ ಇಳಿದ ಕಾಡುವಾಸಿಗಳ ವೇಷಭೂಷಣ, ಮಾತುಕತೆ, ಬಿದಿರುಬಾಣ, ಗೋಣಿಚೀಲಗಳ ಕಂತೆಗಳನ್ನು ಕಂಡವರು ಇವನ್ಯಾರೋ ಅನ್ಯಗ್ರಹ ವಾಸಿಗಳಿರಬಹುದೆಂದು ಡೌಟು ಬರುವಷ್ಟರ ಮಟ್ಟಿಗೆ ಆಶ್ಚರ್ಯದಿಂದ ನೋಡಿದ್ದರು. ನೋಡ ನೋಡುತ್ತಲೇ ಊರಾಚೆಗಿನ ಈ ಪ್ರದೇಶವನ್ನು ತುಂಬಿಕೊಂಡ ಟೆಂಟು, ಗುಡಿಸಲು ಬಿದಿರು ಕಮಾನು ಮನೆಗಳಿಂದ ಕಾಡುಬುಡಕಟ್ಟಿನವರು ಹೊಕ್ಕಳ ಕರುಳು ಕತ್ತರಿಸಿಕೊಂಡ ಎಳೆಗೂಸುಗಳಂತೆ ಹೊಸ ಜಾಗಕ್ಕೆ ಹೊಂದಿಕೊಳ್ಳಲು ಪಡಬಾರದ ಯಾತನೆ ಪಡುವುದನ್ನು ಯಾರಾದರೂ ನೋಡಬಹುದಿತ್ತು. ಕಾಡಿನ ಸಣ್ಣಪುಟ್ಟ ಪ್ರಾಣಿಗಳನ್ನು ಪಳಗಿಸಿಟ್ಟುಕೊಂಡು ಬೀದಿಗಳಲ್ಲಿ ಪ್ರದರ್ಶಿಸಿ ಅಲ್ಲಿಯತನಕ ಹೊಟ್ಟೆ ಹೊರೆಯುತ್ತಿರುವವರಿಗೆ ಅರಣ್ಯ ಕಾನೂನುಗಳು ಕೊರಳಿಗಿಟ್ಟ ಕೊಡಲಿಯಂತೆ ಕಾಡಲು ಶುರುವಾಗಿದ್ದು ಅನುಭವಕ್ಕೆ ಬಂದ ಕೂಡಲೇ ಮುಂದೇನೆಂಬ ಪ್ರಶ್ನೆಗಳಿಗೆ ಉತ್ತರ ಹುಡುಕಲು ಅವರವರೊಳಗೆ ಗೊಂದಲಮಯ ಪರಿಹಾರಗಳು ಮೂಡುತ್ತಿದ್ದವು. ಕರಡಿಯಾಡಿಸುವವರಿಗೆ ಗುರುತುಚೀಟಿ ಕೊಟ್ಟು ಕರಡಿಗಳನ್ನು ಹೊತ್ತೊಯ್ದಿದ್ದ ಫಾರೆಸ್ಟಿನವರು ಪರಿಹಾರವೆಂದು ಕೊಟ್ಟ ತುಂಡು ಭೂಮಿ ಮತ್ತು ಚಿಲ್ಲರೆ ಕಾಡೊಳಗೆ ಏನು ಮಾಡುವುದೆಂಬ ಕುರಿತಂತೆ ಯಾವ ವಿವರವೂ ಗೊತ್ತಿಲ್ಲದ ಖಲಂದರ್‌ಗಳು ಉಳುಮೆ ಕೃಷಿಯ ತಲೆಬುಡ ತಿಳಿಯದೆ ಕೈಲಿದ್ದ ಕಾಸನ್ನು ಅದಕ್ಕಿದಕ್ಕೆಂದು ಖರ್ಚು ಮಾಡಿ ಖಾಲಿ ಜೇಬುಗಳೊಡನೆ ಗುದ್ದಾಡುತ್ತಿದ್ದರೆ, ಇದ್ದ ಬದ್ದ ಹಾವುಗಳೆಲ್ಲವನ್ನೂ ಬಿದಿರುಬುಟ್ಟಿಯ ಸಮೇತ ಕಳೆದುಕೊಂಡ ಹಾವುಗೊಲ್ಲರ ಕಥೆ ಬೇರೆಯೇ ಆಗಿತ್ತು. ಪುಸ್ತಕದ ಕಾನೂನು

ಹೇಳುವಂತೆ ಅವನ್ಯಾರೂ ಹಾವನ್ನು ಆಡಿಸುವಂತೆಯೇ ಇರಲಿಲ್ಲ. ಅದ್ಯಾರು ಅದೇನು ಕಿತ್ತುಕೊಳ್ಳುವರೆಂದು ಹೊಸ ಹಾವುಗಳನ್ನು ಹಿಡಿದು ಪಳಗಿಸಿ ಕೂಡು ರಸ್ತೆಗಳಲ್ಲಿ ಆಟವಾಡಿಸುತ್ತಿದ್ದವರ ಮೇಲೆ ಮುಗಿ ಬೀಳುತ್ತಿದ್ದ ಫಾರೆಸ್ಟು ಇಲಾಖೆಯವರು ಕೈಗೆ ಸಿಕ್ಕ ಹಾವುಗಳೆಲ್ಲವನ್ನೂ ದಿವೀನಾಗಿ ಹೊತೊಯ್ದು ಕಾಡಿಗೆ ಬಿಡುತ್ತಿದ್ದರು. ಇವರು ಹಿಡಿದು ತರುವುದು, ಅವರು ಹೊತ್ತೊಯ್ಯುವ ಸರ್ಕಸ್ಸು ನಡೆದಿರುವಾಗಲೇ ಹೊಸತೊಂದು ಐಡಿಯಾ ಕಂಡುಕೊಂಡ ಹಾವುಗೊಲ್ಲರು ಪ್ಲಾಸ್ಟಿಕ್ಕು ಹಾವುಗಳು, ಸ್ಪಿಂಗಿನ ಹಾವುಗಳನ್ನು ನೆಲದ ಮೇಲೆ ಜೋಡಿಸಿ ಕೂಗಿ ಕರೆದು ಎಷ್ಟೇ ಪುಂಗಿಯೂದಿದರೂ ಅಷ್ಟೆಲ್ಲಾಗಲೇ ಜಿಯಾಗ್ರಫಿಯಂತೆ ಡಿಸ್ಕವರಿಯಂತೆ, ಅನಿಮಲ್ಲು ಪ್ಲಾನೆಟ್ಟಂತೆ ಎಂದು ಹತ್ತಾರು ಟಿವಿ ಚಾನೆಲುಗಳಲ್ಲಿ ತರೇವಾರಿ ಹಾವು ಹುಪ್ಪಟೆಗಳು ನೋಡುತ್ತಿದ್ದ ಚೆಂಗಾವಿಯ ಜನರು ಇವರ ಪ್ಲಾಸ್ಟಿಕ್ಕು ಹಾವುಗಳನ್ನು ಮೂಸಿಯೂ ನೋಡದೆ ಮುಂದೆ ಹೋಗಿಬಿಡುತ್ತಿದ್ದರು.

ಗಂಡು ಪುನರ್ವಸತಿಗೊಳಗಾದ ಎಲ್ಲರಿಗೂ ರೇಷನ್ನು ಕಾರ್ಡು ಕೊಟ್ಟಿದ್ದರಾದರೂ ರೇಷನ್ ಡಿಪೋದಲ್ಲಿ ಸೀಮೆ ಎಣ್ಣೆ ಬಿಟ್ಟು ಬೇರೇನನ್ನೂ ಕೊಡುತ್ತಿರಲಿಲ್ಲ . ತಲೆ ಮೇಲೆ ಸುರಿದುಕೊಂಡು ಜೀವಂತವಾಗಿ ಬೆಂಕಿಯಿಟ್ಟುಕೊಂಡು ನೆಗೆದು ಬೀಳಲಷ್ಟೇ ಅನುಕೂಲಕರವಾಗಿದ್ದ ಸೀಮೆ ಎಣ್ಣೆಯನ್ನು ಏನು ಮಾಡುವುದೆಂದು ತಿಳಿಯದೆ ಅದನ್ನು ದೇಹಕ್ಕೆ ಗಾಯವಾದ ಕಡೆಗೆ ಎರಡು ಚಮಚ ಸುರಿದು ನೋವು ನಿವಾರಕ ಔಷಧಿಯಾಗಷ್ಟೇ ಬಳಸಲು ಪುನರ್ವಸತಿ ಸಂತ್ರಸ್ತರು ಬಳಸುತ್ತಿದ್ದರು. ಇದಿಷ್ಟು ಸಾಲದೆಂದು ಇವರ ಪಾಲಿಗೆ ದೇವದೂತನ ಭಕ್ತರ ಹೊಸಕಾಟವೂ ತಗಲಿಕೊಂಡಿತ್ತು. ಬೆಳಿಗ್ಗೆಯಾದರೆ ಸಾಕು ಬಂದು ವಕ್ಕರಿಸುತ್ತಿದ್ದ ಪಾದ ಜಸಿಂತಮ್ಮನು "ನಿಮ್ಮನ್ನು ಸುತ್ತುವರೆದಿರುವ ಕಷ್ಟಗಳಿಗಾಗಿ ಕರ್ತನನ್ನು ಪ್ರಾರ್ಥಿಸಿರಿ. ನಿಮಗೆ ಹಿಂಸೆ ಕೊಡುತ್ತಿರುವ ವೈರಿಗಳಿಗೋಸ್ಕರ ದೇವರಲ್ಲಿ ಬೇಡಿಕೊಳ್ಳಿರಿ" ಎಂದು ಈ ಕಾಡುವಾಸಿಗಳನ್ನು ದುಂಬಾಲು ಬೀಳುತ್ತಿತ್ತು. ತಮ್ಮನ್ನು ಈ ಗತಿಗೆ ತಂದಿಟ್ಟವರು ಕೈಗೆ ಸಿಕ್ಕರೆ ರುಂಡವೊಂದು ಕಡೆ ಮುಂಡವೊಂದು ಕಡೆ ನೋಡಲು ತಹತಹಿಸುತ್ತಿದ್ದ ಜನರಿಗೆ ಈಯಮ್ಮನ ಗ್ರಾಮಾಫೋನು ಬೋಧನೆಯು ಇನ್ನಷ್ಟು ಸಿಟ್ಟಿಗೇಳಿಸುತ್ತಿತ್ತು . ಇಲಿಗಳನ್ನೇ ನಂಬಿಕೊಂಡು ಬದುಕುತ್ತಿದ್ದ ಇರುಳರ ಕುಲದ ನಂಬೀಸನು ಒಂದು ದಿನ ತನ್ನ ಗುಡಿಸಲಿನ ಮುಂದೆ ನಿಂತು "ಕರ್ತರು ನಿಮಗೋಸ್ಕರ ಬಂದಿದ್ದಾರೆ" ಎಂದು ಗಾಸ್ಪೆಲ್ ಬೋಧನೆ ಮಾಡುತ್ತಿದ್ದ ಜಸಿಂತಮ್ಮನನ್ನು ಸಂದಿಗೊಂದಿಯಲ್ಲಿ ಓಡಿದರೂ ಬಿಡದೆ ತಲೆಕೆಟ್ಟು ಅಟ್ಟಾಡಿಸಿಬಿಟ್ಟಿದ್ದ. ಇದರ ಫಲವಾಗಿ ದೇವದೂತನ ಭಕ್ತರು ಆವತ್ತಿನಿಂದ ಇವರ ನಡುವಿಂದ ಮಟಾಮಾಯವಾಗಿ ಹೋಗಿದ್ದರು.

ಹೀಗಿರುವಾಗ ಬದುಕಲಿಕ್ಕೆಂದು ಒಂದೇ ವಿಧಾನವನ್ನು ಅರೆದು ಕುಡಿದಿದ್ದ ಇವರೆಲ್ಲರಿಗೂ ಇದೀಗ ಬದುಕಲು ಬೇರೆಯದೊಂದೇನಾದರನ್ನು ಪತ್ತೆಹಚ್ಚಿಕೊಳ್ಳಲೇಬೇಕಾದ ಅನಿವಾರ್ಯತೆಯಲ್ಲಿ ತಮಗೆ ಪಾರಂಪರಿಕವಾಗಿ ತಿಳಿದುದನ್ನೇ ಹೊಸಬಣ್ಣ ಹೊಡೆದು ಜನರನ್ನೇ ಆಶ್ರಯಿಸಿ ಬದುಕಬೇಕಿರುವ ಕಟುಸತ್ಯ

ಅರ್ಥವಾಗಲು ತುಂಬ ದಿನಗಳೇನು ಹಿಡಿಯಲಿಲ್ಲ. ಅದರಂತೆ ಕುಂಚಿಕೊರವರು ಹುಲ್ಲುಕೂಡಿಸಿ ದಾರದಲ್ಲಿ ಬಿಗಿದು ನೆಲ್ಲು ಪೊರಕೆಗಳನ್ನು ಮಾರುತ್ತಲೂ, ಸೊನಾಯಿ ಕೊರಮರು ವಾಲಗದವರಾಗಿ, ಮದುವೆಮುಂಜಿ, ದೇವರುತ್ಸವದ ವಾದ್ಯಗಾರ ರಾಗಿಯೂ, ಕೊರಚರು ಕತ್ತಾಳೆನಾರಿನ ಹಗ್ಗ ಹೆಣೆದು ಮಾರುವವರಾಗಿಯೂ, ದಬ್ಬೆಗೊಲ್ಲರು ಬಿದಿರಿನಬುಟ್ಟಿ, ಮಂಕರಿ ಮಾರುವವರಾಗಿಯೂ ಪರಿವರ್ತಿತ ರಾಗಿದ್ದರು. ಇದೇ ತೆರನಾಗಿ ಉಳಿದವರ ಪಾಡೂ ಇದೇ ಗತಿಗೆ ಬಂದು ನಿಂತಿದ್ದ ಸಮಯದಲ್ಲಿ ಚೆಂಗಾವಿಯ ರೈತಾಪಿ ಕುಲಕ್ಕೆ ಇಲಿರೋದನೆ ಶುರುವಾಗಿದ್ದು, ಅದರ ಪರಿಹಾರಕ್ಕೆಂದು ಗಿಣಿಶಾಸ್ತ್ರದ ಮಂಕಾಳಿ ಬಂದದ್ದು ಮತ್ತರು ನಾನಾಬಗೆಯ ರಂಕಲುಗಳಿಗೆ ಕಾರಣವಾಗಿದ್ದು ಕೇಳಲೇಬೇಕಾದ ಕಥೆ.

ಭತ್ತವಂತೆ, ಸೇಂಗಾ ಅಂತೆ, ರಾಗಿಯಂತೆ ಎಂದು ಬೆಳೆದುಕೊಂಡು ದುಡ್ಡು ದಮ್ಮಡಿಯ ಮುಖ ನೋಡುತ್ತಿದ್ದ ಚೆಂಗಾವಿಯ ರೈತರಿಗೆ ತಮ್ಮ ಹೊಲಗಳಲ್ಲಿ ಕಟಾವಿಗೆ ಬಂದು ನಿಂತ ರಾಗಿ, ಸೇಂಗಾ, ಭತ್ತವನ್ನು ಇಲಿ ಸಮೂಹವು ಯೋಜಿತವಾಗಿ ಹಾಳುಗೆಡವುವುದು ಕಣ್ಣಿಂದ ನೋಡಲಾಗುತ್ತಿರಲಿಲ್ಲ. ರಸಭರಿತ ಭತ್ತ, ರಾಗಿ ತೆನೆಗಳನ್ನು ನಾಜೂಕಾಗಿ ಕಟಾವು ಮಾಡುತ್ತಿದ್ದ ಇಲಿಗಳು ಸೇಂಗಾ ಬೇರುಗಳನ್ನು ಬುಡ ಸಮೇತ ಹೊತ್ತೊಯ್ಯುವ ಪರಿಪಾಠ ಬೆಳೆಸಿಕೊಂಡಿದ್ದವು. ಆಧುನಿಕ ಕೃಷಿ, ಯಾಂತ್ರಿಕ ಉಳುಮೆ, ರಸಗೊಬ್ಬರ, ಔಷಧಿ ಸಿಂಪರಣೆಯೆಂದು ಕಂಡಾಪಟ್ಟೆ ದುಡ್ಡು ಚೆಲ್ಲಿ ತಮ್ಮ ಪಾಡಿಗೆ ತಾವು ಬೆಳೆದುಕೊಳ್ಳುತ್ತಿದ್ದ ಬೆಳೆಯನ್ನು ಐದು ಪೈಸದ ಬಂಡವಾಳವಿಲ್ಲದೆ ಇಲಿಗಳು ತಂಡೋಪತಂಡವಾಗಿ ಬಂದು ಹೊತ್ತೊಯ್ದು ಗೂಡು ತುಂಬಿಕೊಳ್ಳುವುದು ತನ್ಮೂಲ ತಾವು ಕಷ್ಟಪಟ್ಟು ಬೆಳೆದ ಅರ್ಧಕ್ಕರ್ಧ ಬೆಳೆಯು ರುಂಡ ಕಳೆದುಕೊಂಡ ಮುಂಡ ಮಾತ್ರವಾಗಿ ಹೊಲದೊಳಗೆ ಉಳಿಯುತ್ತಿರುವುದನ್ನು ನೋಡಲಾಗದೆ ಚೆಂಗಾವಿಯ ರೈತ ಕುಲ ರೋಸತ್ತು ಹೋಗಿತ್ತು. ಗೂಬೆಗಳಿಗೆ ಇಷ್ಟವಾಗುವ ಬೀಡಿ ಎಲೆಯ ಕಡ್ಡಿಗಳನ್ನು ಹೊಲದೊಳಗೆ ನೆಟ್ಟು ಗೂಬೆಗಳನ್ನು ಆಕರ್ಷಿಸಿ ಅವುಗಳ ಮೂಲಕ ಇಲಿಗಳನ್ನು ಕೊಲ್ಲಬಹುದೆಂದು ಹೇಳಿದ ತಲೆಮಾಸಿದ ಮುದುಕನೊಬ್ಬನ ಐಡಿಯಾ ನಂಬಿಕೊಂಡು ಬೆಳೆಯ ಮಧ್ಯೆ ಮಧ್ಯೆ ಗುಮ್ಮನ ಗೂಟಗಳನ್ನೂ ಇಟ್ಟು ನೋಡಿದರು. ಅದರಿಂದಲೂ ಪ್ರಯೋಜನವೇನೂ ಆಗಲಿಲ್ಲ. ಇದ್ದಬದ್ದ ತಾಳ್ಮೆಯೆಲ್ಲವನ್ನೂ ಕಳೆದುಕೊಂಡ ಚೆಂಗಾವಿಯ ರೈತರು ಮನೆಯೊಳಗೆ ಯಾವುದಾದರೊಂದು ಇಲಿ ಕಂಡರೆ ಅದನ್ನು ಅಟ್ಟಾಡಿಸಿಕೊಂಡು ಹೋಗಿ ಕೈಗೆ ಸಿಕ್ಕದ್ದರಿಂದ ಬಡಿಯಲೆತ್ನಿಸುತ್ತಿದ್ದರು. ಹೊಲಗಳಿಗೆ ಯಾವ ಮುನ್ಸೂಚನೆಯನ್ನೂ ಕೊಡದೇ ನುಗ್ಗುವ ಇಲಿಗಳನ್ನು ನಿಯಂತ್ರಿಸಲು ಒಂದಷ್ಟು ದಿನ ಮುಂಗುಸಿ ಬೆಕ್ಕುಗಳನ್ನು ಬಳಸಲು ನೋಡಿದರಾದರೂ, ಇತ್ತ ಕಡೆಯಿಂದ ಬೆಕ್ಕು ಮುಂಗುಸಿಗಳನ್ನು ಹೊಲದೊಳಗೆ ಬಿಟ್ಟು ಬಂದರೆ ಅತ್ತಕಡೆಯಿಂದ ಯಾವುದೋ ಮಾಯದಲ್ಲಿ ಪುನರ್ವಸತಿಯ ಜೈಲಿನೊಳಗಿದ್ದ ಶಿಳ್ಳೆಕ್ಯಾತರು ಇವುಗಳನ್ನು ಹಿಡಿದೊಯ್ದು ಸುಟ್ಟು ತಿನ್ನಲು ಶುರುವಿಡುತ್ತಿದ್ದರು. ಅದೂಪೋಯ ಇದೂಪೋಯ ಎಂಬ ಸ್ಥಿತಿಗೆ ತಳ್ಳಲ್ಪಟ್ಟ ರೈತರು ಕೊನೆಗೆ ಚೆಂಗಾವಿಯ ಕೃಷಿ ಅಧಿಕಾರಿಗಳಿಗೆ ತಮ್ಮ

ಹೊಲಗಳಿಗೆ ಗಂಡಾಂತರವಾಗಿರುವ ಇಲಿಗಳ ಕಾಟದಿಂದ ತಮ್ಮನ್ನು ಕಾಪಾಡುವಂತೆಯೂ ಇಲ್ಲವಾದಲ್ಲಿ ತಮ್ಮೆಲ್ಲರನ್ನೂ ಪರಿಹಾರ ಕೊಟ್ಟು ಚೆಂಗಾವಿಯಿಂದ ಗಡೀಪಾರು ಮಾಡುವಂತೆಯೂ ದುಂಬಾಲು ಬಿದ್ದಿದ್ದರು.

ಆಧುನಿಕ ಕೃಷಿ ಉತ್ತೇಜನಕ್ಕೆಂದು ಬಿಡುಗಡೆಯಾಗಿರುವ ಅನುದಾನದ ದುಡ್ಡನ್ನು ಎಲ್ಲಾ ಮೂಲೆಯಿಂದಲೂ ಮುಂಡಾಮೋಚಿ ಉಳಿದ ಅನುದಾನಕ್ಕೆ ಏನಾದರೊಂದು ಗತಿ ಕಾಣಿಸಲು ಹೊಸ ಪಿತೂರಿಗಳಿಲ್ಲದೆ ನೊಂದುಕೊಳ್ಳುತ್ತಿದ್ದ ಕೃಷಿ ಅಧಿಕಾರಿಗಳು ಆಹಾರಧಾನ್ಯ ಸಂರಕ್ಷಣಾ ಆಂದೋಲನ ಯೋಜನೆಯಡಿಯಲ್ಲಿ ಇಲಿ ಟೆಂಡರು ಕರೆದಿದ್ದೂ ಆಯಿತು. ಟೆಂಡರು ತೆಗೆದುಕೊಂಡ ಆಸಾಮಿಯೊಬ್ಬ ತನಗೆ ನೇರೂಪಾಗಿ ಕಂಡ ಕರಪತ್ರ ಪ್ರಕಟಣೆ ಪಾಷಾಣ, ಇಲಿ ಬೋನು, ಇಕ್ಕಳದ ಪ್ರಯೋಗವೆಲ್ಲವನ್ನೂ ಹೊಲಗೊಳೊಳಗೆ ಬಳಸಿ ನೋಡಿದ್ದರು. ಅವಕ್ಕೂ ಇಲಿಗಳು ಕ್ಯಾರೇ ಎನ್ನದೆ ಯಾವ ತಂತ್ರೋಪಾಯಗಳಿಗೂ ಬಗ್ಗದಂತೆ ಇಲಿ ಸಮೂಹ ತನ್ನ ಪಾಡಿಗೆ ತಾನು ಬೆಳೆ ದರೋಡೆಯ ಸಾಹಸಗಳನ್ನು ಯಾವ ಎಗ್ಗುಸಿಗ್ಗಲ್ಲದೆ ನಡೆಸುತ್ತಲೇ ಇದ್ದುದನ್ನು ಕಂಡ ಅಧಿಕಾರಿಗಳು ಕೃಷಿ ವಿಶ್ವವಿದ್ಯಾಲಯದ ಇಲಿ ನಿಯಂತ್ರಣ ವಿಭಾಗದ ಮುಖ್ಯಸ್ಥ ಪುಗಳೇಂದಿಯ ಮೊರೆ ಹೋಗಿದ್ದರು. ಎಲ್ಲವನ್ನೂ ಕೇಳಿಸಿಕೊಂಡ ಪುಗಳೇಂದಿಯು ಫಿಲಿಫೈನ್ಸ್‌ನಲ್ಲಿ ಈ ಬಗೆಯ ಇಲಿ ಕಾಟ ನಿಯಂತ್ರಣಕ್ಕೆಂದು ಅಲ್ಲಿನ ಕೃಷಿ ವಿಜ್ಞಾನಿಗಳು ಸಸ್ಯವೊಂದನ್ನು ಅಭಿವೃದ್ಧಿಪಡಿಸಿದಾರೆಂದೂ ತಮ್ಮ ವಿಶಿಷ್ಟ ವಾಸನೆಯಿಂದ ಇಲಿಗಳು ಆಕರ್ಷಿಸುವ ಅದು ಇಲಿಯು ಆ ಗಿಡದ ಎಲೆಗಳನ್ನು ತಿನ್ನುತ್ತಿದ್ದಂತೆಯೇ ಸಾಯುತ್ತವೆಂದೂ, ಅದರ ಬೀಜಗಳನ್ನು ತರಿಸಿಕೊಂಡು ಚೆಂಗಾವಿಯ ಹೊಲದ ಅಲ್ಲಲ್ಲಿ ಬೆಳೆಸುವ ಮೂಲಕ ಇಲಿ ನಿಯಂತ್ರಿಸಬಹುದು ಎಂಬ ಅದ್ದೂರಿ ಐಡಿಯಾವೊಂದನ್ನು ಕೃಷಿ ಅಧಿಕಾರಿಗಳ ಮುಂದಿಟ್ಟಿದ್ದನು. ಚೆಂಗಾವಿ ಹುಣ್ಣಿಗೆ ಫಿಲಿಪೈನ್ಸ್ ಕನ್ನಡಿಯ ಪರಿಹಾರವು ದುಬಾರಿಯಾಗುವುದರಿಂದ ಬೇರೆ ಏನಾದರೂ ಸಸ್ತಾ ಪರಿಹಾರವನ್ನು ಆಲೋಚಿಸಿ ಸಹಕರಿಸಲು ಕೃಷಿ ಅಧಿಕಾರಿಗಳು ಕೇಳಿಕೊಂಡಿದ್ದರಿಂದ ಎಷ್ಟು ಯೋಚಿಸಿದರೂ ಏನೂ ತೋಚದಾಗಿ ಕೊನೆಗೆ ಇದಕ್ಕೆ ಮದ್ದರೆಯಲು ತಕ್ಕುನಾಗಿದ್ದ ಗಿಣಿಶಾಸ್ತ್ರದ ಮಂಕಾಳಿಯನ್ನು ತನ್ನಲ್ಲಿಗೆ ಕರೆಯಿಸಿಕೊಂಡಿದ್ದನು.

ಇಲ್ಲಿಯವರೆಗೂ ಒಂದು ಹದದೊಳಗೆ ಇದ್ದ ಚೆಂಗಾವಿಯ ರೈತರ ಪೀಕಲಾಟವು ಗಿಣಿಶಾಸ್ತ್ರ ಮಂಕಾಳಿಯ ಪ್ರವೇಶದಿಂದಾಗಿ ರೇಸು ಕುದುರೆ ಯೋಪಾದಿಯಲ್ಲಿ ಕಂಡಾಪಟ್ಟೆ ರಸ್ತೆಗೆ ತಿರುಗುತ್ತದೆಂದು ಪುಗಳೇಂದಿಗಾಗಲೀ, ರೈತರಿಗಾಗಲೀ, ಉಳಿಕೆ ಚೆಂಗಾವಿಯ ಪ್ರಜೆಗಳಿಗಾಗಲೀ ಆಗ ಗೊತ್ತಾಗಲೇ ಇಲ್ಲ. ಪುನರ್ವಸತಿಯ ಕೊಡಲಿಗೆ ತಲೆಕೊಟ್ಟಿದ್ದ ಛಪ್ಪನ್ನೈವತ್ತಾರು ಬುಡಕಟ್ಟುಗಳ ಲ್ಲೊಂದಾಗಿದ್ದ ಗಿಣಿಶಾಸ್ತ್ರದವರ ಪೈಕಿಯವನಾಗಿದ್ದ ಮಂಕಾಳಿಯು ಕುಲವಿದ್ಯೆಯು ತಲೆಯಿಂದ ತಲೆಗೆ ದಾಟಿಕೊಳ್ಳಲು ಬೇಕಿದ್ದ ಗಿಣಿಶಾಸ್ತ್ರದ ರಹಸ್ಯಗಳನ್ನು ತನ್ನ ನೆರೆತು ಬಿಳಿಯಾಗಿದ್ದ ತಲೆಗೂದಲೊಳಗೆ ಬಚ್ಚಿಟ್ಟುಕೊಂಡು ಬದುಕುವವನಾಗಿದ್ದನು. ದೂರದ ಎರವಾಡಿಯಲ್ಲಿ ಗಿಣಿಶಾಸ್ತ್ರ ಹೇಳುವ ಅವನದ್ದೇ ಕುಲದ ಮಂದಿಗೆ ಪಳಗಿಸಿದ

ಗಿಣಿಗಳನ್ನು ಸಪ್ಪೆ ಮಾಡುವ 3 ಕೆಲಸ ಮಾಡುತ್ತಿದ್ದ ಅವನು ಹೀಗೆ ಪಳಗಿಸಿದ ಗಿಣಿಯೊಂದಕ್ಕೆ ಮೂರರಿಂದ ಐದು ಸಾವಿರದವರೆಗೂ ಚಾರ್ಜು ಮಾಡುತ್ತಿದ್ದನು. ಶಾಸ್ತ್ರದ ಗಿಣಿಯು ಪಂಜರದೊಳಗಿನಿಂದ ಹೊರಗೆ ಬರಲು ಯಾವ ಸನ್ನೆ ಮಾಡಬೇಕು. ಯಾವ ದಿಕ್ಕಿನಿಂದ ಗಿಣಿಯ ತಲೆ ಮುಟ್ಟಿದರೆ ಅದಕ್ಕೆ ಯಾವ ಮೆಸೇಜು ರವಾನೆಯಾಗುತ್ತದೆ. ನೆಲಕ್ಕೆ ಎಷ್ಟು ಸಲ ತೋರು ಬೆರಳಿನಿಂದ ಮಡಚಿ ಕುಟ್ಟಿ ಯಾವ ಕಾರ್ಡು ತೆಗೆಯಬೇಕೆಂಬ ಸೂಚನೆ ಕೊಡಬೇಕು. ಮನುಷ್ಯರ ಹೆಬ್ಬೆರಳಿನ ಚಲನೆಯನ್ನು ಗಿಣಿಗಳು ಗ್ರಹಿಸುವ ಬಗೆ ಇವೆಲ್ಲವನ್ನೂ ಪಾರಂಪರಿಕವಾಗಿ ಕಲಿತವನಾಗಿದ್ದ ಮಂಕಾಳಿಯು ಗಿಣಿಶಾಸ್ತ್ರವನ್ನೇ ನಂಬಿ ಬದುಕುತ್ತಿದ್ದವರಿಗೆ ಕುಲ ಪಿತಾಮಹನಾಗಿದ್ದನು. ಲಾಗಾಯ್ತಿನಿಂದಲೂ ಕುಲದ ಜನರಿಂದ ದೊರೆಯಂತೆ ಸಿಕ್ಕುತ್ತಿದ್ದ ಗೌರವಗಳನ್ನು ಪಡೆಯುತ್ತಿದ್ದ ಮಂಕಾಳಿಯು ತಾನು ಜಮೈಕಾ ದೇಶದ ಗಿಣಿಸಾಮ್ರಾಜ್ಯದ ದೊರೆಗಳ ಪರಂಪರೆಯ ಕೊನೆಯ ಸಂತತಿಯೆಂದು ಉಳಿದ ಗಿಣಿಶಾಸ್ತ್ರದವರೆದುರು ತವುಡು ಕುಟ್ಟುತ್ತಿದ್ದ . ಇದು ಎಷ್ಟು ನಿಜವೋ ಎಷ್ಟು ಸುಳ್ಳೋ ಎಂದು ಖಚಿತಪಡಿಸಿಕೊಳ್ಳಲು ಜಮೈಕಾ ದೇಶಕ್ಕೆ ಖರ್ಚೆಟ್ಟುಕೊಂಡು ಹೋಗಿ ವಿಚಾರಿಸಿಕೊಂಡು ಬರಲು ಯಾರಿಗೂ ಪುರುಸೊತ್ತು ಇರಲಿಲ್ಲವಾದ್ದರಿಂದ ಕೇಳಿದವರೂ ಹೌದೆಂದು ನಂಬುತ್ತಿದ್ದರು.

ಗಿಣಿ ಯಾಪಾರಕ್ಕೆ ಬೇಕಿದ್ದ ಗಿಣಿಗಳನ್ನು ಎರವಾಡಿಯ ಕಾಡುಗಳ ಬೋಗಿ ಮರದ ಪೊಟರೆಗಳಿಂದ ಮಂಕಾಳಿ ಹಿಡಿದು ತರುತ್ತಿದ್ದ. ಒಂದು ವತ್ತಾರೆ ಹತ್ತಿ ತುಂಬಿಸಿಟ್ಟ ಬುಟ್ಟಿಯೊಡನೆ ಎರವಾಡಿ ಕಾಡು ನುಗ್ಗುತ್ತಿದ್ದ. ಅವನಿಗೆ ಗಿಣಿಗಳ ಜಗತ್ತು ಅವನ ಬೆರಳುಗಳಷ್ಟೇ ಚಿರಪರಿಚಿತವಾಗಿದ್ದವೆಂದರೂ ನಡೆಯುತ್ತದೆ ಬಿಡಿ. ವಯಸ್ಸಿರುವವರೆಗೆ ಬೋಗಿಮರಗಳನ್ನು ಚಕಪಕನೆ ಹತ್ತಿ ಪೊಟರೆಗೆ ಕೈಬಿಟ್ಟು ಸಲೀಸಾಗಿ ಗಿಣಿಗಳನ್ನು ಹಿಡಿಯುತ್ತಿದ್ದ ಮಂಕಾಳಿಗೆ ವಯಸ್ಸೆಂಬುದು ಅಮರಿಕೊಂಡಾಗಿನಿಂದ ಮರಹತ್ತಲು ನರಗಳು ಸಪೋರ್ಟು ಮಾಡುತ್ತಿರಲಿಲ್ಲವಾಗಿ, ಈಗೀಗ ಹೊಸ ಪ್ಲಾನೊಂದಕ್ಕೆ ಜೋತು ಬಿದ್ದಿದ್ದನು. ಯಾವ ಪಕ್ಷಿಗಳಲ್ಲೂ ಕಾಣಬರದ ಬಹುಸಂಗಾತಿ ತೆವಲಿಗೆ ಬೀಳುವ ಹೆಣ್ಣು ಗಿಣಿಗಳು ಇರೋಬರೋ ಗಂಡುಗಿಳಿಗಳಿಗೆಲ್ಲ ತಲೆ ಕೆಡಿಸಿ ಬುಟ್ಟಿಗೆ ಬೀಳಿಸಿಕೊಂಡು ಪೊಟರೆಯಲ್ಲಿದ್ದುಕೊಂಡೇ ಅವುಗಳ ಮೂಲಕ ತಿಂಡಿ ಊಟ ತರಿಸಿಕೊಳ್ಳುವುದನ್ನು ಬಲ್ಲವನಾಗಿದ್ದ ಮಂಕಾಳಿಯು ಹೆಣ್ಣು ಗಿಳಿಗಳನ್ನು ಕೂಡಲು ಗಂಡು ಗಿಳಿಗಳ ನಡುವೆ ಪುಟ್ಟದೊಂದು ಯುದ್ಧವೇ ನಡೆಯುತ್ತದಲ್ಲ. ಅಂತಹ ಟೈಮನ್ನೇ ಕಣ್ಣಿಗೆ ವಂಗೆ ಎಣ್ಣೆ ಬಿಟ್ಟುಕೊಂಡು ಕಾಯುತ್ತಿದ್ದ. ಆ ಟೈಮಿನಲ್ಲಿ ಬಲಶಾಲಿ ಗಂಡುಗಿಳಿಯು ಇತರೆ ಪಡಪೋಶಿ ಗಂಡು ಗಿಳಿಗಳೊಡನೆ ಗುದ್ದಾಡಿಕೊಂಡು ಮಣ್ಣಲ್ಲಿ ಉರುಳಾಡುತ್ತ ಅವುಗಳ

ಮಾಡಿಕೊಂಡು ಬಂದಂತಿದ್ದ, ರೆಕ್ಕೆಪುಕ್ಕವನ್ನೆಲ್ಲ ಕೆಪ್ಪನೆ ಕೆದರಿ ಹಾಕಿ ಮಕಾಡೆ ಕೆಡವುತ್ತಲೇ ಓಡಿ ಹೋಗಿ ಈಗಾಗಲೇ ಸೋತು ಸುಣ್ಣವಾಗಿರುತ್ತಿದ್ದ. ಗಿಣಿಗಳನ್ನೆತ್ತಿಕೊಂಡು ಹತ್ತಿ ಬುಟ್ಟಿಯೊಳಗಿಟ್ಟುಕೊಳ್ಳುತ್ತಿದ್ದ. ನಂತರ ಅವುಗಳನ್ನು ತನ್ನಣತಿಗೆ ಕುಣಿಯುವ ಮಂಗಗಳಂತೆ ಪಳಗಿಸಿಟ್ಟುಕೊಂಡು ಎಲ್ಲೆಲ್ಲಿಂದಲೋ

ಬರುತ್ತಿದ್ದ ಶಾಸ್ತ್ರದವರಿಗೆ ಮಾರುವ ಕಾಯಕವನ್ನು ನಿಷ್ಠೆಯಿಂದ ಮಾಡುತ್ತಿದ್ದ, ಅತ್ತ ಹೆಣ್ಣು ಗಿಣಿಯೂ ಇಲ್ಲದೆ, ಪುಕ್ಕ ಕೆದರಿಕೊಂಡು ಮಂಕಾಳಿಯ ಬುಟ್ಟಿ ಸೇರುತ್ತಿದ್ದ ಕಾಮವನ್ನೇ ನೆತ್ತಿಗೆ ಹತ್ತಿಸಿಕೊಂಡಿರುತ್ತಿದ್ದ. ಗಿಣಿಗಳೇ ಮುಂದ್ಯಾವತ್ತೋ ಒಂದು ದಿನ ಇವನಿಂದ ಕೈ ಬದಲಿಸಿಕೊಂಡು ಯಾವುದೋ ಊರಿನ ಮರದ ಕೆಳಗೆ ಇನ್ಯಾರೋ ಗಿಣಿಶಾಸ್ತ್ರದವರು ಇಡುತ್ತಿದ್ದ ಗಿಣಿಮನೆಯೊಳಗೆ ಅವರು ಹಾಕಿದ ಪುಡಿ ಹಣ್ಣುಗಳನ್ನು ತಿಂದುಕೊಂಡು ಶಾಸ್ತ್ರದ ಕಾರ್ಡು ಎತ್ತಿಕೊಂಡು ಅಬ್ಬೇಪಾರಿಗಳಂತೆ ಹೊಟ್ಟೆ ಹೊರೆಯುತ್ತಿದ್ದವು.

ಒಂದು ಗಿಣಿ ಬೇಟೆ ಮುಗಿದ ನಂತರ ಎರಡು ತಿಂಗಳು ಮಂಕಾಳಿ ಎರವಾಡಿಯ ಕಾಡಿನೊಳಕ್ಕೆ ಮುಖ ಹಾಕುತ್ತಿರಲಿಲ್ಲ. ಅಷ್ಟರೊಳಗೆ ಗಿಣಿಗಳು ಮೊಟ್ಟೆಯಿಟ್ಟು ಮರಿಗಳು ದೊಡ್ಡವಾಗಿ ಆಗಷ್ಟೇ ಹಾರಲು ಕಲಿತುಕೊಂಡು ತಾವಿರುವ ಕಾಡಿನ ಕಾನೂನು ಅರ್ಥವಾಗದೆ ನೀಲಗಿರಿ ಮರಗಳ ಬೀಜದ ಕಾಯ ತಿಂದುಕೊಂಡು ಎಲ್ಲೆಂದರಲ್ಲಿ ಪೋಲಿ ತಿರುಗುತ್ತಿದ್ದವು. ಇದೇ ಹೊಸ ಗಿಣಿಗಳು ಯಾಮಾರಿ ಮಂಕಾಳಿಯ ಬುಟ್ಟಿ ಪಾಲಾಗುತ್ತಿದ್ದವು. ಹೆಣ್ಣು ಗಿಳಿಗಳನ್ನು ಕೂಡಿಕೊಳ್ಳುವ ಮುನ್ನ ಗಂಡು ಗಿಳಿಗಳು ಕೊಂಬೆಕಡ್ಡಿಯೊಂದನ್ನು ಮುರಿದುಕೊಂಡು ಎಡಗಾಲಿನಲ್ಲಿ ಆ ಸೌದೆಕಡ್ಡಿಯನ್ನು ಮರದ ರೆಂಬೆಗೆ ಲಟಲಟನೆಂದು ಶ್ರಾವ್ಯವಾಗಿ ಬಡಿಯುತ್ತ ತಿಕ್ಕಲು ಹಿಡಿದಂತೆ ಪಂಗುಪಂಗೆಂದು ಕುಣಿಯುವುದನ್ನು ನೋಡಲು ಮಂಕಾಳಿಗೆ ಎಲ್ಲಿಲ್ಲದ ಆನಂದವಾಗುತ್ತಿತ್ತು. ಇಂತಹ ನಿರುಪದ್ರವಿ ತೀಟೆಗಳೊಂದಿಗೆ ಆನಂದಮಯ ಕಾಲಘಟ್ಟದಲ್ಲಿ ತಾನಾಯ್ತು ತನ್ನ ಗಿಣಿಗಳಾಯ್ತು ಎಂದು ಮಂಕಾಳಿ ರಾಜನಂತೆ ಮೆರೆಯುತ್ತಿದ್ದನಲ್ಲ ... ಅದೇ ಸಮಯಕ್ಕೆ ದೆಹಲಿಯಲ್ಲಿ ಪ್ರಾಣಿಪ್ರಿಯ ಮೇನಕಮ್ಮ ಜಡಿಯುತ್ತಿದ್ದ ಥರೇವಾರಿ ಪಿಐಎಲ್ ಕೇಸುಗಳಿಂದ ಬೇಸತ್ತ ಕೇಂದ್ರ ಸರ್ಕಾರವು ವನ್ಯಜೀವಿ ಸಂರಕ್ಷಣ ಕಾಯ್ದೆಯ ಶೆಡ್ಯೂಲ್ ನಾಲ್ಕಕ್ಕೆ ತಿದ್ದುಪಡಿ ತಂದಿಟ್ಟುಬಿಟ್ಟಿತ್ತು . ಅದರಂತೆ ಹಾವುಪಾವು ಗಿಣಿಪಣಿಗಳು ಮನುಷ್ಯರು ಬೆವರು ಸುರಿಸಿ ಕಷ್ಟಪಟ್ಟು ರಕ್ಷಿಸಬೇಕಾದ ವನ್ಯಜೀವಿಗಳ ಪಟ್ಟಿಗೆ ಹಾರಿಹೋಗಿದ್ದವು. ಗಿಣಿ ಸಾಕಣೆ ಮತ್ತವುಗಳನ್ನು ಗೂಡುಗಳೊಳಗೆ ಬಂಧಿಸಿಡುವುದು ಶಿಕ್ಷಾರ್ಹ ಅಪರಾಧವೆಂಬ ಕುಣಿಕೆಯನ್ನು ಅರಣ್ಯ ಇಲಾಖೆಯವರು ಯಾವಾಗ ಬೀದಿಯಲ್ಲಿ ಒಂದು ಟವೆಲ್ಲು ಹಾಸಿಕೊಂಡು ಗಿಣಿಗೂಡಿಟ್ಟುಕೊಂಡು ಚಿಲೊಕಾಸು ದುಡಿಯುತ್ತಿದ್ದ ಗಿಣಿಶಾಸ್ತ್ರದವರ ಕುತ್ತಿಗೆಗೆ ಬಿಗಿಯತೊಡಗಿದರೋ ಅಲ್ಲಿಂದ ಮಂಕಾಳಿಯ ಪಾರಂಪರಿಕ ಕುಲಕಸುಬು ನಾಲಿಗೆ ನೆಲಕ್ಕೆ ಹಾಕಿ ತೇಕತೊಡಗಿತ್ತು.

ಪಾರಂಪರಿಕವಾಗಿ ತನ್ನ ಕುಲದವರು ಗಿಣಿಗಳನ್ನು ನಂಬಿಕೊಂಡು ಬದುಕುತ್ತಿದ್ದ ಹೊತ್ತಿನಲ್ಲಿ ತಿಕ ತೊಳೆಯಲೂ ಕೈಯೆಟುಕದಿದ್ದ ಕಾನೂನುಕೋರರು ಇದೀಗ ತನ್ನೆದುರು ಕತ್ತಿಗಳನ್ನು ಆಡಿಸುತ್ತ ಜೊಂಯ್ಯು ಜೊಂಯ್ಯನೆ ಕುಣಿದಾಡುತ್ತಿರುವುದನ್ನು ಕೆಂಡಗಣ್ಣಿನಲ್ಲೇ ನೋಡುತ್ತಿದ್ದ ಮಂಕಾಳಿಯತ್ತ ಗಿಣಿಶಾಸ್ತ್ರದವರು ಪಳಗಿದ ಗಿಣಿಯ ಖರೀದಿಗೆ ಬರುವುದು ಕ್ರಮೇಣ ನಿಂತು ಹೋಗಿತ್ತು. ಬಿಡುಬೀಸಾಗಿ ಕಿಂಗು ಸಿಗರೇಟು ಹಿಡಿಯುತ್ತಿದ್ದ ಮಂಕಾಳಿಯ

ಬೆರಳುಗಳ ಮಧ್ಯೆ ಯಂಗಟೇಸ ಬೀಡಿ ಬಂದು ಹಲ್ಲುಗಿಂಜಿಕೊಂಡು ಕುಳಿತುಕೊಂಡಿತ್ತು. ಸಿಂಗಪೂರು ದೇಶದ ಸೆರಾಂಗೂನ್ ರೋಡಿನಲ್ಲಿ ತನ್ನ ಷಡ್ಡಕನೊಬ್ಬ ಗಿಣಿಶಾಸ್ತ್ರ ಹೇಳುತ್ತ ವರ್ಷಕ್ಕೊಮ್ಮೆ ಕಂತೆಗಟ್ಟಲೆ ದುಡ್ಡು ತರುವುದನ್ನು ನೋಡಿದ್ದ ಮಂಕಾಳಿಗೆ ತಾನು ಸಿಂಗಪೂರು ದೇಶದಲ್ಲಾದರೂ ಹುಟ್ಟಬೇಕಿತ್ತು ಎಂದು ಎಷ್ಟೋ ಸಲ ಅನಿಸುತ್ತಿತ್ತು. ಇತ್ತ ಹೊತ್ತೊತ್ತಿನ ಊಟಕ್ಕೂ ಪರದಾಡುವಂತಹ ಸ್ಥಿತಿಗೆ ಕೆಲವರು ಬೇರೇನೂ ಕೆಲಸ ಗೊತ್ತಿಲ್ಲದೆ ಮನೆಗಳ್ಳತನಕ್ಕೂ ಇಳಿದು ಜೈಲುಪಾಲಾದ ಘಟನೆಗಳೂ ನಡೆಯುತ್ತಿದ್ದವು. ಇಂಥಹ ಸ್ಥಿತಿಯಲ್ಲಿ ಗಿಣಿ ವ್ಯಾಪಾರವೇ ಇಲ್ಲದ ನೊಣ ಹೊಡೆಯುವ ಫುಲ್‌ಟೈಂ ಉದ್ಯೋಗಕ್ಕೆ ನೂಕಲ್ಪಟ್ಟ ಮಂಕಾಳಿಯು ಆಗಿದ್ದಾಗಲೆಂದು ಒಂದು ದಿನ ಎದ್ದು ಹೋದವನೇ ಗೋಳಿಕಾವಿನ ಗದ್ದೆಗಳಲ್ಲಿ ಓಡಾಡಿಕೊಂಡಿದ್ದ ಬೆಳ್ಳಿಲಿ ಹೆಗ್ಗಣಗಳನ್ನು ಹಿಡಿದು ತಂದು ತನ್ನ ಗಿಣಿತರಬೇತು ಶಾಸ್ತ್ರವೆಲ್ಲವನ್ನೂ ಇವುಗಳ ಮೇಲೆ ಪ್ರಯೋಗಿಸಲು ಶುರುವಿಟ್ಟಿದ್ದ. ಒಂದೆರೆಡು ತಿಂಗಳುಗಳಲ್ಲಿಯೇ ಅವುಗಳ ಗುಣಸ್ವಾಭಾವ, ಜೈವಿಕ ಬದುಕು, ಇತ್ಯಾದಿಯೆಲ್ಲವನ್ನು ತಿಳಿದುಕೊಂಡು ಪಳಗಿದ ನಂತರ ಅವುಗಳನ್ನು ಬೆರಳಸದ್ದಿನ ಸೂಚನೆಗೆ ಕಾರ್ಡೆತ್ತಿಕೊಡುವಂತೆ ತಯಾರಿಸಿಟ್ಟುಕೊಂಡು ಹಳೇಗಿರಾಕಿಗಳನ್ನು ಹುಡುಕುಡುಕಿ ಅವುಗಳನ್ನು ಕಡಿಮೆ ರೇಟಿಗೆ ಮಾರಿ ಗಿಣಿಶಾಸ್ತ್ರ ಹೋದ್ರೆ ಶ್ಯಾಟ ಒಂದೋಯ್ತು ಇಲಿಶಾಸ್ತ್ರ ಹೇಳೋ ಎಂದು ಪಳಗಿದ ಇಲಿಗಳ ಮೂಲಕ ಕಾರ್ಡುಗಳನ್ನು ತೆಗೆಸಿ ನಿರೂಪಿಸಿದ್ದ. ಗಿಣಿಶಾಸ್ತ್ರಕ್ಕೆ ೧೦ ರೂಪಾಯಿಯ ಬದಲು ಮೂಷಿಕ ಶಾಸ್ತ್ರಕ್ಕೆ ೩೦ ರೂಪಾಯಿ ಕೇಳಬಹುದು ಎಂಬ ಐನಾತಿ ಐಡಿಯಾವನ್ನು ಅವರಿಗೆ ತುಂಬಿಸಿ ತನ್ನ ಕೆಲಸಕ್ಕೆ ಮಾರುಕಟ್ಟೆಯನ್ನು ಕುದುರಿಸಿಕೊಂಡು ಬಿದ್ದೇ ಹೋಗಿದ್ದ ಅವನ ಬದುಕನ್ನು ಮತ್ತೆ ಎತ್ತಿ ನಿಲ್ಲಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದನು.

ಇವೆಲ್ಲವೂ ನಡೆದಿದ್ದ ಹೊತ್ತಿನಲ್ಲೇ ಚೆಂಗಾವಿಯೊಳಗೆ ಇಲಿಕಾಟವೂ ಅಲಲಲಲ ಎಂದು ಎದ್ದು ಕುಳಿತುಬಿಟ್ಟಿತ್ತು. ಇತ್ತ ಕೃಷಿ ವಿಶ್ವವಿದ್ಯಾಲಯದ ಇಲಿ ನಿಯಂತ್ರಣ ವಿಭಾಗದ ಮುಖ್ಯಸ್ಥ ಪುಗಳೇಂದಿಯು ಕೊಟ್ಟ ಫಿಲಿಪೈನ್ಸ್ ಗಿಡದ ಪರಿಹಾರವನ್ನೂ ಕೃಷಿ ಅಧಿಕಾರಿಗಳು ಮೂಸುನೋಡದ ಪರಿಣಾಮವಾಗಿ, ಚೆಂಗಾವಿಯ ಇಲಿ ಕಾಟಕ್ಕೆ ಗೋಡೆ ಕಟ್ಟುವುದು ಹೇಗೆಂದು ಪುಗಳೇಂದಿಯು ವಿಪರೀತವಾಗಿ ತಲೆಕೆಡಿಸಿಕೊಂಡಿದ್ದನು. ಅದೇ ಸಮಯಕ್ಕೆ ಇಲಿಗಳನ್ನು ಪಳಗಿಸುವಲ್ಲಿ ಎತ್ತಿದ ಕೈನವನಾಗಿದ್ದ ಮಂಕಾಳಿಯ ಬಗ್ಗೆ ಇವನ ಕಿವಿಗೆ ಬಿದ್ದು ಅವನೊಟ್ಟಿಗೆ ಮಾತನಾಡಲಾಗಿ ಇಲಿ ಹೆಗ್ಗಣಗಳಂತಹ ಪ್ರಾಣಿಗಳ ಜೈವಿಕ ವಿವರಗಳನ್ನು ಅಮೂಲಾಗ್ರವಾಗಿ ಅರೆದು ಕುಡಿದಂತಿದ್ದ ಮಂಕಾಳಿಯೇ ಈ ಸಮಸ್ಯೆ ಪರಿಹಾರಕ್ಕೆ ತಕ್ಕನಾದವನಾಗಿ ಅವನನ್ನು ಕೃಷಿ ಅಧಿಕಾರಿಗಳ ಕೊರಳಿಗೆ ಗಂಟು ಹಾಕಿ ಕೈ ತೊಳೆದುಕೊಂಡಿದ್ದನು. ಅದರಂತೆ ಚೆಂಗಾವಿಯ ಗದ್ದೆಗಳಲ್ಲಿ ಬಾವುಟ ನೆಟ್ಟಿರುವ ಇಲಿಗಳನ್ನು ನಿಯಂತ್ರಿಸಲು ಮಂಕಾಳಿಗೆ ಅರ್ಜಿ ಹಾಕದೆಯೂ ಸರ್ಕಾರಿ ಟೆಂಡರು ಸಿಕ್ಕಿತ್ತು. ಗದ್ದೆಗಿಟ್ಟು ರೇಟು ಎಂದು ಮಾತನಾಡಿಕೊಂಡ ಮಂಕಾಳಿಯು ನಂತರ ತನ್ನ ಇಲಿ ಶಿಕಾರಿಗೆ ಮೊದಲಿಟ್ಟಿದ್ದ. ಮೊದಲಿಗೆ ಗದ್ದೆಯ ಬದುಗಳು, ಮತ್ತು ದೂರದ

ಮರದ ಬುಡಗಳಲ್ಲಿ ಇರಬಹುದಾದ ಇಲಿ ಬಿಲಗಳನ್ನು ಪತ್ತೆ ಹಚ್ಚುತ್ತಿದ್ದ ಅವನು, ನಂತರ ಒಂದೊಂದೇ ಬಿಲವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಇಲಿಗಳು ಪ್ರವೇಶಕ್ಕೆಂದು ಒಂದು ಮುಖ್ಯ ಬಿಲದ ಬಾಗಿಲನ್ನು ಇಟ್ಟಿದ್ದರೆ, ಅಪಾಯದ ಸಂದರ್ಭದಲ್ಲಿ ಪರಾರಿಯಾಗಲು ಐದಾರು ಕಡೆಗಳಲ್ಲಿ ನಿರ್ಗಮನ ಬಾಗಿಲುಗಳನ್ನು ತೋಡಿಕೊಂಡಿದ್ದವು. ಒಂದೇಟಿಗೆ ನೋಡಿದರೆ ಐದಾರು ಇಲಿ ಬಿಲಗಳಂತೆ ಕಾಣುತ್ತಿದ್ದ ಅವುಗಳಲ್ಲಿ ಬಿಲದ ಪ್ರವೇಶ ದ್ವಾರವನ್ನು ಇಲಿ ಹೆಜ್ಜೆಗಳ ಗುರುತಿನ ಮೇಲೆ ಪತ್ತೆ ಹಚ್ಚುತ್ತಿದ್ದ. ಅದೊಂದನ್ನು ಹೊರತುಪಡಿಸಿ ಉಳಿದ ಎಲ್ಲ ತುರ್ತು ನಿರ್ಗಮನ ಬಿಲದ್ವಾರಗಳನ್ನು ಮಣ್ಣಲ್ಲಿ ಮುಚ್ಚಿ ತಪ್ಪಿಸಿಕೊಳ್ಳಲು ಒಂದೇ ದ್ವಾರವನ್ನು ಬಿಟ್ಟವನೇ ಒಂದು ಮಡಕೆಯ ತಳಕ್ಕೆ ಎಂಟಾಣೆ ಗಾತ್ರದ ತೂತು ಕೊರೆದು ಮಡಕೆಯೊಳಗೆ ನೀಲಗಿರಿಮರದ ಎಣ್ಣೆಭರಿತ ಎಲೆ ಪುಳ್ಳೆಗಳನ್ನು ತುಂಬಿ ಬೆಂಕಿಯಿಟ್ಟು ಹೊಗೆಯೆಬ್ಬಿಸುತ್ತಿದ್ದನು. ಮಡಕೆಯ ದೊಡ್ಡ ಬಾಯನ್ನು ಇಲಿ ಬಿಲಕ್ಕೆ ಅಡ್ಡಲಾಗಿ ಮುಚ್ಚಿ ಮಡಕೆಯ ತಳಕ್ಕಿದ್ದ ತೂತಿನಿಂದ ಉಪುಉಪ್ಪೆಂದು ಆ ಹೊಗೆಯನ್ನು ಬಿಲದ ಅಭಿಮುಖವಾಗಿ ಊದಿ ಊದಿ ಇಲಿಗಳನ್ನು ಕುಸ್ತಿಗೆ ಕರೆಯುತ್ತಿದ್ದ. ಇದೇನೋ ವರಾತವಾಗಿದೆಯಲ್ಲ ಎಂದು ನಿರ್ಗಮನ ದ್ವಾರಗಳತ್ತ ಓಡುತ್ತಿದ್ದ ಬಿಲದೊಳಗಿನ ಇಲಿಗಳಿಗೆ ಯಾವ ತುರ್ತು ನಿರ್ಗಮನವೂ ಲಭ್ಯವಿಲ್ಲದ ಹೊಗೆಗೆ ಸಿಕ್ಕೆ ಒಂದಷ್ಟು ಇಲಿಗಳು ಸಾಯುತ್ತಿದ್ದವು.

ಹೊಗೆಯ ನಡುವೆಯೂ ಬದುಕಿ ತೊಡೆತಟ್ಟಿಕೊಂಡು ಪ್ರವೇಶದ್ವಾರದ ಮೂಲಕವೇ ಪುಳಪುಳನೆ ಓಡಿಬರುತ್ತಿದ್ದ ಇಲಿಗಳನ್ನು ಕುಕ್ಕರುಗಾಲಿನಲ್ಲಿ ಕುಳಿತು ಕಾಯುತ್ತಿದ್ದ ಮಂಕಾಳಿಯು ಹಲಗೆಯೊಂದರಿಂದ ಭೈಡುಭೈಡು ಚಚ್ಚುತ್ತಿದ್ದ. ಬಿದ್ದ ಏಟುಗಳಿಗೆ ಸತ್ತ ಇಲಿಗಳನ್ನು ಒಂದೆಡೆ ರಾಶಿ ಹಾಕಿಕೊಂಡು ಮತ್ತೆ ಹಲಗೆ ಹಿಡಿದು ಬಿಲನೋಡುತ್ತ ಕೂರುತ್ತಿದ್ದ. ಬಿಲದೊಳಗಿನ ಸೈನ್ಯವೆಲ್ಲ ಖಾಲಿಯಾದ ಮೇಲೆ ಬಿಲದ ಎಲ್ಲ ಬಾಗಿಲುಗಳೂ ಹಬ್ಬಿದ ಕಡೆಯೆಲ್ಲ ನೆಲದ ಮೇಲೆ ಕಡ್ಡಿಯಲ್ಲಿ ಗೀಟು ಹಾಕುತ್ತಿದ್ದ ಅವನು ಗೀರುಹೋದ ಕಡೆಯಲ್ಲೆಲ್ಲ ನಾಜೂಕಾಗಿ ಪಿಕಾಸಿಯಲ್ಲಿ ಅಗೆದು ಇಲಿಬಿಲದ ನಕ್ಷೆಯನ್ನು ಕಲ್ಲಂಗಡಿಯನ್ನು ಎರಡು ಹೋಳು ಮಾಡಿದಂತೆ ಬಿಡಿಸಿ, ಇಲಿಗಳು ತನ್ನ ಬಿಲದೊಳಗೇ ಇರುವ ಪ್ರತ್ಯೇಕ ಉಗ್ರಾಣಗಳಲ್ಲಿ ಶೇಖರಿಸಿಟ್ಟುಕೊಂಡಿದ್ದ ಹಾಲುಭರಿತ ಧಾನ್ಯ, ಭತ್ತ, ತೆನೆಕಾಳುಗಳನ್ನು ಆಯ್ದು ಚೀಲಕ್ಕೆ ತುಂಬಿಕೊಂಡು ಸತ್ತ ಇಲಿಗಳ ಬಾಲಗಳ ಗೊಂಚಲು ಹಿಡಿದು ಇನ್ನೊಂದು ಬಿಲವನ್ನು ಹುಡುಕುತ್ತ ಹೊರಟುಬಿಡುತ್ತಿದ್ದನು. ಬಸುರಿ ಬಾಣಂತಿ ಹೆಣ್ಣು ಇಲಿಗಳೆಂದೇ ಒಂದು ಒಳಕೋಣೆ, ಓಡಾಡಲೆಂದು ಕಾಲುದಾರಿಯಂತಹ ಸುರಂಗ, ಯಾವ ಕಾಲಕ್ಕೂ ಧಾನ್ಯಗಳು ಕೆಡಾದಂತೆ ವ್ಯವಸ್ಥೆಗೊಳಿಸಿದ ಬಿಲದೊಳಗಿನ ಉಗ್ರಾಣಕ್ಕೆ ಸೆಪರೇಟು ವ್ಯವಸ್ಥೆ ಇರುವ ಇಂತಹ ನೆಲದ ಗೂಡುಗಳನ್ನು ಕಟ್ಟಿಕೊಂಡಿದ್ದ ಇಲಿಗಳು ಮಂಕಾಳಿಗೆ ಗಿಣಿಗಳಿರಲಿ, ಮನುಷ್ಯರಿಗಿಂತ ದೊಡ್ಡ ಜೀವಗಳಂತೆ ಅಚ್ಚರಿ ತಂದಿದ್ದವು.

ಹೀಗೆ ಇಲಿಬಿಲದೊಳಗಿನ ಡಿಪೋಗಳಿಂದ ಮಂಕಾಳಿ ಶೇಖರಿಸುತ್ತಿದ್ದ ರೇಷನ್ನೇ ದಿನಕ್ಕೆ ೭ ರಿಂದ ೮ ಕೆ.ಜಿ.ಯಷ್ಟು ಆಗುತ್ತಿತ್ತು. ಸತ್ತ ಇಲಿಗಳನ್ನು ಇರುಳರ ಜನಗಳಿಗೆ ಕೊಟ್ಟು ಅವನ ಪಾಡಿಗವನು ನಡೆದುಬಿಡುತ್ತಿದ್ದನು. ಬಾಯಿ ಚಪ್ಪರಿಸಿಕೊಂಡು ಇಲಿ ತಿನ್ನುವುದನ್ನು ಕಾಲಾನುಕಾಲದಿಂದ ಕಲಿತಿದ್ದ ಇರುಳರು ಮಂಕಾಳಿ ಕೊಟ್ಟು ಹೋದ ಇಲಿಗಳನ್ನು ಕೆಂಡದ ಮೇಲೆ ಸುಟ್ಟು ಅದರ ಚರ್ಮದ ಕೂಲದನ್ನು ಸುಟ್ಟು ಕ್ರುಂ ಕ್ರುಂ ಎನ್ನುವಂತೆ ಬೇಯ್ದಿರುತ್ತಿದ್ದ ಇಲಿಗಳ ಕಾಲನ್ನು ಆಸೆಯಿಂದ ತಿಂದು ಕೋಳಿ ಕುಯ್ದಂತೆ ಇಲಿಯನ್ನು ಕುಯ್ದು ಸಾರು ಮಾಡಿಕೊಂಡು ತಿನ್ನುತ್ತಿದ್ದರು. ಇಲಿ ಶಿಕಾರಿಗೆ ದುಡ್ಡಿಗೆ ದುಡ್ಡು ರೇಷನ್ನಿಗೆ ರೇಷನ್ನು ಸತ್ತ ಇಲಿಗಳು ಇರುಳರ ಹೊಟ್ಟೆಗೆಂದು ಸಿಕ್ಕಿದ್ದ ಮಜಬೂತಾದ ಕೆಲಸವನ್ನು ಅವನು ಅಚ್ಚುಕಟ್ಟಾಗಿ ನಿರ್ವಹಿಸುತ್ತ ಚೆಂಗಾವಿಯ ರೈತರಿಗೆ ಕಿಂದರಿಜೋಗಿಯೂ ಆಗಿ ರೂಪಾಂತರಗೊಂಡಿದ್ದನು. ಒಮ್ಮೊಮ್ಮೆ ತಮ್ಮ ಬದುಕನ್ನೇ ತುಂಡರಿಸಿ ತಿನ್ನುತ್ತಿರುವ ಇಲಿಗಳ ಶಿಕಾರಿಗೆಂದು ದೇವರೇ ಏನಾದರೂ ಮಂಕಾಳಿಯ ಕೈಗೆ ತೂತು ಮಡಕೆ ಕೊಟ್ಟು ಕಳಿಸಿದನೇನೋ ಎಂದು ಚೆಂಗಾವಿಯ ರೈತರು ಕಕ್ಕಾಬಿಕ್ಕಿಯಾಗುವಷ್ಟರ ಮಟ್ಟಿಗೆ ಮಂಕಾಳಿ ರಾತ್ರೋರಾತ್ರಿ ಇಲಿ ಶಿಕಾರಿಗೆ ಫೇಮಸ್ಸಾಗಿ ಹೋಗಿದ್ದನು.

ಎಲ್ಲವೂ ನೆಟ್ಟಗೆ ನಡೆಯುತ್ತಿದ್ದ ಹೊತ್ತಿನಲ್ಲಿಯೇ ಮಂಕಾಳಿಗೆ ಇದು ತನ್ನೊಬ್ಬನಿಂದ ಆಗುವ ಕೆಲಸವಲ್ಲವೆಂಬುದು ಮನದಟ್ಟಾಗಲು ತುಂಬ ದಿನಗಳೇನೂ ಹಿಡಿಯಲಿಲ್ಲ. ಅದಕ್ಕೆಂದು ಇರುವುದನ್ನು ಬಿಟ್ಟು ಬೇರೊಂದು ಹಿಡಿದು ಬದುಕಲು ಶುರುವಿಟ್ಟಿದ್ದ . ಹಾವುಗೊಲ್ಲರು, ದೊಂಬರು, ಕೊರಚರು, ಕೊರಮರಿತ್ಯಾದಿಯೆಲ್ಲರ ನಡುವೆ ಏನೂ ಮಾಡಲಾಗದೆ ನಿಂತಲ್ಲೇ ನಿಂತವರೂ ಇದ್ದರು. ಅದರಲ್ಲಿ ಇರುಳರ ನಂಬೀಸ ಮತ್ತವನ ಜನ, ಗೊತ್ತಿದ್ದ ಕಸುಬನ್ನು ಪ್ರಯೋಗಿಸಲು ಎಜುಕೇಟೆಡ್ಡು ಬೇಕೂಫರು ಕಟ್ಟಿದ್ದ ಗೋಡೆ ಹಾರುವ ಯಾವ ವಿದ್ಯೆಯೂ ಗೊತ್ತಿಲ್ಲದ ತಳಮಳಿಸುತ್ತಿದ್ದ ಹಾವಾಡಿಗರ ರಫೀಕು ಮತ್ತವನ ಜನರನ್ನು ಕಂಡಾಗಲೆಲ್ಲ ಮಂಕಾಳಿಗೆ ಅವರ ಹಸಿರು ತುಂಬಿದ ಮುಖಗಳು ಆತ್ಮವನ್ನೇ ಇರಿಯುವ ಚೂರಿಗಳಂತೆ ಕಾಣುತ್ತಿದ್ದವು.

ಅವರೆಲ್ಲರನ್ನೂ ಒಂದೆಡೆ ಕಲೆಹಾಕಿ "ಹಿಂಗಿಂಗೆ ಹಿಂಗಿಂಗೆ ಇಲಿ ಹಿಡಿಯಕ್ಕೆ ಬತ್ತಿರೇನಪ್ಪ ಹೊಟ್ಟೆಗೂ ಕಾಸಿಗೂ ಮೋಸ ಇಲ್ಲ" ಎಂದ ಕೂಡಲೇ ಸರ್ವಾನುಮತದಿಂದ ಒಪ್ಪಿಕೊಂಡ ಅವರು ಮಂಕಾಳಿಯ ಇಲಿ ನಿಯಂತ್ರಣ ಪಡೆಯ ಸದಸ್ಯರಾಗಿ ಸೇರ್ಪಡೆಗೊಂಡಿದ್ದರು. ಬರುವ ದುಡ್ಡನ್ನು ಕೂಡಿಟ್ಟು ಕೈಗಿಡಲು ಮಂಕಾಳಿಗೆ ಹುಟ್ಟಿದ ಯಾವ ಪಿಳ್ಳೆ ಪಿಸಗಗಳೂ ಇರಲೇ ಇಲ್ಲವಾದ್ದರಿಂದ ಇಲ್ಲದವರೊಡನೆ ಹಂಚಿಕೊಂಡು ತಿನ್ನುವ ಸಮಾಜವಾದಕ್ಕೆ ಅವನು ತಲೆಬಗ್ಗಿಸಿದ್ದನು. ಮಂಕಾಳಿಯ ಮೂಲಕ ಇಲಿಬೇಟೆಯ ವಿದ್ಯೆಯನ್ನು ಯಶಸ್ವಿಯಾಗಿ ಮುಗಿಸಿದ ನಂಬೀಸ ಮತ್ತು ರಫೀಕನ ಜನಗಳು ಕೆಲಸಕ್ಕೆ ಸಂಬಳವನ್ನೂ ಇಲಿಬಿಲದ ರೇಷನ್ನನ್ನೂ ಇಲಿಮಾಂಸವನ್ನೂ ಪಡೆಯುವಂತಾದರು. ಇಷ್ಟರಲ್ಲೇ ಚೆಂಗಾವಿಯ ಯಶಸ್ವಿಯ ಇಲಿ

ನಿಯಂತ್ರಣದ ಕಥೆಗಳು ರೆಕ್ಕೆಪುಕ್ಕ ಕಟ್ಟಿಕೊಂಡು ಸುತ್ತಮುತ್ತಲೂರುಗಳಿಗೂ ಎಗರಿಕೊಂಡ ಪರಿಣಾಮವಾಗಿ ಆ ಊರುಗಳ ಕೃಷಿ ವಿಭಾಗೀಯ ಕಛೇರಿಗಳಿಗೂ ಅಲ್ಲಲ್ಲಿನ ರೈತರು ಚೆಂಗಾವಿಯ ಇಲಿ ಪ್ರಯೋಗವನ್ನು ತಮ್ಮ ಹೊಲಗಳ ಮೇಲೂ ಪ್ರಯೋಗಿಸಬೇಕೆಂಬ ಒತ್ತಡ ಕಿತ್ತುಕೊಂಡಿತ್ತು. ಕೃಷಿ ವಿಶ್ವವಿದ್ಯಾಲಯದ ಇಲಿ ಸಂಶೋಧಕ ಪುಗಳೇಂದಿಯ ಶಿಫಾರಸ್ಸಿನಂತೆ ಮಂಕಾಳಿಯ ತಂಡಕ್ಕೆ ಬೇರೆ ಊರುಗಳ ಇಲಿ ಟೆಂಡರೂ ಸಿಕ್ಕು ಚೆಂಗಾವಿಯಲ್ಲಿ ಒಂದಷ್ಟು ತಿಂಗಳ ಕೆಳಗೆ ಎಡಗಾಲ ಚಪ್ಪಲಿಯೋಪಾದಿಯಲ್ಲಿ ನೋಡಲ್ಪಡುತ್ತಿದ್ದ ಪುನರ್ವಸಿತರು ಇದ್ದಕ್ಕಿದ್ದಂತೆ ಗದ್ದೆ ಇಲಿಗಳನ್ನು ಠಣ್ಣನೆ ಮಾಯ ಮಾಡುವ ಶಕ್ತಿಯಿರುವ ಮಂತ್ರದ ಮಡಕೆಯಿಟ್ಟುಕೊಂಡಿರುವ ಕಲ್ಲುದೇವರಂತೆ ನೋಡಲ್ಪಡ ತೊಡಗಿದರು.

ಆವತ್ತಿನಿಂದ ಮಂಕಾಳಿಯ ಇಲಿಹರಣ ಪಡೆಯ ಸದಸ್ಯರು ಇಲಿಯಬಾಲದ ಗೊಂಚಲುಗಳನ್ನು ಹಿಡಿದು ಖುಷಿ ಖುಷಿಯಿಂದ ಓಡಾಡುವುದನ್ನು ಮಂಕಾಳಿ ಎಷ್ಟು ಹೆಮ್ಮೆಯಿಂದ ನೋಡುತ್ತಿದ್ದನೆಂದರೆ, ಅವನ ಗಿಣಿ ಯಾಪಾರ, ಕುಲಪರಂಪರೆಯ ಘನತೆ, ಜಮ್ಮೈಕಾದೇಶದ ಗಿಣಿಸಾಮ್ರಾಜ್ಯದ ಕೊನೆಯ ಸಂತತಿಯೆಂಬ ಹೆಮ್ಮೆ . ಇವೆಲ್ಲವುಗಳಿಗಿಂತಲೂ, ಕೆಲಸದ ಮುಗಿದ ಮೇಲೆ ರಾತ್ರಿ ಹೊತ್ತು ಇರುಳರ ನಂಬೀಸನು ಬೇಯಿಸಿ ಹಾಕುವ ಇಲಿಮಾಂಸದೂಟದ ಪರಿಮಳವೇ ದೊಡ್ಡದೆಂದು ಕಂಡಿತ್ತು. ಆದರೆ ಈಗ ದಕ್ಕಿಸಿಕೊಂಡಿರುವ ಕೆಲಸ ಮತ್ತು ಘನತೆಯ ಬಹಳ ಕಾಲ ಉಳಿಯುವಂಥದ್ದಲ್ಲ. ಇಲಿ ಕಾಟ ಇರುವತನಕ ಮಾತ್ರ ತಮ್ಮ ಪ್ರಾಮುಖ್ಯತೆಗೆ ಅಸ್ತಿತ್ವವಿದ್ದು, ಒಂದೊಮ್ಮೆ ಇಲಿ ವರಾತವು ಮುಗಿಯಿತೆಂದಾದಾಗ ತಮ್ಮ ಕತೆಯೂ ಮುಗಿಯಲಿದೆಯೆಂಬುದನ್ನು ಎಲ್ಲರಿಗಿಂತ ಮೊದಲು ಅರ್ಥ ಮಾಡಿಕೊಂಡಿದ್ದ ಮಂಕಾಳಿಯು ಅದಕ್ಕೂ ಒಂದು ಆಪತ್ಕಾಲದ ಪ್ಲಾನು ಹೊಸೆದುಕೊಂಡಿದ್ದನು.

ಅದರಂತೆ ತಾವು ಎಲ್ಲಿಂದ ಕಸುಬು ಶುರು ಮಾಡಿದ್ದರೋ ಕರೆಕ್ಟಾಗಿ ಅದೇ ಊರಿನ ಗದ್ದೆಗಳಲ್ಲಿ ಕಟಾವಿಗಿಂತ ಮುಂಚೆ ಇಲಿಗಳನ್ನು ಅವನೇ ಬಿಟ್ಟು ಇಲಿ ವರಾತವು ಮತ್ತೆ ಹುಟ್ಟಿಕೊಳ್ಳುವಂತೆ ವ್ಯವಸ್ಥೆ ಮಾಡಿಕೊಂಡಿದ್ದನು. ಅತ್ತ ಒಂದೂರಿನಲ್ಲಿ ಕೆಲಸ ಮುಗಿಯುತ್ತಿದ್ದಂತೆ ಇನ್ನೊಂದೂರಿಗೆ ಕರೆ ಬರುತ್ತಿಲ್ಲ. ಅದೇ ಟೈಮಿಗೆ ಈಗಾಗಲೇ ಹಿಂದೆಯೇ ಬಗೆಹರಿಸಿದ್ದ ಹೊಲಗಳಲ್ಲಿ ಮತ್ತೆ ಇಲಿ ರೋಧನೆ ಶುರುವಾಗುವಂತೆ ನೋಡಿಕೊಳ್ಳುತ್ತಿದ್ದ ಅವನು, ಕೆಲಸದ ಬೇಡಿಕೆ ಮತ್ತು ಪೂರೈಕೆ ಎರಡೂ ಸಮಾನಾಂತರ ರೇಖೆಯಲ್ಲೇ ಎದುರು ಬದುರು ಚಲಿಸುವಂತೆ ವ್ಯವಸ್ಥೆ ಮಾಡಿಕೊಂಡಿದ್ದ. ರೈತರಿಗೆ ಮತ್ತು ಕೃಷಿ ಅಧಿಕಾರಿಗಳಿಗೆ ಯಾವತ್ತೂ ಬೇಕಾದ ಆಪದ್ಬಾಂಧವರಾಗಿ ತನ್ನನ್ನು ಮತ್ತು ತನ್ನ ತಂಡವನ್ನು ಕಟ್ಟಿಕೊಂಡಿದ್ದಕ್ಕೆ ಅವನೊಳಗೆ ತಾವೆಲ್ಲ ಅಪ್ರಸ್ತುತರಾಗುತ್ತೇವೋ ಎಂಬ ದೂರದ ಭಯವೂ ಕಾರಣವಾಗಿತ್ತು . ಒಂದೆಡೆ ಸಮಸ್ಯೆ ಇನ್ನೊಂದೆಡೆ ಪರಿಹಾರವೆಂಬ ಎರಡನ್ನೂ ಜೀವ ಜೀವಂತವಿರಿಸಿಕೊಳ್ಳುವ ಕಿರಾತಕ ಪ್ಲಾನುಗಳನ್ನು ಅತ್ಯಂತ ಯಶಸ್ವಿಯಾಗಿಯೇ ನಡೆಸಿಕೊಂಡು ಬಂದ ಮಂಕಾಳಿಯ ಬಗ್ಗೆ ಮೊದಲ ಡೌಟು ಹುಟ್ಟಿದ್ದೇ ಪುಗಳೇಂದಿಗೆ.

ಒಂದೆಡೆಯಲ್ಲಿ ಕಂಟ್ರೋಲಿಗೆ ಬರುತ್ತಿದ್ದ ಇಲಿ ವರಾತವು ಮತ್ತೊಂದೆಡೆ ಭುಗಿಲೆದ್ದು, ಅದು ಮುಗಿಯುವುದರೊಳಗೆ ಮತ್ತೆ ಮೂಲ ಸಮಸ್ಯೆಯು ಅದರ ಅಷ್ಟೂ ಪ್ರಬಲತೆಯೊಟ್ಟಿಗೆ ಹಳೆವೂರುಗಳಲ್ಲಿ ತೊಡೆತಟ್ಟಿಕೊಂಡು ಎದ್ದು ಕುಳಿತುಕೊಳ್ಳುವುದರ ಹಿಂದೆ ಏನೋ ಇರುವಂತಿದೆಯಲ್ಲ ಎಂಬುದರ ವಾಸನೆ ಹಿಡಿದ ಪುಗಳೇಂದಿಯು ಮಂಕಾಳಿಯನ್ನು ಒಮ್ಮೆ ಕರೆಸಿಕೊಂಡು ಈ ಬಗ್ಗೆ ವಿಚಾರಿಸಿದ್ದನು. ಮಂಕಾಳಿಯ ಬಳಿಯಿಂದ ಅವನ ಖತರನಾಕು ತಂತ್ರವನ್ನು ಬಾಯಿಬಿಡಿಸಿಕೊಂಡ ಪುಗಳೊಂದಿಗೆ ಇದನ್ನು ಯಾವ ನೈತಿಕತೆಯ ತಕ್ಕಡಿಯಲ್ಲಿಟ್ಟು ತೂಗುವುದೆಂಬ ಗೊಂದಲವೆದ್ದಿದ್ದು ನಿಜ. ದೆಹಲಿಯ ಮೇನಕಮ್ಮನ ಪ್ರಾಣಿಪ್ರೇಮವು ಪ್ರಾಣಿಪಕ್ಷಿಗಳನ್ನೇ ಪರಂಪರಾನುಗತವಾಗಿ ನಂಬಿಕೊಂಡು ಬದುಕುತ್ತಿರುವ ಈ ದೇಶದ ಸಾವಿರಗಟ್ಟಲೆ ಸಮುದಾಯಗಳನ್ನು ಬಲಿ ಹಾಕುವುದು ನೈತಿಕತೆಯೋ, ರೈತರು ಮತ್ತು ಸರ್ಕಾರಿ ಅಧಿಕಾರಿಗಳ ಕಣ್ಣಿಗೆ ಒಂದೇ ಸಲ ಮಣ್ಣೆರೆಚುತ್ತಿರುವ ಮಂಕಾಳಿಯ ಇಲಿ ನಿಯಂತ್ರಣ ಯೋಜನೆಯ ತಂತ್ರೋಪಾಯಗಳು ನೈತಿಕತೆಯೂ ಎಂಬ ಬಗ್ಗೆ ಗೊಂದಲಕ್ಕೆ ಬಿದ್ದ ಅವನಿಗೆ ಯಾವುದು ಅರ್ಥವಾಗದಿದ್ದರೂ ಅಕ್ಷರ- ಪುಸ್ತಕಗಳನ್ನು ಹರಿದು ತಿಂದು ಅದನ್ನೇ ಉಸಿರಾಡುವ ಬುದ್ಧಿವಂತರು ಮಂಕಾಳಿಯೆದುರು ಇಟ್ಟ ಬೋನಿಗೆ.. ಯಾವ ಸುಳಿವೂ ಇಲ್ಲದೇ ಅವರೇ ಬಿದ್ದಿರುವುದು ಸ್ಪಷ್ಟವಾಗಿ ಅರ್ಥವಾಗಿತ್ತು .

## ೧೪. ಮುಟ್ಟು

**ಗುರುಪ್ರಸಾದ್ ಕಂಟಲಗೆರೆ**

ಎಡಗಾಲ ಇಳಿಬಿಟ್ಟು, ಬಲಗಾಲು ಮರದ ಬೆಂಚಿನಮೇಲೆ ವಕ್ರವಾಗಿದ್ದು, ದೇಹವ ನಿಗುತುಕೊಂಡಂತೆ ಮಾಡಿಕೊಂಡು ಹರಾಮಾಗಿ ಕುಳಿತುಕೊಳ್ಳ ಬೇಕೆನಿಸಿದರೂ.. ಅದ್ಯಾವುದೋ ದಿವ್ಯಶಕ್ತಿ ಚಲುವನು ಹಾಗೆ ಮಾಡುವುದನ್ನ ತಡೆದು, ಎರಡೂ ಕಾಲನ್ನು ತಾನು ಕೂತಿರುವ ಮರದ ಬೆಂಚಿನಿಂದ ಕೆಳಕ್ಕೆ ಇಳಿ ಬಿಟ್ಟುಕೊಂಡು ಕೂರುವಂತೆ ಮಾಡಿತ್ತು.

ರಾತ್ರಿ ಕೆಂಪಿ ಮಾಡಿದ್ದ ಕರೀನ ಉಳಿ ತಿಂದು ರಜಸ್ಸಾಗಿದ್ದ ಚಲುವನ ಕಣ್ಣುಗಳು, ಮರದ ಕುರ್ಚಿಯ ಕೆಳ ಕಾಲಿನ ಮೇಲೆ ಹಗುರವಾದ ಒಂದು ಕಾಲನ್ನು, ಗಾರೆ ಮುಚ್ಚಿ ಹಾಕಿದ್ದ ನೆಲಗೂದಲ ಮೇಲೆ ಇನ್ನೊಂದನ್ನು ಊರಿ, ಊರ ಹಳೇ ಪಾಟೀಲನ ಕರಿ ಬಿಳಿ ಮಿಶ್ರಿತ ಬೆಟ್ಟಗೂದಲ ಮೇಲೆ ತನ್ನಿಚ್ಚೆ ಬಂದಂತೆ ಕ್ಲಚ ಕ್ಲಚ ಸದ್ದು ಮಾಡುತ್ತ ಕುಣಿಯುತ್ತಿದ್ದ ಕತ್ತರಿಯ ನಟರಾಜ ನೃತ್ಯವನ್ನು ಬಿಟ್ಟ ಕಣ್ಣು ಬಿಟ್ಟಂತೆಯೇ ಚಲುವ ನೋಡುತ್ತ ಕುಳಿತಿದ್ದ. ಊರ ಗಂಡಸರ ತಲೆಯನ್ನೆಲ್ಲಾ ಬಾಚಿ ಬಾಚಿ ಕರಗೆ ಕಸ ತುಂಬಿಕೊಂಡಿದ್ದ ದೊಡ್ಡ ಹಲ್ಲಿನ ಬಾಚಣಿಗೆ, ಪಿತ್ರಾರ್ಜಿತವಾಗಿ ಬಂದಿದ್ದ ಒಂದೇ ಒಂದು ಆಸ್ತಿಯಾದ ಕತ್ತರಿ, ಅಪ್ಪನಂತೆಯೇ ಮಗನ ಬಲಗೈಯ್ಯ ಹೆಬ್ಬೆರಳು ಮತ್ತು ತೋರು ಬೆರಳುಗಳಲ್ಲಿ ದಾಯ ಮಾಡಿಕೊಂಡು ಕೂತು ಕುಣಿಯುತ್ತಿತ್ತು.

ಪಕ್ಕದ ಅಂತದ್ದೇ ಇನ್ನೊಂದು ಕುರ್ಚಿಯಲ್ಲಿ ವಯಸ್ಸಾದ ಬೊಚ್ಚು ಬಾಯಿಯ ಅವನ ದೊಡ್ಡಪ್ಪ ತನ್ನ ವಾರಿಗಿಯವರ ಮಕ ಚೌರವನ್ನು ಮಾತ್ರ ಮಾಡುತ್ತಿದ್ದ. ಚಲುವನ ವಯಸ್ಸು ಇನ್ನೂ ನಲವತ್ತು ದಾಟಿರಲಿಲ್ಲವಾದ್ದರಿಂದ ಇವನ ಚೌರ ಇಲ್ಲಿಯೇ ಸಾಧ್ಯವಾಗಬಹುದೆಂಬ ನಿರೀಕ್ಷೆಯಲ್ಲಿ ಕಾದು ಕುಳಿತ್ತಿದ್ದ. ಎದುರಿಗಿದ್ದ ನೀರುಬಿದ್ದು ಮಂಜಿನಂತಾಗಿದ್ದ ಮಾಸಲು ಕನ್ನಡಿಯ ತಳದಲ್ಲಿ ಚಲುವನ ದಟ್ಟ ಗಡ್ಡದ, ತೀಕ್ಷ್ಣ ಕಣ್ಣಿನ ರೊಟ್ಟಿ ಹೆಂಚಿನ ತಳದಂತ ಮುಖ ಕಾಣುತ್ತಿದ್ದರೂ.. ಆರು ತಿಂಗಳಿಗೆ ಮೂರು ತಿಂಗಳಿಗೆ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವ ಸೌಭಾಗ್ಯ ಬರುತ್ತಿದುದರಿಂದ ತನ್ನದಲ್ಲವೇನೋ ಅನ್ನಿಸಿ ದಿಟ್ಟಿಸಿ ನೋಡದೆ ನಿರ್ಲಕ್ಷಿಸಿದ್ದ,

ಚಲುವ ಕುಂತಿದ್ದ ಉದ್ದನೇ ಬೆಂಚಿನ ಅಕ್ಕ ಪಕ್ಕದಲ್ಲೆಲ್ಲಾ ಚೆಲ್ಲಾಪಿಲ್ಲಿಯಾಗಿ ಚಿತ್ತಾರದ ಪತ್ರಿಕೆಗಳು ಬಿದ್ದಿದ್ದವು. ಚಲುವನ ತಲೆಗೂದಲ ಕಾಲುಭಾಗದಷ್ಟೂ ಬೆಳೆಯದ ಕೆಲವು ಕಾಲೇಜು ಹುಡುಗರು ಕಟಿಂಗ್ ಮಾಡಿಸಿಕೊಳ್ಳಲು ಬಂದು ಅಲ್ಲಿ ಬಿದ್ದಿರುವ ಪೇಪರ್‌ಗಳನ್ನು ಓದುತ್ತಲೋ, ನಟಿಯರ ಸಂದಿಗಳನ್ನು ನೋಡುತ್ತಲೋ ಕುಂತಿದ್ದರು.

ಸಿನಿಮಾ ಪುಟದಲ್ಲಿದ್ದ ನಟಿಯೊಬ್ಬಳ ಕಂಕಳಲ್ಲಿ ಕೂದಲಿಲ್ಲದ ಒಂದಡಿ ಚಿತ್ರ ಚಲುವನನ್ನು ಸೆಳೆಯಲಾಗಿ, ಸಂಶೋಧಕನಂತೆ ಅದನ್ನೆ ದಿಟ್ಟಿಸಿ ನೋಡುತ್ತಿರುವಾಗ, "ಏನೋ ಚಲುವಾ, ಪೇಪರ್ ತಿನ್ನನಂಗೆ ನೋಡ್ತಿದಿಯಾ?' ಎಂದು ಕಟಿಂಗ್ ಮಾಡುತ್ತಿದ್ದ ಇನ್ನು ಇಪ್ಪತ್ತು ದಾಟದ ಸಂತೋಷನೆಂಬ ಮಾಲಿಕ ಪ್ರಶ್ನಿಸಿದಾಗ ಚಲುವ ನಾಚಿಕೆಯಿಂದ ಹಲ್ಲುಗಿಂಜಿ ದೃಷ್ಟಿ ಬದಲಾಯಿಸಿಕೊಂಡ.

ಕುರ್ಚಿಯಲ್ಲಿ ಕುಂತಿದ್ದ ಪಟೇಲರದು ಕಟಿಂಗ್ ಮುಗಿದಂತಾಗಿ ಗಂಟಲಿಗೆ ಕಟ್ಟಿದ್ದ ಪಂಚೆ ಬಟ್ಟೆಯನ್ನು ಬಿಚ್ಚಿ ಕೊಡುವುತ್ತಿರುವಾಗ.. ಪಟೇಲರು ತೊಟ್ಟಿದ್ದ ಅಂಗಿ ಬಿಚ್ಚಿ ತಮ್ಮ ತೋಳನ್ನು ಮೇಲೆತ್ತಿದಾಗ ಮಟ್ಟೆಗುಂಜಿನಂತೆ ಬೆಳೆದಿದ್ದ ಕಂಕುಳ ಕೂದಲಿನ ಬೆವರುವಾಸನೆ ಚಲುವನ ಮೂಗಿಗೆ ಹಿತ ನೀಡಿತು. ಚೌರದವನು ಅದಕ್ಕೆ ಇನ್ನಷ್ಟು ನೀರು ಚುಮುಕಿಸಿ ಕತ್ತಿಯಿಂದ ಎರೆಯುವಾಗ ಚಲುವನಿಗೆ ತನ್ನ ಕಂಕುಳಲ್ಲಿ ಅದರಪ್ಪನಂತೆ ಬೆಳೆದಿರುವುದು ನೆನಪಾಗಿ, ತನಗೂ ಇದೇರೀತಿ ಬೋಳಿಸಿಕೊಳ್ಳುವ ಆಸೆ ಮೂಡಿತಾದರೂ.. ಸದ್ಯ ಚೌರ ಮಾಡಿ ಕಳಿಸಿದರೆ ಸಾಕೆಂದು ಅದನ್ನು ಅದುಮಿಕೊಂಡ. ಪಟೇಲರ ಎರಡೂ ಕಂಕುಳ ಚೌರವಾದ ನಂತರ ನಿಧಾನಕ್ಕೆ ಕೊಸರಾಡಿಕೊಂಡು ಭಾರದ ಮನಸ್ಸಿನಿಂದ ಕುರ್ಚಿ ಬಿಟ್ಟು ಇತ್ತಕಡೆ ಬಂದು ಮೀಸೆ ನೋಡಿಕೊಳ್ಳುವಾಗ, ಚಲುವ ಎದೆಯೊಳಗೆ ಅಂದುಕೊಂಡಂತೆ ತಡವರಿಸಿ 'ಚೌರ' ಎಂದನು. ಅದನ್ನು ಕೇಳಿಸಿಕೊಂಡ ಯುವಕ 'ಇರು ಚಲ್ವ ಜನ ಇರದು ಗೊತ್ತಾಗಲ್ವ, ಸ್ವಲ್ಪ ತಡ್ಕ ಇಲ್ಲ ಅಂದ್ರೆ ಸಂಜಿನಂಗೆ ಬಾ ಹೋಗು' ಅಂದ. ಪಟೇಲರಿಗಿಂತ ಮುಂಚೆ ಬಂದಿದ್ದ ಚಲುವ, ಬೆಳಗ್ಗೆ ನೀರಡಿಕೆ ಹೋದವನು ಮಂತಕೋದ್ರೆ ಕೆಂಪಿ ಅದು ಇದು ಜಗಳಾ ತಗೀತಾಳೆ.. ಅದ ಕೇಳದ್ರಿಂತ ಬಸ್‌ಸ್ಟಾಂಡ್‌ಕಡಿಕೆ ಬಂದು ತಿರುಗಾಡ್ಕಂಡು ಹೋಗನ ಅಂತ ಬಂದವನು, ಏನೋ ಮನಸ್ಸು ಮಾಡಿ ಚೌರದ ಅಂಗಡಿಗೆ ಬಂದು ಕೂತ್ಕಂಡಿದ್ದ.

ದೂಸ್ರಾ ಮಾತಾಡದೆ ಬೆಪ್ಪಾದ ಚಲುವ, ಕಳೆದ ವರ್ಷ ಭಾರಿ ಮಳೆಗಾಲವಾಗಿ ಕೆರೆ ಕಟ್ಟೆ ತುಂಬಿದಾಗ ಟಾರಿನ ಮೇಲೆ ಟಾರು ಬಿದ್ದು ರಸ್ತೆ ದಿಬ್ಬವಾಗಿ, ರಸ್ತೆ ಮಗ್ಗುಲಲ್ಲಿದ್ದ ಚೌರದ ಪೆಟ್ಟಿಗೆ ಅಂಗಡಿಯ ಹಿಂದಲ ಎರಡೂ ಕಾಲುಗಳು ತಗ್ಗಿಗೆ ಬಿದ್ದಿದ್ದವು. ರಾತ್ರಿಯೆಲ್ಲಾ ಜಡಿದ ಮಳೆಯಿಂದ ಬೆಳಗಾಗದರೊಳಗಾಗಿ ತಗ್ಗಿನಲ್ಲಿದ್ದ ಪೆಟ್ಟಿಗೆ ಅಂಗಡಿ ತೇಲಿಕೊಂಡು ನಡು ಕೆರೆಯಲ್ಲಿ ನಿಂತಿತ್ತು. ಊರ ಕೆಲಸವೆಂದು ಅಂಗಡಿಯ ತಿಕಕ್ಕೆ ದಡಿ ಸರಕೊಂಡು ಒಂದಿಡೀ ಮಧ್ಯಾಹ್ನದ ತನಕ ಆಂಜಿನೇಯ್ಯ ಮೈಗೆ ಒಕ್ಕಂಗೆ ಬೆವರಿಳಿಸಿಕೊಂಡು ಮೊದಲಿದ್ದ ಜಾಗಕ್ಕೆ ಪೆಟ್ಟಿಗೆಯನ್ನು ಪ್ರತಿಷ್ಠಾಪಿಸಿಕೊಟ್ಟಿದ್ದು ಇದೇ ಚಲುವ. ಅದನ್ನು ನೆನೆದು ಕಾಣದ ಕನ್ನಡಿಯಲ್ಲಿ ಇಣಿಕಿ ಮುಖ ನೋಡಿಕೊಂಡ.

ಬೊಚ್ಚುಬಾಯಿ ಮುದುಕನ ಹತ್ತಿರ ಚೌರ ಮಾಡಿಸಿಕೊಂಡ ಪಕ್ಕದೂರಿನ ಮಡಿವಾಳರ ಬೋರಯ್ಯ ಚಡ್ಡಿ ಜೋಬಿನಲ್ಲಿದ್ದ ಚಿಲ್ಲರೆಯನ್ನು ಎಣಿಸಿಕೊಡಲಾಗಿ, ಹತ್ತುರೂಪಾಯಿಗೆ ಎರಡು ರೂಪಾಯಿ ಕಮ್ಮಿ ಇತ್ತು. ಅದನ್ನು ಕಂಡು ಕೆಂಡವಾಗಿ ಸಂತೋಷನು ಆಡಿದ ಮಾತು ನೇರವಾಗಿ ಚಲುವನನ್ನು ಚುಚ್ಚಿದಂತಾಗಿ ತನ್ನ ಕಾಫಿಕಲರಿನ ಚಡ್ಡಿ ಜೋಬಿನಲ್ಲಿದ್ದ ಚಿಲ್ಲರೆಯನ್ನು ಮೇಲಿನಿಂದಲೇ ಹಿಸುಕಿ ಲೆಕ್ಕ

ಹಾಕತೊಡಗಿದ. ಅದ್ಯಾಕೋ ಅನುಮಾನ ಬಂದಂತಾಗಿ ಜೋಬೊಳಗೆ ಕೈ ತೂರಿಸಿ ಹೊರತೆಗೆದು ಐದರ ಬಂದವನ್ನು ಮಿಕ್ಕ ಚಿಲ್ಲರೆಯನ್ನು ಕಣ್ಣಾರೆ ಕಂಡು ಸಮಾದಾನಿಸಿಕೊಂಡು ಮತ್ತೆ ಅದರಲ್ಲೇ ಇಟ್ಟುಕೊಂಡ. ಎರಡನೇ ಕ್ಲಾಸು ಓದುತ್ತಿದ್ದ ತನ್ನ ಗಂಡು ಐಕಳು 'ಪೆನ್ನು ಕೊಡ್ಡಪ್ಪ' ಅಂತ ಕೇಳುತ್ತಿದುದು.. ಅದು ಸ್ಕೂಲಲ್ಲಿ ಕೊಟ್ಟಿದ್ದ ಪುಸ್ತಕನೂ ಹರಿದು ಪಲ್ಲಾರ ಮಾಡ್ಕೊಂಡು ಎಂಟು ಗಂಟೆಗೇ ಉಣ್ಣದೇ ಮನಿಕಣ್ಣಿದ್ದ ಕಂಡು, ಈಗ್ಲೆ ಪೆನ್ನು ಕೊಡೋದು ಬ್ಯಾಡ ಅಂದ್ಯಂಡಿದ್ದ ಚಲುವನಿಗೆ, ಈಗ ಇಲ್ಲಿ ಗಂಟೆಯಿಂದ ಅವರಿವರ ಚೌರ ಮಾಡದ ನೋಡಿ ನೋಡಿ ಸಾಕಾಗಿ ಕೊಡ್ತಿದ್ರು ಆಗದು ಅಂದಂಡ, ತಿಗ್ಗ ಇನ್ನೊಂದು ಕ್ಷಣ ನಾಕು ತಿಂಗಳಿಂದ ಚೌರ ಕಾಣದ ಗಡ್ಡ ದಟ್ಟವೂ ಉದ್ದವೂ ಆಗುತ್ತಿದುದರಿಂದ ಕೆಲವರು 'ಯಾಕ್ಲ ಚಲುವ ಗಡ್ಡ ಮಂಡೆ ಬಿಟ್ಟಿದಿಯಾ, ನಿನ್ನೆಂಡ್ರು ತಿರ್ಗ ಬಸುರಾಗೆವ್ಳ ' ಅಂತ ಕೇಳಿದುದು, ಗಡ್ಡದ ಕೂರೆ ಕಡಿತಾ ಇದ್ದುದಕ್ಕಿಂತ ಹೆಚ್ಚಾಗಿ ಕುಕ್ಕುತಾ ಇತ್ತು.

ಗೌರ್ಮೆಂಟ್ ಸ್ಕೂಲಲ್ಲಿ ಕೊಟ್ಟಿದ್ದ ಕಡು ನೀಲಿ ಚಡ್ಡಿ, ತಿಳಿ ನೀಲಿ ಅಂಗಿ ಆಕ್ಕಂಡು ಒಂದೇ ಉಸಿರಿಗೆ ಓಡಿಬಂದ ಕುರುಬರಕೇರಿಯ ಹುಡುಗ ತನ್ನ ಕೈಯಲ್ಲಿ ಮಡುಚಿಟ್ಟುಕೊಂಡಿದ್ದ ನೋಟ ಸಂತೋಷನ ಕೈಗೆ ಇಕ್ಕುತ್ತ 'ಸಂತೋಷಣ್ಣ ಅಪ್ಪ ಹೇಳಿ ಕಳುಸ್ತು, ಇಸ್ಕೂಲಿಗೆ ಹೋಗೋಕಂತೆ ಬೇಗ ಕಟಿಂಗ್ ಮಾಡಿ ಕಳ್ಸನಂತೆ' ಎಂದು ತಲೆ ಮೇಲೆ ಕೂತುದರಂತೆ ಆಡಿದ ಮಾತಿನಿಂದಾಗಿ, ಚಲುವ ಬರುವಾಗ ತನ್ನ ಎಂಟನೇ ಕ್ಲಾಸ್ ಓದುತ್ತಿದ್ದ ಹಿರಿಮಗಳು ಬಾಗಿಗೆ ಸ್ಕೂಲಲ್ಲಿ ಕೊಟ್ಟಿದ್ದ ಸೈಕಲ್‌ನ ಏನೋ ಕಡಿಯನಂತೆ ತಂದಿದ್ದು, ಅದು ಹತ್ತುಗಂಟೆ ಸ್ಕೂಲಿಗೆ ಹೋಗಿ ಇಲ್ಲಿ ನಿಂತಿರುವಂತೆಯೇ ನಿಲ್ಲಬೇಕಾದುದು ನೆನಪಾಗಿ ದಿಗಿಲುಗೊಂಡು ಬಾಗಿಲಾಚೆಗೆ ಇಣುಕಿ ನೋಡಿದ. ಅದು ಲೈಟ್ ಕಂಬ ಒರಗಿಕೊಂಡು ಸೊಟ್ಟ ಮುಖ ಹಾಕಿಕೊಂಡು ಕೂರಲಾರದೆ ನಿಂತಿತ್ತು. ಇಷ್ಟೊತ್ತು ಕುಕಂಡು ಮಕ್ಕೊಡೆದಂತೆ ಎದ್ದೋದ್ರೆ, 'ಚಲುವನಿಗೆ ಎಷ್ಟು ಜಂಬ' ಮತ್ತು ಮಗಳು ಇಸ್ಕೂಲಿಗೆ ಹೋಗಬೇಕಾದುದನ್ನು ಹೇಳಿದರೆ 'ಏನ್ ಸೀಮೆಗಿಲ್ಲದ ಓದ ಎಂಬ ಮಾತುಗಳನ್ನು ಎಂದೂ ಅರಗಿಸಿಕೊಳ್ಳಲಾರದ ಚಲುವ ಗೊಂದಲದಲ್ಲಿರುವಾಗಲೆ ಯಾವುದೋ ಒಂದು ದನಿ 'ಚೌರಾನ.. ಕಟಿಂಗ್ಲ ಚಲುವ?" ಎಂದುದು ಸಂತೋಷನ ಬೊಚ್ಚು ಬಾಯಿ ದೊಡ್ಡಪ್ಪನ ಕಡೆಗೆ ತಿರುಗುವಂತೆ ಮಾಡಿ "ಚೌರ" ಎಂದನು. 'ಹೋಗು ಈಚೆಕಡೆ ನೆನಿಸ್ಕೊಂಡು ಬಂದು ಕೂಡ' ಎಂದಾಗ ಹೊರಗೋಗಿ ಮುರುಕು ಕಂಟವಿಲ್ಲದ ಪ್ಲಾಸ್ಟಿಕ್ ಬೋಕಿಯಲ್ಲಿದ್ದ ನೀರನ್ನು ಎರಡೂ ಅಂಗೈಯಲ್ಲಿ ಬಾಚಿಕೊಂಡು ಎಸೆದುಕೊಳ್ಳಲಾಗಿ, ಅದು ಗಡ್ಡದ ಬೇರ ಮುಟ್ಟದಿರುವಾಗ ಇನ್ನೆರಡು ಸಾರಿ ಹಾಕಿಕೊಂಡು ತೀಡಿಕೊಂಡು ಬಂದು ದೊಡ್ಡಪ್ಪನ ಕುರ್ಚಿಗೆ ಕೂತುಕೊಂಡನು. ಇನ್ನೂ ವಯಸ್ಸಾಗದ ಚಲುವನಿಗೆ ಸಂತೋಷನೆ ಚೌರ ಮಾಡಬಹುದೆಂಬ ನಿರೀಕ್ಷೆಯಂತೆ ಬಿಳಿ ಪಂಚೆಯನ್ನು ಕೂದಲು ಮೈಗೆ ಬೀಳದಂತೆ ಗಂಟಲಿಗೆ ಸುತ್ತುವುದೂ ಹುಸಿಯಾಗಿ ಹೆಗಲಲ್ಲಿದ್ದ ಮಾಸಲು ಟವಲ್ಲನ್ನೇ ಎದೆಗಾಕಿಕೊಂಡು ಕೂತ. ಈ ದಟ್ಟ ಕಾಡು ಸುಲಬಕ್ಕೆ ನಾಶವಾಗಲ್ಲವೆಂದು ಅಜ್ಜ ತಾನೇ ಭಾವಿಸಿ ಹೊಸ ಭೇಡನ್ನು ಕಾಗದದಲ್ಲೇ ಮುರಿದು ಕತ್ತಿಗೇರಿಸಿಕೊಂಡು ಚರ ಚರ

ಬೋಳಿಸುವಾಗ, ಸಂತೋಷನ ದೊಡ್ಡಪ್ಪನ ಬೊಚ್ಚುಬಾಯಿ ಅದರ ಮೇಲಿರುವ ತುಂಡಾದ ಇಲಿ ಮೀಸೆಯನ್ನು ನೋಡುತ್ತ ಚಲುವ ಚೌರ ಮಾಡಿಸಿಕೊಂಡ.

ಶ್ರೀರಾಂಪುರ ಬೆಟ್ಟದಲ್ಲಿ ನಡೆದ ತನ್ನ ಕೇರಿಯ ಲೋಕೇಶನ ಮದುವೆಗೆ ಅಂತ ಮಾಡಿಸ್ಕಂಡಿದ್ದ ಚೌರದಲ್ಲಿ ಒಂದು ಮೀಸೆ ಉದ್ದ ಇನ್ನೊಂದು ಮೋಟ ಆಗಿ, ಬೆಟ್ಟದಲ್ಲಿ ಆಡ ಹುಡುಗ್ರೆಲ್ಲಾ ಆಡಿಕೊಂಡು ನಕ್ಕಿದ್ದನ್ನು ನೆನೆದು ಕನ್ನಡಿಯಲ್ಲಿ ಇನ್ನೊಮ್ಮೆ ಮುಖ ನೋಡಿಕೊಂಡು ಕರ್ಮ್ ಮಾಡಿಕೊಳ್ಳಬೇಕೆನಿಸಿದರೂ, ಅಂಜಿಕೊಂಡು ಚೆಡ್ಡಿ ಜೋಬಲ್ಲಿದ್ದ ಹತ್ತು ರೂಪಾಯಿ ಪೂರ್ತಿ ಚಿಲೆಯನ್ನು ಸಂತೋಷನ ಕೈಗಿಕ್ಕಿ ಹೊರಬಂದ. ತನ್ನ ಉಂಗ್ಲ ಕಿತ್ತ ಮೆಟ್ಟನ್ನು ಮನೆಯಲ್ಲೇ ಬಿಟ್ಟು ಬಂದುದರಿಂದ ಅಂಗಡಿಯಾಚೆ ಅವಿಲ್ಲದುದನು ಗೊತ್ತುಮಾಡಿಕೊಂಡು ಸೊಟ್ಟಗಿದ್ದ ಸೈಕಲ್ ಮುಖವನ್ನು ಲೈಟು ಕಂಬದಿಂದ ಬಿಡಿಸಿಕೊಂಡು ತನ್ನ ಹಟ್ಟಿಯ ಕಡೆಗೆ ನೆಟ್ಟಗೆ ಮಾಡಿಕೊಂಡು ತಳ್ಳಿಕೊಂಡೆ ಹೊರಟ.

ಕಣ್ಣಿನಿಂದ ಹೊರಟ ದೃಷ್ಟಿ ಮೂಗಿನಿಂದ ಮೊದಲ್ಗೊಂಡು ಸಾಮಾನ್ಯವಾಗೇ ಕಾಣುತ್ತಿದ್ದರು, ಈ ಮುಂಚೆ ದಟ್ಟಗಡ್ಡವಿದ್ದುದರಿಂದ ಮೂಗಿನ ಕೆಳಗಿನದು ಅವನಂತೆಯೇ ಕರಗೆ ಕಾಣಿಸುತ್ತಿತ್ತು. ಈಗ ಮುಖದ ಅರ್ಧಬಾರ ಕಮ್ಮಿಯಾದಂತಾಗಿ ಸುತ್ತಲಿನ ಜನ ಮರ ಗಿಡ ಮನೆ ರಸ್ತೆಗಳೆಲ್ಲಾ ಚೌರ ಮಾಡಿಕೊಂಡು ಅಚ್ಚುಕಟ್ಟಾಗಿರುವಂತೆ ಕಾಣತೊಡಗಿತು. ಹೆಜ್ಜೆಯನ್ನು ನಿಧಾನಗೊಳಿಸಿ ಎಲ್ಲವನ್ನೂ ಹೊಸದಾಗಿ ನೋಡುವಂತೆ ನೋಡಿಕೊಂಡು ಆಗತಾನೆ ಬಲಿತು ಪಡ್ಡೆಯಾಗುತ್ತಿದ್ದ ಬಿಸಿಲಿಗೆ ಮೈ ಚುರುಗುಡಿಸಿಕೊಂಡು ನಚ್ಚಗೆ ಮಾಡಿಕೊಂಡು ವಿರಾಮವಾಗಿ ಮುಂದೆಜ್ಜೆ ಇಡುತ್ತಿದ್ದ.

ನಾಕು ದಿಕ್ಕಿಗೂ ದಾರಿ ಕವಲೊಡೆದಿರುವ ವೃತ್ತದಲ್ಲಿ ಬಲಕ್ಕೆ ತಿರುಗಿ ತನ್ನಟ್ಟಿ ಕಡೆಯಿಂದ ಬರುತ್ತಿದ್ದ ಸೂರ್ಯನ ಎದುರು ಬಿಸುಲಿಗೆ ಮುಖಮಾಡಿ ನೀ

ನಾ ಹೊಳಹೊ ಎಂದು ಬೀಗುತ್ತ ಮುಂದೋಗುತ್ತಿರುವಾಗ, ಬಲದಲ್ಲಿರುವ ಸಾಬಿ ಕಮ್ಮಾರನ ಮನೆ ಮುಂದಲ ಸೂರಿನಡಿಯಲ್ಲಿ ಖಲೀಂಸಾಬ್ ತನ್ನ ಮಾಮೂಲಿ ಪೋಸ್ಟ್ ಆಫೀಸ್ ಚಳ್ಳ ಧರಿಸಿ ಕುಕ್ಕುರುಗಾಲಲ್ಲಿ ಕುಡ್ಲುಮೂತಿ ಕೆಂಪಗೆ ಮಾಡಿಕೊಂಡು ತುಟಿಲೊಂದು ಕಿವಿಲೊಂದು ಬೀಡಿ ಚುಚ್ಚಂಡು ಬೆವತು ಕೂತಿದ್ದನು. ಸ್ಕೂಲ್ ಬಿಟ್ಟಿದ್ದ ಅವನ ಮಗ ದಾದಾಫೀರು ಅವನಂತದ್ದೇ ಚಳ್ಳ ಧರಿಸಿಕೊಂಡು ಎರಡೂ ಕೈಯಲ್ಲೂ ಹಾಗೆ ಇಡ್ಕಂಡು ಬವ್ ಹೊಡಿತಾ ಇದ್ದುದಕೆ ಬಿಲದಿಂದ ಕೆಂಪು ಇಲಿ ಅಣಿಕಿ ಇಣಿಕಿ ನೋಡುವಂತೆ ಇದ್ದಿಲು ಕೆಂಡವಾಗುತ್ತಿತ್ತು. ಅದನ್ನು ಓರೆಗಣ್ಣಿನಲ್ಲಿ ಕಣ್ಣಿಗೆ ಬಿಟ್ಟುಕೊಂಡ ಚಲುವ ಚಳಿಗಾಲದಲ್ಲಿ ಸಾಬಿಯ ಸುಖವನ್ನು ಮನಸ್ಸಿಗೆ ತಂದುಕೊಂಡು, ಈ ಬೇಸಿಗೆಯಲ್ಲಲ್ಲ ಎಂದುಕೊಂಡು ಮುಂದಡಿ ಇಟ್ಟ ಸೂರ್ಯನಿರುವ ದಿಕ್ಕಿನಿಂದಲೇ ಕಲಸಿಕೊಂಡಂತೆ ಒಂದು ಆಕೃತಿ ಪ್ಯಾಂಟಾಗಿ, ಲಂಗವಾಗಿ, ಹೆಣ್ಣಾಗಿ, ಗಂಡಾಗಿ, ಸ್ಪೀಡಾಗಿ ಬರುತ್ತಿದುದು ಇವನನ್ನು ಸೆಳೆಯಿತು. ಅದು ತೊಟ್ಟಿರುವ ಸ್ಕೂಲಲ್ಲಿ ಕೊಟ್ಟಿರುವ ಲಂಗ ಮೊಣಕಾಲಿಗೂ ಹರುಕು

ಬ್ಯಾಗು ಬೆನ್ನಿಗೂ ಮೋಟಾಗುತ್ತಿತ್ತು. ಎರಡು ಮೋಟು ಜಡೆಯ ಆಕೃತಿ ಹತ್ತಿರ ಬರುಬರುತ್ತ ಒಮ್ಮೆ ಕೆಂಪಿಯಂತೆ ಇನ್ನೊಮ್ಮೆ ಚಲುವನಂತೆ ಭಾಸವಾಗಿ, ಅದು ಅದಾಗಿದ್ದರೆ ಇಲ್ಲಿಂದ ಎರಡು ಮೈಲಿ ದೂರದಲ್ಲಿರುವ ಹೈಸ್ಕೂಲಿಗೆ ನಡೆದುಕೊಂಡು ಹೋಗದಿರಲೆಂದು ಸರ್ಕಾರ ಸೈಕಲ್ ಕೊಟ್ಟಿರುವುದು, ಅದನ್ನು ಚಲುವ ಸೋಂಬೇರಿ ಮಾಡಿ ನೂಕಿಕೊಂಡು ಬರುತ್ತಿರುವುದು, ಬಿಸಿಲು ಬಲಿಯುತ್ತಿದ್ದು ಲೇಟಾದಂತಾಗಿರುವುದು, ಎಲ್ಲವೂ ಒಮ್ಮೆಲೆ ಇವನ ಮೇಲೆ ಎರಗಿದಂತಾಯಿತು. ಚೆಲುವನ ಊಹೆ ನಿಜವಾಗಿ ಬಂದ ಆಕೃತಿ ಕೆಂಪಿಯಂತೆ ಕರಗಿದ್ದರು ನೀಳವಾಗಿರುವ, ಚಲುವನಂತೆ ಗಟ್ಟಿಯಾಗಿದ್ದರೂ ಜಡ್ಡುಗಟ್ಟಿರದ ತನ್ನ ಹಿರಿಮಗಳು ಬಾಗಿ ಎಂಬುದು ನಿಚ್ಚಳವಾಯಿತು. ಅದು ಧೂಮಕೇತುವಿನಂತೆ ದುಮಗುಡುತ್ತಿರುವುದು ಇಸ್ಕೂಲಿಗೆ ಲೇಟಾಗಿರುವುದನ್ನು ಒತ್ತಿ ಹೇಳುತ್ತಿತ್ತು. ಬಂದುದು ಬಂದಂತೆಯೇ ಅಪ್ಪನಿಂದ ಸೈಕಲ್ ಕಿತ್ತುಕೊಂಡು 'ಅವ್ವ ಕಾಯ್ತಾ ಅವ್ಕೆ ನಡಿ ಮಂತಕೆ' ಎಂದುದು ಚಲುವನಲ್ಲಿ ಹಲವು ಯೋಚನೆಗಳಿಗೆ ದಾರಿ ಮಾಡಿ ಕೊಟ್ಟಿತಾದರು ಧೈರ್ಯ ಮಾಡಿಕೊಂಡು “ಉಂಡೆನವ್ವ?' ಎಂದನು. 'ಊಂ, ರೊಟ್ಟಿ ತಿಂದೆ' ಎಂದಿತು. ಈಗ ಸೈಕಲ್ ಮತ್ತೆ ಬಂದ ದಾರಿಯತ್ತಲೇ ಮುಖ ಮಾಡಿಕೊಂಡು ಓಡ ತೊಡಗಿತು. ಚಲುವ ಮಗಳ ದಾರಿಗೆ ಹಿಂತಿರುಗಿ ನೋಡಲಾಗಿ, ಹಿತ್ತಲಲ್ಲಿ ಅವಳೇ ಹಾಕಿರುವ ಗುಲಾಬಿ ಗಿಡದಿಂದ ಒಂದನ್ನು ಕಿತ್ತುಕೊಂಡು ಎಲೆ ಬೆರೆಸಿ ಅವಳ ಅಳ್ಳಣ್ಣೆ ತಲೆಗೆ ಸಿಕ್ಕಿಸಿಕೊಂಡಿದ್ದು, ಅದು ಹೋಗಂದು ಹೋಗಂದು ತಿರುವುಗಳಲ್ಲಿ ಮರೆಯಾಯಿತು.

ಇತ್ತ ಕೆಂಪಿ ವತ್ತಿರ್ನಾಗೆ ಎದ್ದೋದ ಗಂಡ ಅನ್ನಿಸ್ಕಂಡನು ಇಷ್ಟೊತ್ತಾದ್ರೂ ಅವನ ತಲೆ ಇಲ್ವಲ್ಲ, ಇಂತನಿಗೆ ಯಾಕೆ ಹೆಂಡ್ತಿ ಮಕ್ಳು ಸಂಸಾರ ಎಲ್ಲಾ.. ಅಂತ ನಾಕು ಜನ ಕೇಳಂಗೆ ಅಂದು, ಚಲುವ ಬರಬಹುದಾದ ದಾರಿಯ ಕಡೆಗೆ ನೋಡಿ ನೋಡಿ ಇನ್ನೂ ಎಲ್ಲೂ ಅವನ ಸುಲಾಕು ಸಿಗದೆ ಇರುವಾಗ ಇನ್ನಷ್ಟು ರೇಗಿದಂತಾಗಿ ಒಂದೇ ಸಮನೆ ದಡಗುಡುತ್ತಿದಳು. ಮಾಮೂಲಿಯಂತೆ ನೀರಡಿಕೆ ಹೋದೋನು ಅದ ಮುಗಿಸ್ಕಂಡು ಮನಕೆ ಬಂದು ಏನೂ ಕಡಿದೆ ಇದ್ರೂ, ಕಣ್ಮುಂದೆ ಇರ್ತಿದ್ನಲ್ಲ ಅನ್ನೋ ಸಮಾಧಾನ ಅಷ್ಟೆ. ಈ ಚೆಲುವಾ ಅದಕ್ಕೂ ಎಳ್ಳು ನೀರು ಬಿಟ್ಟು ಎಲ್ಲೊ ಅಲಿಯಕೆ ಹೋಗವ್ನಲ್ಲಾ ಅನ್ನೊದರ ಜೊತೆಗೆ ಅವನ ಅಟ್ಟೆಕಟ್ಟಿದ ಮೆಟ್ಟು ಇಲ್ಲೇ ಬಿದ್ದಿರುವುದು ಅವಳ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟು ಇತ್ತ ಬಾಗ್ಲಿಗೆ ನೀರಾಕುವಾಗ್ಲು, ತಣ್ಣಿಚೆಂಬು ಬೆಳಗುವಾಗ್ಲು, ಸೌದೆ ಪುಳ್ಳೆ ಒಳಕೆ ತಗೊಂಡು ಹೋಗುವಾಗ್ಲು ಚಲುವ ಬರುವ ದಿಕ್ಕನೇ ದಿಟ್ಟಿಸಿ ನೋಡಿ ಸಾಕಾಗಿ ಪಿತ್ತ ನೆತ್ತಿಗೇರಿಸಿಕೊಂಡಿದ್ದಳು. ಮನೇಲಿ ಅಸೀಟು ಎಂಬುದು ಮಡಿಕೆ ತಳ ಸೇರಿ ವಾರ ಕಳೆದಿತ್ತು. ಮುದ್ದೆ ಇಲ್ಲ ಅಂದ್ರೆ ಉಂಡಿದ್ದು ಮೈಗತ್ತಲ್ಲ ಅಂತ ವಾರವೆಲ್ಲ ಅವರಿವರ ಮನೆ ತಿರಿದು ಮುಂದರಿಗೆ ಕಾಣದಂಗೆ ಹಿಂಧರವ, ಹಿಂಧ್ಧರಿಗೆ ಕಾಣದಂಗೆ ಮುಂಧರವ ಸೆರಗ ಸಂದಿಲಿ ಮುಚ್ಚಂಡು ಅಸೀಟು ತಂದು ಮುದ್ದೆ ತಿರುವೆಂಡು ಉಂಡ ಬಂಡ ಬದುಕು ಸಾಕಾಗಿ ಹೋಗಿತ್ತು. ಗಂಡ ಅನ್ನಿಸ್ಕಂಡ ಚಲುವನಿಗೆ ವಾರದಿಂದ ಬಡುಕಂಡು ಪ್ರಯೋಜನಕ್ಕೆ ಬಂದಿದ್ದಿಲ್ಲ. ಸಾಲ ಕೊಟ್ಟವರೆಲ್ಲಾ ಬಟ್ಲ ಹಿಡ್ಕಂಡು ಮನೆಮುಂದೆ ಪ್ರತ್ಯಕ್ಷವಾಗುತ್ತಿದ್ದರು. ಆ ವಿಚಾರವಾಗಿ

ರಾತ್ರೆಲ್ಲ ಜಗಳ ಮಾಡಿದ್ರು ಚಲುವ ಬಾಯಿ ಬಿಚ್ಚಿರಲಿಲ್ಲ. ಆದ್ರೂ ಯಸಟ್ಟ ಅಂತ ಕರ್ಮೀನ ಹುಳಿಗೆ ಕೊನೆ ಪ್ರಯತ್ನವಾಗಿ ನೀಲಮ್ಮನ ಮನಿಗೆ ಮಗಳು ಬಾಗಿ ಕಳಿಸಿ ಒಂದು ಬಟ್ಟು ಅಸೀಟು ಇಸ್ಕಂಡು ಬಂದು ಮುದ್ದೆ ತಿರಿವಿ ಇಕ್ಕಿದ್ಲು.

ಕೆಂಪಿಯ ತವರು ಮನೆಯಲ್ಲೂ ಹಿಟ್ಟು ಬಟ್ಟೆಗೆ ಕೊರತೆ ಇದ್ದರೂ ಇಷ್ಟೊಂದು ದರಿದ್ರವಿರಲಿಲ್ಲ. ಚಲುವನ ಅಪ್ಪ ಅಮ್ಮಿ ಬಸಯ್ಯ ಹೆಣ್ಣುನೋಡಕೆ ಸಂಪಿಗೆಗೆ ಬಂದವನು, ಮಗನ ಬಗ್ಗೆ ತುಸು ಹೆಚ್ಚಾಗಿಯೇ ಅಂಗೆ ಇಂಗೆ ಎಂದು ಬೂಸಿ ಬಿಟ್ಟು ಎಲ್ಡು ಹೆಣ್ಣು ಎಲ್ಡು ಗಂಡು ಮಕ್ಕಳ ತಂದೆ ಹನುಮಯ್ಯನ ತಲೆ ಕೆಡಿಸಿ ಹಿರಿ ಮಗಳು ಕೆಂಪಿಯನ್ನು ಕೊಟ್ಟು ಮದುವೆ ಮಾಡುವಂತೆ ಮಾಡಿ, ಎಮ್ಮೆ ಚರ್ಮದಂತೆ ಜಡ್ಡು ಗಟ್ಟಿದ್ದ ಹೆದ್ದಾಳು ಚಲುವನಿಗೆ ಕಳ್ಳಿ ಕಡ್ಡಿಯಂತೆ ಚಾಲಾಕಾಗಿದ್ದ ಕೆಂಪಿಯನ್ನು ಜೋಡಿ ಮಾಡಿ ತನ್ನ ಮನೆಗೊಂದು ಬುದ್ದಿವಂತ ಹಿರಿ ಸೊಸೆ ಮಾಡಿಕೊಂಡು ತೀರಿಕೊಂಡಿದ್ದ. ಮನೆಗೇನೂ ಹಿರಿ ಸೊಸೆಯಾದಳು ಆದರೆ ಮದುವೆಯಾದ ಒಂದೇ ತಿಂಗಳಿಗೆ ಹಾಂ ಅನ್ನದೆ ಊಂ ಅನ್ನದೆ ಚಲುವ ಜಡ್ಡುಗಟ್ಟಿರುವುದು ಗೊತ್ತಾಗಿ, ಆಗಿನ್ನು ಹದಿಮೂರರಲಿದ್ದ ಕೆಂಪಿಗೆ ಎಲ್ಲಾ ಗಂಡಸರೂ ಹಿಂಗೆಯೇನೊ ಅನ್ನೊ ಬಾವ ಬಂದು ಬಿಟ್ಟಿತ್ತು.

ತಂಗಿಯ ಸ್ಥಿತಿಯನ್ನು ಬೇಗನೆ ಪತ್ತೆ ಹಚ್ಚಿದ ತವರಿನವರು ಬದಿಕ್ಕಳ್ಳಿ ಅಂತ ಗಬ್ಬದ ಹಸವ ಬೆಳ್ಳುಳ್ಳಿಯಾಗಿ ಒಡೆದು ಕೊಟ್ಟು ನೋಡಿರು.. ಅದೂ ಕೈ ಹತ್ತದಿರುವಾಗ, ಚಲುವನಿಂದಾಗಿ ತಂಗಿ ಬಾಳು ಗೋಳಾಯಿತೆಂದು ಏನಾದರೂ ಮಾಡಿ ಚಲುವನಿಗೆ ಬುದ್ದಿ ಕಲಿಸಬೇಕೆಂದುಕೊಂಡು ಮಾರಾಮಿ ಹಬ್ಬಕ್ಕೆ ಅಣ್ಣ ತಮ್ಮಂದಿರೆಲ್ಲ ಬಂದು ಬಗ್ಗದ ನಡುಮನೆಯಲ್ಲಿ ಕೂಕಂಡು, ಅವ್ವಿ ಬಸಯ್ಯನಿಗೆ ಬೈಕಂಡೇ ದೂಪಹಾಕಿದ ಮೇಲೆ ಕೋಳಿ ಸಾರಲ್ಲಿ ಉಂಡು ಹಲ್ಲಿಗೆ ಕಡ್ಡಿ ಚುಚ್ಚುತ್ತ ಮಾತಿಗೆ ಕೂತು ಹಲ್ಲಿನ ಸಂದಿಲಿ ಕೂತಿದ್ದ ಮಾಂಸದ ಚೂರುಗಳನ್ನ ಒತ್ತಿಸಿ ಒತ್ತಿಸಿ ತೆಗೆದು ಉಗಿಯುವಂತೆ ಚಲುವನ ನಡವಳಿಕೆಗಳನ್ನೆಲ್ಲಾ ಹಿಡಿದು ಬಾಯಿ ತುಂಬ ಕ್ಯಾಕರಿಸಿ ಉಗಿದು ಬುದ್ದಿ ಹೇಳಿರು, ಕದಿನಿಂದ ಅಪರಾಧಿಯಂತೆ ನಿಂತು ಮೂಗು ಬಸವನಂತೆ ಬೈಸಿಕೆಂಡ ಚಲುವ, ಬೈದುದನ್ನು ಶ್ಯಾನೆ ಮನಸ್ಸಿಗೆ ತಗಂಡು ಆ ರಾತ್ರಿ ಊಟದ ಮ್ಯಾಲೆ ಮುನಿಸ್ಕಂಡು ಉಪಾಸ ಮಲಗಿದ. ಅದಾಗಲೇ ಬಾಗಿಗೆ ನೀರುಯ್ಕಂಡಿದ್ದ ಕೆಂಪಿ ಗಂಡನ್ನ ಎಲ್ಲಕೆ ಮಲ್ಗಿಗೆ ಬಂದಾಗ ಚಲುವನ ಕಣ್ಣಲ್ಲಿ ನೀರು ಕೋಡಿಯಾಗಿ ಗುಳು ಗುಳು ಅಂತ ಹರಿಯುತ್ತಿರುವುದ ಕಂಡು ಎದೆ ದಸ್ಕ್ ಎಂದಿತು. ಎಷ್ಟೇ ಆಗ್ಲಿ ಅವು ಎಂತನೆ ಆಗ್ಲಿ ತಾಳಿಕಟ್ಟಿದ ಗಂಡ, ಅವನಿಂದ ನನ್ನ ಹೊಟ್ಟೆಲೊಂದು ಹುಳ ಬೆಳಿತಾ ಐತೆ, ಕೆಡ್ಲಿ ಬದುಕ್ಲಿ ಅವನ ಜೊತೆಲೆ ಎಂದು ಬ್ರಮ್ಮ ನಿಖಿತ ಆಗ್ಯೆತೆ ಎಂದಿತ್ತೆನೆ ಹಟ್ಟಿ ಮುಂದೆ ಇದ್ದೊಂದು ಈಚಲು ಚಾಪೆ ಹಾಕ್ಕೊಂಡು ಮಲಗಿದ್ದ ಅಣ್ಣಂದಿರನ್ನ ಚಾರ್ಜ್ ತಾಂಡು ಬಿಟ್ಟು, ಕೊಟ್ಟ ಹೆಣ್ಣು ಕುಲಕ್ಕೆ ಹೊರಿಕೆ ಅಂತ ನನ್ನ ಗಂಡನ್ನ ಬಯ್ಯಕೆ ನೀವ್ಯಾರು, ಅವ ಏನಾರ ಆದ್ರೆ ನಿಮ್ಮುನ್ನ ಸುಮ್ಮೆ ಬಿಡಲ್ಲ ಬೇಕಾರೆ ನೀವು ಕೊಟ್ಟರ ಬೆಳ್ಳುಳ್ಳಿ ಕೊಟ್ಟೆಲಿ ಐತೆ ಒಡ್ಕಂಡು ಹೋಗ್ರಿ ಎಂದು ಅವೇಶದಲ್ಲಿ ದೇವರು ಬಂದಂತೆ ಆಡಿಬಿಟ್ಟು. ಮೊದಲೇ ಕೆಂಪಿ ಸಂಸಾರದ ಮೇಲೆ ಒಂದು ಕಿವಿ ಹಾನಿಸಿದ್ದ ಅಕ್ಕ ಪಕ್ಕದವರು ಈಗ ಬೀದಿಗೆ ಬಂದು ಕಣ್‌ತುಂಬಿಕೊಂಡರು.

ಕೆಂಪಿ ವರ್ತನೆಯಿಂದ ಕಂಗಾಲಾದ ಅಣ್ಣಂದಿರು ಈ ಕಳ್ ಮುಂಡೆ ಆ ಪೆದ್ದನ್ನ ಕಟ್ಕಂಡು ಯಂಗಾನ ಸಾಯ್ಲಿ ನಾವು ಈಗ್ಲೆ ಬಸ್ ಹತ್ಕಂಡು ಹೋಗನ ನಡೀ ಎಂದುಕೊಂಡರು. ಅಷ್ಟೊತ್ನಲ್ಲಿ ಯಾವ ಬಸ್ಸೂ ಇಲ್ದೆ ಇದ್ದಿದ್ರಿಂದ ರಾತ್ರೆಲ್ಲಾ ಅಲ್ಲೆ ತೂಗುಡಿಸಿ ಬೆಳಗ್ಗೆ ಕೋಳಿ ಕೂಗದೊಳಗಾಗಿ ಹೇಳೆ ಕೇಳೆ ಜಾಗ ಕಾಲಿ ಮಾಡಿದ್ರು, ಅಲ್ಲಿಂದೀಚೆಗೆ ಕೆಂಪಿಗೂ ತವರು ಮನಿಗೂ ಅಷ್ಟಕಷ್ಟೆ ಚಲುವನೆ ತನಗೆ ಎಲ್ಲಾ ಅಂಡ್ಕೊಂಡು ಇವ್ನೇ ಗಂಡ್ಸಂಗೆ ದುಡ್ಕಂಡು ಸಂಸಾರ ನೀಚಿಕೆಂಡು ಹೋಗಿದ್ದು, ಕೆಂಪಿ ಗಂಡನ್ನ ಉಗ್ದು ಬೈದು ಕೆಚ್ಚೆ ಪ್ರೀತಿ ಒಂದು ಅದಕ್ಕೆ ತರದೊಳಗಾಗಿ ಊರ ಜನರ ಬಾಯಲ್ಲಿ ಗಯ್ಯಾಳಿ, ಬಜಾರಿ, ಜಗಳಗಂಟಿ ಮುಂತಾದ ಬಿರುದುಗಳಿಗೆ ಪಾತ್ರಳಾಗಿ ಅಷ್ಟೊ ಇಷ್ಟೊ ಸ್ವಾಭಿಮಾನದಿಂದ ಬದುಕುತ್ತಿದ್ದಳು. ಈ ಮಧ್ಯೆ ಇನ್ನೊಂದು ಗಂಡು ಮಗ ಹುಟ್ಟಿ ಚಲುವನಿಗೂ ಅಷ್ಟೋ ಇಷ್ಟೋ ಜವಬ್ದಾರಿ ಬಂದಂತಾದುದರಿಂದ ಯಾರಾದ್ರು ಕರುದ್ರೆ ಟ್ಯಾಕ್ಟ್ರಿಗೆ ಮಣ್ಣೂರಕೊಗದು, ಮಳೆ ಅಂತ್ರೆ ಅವರಿವರ ತೋಟದಲ್ಲಿ ಬೆಳೆದಿರ ಬೇಲಿ ಸವರದು, ಗೊಬ್ರ ತುಂಬಕೋಗದು ಇತ್ಯಾದಿ ಕೆಲಸಗಳನ್ನ ಮೂಗೆತ್ತು ಮಾಡಿದಂಗೆ ಮಾಡ್ಕಂಡಿದ್ದ. ದುಡ್ಡು ಕಾಸಿನ ವಿಚಾರನೆಲ್ಲ ಕೆಂಪಿಗೆ ಬಿಟ್ಟಿದ್ದ. ಇತ್ತೀಚೆಗೆ ಸೋಮಾರ ಸಂತೆಲಿ ಕೆಂಪಿ ತಂದು ಕೊಟ್ಟ ಹಾರೆಯನ್ನ ಹೆಗಲಿಗಾಕ್ಯಂಡು ಅವರಿವರ ಮನೆ ಕೊಬರಿ ಸುಲಿಯಕೆ ಹೋಗನು. ಕೊಬರಿ ಸುಲಿಯದು ಚನ್ನಾಗಿ ಒಗ್ಗಿತ್ತೊ ಏನೊ ಅದುನ್ನೆ ಶ್ಯಾನೆ ಅಚೆಂಡು, ಕೊಬರಿ ಸುಳಿಯ ಚಲುವ ಅಂತಲೂ ಫೇಮಸ್ ಆಗಿದ್ದ.

ಚಲುವ ಕೆಂಪಿಯ ಸಂಸಾರದ ಗುಟ್ಟಿನ ವಿಷಯ ಹೀಗಿರಲು, ಸೂರ್ಯ ನೆತ್ತಿಗೆ ಬತ್ತಿರಲು ಚಲುವನ ದಾರಿ ನೋಡಲು ಕೆಂಪಿ ಮತ್ತೊಮ್ಮೆ ಮನೆಯಿಂದ ಈಚೆಗೆ ಬಂದು ಬಸ್ ಸ್ಟಾಂಡ್ ದಾರಿ ನೋಡಿದಳು. ಅಲ್ಲಿ ದೂರದಲ್ಲಿ ಅದೆಂತದ್ದೋ ಆಕೃತಿ ನಿಧಾನವಾಗಿ ಚಲಿಸುತ್ತಿರಲು, ಅದು ಈಕಡೆಯೇ ಅಳುಕಿನಿಂದ ಬತ್ತಿದ್ದು ಚಲುವನಂತೆಯೇ ಕಂಡಿತಾದರೂ, ಹತ್ತಿರ ಬರುಬರುತ್ತ ಗಡ್ಡ ಮಂಡೆಯಿಲ್ಲದ್ದ ಅದು ನನ್ನ ಗಂಡನಲ್ಲವೆನಿಸಿದರೂ ಯಾಕೋ ಮನಸ್ಸು ಆ ಆಕೃತಿಯಲ್ಲಿ ಕೇಂದ್ರವಾಯಿತು. ಇನ್ನೂ ಹತ್ತಿರವಾದಾಗ ಇದು ಅದೇಯಾಗಿ, ಚಲುವನ ಆಮೆಗಾಲುಗಳು ಬಂದು ಅವನಿದ್ದ ಗರಿ ಬಿಟ್ಟಿದ್ದ ಜನತಾಹೌಸಿನ ಮುಂದೆ ನಿಂತು ಕೆಂಪಿಯನ್ನು ದಿಟ್ಟಿಸಿ ನೋಡಲಾಗದೆ ಆಕಡೆ ಈಕಡೆ ನೋಡುತ್ತಿದ್ದವು. ಕೆಂಪಿಗೆ ಅತ್ತಿದ್ದ ಸಿಟ್ಟಿನಲ್ಲಿ ಏನಾರ ತಗಂಡು ಹಾಕಿ ಬಿಡಬೇಕೆನಿಸಿದರೂ ರಜಸ್ವಾದ ಗಡ್ಡವಿಲ್ಲದ ದುಂಡು ಗದ್ದವನ್ನು ನೋಡಿ ಒಳ ಒಳಗೆ ಅವಳ ಕೋಪವೆಲ್ಲ ನೀರಾಗಿ ಸಮಾಧಾನಿಸಿಕೊಂಡು, ಮಾತಿಗೆ 'ಈಗ ಚೌರಮಾಡಿಸಿ ಆಗಿಲ್ಲಲ್ವೇನೊ ಗಂಡಿಗೆ' ಅಂತ ಕೊಂಕುಮಾಡಿ ಬಾಗ್ಲಲ್ಲಿ ಬಿದ್ದಿದ್ದ ಮಸಿ ಬಟ್ಟೆ ತಾಂಡು ಒಳಿಕೆ ಹೋದಳು. ನಡುಮನೆ ಗೋಡೆಮೇಲೆ ಮಸಿ ತಾಂಡು ಗೀಚಾಕುತ್ತಿದ್ದ ಮಗ ರಾಕಿ ಅಪ್ಪ ಬಂದುದನ್ನು ನೋಡಿ ಓಡಿಬಂದು ಕೆನ್ನೆ ಮುಟ್ಟಿತಾದರೂ ಪೆನ್ನಿಗಾಗಿ ಅಮ್ಮನ ಸೆರಗನ್ನೇ ಹಿಂಬಾಲಿಸಿತು.

ಕಿಟಕಿ ಗೋಡೆ ಮೇಲೆ ಡಬ್ಬದಲ್ಲಿರಿಸಿದ್ದ ರಂಗೋಲಿ ಪುಡಿಗೆ ಹೆಬ್ಬೆರಳೆದ್ದಿ ಹಟ್ಟಿ ಮುಂದಿದ್ದ ಚಪ್ಪಡಿ ಮೇಲೆ ಕುಕ್ಕುರುಗಾಲಲ್ಲಿ ಕೂತು ಹಲ್ಲು ಬೆಳಗಿಕೊಂಡು, ವಾಂತಿ

ಮಾಡನಂಗೆ ನಾಲಿಗೆ ಹುಜ್ಜಿ ಕ್ಯಾಕರಿಸಿ ಉಗಿದು, ಮಕ್ಕೆ ನೀರಾಕ್ಯಂಡು ಬಂದು ನಡುಮನೆ ಕ್ಯಾಲೆಂಡರಲ್ಲಿದ್ದ ದೇವರ ಫೋಟೊಕ್ಕೆ ಕೈ ಮುಗಿದು ಅದರಡಿಲೇ ಕೂತ. ಕೂತ್ಯೆದು ನಿಮಿಷಕ್ಕೆ ಕೆಂಪಿ ಎಲ್ಡು ರಾಗಿ ರೊಟ್ಟಿ ತಂದು ಕೈಗೆ ಬಡಿದು ಅದರ ಮೇಲೆ ಒಂದು ಮಿಧ್ಯೆ ಕಾಯಿ ಚಟ್ನಿ ತಂದು ಹಾಕಿಳು, ಒಳ ಕೋಣೆಲಿ ಅವ್ವನ ಗೋಳುಸ್ಕುಂತ್ತಿದ್ದ ಮಗ ಓಡಿ ಬಂದು ಅಪ್ಪನ ರೊಟ್ಟಿ ಮುಂದೆ ಚಕ್ಲುಬಕ್ಲು ಹಾಕ್ಕೊಂಡು ಕೂತು ಬರಿ ಚಟ್ನಿ ನೆ ನೆಕ್ಕುತಿತ್ತು. ಚಲುವ ಇನ್ನು ರೊಟ್ಟಿ ಬಾಯ್ದಿಕ್ಕಿರಲಿಲ್ಲ ಒಳಗಿಂದ ಕೆಂಪಿ, 'ಮನೆಲಿ ಏನೈತೆ, ಏನಿಲ್ಲ ಅನ್ನಂಗಿಲ್ಲ ಮಕ ತೊಳ್ಕೊಂಡು ಬಂದು ಕುಕಂಡು ಬುಡ್ತನೆ ನನ್ನ ನೊಲೆಷ್ಯಾಲೆ' ಎಂದಳು. ಈ ಮಾತಿನಿಂದ ರೊಟ್ಟಿ ಮೇಲಿದ್ದ ಕೆಂಪಿಯ ಕೈ ಬೆರಳುಗಳು ಚಲುವನಿಗೆ ಬಾಸುಂಡೆಯಂತೆ ಕಂಡವು. ಇದಾವುದನ್ನು ಲೆಕ್ಕಕ್ಕಿಟ್ಟುಕೊಳ್ಳದೆ ರೊಟ್ಟಿಯನ್ನು ಕೈಯಲ್ಲು ಬಾಯಲ್ಲೂ ಹರಿದು ನುಣ್ಣಗೆ ಮಾಡುತ್ತಿದ್ದ. ಇದರ ಮಧ್ಯದಲ್ಲೇ ಕೆಂಪಿ ತಳ ದುಂಡಗಿರ ತಂಬಿಗೆಲಿ ನೀರತಂದು ಕುಕ್ಕುತ್ತ 'ಬೆಳಗ್ಗಿಂದ ಅಲೆ ಎರೆಡು ಸಲ ಬಸ್ಯೆನೋರು ಮೋಟುಬೈಕ್ನಲ್ಲಿ ಬಂದೋದ್ರು, ಹಟ್ಟದಿಂದ ಕೊಬ್ಬರಿ ಇಳಿಸೆವಂತೆ, ಬೇಗ ಉಂಡು ಎದ್ದೋಗು, ಬಾಗ ರಾಗಿ ತಲ್ಲಿಲ್ಲ ಅಂದ್ರೆ ಮನಿಗೆ ಬರಬೇಡ' ಅಂತ ಮುಖಕ್ಕೆ ಒಡೆದಂಗೆ ಹೇಳಿಳು. ಬಸ್ಯೆನೋರು ಎಂಬ ಸೊಲ್ಲು ಕೇಳಿದ ತಕ್ಷಣ ಚಲುವನ ಅಂಗಳಕ್ಕೆ ರೊಟ್ಟಿ ಅತ್ತಿದಂಗಾತು.

ಈ ಬಸ್ಯೆನೋರ ಅಪ್ಪ ಶಿವ್ಯೆನೋರುದು ಹತ್ತೂರಿಗೆ ಹೆಸರುವಾಸಿಯಾದ ಕುಟುಂಬ, ಶ್ರದ್ಧೆ, ಭಕ್ತಿ, ಗೌಡಿಕೆಗೆ ಇವರನ್ನ ಮೀರೊರು ಸುತ್ತಮುತ್ತಲೆಲ್ಲೂ ಇಲ್ಲಿಲ್ಲ. ಆ ಕಾಲದಾಗೇ ಸಿದ್ದಗಂಗ ಮಠಕ್ಕೆ ಹೋಗಿ ಸಂಸ್ಕೃತನೂ ಕಲ್ಕಂಡು ಬಂದಿದ್ರು, ಕುಂಡ್ಲಿ ಬರೋದು, ಜಾತಕಫಲ ಹೇಳೋದು, ಯಂತ್ರ ಮಂತ್ರಿಸಿಕೊಡೋದು ಇತ್ಯಾದಿಯಾಗಿ ಮಾಡ್ತಿದ್ರು, ಸುತ್ತೇಳು ಊರಿನ ಮದುವೆ ಮುಂಜಿಗಳ ಜೋಯಿಸ್ತನನೂ ಇವುರೆ ಆಗಿತ್ತು. ಈ ಎಲ್ಲಾ ಪ್ರವೃತ್ತಿಗಳ ಜೊತೆಗೆ ಊರ ದೇವು ಮಲ್ಲಿಕಾರ್ಜುನ ಸ್ವಾಮಿಯ ಖಾಯಂ ಪೂಜಾದ್ರೂ ಆಗಿದ್ರು, ಇದರ ಫಲವಾಗಿ ಕೆರೆ ಹಿಂದಲ ಹತ್ತೆಕರೆ ಗದ್ದೆ, ಗುಡಿ ಮುಂದಲ ಅಡಿಕೆ ತೆಂಗಿನ ತೋಟ ಇವರಿಗೆ ಬಳುವಳಿಯಾಗಿ ಬಂದಿತ್ತು. ಅಲ್ಲದೆ ಮಲ್ಲಿಕಾರ್ಜುನ ಸ್ವಾಮಿಯ ವಡವೆಯಲ್ಲ ಇವರ ಸುಪರ್ದಿನಲ್ಲೇ ಇತ್ತು. ಶಿವರಾತ್ರಿ ದಿನ ಸ್ವಾಮಿಯನ್ನ ಅಲಂಕರಿಸಿ ಹೂವಿನಿಂದ ಮುಚ್ಚುತ್ತಿದ್ದರು. ಉಳಿದಂತೆ ಇವರ ತಿಜೋರಿಯಲ್ಲಿ ವಡವೆ ಭದ್ರವಾಗಿರುತ್ತಿತ್ತಂತೆ. ಇಂತ ವೈಭೋಗ ಮನೆತನದ ಶಿವ್ಯೆನೋರು ಊರಿಗೇ ದೊಡ್ಡ ಹೆಂಚಿನ ಮನೆ. ಅದಕ್ಕೀಗ ಕಾಂಪೌಂಡೂ ಬಂದು ಬಿಟ್ಟಿದೆ. ಇಷ್ಟೆಲ್ಲಾ ಇದೇಲೆ ಹಸು ಕರು ಹಾಲು ಮೊಸರಿಗೇನು ಬಂಗನ?, ಅಡಿಕೆ ತೋಟಕ್ಕೆ ಅತ್ತಂಡೆಯಾಗಿ ಇವರ ಮನೆ, ಮನೆ ಮುಂದೆಯೇ ದೊಡ್ಡ ಚತ್ರದಂತ ಕೊಟ್ಟಿಗೆ ಮನೆ, ಅದರೊಳಗೆ ಸದಾ ಹತ್ತಾರು ಹಸು ಕರುಗಳು ಮೆಲುಕುತ್ತಿರುತ್ತವೆ. ಅದಕ್ಕೆ ಜಂಟಿಯಾಗಿದ್ದ ಎಮ್ಮೆ ದೊಡ್ಡಿಯಲ್ಲಿ ಆನೆ ಗಾತ್ರದ ಎಮ್ಮೆಗಳು ಸದಾ ಮಲಗಿರುತ್ತವೆ. ಇಷ್ಟೆಲ್ಲ ಇದೇಲೆ ಅವುಗಳ ನೋಡ್ಕಣಕೆ ಆಳು ಕಾಳುಗಳು ಬೇಕಲ್ಲ, ಚಲುವನ ಅಜ್ಜ ನರಸಜ್ಜ ಬಲು ದಿಲ್‌ದಾರ್ ಮನುಷ್ಯನಂತೆ. ಹತ್ತೂರ ನೆಂಟರಿಷ್ಟರೆಲ್ಲ ಕೂಡಾಕ್ಯಂಡು ಕ್ವಾಣನ್ನ ಕಡಿದು ಮಾರ್‍ನಾಮಿ ಹಬ್ಬ ಮಾಡಿ ಕಂಡು ಕಳುಸ್ತಿದ್ನಂತೆ.

ಬರಗಾಲದಗೆ ಬಂದ ಮಾರ್ನಾಮಿ ಗೆ ಕ್ಯಾಣ್ಯೇನೊ ಸಿದ್ದವಿದ್ದು, ಮುದ್ದೆ ತಿರ್ರ್ವಕೆ ರಾಗಿ ಇಲ್ದೆ ಇಪ್ಪತ್ತು ಸೇರು ರಾಗಿಗೆ ಚಲುವನ ಅಪ್ಪ ಬಸಯ್ಯನ್ನ ಶಿವ್ನೈನೋರ ಮನಿಗೆ ಜೀತಕ್ಕೆ ಇಕ್ಕಿ ಆ ವರ್ಷದ ಮಾರ್ನಾಮಿ ಮುಗ್ಸಿನಂತೆ. ಬಸಯ್ಯ ವರ್ಷಕ್ಕೆ ಹನ್ನೆರಡಾಣೆ, ತಿಕ್ಕೊಂದು ಚೆಡ್ಡಿ ಮಾತಿನಂತೆ ಚಲುವ ಪಡ್ದೆ ಆಗ ತನ್ನನೂ ಅವರ ಮಲ್ಲಿ ಕಸ ಎತ್ಕಂಡು, ಎಮ್ಮೆ ಕಾಯ್ಕಂಡು ಜೀತಕ್ಕೆ ಇದ್ದ. ಆ ದಿನಗಳಲ್ಲಿ ಅಪ್ಪನೊಂದಿಗೆ ಕೊಟ್ಟಿಗೆಗೆ ಹೋಗುತ್ತಿದ್ದ ಚಲುವ, ಅಪ್ಪ ದೊಡ್ಡ ದೊಡ್ಡ ತಪ್ಪೆ ಬಾಚಾಕ್ತಿದ್ರೆ, ಮಗ ಚುಪ್ಪು ತಗಂಡು ಗುಂಡಿಲಿ ನಿಂತಿದ್ದ ಗಂಜ್ ಎತ್ತಿ ಹುಯ್ದಿದ್ದಂತೆ. ಕೆಲಸ್ವೆಲ್ಲಾ ಮುಗಿದ ಮೇಲೆ ಅಪ್ಪ ಮಕ್ಕಳಿಬ್ಬರಿಗೂ ತಂಗಳನ್ನ, ತಂಗಳು ಮುದ್ದೆ ತಂದು ಇತ್ತಿತ್ತು ಆಗಿನ್ನೂ ಬಾಲಕರಾಗಿದ್ದ ಇದೇ ಬಸ್ವೈನೋರಂತೆ. ಹೀಗೆ ಚಲುವನಿಗೂ ಈಗಿನ ಬಸ್ವನೋರಿಗೂ ಬಹಳ ಹಿಂದಿನ ನಂಟು. ಮುಂಚೆ ಅಂಗು ಇಂಗು ಹಬ್ಬ ಹರಿದಿನಗಳಲ್ಲಿ ದಬ್ಬಿ ಹಿಡ್ಕಂಡು ಹೋಗಿ ಬಸ್ವೈನೋರ ಮಂತ ನಿಂತ್ಕಂತಿದ್ದ ಚಲುವ, ಕೆಂಪಿ ಮದ್ವೆ ಆದೇಲೆ ಹಂತ ಹಂತವಾಗಿ ಆಕಡೆ ಹೊಗದೆ ಬಿಟ್ಟು ಬಿಟ್ಟಿದ್ದ. ಕೆಂಪಿ ದಯೆಯಿಂದ ಕೊಬರಿ ಸುಳಿಯದ ಕಲ್ಲಾದ ಮೇಲೆ ಬಸ್ವೈನೋರೆ ಯಾರ್ ಕೈಲಾರ ಹೇಳಿಕಳಿಸಿ ಕರಿಸ್ಕಂಡು ಕೊಬ್ಬರಿ ಸುಳಿಸ್ಕಂಡು ಮನೆಲಿದ್ದ ರಾಗಿನೊ ಭತ್ತನೆ ಕೊಟ್ಟು ಕಳುಸಿದ್ರು,

ಚಲುವನ ಗಂಟ್ಲಲ್ಲಿ ರೊಟ್ಟಿ ತಡ್ಕಂತಾ ಇದ್ದಿದ್ರೂ ಒಂದು ಬಲವಾದ ಕಾರಣವಿತ್ತು. ಕಳೆದ ಏಕಾಶಿ ಟೈಮಲ್ಲಿ ಕೊಬ್ರಿ ಸುಳಿಯಾಕೆ ಅಂತ ಐನೋರ ಮನಿಗೋದ ಚಲುವ ಅಂಗಿ ಬಿಚ್ಚಿ ನೆರಕೆಗೆ ಸಿಕ್ಸಿ ವಲ್ಲಿ ತಲಿಗೆ ಸುತ್ಕಂಡು ಕಂಬದಂತ ತೊಡೆಕಾಣಂಗೆ ಪಂಚೆ ಎತ್ತಿಕಟ್ಟಿಕೊಂಡು, ಹಿಮ್ಮುಕವಾಗಿ ಬೇಲೂರ ಗಂಡು ಶಿಲಾ ಬಾಲೆಯಂತೆ ಒಂದೇ ಸಮನೆ ಕೊಬ್ಬರಿ ಸುಳಿದು ಸುಳಿದು ಮಟ್ಟೆ ಒಂದಡಿಕೆ ಗಿಟ್ಟು ಒಂದಡಿಕೆ ಹಾಕುತ್ತಿರುವಾಗ ಮಧ್ಯಾಹ್ನ ಆಗಿದ್ದು ಗೊತ್ತೆ ಆಗಿದ್ದಿಲ್ಲ. ಗಾಳಿನುಗ್ಗಿದನಂಗೆ ಎಲ್ಡು ದಿನ ಮಾಡ ಕೆಲ್ಸನ ಮಧ್ಯಾಹ್ನಕ್ಕೆ ಮುಕ್ತಾಕಿದ್ದ. ಹೀಗಿರುವಾಗ ಚಲುವನ ಬೆನ್ನಲ್ಲಿ ಬೆವು ಕರಗೆ ಹರಿತಾ ಇತ್ತು. ಸಿಪ್ಪೆ ಎಬ್ಬ ರಬಸಕ್ಕೆ ಬೆನ್ನಮೂಳೆ ನರಗಳು ನೀರೊಳಗೆ ಮೀನಾಡಿದಂಗೆ ಆಡವು. ಹಿಂಗೆ ತಲ್ಲೀನತೆಯಲ್ಲಿರೋವಾಗ್ಲೆ ಹಿಂದ್‌ಗಡೆಯಿಂದ ಯಾವುದೊ ಹೆಣ್ಣು ಧನಿ 'ಚಲುವಾ ಕಾಫಿ ಕುಡಿಯೋ, ಒಂದೇ ಸಮ್ನೆ ಹಿಂಗೆ ಕೆಲ್ಸ ಮಾಡ್ತಿದಿಯಲ್ಲ' ಎಂದಿತು. ಬೆಚ್ಚಾರಿಸಿಕೊಂಡ ಚಲುವನ ಊಹೆ ನಿಜವಾಗಿತ್ತು. ಅದು ಬಸ್ವೈನೊರ ಎಲ್ಡ ನೇ ಹೆಂಡ್ತಿ ರೂಪ. ಮೊದಲೇದು ಎರೆಡು ಮಕ್ಳ ಹೆತ್ತು ಕಾರಣವಿಲ್ಲದ ಕಾಯ್ಲೆಗೆ ತೀಳ್ಕೊಂಡ ನಂತರ, ವರ್ಷ ತುಂಬೊದೊಳಗೆ ಬಸ್ವೈನೋರ ವಯಸ್ಸಿನ ಅರ್ಧಕ್ಕಿಂತ ಕಮ್ಮಿಯ ರೂಪನ್ನ ಗುಬ್ಬಿಯಿಂದ ತಂದು ಕೈಗೆ ಹಾಲಬಿಟ್ಟು ಶಿವ್ನೈನೋರು ಕಣ್ಮುಚ್ಚಿದ್ರು, ಬಸ್ವೈನೋರು ಆ ಎಳೆದ ಮದುವೆ ಆಗದ್ಕು ಅಟ್ಟದಿಂದ ತೆಂಗಿನ ಕಾಯಿಬಿದ್ದು ಅವರ ಸೊಂಟ ಮುರಾಕು ಒಂದೇ ತಿಂಗಳು ಗ್ಯಾಪು. ಅದಾದೆಲೆ ಅವರು ದಿನದ ಹೆಚ್ಚು ಸಮಯವ ಊರೂರು ಅಲೆದು ಸೊಂಟ ತಿಕ್ಕಿಸ್ಕಣದ್ರಲ್ಲೇ ಕಳಿತಾ ಇದ್ರು. ಇತ್ತೀಚೆಗೆ ಜಾಜೂರಿಗೆ ಹೋಗಿ ಒಂದಾಣೆಲಿ ಸೊಂಟ ಕಟ್ಟಿಸ್ಕೊಂಡು ಬಂದೇಲೆ ಎದ್ದು ತಿರ್ಗಾಡದು, ಚೊಟ್ಟಕ್ನಗೆ ಗಾಡಿ ಹೊಡೆಯದು ಮಾಡ್ತಾ ಇದ್ರು.

ಬಸ್ಯೆನೋರ ಎಲ್ಡನೇ ಹೆಂಡ್ತಿ ರೂಪಮ್ಮನ ರೂಪದ ಬಗ್ಗೆ ಅಲ್ಲಿ ಇಲ್ಲಿ ಜನ ಆಡ ಮಾತ ನಿರ್ಲಿಪ್ತತೆಯಿಂದ ಕೇಳಿಸ್ಕಂಡಿದ್ದ ಚಲುವ ಅದರ ಗೋಜಿಗೋಗದೆ ಕಾಪಿ ಬಿಡಿಸ್ಕಣಕೆ ನೆರೆಲಿ ಸಿಕ್ಸಿದ್ದ ಸ್ಟೀಲ್ ಲೋಟ ತಕ್ಕಣಕೆ ಅಂತ ಹೋದ. ಲೋಟಕ್ಕೆ ಕೈಯಾಕಕೆ ಮುಂಚೆನೇ 'ಅದ್ಯಾಕೆ ತಾಂತಿಯ ಬಾರೋ ಇದ್ರಲ್ಲಿ ಕುಡಿ, ಇಲ್ಲಿ ಯಾರು ಇಲ್ಲ' ಎಂದಿತು. ಈ ಮಾತಿನಿಂದ ಚಲುವನ ಎದೆ ನಡುಗಿದಂಗಾಗಿ ರೂಪಮ್ಮನ ಕಡಿಕೆ ನೋಡಬೇಕೆನಿಸಿ ಹಲ್ಲು ಗಿಂಜಿ ಕೇಳಿಯೂ ಕೇಳಿಸ್ಕಣದನಂಗೆ ನೆರೆಲಿದ್ದ ಲೋಟ ತಗಂಡು ಬಾನಿ ನೀರಲ್ಲಿ ಅಲ್ಲಾಡಿಸಿ ಚೆಲ್ಲಿ ಎಲ್ಲೂ ಕೈಯಲ್ಲೂ ಬಾಚಿ ಲೋಟ ಹಿಡ್ಕಂಡು ರೂಪಮ್ಮನ ಮುಂದೆ ಕಾಪಿಗಾಗಿ ಒಡ್ಡಿದ. ರೂಪಮ್ಮ ಒಳಗೊಳಗೆ ನಗುತ್ತ ಚಲುವನ ಲೋಟಕ್ಕೆ ತಾನು ತಂದಿದ್ದ ಲೋಟವ ತಾಗಿಸ್ಕಂಡೇ ಉಯ್ದುಳು. ಇದರಿಂದ ಚಲುವನ ಮುಖ ಒಣಗಿದ ಎಡಮಟ್ಟೆಯಂತಾಗಿ ನೆರೆ ಕೆಳಗಿದ್ದ ಸಣ್ಣ ನೆರಳಿಗೆ ಮೈಯಾಕಿ ಕೂತು ಕಾಪಿ ಈರುತ್ತಿರಲು, ರೂಪಮ್ಮನ ಮೊಲದ ಮರಿಯಂತ ಕಾಲುಗಳು ಮಾತ್ರ ಕಾಣುತ್ತಿದ್ದವು. ಅವಕ್ಕೆ ಕೆಂಪು ಉಗುರು ಬಣ್ಣ ಬಳಿದಿತ್ತು. ಚಲುವ ಇನ್ನು ಎಲ್ಡು ಗುಕ್ಕು ಎಳೆದಿರಲಿಲ್ಲ ರೂಪಮ್ಮನ ಆ ಪಾದಗಳು ಬಂದು ಚಲುವ ಕೂತಿದ್ದರಿಂದ ಮೂರಡಿ ದೂರದಲ್ಲಿದ್ದ ಎತ್ತಿನ ಗಾಡಿ ಮೂಕಿನ ಮೇಲೆ ಕಾಲ ಮೇಲೆ ಕಾಲಾಕಿಕೊಂಡು ಕುಳಿತುಕೊಂಡವು. ಪಾದದಿಂದ ಮೇಲ್ಪಟ್ಟ ಪರಂಗಿ ಹಣ್ಣಿನಂತ ರೂಪಾಳ ಮೊಣಕಾಲು, ಸೀರೆಯಿಂದ ಹೊರಬರಲು ತವಕಿಸುವಂತೆ ಮೊಬ್ಬುಗತ್ತಲಲ್ಲೂ ಹೊಳೆಯುತ್ತಿದ್ದವು. ಇದಾವುದೂ ಚಲುವ ನೋಡದಿದ್ದರೂ ಕಾಣುತ್ತಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ತನ್ನ ಜೀವಮಾನದ ಉದ್ದಕ್ಕೆ ಎಂದೂ ಮೂಸದ ಗಮಲು ರೂಪಾಳ ಕಡೆಯಿಂದ ಚಲುವನ ಮೂಗನ್ನು ಬಡಿಯುತ್ತಿತ್ತು. ಅದು ಮಧ್ಯಾಹ್ನದ ಬಿರು ಬಿಸಿಲಿನಲ್ಲೂ ಚಲುವನ ಸುತ್ತಮುತ್ತಲನ್ನು ತಂಪುಗೊಳಿಸಿತ್ತು. ಕಾಫಿ ಸುಡುತ್ತಿದ್ದುದಕ್ಕಿಂತ ಹೆಚ್ಚಾಗಿ ಆ ಶೆಂಟವಾಸನೆಯಿಂದ ಚಲುವನ ಎದೆ ಬಿಸಿ ಏರಿ ತರಗುಡುತ್ತಿತ್ತು. ರೂಪ ಚಲುವನನ್ನು ಏನೇನೊ ವಿಚಾರಸಿ ಅದ್ಯಾವುದಕ್ಕೂ ತಲೆಯೆತ್ತದಿದ್ದಾಗ 'ಇಲ್ನೋಡು ಚಲುವ ಎಂದಾಗ ಅನಿವಾರ್ಯವಾಗಿ ಕತ್ತೆತ್ತಿ ರೂಪಮ್ಮಳ ರೂಪದ ಕಡೆ ನೊಡಬೇಕಾಗಿ ಬಂತು. ತಕ್ಷಣ ಆ ನಗುಮುಖ ಚಲುವನಡೆಗೆ ಉಬ್ಬಾರಿಸಿ ಕಣ್ಣುಮಿಟುಕಿಸಿತು. ಎದೆಯೊಳಗೆ ತಬ್ಬಿಬ್ಬಾದ ಚಲುವ ಬಂಡೆಯಂತೆ ನಿರ್ಲಿಪ್ತವಾಗಿ ಕೂತು ನೊಣ ಮುತ್ತುತ್ತಿದ್ದ ಲೋಟ ನೋಡುತ್ತಿದ್ದನು. ಸುಮಾರು ಹೊತ್ತು ಹಿಂಗೆ ಕೂತಿದ್ದ ಚಲುವ ತನ್ನ ಕರ್ತವ್ಯ ಪ್ರಜ್ಞೆ ನೆನಪಾದಂತಾಗಿ ಲೋಟ ತೊಳೆದು ನೆರ್ಕೆಗೆ ಸಿಕ್ಕ ನೆಪದಲ್ಲಿ ಮೇಲೆದಳನ ಅಂದ್ಕಂಡು ತಡಕಾಡುವಷ್ಟರಲ್ಲಿ ಏನು ಅರ್ಜೆಂಟು ಕೂತ್ಕ ಚಲುವ, ಬಿಸ್ಲು ಜಾಸ್ತಿ ಐತೆ" ಎಂದಿತು. ಇದರಿಂದ ಮತ್ತೆ ತಟಸ್ತನಾದ ಚಲುವ ಇನ್ನೊಂದ್ಯೆದು ನಿಮಿಷ ಕಳುದ್ಮೇಲೆ ಮತ್ತೆ ಲೋಟಕ್ಕೆ ಕೈ ಹಾಕಲಾಗಿ, ಅದನ್ನು ಪರುಕ್ ಅಂತ ಕಿತ್ಕಂಡ ರೂಪ ತಾನೆ ಹೋಗಿ ಲೋಟ ತೊಳೆದು ತಂದು ನೆರೆಗೆ ಸಿಕ್ಸಿ ಚಲುವನ ಮುಖಕ್ಕೆ ತನ್ನ ಸೆರಗ ಸೋಕಿಸಿದಾಗ ಚಲುವನಿಗೆ ಹಾರ್ಟ್‌ಫೈಲಾದಂಗಾಯ್ತು. ಇದೆಲ್ಲಾ ಘಟಿಸುವಾಗ ದೂರದ ಸ್ಕೂಲಿನಲ್ಲಿ ಮೇಷ್ಟ್ರು ಹುಡುಗರಿಗೆ ಮಗ್ಗಿ ಹೇಳ್ಕೊಡ್ತಿದ್ದು ಅವು ಜೋರಾಗಿ ಕಿರುಚುತ್ತಿದ್ದ ಶಬ್ದ, ಗೇಟ್ ಹತ್ತಿರ ಮಲಗಿದ್ದ ನಾಯಿ ಆಗೊಮ್ಮೆ ಈಗೊಮ್ಮೆ ಬಾಲ ಅಲ್ಲಾಡಿಸುತ್ತಿದ್ದುದ್ದನ್ನು ಬಿಟ್ರೆ ಬೇರೆ ಏನೂ ಅಲ್ಲಿರಲಿಲ್ಲ.

ಈ ಕಹಿ ಅನುಭವವನ್ನು ಎದೆಯಲ್ಲಿ ಬಚ್ಚಿಟ್ಟುಕೊಂಡು ಸಂಜೆ ತನ್ನ ಇದ್ದಬದ್ದ ಕೊಬ್ಬರಿಯನ್ನೆಲ್ಲ ಸುಳಿದು, ಐನೋರು ಬರದ್ನೆ ಕಾಯ್ಕಂಡಿದ್ದು ಅವರು ಕೊಟ್ಟ ಇಪ್ಪತ್ತು ಸೇರು ರಾಗಿ ಹೆಗಲಿಗಾಕಿಕೊಂಡು ತನ್ನ ಹಟ್ಟಿದಾರಿ ತುಳಿದ. ಐನೋರ ಮನೆ ಹಿತ್ತಲಿನಿಂದ ಕಾಲು ಕಿತ್ತಿಡುವಾಗ ದೊಡ್ಡ ಗೋಡೆಲಿದ್ದ ಸಣ್ಣ ಕಿಟಕಿಯಿಂದ ಬಳೆ ದಡಗುಟ್ಟಿ ಮೂಗಿಗೆ ಮತ್ತದೇ ಮಧ್ಯಾಹ್ನದ ಸೆಂಟ ವಾಸನೆ ಬಡಿಯಿತು. ಇನ್ನಷ್ಟು ಗಾಬರಿಗೊಂಡ ಚಲುವ ನಡಿಗೆಯನ್ನ ಜೋರು ಮಾಡಿದ. ಹೀಗೆ ಚಲುವನ ಬದುಕಿನಲ್ಲಿ ಎಂದೂ ಕಾಣದ ಅವಗಡವೊಂದು ಎದುರಾದುದರಿಂದ ಬೆಪ್ಪಾದಂತಾಗಿ ರಾತ್ರಿ ಇನ್ನೆಂದೂ ಐನೋರ ಮನೆ ದಾರಿ ತುಳಿಯಬಾರದೆಂದು ಶಪತಮಾಡಿದವನಂತೆ ಕೆಂಪಿಯನ್ನು ಅವುಚಿಕೊಂಡು ಕೂಡಿಕೊಂಡಿದ್ದ.

ಮಾರನೆ ದಿನ ಬೆಳಗಾಗೊದೊಳಗೆ ಬಸ್ಯೆನೋರು ಮತ್ತೆ ಮೋಟು ಬೈಕ್ ಹಾಕೊಂಡು ಚಲುವನ ಮಂತಕೆ ಬಂದು 'ಇನ್ನೊಂದು ಹಟ್ಟದಲ್ಲಿ ಕೂಳೆ ಕಾಯಿ ಹಾಕಿದ್ದೆ, ಅವೊಂದೈನೂರು ಆಗಬಹುದು ಬಂದು ಸುಳ್ಕೊಡು ಚಲುವ' ಎಂದಾಗ ಚಲುವನ ಬಾಯಲ್ಲಿ ಮಾತು ಹೊರಡಲೇ ಇಲ್ಲ. ಕೆಂಪಿ ಸೆರಗು ಕವುಚಂಡು ಬತ್ತರೋಗಿ ಬುದ್ದಿ ಎಂದು ಹೇಳಿ ಕಳಿಸಿದ್ದಳು. ಒಲ್ಲದ ಮನಸ್ಸಿನಿಂದ ಕೆಂಪಿಗೆ ಹೆದರಿ ಮತ್ತೆ ಹೆಗಲಿಗೆ ಹಾರೆ ಏರಿಸಿಕೊಂಡು ದಾರಿಯುದ್ದಕ್ಕೂ ಕಳವಳಗೊಂಡಂತೆ ಹೋಗಲೋ ಬೇಡವೋ ಎಂದು ಯೋಚಿಸುತ್ತಲೆ ಐನೋರ ಮನೆ ತಲುಪಿದ್ದ. ಪುಣ್ಯಕ್ಕೆ ಅಲ್ಲಿ ರೂಪಮ್ ಕಾಣಿಸಲಿಲ್ಲ. ಈ ಕಡೆ ಇನ್ನೊಂದು ಮೂಲೆಲಿ ಒಂದೈನೂರು ಕೊಬರಿಗಳು ಬಿದ್ದಿದ್ದವು. ಬಂದಷ್ಟೇ ಅಂಗಿ ಕಳಚಾಕಿ ಹಾರೆ ನೆಲಕ್ಕೆ ನಾಟಿ ಬರಬರ ಸುಳಿಯ ತೊಡಗಿದ. ಬಸ್ಯೆನೋರು ಗರಿ ಗರಿ ಪಂಚೆ ಶಲ್ಯ ಹಾಕ್ಕೊಂಡು ಬಂದು ಕೊಬ್ಬರಿಗಳನ್ನು ಕೆಚ್ಚಿ ಅಲ್ಲಾಡಿಸಿ ನೋಡಿ 'ಚನ್ನಾಗಿ ಬಂದವೆ ಅಲ್ವೇನೊ ಚಲುವ ಎಂದು ಪ್ರಶ್ನಿಸಿ, ಇಲ್ಲೆ ಪತ್ತೂರಲ್ಲಿ ಒಂದು ಲಗ್ನ ಐತಿ ಹೋಗಿ ಬತ್ತಿನ ಸುಳಿತಾ ಇರು, ಮಧ್ಯಾಹ್ನದ ಊಟವ ನಮ್ಮನೇಳು ಕೊಡ್ತಾಳೆ ಉಣ್ಣು ಎಂದು ಹೇಳಿ ಮೋಟು ಬೈಕ್ ಹಾಕಿಕೊಂಡು ಹೊರಟು ಬಿಟ್ಟರು. ಊರಾಚೆ ತೋಟಕ್ಕೆ ಅತ್ತಂಡೆಯಾಗಿದ್ದ ಐನೋರ ಮನೆ ಇತ್ತ ಆಳು ಬಂದು ದನ ಕಟ್ಟಿ ಕಸ ಎತ್ತಿ ಹೋದ್ಮೇಲೆ ಯಾರೂ ಸುಳಿಯದೆ ಬಹುತೇಕ ನಿರ್ಜನವಾಗುತ್ತಿತ್ತು. ಇದನ್ನರಿತ ಚಲುವ ದಾವಾದನಂತೆ ಆ ಕಡೆ ಈ ಕಡೆ ನೋಡದಂಗೆ ಒಂದೇ ಸಮನೆ ಕೊಬರಿ ಸುಳಿತಿದ್ದ. ಒಂದೊಷ್ಟತ್ತಾದೇಲೆ ಮತ್ತೆ ಅತ್ತಕಡೆಯಿಂದ ಗೆಜ್ಜೆ ಸದ್ದು ಕೇಳಿಸತೊಡಗಿತು. ಅದು ಹತ್ತಿರಾಗುತ್ತ ಆಗುತ್ತ ನೆನ್ನೆಯ ಗಮಲು ಮೂಗಿಗೆ ಬಡಿಯತೊಡಗಿತು. ಇದಾವುದನ್ನು ಗಮನಿಸಿಯೂ ಗಮನಿಸದವನಂತೆ ತನ್ನ ಪಾಡಿಗೆ ತಾನಿದ್ದ. ಹತ್ತಿರ ಬಂದುದೇ 'ತಿಂಡಿ ತಿಂದು ಸುಳಿವಂತೆ ಬಾ ಚಲ್ವ, ಮಕ ತೊಕ' ಎಂದಳು. ಸಾವರಿಸಿಕೊಂಡವನಂತೆ ಇಲ್ಲ ಕಣವ್ವ ಇನ್ನೊಂದೀಸು ಅದವೆ, ಮುಗುದ್ಮಲೆ ತಿಂತೀನಿ' ಅಂದನು. ಟೈಮಾಗುತ್ತೆ ಬಾ ಎಂದು ಬಗ್ಗಿದ್ದ ಚಲುವನ ಬುಜವನ್ನು ಮುಟ್ಟಿ ಎಳೆಯಿತು. ಅವಕ್ಕಾದ ಚಲುವ ನಿಗುತುಕೊಂಡು ತಲೆಗೆ ಸುತ್ತಿದ್ದ ವಲ್ಲಿಯ ಬಿಚ್ಚುತ್ತ ಏನೂ ತೋಚದವನಂತೆ ರೂಪಮ್ಮನ ಹಿಂಬಾಲಿಸಿದ. ಮನೆ ಹೊರಗಿನ ಜಗತಿ ಮೇಲೆ ವಿರಮಿಸಲು ಮುಂದಾದಾಗ ರೂಪ 'ಬಾ ಒಳಿಕೆ,

ಪಡಸಾಲೆಗೆ ಬರಬಹುದು' ಎಂದಳು. ಕೆಲಸ ಕಾರ್ಯವಿದ್ದಾಗ ಪಡಸಾಲೆಗೆ ಹೋಗಿ ಬರುತ್ತಿದ್ದ ಚಲುವ, ಇಲ್ಲಿಗೆ ತಾರವ್ವ' ಎಂದನು. “ಬೆಳಗ್ಗಿಂದ ಕೆಲಸ ಮಾಡಿ ಸುಸ್ತಾಗ್ಯೆತೆ, ತಿರಾಡಕಾಗಲ್ಲಾ ಬಾ ಒಳಿಕೆ' ಎಂದಾಗ, ಇಲ್ಲ ಅನ್ನಕಾಗದೆ ಮೆಟ್ಟಿಲು ದಾಟಿ ಹೊಸಿಲಿನಿಂದ ಕಾಲು ತೆಗೆದು ಒಳಗಿಕ್ಕಿ ಅಲ್ಲೆ ಗೋಡೆಲಿದ್ದ ಲೋಟ ತೊಂಡು ನಿಲ್ಲುವಷ್ಟರಲ್ಲಿ, ರೂಪ ಒಳಗಿನಿಂದ ಒಂದು ತಂಬಿಗೆ ನೀರು ತಂದು ಚಲುವನ ಲೋಟಕ್ಕೆ ಉಯ್ದಳು. ಅದನ್ನ ಮ್ಯಾಕೆ ಗಟಗಟ ಕುಡಿಯುತ್ತಿರುವಾಗ ರೂಪ ಹಿಂದಿನಿಂದ ಚಲುವನ ಕರಿ ಬೆನ್ನ ಅನಾಮತ್ತಾಗಿ ಬಾಚಿ ತಬ್ಬಿಕೊಂಡಳು. ಇದರಿಂದ ಗಾಬರಿಗೂಂಡ ಚಲುವ ನೆತ್ತಿಗತ್ತಿಸಿಕೊಂಡು ಒಂದೆ ಸಮನೆ ಕೆಮ್ಮ ತೊಡಗಿದನು. ರೂಪ ನೀರು ತಗಂಡು ತಲೆಗೆ ತಟ್ಟುತ್ತ, ಎದೆಯನ್ನು ನೀವುತ್ತ ಚಪ್ಪರಿಸ ತೊಡಗಿದಳು. ಚಲುವ ಬ್ಯಾಡ ಕಣವ್ವ, ಬ್ಯಾಡ ಕಣವ್ವ, ಎಂದು ಅಂಗಾಲಾಚ ತೊಡಗಿದನು. ಈ ಪ್ರಸಂಗ ಕ್ಷಣ ಹೊತ್ತು ನಡೆದು, ಕುಪಿತಳಾದ ರೂಪ, ಒಂದೇ ಸಮನೆ ಚಲುವನನ್ನು ತಬ್ಬಿಕೊಂಡು ಅಳತೊಡಗಿದಳು. ಅಳುತ್ತ ಅಳುತ್ತ, ಮದುವೆ ಆಗಿ ಎರಡು ವರ್ಷ ಕಳೆದರೂ ಮಕ್ಕಳಾಗದಿರುವುದು, ಬಸ್ಯೆನೋರು ಸೊಂಟ ಹಿಡ್ಕಂಡು ರಾತ್ರೆಲ್ಲ ಉರಿ ಹೊಡ್ಡ ಅಂತ ಹೊರಳಾಡುವುದು ಮುಂತಾದುವುಗಳನ್ನು ಹೇಳತೊಡಗಿದಳು. ಚಲುವ ಬಿಡಿಸಿಕೊಂಡು 'ಆತು ಕಣವ್ವ, ಆತು ಕಣವ್ವ, ರೊಟ್ಟಿ ತತ್ತ ಹೋಗವ್ವ' ಎಂದು ಬಾಗಿಲು ದಾಟಿ ಹೊರ ಬಂದವನೆ ಜಗತಿ ಮೇಲೆ ಬೆವೆಯುತ್ತ ಕುಳಿತ. ರೂಪ ಹೇಗೊ ಸಂತೈಸಿಕೊಂಡು ರೊಟ್ಟಿ ತಂದುಕೊಡಲು ಒಳಗೋದಳು. ಚಲುವ, ರೊಟ್ಟೂ ಬ್ಯಾಡ ಕೊಬ್ರೂ ಬ್ಯಾಡ ಎಂದು ಹಾರೆ ಹೆಗಲಿಗಾಕಿಕೊಂಡು ಎನ್ನೊ ಬಿದ್ನೋ ಅನ್ನೊನಂಗೆ ತನ್ನ ಹಟ್ಟಿಕಡಿಕೆ ಓಡಿ ಬಂದಿದ್ದ.

ಇದೆಲ್ಲವೂ ಒಮ್ಮೆಲೆ ನೆನಪಾಗುತ್ತ ಕೆಂಪಿ ಕೊಟ್ಟ ರೊಟ್ಟಿ ಚಲುವನ ಗಂಟಲಲ್ಲಿ ಇಳಿಯದಾಯಿತು. ಬೆವರ ತೊಡಗಿದನು. ಕೆಂಪಿ ಸಿಟ್ಟಿನಿಂದ 'ಹೇ ಮೂದೇವಿ, ಐನೋರ ಮನೆಗೆ ಕೊಬ್ರಿ ಸುಳ್ಯಾಕೆ ಹೋಗೋಕು ಬೇಗ ತಿಂದು ಎದ ಅಂತ ಹೇಳಿದ್ದು ಕೇಳುಸ್ಲಿಲ್ವ, ಎನೋ ಯೋಚನೆ ಮಾಡ್ಕಂಡು ಕೂತ' ಎಂದು ಗದರಿದಳು. ಚಲುವನ ಗಂಟಲಲ್ಲಿ ರೊಟ್ಟಿ ಇಳಿಯದಾಗಿ ಮಿಕ್ಕಿದ ಅರ್ದ ಮುರ್ಕು ಮಡಿಚಿ ಚಡ್ಡಿ ಜೇಬಿಗಿಟ್ಟುಕೊಳ್ಳುತ್ತಿರಲು, ಕೆಂಪಿ ಮಾತು ಮುಂದುವರೆಸಿ ಇವತ್ತು ಆ ಮಗಿನ ಕಳಿಸಿ ಯಾತ್ಕೂ ಬ್ಯಾಡ್ಡ ಆ ಜಯಿ ಮಲ್ಲಿ ಒಂದು ಬಟ್ಟು ಅಸೀಟ್ ಇಸ್ಕಂಡು ಬಂದು ರೊಟ್ಟಿ ಹಾಕಿದಿನಿ, ಐನೋರ ಮಲ್ಲಿ ರಾಗಿ ಇಸ್ಕಂಡು ಬರ್ಲಿಲ್ಲ ಅಂದ್ರೆ ರಾತ್ರಿಗೆ ಉಪಾಸನೆಯ ಎಂದಳು. ಅದೇ ಟೈಮಿಗೆ ಹೊರಗಿಂದ ಮೋಟು ಬೈಕ್ ಸೌಂಡ್ ಆತು. ಚಲುವ ಬಗ್ಗೆ ನೋಡಲಾಗಿ ಈಗ ಮತ್ತೊಮ್ಮೆ ಸಾಕ್ಷತ್ ಬಸ್ಯೆನೋರೆ ಮನೆತಕೆ ಗಾಡಿ ಹೊಡ್ಕಂಡು ಬಂದಿದ್ರು, ಮುರುಕು ಬಾಗಿಲಿನಿಂದ ಬಾಗಿಕೊಂಡು ಹೊರಬಂದ ಚಲುವನ್ನ ಕಂಡು ಕೀರಲು ಧನಿಯಲ್ಲಿ ಬಸ್ಯೆನೋರು ಎಷ್ಟು ಸಲೀನ್ಲ ಚಲ್ವ ನಿನ್ನ ಹುಡಿಕ್ಕಂಡು ಬರೋದು, ನನಿಗೇರೆ ಸೊಂಟ ಆಗಲ್ಲ, ಬಾ ಹತ್ಯೆ ಹೋಗಾನ' ಅಂದರು. ದೂಸ್ರ ಮಾತಾಡದ ಚಲುವ ಹೆಗಲಲ್ಲಿದ್ದ ವಲ್ಲಿಯ ತಲಿಗೆ ಸುತ್ಕಂಡು, ಮೂಲೆಲಿದ್ದ ಹಾರೆಯ ಹೆಗಲಿಗೆ ಹಾಕ್ಯಂಡು ಬಸ್ಯೆನೋರ ಗಾಡಿಲಿ ಮರದ ಕೊಲ್ಲು ಕುಕಂಡಂಗೆ ಕುಕಂಡ.

ಅಪರೂಪಕ್ಕೊಮ್ಮೆ ಯಾರಾದ್ರು ಗಾಡಿಲಿ ಕೂತ್ಕಂತ್ತಿದ್ದ ಚಲುವ ಬಿದ್ದೆನೆಂಬ ಭಯದಿಂದ ಶಡುತ್ಕಂಡನಂಗೆ ಹಿಂದಗಡೆ ಕಂಬಿ ಹಿಡ್ಕಂಡು ನೆಟ್ಟಗೆ ಕೂತಿದ್ದ. ಗಾಡಿ ತಗ್ಗು ದಿಣ್ಣೆಗಳಲ್ಲಿ ಹತ್ತಿ ಇಳಿದು ಊರದಾರಿ ಹಿಡಿಯಿತು. ಸ್ವಾಮಿ ದೇವಸ್ಥಾನದ ಮುಂದೆ ಹೋಗುವಾಗ ಬಸ್ಯೆನೋರಿಗೆ ನಿಮ್ಮಟ್ಟಿಕೇರಿ ಹುಡುಗ ದಯ ಅನ್ನನ್ನು ಮೊನ್ನೆ ಪ್ಯಾಟೆ ಹುಡುಗ್ರನ್ನ ಕಟ್ಕಂಡು ಗುಡಿ ಒಳಿಕೆ ನುಗ್ಗಿದ್ದರಿಂದ ದೇವ್ರು ಮುಕ್ಕಾಗಿ, ಪೂಜೆ ಪುನಸ್ಕಾರ ನಿಂತೋಗಿ ಪುಣ್ಯವಾದ್ರೆ ಮಾಡ್ಯೆತನ್ಯ ಮಾಡತಕ್ಕ ಗುಡಿಗೆ ಬೀಗ ಹಾಕಿರುವ ವಿಷಯವನ್ನು ಪ್ರಸ್ಥಾಪಿಸಬೇಕೆನಿಸಿದರೂ ಈ ದಡ್ಡ ಮುಂಡೇದ್ರೆ ಏನು ಗೊತ್ತಾಗುತ್ತೆ ಅಂತ ಸುಮ್ಮನಾದರು. ಆದ್ರು ಮನಸ್ಸು ತಡಿದೆ 'ನೋಡ್ಲ ಚಲ್ವ ಊರಲ್ಲಿ ನಿಮ್ಮಟ್ಟಿ ಕೇರಿದ್ದೆಲ್ಲ ಬಹಿಷ್ಕಾರ ಹಾಕಿದಿವಿ, ಆ ಬೋಳಿಮಗಂಗೆ ಬುದ್ದಿಕಲ್ಪತನ್ನ ಯಾರೂ ಕೆಲ್ಸಕ್ಕೆ ಕರಂತಾ ಇಲ್ಲ, ಆದ್ರೂ ಏನೋ ಪಾಪ ನೀನು ನಮ್ಮಪ್ಪನಕಾಲದಿಂದ ನಮ್ಮನಿಗೆ ನೆಡ್ಕಂತಿದಿಯ ಅಂತ ಕರಂಡು ಹೋಗ್ತಿರದೆಯಾ' ಅಂದರು. ಚಲುವ ಎಂದು ಹೂಗುಡುತ್ತಿದ್ದನು.

ಬಸ್ಯೆನೋರ ಗಾಡಿ ಗೇಟ್ ಮುಂದೆ ನಿಂತಿತು. ಚಲುವ ಅದರಿಂದ ಕೆಳಗಿಳಿದು ನಿದಾನಕ್ಕೆ ಗೇಟ್ ಬಾಗಿಲು ತೆಗೆದು ಒಳಪ್ರವೇಶಿಸಿದ. ಬಸ್ಯೆನೋರ ಹಿರಿ ಹೆಂಡ್ತಿ ಮಕ್ಕಳಿಬ್ಬರು ಯುನಿಫಾರ್ಮ್ ಹಾಕ್ಯಂಡು ರೆಡಿಯಾಗಿ ಅಪ್ಪ ಬರೋತನ್ನ ಮುಟ್ಟ ಆಟ ಆಡ್ತಿದ್ದು, ಅದರಲ್ಲೊಂದು ಚಲುವನ ಕಾಲಿಗೆ ಅಡ್ರಾಕ್ಯಂಡು ಬಿಡು, ಹೆಣ್ಣು ಮಗ ತಮ್ಮನನ್ನ ಮುಟ್ಟ ಪ್ರಯತ್ನದಲ್ಲಿ ಚಲುವನ್ನ ಸುತ್ತುಗಾಣ ಹೊಡಿಸಿಬಿಡ್ತು. ತಪ್ಪಿಸ್ಕಣ ಪ್ರಯತ್ನದಲ್ಲಿ ಗಂಡುಮಗ ಚಲುವನ ಕಾಲು ಸಂದಿಲೇ ನುಸ್ಯಕೆ ರಾಪಾಡದು. ಮೊದಲೆ ತೊಡುಗಾಲು ಚಲುವ ಅವರಿಂದ ಬಿಡಿಸ್ಕಣಕ್ಕೆ ಹರಸಾಹಸ ಮಾಡಬೇಕಾತು. ಒಳಪ್ರವೇಶಿಸಿದಂತೆ ಐನೋರ ಮನೆ ದೊಡ್ಡ ಬಾಗಿಲೂ ಸಹ ಮುಚ್ಚಣಂಗೆ ಕೊಬರಿ ರಾಶಿ ಮನೆ ಮುಂದೆ ಬಿದ್ದಿತ್ತು, ಹೋದಬಾರಿಗಿಂತ ಇದು ಅತಿ ಎನಿಸಿತು. ಇನ್ನು ತಡ ಮಾಡದೆ ಚಲುವ ಅಂಗಿ ಕಳಚಾಕಿ ಹಾರೆಯ ಒಂದೆರೆಡು ಸರಿ ತೆಗೆದು ಹಾಕಿ ತೆಗೆದು ಹಾಕಿ ಗಟ್ಟಿ ನೆಲಕ್ಕೆ ನಾಟಾಕಿ ಡರ್ ಬುರ್ ಅಂತ ಸಿಪ್ಪೆ ಸೀಳ ತೊಡಗಿದ. ಏನೊ ನೆನಿಸ್ಕಂಡಂತೆ ಮನೆ ಒಳಗೋಗಿ ಹೊರಬಂದ ಬಸ್ಯೆನೋರು ಕಾನ್ವೆಂಟ್‌ಗೆ ಬಿಟ್ಟುಬರಲು ಹಿಂದೊಂದು ಮುಂದೊಂದರಂತೆ ತನ್ನೆರಡು ಮಕ್ಕಳನ್ನು ಕುಂಡ್ರಿಸ್ಕೊಂಡು ಬೈಕ್ ಸ್ಟಾಟ್ ಮಾಡ್ತಿರುವಾಗ ಒಳಗಿಂದ ಬಂದ ರೂಪ ಬಾಗಿಲಲ್ಲಿ ನಿಂತು ಗಂಡನನ್ನ ಕೂಗಿ 'ಏನ್ರಿ ರಾತೆಲ್ಲ ನೋವು ಬಾದೆ ಅಂತಿದ್ರಿ, ಹಂಗೆ ತಿಪಟೂರಿಗೆ ಹೋಗಿ ತೋರಿಸ್ಕಂಡು ಬರಬಾರ' ಅಂದ್ಲು. ಊಂ.. ಅಂದಂಗಾತು! ಗಾಡಿ ಹೊಗೆ ಬಿಡ್ತಾ ಹೋತು. ಆಗ ಬಂದ ರೂಪ ಇನ್ನೂ ಒಳಿಕೋಗದಂಗೆ ಅಲ್ಲಿ ಹೊಸ್ತು ಮೇಲೆ ಕೂತ್ಕಂಡು ಚಲುವನ ಬೆನ್ನು ಕೊಬರಿ ಸುಳಿಯುವಾಗ ನರನರ್ತನ ಮಾಡ್ತಾ ಇದ್ದದ್ದ ನೋಡಿದ್ದು. ರೂಪಮ್ಮಳ ವಿಶೇಷವಾದ ಗಮಲು ಚಲುವನ ಮೂಗಿಗೆ ಬಡಿಯುತ್ತಿತ್ತಾದರೂ.. ಅತ್ತ ಗಮನ ಹರಿಸದೆ ತನ್ನ ಕಾಯಕದಲ್ಲಿ ತಲ್ಲೀನನಾಗಿದ್ದ. ಬಾಳ ಹೊತ್ತಾದ್ರೂ ದೃಶ್ಯ ಬದಲಾಗದಿರಲು, ತುಸು ದೂರದಲ್ಲಿ ಎಮ್ಮೆ ಒಂದು ಬಾರಿಗೆ ಬಂದು ಒಂದೇ ಸಮ್ಮೆ ಜೋರಾಗಿ ಬಡ್ಕಂತಾ ಇತ್ತು. ಅದನ್ನು ಐನೋರು ತೆಂಗಿನ ಮರದ ಬುಡಕ್ಕೆ ಕಟ್ಟಾಕಿ

ಹೋಗಿದ್ರು. ಸೂರ್ಯ ನೆತ್ತಿ ಮೇಲೆ ಅತ್ತುತ್ತಿರಲು, ಬೆವರ ನೀರು ಚಲುವನ ಮೈಯಿಂದ ಜಲ ಹುಕ್ಕಿದಂಗೆ ಹುಕ್ಕುತ್ತಿತ್ತು. ಹಿಂದೆಲ್ಲ ಎಷ್ಟೆ ಬೆವರು ಬಂದ್ರೂ ಗಡ್ಡ ಹೀರಿಕಂತಿತ್ತು, ಆದರೆ ಈಗ ನೆತ್ತಿ ಮೇಲಿಂದ ಹರೀತಿದ್ದ ಬೆವರು ಹಣೆಯಿಂದ ಮೂಗ ಮಾರ್ಗವಾಗಿ ಗದ್ದದ ಮೇಲೆಲ್ಲ ಹರಿದು ಬಾಯಿ ಸೇರುತ್ತಿತ್ತು. ಚಲುವ ಬಾಯಾರಿ ಅದನ್ನ ಹುಗಿಯದೆ ಅಂಗೆ ನುಂಗಿಕೊಳ್ಳುತ್ತಿದ್ದ. ರೂಪಮ್ಮ ಒಳಿಕೋಗಿ ಒಂದು ದಬ್ರಿಲಿ ಮಜ್ಜಿಗೆ ತಾಂಡು ಗೆಜ್ಜೆ ಸದ್ದು ಮಾಡ್ಕಂಡು ಬಂದು ಚಲುವನ ಮುಂದೆ ಪ್ರತ್ಯಕ್ಷಳಾಗಿ 'ತಗ ಚಲುವ' ಎಂದಳು. ಆಗ ಸೊಂಟ ಎತ್ತಿದ ಚಲುವ ಅಜಾನುಬಾಹು ಆದ. ಅದುವರು ಕಂಡಿರಿಲ್ವೇನೊ ಚಲುವನ ನುಣುಪಾದ ಗದ್ದ, ನೋಡಿದವಳೆ ತನ್ನ ಕೋಮಲವಾದ ಕೈಯಿಂದ ಅದನ್ನ ಸವರಿ ಜಾರಿಸಿಕೊಂಡಳು. ಅವಕ್ಕಾದ ಚಲುವ ಹಂಗೇ ನಿಂತಿರಲು 'ಮಜ್ಜಿಗೆ ಕುಡಿ ಚಲುವ, ಬಾಯಾರಿಕೆ' ಎಂದಳು. ನೆರೆಲಿದ್ದ ಲೋಟದ ಕಡೆಗೆ ದೃಷ್ಟಿ ಆಯಿಸಿದ ಚಲುವ ಆ ಕಡೆ ಹೆಜ್ಜೆ ಹಿಡಬೇಕೆನ್ನುವಷ್ಟರಲ್ಲಿ ಅವನ ಎದೆಗೆ ಕೈಹಾಕಿ ತಡೆದು ದಬ್ರಿಲಿದ್ದ ಉದ್ದನೆ ಲೋಟದಿಂದಲೇ ಒಂದು ಲೋಟ ತೋಡಿ ಮುಂದೆ ಮಾಡಿಳು. ಚಲುವ ಮುಟ್ಟದಾದ. ರೂಪಮ್ಮ, ನಿನ್ಗೆ ಏನು ಬೇಕು ಚಲುವ ನನ್ನ ಕೇಳು ಕೊಡ್ತಿನಿ' ಅಂದ್ಲು. ಚಲುವ ತಡ ಮಾಡದೆ ಅದು ಬಾಯಲ್ಲಿ ಇತ್ತೇನೋ ಅನ್ನಂಗೆ 'ರಾಗಿ' ಎಂದ. ರೂಪ ಮಜ್ಜಿಗೆ ದಬ್ಬಿನ ಫ್ರೇಮ್ ಸೆಟ್ ಕಿಟಕಿಲಿಟ್ಟು ಒಳಿಕೋದ ಸ್ವಲ್ಪ ಹೊತ್ತಿಗೆ ಹೊರಲಾರದಂತ ಬಾಯಿಕಟ್ಟಿರುವ ಮೂಟೆ ರಾಗಿ ಚೀಲನ ಯತ್ಕಂಡು ಬಂದು ಬಾಗ್ಲಿಗೆ ಒರಗ್ನಿ ಉಸ್ಸೆಂದು ಅಲ್ಲೆ ಕುಂತಳು. ಇದನ್ನೆಲ್ಲಾ ತನ್ನ ಸುಳಿಯುವ ವೇಗವನ್ನು ನಿದಾನಗೊಳಿಸಿಕೊಂಡು ಚಲುವ ಗಮನಿಸುತ್ತಿದ್ದ. ಸಾವರಿಸಿಕೊಂಡ ರೂಪ 'ನೋಡು ಚಲ್ವ ನಾನು ಹೇಳಿದಂಗೆ ಕೇಳೋದಾದ್ರೆ, ಈ ರಾಗಿ ಮೂಟೆ ನಿಂದು' ಎಂದಳು. ಚಲುವ ಸೊಂಟ ನೆಟ್ಟಗೆ ಮಾಡಿಕೊಂಡು ಮೆಟ್ಟಿಲ ಮೇಲೆ ಬಾಗಿಲು ಒರಗಿಕೊಂಡಿದ್ದ ಮೂಟೆ ನೋಡಿದ. ಕೆಂಪಿ ರಾಗಿಗಾಗಿ ಅಂದ ಮಾತೆಲ್ಲ ನೆನಪಿಗೆ ಬಂದವು. ಆಸೆಗಣ್ಣಿನಿಂದ ಮತ್ತೊಮ್ಮೆ ಅದನ್ನೆ ದಿಟ್ಟಿಸಿದ. ನಿಧಾನವಾಗಿ ದೃಷ್ಟಿ ಮೂಟೆ ಪಕ್ಕದಲ್ಲಿ ಸೆರಗ ಜಾರಿಸಿಕೊಂಡು ಸುಸ್ತಾದಳಂಗೆ ಕೂತಿರುವ ರೂಪಮ್ಮನ್ನ ನೋಡಿದ. ದೃಷ್ಟಿಯನ್ನ ಅಲ್ಲಿ ನೆಟ್ಟು ತದೇಕ ಚಿತ್ತದಿಂದ ನೋಡಿದ, ಚಲುವನ ನೇರ ದೃಷ್ಟಿ ರೂಪಳಲ್ಲಿ ದೃಡತೆ ತಂದಿತು. ಕೂತಿದ್ದವಳು ಮೇಲೆದ್ದು ಅಲ್ಲಿ ನಿಂತಳು. ರೂಪಮ್ಮಳ ಗಮಲು ಈಗ ಚಲುವನ ಒಳಗನ್ನು ಮುಲುಗುಡುವಂತೆ ಮಾಡಿತು. ಕೈಯಲ್ಲಿದ್ದ ಕೊಬರಿ ಗಿಟಕ ಅಲ್ಲಿ ಎಸೆದು ಸೀಳುವವನಂತೆ ರೂಪಮ್ಮಳ ಕಡೆಗೆ ನಡೆದ. ರೂಪ ರೋಮಾಂಚಿತಳಾದಂತೆ ಒಂದೊಂದೆ ಹೆಜ್ಜೆ ಹಿಂದೆ ಹಿಡುತ್ತ 'ಬಾ.. ಚಲುವ ಬಾ.. ಚಲುವ' ಎಂದು ನಡುಗುತ್ತ ಒಳ ನಡೆದಳು. ಚಲುವ ಕಿಟಕಿ ಮೇಲಿದ್ದ ಮಜ್ಜಿಗೆಯನ್ನು ಮುಟ್ಟಿ ಮೇಲೆತ್ತಿ ಗಟಗಟನೆ ಕುಡಿದು ಹೊಸ್ತಿಲು ದಾಟಿ ಒಳ ಹೋದನು. ಮುಂಬಾಗಿಲು ಅವರಿಬ್ಬರನ್ನೂ ಒಳ ಬಿಟ್ಟುಕೊಂಡು ಅರೆ ಮುಚ್ಚಿಕೊಂಡಿತು. ಮೆಟ್ಟಿಲು ಮೇಲಿದ್ದ ರಾಗಿಮೂಟೆ ಚಲುವನ ಬರುವನ್ನ ಕಾಯುತ್ತ ಕುಳಿತಿತ್ತು.

## ೧೫. ಶುದ್ಧಿ

· ದಿನೇಶ್ ಮಡಗಾಂವ

"ಶ್ರೀ ಶ್ರೀ ಮೂಲಮಹಾದೇವ ಸ್ವಾಮಿಗಳು ನಾಳೆ ಬೆಳಿಗ್ಗೆ ದೇವಸ್ಥಾನಕ್ಕೆ ಬರ್ತಿದಾರೆ. ದೇಶದೆಲ್ಲೆಡೆ ಸಂಚರಿಸುತ್ತಿರುವ ಅವರು ನಮ್ಮೂರಿಗೆ ಬರ್ತಿರೋದೆ ಪುಣ್ಯ ಹೂವಿನ ಮನೆ ಉಘ್ರನರಸಿಂಹನ ಪ್ರಭೆ ಅಂತದ್ದು. ಅದಕ್ಕೆ ಅಲ್ವೆ ನಮ್ಮವು ಬಿಟ್ಟು ಬೇರೆ ಯಾವೂ ಇಲ್ಲಿವರೆಗೆ ದೇವಸ್ಥಾನದ ಕಟ್ಟೆ ಒಳಗೂ ಬಿಟ್ಟದ್ದೆ ಮೈಲಿಗೆ ಆಗಂಗೆ ಕಾಯ್ದ್ ಕೊಂಡಿರೋದು. ಅಲ್ದೆ ಸ್ವಾಮಿಗಳು ದೇಶದೆಲ್ಲೆಡೆ ಇರೋ ಶುದ್ಧ ದೇವಸ್ಥಾನಗಳಿಗೆ ಮಾತ್ರ ಹೋಗ್ತಾ ಇರೋದ್ರಿಂದ ಇಲ್ಲಿಗೆ ಬಂದು ಪೂಜೆ ಮಾಡೋದ್ ನಮ್ಮ ಪುಣ್ಯ" ಎಂದು ಹೂವಿನ ಮನೆಯ ಇತಿಹಾಸ ಪ್ರಸಿದ್ಧ ಉಪನರಸಿಂಹ ದೇವಸ್ಥಾನದ ಪೂಜಾರಿ ರಾಮಾ ಹೆಗ್ದೆರು ಮನಸ್ಸಿನಲ್ಲೇ ಗೊಣಗಿಕೊಳ್ಳ ಹೂವಿನ ಮನೆ ನಾಳೆಯ ಕಾರ್ಯಕ್ರಮಕ್ಕೆ ಹ್ಯಾಗೆ ತಯಾರಾಗ್ತಿದೆ ಅನ್ನೋದರ ವೀಕ್ಷಣೆಗೆ ಹೊರಟರು.

ತಲತಲಾಂತರದಿಂದ ಉಘ್ರನರಸಿಂಹನ ಪೂಜೆ ಮಾಡ್ಕೊತ ಬಂದಿರೋ ರಾಮಾ ಹೆಗ್ದೆರ ವಂಶದಲ್ಲಿ ಈಗಿರುವ ಹೆಗ್ದೆರ್ದು ಎಷ್ಟನೇ ತಲೆಮಾರೋ ಗೊತ್ತಿಲ್ಲ. ಊರಿಗೇ ಊರೇ ಮಡಿ ಮೈಲಿಗೆ ಮುಸುರೆಗೆ ಬಿದ್ದು ಒದ್ದಾಡುತ್ತಿದ್ದಿದ್ದು ಇದೇ ಉಪನರಸಿಂಹನ ದೇವಸ್ಥಾನದಿಂದಾನೇ. ನರಸಿಂಹನ ಹತ್ರಕ್ಕೆ ಯಾರಾದ್ರೂ ಇತರರು ಬಂದ್ರೆ ಸಾಕು ರಾಮಾ ಹೆಗ್ದೆರು ಉಘ್ರರಾಗಿಬಿಡ್ತಿದ್ರು, ತಲತಲಾಂತರದಿಂದ ಎಷ್ಟು ಹಸಲರ ಮಕ್ಕಳು ಮುಸಲರ ಚಿಳ್ಳೆ ಪಿಳ್ಳೆಗಳು ಬಹಿಷ್ಕಾರ ಹಾಕಿಸ್ಕೊಂಡಿದಾವೋ ಲೆಕ್ಕಕ್ಕಿಲ್ಲ. ನಾಳಿನ ತಯ್ಯಾರಿಗೆ ಕಾರವಾರದ ಎಂಪಿ ಸಾಹೇಬ್ರು ವಿಶೇಷವಾಗಿ ತಮ್ಮವರನ್ನೇ ಆಯ್ಕೆ ಮಾಡಿ ಅಲಂಕಾರಕ್ಕೆ ಕಳಿಸಿರೋದ್ರಿಂದ ರಾಮಾ ಹೆಗ್ದೆರು ನಿರಾಳರಾಗಿದ್ದರು. ದೇವಸ್ಥಾನದ ಮೂಲೆ ಮೂಲೆಯೂ ಹೂಮುಡಿದು ಬೆಳಕು ಹಿಡಿದು ಸಿಂಗಾರಗೊಂಡಿತ್ತು. ಇದನ್ನು ಕಣ್ಣುಂಬಿಕೊಂಡ ರಾಮಾ ಹೆಕ್ದೇರು ಕವಳ ಬಾಯಲ್ಲಿ ಹಾಕ್ಕೊಂಡು ಹಿಂದಕ್ಕೆ ಕೈ ಕಟ್ಟಿಕೊಂಡು ಊರನ್ನೆಲ್ಲ ಇಂಚಿಂಚು ನೋಡುತ್ತ ನಡೆದರು.

ಗೋಕುಲಾಷ್ಠಮಿಯನ್ನೂ ಸಿಹಿತಿನಿಸಿಗಾಗಿ ಮಾಡುವ ಇಮಾಂ ಸಾಬಿಯ ಮನೆಯ ಎದುರು ಹಾದು, ಅವನು ತನ್ನಿಚ್ಛೆಯಂತೆ ಮನೆ ಎದುರು ಸಿಂಗರಿಸಿರುವುದನ್ನು ನೋಡಿದ ರಾಮಾ ಹೆಗ್ದೆರು ಅವನನ್ನು ಕರೆದು ಗೇಟಿನೆದುರು ಒಂಚೂರು ಸಗಣಿ ಹಾಕಿ ಸಾರಿಸಿಬಿಡು ಎಂದು ಹೇಳಿ ಮುಂದೆ ಹೋದರು. ಸಾಕಷ್ಟು

ಅಗಲವಾಗಿಯೇ ಇದ್ದ ದಾರಿಯಲ್ಲಿ ಮುಂದೆ ನಡೆದರೆ ಸಿಗೋದು ಹಸಲರ ರುಕ್ಮಿಣಕ್ಕನ ಮನೆ. ಅಲ್ಲಿ ರಾಮಾ ಹೆಗ್ಡೆರು ಸ್ವಲ್ಪ ಜಾಗ್ರತೆಯಿಂದ ಹೆಜ್ಜೆ ಹಾಕತೊಡಗಿದರು. ಎಲ್ಲಿದ್ದಳೋ ರುಕ್ಮಿಣಕ್ಕ 'ಹೆಕ್ಡೇರ ನನ್ನ ಮಗ ಬಂದಿದ್ದ. ನೆನ್ನೆ ರಾತ್ರಿ ಇಟಗಿ ಲಂಬಾಪುರ ಬಸ್ಸಿಗೆ ಬಂದ' ಎಂದು ಒಮ್ಮೆಲೆ ಕೂಗಿ ಎದುರಿಗೆ ಬಂದಳು. ಹಾರಿ ಬಿದ್ದ ರಾಮಾ ಹೆಗ್ಡೆ ಹುಚ್ಚು ರುಕ್ಕಿಣಿಯಿಂದ ದೂರ ಸರಿದರು. ಒಮ್ಮೆ ಅವಳನ್ನು ನೋಡಿ ಕಣ್ಣು ಬಿಟ್ಟು ಬಾಯಲ್ಲಿಯ ಕವಳ ಉಗಿಯಲು ಅಣಿಯಾದರು. ಹಸಲರ ರುಕ್ಮಿಣಕ್ಕ ಅಲ್ಲೆಲ್ಲೋ ಹಿತ್ತಲ ಕಟ್ಟಿಗೆ ರಾಶಿಯಲ್ಲಿ ಬಿದ್ದಿದ್ದ ಹಳೇ ನಿಪ್ಪಾನ್ ಸೆಲ್ ಹುಡುಕಿ ತಂದು ಅದನ್ನು ಒಡೆದು ಸಗಣಿಯ ಜೊತೆಗೆ ಸೇರಿಸಿ ಅಂಗಳವನ್ನೆಲ್ಲ ಸಾರಿಸಿ ಸಿಂಗಾರಗೊಳಿಸಿದ್ದಳು. ಕಪ್ಪಾಗಿರುವ ಅಂಗಳವನ್ನು ಒಮ್ಮೆ ನೋಡಿದ ರಾಮಾ ಹೆಗ್ಡೆರು ರುಕ್ಮಿಣಕ್ಕನ ಅಂಗಳಕ್ಕೂ ತಮ್ಮ ಪಂಚೆಗೂ ಹೋಲಿಕೆ ಮಾಡಿಕೊಂಡರು. ಕಪ್ಪಾಗಿರುವ ನೆಲ ಸ್ವಚ್ಛವಾಗಿದ್ದಂತೆ ಕಂಡು ಬಿಳಿ ಇರುವ ತನ್ನ ಪಂಚೆ ಯಾಕೋ ಕೊಳಕಾಗಿದ್ದಂತೆನಿಸಿತು. 'ಇವಳ ಮಗನ ಜೊತೆಗೆ ಇವಳನ್ನೂ ಊರಿಂದ ಹೊರಕ್ಕೆ ಹಾಕಿತ್ತು. ಅಂವ ಎಲ್ಲಿ ಬರ್ತಾನೆ. ನಮ್ಮೋರೆಲ್ಲ ಸೇರಿ ಅವನನ್ನ ಘಟ್ಟ ದಾಟಿಸಿ ಕೊಂಕಣ ರೈಲು ಹತ್ತಿಸಿ ಬಂದು ಮೂವತ್ ಮೂವತ್ತೈದ್ ವರ್ಷ ಆಗೋಗಿದೆ. ಹುಚ್ಚುಲೌಡಿಗೆ ಇನ್ನೂ ಆಸೆ. ಮಗಾ ಬಂದಾನಂತೆ!' ಎಂದು ಗೊಣಗಿಕೊಳ್ಳುತ್ತ ಮುಂದೆ ನಡೆದರು. ರುಕ್ಮಿಣಕ್ಕಹೆಗ್ಡೆ ಹೋಗಿದ್ದು ನೋಡಿ ವಿಚಿತ್ರನಗೆ ನಗುತ್ತ;

ಗೋರೆಂಬ ಕತ್ತಲೆಯೊಳಗೆನಾವುಬಂದೆವಯ್ಯೋ |

ಬಂದಾರೆನಮಚಾಜುಬರಬೇಕಯ್ಯೋ/

ಕಲ್ಲುಮುಳ್ಳಾನೆತುಳಿದುನಾವುಬಂದೆವಯ್ಯೋ/

ಬಂದಾರೆನಮಚಾಜುಬರಬೇಕಯ್ಯೋ/

ಎನ್ನುತ್ತ ಮನೆಬಾಗಿಲು ತೆಗೆಯಲು ಹೋದವಳು ಒಮ್ಮೆಲೇ ವಾಪಾಸು ಓಡಿಬಂದು ಹೆಗ್ಡೆ ಹೋದ ಕಡೆ ನೋಡಿ ಜೋರಾಗಿ, ದಿಪ್ಪುಡುದಿಪ್ಪಾಡು ಹೋಳಿಗೋ ಹಬ್ಬಕ್ಕೊಂದು ಹೋಳಿಗೊ ಎಂದುಕೂಗಿದಳು. ಕೂಗು ಕೇಳಿದ ರಾಮಾಹೆಗ್ಡೆರು ಬೇಗಬೇಗನೆ ಹೆಜ್ಜೆಹಾಕಿದರು.

*******

ಎಂಪಿ ಸಾಹೇಬ್ರು ಕಳುಹಿಸಿರೋ ಹುಡುಗ್ರು ಇಡೀ ಊರಿಗೇ ಲೈಟು ಹಾಕಿ ಜಗಮಗಿಸಿ ಬಿಟ್ಟಿದ್ರು ಘಟ್ಟದ ಕೆಳಗಿನ ಜನ ಕತ್ತೆತ್ತಿ ನೋಡಿದ್ರೆ ಇಡೀ ಪಶ್ಚಿಮ ಘಟ್ಟದ ತುದಿಗೆ ಎಲ್ಲ ನಕ್ಷತ್ರಗಳು ಬಂದು ಕೂತಿದ್ದಂತೆ ಕಾಣುತ್ತಿತ್ತು. ಕತ್ತಲಲ್ಲಿ ಹೂವಿನ ಮನೆಯನ್ನು ಕಣ್ಣುಂಬಿಕೊಳ್ಳಲು ಅಕ್ಕಪಕ್ಕದ ಊರಿನವರು ಡಾಂಬರು ರಸ್ತೆಯ ಗುಂಟ ಗುಡ್ಡದ ಕೆಳಗೆ ಇಳಿದು ಹೊರಟಿದ್ದರು.

ಇದ್ದುದಲ್ಲೇ ಅಲ್ಪಸ್ವಲ್ಪ ಓದಿಕೊಂಡಿದ್ದ ಚಂದ್ರಣ್ಣ ತನ್ನ ಹಳೆ ಸೈಕಲ್ ತುಳಿದುಕೊಂಡು ಹೂವಿನ ಮನೆಯ ಕ್ರಾಸ್ಗೆನ ಬಂದು ನಿಂತುಕೊಂಡಿದ್ದ. ಲೈಟಿನ ಸರ



ಹಾಕಿ ಊರೆಲ್ಲ ಜಗಮಗಗೊಂಡಿದ್ದರೂ ತನ್ನ ಕಾಲ ಕೆಳಗೆ ಕತ್ತಲೆ ಇರೋದ್ರಿಂದ ಮೊಬೈಲು ಲೈಟು ಮಿಣಮಿಣಗೊಳಿಸಿಕೊಂಡು ಯಾರಿಗೋ ಕಾಯ್ತಿದ್ದ. ಸುತ್ತಮುತ್ತಲಿನ ಊರ ಜನರ ಗುಂಪೊಂದು ಅಲ್ಲಿ ಹಾದು ಹೋಗುವಾಗ ಅವರೊಂದಿಗೆ ನಿಧಾನಕ್ಕೆ ಜೊತೆಯಾದ. ಕುಂಬ್ರಿ ನಾಣಿ, ಗೌಡ್ರು ರವಿ, ಹಸ್ಲರ ಈರಬದ್ರ ಎಲ್ಲರೂ ಗುಡ್ಡದ ಕೆಳಗೆ ಇಳಿದು ಹೂವಿನ ಮನೆಯ ಸೌಂಧರ್ಯ ಕಣ್ತುಂಬಿಕೊಳ್ಳೋಕೆ ಹೊರಟಿದ್ರು, ಗೌಡ್ರ ರವಿ ತಂಬಾಕಿನ ಎಸಳನ್ನು ಎಲ್ಲರಿಗೂ ಹಂಚುತ್ತಿದ್ದ, ಹಸಿ ಅಡಕೆಯ ಜೊತೆಗೆ ತಂಬಾಕಿನ ಎಸಳನ್ನು ಬಾಯಿಗಿಟ್ಟು ನಿದಾನಕ್ಕೆ ಜಗಿಯುತ್ತಿದ್ದ ಚಂದ್ರಣ್ಣಗೆ ಹಸಿ ಅಡಕೆಯ ಸೊಕ್ಕಿನೊಂದಿಗೆ ತಂಬಾಕಿನ ಸೊಗಡು ಸೇರಿಕೊಂಡು ಮೈಯೆಲ್ಲ ಆ ಚಳಿಯಲ್ಲಿಯೂ ಬೆವರಿತು. ಕವಳದ ರಸದ ಜೊತೆಗೆ ಮಾತು ಓತಪ್ರೋತವಾಗಿ ಹೊರಬರತೊಡಗಿತು. ಕತ್ತಲೂ ನುಂಗಿ ಕುಳಿತಿದ್ದ ಡಾಂಬರು ರಸ್ತೆ ಕೆಳಗಿಳಿಯುತ್ತಿದ್ದಂತೆ ಚಂದ್ರಣ್ಣ ತನ್ನ ಮೊಬೈಲು ಟಾರ್ಚು ಬಿಟ್ಟು ಬಿಟ್ಟು ಬಿಡತೊಡಗಿದ. ತಂಬಾಕಿನ ಎಸಳು ಮೆಲಕು ಹಾಕುತ್ತಿದ್ದ ಎಲ್ಲರ ತಲೆಯಲ್ಲಿಯೂ ಮಾದೇವ ಸ್ವಾಮಿಗಳೇ ಇದ್ದರು. ಯಾರಾದರೂ ಮಾತು ಪ್ರಾರಂಭಿಸುವ ಮೊದಲೇ ತಾನು ಮಾತನಾಡಬೇಕು ಎಂಬ ಹುಕಿಯಲ್ಲಿ ಚಂದ್ರಣ್ಣ 'ಹ್ವಾಯ್ ಎಷ್ಟ ಜನ ಮಾದೇವ ಸ್ವಾಮಿಗಳ ಪಟ ನೊಡಿದ್ರಿ ನಮ್ಮಲ್ಲಿ' ಎಂದು ಪೀಠಿಕೆ ಇಟ್ಟ. ಅಲ್ಲಿದ್ದ ಗೌಡ್ರ ರವಿ 'ಇದೊಳ್ಳೆ ಊರಿಗೊಬ್ಬೆ ಇಂವ. ಇತ್ತೀಚೆಗೆ ಕೆಲ ದಿಂಕದ ಹಾದಿ ಬೀದಿ ಪೇಪರ್ನಾಗೆಲ್ಲಾ ಅದೇ ಸುದ್ದಿ ಅದೆ. ಇವ ಪಟ ನೋಡಿದ್ರಾ ಅಂತ ಕೇಳ್ತಾನೆ.' ಎಂದು ನಗಾಡಿದ. ತನ್ನ ಮನಸೊಳಗಿನ ಅನುಮಾನವನ್ನು ಹೇಳಿಕೊಳ್ಳಲೋ ಬೇಡವೋ ಎಂಬಂತೆ ಯೋಚಿಸಿದ ಚಂದ್ರಣ್ಣ ಏನೂ ಮಾತನಾಡದೆ ಸುಮ್ಮನಾದ. ಚಂದ್ರಣ್ಣನಿಂದ ಯಾವುದೇ ಪ್ರತಿಕ್ರಿಯೆ ಹೊರಡದಿರುವುದನ್ನು ಗಮನಿಸಿದ ಕುಂಬ್ರಿನಾಣಿ ಕವಳ ಉಗಿದು ಮಾತನಾಡತೊಡಗಿದ. 'ನಮ್ಮೂರಿನ ನರಸಿಮ್ಮ ದೇವಸ್ಥಾನದಂತೆ ಮಡಿಯವಕ್ಕೆ ಮಾತ್ರ ಪ್ರವೇಶ ಇರೋ ಹಿಮಾಲಯದ ಸಿಂಧುರ್ ಮಹಾರಾಜ್ ದೇವಸ್ಥಾನದಿಂದ ಶ್ರೀ ಶ್ರೀ ಮೂಲಮಾದೇವ ಮಹಾಸ್ವಾಮಿಗಳ ಯಾತ್ರೆ ಪ್ರಾರಂಭವಾಗಿದ್ದು, ದೇಶದಲ್ಲಿರೋ ಎಲ್ಲ ಮಡಿ ದೇವಸ್ಥಾನಗಳಿಗೆ ಮಾತ್ರ ಇವರು ಹೋಗ್ತಾ ಇರೋದು. ಶುದ್ದಿ ಯಾತ್ರೆ ಅಂತಾ ಹೆಸರಿಟ್ಟು ಅವರ ಶಿಷ್ಯಗಣ ಇದನ್ನು ಕರೀತಿದೆ. ಹಿಮಾಲಯದ ಸುತ್ತಮುತ್ತಲು ಬರುವ ಜಿಲ್ಲೆಗಳಲ್ಲಿಯೇ ಸುಮಾರು ಮುನ್ನೂರಾ ನಾಲ್ವತ್ತೊಂಬತ್ತಕ್ಕೂ ಹೆಚ್ಚು ಇಂತ ದೇವಸ್ಥಾನ ಇವೆಯಂತೆ. ಅವೆಲ್ಲವಕ್ಕೂ ಇವರು ಭೇಟಿ ನೀಡಿದಾರಂತೆ. ಕೇಂದ್ರದಲ್ಲಿರುವ ಆಡಳಿತ ಪಕ್ಷದೋರು ಇವರು ಮೇಲ್ಜಾತಿಯ ದೇವಸ್ಥಾನಕ್ಕೆ ಮಾತ್ರ ಭೇಟಿ ನೀಡೋದನ್ನ ಕಂಡು ಇವರನ್ನು ರಾಜಕೀಯಕ್ಕೆ ಎಳೆಯುವ ಹುನ್ನಾರ ಮಾಡಿದ್ರಂತೆ. ಸ್ವಾಮಿಗಳು ಸೊಪ್ಪು ಹಾಕಲಿಲ್ಲ. ಸ್ವಾಮಿಗಳಿಗೆ ರಾಜಕೀಯದಲ್ಲಿ ಆಸಕ್ತಿ ಇಲ್ಲವಲ್ಲ. ಆದ್ರೂ ಅವರು ಅವಕಾಶ ಸಿಕ್ಕಾಗೆಲ್ಲ ಸ್ವಾಮಿಗಳ ಜೊತೆ ತಮ್ಮನ್ನು ಗುರುತಿಸಿಕೊಳ್ಳೋಕೆ ಪ್ರಯತ್ನ ಪಡ್ತಿದ್ದಂತೂ ಸುಳ್ಳಲ್ಲ.

ತಥ್ ಸಗಣಿ ತುಳಿದಲ್ಲೋ' ಎಂದು ಡಾಂಬರು ರೋಡಿಗೆ ನರಸಿಮ್ಮ ಸೆಗಣಿ ಒರೆಸೋದ್ರಲ್ಲಿ ತೊಡಗಿದ. ಉಳಿದೋರಿಗೆ ಈ ರಾಜಕೀಯಕ್ಕೂ ಸಗಣಿಗೂ ಸಂಬಂಧ ಏನು ಎಂಬುದು ತಿಳಿಯಲೇ ಇಲ್ಲ. ಚಂದ್ರಣ್ಣ ಟ್ರಿಣ್ ಟ್ರಿಣ್ ಎಂದು ಎರಡು ಬಾರಿ



ಸೈಕಲ್ ಬೆಲ್ ಮಾಡಿ ನಡೆಯತೊಡಗಿದ. ಚಂದ್ರಣ್ಣ ಮುಂದುವರೆಸಿದ 'ಮೂಲ ಮಾದೇವ ಸ್ವಾಮಿಗಳು ದೇಶದಾದ್ಯಂತ ಯಾತ್ರೆ ಕೈಗೊಳ್ಳುವಾಗ ತಾವು ಕೇವಲ ಶುದ್ಧ ದೇವಸ್ಥಾನಗಳಿಗೆ ಮಾತ್ರ ಭೇಟಿ ಕೊಡುವುದಾಗಿ ನೇರಾ ನೇರ ಹೇಳಿಕೆ ನೀಡಿದ್ರು. ಇಡೀ ದೇಶದಲ್ಲಿರುವ ಎಲ್ಲ 'ಶುದ್ಧ' ದೇವಸ್ಥಾನಗಳ ಪಟ್ಟಿಯನ್ನು ಅವರ ಶಿಷ್ಯ ಗಣ ಕಲೆ ಹಾಕಿತ್ತು. ಪ್ರತಿಯೊಂದು ಊರಿನಲ್ಲಿಯೂ ಇವರ ಬರುವಿಕೆಗಾಗಿ ಹಬ್ಬದ ಸಿಂಗಾರ ಕಂಡುಬಂದಿತ್ತು. ಎಲ್ಲ ದೇವಸ್ಥಾನಗಳಲ್ಲಿಯೂ ಇವರು ಮೂಲ ಮೂರ್ತಿಯನ್ನು ಸ್ವತಃ ಅಭಿಷೇಕ ಮಾಡಿ ಹೂಮುಡಿಸಿ ಪೂಜೆ ಮಾಡಿದ್ದರು. ಇವರ ಸಂಸ್ಕೃತ ಪಾಂಡಿತ್ಯ, ಅಸ್ಖಲಿತ ಸ್ಪಷ್ಟ ಮಂತ್ರೋಚ್ಚಾರಣೆಯು ಎಲ್ಲರನ್ನೂ ಬೆರಗುಗೊಳಿಸಿತ್ತು. ಇಡೀ ದೇಶದಲ್ಲಿ ಇವರ ಪ್ರಭೆ ಹರಡುತ್ತಿದ್ದಂತೆ ಎಲ್ಲರೂ ತಾವು ಕಾಯ್ದುಕೊಂಡು ಬಂದಿದ್ದ 'ಶುದ್ಧ' ದೇವಸ್ಥಾನಕ್ಕೆ ಇವರನ್ನು ಕರೆಕರೆದು ಪೂಜೆ ಮಾಡಿಸಿಕೊಂಡರು. ದಕ್ಷಿಣ ಭಾರತದಲ್ಲಿ ತಮಿಳುನಾಡು, ಕೇರಳಾ, ಆಂಧ್ರಪ್ರದೇಶಗಳಲ್ಲಿರುವ ಶುದ್ಧ ದೇವಸ್ಥಾನಗಳನ್ನು ಭೇಟಿ ಕೊಟ್ಟು ಈಗ ಕರ್ನಾಟಕಕ್ಕೆ ಈ ಸ್ವಾಮಿಗಳು ಬಂದಿರುವುದು ಖಾತ್ರಿಯಾದ ನಂತರ ಇಲ್ಲಿಯ ಎಲ್ಲ ಶುದ್ಧ ದೇವಸ್ಥಾನಗಳಲ್ಲಿಯೂ ಚಟುವಟಿಕೆ ಗರಿಗೆದರಿಕೊಂಡಿತ್ತು. ಉತ್ತರ ಕರ್ನಾಟಕದ ಹಳ್ಳಿ ಹಳ್ಳಿಗೂ ತಿರುಗಾಡಿದ ಸ್ವಾಮಿಗಳು ಹಾಸನ, ಮಂಡ್ಯ, ಮೈಸೂರು ಎಲ್ಲ ಕಡೆಗಳಲ್ಲೂ ತಮ್ಮ ಯಾತ್ರೆಯನ್ನು ಮುಗಿಸಿ ಕೊನೆಗೆ ನಿನ್ನೆ ಉಡುಪಿಯಲ್ಲಿರೋ 'ಶುದ್ಧ' ದೇವಸ್ಥಾನಕ್ಕೆ ಕೂಡಾ ಭೇಟಿ ಮಾಡಿದ್ರು, ಕಿಂಡಿಯಲ್ಲಿ ಇಣುಕಿ ನೋಡದೆ ನೇರವಾಗಿ ಗರ್ಭಗುಡಿ ಪ್ರವೇಶ ಪಡೆದು ತಮ್ಮ ಇಚ್ಛೆ ಪೂರೈಸಿಕೊಂಡರು. ಅವರ ಪೂರ್ತಿ ಯಾತ್ರೆಯ ವಿವರಗಳಿರೋ ವಾಟ್ಸ್ ಆಪ್ ವಿಡಿಯೋ ನೆನ್ನೆ ಬಂದಿತ್ತು. ನೋಡವ್ರೋ ಹೆಂಗೆ?" ಎಂದು ಚಂದ್ರಣ್ಣ ಸವಾಲೆಸೆದ. ಚಂದ್ರಣ್ಣನ ಮಾತು ಮುಗಿಯುವುದಕ್ಕೂ ಕತ್ತಲು ನುಂಗಿದ ರಸ್ತೆಯು ಗುಡ್ಡದ ಬುಡಕ್ಕೆ ಬರುವುದಕ್ಕೂ ಸರಿಹೊಯ್ತು, ಕುಂಬ್ರಿ ನಾಣಿ ಬುಡಕ್ಕೆ ಬಂದಾಯ್ತು ನೋಡೋ ಎಂದು ಎಲ್ಲರ ಲಕ್ಷ್ಯ ಸೆಳೆದ. ಮಾದೇವ ಸ್ವಾಮಿಗಳ ಮಾತಿನಲ್ಲಿ ಮೈಮರೆತವರೆಲ್ಲ ಕತ್ತೆತ್ತಿ ತಮ್ಮೂರ ಸೊಬಗನ್ನು ಕಣ್ಣುಂಬಿಕೊಂಡರು. ಹೂವಿನ ಮನೆ ಇಡೀ ದೇಶಕ್ಕೆ ಬೆಳಕು ಕೊಡುವ ಬೆಳಕಿನ ಮನೆ ಎಂಬಂತೆ ಎಲ್ಲರಿಗೂ ಗೋಚರಿಸುತ್ತಿತ್ತು. ಸ್ಮಾರ್ಟ್ ಫೋನ್ ಇಟ್ಕೊಂಡಿರೋ ಚಂದ್ರಣ್ಣ ವಾಟ್ಸ್ ಆಪ್ನಲ್ಲಿ ಹರಿದು ಬಿಡೋಕೆ ವಿಡಿಯೋ ಶೂಟ್ ಮಾಡಿಕೊಳ್ಳೋಕೆ ತೊಡಗಿದ.

****

ಕುಮಟಾ ರಸ್ತೆಯ ಕ್ರಾಸನಲ್ಲಿ ಕಾರುಗಳು ಸಾಲಾಗಿ ಬಂದು ನಿಂತಿದ್ದವು. ಅಲ್ಲಿಂದಲೇ ಸ್ವಾಮಿಗಳನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಹೋಗುವುದು ಎಂದು ಎಲ್ಲರೂ ನಿರ್ಧರಿಸಿದ್ದರು. ಅವರು ಬರುವ ಮೊದಲೇ ದೇಶದ ಎಲ್ಲ ಪ್ರಮುಖ ವಾಹಿನಿಗಳ ನೇರ ಪ್ರಸಾರದ ವಾಹನಗಳು ಬಂದು ನಿಂತಿದ್ದವು. ಹೂವಿನ ಮನೆಯ ಚಿಳ್ಳೆ ಪಿಳ್ಳೆಗಳು ಬಗೆ ಬಗೆಯ ಬುಟ್ಟಿ ಇರೋ ಈ ವಾಹನಗಳನ್ನೆಲ್ಲ ನೋಡಿ ಬೆರಗಾಗಿ ನಿಂತಿದ್ದರು. ಹೂವಿನ ಮನೆಯೆಂಬೋ ಹೂವಿನ ಮನೆ ಇಡೀ ದೇಶದಲ್ಲಿ ಸುದ್ದಿಯಾಗುತ್ತಿತ್ತು.



ಸ್ವಾಮಿಗಳು ಕಾರು ಇಳಿದ ತಕ್ಷಣ ಊರಿಗೆ ಊರೇ 'ಶ್ರೀ ಶ್ರೀ ಮೂಲ ಮಹಾದೇವ ಸ್ವಾಮಿಗಳಿಗೆ' ಎಂದು ಜಯಕಾರ ಹಾಕತೊಡಗಿತು. ಹಸಲರು ಇತರರು ಮುಂದೆ ಬಂದು ಮೈಲಿಗೆ ಮಾಡದಿರಲಿ ಎಂದು ಅಲ್ಲಲ್ಲಿ ಅಡ್ಡ ಹಗ್ಗದ ತಡೆ ಕಟ್ಟಲಾಗಿತ್ತು. ಮುಂದಿನ ಸಾಲಿನಲ್ಲಿ ಊರ ಮೇಲ್ಜಾತಿಯವರು ಹಿಂದಿನ ಸಾಲಿನಲ್ಲಿ ಉಳಿದವರು ನಿಲ್ಲುವಂತೆ ವ್ಯವಸ್ಥೆ ಮಾಡಲಾಗಿತ್ತು.

ಊರಿಗೇ ಊರೇ ನರಸಿಂಹ ದೇವಸ್ಥಾನದಲ್ಲಿ ನಡೆವ ಮಹಾಪೂಜೆಯನ್ನು ಕಾತರದಿಂದ ಎದುರು ನೋಡುತ್ತಿತ್ತು. ರುಕ್ಕಿಣಕ್ಕ ಊರ ಹಸಲರ ಚಿಳ್ಳೆ ಪಿಳ್ಳೆಗಳು ಹಗ್ಗದಾಟಿ ಹೋಗಿ ಸ್ವಾಮಿಗಳಿಗೆ ಎಡತಾಕಿ ಬಿಟ್ಟಾರು ಎಂಬ ಭಯದಿಂದ ಎಲ್ಲ ಕಡೆ ಕಣ್ಣಾಡಿಸಿ ನೋಡುತ್ತಿದ್ದಳು. ಸ್ವಾಮಿಗಳು ಕಾರಿಳಿದು ಗಾಂಭಿರ್ಯದಿಂದ ಊರ ಮುಖಂಡರ ಜೊತೆಗೆ ನಡೆದು ಹೊರಟರು. ರುಕ್ಮಿಣಕ್ಕ ಹೇಗೋ ಹರಸಾಹಸ ಮಾಡಿ ಹಗ್ಗ ದಾಟದೇ ಸ್ವಾಮಿಗಳ ಮುಖ ಕಾಣುವಂತೆ ನಿಂತುಕೊಂಡಿದ್ದಳು. ಬಿರಬಿರನೆ ನಡೆಯುತ್ತಿದ್ದ ಸ್ವಾಮಿಗಳ ಮುಖದಲ್ಲಿ ಮಹತ್ಸಾಧನೆಯ ಮೈಲಿಗಲ್ಲು ಸಾಧಿಸಿದ ಕಳೆ ಕಾಣುತ್ತಿತ್ತು. ರುಕ್ಮಿಣಕ್ಕ ಸ್ವಾಮಿಗಳು ಒಮ್ಮೆ ತನ್ನ ಕಡೆ ನೋಡಲಿ ಎಂದು ಕುತ್ತಿಗೆ ನಿಗಚಿ ನಿಗಚಿ ನಿಲ್ಲುತ್ತಿದ್ದಳು. ಸ್ವಾಮಿಗಳು ಇಡೀ ಜನಸಮೂಹದಲ್ಲಿ ಯಾರನ್ನೋ ಹುಡುಕುತ್ತಿರುವಂತೆ ಕಂಡುಬಂದರು. ರುಕ್ಮಿಣಕ್ಕನ ಮುಖ ಕಂಡು ಕ್ಷಣ ಅಲ್ಲಿಯೇ ದೃಷ್ಟಿ ನೆಟ್ಟಂತೆ ಮಾಡಿ ಮುಂದಾದರು. ಸ್ವಾಮಿಗಳು ಕೂದಲು ನೆರೆತ ರುಕ್ಮಿಣಕ್ಕನನ್ನೇ ನೋಡಿದರೋ ಅಥವಾ ಅದು ರುಕ್ಮಿಣಕ್ಕನ ಭ್ರಮೆಯೋ ಗೊತ್ತಾಗಲಿಲ್ಲ. ಅಂತೂ ರುಕ್ಕಿಣಕ್ಕ ಖುಷಿಯಾದಳು.

ಹೂವಿನ ಮನೆಯ ಪುರಾತನ ನರಸಿಂಹ ದೇವಸ್ಥಾನದಲ್ಲಿ ಆವತ್ತು ಯಾವತ್ತಿಗಿಂತ ವಿಶೇಷ ಪೂಜೆಯಾಗುತ್ತಿತ್ತು. ಪ್ರತಿದಿನ ಪೂಜೆ ಮಾಡುತ್ತಿದ್ದ ರಾಮಾ ಹೆಗ್ದೆರು ಸ್ವಾಮಿಗಳಿಗೆ ಪೂಜೆ ಮಾಡಲು ಆಹ್ವಾನ ನೀಡಿದರು. ಕೂದಲು ನೆರೆತು ಹಣ್ಣಾಗಿದ್ದ ರಾಮಾ ಹೆಗ್ದೆರು ಇನ್ನೂ ವಯಸ್ಸಿನ ಮಾದೇವ ಸ್ವಾಮಿಗಳನ್ನು ಕಂಡು ತನಗೂ ಇಂತವನೇ ಒಬ್ಬ ಮಗನಿರಬಾರದಿತ್ತಾ ಎಂದುಕೊಂಡರು. ಶ್ರೀ ಶ್ರೀ ಮೂಲಮಾದೇವ ಸ್ವಾಮಿಗಳು ತಮ್ಮ ಸ್ಪಷ್ಟ ಮಂತ್ರೋಚ್ಚಾರಣೆಯಿಂದ ರಾಮಾ ಹೆಗ್ದೆರು ಬೆರಗಾಗುವಂತೆ ಮಾಡಿದರು. ಸಾಮಾನ್ಯ ಪೂಜೆ ಮುಗಿದ

ನಂತರದಲ್ಲಿ ಕೊನೆಗೆ ಶ್ರೀ ಶ್ರೀಗಳು ಇದ್ದಕ್ಕಿದ್ದಂತೆ ನರಸಿಂಹ ದೇವರ ಋಣಮುಕ್ತಿಯ ಮಂತ್ರಗಳನ್ನು ದೊಡ್ಡ ಧ್ವನಿಯಲ್ಲಿ 'ದೇವತಾ ಕಾರ್ಯ ಸಿದ್ಧರ್ಥಂ, ಸಭಾಸ್ಥಂಭ ಸಮುದ್ಭವಂ, ಶ್ರೀ ನರಸಿಂಹ ಮಹಾವೀರಂ ನಮಾಮಿ ಋಣ ಮುಕ್ತಯೇ' ಎಂದು ದೊಡ್ಡಧ್ವನಿಯಲ್ಲಿ ಹೇಳಿ ಪೂಜೆ ಮುಗಿಸಿದರು. ಮಂತ್ರ ಮುಗಿದ ನಂತರ ರಾಮಾ ಹೆಗ್ಡೆಯನ್ನು ದಿಟ್ಟಿಸಿ ನೋಡಿದ ಸ್ವಾಮಿಗಳು ಗರ್ಭಗುಡಿಯಿಂದ ಹೊರಬಂದರು.

ಮಾದೇವ ಸ್ವಾಮಿಗಳ ಮಾತು ಕೇಳಲು ಊರಿಗೆ ಊರೇ ದೇವಸ್ಥಾನದ ಎದುರು ಬಯಲಿನಲ್ಲಿ ಕಾದು ನಿಂತಿತ್ತು. ಅಲ್ಲಿ ಕೂಡಾ ಅಡ್ಡಹಾದುಹೋದ ಹಗ್ಗವೊಂದು ಉಳಿದವರನ್ನು ಬೇರ್ಪಡಿಸಲು ನಡುವೆ ಹಾದು ಹೋಗಿತ್ತು.



ದೇವಸ್ಥಾನದ ಎದುರು ಒಂದು ದೊಡ್ಡ ವೇದಿಕೆ ಸಿದ್ಧವಾಗಿತ್ತು. ಇಡೀ ದೇಶದಲ್ಲಿ ಸಂಚಾರ ಕೈಗೊಂಡ ಸ್ವಾಮಿಗಳ ಯಾತ್ರೆ ಇವತ್ತು ಹೂವಿನ ಮನೆಯಲ್ಲಿ ಕೊನೆಗೊಳ್ಳುವುದಿತ್ತು. ಇಡೀ ದೇಶದ ಮಾಧ್ಯಮ ಇಲ್ಲಿ ತಮ್ಮ ನೇರಪ್ರಸಾರದ ಛತ್ರಿ ಬಿಚ್ಚಿಕೊಂಡು ನಿಂತಿತ್ತು. ವೇದಿಕೆ ಸಜ್ಜಾದ ನಂತರ ಊರಿನ ಮೂಲೆ ಮೂಲೆಯಲ್ಲಿ ಹಾಕಿದ್ದ ಮೈಕ್ ಸೆಟ್ಟಿನಲ್ಲಿ ಈಗ ಮಹಾಸ್ವಾಮಿಗಳು ವೇದಿಕೆಯನ್ನು ಅಲಂಕರಿಸಬೇಕು ಹಾಗೂ ಊರ ಜನತೆಯನ್ನು ಉದ್ದೇಶಿಸಿ ತಮ್ಮ ಇಷ್ಟು ದಿನದ ಯಾತ್ರೆಯ ಕುರಿತು ಮಾತನಾಡಬೇಕು ಎಂದು ಉದ್ಘೋಷ ಮೊಳಗಿತು. ಶ್ರೀ ಶ್ರೀ ಮೂಲಮಾದೇವ ಮಹಾಸ್ವಾಮಿಗಳಿಗೆ ಕುಳಿತಲ್ಲಿಯೇ ಮೈಕ್ ಅನ್ನು ನೀಡಲಾಯಿತು.

ತಮ್ಮ ಯುವ ಹುಮ್ಮಸ್ಸಿನ ಗಂಭೀರ ಧ್ವನಿಯಿಂದ ಮಾತನಾಡಲು ಪ್ರಾರಂಭಿಸಿದರು. 'ಕಳೆದ ಕೆಲವು ತಿಂಗಳಿನಿಂದ ನಾನು ನಿರಂತರ ಯಾತ್ರೆ ಮಾಡುತ್ತಿದ್ದೇನೆ. ಭಾರತದ ಉದ್ದಗಲಕ್ಕೂ ನನ್ನ ಶಿಷ್ಯರೊಂದಿಗೆ ಸಂಚಾರ ಮಾಡಿದ್ದೇನೆ. ದೇಶದಾದ್ಯಂತ ಇರುವ ಹೆಚ್ಚಿನ ಎಲ್ಲ ಶುದ್ಧ ದೇವಸ್ಥಾನಗಳಲ್ಲಿಯೂ ಗರ್ಭಗುಡಿ ಪ್ರವೇಶಿಸಿ ಪೂಜೆ ಸಲ್ಲಿಸಿ ಬಂದಿದ್ದೇನೆ. ಇವತ್ತಿಗೆ ನನ್ನ ಕೈಂಕರ್ಯ ಪೂರ್ತಿಗೊಂಡಂತೆ. ಒಂದು ಸತ್ಯವನ್ನು ನಾನು ಇಂದು ಎಲ್ಲರೆದುರು ಹೇಳಬೇಕು. ನನ್ನೊಳಗೆ ಯಾವುದೇ ಆಧ್ಯಾತ್ಮ ಅಥವಾ ಶುದ್ಧ ಅಶುದ್ಧ ಕಲ್ಪನೆಯಿಲ್ಲ. ಸಮಾಜದಲ್ಲಿ ಇಂದಿಗೂ ಇರುವ ಅಶುದ್ಧ ಎಂಬ ಕಲ್ಪನೆಯನ್ನು ತೊಡೆದು ಹಾಕಲು ನಾನು ಇಷ್ಟು ದಿನದ ಶುದ್ಧಿ ಯಾತ್ರೆ ಮಾಡಿದ್ದು. ನಿಮಗೆಲ್ಲರಿಗೂ ನಾನು ನನ್ನ ನಿಜ ರೂಪ ಹೇಳಬೇಕು. ನೀವಂದುಕೊಂಡಂತೆ ನನ್ನ ಬಾಯಿಂದ ಉದುರಿದ ಅಲಿತ ಮಂತ್ರ, ವೇದ ಪಾಂಡಿತ್ಯ ಹುಟ್ಟಿನಿಂದ ಬಂದದ್ದಲ್ಲ. ಇದೇ ಉಪ್ಪನರಸಿಂಹ ದೇವಸ್ಥಾನಕ್ಕೆ ಕಾಲಿಟ್ಟಿದ್ದಕ್ಕಾಗಿ ನನ್ನನ್ನು ಊರಿಂದ ಬಹಿಷ್ಕಾರ ಹಾಕಲಾಗಿತ್ತು.ನಾನು ಇದೇ ಹೂವಿನ ಮನೆಯ ರುಕ್ಮಿಣಕ್ಕನ ಮಗ ಮಹಾದೇವ.ಇಂದು ನಾನು ಇಡೀ ದೇಶದಲ್ಲಿರುವ ಎಲ್ಲ ಮಡಿ ದೇವಸ್ಥಾನಗಳ ಗರ್ಭಗುಡಿ ಪ್ರವೇಶಿಸಿ ಬಂದಿದ್ದೇನೆ. ನನಗೆ ಈ ಕಲ್ಲುಮೂರ್ತಿಗಳಲ್ಲಿ ನಂಬಿಕೆ ಇಲ್ಲ. ಆದರೆ ಜ್ಞಾನದಲ್ಲಿ ನಂಬಿಕೆ ಇದೆ. ಇಲ್ಲಿಗೆ ನನ್ನ ಸನ್ಯಾಸ ವೇಷ ಕಳಚುತ್ತಿದ್ದೇನೆ ಎಂದು ಮಾದೇವ ಸ್ವಾಮಿಗಳು ಕಾವಿ ತೆಗೆದು ಎಸೆದು ಅಲ್ಲಿಂದ ಹೊರಟರು. ಇಡೀ ಸಭೆ ಸ್ತಬ್ಧವಾಗಿತ್ತು. ತಾನೇ ಊರಿಂದ ಬಹಿಷ್ಕಾರ

ಹಾಕಿದ್ದ ಹಸಲರ ಮಾದೇವನ ಕೈಯಲ್ಲೇ ಇವತ್ತು ಉಗ್ರನರಸಿಂಹನಿಗೆ ಪೂಜೆ ಮಾಡಿಸಿದ್ದನ್ನು ನೆನಪಿಸಿಕೊಂಡು ರಾಮಾ ಹೆಗ್ಡೆರು ಕುಸಿದು ಕುಳಿತರು.

ಚಂದ್ರಣ್ಣನ ಗುಮಾನಿ ಸತ್ಯವಾಗಿತ್ತು. ಹೂವಿನ ಮನೆಯ ಮಾದೇವನೇ ಮೂಲಮಾದೇವ ಸ್ವಾಮಿ ಎಂಬುದು ಖಾತ್ರಿಯಾಯ್ತು, ಚಂದ್ರಣ್ಣನ ವಾಟ್ಸಾಪು ಎಲ್ಲರಿಗೂ ಸುದ್ದಿ ಹರಡೋದಕ್ಕೆ ಸುರು ಮಾಡಿತ್ತು. ನೇರ ಪ್ರಸಾರದ ಚಾನೆಲ್ಲುಗಳಲ್ಲಿ ಮಾದೇವ ಸ್ವಾಮಿಗಳ ಚರ್ಚೆ ಸುರುವಾಯ್ತು. ಸುದ್ದಿ ತಿಳಿದ ಮುಖ್ಯಮಂತ್ರಿಗಳು ಎಲ್ಲ ದೇವಸ್ಥಾನಗಳಿಗೆ ದಲಿತ ಪೂಜಾರಿಗಳ ನೇಮಕ ಯೋಚನೆ ಸುರು ಮಾಡಿದ್ರು, ಬೇಜಾವರ ಸ್ವಾಮಿಗಳು ಧರ್ಮ ಸಭೆ ನಡೆಸಿ ದಲಿತರಿಗೆ ಮಂದಿರ ಮನೆಗೆ ಪ್ರವೇಶ



ಕೊಡೋಣ ಎಂದು ಬಡಬಡಾಯಿಸಿದರು. ಕೇರಳದಲ್ಲಿ ದೇವಸ್ಥಾನಗಳಿಗೆ ದಲಿತ ಪೂಜಾರಿಗಳು ಬಂದರು. ಮಾದೇವನ ಮಕ್ಕಳು ಎಂದಿಗಿಂತ ಸಿರಿಯಸ್ಸಾಗಿ ಸಿಕ್ಕಿದ್ದನ್ನೆಲ್ಲ ಓದಲು ಸುರು ಮಾಡಿದ್ರು.ದೇಶದ ಮೂಲೆ ಮೂಲೆಯಿಂದ ಮಾದೇವನ ಮಕ್ಕಳು ಉಳಿದ ಶುದ್ಧ ದೇವಸ್ಥಾನಗಳಿಗೆ ಜಾಥಾ ಹೊರಟರು. ರುಕ್ಮಿಣಕ್ಕ ಮಗ ಬಂದ ಖುಷಿಗೆ ಮಾರನೇದಿನ ಮನೇಲಿ ಬಾಡೂಟ ಬೇಯಿಸಲು ತೊಡಗಿದಳು. ವೇಷ ಕಳಚಿದ ಮಾದೇವ ರುಕ್ಮಿಣಕ್ಕ ಊಟಕ್ಕೆ ಕರೆಯುವುದನ್ನು ಕಾಯುತ್ತಿದ್ದ.

## ೧೬. ಮೂತ್ರ ವಿಚಾರಂ

· ಬಿ.ಎಂ. ಪುಟ್ಟಯ್ಯ

ಮೂತ್ರ ಎಂದರೆ ಕೆಲವರು ಮೂಗು ಮುರಿಯುತ್ತಾರೆ. ಮತ್ತೆ ಕೆಲವರು ಅದಕ್ಕೆ ಉಚ್ಚೆ ಎಂದು ಯಾಕೆ ಕರೆಯಬಾರದು ಎಂದು ತಕಾರರು ತೆಗೆಯುತ್ತಾರೆ. ಅದು ಏನೇ ಇರಲಿ, ಮೂತ್ರ ಎಂದರೆ ಏನು ಎಂಬುದನ್ನು ಮತ್ತೆ ವಿವರಿಸಿ ಹೇಳಬೇಕಾಗಿಲ್ಲ. ವ್ಯತ್ಯಾಸ ಇಷ್ಟೆ. ಕೆಲವರು ಎಚ್ಚರ ಇರುವಾಗ, ತಮ್ಮ ಆಸಕ್ತಿ ಹಾಗೂ ಆಯ್ಕೆಗೆ ಅನುಗುಣವಾಗಿ, ಸೂಕ್ತವಾದ ಅಥವಾ ಸೂಕ್ತವಲ್ಲದ ಜಾಗಗಳಲ್ಲಿ ಮೂತ್ರ ಮಾಡುತ್ತಾರೆ. ತಮ್ಮ ಆಸಕ್ತಿ ಎಂದು ಮಾತ್ರ ಹೇಳಲು ಆಗುವುದಿಲ್ಲ. ಮೂತ್ರದ ಭಾರೀ ಒತ್ತಾಯದ ಮೇರೆಗೂ ಮೂತ್ರ ಮಾಡಬೇಕಾಗುತ್ತದೆ. ಹೀಗೆ ಒತ್ತಡದಲ್ಲಿ ಮೂತ್ರ ಮಾಡುವಾಗ, ಕೋಪವೂ, ಸಿಟ್ಟೂ, ಬೈಗುಳ ಈ ಎಲ್ಲವೂ ಬರುತ್ತವೆ. ಆದರೆ ಯಾರಿಗೆ ಬೈಯ್ಯುವುದು? ಯಾವುದಕ್ಕೆ ಬೈಯ್ಯುವುದು? ತಮ್ಮ ತಮ್ಮ ಶಕ್ತಾನುಸಾರ ಹೊರಗೆ ದಬ್ಬುವುದು ಅಷ್ಟೆ. ಮೂತ್ರ ಮಾಡಲು ಒಳಗಿನಿಂದ ಒತ್ತಾಯ ಬಂದಾಗ 'ನೆಟ್‌ವರ್ಕ್ ಇಲ್ಲ, ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದೇನೆ' ಎಂದು ಹೇಳಲು ಸಾಧ್ಯವೆ?

ಎಚ್ಚರ ಇರುವಾಗ ಮಾಡುವ ಮೂತ್ರದ ಬಗ್ಗೆ ಯಾರೂ, ಏನೂ ಹೇಳಬೇಕಾಗಿಲ್ಲ. ಆದರೆ ನಿದ್ದೆ ಮಾಡುವಾಗ ಮಾಡುವ ಮೂತ್ರದ ಬಗ್ಗೆ ಮಾತ್ರ ಏನಾದರೂ ಹೇಳಲೇಬೇಕಾಗುತ್ತದೆ. ಹಾಗಾದರೆ ಇದು ಅಷ್ಟು ಸುಲಭವಾ? ಇಲ್ಲ ಬಹಳ ಕಷ್ಟ ಯಾಕೆಂದರೆ ನಿದ್ದೆ ಮಾಡುವಾಗ ಮೂತ್ರ ಮಾಡಿದವರನ್ನು, ಅಥವಾ ಮೂತ್ರ ಮಾಡಿದ ಸೀನನ್ನು ನೋಡಿದವರು ಯಾರು? ಅಥವಾ ನಿದ್ದೆಯಲ್ಲಿ ಮೂತ್ರ ಮಾಡಿಕೊಂಡವರು 'ನಾನು ನಿದ್ದೆಯಲ್ಲಿ ಮೂತ್ರ ಮಾಡಿಕೊಂಡಿದ್ದೆ' ಎಂದು ಯಾವಾಗಾದರೂ ಹೇಳುತ್ತಾರೆಯೆ? ನಿದ್ದೆಯಲ್ಲಿ ಮೂತ್ರ ಮಾಡಿಕೊಂಡವರು ಸಾಧ್ಯವಾದಷ್ಟೂ ಅದನ್ನು ಮುಚ್ಚಿಟ್ಟುಕೊಳ್ಳುತ್ತಾರೆ. ಮನುಷ್ಯರು ಈ ರೀತಿಯ ಅದೆಷ್ಟೂ ಅನುಭವಗಳನ್ನು ಮುಚ್ಚಿಟ್ಟುಕೊಳ್ಳುತ್ತಾರೆ. ಹೀಗೆ ಇವರು ಮುಚ್ಚಿಟ್ಟುಕೊಳ್ಳುವ ಅನುಭವಗಳನ್ನು ಸಾಹಿತ್ಯ ಬಿಚ್ಚಿಡಬೇಕಾಗುತ್ತದೆ. ಹೀಗಾಗಿ ಮನುಷ್ಯರ ಮುಚ್ಚಿಟ್ಟ ಅನುಭವಗಳು ಸಾಹಿತ್ಯದಲ್ಲಿ ಬಿಚ್ಚಿಕೊಳ್ಳುವ ಮೂಲಕ ಸಾಹಿತ್ಯ ಲೋಕವನ್ನು ವಿಸ್ತಾರ ಮಾಡಿವೆಯಂತೆ. ಸೂಕ್ಷ್ಮಗೊಳಿಸಿವೆಯಂತೆ. ಬಹುಶಃ ಸಾಹಿತ್ಯದ ಮುಖ್ಯವಾದ ಕೆಲಸವೇ ಇದು ಎನ್ನುವವರೂ ಇದ್ದಾರೆ.

ಎಚ್ಚರ ಇದ್ದಾಗ ಉಚ್ಚೆ ಹುಯ್ಯುವುದರಲ್ಲೂ ತರಾವರಿ ಇದೆ ಎಂಬುದು ಇದೀಗ ಬೆಳಕಿಗೆ ಬಂದಿದೆ. ಅವನ್ನು ಹೀಗೆ ಗುರುತಿಸುತ್ತಾ ಹೋಗಬಹುದು. ಬೆಳಿಗ್ಗೆ ಎದ್ದಾಗ,

ಮಧ್ಯರಾತ್ರಿ, ಜಾಸ್ತಿ ನೀರು ಕುಡಿದ ಮೇಲೆ, ಜಾಸ್ತಿ ಡ್ರಿಂಕ್ಸ್ ಮಾಡಿದ ಮೇಲೆ, ಬಹಳ ದೂರ ಪ್ರಯಾಣ ಮಾಡಿ ಇಳಿದಾಗ, ಹೀಗೆ ಇದರಲ್ಲೇ ಅನೇಕ ಬಗೆಗಳಿವೆಯಂತೆ. ಇದಿಷ್ಟೇ ಅಲ್ಲದೆ ರಾತ್ರಿ ನಿದ್ದೆ ಮಾಡುವಾಗ ಕೆಲವರು ಹಾಸಿಗೆಯಲ್ಲೇ ಉಚ್ಚೆ ಹುಯ್ದುಕೊಳ್ಳುತ್ತಾರಂತೆ. ಸಂಸ್ಕೃತಿಯನ್ನು ಕುರಿತ ಬರವಣಿಗೆಗಳಲ್ಲಿ, ಮನೆಮಠ, ಉಡಿಗೆತೊಡಿಗೆ, ಊಟ, ಹಾಡು, ಡ್ಯಾನ್ಸು ಅಂತ ಮಾತ್ರ ಬರೆದಿರುತ್ತಾರೆ. ಅದರ ಜೊತೆಗೆ 'ಯಾವ ಯಾವ ಜಾತಿಯವರು, ಯಾವ ಯಾವ ಸಮುದಾಯದವರು ರಾತ್ರಿ ನಿದ್ದೆ ಮಾಡುವಾಗ ಹಾಸಿಗೆಯಲ್ಲಿ ಉಚ್ಚೆ ಹುಯ್ಯುತ್ತಾರೆ ಅಥವಾ ಉಚ್ಚೆ ಹುಯ್ಯುವುದಿಲ್ಲ' ಎಂಬ ಬಗ್ಗೆಯೂ ಬರೆಯುವ ಅಗತ್ಯವಿದೆ. ಆಗ ಸಂಸ್ಕೃತಿ ಕುರಿತ ಬರವಣಿಗೆಗೆ ಒಂದು ಸಮಗ್ರತೆಯೂ, ನಿರ್ದಿಷ್ಟತೆಯೂ ಬರುತ್ತದೆ. ಇದುವರೆಗೆ ಬೌದ್ಧಿಕ ವಲಯಕ್ಕೆ ಗೊತ್ತಿಲ್ಲದ ಸಂಸ್ಕೃತಿಯ ಮುಖ್ಯವಾದ ಅಂಶ ಗೊತ್ತಾಗುತ್ತದೆ. ಹೆಚ್ಚು ಕಡಿಮೆಯಾದರೆ ಇದರಿಂದ ಸಂಸ್ಕೃತಿಯ ವ್ಯಾಖ್ಯಾನವೇ ಚೇಂಜ್ ಆದರೂ ಆಗಬಹುದು. ಯಾವುಯಾವುದೊ ಕಾರಣಕ್ಕೆ ಸಂಸ್ಕೃತಿಯ ವ್ಯಾಖ್ಯಾನ ಚೇಂಜ್ ಆಗುತ್ತದಂತೆ. ಹಾಗಾದರೆ ನಿದ್ದೆ ಮಾಡುವಾಗ ಹಾಸಿಗೆಯಲ್ಲಿ ಉಚ್ಚೆ ಹುಯ್ಯುವುದನ್ನು ಬರವಣಿಗೆಯಲ್ಲಿ ಮೂಡಿಸಿದ ಕಾರಣಕ್ಕೆ ಅದು ಚೇಂಜ್ ಆಗಬಾರದು ಎಂದೇನೂ ಇಲ್ಲವಲ್ಲ. ಅಂದ ಹಾಗೆ ಇನ್ನೊಂದು ಮಾತಿದೆ. ಜನಗಣತಿ ಮಾಡುವಾಗ ನಿಮ್ಮ ಮನೆಯಲ್ಲಿ ಎಷ್ಟು ಜನ ಗಂಡಸರು, ಎಷ್ಟು ಜನ ಹೆಂಗಸರು ಇದ್ದೀರಿ' ಎಂದು ಕೇಳಿ ಅದನ್ನು ಬರೆದುಕೊಳ್ಳುತ್ತಾರೆ. ಅದೇ ರೀತಿ ಮಕ್ಕಳು ಮರಿಗಳೆಷ್ಟು, ಕೋಳಿಕುನ್ನಿಗಳೆಷ್ಟು ಮುಂತಾದ ಅಂಶಗಳನ್ನೂ ಕೇಳಿ ಬರೆದುಕೊಳ್ಳುತ್ತಾರೆ. ಇದೆಲ್ಲ ಹೊಸದೇನೂ ಅಲ್ಲ. ಅದರ ಜೊತೆಗೆ ನಿದ್ದೆ ಮಾಡುವಾಗ ಉಚ್ಚೆ ಹುಯ್ದುಕೊಳ್ಳುವ ಮಾಹಿತಿಯನ್ನೂ ಜನಗಣತಿಯಲ್ಲಿ ಕಡ್ಡಾಯವಾಗಿ ದಾಖಲಿಸಿದರೆ ಒಳ್ಳೆಯದು. ಇದರಿಂದ ಯಾವ ಯಾವ ಜಾತಿಯ ಜನರು ಹೆಚ್ಚು ಹೆಚ್ಚು ಉಚ್ಚೆ ಹುಯ್ದುಕೊಳ್ಳುತ್ತಾರೆ ಎಂಬುದನ್ನು ಕಂಡುಹಿಡಿಯಬಹುದು. ಜನಗಣತಿಯಲ್ಲಿ ಇದನ್ನು ಕೇಳಿದರೆ ಅನೇಕರು ಸತ್ಯ ಹೇಳುವುದಿಲ್ಲ. ನಿದ್ದೆ ಮಾಡುವಾಗ ಉಚ್ಚೆ ಹುಯ್ದುಕೊಳ್ಳುತ್ತಿದ್ದವರೂ ಕೂಡ 'ನಾವು ಉಚ್ಚೆ ಹುಯ್ದುಕೊಳ್ಳುವುದಿಲ್ಲ' ಎಂದು ಸುಳ್ಳು ಹೇಳುತ್ತಾರೆ. ಅದಕ್ಕೆ ಒಂದು ಉಪಾಯ ಮಾಡಬೇಕು. ನಿದ್ದೆ ಮಾಡುವಾಗ ಉಚ್ಚೆ ಹುಯ್ದುಕೊಳ್ಳುವವರಿಗೆ ಸರಕಾರ ಕೆಲವು ವಿಶೇಷ ಸೌಲಭ್ಯಗಳನ್ನು ಕೊಡುತ್ತದೆ' ಎಂದು ಜನಗಣತಿ ಮಾಡುವವರು ಹೇಳಬೇಕು. ಆ ಮೂಲಕ ಸತ್ಯ ಸಂಗತಿಗಳು ಹೊರಬರುತ್ತವೆ.

**ಮಾಡುವುದು-ಹುಯ್ಯುವುದು**

ಈಗ ನಮ್ಮ-ನಿಮ್ಮ ಮುಂದೆ ಒಂದು ಸಮಸ್ಯೆ ಬಂದಿದೆ. ಅದು ಯಾವುದೆಂದರೆ, `ಕೆಲವರು ಉಚ್ಚೆ ಹುಯ್ಯುವುದು' ಎನ್ನುತ್ತಾರೆ. ಮತ್ತೆ ಕೆಲವರು 'ಉಚ್ಚೆ ಮಾಡುವುದು' ಎನ್ನುತ್ತಾರೆ. ಈ ಎರಡರಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದು. ಮೊದಲಿಗೆ 'ಉಚ್ಚೆ ಹುಯ್ಯುವುದು' ಎಂಬುದನ್ನು ನೋಡೋಣ. 'ಹುಯ್ಯುವುದು' ಎಂಬ ಮಾತುಗಳನ್ನು ಗಮನಿಸೋಣ. ಗಿಡಗಳಿಗೆ ನೀರು ಹುಯ್ಯುವುದು, ಸಸಿಗಳಿಗೆ ನೀರು ಹುಯ್ಯುವುದು, ಹುತ್ತಕ್ಕೆ ಹಾಲು ಹುಯ್ಯುವುದು ಇತ್ಯಾದಿ. ಇದನ್ನು ಚೆಲ್ಲುವುದು

ಅಂತಲೂ ಕರೆಯಬಹುದು. ಈಗ ಉಚ್ಚೆ ಮಾಡುವುದು' ಎಂಬುದನ್ನು ನೋಡೋಣ. 'ಮಾಡುವುದು' ಎಂಬ ಮಾತುಗಳನ್ನು ಗಮನಿಸೋಣ. ಅಡಿಗೆ ಮಾಡುವುದು, ಕಡುಬು ಮಾಡುವುದು, ಟೀ ಮಾಡುವುದು, ಕಾಫಿ ಮಾಡುವುದು, ಕೆಲಸ ಮಾಡುವುದು, ಬೇಸಾಯ ಮಾಡುವುದು ಇತ್ಯಾದಿ. ಇಲ್ಲೆಲ್ಲ ಮಾಡುವುದು ಎಂದರೆ ತಯಾರು ಮಾಡುವುದು ಎಂಬ ಅರ್ಥವಿದೆ. ಮನುಷ್ಯರು ಶ್ರಮಹಾಕಿ ಯಾವುದಾದರೂ ವಸ್ತುವನ್ನು ತಯಾರು ಮಾಡುವ ಕೆಲಸಕ್ಕೆ ಮಾಡುವುದು' ಎನ್ನುತ್ತಾರೆ. ಈ ಅರ್ಥದಲ್ಲಿ *ಉಚ್ಚೆ ಮಾಡುವುದು' ಎಂದರೆ 'ಉಚ್ಚೆಯನ್ನು ತಯಾರು ಮಾಡುವುದು' ಎಂಬ ಅರ್ಥಬರುತ್ತದೆ. ಆದರೆ ಉಚ್ಚೆ ಹುಯ್ಯುವುದು ಇದೆಯಲ್ಲ ಆ ಕೆಲಸ ಉಚ್ಚೆಯನ್ನು ತಯಾರು ಮಾಡುವ ಕೆಲಸ ಅಲ್ಲ. ಈಗಾಗಲೆ ದೇಹದಲ್ಲಿ ತಯಾರಾಗಿ ನಿಂತು, ನಿಂತು, ನಿಂತು, ಸಾಕಾಗಿ, ಸುಸ್ತಾಗಿ, ಹೊರಗೆ ಹೋಗಲು ಕಾಯುತ್ತ ನಿಂತಿರುವ ಉಚ್ಚೆಯನ್ನು ದಬಾಯಿಸಿ ದೇಹದಿಂದ ಹೊರಗೆ ಕಳಿಸುವ, ಹೊರಗೆ ಚೆಲ್ಲುವ ಕೆಲಸ. ಹಾಗಾಗಿ ಅದನ್ನು 'ಉಚ್ಚೆ ಮಾಡುವುದು' ಅಂತ ಕರೆದರೆ ತಪ್ಪಾಗುತ್ತದೆ. ಹಾಗೆ ಕರೆದರೆ ಅದನ್ನು ಯಾವ ಪರಮಾತ್ಮನೂ ಮೆಚ್ಚುವುದಿಲ್ಲ. 'ಕಾಫಿ ಮಾಡುವುದು' ಎಂದರೆ 'ಕಾಫಿಯನ್ನು ತಯಾರು ಮಾಡುವುದು' ಎಂದು ಅರ್ಥ. ಅದೇ ರೀತಿ 'ಉಚ್ಚೆ ಮಾಡುವುದು' ಎಂದರೆ ಉಚ್ಚೆಯನ್ನು ತಯಾರು ಮಾಡುವುದು ಎಂದು ಹೇಳಿದಂತೆ ಆಗುತ್ತದೆ. ಉಚ್ಚೆ ಹುಯ್ಯುವುದು' ಎಂಬುದು ಹಳ್ಳಿಯ ಜನರು ಬಳಸುವ ಮಾತು. ಉಚ್ಚೆ ಮಾಡುವುದು' ಎಂಬುದು ಅತ್ಯಂತ ಆಧುನಿಕರು ಬಳಸುವ ಮಾತು. ಅದು ತಪ್ಪು. ಆದ್ದರಿಂದ ಅತ್ಯಂತ ಆಧುನಿಕರು ಬಳಸುವ ಮಾತುಗಳು ತಪ್ಪು ತಪ್ಪಾಗಿರುತ್ತವೆ. ಹಳ್ಳಿಯ ಜನರು ಬಳಸುವ ಮಾತುಗಳು ಸರಿಯಾಗಿರುತ್ತವೆ ಎಂಬುದಕ್ಕೆ ಇದು ಬಹುದೊಡ್ಡ ಸಾಕ್ಷಿ. ಹಾಗಾಗಿ ಇನ್ನು ಮುಂದೆ ಈ ಸಾಹಿತ್ಯದಲ್ಲಿ 'ಉಚ್ಚೆ ಮಾಡುವುದು' ಎಂಬ ಮಾತನ್ನು ಬಳಸುವುದಿಲ್ಲ. “ಉಚ್ಚೆ ಹುಯ್ಯುವುದು' ಎಂದೇ ಬಳಸುತ್ತೇವೆ.

ನಿದ್ದೆ ಮಾಡುವಾಗ ಉಚ್ಚೆ ಹುಯ್ದುಕೊಳ್ಳುವುದು ಹೊಸ ವಿಷಯವೇನಲ್ಲ. ಬಹುಶಃ ಮನುಷ್ಯರು ಬಹಳ ಪುರಾತನ ಕಾಲದಿಂದಲೂ ನಿದ್ದೆ ಮಾಡುವಾಗ ಉಚ್ಚೆ ಹುಯ್ದುಕೊಂಡಿರಬಹುದು. ಯುದ್ಧಗಳಲ್ಲಿ ಸೋತಂತಹ ರಾಜರು ರಾತ್ರಿ ಮಲಗಿ ನಿದ್ದೆ ಮಾಡುವಾಗ, ಆ ನಿದ್ದೆಯ ಕನಸಿನಲ್ಲಿ ಯುದ್ಧದ ಕನಸೇ ಬಿದ್ದು ಹೆದರಿ, ಕೂಗಿ ಅರಚಿ ಉಚ್ಚೆ ಹುಯ್ದುಕೊಂಡಿರಬಹುದು. ದೇವಾನುದೇವತೆಗಳು ತಮ್ಮ ನಡುವಿನ ಸ್ಪರ್ಧೆಗಾಗಿ ಮಾತಿನ ಚಕಮಕಿಯಲ್ಲಿ ಹೆದರಿ ಅದು ಕನಸಿನಲ್ಲಿ ಬಂದಾಗ ಹೆದರಿ ಉಚ್ಚೆ ಹುಯ್ದುಕೊಂಡಿರಬಹುದು. ರಾಮ, ಲಕ್ಷ್ಮಣ, ಸೀತೆ, ರಾವಣ, ಕುಂಭಕರ್ಣ, ಹನುಮಂತ, ವಾಲಿ, ಸುಗ್ರೀವರು, ದೌಪದಿ, ಅರ್ಜುನ, ದುರ್ಯೋಧನ, ಧರ್ಮರಾಯ, ಉತ್ತರಕುಮಾರ ಮುಂತಾದವರೂ ಉಚ್ಚೆ ಹುಯ್ದುಕೊಂಡಿರ ಬಹುದು. ಈ ಬಗ್ಗೆ ಇನ್ನು ಮುಂದೆ ಗಂಭೀರ ಸಂಶೋಧನೆಗಳು ನಡೆಯಬೇಕಿದೆ.

ಮನುಷ್ಯ ಲೋಕದ ತರಾವರಿ ಜನರು ನಾನಾ ಕಾರಣಗಳಿಗೆ ನಿದ್ದೆ ಮಾಡುವಾಗ ಉಚ್ಚೆ ಹುಯ್ದುಕೊಳ್ಳುತ್ತಾರಂತೆ. ಆದರೆ ಆ ತರಾವರಿ ಜನರ ಬಳಿಗೆ ಹೋಗಿ

'ನಿದ್ದೆಯಲ್ಲಿ ಉಚ್ಚೆ ಹುಯ್ದುಕೊಳ್ಳುವ ಅನುಭವ ನಿಮ್ಮಲ್ಲಿ ಎಷ್ಟು ಜನರಿಗಿದೆ ಕೈಯೆತ್ತಿ?' ಅಂತಲೋ, ಅಥವಾ 'ನಿದ್ದೆಯಲ್ಲಿ ಎಷ್ಟು ಜನ ಉಚ್ಚೆ ಹುಯ್ದುಕೊಂಡಿದ್ದೀರಿ ಕೈಯೆತ್ತಿ?' ಅಂತಲೂ ಕೇಳಿದ್ದೇ ಆದ ಪಕ್ಷದಲ್ಲಿ ಬಹುಶಃ ಯಾರೊಬ್ಬರೂ ಕೈ ಎತ್ತುವುದಿಲ್ಲ(ಇದು ಕನ್ನಡಕ್ಕಾಗಿ ಕೈ ಎತ್ತುವುದಕ್ಕಿಂತಲೂ ಮುಜುಗರದ ಸಂಗತಿ ಎಂದು ಅನೇಕರು ಭಾವಿಸಿದ್ದಾರೆ). ಆದರೆ ಅನೇಕರು 'ಹೌದು ನಾನೂ ಒಂದು ಕಾಲದಲ್ಲಿ ನಿದ್ದೆ ಮಾಡುವಾಗ ಉಚ್ಚೆ ಹುಯ್ದುಕೊಳ್ಳುತ್ತಿದ್ದೆ' ಎಂದು ತಮ್ಮ ಸ್ವಂತ ಅನುಭವಗಳನ್ನು ನೆನಪಿಸಿಕೊಳ್ಳಬಹುದು. ಆದರೆ ಯಾರೂ ಕೂಡ ಈ ಬಗ್ಗೆ ಯಾರಲ್ಲಿಯೂ ಬಾಯಿ ಬಿಡುವುದಿಲ್ಲ. ಅನೇಕರು ಹೇಳುತ್ತಾರೆ. 'ನಾವಿಬ್ಬರೂ ಬಹಳ ಕ್ಲೋಸ್ ಫ್ರೆಂಡ್ಸ್, ನಮ್ಮಿಬ್ಬರಲ್ಲಿ ಯಾವುದೇ ಮುಚ್ಚುಮರೆಯಿಲ್ಲ ಗೊತ್ತಾ?' ಎಂದು. ಅಂತವರಿಗೆ ಒಂದು ಸವಾಲು ಹಾಕಬೇಕು. 'ಹಾಗಾದರೆ ನಿದ್ದೆ ಮಾಡುವಾಗ ಉಚ್ಚೆ ಹುಯ್ದುಕೊಂಡಿರುವುದನ್ನು ನಿಮ್ಮ ಗೆಳೆಯ ಅಥವಾ ಗೆಳತಿಗೆ ಹೇಳಿದ್ದೀರಾ?' ಎಂದು. ಬಹುಶಃ ಈ ಗುಟ್ಟನ್ನು ಮಾತ್ರ ಯಾರೂ ಕೂಡ ಇನ್ನೊಬ್ಬರಿಗೆ ಹೇಳುವುದಿಲ್ಲ. ಆತ್ಮಚರಿತ್ರೆ, ಆತ್ಮಕಥೆ ಅಂತ ತುಂಬ ಜನ ಬರೆದುಕೊಂಡಿದ್ದಾರೆ. ಆದರೆ ಅಂತವರಲ್ಲಿ ಯಾರೊಬ್ಬರೂ ಕೂಡ 'ನಾನು ನಿದ್ದೆ ಮಾಡುವಾಗ ಉಚ್ಚೆ ಹುಯ್ದುಕೊಳ್ಳುತ್ತಿದ್ದೆ' ಅಂತ ಬರೆದಿಲ್ಲ. ಹಾಗಾದರೆ ಆತ್ಮಚರಿತ್ರೆಗಳಲ್ಲಿ ನಿಜವಾದ ಸಂಗತಿಗಳು ಎಷ್ಟು ಇರುತ್ತವೆ ಎಂಬ ಅನುಮಾನ ಬರುತ್ತದೆ.

'ಮಕ್ಕಳು ನಿದ್ದೆ ಮಾಡುವಾಗ ಉಚ್ಚೆ ಹುಯ್ದುಕೊಳ್ಳುವುದು ಸಹಜ' ಎಂಬ ಒಂದು ಚೇನಿ ಗಾದೆ ಇದೆ. ಹೌದು ಆ ವಯಸ್ಸಿನಲ್ಲಿ ಮಕ್ಕಳಿಗೆ ಎದ್ದು ಹೋಗಿ ಉಚ್ಚೆ ಹುಯ್ಯಲು ಆಗುವುದಿಲ್ಲ. ಒಂದು ವೇಳೆ ಉಚ್ಚೆ ಹುಯ್ಯಲು ಎದ್ದು ಹೋದರೆ, ತಂದೆ ತಾಯಿಗಳು, ಪೋಷಕರು ಬಿಡುವುದಿಲ್ಲ. 'ಮನುಷ್ಯರಾಗಿ ಹುಟ್ಟಿದ ಮೇಲೆ ಕೆಲವು ತಿಂಗಳವರೆಗೆ ಅಥವಾ ಕೆಲವು ವರ್ಷಗಳವರೆಗೆ ನಿದ್ದೆಯಲ್ಲಿ ಉಚ್ಚೆ ಹುಯ್ಯುತ್ತಿರಲಿ. ಆಮೇಲೆ ಬೇಕಾದರೆ ನೋಡೋಣ' ಎನ್ನುತ್ತಾರೆ. ಈ ವಿಷಯ ಮಕ್ಕಳಿಗೆ ಕೂಡ ಗೊತ್ತಿರುತ್ತದೆ. ಅದಕ್ಕೇ ಅವರು ಹೊರಗೆ ಹೋಗದೆ ಹಾಸಿಗೆಯಲ್ಲಿ ಉಚ್ಚೆ ಹುಯ್ಯುತ್ತಾರೆ. ಇದು ಮಕ್ಕಳ ವಿಷಯ ಆಯ್ತು.

ಈಗ ಇರುವುದು ಮಾಜಿ ಮಕ್ಕಳ ವಿಷಯ. ಈ ಮಾಜಿ ಮಕ್ಕಳು ಬೇರೆಬೇರೆ ವಯಸ್ಸಿನವರೆಗೆ ನಿದ್ದೆ ಮಾಡುವಾಗ ಹಾಸಿಗೆಯಲ್ಲಿ ಉಚ್ಚೆ ಹುಯ್ದುಕೊಳ್ಳುತ್ತಲೇ ಇರುತ್ತಾರಂತೆ. ಎಷ್ಟು ವರ್ಷದವರೆಗೆ ಉಚ್ಚೆ ಹುಯ್ದುಕೊಳ್ಳುತ್ತಾರೆ ಎಂಬುದನ್ನು ಆ ಆದಿಶೇಷನಿಂದಲೂ ಸರಿಯಾಗಿ ಹೇಳಲು ಆಗಿಲ್ಲವಂತೆ ಎಂಬ ನಂಬಿಕೆ ಇದೆ. ಕೆಲವರು ಹುಟ್ಟಿ ಒಂದು ವರ್ಷದವರೆಗೆ, ಕೆಲವರು ಎರಡು ವರ್ಷದವರೆಗೆ ಹೀಗೆ ಶುರುವಾಗಿ ಅದು ಹತ್ತು ವರ್ಷ, ಹದಿನೈದು ವರ್ಷ, ಕೆಲವರು ಇಪ್ಪತ್ತು ವರ್ಷದವರೆಗೂ ರಾತ್ರಿ ನಿದ್ದೆ ಮಾಡುವಾಗ ಹಾಸಿಗೆಯಲ್ಲಿ ಉಚ್ಚೆ ಹುಯ್ದುಕೊಳ್ಳುತ್ತಾರೆ ಎಂಬುದು ವಿಶ್ವಸನೀಯ ಮೂಲಗಳಿಂದ ತಿಳಿದುಬಂದಿದೆ.

ಮುಂದಿನ ಸಂಗತಿ ಅನೇಕರಿಗೆ ಗೊತ್ತಿರಬಹುದು. ಗೊತ್ತಿದ್ದ ಅನೇಕರಲ್ಲಿ ಅದು ತರಾವರಿ ಕಾರಣಗಳಿಗೆ ಮರೆತು ಹೋಗಿರಲೂಬಹುದು. ಪರೀಕ್ಷೆಗಾಗಿ ಓದಿದ್ದು

ಮರೆತು ಹೋಗುತ್ತದಲ್ಲ ಹಾಗೆ, ಸಾಲ ಇಸಗೊಂಡವರು ವಾಪಸ್ ಕೊಡಲು ಮರೆಯುತ್ತಾರಲ್ಲ ಹಾಗೆ, ಕಷ್ಟ ಬಂದಾಗ ದೇವರಿಗೆ ಹರಕೆ ಹೊತ್ತು ಕಷ್ಟ ತೀರಿದ ನಂತರ ಹರಕೆ ತೀರಿಸುವುದನ್ನು ಮರೆಯುತ್ತಾರಲ್ಲ ಹಾಗೆ, ಉದ್ದೇಶಪೂರ್ವಕವಾಗಿ ಅಪಮಾನ ಮಾಡಿ ನಂತರ ಅದನ್ನು ಮರೆಯುತ್ತಾರಲ್ಲ ಹಾಗೆ, ಪರೀಕ್ಷೆಗಾಗಿ ಕಂಠಪಾಠ ಮಾಡಿದ್ದು ಪರೀಕ್ಷೆ ಬರೆಯುವಾಗ ಮರೆತುಹೋಗುತ್ತದಲ್ಲ ಹಾಗೆ, ಭಾಷಣ ಮಾಡಲು ಕಂಠಪಾಠ ಮಾಡಿಕೊಂಡು, ಮೈಕ್ ಮುಂದೆ ಹೋದಾಗ ಮರೆತುಹೋಗುತ್ತದಲ್ಲ ಹಾಗೆ, ಕೈಯಲ್ಲಿ ವಾಚ್ ಕಟ್ಟಿಕೊಂಡೇ ಅದನ್ನು ಮರೆತು ವಾಚನ್ನು ಹುಡುಕುತ್ತಾರಲ್ಲ ಹಾಗೆ, ಹೀಗೆ ತರಾವರಿ ಕಾರಣದಿಂದ ಮರೆತು ಹೋಗಿರುವುದನ್ನು ನೆನಪು ಮಾಡಿಕೊಡಲು ಮಾನ್ಯ ಓದುಗರ ಅಪ್ಪಣೆ ಬೇಡುತ್ತಿದ್ದೇವೆ.

**ಪಟೇಲರ ಸುಪುತ್ರಿಯ ಪ್ರಕರಣಂ**

ಒಂದೂರಿನಲ್ಲಿ ಒಬ್ಬ ಪಟೇಲ ಇದ್ದನಂತೆ. ಆತ ಆ ಊರಿನ ಜಮೀನ್ದಾರ. ಆತ ಜಮೀನ್ದಾರನಾಗಿದ್ದಕ್ಕೆ ಪಟೇಲನಾಗಿದ್ದ. ಪಟೇಲನಾಗಿದ್ದರಿಂದ ಆತನಿಗೆ ಜಮೀನು ಇತ್ತು; ಹಾಗಾಗಿ ಉಳಿದವರಿಗೆ ಜಮೀನು ಇರಲಿಲ್ಲ. ಆತನನ್ನು ಕುಂಟೇಗೌಡನ ಮಗ ಅಂತ ಕರೆಯುತ್ತಿದ್ದರು. ಯಾಕೆ ಹಾಗೆ ಕರೆಯುತ್ತಿದ್ದರು ಎಂಬುದನ್ನು ಆಮೇಲೆ ನೋಡೋಣ. ಆತನಿಗೆ ಒಬ್ಬಳು ಹೆಣ್ಣು ಮಗಳಿದ್ದಳು. ಒಬ್ಬಳೆ ಒಬ್ಬಳು ಮಗಳಿದ್ದಳು.

ಅವಳು ನೋಡಲು ಬಲು ಸುಂದರಿ, ಚೆಲುವೆ. ಅವಳು ಸುಂದರವಾಗಿರಲು, ಚೆಲುವೆಯಾಗಿರಲು ಎರಡು ಕಾರಣಗಳಿದ್ದವು. ಒಂದು ಊರ ಪಟೇಲನ ಮಗಳು ಎಂಬುದು. ಎರಡನೆಯದು ಒಂದನೆಯ ಕಾರಣವನ್ನು ಹೊರತುಪಡಿಸಿಯೂ ಅವಳು ನೈಜ ಸುಂದರಿಯಾಗಿದ್ದಳು.

ಅವಳು ಅದೇ ಊರಿನಲ್ಲಿ ನಾಲ್ಕನೆ ತರಗತಿಯವರೆಗೆ ಓದಿದಳು. ಆ ಶಾಲೆಯ ಮಾಸ್ತರು ಒಳ್ಳೆಯವರಾಗಿದ್ದರು. ಆದ್ದರಿಂದ ಅವಳು ಪಾಸೂ ಆದಳು. ಸುಮ್ಮನೆ ಪಾಸಾಗಲಿಲ್ಲ. ಆ ಶಾಲೆಯಲ್ಲಿ ಎಲ್ಲರಿಗಿಂತ ಜಾಸ್ತಿ ಮಾರ್ಕ್ಸ್ ತಗೊಂಡು ಪಾಸಾದಳು. ಅಲ್ಲಿ ನಾಲ್ಕನೆ ತರಗತಿ ಪಾಸಾದ ಮೇಲೆ ಅವಳನ್ನು, ಆ ಊರಿನಿಂದ ೭ ಮೈಲು, ಮೂರೂವರೆ ಫರ್ಲಾಂಗು ದೂರದಲ್ಲಿದ್ದ ಹೈಯರ್ ಪ್ರೈಮರಿ ಸ್ಕೂಲಿಗೆ ಐದನೆ ತರಗತಿಗೆ ಸೇರಿಸಬೇಕಿತ್ತು. ಪ್ರತಿದಿನ ಅವಳು ಅಷ್ಟು ದೂರ ನಡೆದುಕೊಂಡು ಹೋಗಿಬರಬೇಕಿತ್ತು. ಎಲ್ಲಾದರೂ ಹಾಸ್ಟೆಲ್ಲೊ ಮತ್ತೊಂದು ಮಗದೊಂದು ಇದ್ದಿದ್ದರೆ ಅಲ್ಲಿ ಇದ್ದು ಓದಬಹುದಿತ್ತು. ಅಲ್ಲಿ ಹಾಸ್ಟೆಲ್ ಅಂತ ಹೇಳುವ ಯಾವ ವಸತಿ ಶಾಲೆಯೂ ಇರಲಿಲ್ಲ. ಅದರಿಂದ ಅವರ ನೆಂಟರ ಮನೆಯಲ್ಲಿ ಅವಳನ್ನು ಬಿಟ್ಟು ಪಟೇಲ ಓದಿಸುತ್ತಿದ್ದಾನಂತೆ. ವಾರಕ್ಕೆ ಒಂದು ಸಲ ಪಟೇಲನೂ, ಹೆಗ್ಗಡಿತಿಯೂ ಎತ್ತಿನ ಗಾಡಿ ಮೇಲೆ ಹೋಗಿ ಅವಳನ್ನು ನೋಡಿಕೊಂಡು ಬರ್ತಾರಂತೆ' ಅಂತ ಕೆಲವರು; 'ಇಲ್ಲ ವಾರಕ್ಕೆ ಒಂದು ಸಲ ಹೋಗಲು ಆಗುವುದಿಲ್ಲವಂತೆ. ಹದಿನೈದು ದಿನಕ್ಕೊಮ್ಮೆ ಹೋಗಿ ಬರ್ತಾರಂತೆ' ಅಂತ

ಕೆಲವರು; 'ಇಲ್ಲ, ಆ ಗೌಡನೇ ಹದಿನೈದು ದಿನಕ್ಕೊಮ್ಮೆ ಅವಳನ್ನು ಎತ್ತಿನ ಗಾಡಿಯಲ್ಲಿ ಪಟೇಲನ ಮನೆಗೆ ಕರಕೊಂಡು ಬಂದು, ತಾನೂ ಒಂದು ದಿನ



ಇಲ್ಲಿದ್ದು ಮತ್ತೆ ವಾಪಸ್ ಕರಕೊಂಡು ಹೋಗ್ತಾನಂತೆ' ಅಂತ ಕೆಲವರು ಮಾತಾಡಿಕೊಳ್ಳಲು ಶುರುಮಾಡಿದರು.

**ಊರಿನಲ್ಲಿ ಮಾತುಗಳ ಗುಸುಗುಸು**

ಪಟೇಲನ ಮಗಳು ಶಾಲೆಗೆ ಹೋಗದೆ ಒಂದು ವರ್ಷ ಕಳೆಯಿತು. ಎರಡು ವರ್ಷ ಕಳೆಯಿತು. ಮೂರು ನಾಲ್ಕು ಐದಾರು ವರ್ಷಗಳೂ ಕಳೆದುಹೋದವು. ನಿಜ ಹೇಳಬೇಕೆಂದರೆ, ಪಟೇಲ ತನ್ನ ಮಗಳನ್ನು ಯಾವ ಊರಿಗೂ, ಯಾವ ನೆಂಟರ ಮನೆಗೂ ಕಳಿಸುತ್ತಿರಲಿಲ್ಲ. ಬೇರೆ ಊರಿನಲ್ಲಿ ಹಬ್ಬ, ಮದುವೆ ಇತ್ಯಾದಿಗಳಿದ್ದರೆ, ಸಂಜೆ ಹೊತ್ತು ಮಳೆಗಿಳೆ ಬರಲ್ಲ ಎಂಬ ಗ್ಯಾರಂಟಿ ಇದ್ದರೆ, ಬೆಳಿಗ್ಗೆ ಮಗಳನ್ನು ಕರಕೊಂಡು ಹೋಗಿ, ಸಂಜೆ ಮನೆಗೆ ವಾಪಸ್ ಬಂದುಬಿಡುತ್ತಿದ್ದ. ಈ ಬಗ್ಗೆಯೂ ಊರಲ್ಲಿ ತರಾವರಿ ಮಾತುಕತೆ ನಡೆಯುತ್ತಿತ್ತು. 'ಪಟೇಲನ ಮಗಳು ಹೊರಗಡೆ ಹೋದರೆ ಅವಳಿಗೆ ದೃಷ್ಟಿಯಾಗುತ್ತದೆ ಎಂದು ಯಾವ ಊರಿಗೂ ಕಳಿಸುವುದಿಲ್ಲವಂತೆ" ಎಂಬ ಮಾತುಗಳು ಜಾಹೀರಾತುಗಳಂತೆ ಸುಳಿದು ಹೋಗುತ್ತಿದ್ದವು. ಮುಂದೆ ಉಳಿದದ್ದು ಅವಳ ಮದುವೆಯ ವಿಷಯ. 'ಅವಳಿಗೆ ಇಪ್ಪತ್ತು ತುಂಬುತ್ತಿದ್ದ ಹಾಗೆ ಒಳ್ಳೆಯ ಮನೆತನ ನೋಡಿ ಮದುವೆ ಮಾಡುತ್ತಾನಂತೆ' ಅಂತ ಕೆಲವರು; ಇಲ್ಲ ಇಪ್ಪತ್ತೆರಡಾಗದೆ ಮದುವೆ ಮಾಡಲ್ಲವಂತೆ' ಅಂತ ಕೆಲವರು; 'ಇಲ್ಲ ಇಪ್ಪತ್ತೈದರವರೆಗೂ ಕಾಯುತ್ತಾನಂತೆ, ಅದ್ಯಾವುದೋ ದೂರದ ಊರಿನಿಂದ ಒಬ್ಬರು ಗೌಡನ ಮಗ ಎಂ.ಎಲ್.ಎ. ತನಕ ಓದಿದವನು ಬರುತ್ತಾನಂತೆ' ಅಂತ ಕೆಲವರು. ಹೀಗೆ ತರಾವರಿ ಮಾತುಗಳು ಅಲೆದಾಡತೊಡಗಿದವು. ಈ ಮಾತುಕತೆಗಳಲ್ಲಿ ಒಬ್ಬರು ಹೇಳಿದ್ದು ಮತ್ತೊಬ್ಬರು ಹೇಳಿದ್ದಕ್ಕೆ ಸರಿ ಹೊಂದುತ್ತಿರಲಿಲ್ಲ. ಅಂತಹ ಮಾತುಕತೆಯಲ್ಲಿ ಭಾರೀ ಪೈಪೋಟಿ ಬಂದು, ಆ ಪೈಪೋಟಿಗಳೇ ಭಿನ್ನಾಭಿಪ್ರಾಯಗಳಾಗಿ ಮಾರ್ಪಟ್ಟವು. ಅದು ಮಾತಾಡುವವರಲ್ಲಿ ಅಸಮಾಧಾನಕ್ಕೆ ಕಾರಣವಾಗಿ, ಆ ಅಸಮಾಧಾನವು ಕೆಲವು ಸಲ ಜಗಳಕ್ಕೂ ತಿರುಗುತ್ತಿತ್ತು. ಕೆಲವು ಕಡೆ ಈ ವಿಷಯಕ್ಕಾಗಿ ಜಗಳ ನಡೆದದ್ದೂ ಉಂಟಂತೆ. ಹೀಗೆ ಈ ಕಡೆ ಅವಳ ಮದುವೆಯ ವಿಷಯದಲ್ಲೇ ಜಗಳ ನಡೆಯುತ್ತಿದ್ದರೆ; ಆ ಕಡೆ ಪಟೇಲ ತನ್ನ ಏಕೈಕ ಮಗಳೆಂಬ ಪುತ್ರಿಯನ್ನು ಮದುವೆ ಮಾಡಲಿಲ್ಲವಂತೆ ಅಥವಾ ಮದುವೆಯಾಗಲು ಗಂಡುಗಳು ಬರಲೇ ಇಲ್ಲವಂತೆ.

ಅವಳಿಗೆ ಇಪ್ಪತ್ತಾಯಿತು, ಗಂಡುಗಳು ಬರಲಿಲ್ಲ, ಮದುವೆ ಆಗಲಿಲ್ಲ ಅಥವ ಪಟೇಲ ಮದುವೆ ಮಾಡಲಿಲ್ಲ. ಇಪ್ಪತ್ತೈದು, ಮೂವತ್ತು, ಮೂವತ್ತೈದು ಆಯಿತು. ಗಂಡುಗಳು ಬರಲಿಲ್ಲ. ಮದುವೆ ಆಗಲಿಲ್ಲ. ಅವಳಿಗೆ ಯಾಕೆ ಮದುವೆ ಮಾಡಲಿಲ್ಲ ಎಂಬುದು ಆ ಊರಿನವರ ಕುತೂಹಲದ ಜೇನಿನ ಹುಟ್ಟಿಗೆ ಕಲ್ಲೆಸೆದಂತೆ ಆಯಿತು. ಇಂತಹ ಸಮಯದಲ್ಲಿ ಪ್ರತಿಭಾವಂತರು, ಹಿರಿಯರು, ಅನುಭವಿಗಳು, ಕುಳುವಾಡಿ, ಬುದ್ಧಿವಂತರು ಪಟೇಲನ ಮಗಳಿಗೆ ಮದುವೆಯ ಯೋಗವೇ ಇಲ್ಲವಂತೆ' ಎಂದು ಮಾತಾಡಿಕೊಂಡಿದ್ದು ಎಲ್ಲಿಯೂ ಸುದ್ದಿಯಾಗಲಿಲ್ಲವೆಂದು ಹೇಳುತ್ತಾರೆ.



**ಹಾಸಿಗೆ-ಹೊದಿಕೆಯ ಪರಿಸ್ಥಿತಿ**

ಪ್ರತಿದಿನ ಪಟೇಲನ ಸುಪುತ್ರಿಯ ಹಾಸಿಗೆ ಹೊದಿಕೆ ತೊಳೆಯಲೇಬೇಕಾಗಿತ್ತು. ಆ ಹಾಸಿಗೆ ಹೊದಿಕೆಗಳು ಕೆಟ್ಟ ಉಚ್ಚೆಯ ವಾಸನೆ ಹೊಡೆಯುತ್ತಿದ್ದವು. ಬೇಸಿಗೆಯಲ್ಲಿ ತೊಳೆದ ಹಾಸಿಗೆಗಳು ಒಂದೇ ದಿನಕ್ಕೆ ಒಣಗುತ್ತಿದ್ದವು. ಮಳೆಗಾಲದಲ್ಲಿ ಅವು ಒಣಗಲು ನಾಲ್ಕೈದು ದಿನ ಬೇಕಾಗುತ್ತಿತ್ತು. ಯಾಕೆಂದರೆ ಅದು ಹೇಳಿಕೇಳಿ ಮಲೆನಾಡಾಗಿತ್ತು. ವರ್ಷದ ೬ ತಿಂಗಳು ನಿರಂತರವಾಗಿ ಮಳೆ ಬರುತ್ತಿತ್ತು. ಆಗ ಪಟೇಲ ಯಾವ ನೆಂಟರನ್ನೂ ಮನೆಗೆ ಕರೆಯುತ್ತಿರಲಿಲ್ಲ. ಯಾಕೆಂದರೆ ಇಡೀ ಮನೆಯೇ ಸುಪುತ್ರಿಯ ಮೂತ್ರದಿಂದ ಕೆಟ್ಟ ವಾಸನೆ ಹೊಡೆಯುತ್ತಿತ್ತು. ಹೊಡೆಯುತ್ತಿತ್ತು. ಅದನ್ನು ಮುಚ್ಚಿಡಲು ಆಗುತ್ತಿರಲಿಲ್ಲವಂತೆ. ಪ್ರತಿದಿನ ರಾತ್ರಿ ನಿದ್ದೆ ಮಾಡುವಾಗ ಕನಿಷ್ಠ ನಾಲ್ಕೈದು ಸಲವಾದರೂ ಅವಳು ಹಾಸಿಗೆಯಲ್ಲಿ ಉಚ್ಚೆ ಹುಯ್ದುಕೊಳ್ಳುತ್ತಿದ್ದಳಂತೆ. ಆ ಉಚ್ಚೆಯ ವಾಸನೆ ಕೆಲವು ಸಲ ಬೇರೆಬೇರೆ ವಾಸನೆಯಾಗಿಯೂ ಮೂಗಿಗೆ ಹೊಡೆಯುತ್ತಿತ್ತು. ಅದು ಕೆಟ್ಟ ಕಟು ವಾಸನೆ, ಕಮಟು ವಾಸನೆ, ಒಣಗಿದ ಮೀನಿನ ವಾಸನೆ ಹೀಗೆ ತರಾವರಿ ವಾಸನೆಗಳಾಗಿ ರೂಪಾಂತರ ಹೊಂದುತ್ತಿತ್ತು. ಈ ವಾಸನೆಗಳೆಲ್ಲ ಕೆಲವೊಮ್ಮೆ ಮನೆಯ ಒಳಗಿನ ಕೋಣೆಗಳನ್ನೂ ಮೀರಿ ಹೊರಗಿನ ಜಗುಲಿಗೆ ಬರುತ್ತಿದ್ದುವಂತೆ. ಜಗುಲಿಯನ್ನೂ ದಾಟಿಕೊಂಡು ಅಂಗಳಕ್ಕೂ ಬರುತ್ತಿದ್ದುವಂತೆ. ಇದು ಪಟೇಲನಿಗೆ ಮತ್ತು ಹೆಗ್ಗಡತಿಗೆ ಡೈರೆಕ್ಟಾಗಿ ಗೊತ್ತಿತ್ತಂತೆ. ಆದರೆ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಜನರಿಗೆ 'ಈ ವಾಸನೆ ಅನುಭವಕ್ಕೆ ಬಂದರೂ ಪ್ರಜ್ಞೆಗೆ ಬರುವುದಿಲ್ಲ' ಎಂಬುದು ಪಟೇಲನಿಗೆ ಎಂದೊ ಖಾತ್ರಿಯಾಗಿ ಹೋಗಿತ್ತಂತೆ. ಹಾಗಾಗಿ ಕೆಲಸದವರ ಎದುರಿಗೆ ಉಚ್ಚೆ ವಾಸನೆಯನ್ನು ಮುಚ್ಚಿಡುವ ಯಾವ ಸಾಹಸವನ್ನೂ ಪಟೇಲ ಮಾಡಲಿಲ್ಲವಂತೆ. ಆದರೆ ಮಗಳು ರಾತ್ರಿ ನಿದ್ದೆ ಮಾಡುವಾಗ ಉಚ್ಚೆ ಹುಯ್ಯುವುದನ್ನು ನಿಲ್ಲಿಸಲು ಅವನು ನೂರಾರು ಪ್ರಯತ್ನಗಳನ್ನು ಮಾಡಿದನಂತೆ. ಅವನು ಕೈಯೆತ್ತಿ ಮುಗಿಯದ ದೇವರು ದಿಂಡಿರುಗಳಿಲ್ಲವಂತೆ. ಹಂದಿ, ಕೋಳಿ, ಬಲಿ ಕೊಡದ ದೇವರುಗಳಿಲ್ಲವಂತೆ. ಮನೆ ಬಾಗಿಲಿಗೆ ಬರುವ ಕಟ್ಟು ನೋಡುವವರು, ಗಿಳಿ ಶಾಸ್ತ್ರದವರು, ಹಾಲಕ್ಕಿಯವರು, ಬುಡುಬುಡುಕಿಯವರು, ಕೊನೆಗೆ ಸುಡುಗಾಡು ಸಿದ್ದರವರೆಗೆ ಅವನ ಪ್ರಯತ್ನ ನಡೆದಿತ್ತಂತೆ. ಮಂತ್ರವಾದಿಗಳಂತೂ ಲೆಕ್ಕವೇ ಇಲ್ಲವಂತೆ. ಕವಡೆ ಹಾಕಿ ನೋಡುವವರಿಂದ ಶುರುವಾಗಿ ಕೊನೆಗೆ ಕೇರಳದ ಪ್ರಸಿದ್ಧ ಮಲೆಯಾಳಿ ಮಂತ್ರದವರೆಗೂ ಅವನ ಆ ಪ್ರಯತ್ನ ಗುಪ್ತವಾಗಿಯೇ ನಡೆದಿತ್ತಂತೆ.

**ದೇವರ ಹರಕೆಯ ಪ್ರಕರಣಂ**

ಊರಿನಲ್ಲಿ ಇದ್ದ ದೇವತೆಯೇನೂ ಕಡಿಮೆ ಇರಲಿಲ್ಲ. ಕಷ್ಟ ಬಂದಾಗ ಕೈ ಮುಗಿದರೂ ಸಾಕು; ಕಷ್ಟ ಪರಿಹಾರ ಆಗುತ್ತಿತ್ತು. ಅದರ ಜೊತೆಗೆ ಕಷ್ಟ ಬಂದರೆ ತೆಂಗಿನ ಕಾಯಿ ಒಡೆಸುವುದು, ನೂರಾ ಒಂದು ರೂಪಾಯಿ ಕಾಣಿಕೆ ಹಾಕುವುದು, ಕೋಳಿ, ಹಂದಿ ಹರಕೆ ಕೊಡುವುದಾಗಿ ಬೇಡಿಕೊಳ್ಳುತ್ತಿದ್ದರು. ದೇವತೆ ಅವರ ಕಷ್ಟವನ್ನು ಪರಿಹಾರ ಮಾಡುತ್ತಿದ್ದಳಂತೆ. ಕಣ್ಣು ಕಾಣದಂತಾಗಿದ್ದರೆ-ಬೆಳ್ಳಿಯ ಕಣ್ಣು ಮಾಡಿಸಿ



ದೇವತೆಗೆ ಒಪ್ಪಿಸುವುದು, ಕಿವಿ ಕೇಳಿಸದಂತಾಗಿದ್ದರೆ-ಬೆಳ್ಳಿಯ ಕಿವಿ ಮಾಡಿಸಿ ಒಪ್ಪಿಸುವುದು, ಕಾಲು ಮುರಿದಿದ್ದರೆ-ಬೆಳ್ಳಿಯ ಕಾಲು ಮಾಡಿಸಿ ಒಪ್ಪಿಸುವುದು, ಕೈ ಮುರಿದಿದ್ದರೆ-ಬೆಳ್ಳಿಯ ಕೈ ಮಾಡಿಸಿ ಒಪ್ಪಿಸುವುದು, ಬೆರಳು ಮುರಿದಿದ್ದರೆ ಬೆಳ್ಳಿಯ ಬೆರಳು ಮಾಡಿಸಿ ಒಪ್ಪಿಸುವುದು, ಮಕ್ಕಳಾಗದಿದ್ದರೆ-ಬೆಳ್ಳಿಯ ತೊಟ್ಟಿಲು ಮಾಡಿಸಿ ಒಪ್ಪಿಸುವುದು, ಎತ್ತು ಹಟ್ಟಿಗೆ ಬರದೇ ಹೋದಾಗ-ಬೆಳ್ಳಿಯ ಎತ್ತು ಮಾಡಿಸಿ ಒಪ್ಪಿಸುವುದು ನಡೆದಿತ್ತು.

ಪ್ರತಿ ವರ್ಷದ ದೇವತೆಯ ಉತ್ಸವದಲ್ಲಿ ಒಬ್ಬರಲ್ಲ ಒಬ್ಬರು ಈ ರೀತಿ ಹರಕೆಗೆ ಸಂಬಂಧಿಸಿದ ಬೆಳ್ಳಿಯ ಒಡವೆಗಳನ್ನು ಮಾಡಿಸಿ ದೇವತೆಗೆ ಒಪ್ಪಿಸುತ್ತಿದ್ದರು. ಮೇಲುಜಾತಿಯ ಗೌಡರು ಹಬ್ಬದಲ್ಲಿ ಅಂತಹ ಒಡವೆಯನ್ನು ದೇವಸ್ಥಾನಕ್ಕೆ ತರುವಾಗ ಹರಿಜನರಿಂದ ವಾದ್ಯ ಬಾರಿಸಿಕೊಂಡು ಮೆರವಣಿಗೆಯಲ್ಲಿ ತರುತ್ತಿದ್ದರು. ಆಗ ವಾದ್ಯ ಬಾರಿಸುವವರಿಗೊಂದು ಖುಷಿ, ದೇವತೆಗೊಂದು ಖುಷಿ, ಅದನ್ನು ಮಾಡಿಸಿದವರಿ ಗೊಂದು ಖುಷಿ, ಹೀಗೆ ಒಂದೇ ಸಲಕ್ಕೆ ಮೂರು ಖುಷಿಗಳೂ ಒಟ್ಟಿಗೇ ಸೇರುತ್ತಿದ್ದವಂತೆ. ಇದನ್ನು ಹಬ್ಬಕ್ಕೆ ಸೇರುತ್ತಿದ್ದ ಜನರಲ್ಲಿ ಕೆಲವರು ಕೂತುಕೊಂಡು, ಕೆಲವರು ನಿಂತುಕೊಂಡು, ಎತ್ತರ ಕಡಿಮೆ ಇರುವವರು ಮೀಟಿಗಾಲು ಮಾಡಿಕೊಂಡು ನೋಡುತ್ತಿದ್ದರಂತೆ. ಆಗ ಎದ್ದು ನಿಲ್ಲಲಾಗದ ಮುದುಕ ಮುದುಕಿಯರು 'ಏಯ್ ಕೂತ್‌ಕಾ!' ಎಂದು ಗದರಿಸುತ್ತಿದ್ದರಂತೆ.

ಪಟೇಲನು ತನ್ನ ಮಗಳಿಗೆ ಬಂದಿರುವ ಸಮಸ್ಯೆಯ ಪರಿಹಾರಕ್ಕೆ ಬೆಳ್ಳಿಯ ಒಡವೆ ಮಾಡಿಸಿ ದೇವತೆಗೆ ಒಪ್ಪಿಸಲು ಚಿಂತನ ಮಂಥನ ನಡೆಸಿದನಂತೆ. ಆ ಬಗ್ಗೆ ಅವನೊಬ್ಬನೇ ಬಗೆಬಗೆಯಾಗಿ ಆಲೋಚಿಸಿದನಂತೆ. 'ಕೈ ಮುರಿದಿದ್ದರೆ-ಬೆಳ್ಳಿಯ ಕೈ, ಕಾಲು ಮುರಿದಿದ್ದರೆ-ಬೆಳ್ಳಿಯ ಕಾಲು, ಕಣ್ಣು ಕಾಣದಿದ್ದರೆ-ಬೆಳ್ಳಿಯ ಕಣ್ಣು ಮಾಡಿಸಿ ದೇವತೆಗೆ ಒಪ್ಪಿಸುವುದು ಸರಿ. ಆದರೆ ನಿದ್ದೆ ಮಾಡುವಾಗ ಉಚ್ಚೆ ಹುಯ್ದುಕೊಳ್ಳುವುದಕ್ಕೆ ಯಾವ ಒಡವೆ ಮಾಡಿಸಿ ದೇವತೆಗೆ ಒಪ್ಪಿಸಬೇಕು?' ಎಂದು ಪಟೇಲ ಚಿಂತಾಕ್ರಾಂತನಾದನಂತೆ. ತನ್ನೊಳಗೇ ವ್ಯಥೆಪಟ್ಟನಂತೆ. ಪಟೇಲನ ಮಗಳು ನಿದ್ದೆ ಮಾಡುವಾಗ ಉಚ್ಚೆ ಹುಯ್ಯುತ್ತಿದ್ದುದರಿಂದ ಅವಳ ಮದುವೆ ಕೊನೆಗೂ ನಡೆಯಲೇ ಇಲ್ಲವಂತೆ. ವಯಸ್ಸು ನಲವತ್ತೂ ದಾಟಿತಂತೆ. ಕೊನೆಗೂ ಮದುವೆಯಾಗಲಿಲ್ಲ. ಆದರೆ ಇದು ಇಲ್ಲಿಗೆ ಮುಗಿಯಲಿಲ್ಲವಂತೆ.

**ಭಟ್ಟರು ಮಾಡಿಕೊಟ್ಟದಾರ ಹರಿದು ಹೋಯಿತಲ್ಲೋ ಪರಾಕ್!**

ಪಕ್ಕದ ಊರಲ್ಲಿ ಒಬ್ಬರು ಭಟ್ಟರು ಇದ್ದರು. ಒಳ್ಳೆಯದು-ಕೆಟ್ಟದಕ್ಕೆ ಅವರ ಹತ್ತಿರ ಜನ ಹೋಗುತ್ತಿದ್ದರು. ಹುಟ್ಟಿದ ಮಕ್ಕಳಿಗೆ ಜಾತಕ ಬರೆಯುವುದು, ಸತ್ತವರ ಕುರಿತು ಶಾಸ್ತ್ರ ಹೇಳುವುದು, ಮನೆ ಆಯ ನೋಡುವುದು, ಲಗ್ನ ಕೂಡಿಸಿಕೊಡುವುದು, ಮಾಟ ಮಾಡಿಸಿದ್ದರೆ ಅದನ್ನು ನಿಷ್ಕ್ರಿಯಗೊಳಿಸುವುದು, ಮದುವೆಗೂ ಮೊದಲು ಯಾರಿಗಾದರೂ ಅಪ್ಪಿತಪ್ಪಿ ಮುಟ್ಟು ನಿಂತರೆ ಅದನ್ನು ಹೋಗಲಾಡಿಸುವುದು, ಮದ್ದು ತೆಗೆಯುವುದು, ಶತ್ರುಬಾಧೆಯನ್ನು ತಡೆಗಟ್ಟುವುದು, ತಡೆ ಕಟ್ಟಿಸಿದ್ದರೆ ಆ ತಡೆ



ಒಡೆಯುವುದು -ಇವುಗಳಲ್ಲಿ ಅವರು ಹತ್ತಾರು ಹಳ್ಳಿಗಳಿಗೆ ಓಪನ್ನಾಗಿ ಫೇಮಸ್ ಆಗಿದ್ದರು. ಉಳಿದಂತೆ ಯಾರಿಗಾದರೂ ಗಟ್ಟಿಮುಟ್ಟಾದ ಮಾಟ ಮಾಡಿಸಬೇಕೆಂದರೆ ಅದಕ್ಕೆ ವಿಶೇಷವಾದ ದಕ್ಷಿಣೆ ಪಡೆದು ಅದನ್ನೂ ಮಾಡುತ್ತಾರಂತೆ ಎಂದು ಕೆಲವರು ಕದ್ದು ಮುಚ್ಚಿ ಮಾತಾಡಿಕೊಳ್ಳುತ್ತಿದ್ದರು.

ಅವರನ್ನೇ ಡೈರೆಕ್ಟಾಗಿ ಭೇಟಿಯಾಗಿ ತನ್ನ ಮಗಳ ಸಮಸ್ಯೆಯನ್ನು ಹೇಳಿಕೊಂಡರೆ ಹೇಗೆ ಎಂದು ಗೌಡ ತರಾವರಿಯಾಗಿ ಆಲೋಚಿಸಿದ. ಆದರೆ ಮಗಳ ಸಮಸ್ಯೆಯನ್ನು ಆ ಭಟ್ಟರ ಹತ್ತಿರ ಹೇಗೆ ಬಿಡಿಸಿ ಹೇಳುವುದು ಎಂದು ಅವನಿಗೆ ಮತ್ತೊಂದು ಭಯ ಕಾಡತೊಡಗಿತು. ಸಮಸ್ಯೆಯನ್ನು ಪರಿಹರಿಸಲು ಹೊರಟರೆ ಆ ದಾರಿಯಲ್ಲಿ ಮತ್ತೊಂದು ಹೊಸ ಸಮಸ್ಯೆಯೇ ಕಾಣತೊಡಗಿತು. ಸಮಸ್ಯೆ ಎಂದರೆ ಸರಪಳಿಯಲ್ಲವೆ ಎಂದುಕೊಂಡ.

ಆ ಭಟ್ಟರು ಕೆಲವರ ಸಮಸ್ಯೆಯನ್ನು ಬಗೆಹರಿಸಿದ್ದು ಇದೆ. ಆದರೆ ಅವರು ಗಂಡಸರ ಸಮಸ್ಯೆ ಬಗೆಹರಿಸುವುದಕ್ಕೂ ಮತ್ತು ಹೆಂಗಸರ ಸಮಸ್ಯೆ ಬಗೆಹರಿಸುವುದಕ್ಕೂ ಬಹಳ ವ್ಯತ್ಯಾಸ ಇದ್ದುದನ್ನು ಗೌಡ ತನ್ನ ಅನುಭವದಿಂದಲೇ ಬಲ್ಲವನಾಗಿದ್ದ. ಭಟ್ಟರಲ್ಲಿ ಯಾವುದಾದರೂ ಹೆಣ್ಣು ಮಕ್ಕಳ ಮತ್ತು ಹೆಂಗಸರ ಸಮಸ್ಯೆಯನ್ನು ತಗೊಂಡು ಹೋದರೆ, ಅಂತವರನ್ನು ರಾತ್ರಿ ಮನೆ ಹತ್ತಿರ ಬರಲು ಹೇಳುತ್ತಿದ್ದ. ಮನೆಯ ಹಿಂದಿನ ಹಿತ್ತಲಲ್ಲಿ 'ಸ್ಮಶಾನ ಕಾಳಿ' ದೇವರು ಇರುವುದಾಗಿಯೂ, ಅದರ ಶಕ್ತಿಯಿಂದಲೇ ಎಲ್ಲವನ್ನೂ ಪರಿಹಾರ ಮಾಡುವುದಾಗಿಯೂ, ಸಮಸ್ಯೆಗೆ ಪರಿಹಾರ ಬೇಕೆಂದವರು ಒಂಟಿಯಾಗಿ ಅಲ್ಲಿಗೆ ಬರಬೇಕೆಂದೂ ಆತನ ನಿಯಮವಿತ್ತು. ಕೆಲವರು ಒಂಟಿಯಾಗಿ ಅಲ್ಲಿಗೆ ಹೋಗಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಂಡಿದ್ದರಂತೆ. ಆದರೆ ಈ ವಿಷಯದಲ್ಲಿ ಗೌಡನಿಗೆ ಉಂಟಾದ ಭಯವೇನೆಂದರೆ ತನ್ನ ಮಗಳನ್ನು ರಾತ್ರಿ ಹೊತ್ತು ಒಂಟಿಯಾಗಿ ಅಲ್ಲಿಗೆ ಹೇಗೆ ಕಳಿಸುವುದು ಎನ್ನುವುದು. ಅದರ ಜೊತೆಗೇ ಮತ್ತೊಂದು ಭಯವೆಂದರೆ ಅದು ಉಚ್ಚೆ ಹುಯ್ದುಕೊಳ್ಳುತ್ತಿದ್ದ ಸಮಸ್ಯೆಗೆ ಸಂಬಂಧಿಸಿದ್ದು, ಹಾಗಾಗಿ

ಮಗಳನ್ನು ಅಲ್ಲಿಗೆ ಕರೆದುಕೊಂಡು ಹೋಗಲು ಅವನ ಮನಸ್ಸು ಒಪ್ಪಲಿಲ್ಲ. ಆದರೆ ಅವರನ್ನು ಭೇಟಿಮಾಡಬೇಕೆಂಬುದನ್ನು ಮನಸ್ಸು ಬಿಟ್ಟುಕೊಡಲಿಲ್ಲ.

ಗೌಡ ಅದಕ್ಕೂ ಒಂದು ಉಪಾಯ ಮಾಡಬಹುದೆ ಎಂದು ಯೋಚಿಸಿದ. ಏನೆಂದರೆ, 'ಮಗಳ ಮೂಲ ಸಮಸ್ಯೆಯನ್ನು ಭಟ್ಟರಿಗೆ ಹೇಳುವುದು ಬೇಡ. ಅವರ ಹತ್ತಿರ ಹೋಗಿ, ಮಗಳಿಗೆ ಹುಷಾರಿಲ್ಲ, ಅವಳಿಗೆ ನಡೆಯಲು ಆಗುತ್ತಿಲ್ಲ, ಬೇದಿ ನಿಲ್ಲುತ್ತಿಲ್ಲ, ಅದಕ್ಕೆ ಏನಾದರೂ ಅಂತ್ರ, ತಂತ್ರ, ದಾರ, ತಾಯಿತ ಮಾಡಿಕೊಡಿ ಎಂದು ಕೇಳುವುದು. ಅವರು ಮಾಡಿಕೊಡುವ ಪರಿಹಾರದಲ್ಲಿ ಬೇದಿಯನ್ನು ನಿಲ್ಲಿಸುವಂತಹ ಶಕ್ತಿಯಿರುತ್ತದೆ. ಬೇದಿ ಆಗುವಾಗ ಬೇದಿಯ ಜೊತೆಗೆ ಸಹಜವಾಗಿ ಉಚ್ಚೆಯೂ ಹೊರಗೆ ಬರುತ್ತದೆ. ಇದು ಜೈವಿಕ ಸತ್ಯ. ಹಾಗಾಗಿ ಬೇದಿ ನಿಲ್ಲಲು ಕೊಡುವ ದಾರ ಮುಂತಾದುವು ಉಚ್ಚೆಯನ್ನೂ ನಿಲ್ಲಿಸುವ ಶಕ್ತಿಯನ್ನು ಹೊಂದಿರುತ್ತವೆ. ಹೆಚ್ಚೆಂದರೆ



ಅದನ್ನು ತಂದು ಕಟ್ಟುವಾಗ, ಅದನ್ನು ಲೋಬಾನದ ಹೊಗೆಗೆ ಹಿಡಿದು, ಉಚ್ಚೆ ನಿಲ್ಲಿಸು ಎಂದು ಬೇಡಿಕೊಂಡು, ಕಟ್ಟಿದರಾಯಿತು ಎಂದುಕೊಂಡ.

ಆ ಪ್ರಕಾರವಾಗಿ ಒಂದು ದಿನ ಶುಭ್ರವಾಗಿ ಭಟ್ಟರ ಮನೆಗೆ ಹೋದ. ನನ್ನ ಮಗಳಿಗೆ ದಿನಾ ರಾತ್ರಿ ಹೊತ್ತು ಬೇದಿಯಾಗುತ್ತದೆ. ಅದು ನಿಲ್ಲಲು ಏನನ್ನಾದರೂ ಮಾಡಿಕೊಡಿ' ಎಂದು ಕೇಳಿದ. 'ಬೇದಿಯ ಜೊತೆಗೆ ಉಚ್ಚೆಯೂ ಹೋಗುತ್ತದೆ' ಎಂದು ಹೇಳಲು ನಾಲಿಗೆ ಬಂದಿತಾದರೂ ಅದನ್ನು ಗಟ್ಟಿಯಾಗಿ ತಡೆಹಿಡಿದುಕೊಂಡ. ತನ್ನ ನಾಲಿಗೆಗೆ ತಾನೇ ಶಾಪ ಹಾಕಿಕೊಂಡ. ಭಟ್ಟರು ಪಂಚಾಂಗ ತೆಗೆದು, ರಾಶಿ, ನಕ್ಷತ್ರ ಇವನ್ನೆಲ್ಲ ಸರಿಯಾಗಿ ಹೇಳಿ, ಮೂರು ಬಣ್ಣದ ದಾರವನ್ನು ತಗೊಂಡು, ಅದಕ್ಕೆ ಕುಂಕುಮ ಮತ್ತು ವಿಭೂತಿಯನ್ನು ಹಚ್ಚಿ, ಮಂತ್ರವನ್ನು ತುಂಬಿಸಿ ಕೊಟ್ಟರು. ಅದನ್ನು ಲೋಬಾನದ ಹೊಗೆಗೆ ಹಿಡಿದು, ಹಿರಿಯರನ್ನು ನೆನೆದು, ತಾಯಿಯ ಕೈಯಲ್ಲಿ ಸೊಂಟಕ್ಕೆ ಕಟ್ಟಿಸುವಂತೆಯೂ, ಮೂರು ದಿನದಲ್ಲಿ ಸಮಸ್ಯೆ ಬಗೆಹರಿಯುತ್ತದೆ' ಎಂದೂ ಹೇಳಿಕಳಿಸಿದರು. ಮನೆಗೆ ಬಂದ ಗೌಡ, ಭಟ್ಟರು ಹೇಳಿದಂತೆಯೇ ಮಾಡಿದ. ಒಂದು ದಿನ ಕಳೆಯಿತು. ಮಗಳ ಉಚ್ಚೆ ನಿಲ್ಲಿಲ್ಲ. ಎರಡು ದಿನ, ಮೂರು ದಿನವೂ ಕಳೆಯಿತು. ಮಗಳ ಉಚ್ಚೆ ನಿಲ್ಲಲಿಲ್ಲ. 'ಇಲ್ಲ ಭಟ್ಟರು ಮೂರು ದಿನ ಅಂತ ಹೇಳಿರಬಹುದು. ಆದರೆ ಅದು ಕೆಲವೊಮ್ಮೆ ಒಂಭತ್ತು ದಿನ, ಹನ್ನೆರಡು ದಿನ ಆದರೂ ಆಗಬಹುದು' ಎಂದು ತನಗೆ ತಾನೇ ಧೈರ್ಯ ಹೇಳಿಕೊಂಡ. ಅವನು ಅಂದುಕೊಂಡ ಅಷ್ಟೂ ದಿನಗಳು ಕಳೆದುಹೋದವು. ಅಂತಹ ಕೆಲವು ದಿನಗಳು ಕಳೆದ ಮೇಲೆ ಒಂದು ದಿನ ಬೆಳಿಗ್ಗೆ ಮಗಳು ಮಲಗುತ್ತಿದ್ದ ಹಾಸಿಗೆಯಲ್ಲಿ, 'ನನ್ನಿಂದಲೇ ನನ್ನನ್ನು ರಕ್ಷಣೆ ಮಾಡಿಕೊಳ್ಳಲು ಆಗಲಿಲ್ಲ. ಇನ್ನು ನಿನ್ನ ಸಮಸ್ಯೆಯನ್ನು ಹೇಗೆ ಬಗೆಹರಿಸಲಿ, ದಯವಿಟ್ಟು ನನ್ನನ್ನು ಕ್ಷಮಿಸು' ಎಂಬ ಅಸಹಾಯಕವೂ, ಚಿಂತಾಜನಕವೂ ಆದ ಸ್ಥಿತಿಯಲ್ಲಿ ಭಟ್ಟರು ಮಾಡಿಕೊಟ್ಟಿದ್ದ ದಾರವು

ಹರಿದುಬಿದ್ದಿತ್ತು. ಅಷ್ಟಾಗಿಯೂ 'ತನ್ನ ಖಚಿತವೂ, ಸ್ಪಷ್ಟವೂ ಆದ ವಿಫಲತೆಯನ್ನೂ, ಸೋಲನ್ನೂ ಬಹಿರಂಗವಾಗಿ ಯಾರಿಗೂ ತೋರ್ಪಡಿಸುವುದಿಲ್ಲ' ಎಂಬ ಪ್ರತಿಷ್ಠೆಯಲ್ಲೂ, ಅಹಂಕಾರದಲ್ಲೂ ಅದು ಬೀಗುತ್ತಿತ್ತು. ನಿದ್ದೆ ಮಾಡುವಾಗ ಹೊರಬರುತ್ತಿದ್ದ ಉಚ್ಚೆಯನ್ನು ನಿಲ್ಲಿಸುವ ಅತ್ಯಂತ ಗುರುತರವಾದ ಗುರಿಹೊತ್ತು, ಜವಾಬ್ದಾರಿ ಹಾಗೂ ಹೊಣೆಹೊತ್ತು ಬಂದಿದ್ದ ಆ ದಾರವು, ಅದೇ ಉಚ್ಚೆಯನ್ನು ಕುಡಿದು, ಅದರಲ್ಲಿದ್ದ ಉಪ್ಪಿನಾಂಶದ ದುಷ್ಪರಿಣಾಮಕ್ಕೆ ಬಲಿಯಾಗಿ ಅಸುನೀಗಿತ್ತು.

**ಏಕೇಸ್ ಹುಡುಗನ ಕವನ ಪ್ರಕರಣಂ**

ಅದೇ ಊರಲ್ಲಿ ಒಬ್ಬ ಏಕೇಸ್ ಹುಡುಗ ಇದ್ದ. ಅವನು ದೂರದ ಹಾಸ್ಟೆಲಿನಲ್ಲಿದ್ದು ಎಸ್‌ಎಸ್‌ಎಲ್‌ಸಿ ತನಕ ಓದಿ, ಮುಂದೆ ಓದಲು ಆಗದೆ ಊರಲ್ಲಿದ್ದ. ಅವನು 'ತಾನು ಜೀವನದಲ್ಲಿ ಏನಾದರೂ ದೊಡ್ಡ ಸಾಧನೆ ಮಾಡಬೇಕು' ಅಂತ ಆಲೋಚಿಸುತ್ತಿದ್ದ. ದೊಡ್ಡ ಕಾಫಿ ತೋಟ ಮಾಡಿ ಪಟೇಲನನ್ನು ಮೀರಿಸಬೇಕು ಎಂದು ಕನಸು ಕಂಡ. ಅದು ಸುಲಭವಿರಲಿಲ್ಲ. 'ಏನಾದರಾಗಲಿ, ಜೀವನದಲ್ಲಿ ಏನಾದರೂ



ಸಾಧನೆ ಮಾಡಲೇಬೇಕು. ಊರ ಹುಡುಗಿಯರು, ಪಟೇಲ ಇವರೆಲ್ಲ ತನ್ನ ಕಡೆಗೆ ನೋಡುವಂತಾಗಬೇಕು' ಎಂದು ಆಲೋಚಿಸಿದ.

ಹೀಗೆ ದಿನಗಳೂ, ವರ್ಷಗಳೂ ಕಳೆದವು. ಅವನ ಆಸೆ, ಕನಸುಗಳು ಕನಸುಗಳಾಗಿಯೇ ಉಳಿದವು. ಒಂದು ಸಲ ಅವನಿಗೆ, 'ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ಮಟ್ಟದ ಕವಿಗೋಷ್ಠಿ ನಡೆಯಲಿದೆ' ಎಂಬ ವಿಷಯ ಕಿವಿಗೆ ಬಿತ್ತು. 'ಏನಾದರಾಗಲಿ, ಕವಿಗೋಷ್ಠಿಗೆ ಹೋಗಲೇಬೇಕು' ಎಂದು ನಿರ್ಧರಿಸಿಕೊಂಡ. ಕವಿಗೋಷ್ಠಿಗೆ ಹೋಗಲು ಬಸ್ ಚಾರ್ಜಿಗೆಲ್ಲ ಸ್ವಲ್ಪ ಸಮಸ್ಯೆಯೇ ಆಯಿತು. ಅದನ್ನು ಹೇಗೆಗೋ ನಿಭಾಯಿಸಿಕೊಂಡ.

ಕವಿಗೋಷ್ಠಿಯ ದಿನ ಅರ್ಜುನ ಯುದ್ಧಕ್ಕೆ ಹೊರಟಂತೆ, ಅಭಿಮನ್ಯು ಚಕ್ರವ್ಯೂಹಕ್ಕೆ ಹೊರಟಂತೆ, ಉತ್ತರಕುಮಾರ ರಣರಂಗಕ್ಕೆ ಹೊರಟಂತೆ, ತಿದ್ದಿದ ಎತ್ತು ಬೇಸಾಯಕ್ಕೆ ಹೊರಟಂತೆ, ಶಿಕಾರಿ ಗೊತ್ತಿಲ್ಲದ ನಾಯಿ ಬೇಟೆಗೆ ಹೊರಟಂತೆ, ಈಡುಗಾರಿಕೆ ಗೊತ್ತಿಲ್ಲದವನು ಬೇಟೆಗೆ ಹೋದಂತೆ, ಲಾಭ ಮಾಡಿಕೊಳ್ಳುವ ಕುತಂತ್ರ ಗೊತ್ತಿಲ್ಲದವನು ವ್ಯಾಪಾರಕ್ಕೆ ಇಳಿದಂತೆ, ಸುಳ್ಳು ಹೇಳಲು ಮೋಸಮಾಡಲು ಬರಲಾರದವನು ರಾಜಕಾರಣಕ್ಕೆ ಇಳಿದಂತೆ, ಪರ್ಸೆಂಟೇಜ್ ಹೊಡೆಯಲು ಗೊತ್ತಿಲ್ಲದವನು ಅಧಿಕಾರಿಯಾಗಲು ಮತ್ತು ಗುತ್ತಿಗೆದಾರನಾಗಲು ಹೊರಟಂತೆ, ನಯವಂಚನೆ ಹಾಗೂ ಜಾಣೆಯ ಮೋಸ ಗೊತ್ತಿಲ್ಲದವನು ಮಠಾಧೀಶನಾಗಲು ಹೊರಟಂತೆ, ಹೊಟ್ಟೆ ಪಕ್ಷದ ರಂಗಸ್ವಾಮಿ ಎಲೆಕ್ಷನ್‌ಗೆ ಹೊರಟಂತೆ ಹೊರಟೇಬಿಟ್ಟ.

ಕವಿಗೋಷ್ಠಿಯಲ್ಲಿ ಕೆಲವರು ಕವನ ಓದಿದವರು. ಕೆಲವರು ಆ ಕುರಿತು ಭಾಷಣ ಮಾಡಿದವರು. ಅದರಲ್ಲಿ ಒಂದು ಭಾಷಣ ಇವನನ್ನು ತೀವ್ರವಾಗಿ ಪ್ರಭಾವಿಸಿತು. ಏನದು ಭಾಷಣ ಅಂದರೆ: 'ಇಲ್ಲಿ ಸೇರಿರುವ ಹೊಚ್ಚ ಹೊಸ ಕವಿವರ್ಯರೆ ಮತ್ತು ಕವಿವರ್ಯೆಯರೆ, ನಿಮಗೆ ಕೆಲವು ಸಲಹೆ ಕೊಡಲು ನಾನು ಇಚ್ಛಿಸುತ್ತೇನೆ. ನೀವು ಏನನ್ನೇ ಕುರಿತು ಕವನ ಬರೆದರೂ, ನಿಜ ಸಂಗತಿಯನ್ನು ಮಾತ್ರ ಬರೆಯಬೇಕು. ಹೂ ಅರಳಿತು, ಸೂರ್ಯ ಮೂಡಿತು, ಮೋಡ ಓಡಿತು, ಕಿರೀಟ ಹೊಳೆಯಿತು ಮುಂತಾದುವೆಲ್ಲ ಹೊಟ್ಟೆ ತುಂಬಿದವರ ಸಾಹಿತ್ಯ. ಹಾಗಾಗಿ ಇವತ್ತು ಕಾವ್ಯದಲ್ಲಿ ಗ್ರಾಮ್ಯ ಸೊಗಡು, ಗ್ರಾಮ್ಯ ಅನುಭವ, ಗ್ರಾಮ್ಯ ಸತ್ವ, ಗ್ರಾಮ್ಯ ಭಾಷೆಯ ಬನಿ ಇವೆಲ್ಲ ಅತ್ಯಂತ ದಟ್ಟವಾಗಿರಬೇಕು. ಅದು ನಿಜವಾದ ಕವನ....' ಎಂಬ ಭಾಷಣವನ್ನು ಈತ ಆಲಿಸಿಕೊಂಡ. ಆಲಿಸಿಕೊಂಡು ಸುಮ್ಮನಿರಲಿಲ್ಲ. 'ಅವನ್ನೈಯ್ಯನ್ ಬರೆದರೆ ಸರಿಯಾಗಿಯೇ ಬರಿಯಬೇಕು' ಅಂದುಕೊಂಡ. ಅಂದುಕೊಂಡು ಆ ಕವಿಗೋಷ್ಠಿ ಮುಗಿದ ಮೇಲೆ ಮರಳಿ ಊರಿಗೆ ಬಂದ. ಊರಿಗೆ ಬಂದ ಮೇಲೆ ಕವಿಗೋಷ್ಠಿಯಲ್ಲಿ ಈತ ಆಲಿಸಿಕೊಂಡ ಭಾಷಣದ ಮಾತುಗಳೇ ಇವನ ಕಿವಿಯಲ್ಲಿ ಮತ್ತೆ ಮತ್ತೆ ಮಾರ್ದನಿಸುತ್ತಿದ್ದವು. ಕೊನೆಗೆ ಏನೇನೋ ಪ್ರಯತ್ನ ಮಾಡಿ ಒಂದು ಕವನ ಬರೆದೇಬಿಟ್ಟ. ಆತ ಬರೆದ ಆ ಕವನ ಹೀಗಿತ್ತು:

ಮೂತ್ರ ವಿಚಾರಂ ೧೪೫

ಊರುಕೇರಿಗೆಲ್ಲ ದೊಡ್ಡ ಪಟೇಲ
ಹಾಳು ಮಾಡಿದ ಹೆಣ್ಣುಮಕ್ಕಳ ಬಾಳ
ತಟ್ಟದೇ ಹೋಗಲಿಲ್ಲ ಅವರ ಶಾಪ
ಕುದಿಯುತ್ತಿದೆ ಬಡಜನರ ಕೋಪ।
ನಾಕೂರಿಗೆಲ್ಲ ಸುಂದರಿಯಂತೆ ಈತನ ಮಗಳು
ಇನ್ನೂ ಯಾಕೆ ಮದುವೆಯಾಗಿಲ್ಲ ಬೊಗಳು |
ಉಚ್ಚೆ ಹುಯ್ಯುತ್ತಾಳೆ ನಿದ್ದೆಯಲ್ಲಿ ರಾತ್ರಿ
ಅದಕ್ಕೇ ಗ್ಯಾರಂಟಿ ಇಲ್ಲ ಮದುವೆಯ ಖಾತ್ರಿ
ಎಲ್ಲೀತನಕ ಮುಚ್ಚಿಡುತ್ತೀ ಗೌಡ ಇದನ್ನು
ನಿಜ ತಿಳಿಯಲು ಓದು ನಮ್ಮ ಹೊಸ ಕಾವ್ಯವನ್ನು |

ಈ ಕವನ ಮತ್ತು ಇಂತಹ ಅದೆಷ್ಟೋ ಕವನಗಳು, ಇಂತಹ ಕವಿಗಳ ಎದೆಯೊಳಗೆ ಇನ್ನೂ ಅದೆಷ್ಟು ಹುದುಗಿವೆಯೋ ಆ ದೇವರೇ ಬಲ್ಲ. ಈ ಕವನ ಇಡಿಯಾಗಿ ಜಿಲ್ಲಾ ಮಟ್ಟದ ಪತ್ರಿಕೆಯೊಂದರ ಭಾನುವಾರದ ಪುರವಣಿಯಲ್ಲಿ ಪ್ರಕಟವೂ ಆಯಿತು. ಆ ಕವನವನ್ನು ನೂರಾರು ಜನ ಓದಿದರು. ಕೆಲವರು ವಿಮರ್ಶೆ ಬರೆದರು. ಮುಂದಿನ ಭಾನುವಾರದ ಪುರವಣಿಯಲ್ಲಿ ಆ ಕವನದ ಮೇಲೆ ಕೆಲವು ವಿಮರ್ಶೆಗಳು ಪ್ರಕಟವಾದವು. ಅವುಗಳ ಶೀರ್ಷಿಕೆ ಹೀಗಿದ್ದವು. 'ಗ್ರಾಮದ ವಾಸ್ತವವನ್ನು ದಾಖಲಿಸಿದ ಕಾವ್ಯ', 'ಮುಚ್ಚಿಟ್ಟ ಗೌಡಿಕೆಯ ಹುಳುಕನ್ನು ಬಿಚ್ಚಿಟ್ಟ ಕಾವ್ಯ', 'ಗೌಡಿಕೆಯ ದರ್ಪಕ್ಕೆ ಲೇಖನಿಯ ಉತ್ತರ'. ಇವುಗಳನ್ನು ಕೆಲವು ಗೌಡರುಗಳೇ ಬರೆದರೆಂದೂ, ಅಥವಾ ಗೌಡರುಗಳು ಹೇಳಿ ಬರೆಸಿದರೆಂದೂ ಪುಕಾರುಗಳು ಹುಟ್ಟಿದವು. ಇವು ಪಟೇಲನ ಕಿವಿಗೂ ಬಿದ್ದವು. ಅವನನ್ನು ದಂಗುಬಡಿಸಿದವು. 'ಇಷ್ಟು ವರ್ಷ ಮಗಳ ಉಚ್ಚೆಯ ವಿಷಯ ಮುಚ್ಚಿಟ್ಟುಕೊಂಡು, ಮರ್ಯಾದೆ ಉಳಿಸಿಕೊಂಡಿದ್ದೆ. ಈ ಲೌಡಿ ಮಗ ಈ ತರ ಕವನ ಬರೆದು, ಮಾನ ಹರಾಜು ಹಾಕಿಬಿಟ್ನಾ!?' ಎಂದುಕೊಂಡ. ಜೊತೆಗೆ ನಮ್ಮ ಅಪ್ಪನೇ ನಾನು ಮದುವೆ ಆಗುವ ತನಕ ಹಾಸಿಗೆಯಲ್ಲಿ ಉಚ್ಚೆ ಹುಯ್ಯುತ್ತಿದ್ದ. ಅವನ ಬಗ್ಗೆ ಯಾರೂ ಚಕಾರ ಎತ್ತಲಿಲ್ಲ. ಹಾಗಾಗಿ ತನ್ನ ಮಗಳಿಗೆ ಇದು ವಂಶಪರಂಪರೆಯಿಂದಲೂ, ಆನುವಂಶೀಕತೆಯಿಂದಲೂ ಬಂದಿರಬಹುದು' ಎಂದು ಪಟೇಲ ಆಲೋಚನೆ ಮಾಡಿದ್ದೂ ಉಂಟಂತೆ. ತನ್ನ ಹಿರಿಯರು ಎಂತೆಂತಹ ಸಮಸ್ಯೆಗಳನ್ನು ಎದುರಿಸಿದರು ಎಂಬುದನ್ನು ಒಮ್ಮೆ ನೆನೆಸಿಕೊಂಡ. ಸ್ವತಃ ಈತನ ಅಪ್ಪನೆ ಎದುರಿಸಿದ ಒಂದು ಗಂಭೀರ ಸಮಸ್ಯೆಯನ್ನು ಪಟೇಲ ನೆನಪಿಸಿಕೊಂಡ. ಅದು ಹೀಗಿದೆ:

**ಕುಂಟೇಗೌಡನ ಪ್ರಕರಣಂ**

ಈತನ ಅಪ್ಪನಿಗೆ ಇಬ್ಬರು ಹೆಂಡರು. ಅವರಲ್ಲಿ ಒಬ್ಬಳು ಮನೆಯ ಕೆಲಸದ ಆಳನ್ನೇ ಇಟ್ಟುಕೊಂಡಿದ್ದಾಳೆ ಎಂಬ ಪುಕಾರು ಇಡೀ ಊರಲ್ಲಿ ಹಬ್ಬಿತ್ತು. ಅದನ್ನು ಆತ ರೆಡ್‌ಹ್ಯಾಂಡಲ್ಲಿ ಸೀಜ್ ಮಾಡಲು ಕಾಯುತ್ತಿದ್ದ. ಒಂದು ದಿನ ಆ ಆಳು ಕಾಫಿ ತೋಟದ ಕೆಲಸಕ್ಕೆ ಹೋದ ಅಥವಾ ಈತನೆ ಅವನನ್ನು ಕಳಿಸಿದ. ಸ್ವಲ್ಪ ಹೊತ್ತಾದ ಮೇಲೆ ಈತನ

ಎರಡನೇ ಹೆಂಡತಿ ಚೊಂಬಲ್ಲಿ ನೀರು ತಗೊಂಡು ಅದೇ ಕಾಫಿ ತೋಟದ ಕಡೆಗೆ ಹೋದಳು. ಈತ ಅದನ್ನು ಫಾಲೋ ಮಾಡಲು ನಿಧಾನವಾಗಿ ಆ ಕಡೆಗೇ ಹೋದ. ಎಷ್ಟು ನೋಡಿದರೂ, ಎಷ್ಟು ಗಮನಿಸಿದರೂ ಊರಿನಲ್ಲಿ ಹಬ್ಬಿದ್ದ ಪುಕಾರಿನ ಸುಳಿವು ಸಿಗಲಿಲ್ಲ. ದೃಶ್ಯಕ್ಕಾಗಿ ಎರಡೂ ಕಣ್ಣುಗಳನ್ನು ತರಾವರಿಯಾಗಿ ಬಳಸಿ ನೋಡಿದ. ತನ್ನ ಕಣ್ಣುಗಳನ್ನು ದುರ್ಬಿನು ಮಾಡಿ ನೋಡಿದ. ಪ್ರಯೋಜನ ಆಗಲಿಲ್ಲ. ವಾಸನೆಗಾಗಿ ಮೂಗನ್ನು ಉಪಯೋಗಿಸಿ ನೋಡಿದ. ಸುಳಿವು ಸಿಗಲಿಲ್ಲ. ಏನಾದರೂ ಸೌಂಡ್ ಕೇಳಿಸಬಹುದೇ ಎಂಬುದಾಗಿ ಏಕಲವ್ಯನ ವಿದ್ಯೆ ಪ್ರಯೋಗ ಮಾಡಲು ಮುಂದಾದ. ಕಾಫಿ ತೋಟದಲ್ಲಿ ಒಂದು ಕಡೆ ಒಣಗಿದ ದರಗು(ನೆಲದ ಮೇಲೆ ಬಿದ್ದಿರುವ ಒಣಗಿದ ಎಲೆಗಳು) ನಿಧಾನಕ್ಕೆ ಸೌಂಡ್ ಮಾಡಿತು. ಆ ಸೌಂಡ್ ಬಂದ ಕಡೆಗೆ ಈತ ಒಂದೇ ಸಲ ರಭಸವಾಗಿ ಓಡಿದ. ಈತ ಓಡಿದ ರಭಸಕ್ಕೆ ಒಣಗಿದ ಎಲೆಗಳು ತುಂಬಿದ್ದ ಮೂರಡಿ ಗುಂಡಿಯೊಳಕ್ಕೆ ಕಾಣದೆ ಕಾಲಿಟ್ಟ ದಢಾರ್! ಅಂತ ಬಿದ್ದು ಬಿಟ್ಟ. ಒಂದೇ ಸಲಕ್ಕೆ ಅವನ ಬಲಗಾಲು ಮುರಿದೇ ಹೋಯಿತು. ಅದಾದ ನಂತರ ಆತ ಊರಿನಲ್ಲಿ ಹಬ್ಬಿದ್ದ ಪುಕಾರಿನ ಸುಳಿವು ಹಿಡಿಯಲು ಹೋಗಿ ಹೀಗಾಯಿತು ಎಂದು ಯಾರಲ್ಲಿಯೂ ಹೇಳಲಿಲ್ಲವಂತೆ. ಆದರೆ ಮುರಿದ ಕಾಲು ವಾಸಿಯಾದರೂ ಕುಂಟುತ್ತಾ ಕುಂಟುತ್ತಾ ನಡೆಯುತ್ತಿದ್ದನಂತೆ. ಅವನ ಹುಟ್ಟು ಹೆಸರು ಏನಿತ್ತೊ ಅದು ಮರೆತುಹೋಯಿತಂತೆ. ಅವನು ಎದುರಿಗೆ ಇಲ್ಲದಿದ್ದಾಗ ಎಲ್ಲರೂ ಅವನನ್ನು 'ಕುಂಟೇಗೌಡ' ಎಂದೇ ಕರೆಯುತ್ತಿದ್ದರಂತೆ. ಇಡೀ ನಾಕೈದು ಊರುಗಳಲ್ಲಿ 'ಕುಂಟೇಗೌಡ' ಎಂಬುದಾಗಿಯೇ ಆತ ಪ್ರಸಿದ್ಧನಾಗಿದ್ದ. 'ಹೀಗೆ ತನ್ನ ಹಿರಿಯರೂ ಕೂಡ ಅನೇಕ ಸಮಸ್ಯೆಗಳನ್ನು ಎದುರಿಸಿದ್ದಾರೆ' ಎಂದು ಪಟೇಲ ನೆನೆಸಿಕೊಳ್ಳುತ್ತಿದ್ದ. ಮತ್ತೆ ಕೆಲವು ಸಲ ಮಗಳು ನಿದ್ದೆ ಮಾಡುವಾಗ ಉಚ್ಚೆ ಹುಯ್ಯುವುದನ್ನು ನಿಲ್ಲಿಸಲು ಮಾಡಿದ ಪ್ರಯತ್ನಗಳನ್ನೆಲ್ಲ ನೆನೆಸಿಕೊಳ್ಳುತ್ತಿದ್ದ. ಮಗಳ ಪರಿಸ್ಥಿತಿಯ ಮೇಲಿನ ಕವನ ಪ್ರಕಟವಾದ ಮೇಲೆ, ಆ ವಿಷಯ ಇವನ ಕಿವಿಗೆ ಬಿದ್ದ ಮೇಲೆ, ಇವನ ಚಿಂತೆ ಬೇರೆ ದಿಕ್ಕಿಗೆ ಹೊರಳಿತು.

**ಕವನವೂ, ಕಾಲು ಮುರಿದ ಪ್ರಸಂಗವೂ**

ಅದೇನೆಂದರೆ 'ತನ್ನ ಮಗಳು ನಿದ್ದೆ ಮಾಡುವಾಗ ಹಾಸಿಗೆಯಲ್ಲಿ ಉಚ್ಚೆ ಹುಯ್ದರೆ ಹುಯ್ಯಲಿ. ಅವನೇಕೆ ಅದರ ಬಗ್ಗೆ ಕವನ ಬರೆಯಬೇಕಾಗಿತ್ತು?' ಎಂಬುದೇ ಅವನನ್ನು ಮತ್ತೆ ಮತ್ತೆ ಕಾಡತೊಡಗಿತು. ಆ ಕವನದಿಂದ ಮತ್ತು ಕವನದ ಮೇಲಿನ ವಿಮರ್ಶೆಯಿಂದ ಆಗಿರುವ ಅಪಮಾನವನ್ನು ತಡೆಯದಾಯಿತಂತೆ. 'ಜೀತ ಮಾಡೊ ಸೂಳೆಮಕ್ಕಿಗೆ ಆ ಮಹಾತ್ಮಗಾಂಧಿಯ ಮಗಳು ಇಂದ್ರಾಗಾಂಧಿನೆ ಇಸ್ಕೂಲ್ ಶುರುಮಾಡಿದ್ದು. ತಿನ್ನೊ ಅನ್ನಕ್ಕೆ ಗತಿಯಿಲ್ಲದ ಸೂಳೆಮಕ್ಳು, ಯಳ್ಡು ಅಕ್ಷರ ಕಲ್ತ ಸೂಳೆಮಕ್ಳು ಬಾಯಿಗೆ ಬಂದದ್ನೇ ಬರಿತಾರೆ' ಅಂತ ಒಳಗೊಳಗೇ ಕುದಿಯುತ್ತಿದ್ದನಂತೆ. ನಂತರ ಪಟೇಲ ಈ ರೀತಿ ಅಂದುಕೊಂಡನಂತೆ.

'ಇದು ನಿದ್ದೆಯಲ್ಲಿ ಉಚ್ಚೆ ಹುಯ್ಯುತ್ತಿರುವ ತನ್ನ ಮಗಳ ಮೇಲೇ ಬರೆದಿರುವ ಮಹಾಕಾವ್ಯ' ಎಂದು ಆತ ತಿಳಿದು,

'ವಂಶಪಾರಂಪರದಿಂದ ನಡೆದುಬಂದಿರುವ ಪಟೇಲಿಕೆಗೆ ಆ ಮಹಾಕಾವ್ಯ ಅವಮಾನ ಮಾಡಿದೆ' ಎಂದು ಆತ ತಿಳಿದು,

'ಕವನ ಬರೆದವನನ್ನು ಹೀಗೇ ಬಿಟ್ಟರೆ ಇನ್ನೂ ಇಂತಹ ನೂರಾರು ಕವನ

ಬರಿತಾನೆ" ಎಂದು ಆತ ತಿಳಿದು,

'ನಮ್ಮ ಅಪ್ಪನಿಗೆ ಕುಂಟೇಗೌಡ ಅಂತ ಹೆಸರು ಬಂದುದನ್ನೂ ಈ ಕವಿ ಬಯಲು ಮಾಡ್ತಾನೆ' ಎಂದು ಆತ ತಿಳಿದು,

'ಆ ಮಹಾಕವಿಗೆ ಇದುವರೆಗೂ ಯಾರೂ ಬಹುಮಾನ ಸನ್ಮಾನ ಮಾಡಿಲ್ಲ' ಎಂದು ಆತ ಭಾವಿಸಿ,

'ಈ ಕವನ ಈಗ ಎಲ್ಲ ಬಗೆಯ ಬಹುಮಾನ ಸನ್ಮಾನಗಳಿಗೆ ಅರ್ಹವಾಗಿದೆ' ಎಂದು ಆತ ತೀರ್ಮಾನಿಸಿ,

'ಈ ಏಕೇಸ್ ಕವಿ ಈಗ ಎಲ್ಲ ಬಗೆಯ ಬಹುಮಾನ ಸನ್ಮಾನಗಳಿಗೆ ಅರ್ಹವಾಗಿದ್ದಾನೆ' ಎಂದು ಆತ ತೀರ್ಮಾನಿಸಿ, ಅಷ್ಟಲ್ಲದೆ ಹಾಗೆಂದು ತಿಳಿಯಲಾಗಿ;

ಹಾಗೆ ತಿಳಿದಾಗಲೆಲ್ಲ

ಹಾಗೆ ಭಾವಿಸಿದಾಗಲೆಲ್ಲ

ಅದನ್ನು ನೆನಪಿಸಿಕೊಂಡಾಗಲೆಲ್ಲ

ಪಟೇಲನ ಪಿತ್ತ ಎಂಬುದು

ಆತನ ನೆತ್ತಿಗೆ ಏರುತ್ತಿರಲಾಗಿ

ರಕ್ತವೆಂಬುದು ಒಂದೇ ಸಮನೆ

ಇಸ್ಪೀಡಾಗಿ ಹರಿಯಲಾಗಿ

ಆ ಊರಿನ ಏಕೇಸ್ ಯುವಕವಿ

ಸಂಜೆ ಹೊತ್ತು ಪೇಟೆಯಿಂದ ತನ್ನ ಡಕೋಟ ಸೈಕಲ್ ಮೇಲೆ ಕೇರಿಗೆ ಬರುವ ಸಮಯದಲ್ಲಿ,

ದನಗಳು ವಾಪಸ್ ಹಟ್ಟಿಗೆ ಬರುವ ಸಮಯದಲ್ಲಿ,

ಕೋಳಿಗಳು ಗೂಡು ಸೇರುವ ಸಮಯದಲ್ಲಿ,

ಹಗಲೆಲ್ಲ ಹಾರಾಡಿದ ಹಕ್ಕಿಗಳು ಗೂಡು ಸೇರಲು ಅವಸರ ಅವಸರವಾಗಿ ಹಾರುತ್ತಿರುವ ಸಮಯದಲ್ಲಿ,

ಕೆಲಸ ಮುಗಿಸಿ ಬಂದವರು ಬಾವಿಯಲ್ಲಿ ನೀರು ತರುತ್ತಿರುವ ಸಮಯದಲ್ಲಿ,

ಕೆಲಸ ಮುಗಿಸಿದ ಕೆಲವರು ಸೌದೆ ಹೊತ್ತುಕೊಂಡು ಮನೆಗೆ ಬರುತ್ತಿರುವ ಸಮಯದಲ್ಲಿ,

ಅಂದು ಬೆಳಿಗ್ಗೆ ಹುಟ್ಟಿದ ಸೂರ್ಯ ಮತ್ತೆ ನಾಳೆ ಬೆಳಿಗ್ಗೆ ಹುಟ್ಟಲೆಂದು ಮುಳುಗಲು ಹೋಗುತ್ತಿರುವ ಸಮಯದಲ್ಲಿ,

ಸಂಜೆಗತ್ತಲು ಎಂಬುದು ಸಂಜೆಯ ಹಗಲನ್ನು ಕಡಿಮೆ ಮಾಡುತ್ತಿರುವ ಸಮಯದಲ್ಲಿ,

ಬೆಳಕೆಂಬುದು ಕಡಿಮೆಯಾಗುತ್ತ ಕತ್ತಲೆಂಬುದು ಜಾಸ್ತಿಯಾಗುತ್ತ ಇರುವ ಸಮಯದಲ್ಲಿ,

ದಾರಿಯಲ್ಲಿ ಕಾದು ಕೂತಂತಿದ್ದ ಪಟೇಲನಂತಹ ಮನುಷ್ಯ ಸದರಿ ಕವಿಯ ಕಾಲು ಮುರಿದನಲ್ಲೊ!

ಎಂಬಲ್ಲಿಗೆ ಪಟೇಲನ ಮಗಳು ನಿದ್ದೆಯಲ್ಲಿ ಉಚ್ಚೆ ಹುಯ್ಯುವ ವಿಷಯದ ಮೇಲಿನ ಕವಿತೆಯ ಸಾಮಾಜಿಕ ಪರಿಣಾಮ ಏನಾಯಿತು ಎಂದು ಹೇಳಲು ವಿಷಾದಿಸುತ್ತೇವೆ.

'ಪಟೇಲನ ಮಗಳು ನಿದ್ದೆಯಲ್ಲಿ ಉಚ್ಚೆ ಹುಯ್ದರೆ ಹುಯ್ಯಲಿ

ಅದರ ಮೇಲೆ ಈತನೇಕೆ ಕವನ ಬರೆಯಬೇಕಾಗಿತ್ತು?

ಬರೆದರೆ ಬರೆಯಲಿ, ಅದನ್ನೇಕೆ ಪೇಪರಲ್ಲಿ ಹಾಕಬೇಕಿತ್ತು?

ಪೇಪರಲ್ಲಿ ಹಾಕಿದರೆ ಹಾಕಲಿ. ಅದರ ಮೇಲೇಕೆ ವಿಮರ್ಶೆ ಬರೆಯಬೇಕಿತ್ತು?

ಬರೆದರೆ ಬರೆಯಲಿ, ಪಟೇಲನೇಕೆ ಇವೆಲ್ಲ ತನ್ನ ಮಗಳಿಗೆ ಸಂಬಂಧಿಸಿದವು ಎಂದು ತಿಳಿಯಬೇಕಾಗಿತ್ತು?

ತಿಳಿದರೆ ತಿಳಿಯಲಿ. ಕವಿಯ ಕಾಲಕೆ ಮುರಿಯಬೇಕಿತ್ತು?

ಅಂತೂ ನಿದ್ದೆಯಲ್ಲಿ ಹುಯ್ಯುವ ಉಚ್ಚೆಯ ಪ್ರೇರಣೆಯಿಂದ ಹುಟ್ಟುವ ಕವನದ ಪರಿಣಾಮ ಯಾವುದು ಎಂಬುದು ಇದುವರೆಗೆ ಆ ಊರಿನ ಜನರಿಗೆ ಮಾತ್ರ ಗೊತ್ತಿತ್ತು. ಈಗ ಆ ವಿಷಯ ಇಲ್ಲಿ ದಾಖಲಾಗಿರುವುದರಿಂದ ಇಡೀ ಸಾಹಿತ್ಯದ ಸಾರಸ್ವತಲೋಕಕ್ಕೇ ಗೊತ್ತಾಗಿ ಹೋಯಿತಲ್ಲದ್ದೊ ಗೋಪಾಲಕೃಷ್ಣ ಅಡಿಗರು ಹೇಳಿದ್ದರಂತೆ. 'ಕಾವ್ಯದಲ್ಲಿ ಅಥವ ಸಾಹಿತ್ಯದಲ್ಲಿ ಮಣ್ಣಿನ ವಾಸನೆ ಇರಬೇಕು' ಎಂದು. ಅದನ್ನು ಬಹಳ ಜನ ಈಗಲೂ ನೆನಪು ಮಾಡಿಕೊಳ್ಳುತ್ತಾರೆ. ಹೌದು ಮಣ್ಣಿನ ವಾಸನೆ ಬರುವಂತಹ ಕಾವ್ಯ ಬರೆದವರ ಕಾಲನ್ನು ಯಾರೂ ಮುರಿಯಲಿಲ್ಲ. ಆದರೆ ಉಚ್ಚೆಯ ವಾಸನೆಯನ್ನು ಕುರಿತು ಕಾವ್ಯ ಬರೆದವರ ಕಾಲು ಮುರಿಯಿತು ಎಂಬುದನ್ನು ಮರೆಯುವಂತಿಲ್ಲ.

+

## ೧೭. ಅಪ್ಪ

**- ಹುಲಿಕುಂಟೆ ಮೂರ್ತಿ**

"ಅಪ್ಪ ಕುಡ್ದು ಬಿದ್ದೋಗದೆ; ಉಸ್ರೇ ಆಗ್ತಾಯಿಲ್ಲ' ತಂಗಿ ಗಿರಿಜಾಳ ಏದುಸುರಿನ ಮಾತುಗಳು ಮುಗಿಯುವ ಮೊದಲೇ ಫೋನನ್ನು ಕಿವಿಗೆ ಆತು ಹಿಡಿದುಕೊಂಡಿದ್ದ ವೆಂಕಟೇಶನ ಕೈಗಳು ನಡುಗತೊಡಗಿದವು. "ಉಸ್ರು ಇನ್ನೂ ಐತ ನೋಡು' ಪಸೆ ಒಣಗಿದ ಬಾಯಿಂದ ಬಂದ ಶಬ್ದಗಳು ಅಸ್ಪಷ್ಟವಾಗುತ್ತಿದ್ದವು. ಆ ಕಡೆಯಿಂದ ತಂಗಿಯ ಉಸಿರಿನ ಏರಿಳಿತ ಮಾತ್ರ ಕೇಳಿಸುತ್ತಿತ್ತು. ಗೆಳೆಯನ ಬೈಕಿಗೆ ಪೆಟ್ರೋಲು ಹಾಕಿಸಿಕೊಂಡು ಅವನ ಹಿಂದೆ ಕೂತು ಊರು ತಲುಪಿದಾಗ ಗವ್ವನೆ ಕತ್ತಲು. ಅಜ್ಜನ ಕಾಲದ ಮಾಳಿಗೆ ಮನೆ ಸೋರುತ್ತಿದ್ದರೂ ಹೊಲದ ಸುತ್ತ ಇದ್ದ ಜಾಲಿಮರಗಳನ್ನು ಕಡಿದು ಕಳೆದ ತಿಂಗಳಷ್ಟೇ ಮಾಡಿಸಿಕೊಂಡಿದ್ದ ದಿವಾನದ ಮೇಲೆ ತಣ್ಣಗೆ ಮಲಗಿದ್ದ ಅಪ್ಪನನ್ನು ನೋಡಿ ಏನು ಮಾಡಬೇಕೆಂದು ತೋಚದೆ ಚಡಪಡಿಕೆ ಶುರುವಾಯಿತು. ಅಪ್ಪನ ತಲೆಯ ಹತ್ತಿರ ಹಚ್ಚಿಟ್ಟಿದ್ದ ದೊಡ್ಡ ಹಣತೆ ಹೆಣದ ಸುತ್ತಲೂ ಕುಳಿತು ಬಿಕ್ಕಳಿಸುತ್ತಿದ್ದವರ ಮುಖಗಳನ್ನು ಗುರುತು ಹಿಡಿಯುತ್ತಿತ್ತು. ಅವರೆಲ್ಲರ ಬಾಯಿಯ ಸಾರಾಯಿ ವಾಸನೆಯನ್ನು ಮುಚ್ಚಿಡಲು ಯತ್ನಿಸುತ್ತಿದ್ದ ದಪ್ಪನೆಯ ಪೊರಕೆಯಾಕಾರದ ಸಾಂಬ್ರಾಣಿ ಕಡ್ಡಿಯ ಕಂತೆಯಿಂದ ಏಳುತ್ತಿದ್ದ ಹೊಗೆ ಇಂದ್ರಿಯಗಳನ್ನೆಲ್ಲಾ ಒಂದೇ ಏಟಿಗೆ ಆವರಿಸಿ ರೇಜಿಗೆ ಹುಟ್ಟಿಸುತ್ತಿತ್ತು. ಇನ್ನೆರಡು ನಿಮಿಷ ಅಲ್ಲೇ ನಿಂತರೆ ವಾಂತಿಯಾಗಿಬಿಡುವ ಸಾಧ್ಯತೆಯನ್ನರಿತ ವೆಂಕಟೇಶ ತಲೆಯ ಮೇಲೆ ಕೈಹೊತ್ತು ಅಪ್ಪನ ಕಾಲಬುಡದಲ್ಲಿ ಕೂತಿದ್ದ ಅವ್ವ ಮತ್ತು ತಂಗಿಯನ್ನು ಮಾತನಾಡಿಸಲು ಯತ್ನಿಸಿದ. ಆಗಲಿಲ್ಲ. ಗೆಳೆಯನೊಟ್ಟಿಗೆ ಹಿತ್ತಲಿನ ಕಡೆಗೆ ಹೆಜ್ಜೆ ಹಾಕಿದ. ಅಲ್ಲಿದ್ದ ಸೀಬೇಹಣ್ಣಿನ ಮರಕ್ಕೆ ಆತುಕೊಂಡು ಯಾರೋ ನಿಂತಂತೆ ಕಂಡಿತು. ಹಾಗೆ ನಿಂತಿರುವುದು ಅಪ್ಪ ಅನ್ನಿಸಿ ಎದೆ ದಸಕ್ಕೆಂದಿತು. ಮೊಬೈಲ್ ಟಾರ್ಚ್ ಆನ್ ಮಾಡಿದ ಗೆಳೆಯ 'ಯಾರೋ ಷರಟು.. ನಿಮ್ಮಪ್ಪುಂದಿರ್ಬೇಕು' ಎಂದು ಕೊಂಬೆಗೆ ತಗಲಿಹಾಕಿದ್ದ ಶರಟನ್ನು ತೆಗೆದು ಮುಂದೆ ಹಿಡಿದ. ಓದೋರ್ಷ ಮಾರ್ಲಾಮಿಗೆ ನಾನು ಕೊಡಿಸದ ನೀಲಿ ಶರ್ಟು.. ನಮ್ಮಪ್ಪುಂಗೆ ತುಂಬಾ ಇಷ್ಟ' ಅಂದ ವೆಂಕಟೇಶ ಅಪ್ಪನನ್ನೇ ತಬ್ಬಿಕೊಂಡ ಹಾಗೆ ಷರಟನ್ನು ತಬ್ಬಿ ಅತ್ತುಬಿಟ್ಟ.

ಅಪ್ಪನ ಷರಟಿನ ಜೇಬಿನಲ್ಲಿದ್ದ ಸಿಗರೇಟು ಪ್ಯಾಕಿನಲ್ಲಿ ಇನ್ನೂ ಮೂರು ಉಳಿದಿದ್ದವು. ಗೆಳೆಯನಿಗೊಂದು ಕೊಟ್ಟು ತಾನೊಂದಕ್ಕೆ ಬೆಂಕಿಹಚ್ಚಿದ ವೆಂಕಟೇಶ "ನೋಡು ಇದು ನನ್ನ ಅಪ್ಪ; ಮನೆಯಲ್ಲಿ ಉಪ್ಪು ಮೆಣಸಿನಕಾಯಿ ಇಲ್ಲದಿದ್ದರೂ ಇವನ ಜೇಬಲ್ಲಿ ಸಿಗರೇಟು..' ಅಂದು ಒತ್ತರಿಸಿಕೊಂಡು ಬಂದ ದುಃಖವನ್ನು ನಗುವನ್ನಾಗಿ

ಮಾರ್ಪಡಿಸಿದ. ರಾಜ್‌ಕುಮಾರ್ ಮೀಸೆ, ಕೈಯಲ್ಲಿ ಎಚ್‌ಎಮ್‌ಟಿ ವಾಚು ಇಸ್ತ್ರಿ ಮಾಡಿದ ಕೆಂಪು ಕಲ್ಲರಿನ ಪ್ಯಾಂಟಿಗೆ ಹೊಂದದಿದ್ದರೂ ಆಕಾಶವನ್ನೇ ಮೈಮೇಲೆ ಹೊದ್ದುಕೊಂಡಂತಿದ್ದ ತಿಳಿನೀಲಿ ಷರಟು ಹಾಕಿಕೊಂಡು ಉದ್ದಕ್ಕೆ ಬೆಳೆಸಿದ್ದ ಎಡಗೈ ಕಿರುಬೆರಳಿನ ಉಗುರಿನಲ್ಲಿ ಹಲ್ಲು ಚುಚ್ಚುತ್ತಾ.. ಅಪ್ಪ ಗಹಗಹಿಸಿ ನಕ್ಕಂತಾಯಿತು. ವೆಂಕಟೇಶ ಗೆಳೆಯನ ಆಸರೆಯಿಂದ ಕೆಳಗೆ ಕೂತು ಉಳಿದಿದ್ದ ಸಿಗರೇಟು ಹಚ್ಚಿದ. ಹಿತ್ತಲಿನ ಮರಗಳು ಸಣ್ಣಗೆ ಅಳುತ್ತಿರುವ ಹಾಗೆನಿಸಿ ಭಯವಾಯಿತು. ಹೆಣದ ಮುಂದೆ ಯಾರೋ 'ಈ ದೇಹದಿಂದ ದೂರವಾದೆ ಏಕೆ ಆತ್ಮನೆ' ಹಾಡು ಶುರುಮಾಡಿದರು; ಇನ್ಯಾರೋ 'ಅಯ್ಯೋ ಹೋಗುಟ್ಟೇನೋ...' ರಾಗ ತೆಗೆದರು; ಗಂಡಸೋ ಹೆಂಗಸೋ ಅಸ್ಪಷ್ಟವಾಗಿತ್ತು. 'ಮಗ ಬಂದ್ರೇನಮ್ಮಾ..? ನೆಂಟ್ರುಗೆಲ್ಲಾ ಏಳಿ ಕಟ್ಟಿದೀರಾ..? ಬೆಳಿಗ್ಗೆ ಹೊತ್ತುಟ್ಟದೇಲೆ ಗುಂಡಿ ತೋಡೋರೆ, ವಾಲದೋರೆ ಏಳಿ ಕಳಿಸ್ಬೇಕು.. ಬಿದ್ರು ಬಂಬು, ಬಟ್ಟೆ, ಪೂಜೆ ಸಾಮಾನು ಎಲ್ಲಾ ತರಕೆ ಯಾರನ ಕಳುಸ್ಬೇಕು. ನಾಳೆ ಒಂಬತ್ತು ಗಂಟೆಲ್ಲಾ `ರಾವುಗಾಲ ಮುಗೀತದೆ ಎಲ್ಲ ಬಂದು ಮಕ ನೋಡುದೇಲೆ ಮಣ್ಣು ಮಾಡನ..' ನೆನಪಾಗದ ಪರಿಚಿತ ವ್ಯಕ್ತಿಯ ಧ್ವನಿ, ವೆಂಕಟೇಶನಿಗೆ ಬೆಳಕರಿಯುವುದೆಂದರೆ ಉಟ್ಟ ಬಟ್ಟೆಯೆಲ್ಲಾ ಬಿಚ್ಚಿಹಾಕಿದ ಹಾಗೆ ಅನ್ನಿಸಿತು.

ವೆಂಕಟೇಶ ಗೆಳಯನ್ನ ಕೇಳಿದ 'ದುಡ್ಡು ಎಷ್ಟದೆ..?' 'ಒಂದೆರಡು ಸಾವಿರ ಇರಬೋದು; ತಮ್ಮುಂಗೆ ಫೀಜ್ ಕಟ್ಟಕೆ ಅಂತ ಅಮ್ಮ ಕೊಡ್ತು' ಅಂದ ಗೆಳೆಯ. 'ನನ್ನತ್ರ ಆರುನೂರು ರುಪಾಯಿ ಅದೆ ಸಾಕಾತದ..?' ಕೇಳಿದ. 'ಸಾಕಾಗಲ್ಲ ಕಣೋ..' ಅಂದ ಗೆಳೆಯ. 'ಏನ್ ಮಾಡದು ಈಗ..? ಅಮ್ಮುನ್ನ, ಗಿರಿಜಾನ ಕೇಳುದ್ರೆ ಇನ್ನೂರೋ ಮುನ್ನೂರೂ ಸಿಗಬೋದು.. ಯಾರನ ಸಾಲ ಕೇಳನ ಅಂದ್ರೆ ಇಷ್ಟೊತ್ತಲ್ಲಿ ಎಲ್ಲಾ ಮನಿಕಂಡಿದ್ದಾರೆ..' ಅಂದು ಥಂಡಿಗೆ ಆರಿಹೋದ ಸಿಗರೇಟನ್ನು ಮತ್ತೆ ಹಚ್ಚಿಕೊಳ್ಳಲು ಬೆಂಕಿಕಡ್ಡಿಗಾಗಿ ತಡಕಾಡಿದ ವೆಂಕಟೇಶ. 'ಬೆಳಿಗ್ಗೆ ನೋಡನ ಬಿಡೋ.. ಈಗ ನಮ್ಮತ್ರ ಇರೋ ದುಡ್ಡಲ್ಲೇ ಗುಂಡಿ ತೋಡೋರೆ ವಾಲಗದವರೆ ಕೊಡಬೋದು', ಅಂದ ಗೆಳೆಯನ ಮಾತಿಗೆ ತಲೆಯಾಡಿಸಿ ಕಡ್ಡಿ ಗೀಚಿದ.

ಮೂರು ವರ್ಷಗಳ ಹಿಂದೆ ಬಿಎ ಮುಗಿಸಿ ಮುಂದೆ ಓದಲಾಗದೆ ಬೆಂಗಳೂರಿನ ಒಂದು ಝೆರಾಕ್ಸ್ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದ್ದ ವೆಂಕಟೇಶ, ಅಲ್ಲೇ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ತನ್ನ ಬಾಲ್ಯದ ಗೆಳೆಯನ ರೂಮಿನಲ್ಲಿ ಉಳಿದುಕೊಂಡಿದ್ದ. ಮೊದಲು ಅಪ್ಪನ ಪೇಂಟಿಂಗ್ ಕೆಲಸದಿಂದ ಹೇಗೋ ಸಂಸಾರ ನಡೆಯುತ್ತಿತ್ತಾದರೂ ಇವನು ದುಡಿಯಲು ಶುರುಮಾಡಿದ ಮೇಲೆ ಅಪ್ಪ ತನ್ನ ಕುಡಿತಕ್ಕೆ, ಶೋಕಿಗೆ ಎಷ್ಟು ಬೇಕೋ ಅಷ್ಟನ್ನೇ ಸಂಪಾದಿಸಿಕೊಳ್ಳುತ್ತಿದ್ದುದರಿಂದ ತಂಗಿಯ ಓದು, ಅಮ್ಮನ ಆರೋಗ್ಯ, ಅರ್ಧ ಎಕರೆ ಹೊಲ ಎಲ್ಲವೂ ವೆಂಕಟೇಶನ ಮೇಲೇ ಬಿದ್ದಿತ್ತು. ಮೊದಲು ಇವನ ಆರೋಗ್ಯ, ಹೊಟ್ಟೆ ಬಟ್ಟೆ ಬಗ್ಗೆ ವಿಚಾರಿಸಿಕೊಳ್ಳಲು ಫೋನ್ ಮಾಡುತ್ತಿದ್ದ ಅಮ್ಮ ಮತ್ತವನ ತಂಗಿ ಇತ್ತೀಚೆಗೆ ಅಪ್ಪನ ಉಪಟಳದ ಬಗ್ಗೆ ದೂರು ಹೇಳಲೆಂದೇ ಫೋನ್ ಮಾಡುತ್ತಿದ್ದರು. ಕಳೆದ ಮೂರಾಲ್ಕು ತಿಂಗಳಿಂದ ಇದು ಜಾಸ್ತಿಯಾಗಿ, ಊರಿಂದ ಫೋನ್ ಬಂತೆಂದರೆ ವೆಂಕಟೇಶ ಬೆಚ್ಚುತ್ತಿದ್ದ.

ಅಪ್ಪನ ಬಗ್ಗೆ ಯೋಚನೆ ಮಾಡಿದಂತೆಲ್ಲಾ ವೆಂಕಟೇಶನಿಗೆ ನಿಗೂಢದೊಳಗಡೆ ಇಳಿಯುವ ಅನುಭವವಾಗುತ್ತಿತ್ತು. ತನ್ನನ್ನು ಅಷ್ಟು ಚೆನ್ನಾಗಿ ಸಾಕಿದ ಅಪ್ಪ, ತಾನೇ ಅಷ್ಟು ಚೆನ್ನಾಗಿ ಬದುಕಿದ್ದ ಅಪ್ಪ... ಮಕ್ಕಳು ದೊಡ್ಡವರಾಗುತ್ತಿದ್ದ ಹಾಗೆ ಅದ್ಯಾಕೋ ಒಂಟಿಯಂತಾಗಿಬಿಟ್ಟಿದ್ದ. ತನ್ನ ಜಾತಿ, ಬಡತನ ಎಲ್ಲದರಾಚೆಗೆ ಒಂದು ಪುಟ್ಟ ಸುಂದರ ಸಂಸಾರವನ್ನು ಕಟ್ಟಿ ಊರಿನ ಸರೀಕರ ಮುಂದೆ ತಲೆಯೆತ್ತಿ ಬದುಕುತ್ತಿದ್ದವನು ಕೊನೆಕೊನೆಗೆ ತನ್ನ ಹೆಂಡತಿ, ಮಕ್ಕಳಿಗೂ ತನಗೂ ಸಂಬಂಧವಿಲ್ಲದಹಾಗೆ ಬದುಕಿದ್ದು, ತನ್ನೊಳಗೇ ಬಚ್ಚಿಟ್ಟುಕೊಂಡಿದ್ದು ವೆಂಕಟೇಶನಿಗೆ ಚಿದಂಬರ ರಹಸ್ಯವಾಗಿ ಕಂಡಿತ್ತು; ಕಾಡಿತ್ತು. ವೆಂಕಟೇಶ ಸಿಟ್ಟಿನಿಂದ 'ಯಾಕಿಂಗೆ ಕುಡ್ದ ಕುಡೂ ಸಾಯ್ತಿಯಾ..?' ಅಂತ ಕೇಳಿದಾಗೆಲ್ಲಾ ಅವನ ಅಪ್ಪ ವಿಚಿತ್ರವಾಗಿ ಕಣ್ಣುಬಿಡುತ್ತಾ ಸೇದುತ್ತಿದ್ದ ಬೀಡಿಯನ್ನು ಮುಖದ ಮುಂದೆ ಹಿಡಿದು 'ಏಯ್.. ನೋಡೋ.. ಮಗನೆ.. ಜೀವ ಇಷ್ಟೇ... ನಾನ್ ಇದುನ್ನ ಸೇಡ್ತಾ ಇದೀನಿ ಅಂದ್ರೆ ಇದು 'ಮುಗ್ಗು ಹೋಗ್ಲೆಬೇಕು.. ಇದು ಲೋಕಾರೂಡಿ.. ನೀನ್ ಏನ್ ಏಳದು ನನ್...' ಅಂತ ಅಂದು ಭಕ್ತ ಪ್ರಹ್ಲಾದ ಸಿನಿಮಾದ ಹಿರಣ್ಯ ಕಶ್ಯಪನ ಶೈಲಿಯಲ್ಲಿ ನೆಕ್ಕಿಬಿಡುತ್ತಿದ್ದ..

ನೆನಪಿನಲ್ಲಿ ಅಪ್ಪನ ನಗು ಅಲೆ ತರಂಗಗಳನ್ನು ಎಬ್ಬಿಸುತ್ತಿದ್ದಂತೆ ವೆಂಕಟೇಶ ಸೇದುತ್ತಿದ್ದ ಸಿಗರೇಟು ಮುಗಿಯುತ್ತಾ ಬಂದು ಕೈಸುಟ್ಟಿತು. ಬೆಚ್ಚಿ ಕೈ ಒದರಿದವನು ಮೊಬೈಲ್ ತೆಗೆದು ಟೈಮ್ ನೋಡಿಕೊಂಡ; ರಾತ್ರಿ ಒಂದೂವರೆ ಗಂಟೆ ಆಗಿತ್ತು. ಗೆಳೆಯ ಸೀಬೇಮರಕ್ಕೆ ಒರಗಿ ತೂಕಡಿಸುತ್ತಿದ್ದ. ಬೆಳಿಗ್ಗೆ ಮಾಡಬೇಕಾದ ಕೆಲಸಗಳು ಭಯ ಹುಟ್ಟಿಸುತ್ತಿದ್ದವು; ಟೀ ಕುಡಿಯಬೇಕೆನ್ನಿಸಿತು. ಒಂದರ್ಧ ಕಿಲೋಮೀಟರ್ ಉತ್ತರಕ್ಕೆ ನಡೆದುಕೊಂಡು ಹೋದರೆ ಹೆದ್ದಾರಿಯಲ್ಲಿ ಲಾರಿಗಳಿಗಾಗಿ ಟೀ ಅಂಗಡಿಗಳು ತೆರೆದಿರುತ್ತವೆ ಅನ್ನಿಸಿ ತೂಕಡಿಸುತ್ತಿದ್ದ ಗೆಳೆಯನನ್ನು ಎಬ್ಬಿಸಲು ನೋಡಿದ; ಮತ್ತೆ ಬೇಡ ಅನ್ನಿಸಿ ಒಬ್ಬನೇ ಹೋಗಲು ನೋಡಿದ; ಕಾಲುಗಳು ಎಳೆದಂತೆನಿಸಿ ನಿಂತಲ್ಲೇ ಕುಸಿದ. ನಿದ್ದೆಯೋ, ಅರೆನಿದ್ದೆಯೋ, ಕನಸೋ, ಕಲ್ಪನೆಯೋ.. ನೀಲಿ ಷರ್ಟಿನ ಅಪ್ಪ ಅಮ್ಮನ ಹಣೆಯ ಕುಂಕುಮವನ್ನು ತೋರಿಸಿ 'ನೋಡ್ತಾ ನಿಮ್ಮಮ್ಮ ಎಷ್ಟಗಲ ಕುಂಕುಮ ಇಕ್ಕಂಡವ್ಳೆ..” ಅಂತಾ ಗೊಳ್ಳನೆ ನಕ್ಕ; ಅಮ್ಮ “ಏಯ್ ಮಾನಗೆಟ್ಟೋನೆ.. ನಾನ್ ಎಷ್ಟಗಲನ ಇಕ್ಕಂತಿನಿ ನಿನಗೇನು..? ಒತ್ತಾರಿಂದ ಸಂಜೆಗಂಟ ಒಟ್ಟೆಒಳಿಕೆ ಉಯ್ಕಂಡ್ ಉಯ್ಕಂಡ್ ಎಲ್ಲಂದ್ರಲ್ಲಿ ಬಿದ್ದಿದ್ದೀಯಲ್ಲಾ.. ತಡಿ, ನನ್ನೆಂಡ್ರ ಮಕ್ಳವ್ರೆ ಅಂತ ಒಂದು ರುಪಾಯಿಂದ್ ಏನನ ಕಟ್ಟುಸ್ಕಂಡ್ ಬಂದ್ ಕೊಡ್ತಿಯಾ..? ನಿನ್ನಂಥೋರೆ ಯಂಡ್ರು ಮಕ್ಳ ಯಾಕೆ.. ಮುಸ್ಕಂಡ್ ಕುಂತ್ಕ.. ಅಂತ ಉಗಿತು. ಅದಕ್ಕೆ ಅಪ್ಪ 'ಲೇ ಬೋಸುಡಿ..' ಅಂತ ಇನ್ನೇನೋ ಅಂದ.. ತಂಗಿ ಹರಿದ ಲಂಗ ಜಾಕೆಟ್ಟಿನಲ್ಲೇ ಸ್ಕೂಲಿಗೆ ಹೊರಟಳು.. ಇವನ ಸವೆದುಹೋದ ಚಪ್ಪಲಿಯಲ್ಲಿ ತೂರಿಕೊಂಡಿದ್ದ ದೊಡ್ಡ ಮುಳ್ಳೊಂದು ಚುಚ್ಚಿ ರಕ್ತ

'ವೆಂಕೇಶಾ..' ಗೆಳೆಯನ ಮಾತಿಗೆ ಬೆಚ್ಚಿ ಎದ್ದವನ ಎದುರಿಗೆ ಪಕ್ಕದ ಮನೆಯ ನಂಜಕ್ಕ ಟೀ ಲೋಟ ಹಿಡಿದು ನಿಂತಿತ್ತು. 'ಎದ್ದೇಳಪ್ಪಾ ನೆನ್ನೆಯಿಂದಾ ಏನೂ ತಿಂದಿಲ್ವಂತೆ.. ಈ ಟೀನಾದ್ರೂ ಕುಡಿ; ಅವುಂಗೆ, ತಂಗಿಗೆ ದೈತ್ಯ ಏಳೇಕಾದೋನು ನೀನೇ

ಇಂಗೆ ಕುಂತ್ರೆ ಎಂಗೆ..? ಇಂಗೇ ಇದ್ರೆ ಆತದ..? ಇನ್ನೇನು ಎಲ್ಲೂ ಬಂದ್ಬೂಡ್ತರೆ.. ಕಾರ್ಯ ಎಲ್ಲಾ ನೀನೇ ನಿಂತು ಮಾಡ್ಬೇಕು' ಅಂದು ಟೀ ಕೈಗಿಟ್ಟು ಹೋಯಿತು ನಂಜಕ್ಕ. ಟೀ ಕುಡಿದು ಹಟ್ಟಿ ಮುಂದಕ್ಕೆ ಬಂದ ವೆಂಕಟೇಶನಿಗೆ ಮೊದಲು ಕಂಡಿದ್ದು ಅಷ್ಟಗಲ ಕುಂಕುಮ ಇಟ್ಟುಕೊಂಡು ಕುಳಿತಿದ್ದ ಅವನ ಅಮ್ಮ. ಪಕ್ಕದಲ್ಲೇ ಮಲಗಿದ್ದ ಅಪ್ಪನ ಮುಖ ನೋಡುವ ಧೈರ್ಯ ಸಾಲದೆ ಪಕ್ಕಕ್ಕೆ ಬಂದುಬಿಟ್ಟ.

ನೆಂಟರೆಲ್ಲಾ ಬಂದರು. ವೆಂಕಟೇಶನ ಮುಂದೆ ಕ್ಷಣ ನಿಂತು ಬೆನ್ನಿನ ಮೇಲೆ ಕೈಯಾಡಿಸಿದರು.. ಇದ್ದ ಹಣದಲ್ಲೇ ಗುಂಡಿ ತೋಡಿದವರಿಗೆ, ವಾಲಗದವರಿಗೆ ಕೊಟ್ಟಿದ್ದಾಯಿತು. ಅಪ್ಪ ಯಾವಾಗಲೂ ಕುಳಿತು ಬೀಡಿ ಸೇದುತ್ತಿದ್ದ ಮೇಲಿನ ತುಂಡದ ಬದುವಿನ ಕೆಳಗೆ ಮಣ್ಣು ಮಾಡಲಾಯಿತು. ಮಣ್ಣು ಹಾಕುವಾಗಲೂ ವೆಂಕಟೇಶನಿಗೆ ಅಪ್ಪನ ಮುಖವನ್ನು ನೋಡಲಾಗಲಿಲ್ಲ; ಮಣ್ಣಾದ ಕ್ಷಣ ಇನ್ನು ಮುಂದೆ ಅಪ್ಪ ಇರುವುದಿಲ್ಲ ಅನ್ನಿಸಿ ನೆನ್ನೆಯಿಂದ ತಡೆದಿದ್ದ ದುಃಖವೆಲ್ಲಾ ಒತ್ತರಿಸಿಕೊಂಡು ಬಂತು. ಗೆಳೆಯನನ್ನು ತಬ್ಬಿಕೊಂಡು ಬಿಕ್ಕಿ ಬಿಕ್ಕಿ ಅತ್ತ.. ಅತ್ತೂ ಅತ್ತೂ ಹಗುರಾಗಬೇಕಾದವನು ಯಾಕೋ ಇಡೀ ದೇಹ ಮನಸ್ಸು ಭಾರವಾದಂತೆ ಕುಸಿಯತೊಡಗಿದ್ದ.

'ಮೂರ್ ದಿನ್ಕೆ ಆಲು ತುಪ್ಪ ಸಾಸ್ತ್ರ ಮಾಡ್ಬೇಕು ಕಣಪ್ಪಾ..' ಎರಡು ದಿನಗಳಲ್ಲಿ ಮೊದಲು ಮಾತನಾಡಿದ ಅಮ್ಮನ ಕಡೆ ನೋಡಿದ ವೆಂಕಟೇಶ; ತನ್ನ ಅಮ್ಮ ಅಲ್ಲ ಅನ್ನಿಸಿತು. 'ಸರಿ ಇವತ್ತೋಗಿ ಒಂದಿಷ್ಟು ಕಾಸ್ ಒಂಚ್ಕಂಡು ನಾಡ್ದು ಬತ್ತಿನಿ ತಗೋ.. ತಿತಿಗೂ ದುಡ್ಡು ಬೇಕಲ್ಲ..' ಅಂದು ಹೊರಟ. ಅಪ್ಪನ ನೀಲಿ ಷರ್ಟು ನೆನಪಾಯಿತು. ಹಿತ್ತಲಿಗೆ ಹೋಗಿ ಸೀಬೇ ಮರದ ಕೆಳಗೆ ಬಿದ್ದಿದ್ದನ್ನು ಎತ್ತಿಕೊಂಡ; ಅಲ್ಲೇ ಪಕ್ಕದಲ್ಲಿ ರಾತ್ರಿ ಜೇಬಿನಲ್ಲಿದ್ದ ಸಿಗರೇಟು ಪ್ಯಾಕು ಬಿದ್ದಿತ್ತು. ಥಂಡಿಗೆ ಕೊಂಚ ನೆಂದಂತೆ ಕಂಡ ಅರೆತೆರೆದ ಪ್ಯಾಕಿನ ಒಳಗೆ ಒಂದು ಮಡಿಚಿಟ್ಟ ಚೀಟಿ ಇದ್ದಂತೆ ಕಂಡಿತು. ಅದನ್ನು ಕೈಗೆತ್ತಿಕೊಂಡ ವೆಂಕಟೇಶನ ಕೈ ನಡುಗುತ್ತಿತ್ತು... ಚೀಟಿಯನ್ನು ಹರಿಯದಂತೆ ನಿಧಾನಕ್ಕೆ ಬಿಚ್ಚಿದ. ಅದೆಷ್ಟೋ ವರ್ಷದ ನಂತರ ಅಪ್ಪನ ಶಿಸ್ತಿನ ಕೈಬರಹ ನೋಡಿದನಿಗೆ ವಿಚಿತ್ರ ಅನುಭವ.. ಸುಮಾರು ತಿಂಗಳಿನ ಹಿಂದೆಯೇ ಬರೆದು ಮಡಚಿಟ್ಟಿರಬಹುದಾದ ನೋಟ್ ಬುಕ್ಕಿನ ಅನ್‌ರೂಲ್ಸ್ ಪೇಜಿನಲ್ಲಿ ಗೆರೆ ಎಳೆದಂತೆ ಸ್ಪುಟವಾಗಿ ಬರೆಯಲಾಗಿತ್ತು..

'ಪ್ರೀತಿಯ ಮಗ ವೆಂಕಟೇಶನಿಗೆ.. ಬಹಳ ವರ್ಷಗಳ ನಂತರ ನನ್ನ ಕೈಯಿಂದ ಅಕ್ಷರಗಳು ಮೂಡುತ್ತಿವೆ. ಪ್ರತಿ ಅಕ್ಷರದಲ್ಲೂ ನೀನೇ ಮೂಡಿದಂತೆನಿಸಿ ನಿನ್ನ ಮುಂದೆಯೇ ಇದನ್ನೆಲ್ಲಾ ಬರೆಯಬೇಕಲ್ಲಾ ಎಂದು ನಾಚಿಕೆಯಾಗುತ್ತಿದೆ. ಇದು ನನ್ನ ಆತ್ಮಹತ್ಯೆಯ ಪತ್ರವಲ್ಲ; ನಾನು ಹೆಚ್ಚು ದಿನ ಬದುಕುತ್ತೇನೆ ಅನ್ನುವ ನಂಬಿಕೆಯಿಲ್ಲದ ಕಾರಣ ಇವತ್ತೋ ನಾಳೆಯೋ ಸತ್ತುಬಿಟ್ಟರೆ ಈ ಪತ್ರ ನಿನಗೆ ಸಿಗಲಿ ಅನ್ನುವ ಕಾರಣಕ್ಕೆ ಮೊದಲೇ ಬರೆದಿಡುತ್ತಿದ್ದೇನೆ. ನಿನ್ನನ್ನು ಚೆನ್ನಾಗಿ ಸಾಕಿದ್ದೇನೆ ಎಂದು ಹೇಳುವ ಧೈರ್ಯವಿಲ್ಲ ನನಗೆ; ನೀನು ದೊಡ್ಡವನಾಗುತ್ತಿದ್ದರೆ ನಾನು ಸಣ್ಣವನಾಗುವ ಅನುಭವವಾಗುತ್ತಿತ್ತು ಯಾಕೋ ಗೊತ್ತಿಲ್ಲ. ಬದುಕನ್ನು ತುತ್ತ ತುದಿಯವರೆಗೂ ಅನುಭವಿಸಬೇಕು ಅನ್ನುವ ಹಂಬಲವಿದ್ದವನು ನಾನು. ಕಳೆದ ಎರಡು ವರ್ಷಗಳಿಂದ ಸಾವಿನ ವಾಸನೆ ನನ್ನ ಬೆನ್ನತ್ತಿತ್ತು. ಅದಕ್ಕೇ ತೀವ್ರವಾಗಿ ಬದುಕಿಬಿಟ್ಟೆ.

ಇದೆಲ್ಲದರ ಹೊರತಾಗಿ ನಿನಗೆ ನಾನು ಹೇಳಬೇಕಾದದ್ದು ಇದಲ್ಲ. ನೀನು ಓದು ಮುಗಿಸಿ ಕೆಲಸಕ್ಕೆ ಸೇರಿಕೊಂಡ ವರ್ಷ ನಮ್ಮೂರಿನ ಉತ್ತಮ ಜಾತಿಯ ಹಿರಿಯನೊಬ್ಬ ನನ್ನನ್ನು ಕರೆಸಿ ಇರುವ ಅರ್ಧ ಎಕರೆ ಜಮೀನು ಬರದುಕೊಡಬೇಕೆಂದೂ, ಮಗನಿಗೆ ಕೆಲಸ ಕೊಡಿಸುತ್ತೇನೆಂದೂ ಕೇಳಿದ. ನಾನದಕ್ಕೆ ಒಪ್ಪಲಿಲ್ಲ; ಬಲವಂತವಾಗಿ ಹೊಡೆದು ಬಡಿದು ನನ್ನಿಂದ ಖಾಲಿ ಹಾಳೆಯಲ್ಲಿ ಸಹಿ ಮಾಡಿಸಿಕೊಳ್ಳಲು ನೋಡಿದರು. ನಾನು ಜಗ್ಗದೆ ಅವನ ಮುಖದ ಮೇಲೆ ಉಗಿದುಬಿಟ್ಟೆ, ಅದಕ್ಕೆ ಕೋಪಗೊಂಡ ಅವನು ಆಳುಗಳಿಂದ ನನ್ನನ್ನು ಕಟ್ಟಿಹಾಕಿಸಿ ಬಟ್ಟೆಯನ್ನೆಲ್ಲಾ ಬಿಚ್ಚಿಸಿ ಜಾತಿ ಹಿಡಿದು ಬಾಯಿಗೆ ಬಂದಂಗೆ ಬೈದು ನನ್ನ ಎದೆಯ ಮೇಲೆ ಮೂತ್ರ ಮಾಡಿಬಿಟ್ಟ.. ಅವಮಾನ ತಾಳಲಾಗದೆ, ನಿನ್ನ ಅಮ್ಮ ಮತ್ತು ತಂಗಿಗೆ ಹೇಳಲಾಗದೆ ನಿನಗೆ ಮುಖ ತೋರಿಸಲಾಗದೆ ಅವತ್ತೇ ಸತ್ತುಬಿಡೋಣ ಅನ್ನಿಸಿತು... ಧೈರ್ಯ ಸಾಲಲಿಲ್ಲ... ನಮ್ಮಂಥವರ ಯೋಗ್ಯತೆ ಇಷ್ಟೇ ಇರಬಹುದು.. ನೀನು ಮಾತ್ರ ಈ ಊರಿನಲ್ಲಿರಬೇಡ. ಇರುವ ಹೊಲ ಮಾರಿಕೊಂಡು ಇಬ್ಬರನ್ನೂ ಕರೆದುಕೊಂಡು ಎಲ್ಲಾದರೂ ದೂರ ಹೋಗಿ ಬದುಕು.. ನನ್ನನ್ನು ಕ್ಷಮಿಸು.. ಬರುತ್ತೇನೆ..

ಇನ್ನೊಂದು ವಿಷಯ.. ಏನೋ ಹುಡುಕುತ್ತಿದ್ದಾಗ ನಿನ್ನದೊಂದು ನೋಟ್ ಬುಕ್ ಸಿಕ್ಕಿತು.. ಅದರಲ್ಲೇ ಹರಿದದ್ದು ಈ ಹಾಳೆ.. ಇದರ ಹಿಂದೆ ನೀನು ಬರದುಕೊಂಡಿದ್ದೀಯಲ್ಲಾ.. ಈ ಸಾಲುಗಳು ನನ್ನ ಯೌವನದ ದಿನಗಳಲ್ಲಿ ನನಗೆ ಸಿಗಲಿಲ್ಲ.. ನಿನಗೆ ಸಿಕ್ಕಿವೆ. ಚೆನ್ನಾಗಿ ಬದುಕು..'

ಕಣ್ಣಲ್ಲಿ ನೀರು ತುಂಬಿಕೊಂಡು ಹಾಳೆಯನ್ನು ತಿರುವಿದ ವೆಂಕಟೇಶ; ಅದರಲ್ಲಿ ಎರಡು ಸಾಲುಗಳಿದ್ದವು: 'ನಿನಗೆ ಗೌರವವಿಲ್ಲದ ಜಾಗದಲ್ಲಿ ನಿನ್ನ ಚಪ್ಪಲಿಯನ್ನೂ ಬಿಡಬೇಡ- ಡಾ.ಬಿ.ಆರ್. ಅಂಬೇಡ್ಕರ್. ನಿಂತಲ್ಲೇ ಕುಸಿದ ವೆಂಕಟೇಶ ಆಕಾಶಕ್ಕೆ ತಲೆ ಎತ್ತಿ ಅಳತೊಡಗಿದ. ಇದ್ದಕಿದ್ದಂತೆ ಸುರಿದ ಮಳೆ ಅವನನ್ನು ಪೂರ್ತಿ ತೋಯಿಸಿಬಿಟ್ಟಿತು.

# ೧೮.ಪಂಪ್ಲೆಟ್!

**ರಮೇಶ ಅರೋಲಿ**

ಅದು ಹೂ ಬಿಡುವ ಕಾಲ. ಕ್ಲಾಸ್‌ರೂಮಿಗೆ ಹೊಂದಿಕೊಂಡಿದ್ದ ಹಾಸ್ಟೆಲ್ ಸುತ್ತಲೂ ನಾನಾ ರೀತಿಯ ಗಿಡಗಳಲ್ಲಿ ಮೈ ತುಂಬ ಹೂವು. ಅದರಲ್ಲೂ ಸ್ವಲ್ಪ ಎತ್ತರಕ್ಕೆ ಬೆಳೆದಿದ್ದ ಗುಲ್ ಮೊಹರ್, ಶಾಲ್ಮಲಿ ಗಿಡಗಳಂತು ತಲೆ ತುಂಬ ರಂಗಿನ ಹೂ ಮುಡಿದು, ನಡುವೆ ರಿಬ್ಬನ್ ಕಟ್ಟಿಕೊಂಡ ಹುಂಜದಂತೆ ಭಾಸವಾಗುತಿದ್ದವು. ಅತ್ತ ಹಾದು ಹೋಗುವವರನ್ನು ತಮ್ಮತ್ತ ಆಕರ್ಷಿಸಿ ಹಾಗೆ ನಿಂತು ನೋಡುವಂತೆ ಮಾಡಿವೆ. ಎಂಥವರ ಎದೆಯಲ್ಲು ರಂಗೋಲಿ ಬಿಡಿಸುವಂತಿವೆ ಕಾಲ. ನಾಲ್ಕು ಗೋಡೆಯ ನಡುವಣ ಈ ಪೊಯೆಟ್ರಿ ಕ್ಲಾಸಿನಲ್ಲಿ ಪ್ರೋಫೆಸರ್ ನಿರ್ಗುಣಾನಂದರು ಪಾಠ ಮಾಡುತ್ತ "ಪೊಯೆಟ್ರಿ ಇಸ್ ಲೈಕ್ ಅ ಫ್ಲವರ್, ದಟ್ ಬ್ಲಸ್ಸಮ್ ಇನ್ ದ ಹಾರ್ಟ್ಸ್ ಆಫ್ ಅ ಪೊಯೆಟ್..." ಅಂತ ಶುರುವಿಟ್ಟಿದ್ದೆ ತಡ, ಅದೇ ಬೋರಿಂಗ್ ಉಪಮೆಗಳಿಂದ ಬೇಸತ್ತ ಅರುಣ್, ಕೊಂಚ ಕಿಟಕಿಯಾಚೆ ಕುಕ್ಕುವ ರಿಬ್ಬನ್‌ಪೇಟೆಯಂಥ ಗಿಡಗಳತ್ತ ಕಣ್ಣು ನೆಟ್ಟ ತನ್ನ  ಕಿವಿಗಳನ್ನು ಆದಷ್ಟು ನಿರ್ಗುಣಾನಂದರ ದನಿಯಿಂದ ಕಾಪಾಡಿಕೊಳ್ಳಲು ತನ್ನ ತೋರು ಬೆರಳುಗಳನ್ನು ಕಿವಿಗೆ ತುರುಕಿಕೊಂಡು ಗದ್ದಕ್ಕೆ ಕೈಯಿ ಆನಿಸಿ ಕೂತ. "ಹೂ ಸುವಾಸನೆಯ ಬಿಡುವ ಬೆಳಗಿನ ಆ ಘಳಿಗೆ ನಮ್ಮೊಳಗೆ ಮೂಡಿಸುವ ಉಲ್ಲಾಸಕರ ಅಥವಾ ತಾಜಾತನದಂತೆ, ಒಂದು ಒಳ್ಳೆಯ ಕವಿತೆ ನಮ್ಮೊಳಗೆ ಒಂದು ಭಾವಲೋಕವನ್ನೇ ಸೃಷ್ಟಿಸಿಬಿಡುತ್ತದೆ"  ಎಂದು ಮುಂದುವರೆಸಿದ್ದ ಲೆಕ್ಚರರ್ ರ ಅಭಿಪ್ರಾಯಕ್ಕೆ ಈತ ಮನಸಿನಲ್ಲಿಯೇ, "ಇದಲ್ಲಿ ಒಂದು ನಿನ್ನ ಭ್ರಮೆ, ಮತ್ತೊಂದು ವಾಸ್ತವ"  ಅಂದುಕೊಂಡ. ಹೀಗೆ ಅನ್ಯಮನಸ್ಕನಾಗಿ ಕ್ಲಾಸಲ್ಲಿ ಕೂತವನ ತಲೆಯ ಲೈಬ್ರರಿ ತುಂಬಾ ಸಾವಿರ ಪುಟದ ಆಲೋಚನೆ.

ಬೆಳಗಿನ ಕ್ಲಾಸುಗಳಿಗೆ ಸಹಪಾಠಿ ಹುಡುಗಿಯರು ಮುಡಿದು ಬರುತ್ತಿದ್ದ ಮಲ್ಲಿಗೆಯ ಕಂಪು ಇಡೀ ತರಗತಿಯನ್ನು ಆವರಿಸಿ ತನ್ಮಯರನ್ನಾಗಿಸುತ್ತಿದ್ದ ಸಂಗತಿ ಎಲ್ಲರ ಅನುಭವಕ್ಕೆ ಬಂದಿದ್ದರೂ, ಅದನ್ನು ಕವಿತೆಗೆ ಹೋಲಿಸಿ, ವಿವರಿಸಲು ಶುರುವಿಟ್ಟ ಕ್ಷಣ ತನ್ನ ರೂಪಕತೆಯನ್ನು ಕಳೆದು ಕೊಳ್ಳುತ್ತದೆ ಎಂಬುದು ಅರುಣನ ನಂಬಿಕೆ ಮತ್ತು ಮನುಷ್ಯ ಲೋಕದ ಅನುಭವ ಆಯಾ ಕಾಲಮಾನದಲ್ಲಿ ಅವರೇ ಕೊಟ್ಟುಕೊಂಡ ಅರ್ಥಗಳನಾಧರಿಸಿರುತ್ತದೆ ಎಂಬುದು ಈತನ ವಾದ. ಹೀಗಾಗಿ ಮನುಷ್ಯ, ತನ್ನ ಸುತ್ತಲ ದುರ್ನಾತಕ್ಕೆ ಪ್ರತಿಕ್ರಿಯಿಸುವ ವೇಗಕ್ಕೂ ಮತ್ತು ಸುವಾಸನೆಗೆ ಪ್ರತಿಕ್ರಿಯಿಸುವ ರೀತಿಗು ಭಿನ್ನತೆಯಿದೆಯೆಂಬುದು ಅರುಣನ ಹೈಪೊಥಿಸಿಸ್. ಹುಚ್ಚವೆನಿಸುವಷ್ಟು ವಿಚಿತ್ರವಾಗಿ ಕಲ್ಪಿಸಿಕೊಳ್ಳುವ, ಒಮ್ಮೆ 'ಎ ಗುಡ್ ಡಿಬೇಟರ್', ಇನ್ನೊಮ್ಮೆ 'ಇವನಿಗೇನು ಮಾತೆ

ಬರಲ್ವಾ' ಅನ್ನಿಸುವಷ್ಟು ಮೂಖನಾಗಿಬಿಡುತ್ತಿದ್ದ ಅರುಣನದು, ಬಸವನ ಹುಳುವಿನ ಸ್ವಭಾವ. ಕಾವ್ಯ, ಪೇಂಟಿಂಗ್, ಮಾಡರ್ನಿಜಂ ಅಂತ ಏನೆನೋ ಮಾತನಾಡಿ ಎದುರಾಳಿಯ ಸೈಕೊ-ಅನಾಲಿಸಿಸ್ ಗೆ ಇಳಿದುಬಿಡುತ್ತಿದ್ದ. ಒಮ್ಮೊಮ್ಮೆ ಪುಕ್ಕಲನಂತೆ ವರ್ತಿಸುತ್ತಿದ್ದ ಈತನಿಗೆ ಮೂಗಿನ ಮೇಲೆ ತಾತ್ವಿಕ ಸಿಟ್ಟು ಬೇರೆ. ಇವು ಈ ಕ್ಯಾಂಪಸ್‌ನ ಈತನ ಕೊನೆಯ ದಿನಗಳು. ಮತ್ತು ಇವನಿಗಿರುವ ಏಕೈಕ ಗೆಳೆಯ ಚಂದ್ರಕಾಂತ. ಆತನೋ ಒಂದು ವಿದ್ಯಾರ್ಥಿ ಸಂಘಟನೆಯ ಸದಸ್ಯನಲ್ಲದೆ ಈ ಕ್ಯಾಂಪಸ್ಸಿನಲ್ಲಿ ಆ ಸಂಘಟನೆಯ ಘಟಕಕ್ಕೆ ಕಾರ್ಯದರ್ಶಿ ಬೇರೆ. ಅರುಣ್ ಆ ಸಂಘಟನೆಯ ಸದಸ್ಯ ಸೆಮಿಸ್ಟರ್ ಅಡ್ಡಿಶನ್ ಅಗುವಾಗ ಮತ್ತು ಪರೀಕ್ಷೆ ಸಮಯದಲ್ಲಷ್ಟೇ ಗ್ರಂಥಾಲಯಕ್ಕೆ ಬರುತ್ತಿದ್ದ ಈ ಅರುಣ್-ಚಂದ್ರಕಾಂತರು, ತಾವು ಲೈಬ್ರರಿಯ ಇತಿಹಾಸ ಪುಸ್ತಕಗಳಲ್ಲಿ ಕೈಯಿಟ್ಟ ಪ್ರತೀ ಸಾರಿ ಒಂದು ಕ್ಷಣ ರಕ್ತ ತಾಕಿದಂತಾಗುತ್ತೆ ಅನ್ನೋರು. ಚಂದ್ರಕಾಂತ್ ಅಂತು 'ತಥ್' ಯೆಂದು ಧೂಳಿನ ಸಹವಾಸ, ಅಕಾಡೆಮಿಕ್ ಓದು ತನ್ನ ಜೀವ ಹಿಂಡುತಿವೆ ಅಂದುಕೊಳ್ಳುತಿದ್ದ. ಹಾಗೆ ನೋಡಿದರೆ ಈತ ತನ್ನ ಹಳ್ಳಿಯನ್ನು ಪ್ರೀತಿಸುವಷ್ಟು ಈ ನಗರಗಳನ್ನು ಇಷ್ಟಪಡುತ್ತಿರಲಿಲ್ಲ. ಹಳ್ಳಿಯಲ್ಲಿರೋ ವಾರಗೆಯ ದೋಸ್ತು, ಕಾಡಜ್ಜ ಈತನನ್ನು ಓದಿಕೊಂಡವ'ನೆಂದು ತೋರುವ ಅಕ್ಕರೆ ಅದ್ಯಾವುದು ಈ ಸೂಟುಧಾರಿ ಒಣಗತ್ತಿನ “ಸ್ಟೂಡೆಂಟ್ಸ್ ಮಸ್ಟ್ ರೆಸ್ಪೆಕ್ಟ್ ಟೀಚರ್ಸ್” ಅನ್ನುವ ಪ್ರೋಫೆಸರ್ ಗಳಲ್ಲಿ ಎಂದೂ ಕಂಡಿದ್ದಿಲ್ಲ.

ಇಂಥ ಚಂದ್ರಕಾಂತ್, ಬೆಳಗಿನ ಕ್ಲಾಸ್ ತಪ್ಪಿಸಿ, ೧೨ ಗಂಟೆಯವರೆಗೂ ಗಢದ್ದು ನಿದ್ದೆ ಹೊಡೆದು, ಮಧ್ಯಾಹ್ನ ಊಟ ಮಾಡಿ, ಹಾಗೇ ಕ್ಯಾಂಪಸ್ಸಿನ ಬಸ್ ಸ್ಟಾಪಿಗೆ ಬಂದ. ಒಮ್ಮೆ ಅರುಣ್ ನನ್ನು ಕರೆಯೋದು ಅಂತ ಯೋಚಿಸಿದ. ಆದರೆ, ದಾರಿಯುದ್ಧ ಕಳೆವ ಹೂ ಎಲೆಗಳ ಚಿತ್ರ ಕಣ್ಣಲ್ಲಿ ಒತ್ತಿಕೊಳ್ಳುತ್ತಾ ನಡೆದಾತನಿಗೆ, ಸ್ವಲ್ಪ ಏಕಾಂತ ಬೇಕೆನಿಸಿ ಒಬ್ಬನೆ ನಡೆದ, ಯಾವಕಡೆಗೆ ಹೋಗಬೇಕೆಂದು ನಿರ್ಧರಿಸಿಲ್ಲ. “ಕೋಠಿ” ಎಂದು ಹಣೆ ಬರಹ ಬರೆದುಕೊಂಡಿದ್ದ ಬಸ್ ಬಂದು ನಿಂತಿತು. ಹತ್ತಿ ಹೊರಟೇ ಬಿಟ್ಟ. ಹೀಗೆ ಹೊರಟು ಬಿಡುವುದು ವಿಶೇಷವೇನಲ್ಲ ಚಂದ್ರಕಾಂತನಿಗೆ, ತಾನು ಯಾವುದೋ ಕಸಿವಿಸಿ, ವೇದನೆ ಒಂದಿಷ್ಟು ದುಃಖವನ್ನು ಅನುಭವಿಸುತ್ತಿದ್ದೇನೆ ಅನಿಸಿದಾಗಲೆಲ್ಲ ಹೀಗೆ ನಡೆದುಬಿಡುತ್ತಿದ್ದ, ಜನದಟ್ಟಣೆಯ ಮಾರ್ಕೆಟ್, ಬಸ್ ಸ್ಟ್ಯಾಂಡ್ ಇಲ್ಲ ರೈಲ್ವೇ ಸ್ಟೇಷನ್ನಿಗೊ ಒಟ್ಟಾರೆ ಬಂದು ಬಿಡುತ್ತಿದ್ದ. ಸದ್ಯ ನಗರದ ಬ್ಯುಸಿ ಮಾರ್ಕೆಟ್ಟಾದ ಕೋಠಿಯ ರಸ್ತೆ ಬದಿಯಲ್ಲಿ ನಿರುದ್ದೇಶಿಯಾಗಿ ಅಲೆಯುತ್ತಿದ್ದಾನೆ. ಮತ್ತು ತಾನು ಕಾಣುವ ಹೊರ ಜಗತ್ತಿನ ಚಲಿಸುವ ಪ್ರತಿಯೊಂದರ ಚಲನೆಯಲ್ಲಿ ತನ್ನ ಮನಸ್ಥಿತಿಯನ್ನು ಸಮೀಕರಿಸಲೆತ್ನಿಸುತ್ತಿದ್ದಾನೆ. ಹಾಗೆ ವಿಫಲನಾಗಿ ದಾರಿಗುಂಟ ಎದುರಾಗುವ ಭೇಲ್ ಪೂರಿವಾಲಾಗಳನ್ನು, ಪರ್ಸು-ಕೀಚೈನ್ ಮಾರುವ ಹುಡುಗರನ್ನು ಮತ್ತು ಸೋಡಾ ಹೊಡೆಯುವ ಕೈಗಳನ್ನು ಪ್ರಯತ್ನ ಪೂರಕವಾಗಿ ಗಮನಿಸುತ್ತಾನೆ. ರೇಟು ಕೇಳಿ ಹೊರಡುತ್ತಿರುವ ಗಿರಾಕಿಯ ಬೆನ್ನು ಬಿದ್ದಿರುವ ಎಫ್.ಎಮ್ ರೇಡಿಯೊ ಸೆಟ್ ಮಾರುವ ಹುಡುಗ ಅದರ ವ್ಯಾಲೂಮ್ ಹೆಚ್ಚು ಮಾಡಿ “ಬಂಗಾರು ಕೋಡಿ ಪಟ್ಟ ವಚ್ಚನಂಡಿ, ಏ ಪಾಪ ಏ ಪಾಪ ಏ ಪಾ...ಪ” ಹಾಡು ಕೇಳಿಸಿ ವ್ಯಾಪಾರ ಮಾಡುವ ಜರೂರಿಯಲ್ಲಿರುವುದನ್ನು ಕಂಡ.

"ಸಾರ್ ದಸ್ತಿ ತಗಳ್ಳಿ ಸಾರ್.." ಎಂದು ಕೈ ಚಾಚಿದ ಹುಡುಗನಿಗೆ ಹೇಗೆ ಪ್ರತಿಕ್ರಿಯಿಸುವುದೆಂದು ತಿಳಿಯದೆ ಸುಮ್ಮನೆ ಮುನ್ನಡೆದ. ಈಗ ಸಮಯ ಐದು ಗಂಟೆ. ಕ್ಯಾಂಪಸ್ಸಿಗೆ ಹೊರಡುವ ಬಸ್ಸಿನ ಸರಿಯಾದ ಸಮಯ. ಬಸ್ ಶೆಲ್ಟರ್‌ನ ತುಂಬ ಜನ ಸೇರಿದೆ. ದುಗುಡದಲ್ಲಿರುವ ನೌಕರಿ ಹೆಣ್ಣು ಮಕ್ಕಳು ಖರೀದಿಸಿದ ತರಕಾರಿಯನ್ನು ಜ್ಞಾಪಾನದಿಂದ ಹಿಡಿದು ನಿಂತಿದ್ದಾರೆ. "ಎಗಸ್ಟ್ರಾ" ಅನ್ನಿಸುವಂತೆ ತುಸು ಹೆಚ್ಚೇ ಅಲಂಕಾರ ಮಾಡಿಕೊಂಡಿದ್ದ ಬೇಕಂತಲೆ ಭುಜದ ರವಿಕೆಯಿಂದ ತೂರಿ ಬರುವಂತೆ ಬ್ರಾ ನ ಬಾರ್ ಅನ್ನು ಎದ್ದು ಕಾಣಿಸುವಂತೆ ನಿರ್ಲಕ್ಷಿಸಿರುವ ಸಂಜೆ ದಂಧೆಯವರ ಗುಂಪೊಂದು ಶೆಟ್ಟರಿನ ಮೂಲೆಯಲ್ಲಿ ಸೇರಿದೆ. ಅವರ ಒಣ ದ್ರಾಕ್ಷಿಯಂತಹ ತುಟಿ, ಎದೆ ಅಳತೆಯನ್ನು ಕಣ್ಣಿಂದ ಅಳೆಯುತ್ತಿರುವ ಅದೆಷ್ಟೋ ಕಣ್ಣ ತಕ್ಕಡಿಗಳು ಅಲ್ಲಿ ಸುಳಿದಾಡುತ್ತಿವೆ. ಅವರ ಹೆಗಲಿಗೆ ನೇತಾಡುವ ವ್ಯಾನಿಟಿ ಬ್ಯಾಗ್, ಅದರೊಳಗೆ ಇರಬಹುದಾದ ಅಮೂಲ್ಯ ಅಯುಧಗಳ ಪಕ್ಷಿನೋಟವೊಂದು ಕಣ್ಣ ಮುಂದೆ ಹಾದವರಂತೆ ಕೆಲವರು ಅಲ್ಲಿ ಹರಡಿದ್ದ ಮಲ್ಲಿಗೆಯ ಘಮಕ್ಕೆ ನೋಡುವ ನೋಟದೊಳಗೆ ತಾವಿಲ್ಲದಂತಾದರು. ಒಂದು ಕ್ಷಣ ಅವರ ವೈಯಾರ, ವಗಲುಗಳು ಚಂದ್ರಕಾಂತನಿಗೆ ಸೋಗಲಾಡಿ ಮೇಷ್ಟ್ರುಗಳ ಸ್ವಭಾವ ನೆನಪಿಸಿತು.

ಕೆಲಸ ತಡವಾಗಿ ಬಿಟ್ಟಿದ್ದಕ್ಕೆ ತಮ್ಮೊಳಗೆ ಮೇಸ್ತ್ರಿಯನ್ನು ಬಯ್ದುಕೊಳ್ಳುತ್ತಿರುವ ಗೌಂಡಿ ಕೆಲಸದ ಹೆಂಗಸರು; ಕೆಲ ಹುಡುಗರು ಕೈಯಲ್ಲಿ ಬುತ್ತಿಡಬ್ಬಿ, ಕೆಲವರ ಕೈಯಲ್ಲಿ ಬ್ರೆಡ್ ಪಾಕೆಟ್ ಹಿಡಿದು ಮನೆ ಸೇರುವ ತರಾತುರಿಯಲ್ಲಿದ್ದಾರೆ. ಸಿಮೆಂಟಿನ ಸಂಪರ್ಕದಿಂದಾಗಿ ಅವರ ತಲೆಗೂದಲು ಕೊಂಚ ಹೊಗೆಯ ಬಣ್ಣಕ್ಕೆ ತಿರುಗಿವೆ. ಅವರನ್ನು ನೋಡಿದಾಗ ಈತನಿಗೆ "ಈ ದೇಶದಲ್ಲಿ ರೆವಲ್ಯೂಷನ್ ಆಗುತ್ತೆ. ಒಂದಿನ ಕೂಲಿಕಾರರ ರಾಜ್ಯ ಬರುತ್ತೆ. ಆಗ ಎಲ್ಲರೂ ಶ್ರಮ ಪಡ್ತಾರೆ-ಹಂಚಿ ತಿಂತಾರೆ" ಯೆಂದು ಮೇಧಾವಿಯ ದಾಟಿಯಲ್ಲಿ ಹೇಳಿದ್ದ ಪ್ರೊಫೆಸರ್ ಷಣ್ಮುಗಂ ನೆನಪಾದರು. ಬಸ್ ಶೆಲ್ಟರ್ ಪಕ್ಕದ ಕಮಾನಿನಲ್ಲಿ ನಾಯಿ ಬೊಗಳಿದಂತಾಗಿ ಯಾರೊ ಬಾಲ ತುಳಿದಿರಬೇಕೆಂದುಕೊಂಡು ಸುಮ್ಮನಾದ. ಅದು ಹಾಗಾಗಿರಲಿಲ್ಲ. ನೇತಾಡುತಿದ್ದ ಗೌಂಡಿ ಕೆಲಸದ ಹುಡುಗನ ಕೈಯಲ್ಲಿನ ಬ್ರೆಡ್ ಪೊಟ್ಟಣವನ್ನು ಕಿತ್ತು ಓಡುತ್ತಿದ್ದ ನಾಯಿಯನ್ನು ತಡೆದು ಉತರೆ ನಾಯಿಗಳು ಹಂಚಿಕೊಡಲು ನ್ಯಾಯ ತೆಗೆದಿದ್ದವು.

ಥಟ್ಟನೆ "ಇವತ್ತು ಆರ್.ಎಮ್.ಎಸ್ ಬಾರೆ, ಇವನಿಂಗ್ ಸಿಕ್ಸ್ ಥರ್ಟಿಗೆ ಟೆರೆಸ್ ಮೇಲೆ ಸಿಗೋಣ" ಎಂದಿದ್ದ ಷಣ್ಮುಗಂ ರ ಮಾತು ನೆನಪಾಗಿ ಗಿಜಿಗುಡುತ್ತಿದ್ದ ತುಂಬು ಗರ್ಭಿಣಿಯಂತ 216 ನಂಬರಿನ ಕ್ಯಾಂಪಸ್ ಬಸ್ ಒಳಗೆ ನುಸುಳಿಕೊಂಡು ಹೋಗಿ ನಿಂತ. ಬಸ್ ಹೊರಟಿತು. ಅತ್ತ ರಸ್ತೆ ಬದಿಯಲ್ಲಿ ನಾಯಿ ಕಿತ್ತಾಡಿದ ಬ್ರೆಡ್ ಪೊಟ್ಟಣದಲ್ಲಿ ಇನ್ನೇನಾದರು ಮಿಕ್ಕಿದಿಯೆ ಎಂದು ಕುನ್ನಿಯೊಂದು ಬಾಂಬ್ ನಿಷ್ಕ್ರಿಯಾ ದಳದಂತೆ ಪರಿಶೀಲಿಸುತ್ತಿದ್ದನ್ನು ಗಮನಿಸಿದ. ತೂರಾಡುತ್ತ ನಡೆದಿದ್ದ ಬಸ್ಸಿನೊಳಗೆ, ಒಬ್ಬರ ಉಸಿರು ಇನ್ನೊಬ್ಬರಿಗೆ ತಾಕಿ, ಸಹಿಸಲಸಾಧ್ಯ ಎಂಬಂತ್ತಾಗಿತ್ತು. ಕ್ಯಾಂಪಸ್ಸಿಗೆ ಹೋಗುವ ದಾರಿಯಲ್ಲಿ ದರ್ಗಾ ಸ್ಟಾಪ್ ನಿಂದ ಕೆಲ ಕುಡುಕರು ಬಸ್ ಹತ್ತಿದ ಪರಿಣಾಮ, ಇಡೀ ಬಸ್ ಪಾನಮತ್ತಾದಂತೆ ಕಂಡಿತು. ಹೀಗೆ ಸಾಗಿ ಬಂದ ಬಸ್ಸು ಮೇನ್ ಗೇಟ್ ತಲುಪಿ

ನಿಂತಿತು. ಅವಸರಿಸಿ ಇಳಿದು ಕ್ಯಾಂಪಸ್ ಕಡೆ ನಡೆದವನನ್ನು ಯಾರೋ ಹಿಂದಿನಿಂದ ಬಂದು ಅನಾಮತ್ತಾಗಿ ಭುಜ, ತಲೆಯ ಮೇಲೆ ಹೊಡೆದಂತಾಗಿ, ತಿರುಗಿ ನೋಡುವಷ್ಟರಲ್ಲಿಯೇ ನಾಲ್ಕು ಜನ ಹಿಡಿದು ಅಲ್ಲಿಯೇ ನಿಂತಿದ್ದ ಜೀಪಿನೊಳಗೆ ಹಾಕಿಕೊಂಡು ಹೋದರು. ಮೇನ್ ಗೇಟ್ ಕಾವಲುಗಾರ ಜೀಪಿನತ್ತ ಓಡಿ ಬರುವಷ್ಟರಲ್ಲಿ, ಜೀಪು ಅಲ್ಲಿಂದ ಬಹುದೂರ ಸಾಗಿತ್ತು.

***

ಬೆಳಗಿನ ಕ್ಲಾಸ್ ಕೇಳಿ ಬೋರು ಹೊಡೆದಿದ್ದ ಅರುಣ್, ಮಧ್ಯಾನ್ಹದ ಊಟಕ್ಕೆ ಬಂದು ಸೆಕೆ ತಡೆಯದೆ ಸಂಜೆ ತಡ ಹೊತ್ತಿನ ವರೆಗೆ ಕಬ್ಬಿಣದ ಮಂಚಕ್ಕೆ ಆಯಸ್ಕಾಂತದ ಹಾಗೆ ಮಲಗಿಬಿಟ್ಟಿದ್ದ. ಸಂಜೆ ಯೋಗ ಕ್ಲಾಸಿಗೆ ಹೋಗುವ ಪಕ್ಕದ ರೂಮಿನ ಹುಡುಗರು ಬಾತ್‌ರೂಮಿನಲ್ಲಿ ಜೋರಾಗಿ ಹಾಡು ಹೇಳುತ್ತಿರುವುದು ಕೇಳಿಸಿಯೂ ಕೇಳಿಸದವನಂತೆ ಒರಗಿ ಅಂಗಾತ ಬಿದ್ದ. ಇನ್ನು ತನ್ನ ಕೋಣೆಯಲ್ಲಿದ್ದ ಮೂವರ ಪೈಕಿ ಲಿಂಗ್ವಿಸ್ಟಿಕ್ಸ್ ಒಬ್ಬ ಅದಾಗಲೆ ಹೊರಗೆ ಬಿದ್ದಿದ್ದ. ಇನ್ನುಳಿದದ್ದು ಥೇಟರ್ ಆರ್ಟ್ಸ್ ನ ಸ್ವಲ್ಪ ವಯಸ್ಸಾದಂತೆ ಕಾಣುತ್ತಿದ್ದ ಜಲ್ಲು ಕುಮಾರ್ ಅಲಿಯಾಸ್ ಚಿರುಜಲ್ಲು. ಹೊರಡುವ ಮುನ್ನ "ಅರುಣ್ ಎದ್ದೇಳು, ಟೈಂ ಫೈವ್ ಥರ್ಟಿ. ಲೇಟಾದ್ರೆ ಕಾಫಿ ಸಿಗೊಲ್ಲ" ಎನ್ನುತ್ತಾ ಬಾಗಿಲು ಎಳೆದುಕೊಳ್ಳುವಾಗ "ಬೈ" ಹೇಳಿ ಹೊರಬಿದ್ದ. ಚಂದ್ರಕಾಂತ್ ಕ್ಲಾಸಿಗೂ ಬರಲಿಲ್ಲ, ರೂಮಲ್ಲೂ ಇಲ್ಲ. ಅದೆಲ್ಲಿ ಹಾಳಾಗಿ ಹೋದನೋ ಅಂದುಕೊಳ್ಳುತ್ತ ಎದ್ದು ಮುಖ ತೊಳೆದು ಕಾಫಿ ಕುಡಿಯಲು ಮೆಸ್ ಹಾಲ್‌ನತ್ತ ಹೆಜ್ಜೆ ಹಾಕಿದ. ಈಗ ವಿಂಗ್ ಪೂರಾ ಖಾಲಿ ಖಾಲಿ. ಒಂದು ನಿಶ್ಯಬ್ಧ ಹುಡುಕಿ ಹೊರಟವನಿಗೆ ಸಿಕ್ಕ ಏಕಾಂತ ದಂತಾಯಿತು ಕ್ಷಣ. ಕಾರಿಡಾರ್‌ನಲ್ಲಿ ಹುಡುಗರು ಗುಂಪಾಗಿ ಮಾತನಾಡಿಕೊಳ್ಳುತ್ತಿರುವ ವಿಷಯಗಳೇನಿರಬಹುದೆಂದು ತಿಳಿಯುವ ಇರಾದೆಯಿಲ್ಲದೆ ನೇರ ಟೀ ಕೌಂಟರಿಗೆ ಹೋಗಿ ಕಾಫಿ ಕಪ್ ಹಿಡಿದು ಬಂದು ಹಾಲ್ ನ ಮೂಲೆ ಟೇಬಲ್ ವೊಂದರ ಬಳಿ ಹೋಗಿ ಕೂತ. ಚಹಾ ಗುಟುಕರಿಸುತ್ತಲೇ ಎದುರು ಕೂತು ತೆಲುಗಿನಲ್ಲಿ ಮಾತನಾಡುತ್ತಿದ್ದ ಹುಡುಗರ ಸಂಭಾಷಣೆಯತ್ತ ಗಮನ ಹರಿಸಿದ.

"ನಿಜವಾಗ್ಲೂ, ಬೆಳಿಗ್ಗೆ ನಿಮ್ ವಿಂಗ್ ಗೆ ಪೊಲೀಸರು ಬಂದಿದ್ದರಾ?".

"ಹೌದು ಮಾರಾಯ, ನಮ್ಮ ಐಡೆಂಟಿಟಿ ಕಾರ್ಡು ಚೆಕ್ ಮಾಡಿದ್ರು, ಅಲ್ಲದೆ ಸೂಟ್‌ಕೇಸ್, ಬುಕ್ಸ್ ಎಲ್ಲಾ ಚೆಕ್ ಮಾಡಿ ಹೋದ್ರು"

"ಯಾಕ್ ಬಂದಿದ್ರು ಅಂತ ತಿಳಿತಾ?"

"ಅದೆ ಕಣೋ, ನಿನ್ನೆ ಯಾರೋ ನಮ್ ಹಾಸ್ಟೆಲ್ ನಲ್ಲಿ ನಕ್ಸಲೈಟ್ಸ್ ಇದಾರೇಂತ ಇನ್‌ಫರ್ಮೇಷನ್ ಕೊಟ್ಟಿದ್ರಂತೆ. ಅದಕ್ಕೆ ಸರ್ಚ್ ಮಾಡಿ ವಿಚಾರಸೋಕೆ ಬಂದಿದ್ದರಂತೆ"

“ಹೌದ, ಹೋಗ್ಲಿ ಬಿಡು ನಮಗ್ಯಾಕೆ ತಲೆ ನೋವು, ಲ್ಯಾಬಿಗೆ ಟೈಮ್ ಆಗ್ತಿದೆ ನಾನ್ ಬತ್ತೀನಿ. ಬೈ...” ಎಂದು ಅವರಲ್ಲೊಬ್ಬ ಎದ್ದು ಹೊರಟ. ಇವರ ಮಾತು



ಕೇಳಿಸಿಕೊಂಡ ಅರುಣ್, ಟೀ ಕಪ್ ಟೇಬಲ್ಲಿನ ಒಂದು ಬದಿಗೆ ಸರಿಸಿ ಎದ್ದು ಹಾಸ್ಟೆಲ್ ನ ಹೊರಗೆ ಇದ್ದ ಹಾಸು ಬಂಡೆಯತ್ತ ಹೆಜ್ಜೆ ಹಾಕಿದ. 'ಏನೆ ಆದರೂ ನಿನ್ನೆ ರಾತ್ರಿ ಬೇಡವೆಂದರೂ ಪ್ರೊಫೆಸರ್ ಷಣ್ಮುಗಂ ಆ ಇಬ್ಬರು ಯುಜಿಗಳನ್ನು ಹಾಸ್ಟೆಲ್ ಗೆ ಕರೆಯಿಸಿ ಅದೂ ಟೆರೇಸ್ ಮೇಲೆ ಚರ್ಚೆಗೆ ಇಳಿದದ್ದು ಟೆಕ್ನಿಕಲಿ ರಾಂಗ್' ಅಂದುಕೊಳ್ಳುತ್ತಾ ಬಂದು ಬಂಡೆಯ ಮೇಲೆ ಕೂತು ಚಂದ್ರಕಾಂತನ ಬಗ್ಗೆ ಆಲೋಚಿಸ ತೊಡಗಿದ. ಕಣ್ಣು ಕುಕ್ಕುವಂತಿದ್ದ ಗುಲ್ ಮೊಹರ್, ಅದರ ಪಕಳೆ, ಸಂಪೂರ್ಣ ಕೆಂಪಾದ ಅದರ ಬಣ್ಣ ಒಳಗೆ ಚುಂಗಿನಂತೆ ಇಳಿಬಿದ್ದ ದಳ ಇದ್ಯಾವುದನ್ನು ಆತ ಗಮನಿಸುವ ಸ್ಥಿತಿಯಲ್ಲಿ ಇಲ್ಲ ಈಗ. ಮತ್ತೆ ಷಣ್ಮುಗಂ ಇವತ್ತು ಸಂಜೆ ಸಿಕ್ಸ್ ಥರ್ಟಿಗೆ ಮತ್ಯಾರೂ ಬಾರ್ತಾರೆ ಅಂದಿದ್ದು ನೆನಪಾಗಿ ಸ್ವಲ್ಪ ದಿಗಿಲಾದ. ಹೇಗಾದರು ಮಾಡಿ ಅವರನ್ನು ಮತ್ತೆಲ್ಲಾದರು ಬೇರೆ ಕಡೆ ಸಿಗುವಂತೆ ಮಾಡಬೇಕೆಂದು ನಿರ್ಧರಿಸಿದ. ಆದರೆ ಈ ಮೆಸೆಜ್ ಕೊಡೋಕೆ ಚಂದ್ರಕಾಂತ್ ಎಲ್ಲಿ? 'ಛೇ, ಇದೆಲ್ಲ ಇವನಿಗೆ ಯಾಕ್ ಅರ್ಥ ಆಗಲ್ಲ' ಗೊಣಗುಟ್ಟಿದ ಒಳಗೊಳಗೆ

ನಿನ್ನೆ ರಾತ್ರಿ ಟೆರೇಸಿನ ಮೇಲೆ ನಡೆದ ಸಭೆಯಲ್ಲಿ ಎತ್ತರದ ಆ ನಾಯಕ “ನವ ಪ್ರಜಾತಾಂತ್ರಿಕ ಕ್ರಾಂತಿಗೆ ಇದೊಂದೆ ಮಾರ್ಗ” ಎದಿಂದ್ದು ಮತ್ತೆ-ಮತ್ತೆ ಕಿವಿಯೊಳಗೆ ಗುಂಯ್ ಗುಡುತಿದೆ. ಈಗ ಮತ್ತಷ್ಟು ಗೊಂದಲಕ್ಕೀಡಾದ ಅರುಣ್, ಒಂದೆಡೆ “ಊಳಿಗಮಾನ್ಯತೆಗೆ' 'ಬದಲಾವಣೆ' 'ಬಂಡವಾಳಶಾಹಿ' 'ರಕ್ತಕ್ರಾಂತಿ' ಎಂದೆಲ್ಲಾ ಹೇಳುತ್ತಿದ್ದ ಅವರು ಎಲ್ಲೊ ಒಂದೆಡೆ ಅಲ್ಟಿಮೇಟ್ ಇದೆಯೆಂದು ಇಡಿ ಬದುಕನ್ನೇ ಸವೆಸುವ ತೀರ್ಮಾನದ ಮಾತು ಕೇಳಿ ಈತನಿಗೆ ಕಳವಳವಾಗಿತ್ತು. ಮತ್ತು ಇದರ ಕುರಿತಾಗಿ ಬಹಳಷ್ಟು ಸಲ ಚಂದ್ರಕಾಂತ್ ಮತ್ತು ಷಣ್ಮುಂಗ ಜೊತೆ ಚರ್ಚಿಸಿದ್ದು ಇದೆ. ಚಂದ್ರಕಾಂತ ಒಪ್ಪಿದರೂ; ಇದನ್ನು ಸಮರ್ಥಿಸಿಕೊಳ್ಳುವ ನಿಲುವು ಅರುಣ್ ದು ಆಗಿದ್ದಿಲ್ಲ. ಹಾಗಾಗಿ ಕೆಲವೊಮ್ಮೆ ಏಕಮುಖೀಯ ವಾದದಂತೆ ಅನಿಸಿದ್ದು ಇದೆ. ಹೀಗೆ ಕೂತು ಧ್ಯಾನಿಸುತ್ತಿದ್ದವನ ಕಣ್ಣೆದುರು “ಏಯ್...ಅರುಣ್, ಹೌ ಆರ್ ಯು? ಎಂದು ಸೈಕಲ್ಲಿನ ಬ್ರೆಕ್ ಹಾಕಿ ಈತನೆಡೆಗೆ ಬಂದ ಪ್ರತಾಪ್ ಸೋನವಾನೆ ಬಂಡೆಯ ಒಂದು ಪಕ್ಕಕ್ಕೆ ಪುಸ್ತಕವಿಟ್ಟು ಕೂತ. “ಐಯೆಮ್ ಫೈನ್ ಮ್ಯಾನ್, ವಾಟ್ ಅಬೌಟ್ ಯು?” ಎಂದು ಸಣ್ಣ ದನಿಯಲ್ಲಿ ಕೇಳಿದ್ದನ್ನು ಪ್ರಶ್ನಿಸಿ ಪ್ರತಾಪ “ಹುಷಾರ್ ಇಲ್ವಾ ಮೈಯಲ್ಲಿ?” ಎಂದು ಕೇಳಿದ. “ಹಾಗೇನಿಲ್ಲ” ಎಂದು ಸುಮ್ಮನಾದ ಅರುಣ್. ಮತ್ತೆ ಮಾತು ಇಷ್ಟವಿಲ್ಲವೆನೋ ಎಂಬಂತೆ ಇಬ್ಬರ ನಡುವೆ ಸಂಭಾಷಣೆ ಮುಂದುವರಿಯಿತು.

“ಸರಿ ನಿಂಗೊಂದು ವಿಷ್ಯಾ ಗೊತ್ತಾ?

“ಏನದು?”

“ಈಗ ಅರ್ಧ ಗಂಟೆ ಮುಂಚೆ ಮೇನ್ ಗೇಟ್ ಹತ್ರ ಅದ್ಯಾರೊ ನಾಲ್ಕು ಜನ ಬಂದು ಒಬ್ಬ ಹುಡ್ಗನ್ನ ಎತ್ತಿ ಹಾಕಿಕೊಂಡು ಹೋದ್ರಂತೆ, ಗಾರ್ಡ್ ಕೂಗಿಕೊಳ್ಳೋಷ್ಟರಲ್ಲಿ, ಜೀಪು ಅಲ್ಲಿಂದ ಪಾಸ್ ಆಯಿತಂತೆ” ಅಂದ. ಆದ ದುಗುಡವನ್ನು ಅದುಮಿಟ್ಟುಕೊಂಡು “ಯಾರಂತೆ?” ಎಂದ ಅರುಣ್.



“ಗೊತ್ತಿಲ್ಲ ಮಗಾ” ಎಂದು ಪ್ರತಾಪ್, ತನ್ನ ಫೋನ್ ರಿಂಗಾಗುತ್ತಲೇ ಅಲ್ಲಿಂದ ಹೊರಟ.

ಇದೆಲ್ಲ ಕೇಳಿಸಿಕೊಳ್ಳುತ್ತಿರುವಾಗಲೇ ಅರುಣ್ ಗೆ, ಚಂದ್ರಕಾಂತ್ ತನ್ನ ಮನೆಯಿಂದ, ಅವನ ತಾಯಿಯಿಂದ ದೂರ ಆದಂತೆ ಭಾಸವಾಗ ತೊಡಗಿತು. ಮತ್ತೆ ಆಲೋಚನೆಗೆ ಬಿದ್ದ. ಏನು ಮಾಡುವುದು ಅಂತ ಯೋಚಿಸುತ್ತಿರುವಾಗಲೇ ಬೆಳಿಗ್ಗೆ ಎಲ್ಲಾ ಕ್ಲಾಸಲ್ಲೂ ಯಾರೋ ಪಾರ್ಟಿ ಪಂಪ್ಲೆಟ್ ಎಸೆದು ಹೋಗಿರೋ ವಿಷಯ ನೆನಪಾಯಿತು. ದಿಗಿಲುಗೊಂಡವನಂತೆ ಎದ್ದು ರೂಮ್ ಸೇರಿದವನೆ ನಿನ್ನೆ ರಾತ್ರಿ ಕ್ಲಾಸ್‌ರೂಮಲ್ಲಿ ಹಾಕಲು ಹಂಚಿದ್ದ ಕರಪತ್ರಗಳನ್ನು ಮಡಚಿ ತಂದು ತನ್ನ ಹಳೆಯ ದಿಂಬಿನ ಹರಿದ ಸಂದಿಯಲ್ಲಿ ತುರುಕಿ ಮಂಚದಡಿಯ ರಟ್ಟಿನ ಡಬ್ಬಿಯಲ್ಲಿಟ್ಟಿದ್ದನ್ನು ಹುಡುಕ ಹತ್ತಿದ. ಹುಡುಕಾಡುತ್ತಿರುವ ಡಬ್ಬಿ ಕಾಣದಿರುವದು ಎದೆಬಡಿತವನ್ನು ಹೆಚ್ಚಿಸಿತು. ನಿನ್ನೆ ಷಣ್ಮುಗಂ ಅವುಗಳನ್ನು ಜುಲುಮೆಯಿಂದ ಕೊಟ್ಟಿದ್ದರು.

'ಛೇ! ಇವರ್‍ಯಾಕಾದ್ರು ನಮ್ ಜೀವ ತಿಂತಾರೆ' ಎಂದು ಬಯ್ದುಕೊಳ್ಳುತ್ತಾ ಎಲ್ಲರ ಮಂಚದಡಿ ಕಣ್ಣಾಯಿಸಿದ. ಡಬ್ಬಿ ಮಾತ್ರ ನಾಪತ್ತೆ, ಬೇಕಿತ್ತಾ ಈ ಹಾಳುಮೂಳು' ಎನಿಸಿತು. ಒಂದು ಕ್ಷಣ ಆಲೋಚಿಸುತ್ತಾ ಸುಮ್ಮನೆ ಮಂಚದ ಮೇಲೆ ಕೂತ. ಒಂದು ವೇಳೆ ಆ ಡಬ್ಬಿ ಬೆಳಿಗ್ಗೆ ತಾನು ಎಚ್ಚರವಾಗುವದಕ್ಕಿಂತ ಮುಂಚೆ ಪೋಲಿಸರ ಕೈ ಸೇರಿರಬಹುದೆ? ಇಲ್ಲ ಬೆಳಿಗ್ಗೆ ನಾನು ಕ್ಲಾಸಿಗೆ ಹೋದಾಗ ಪೋಲಿಸರು ಆ ಕರಪತ್ರ ಸಮೇತ ಚಂದ್ರಕಾಂತನನ್ನ ಹಿಡ್ಕೊಂಡು ಹೋದ್ರೆ? ಕ್ಷಣ ಕಣ್ಣು ಕತ್ತಲಾದವು.

ಏನೋ ಹೊಳೆದವನಂತೆ ಎದ್ದು ವಿಂಗ್ ಮೂಲೆಯಲ್ಲಿಟ್ಟ ಡಸ್ಟ್ ಬಿನ್‌ನಲ್ಲಿ ಕಣ್ಣಾಯಿಸಿದ. ಗಂಟಲುವರೆಗೂ ತಿಂದಂತಿದ್ದ ಡಸ್ಟ್ ಬಿನ್‌ನಲ್ಲಿ ತಳಸೇರಿರಬಹುದೇ? ಎಂದು ಕೈ ಹಾಕಿ ತೆಗೆಯಲು ಮುಂದಾದಾಗ “ಏನ್ ಉಡಕಾಕತ್ತೀರಿ ಸಾರು” ಎಂದು ಹಿಂದಿನಿಂದ ಕಸ ಗುಡಿಸುವಾಕೆ ಕೇಳಿದಳು. ಹಿಂಗಿಂಗೆ ಒಂದು ರಟ್ಟಿನ ಡಬ್ಬಿಲಿ ಪುಸ್ತಕ ಇಟ್ಟಿದ್ದೆ ಕಾಣಿಸ್ತಿಲ್ಲ ಬೆಳಿಗ್ಗೆ ತನ್ನ ರೂಮ್ ಕಸ ಗುಡಿಸಿದ್ದು ಯಾರೆಂದು ಕೇಳಿದ. “ಬೆಳಿಗ್ಗೆ ಕಸ ಹೊಡೆದದ್ದು

ನಾನಲ್ಲ, ಮಾಳಮ್ಮನೇ ಸಾರು- ಅಗೋ ಅಲ್ಲಿ ಒರಾಗ ಕಸ್ಥ ಕುಪ್ಪಿಗೆ ಬೆಂಕಿ ಹಚ್ಚಾಕಾಳ"  ಎಂದಳಾಕೆ. ನೇರವಾಗಿ ಹೊರ ಬಂದು ಕಸಕಡ್ಡಿ ಒಂದೆಡೆ ಬಳಿಯುತ್ತಿರುವ ಮಾಳಮ್ಮನನ್ನು ವಿಚಾರಿಸಿದ.

"ಅಲ್ಲಮ್ಮ ಒಂದು ಹಳೇ ಕಾಗದ ರಟ್ಟಿನ ಡಬ್ಬಾಗ ದಿಂಬು ಇತ್ತಲ್ಲ ನೋಡಿದೇನಮ್ಮ?"

"ಗಾ.. ಅದೋ ಆ ಮೂಲ್ಯಾಗ ಹಾಕಿ ಬೆಂಕಿ ಹಾಕೀನ್ ನೋಡ್ರಿ..." ಎಂದು ಮೂಲೆಯತ್ತ ಕಸ ಮೊರಕೆ ಹಿಡಿದು ತೋರಿಸಿದಳು. ಹಾಸ್ಟೆಲ್ ಹಿಂಬದಿಯ ಮೂಲೆಗೆ ಬಂದು ನಿಂತಾಗ ಸ್ವಲ್ಪ ಗಾಳಿ ಜೋರಾದ ಕಾರಣ ಕಿಡಿ ಹಾರ ತೊಡಗಿದವು. ತನ್ನ ಹಳೇ ಮಾಸಲು ತಲೆದಿಂಬು ಸುಟ್ಟು ಕಮಟು ವಾಸನೆಯಲ್ಲೂ, ಆ ಕರಪತ್ರಗಳ ಬಂಡಲ್ ಸುಟ್ಟ ಸುಳಿವು ಕಾಣಲಿಲ್ಲ. ಏನಾಗಿರಬಹುದು ಆ ಕರಪತ್ರ? ಒಳಗೊಳಗೆ ಏನೋ



ತಲ್ಲಣ ಶುರುವಾಯಿತು. ಅದಾಗ ತಾನೆ ಬೀಸಿದ್ದ ಗಾಳಿಗೆ ಗುಲ್ ಮೊಹರ್ ಹೂವು ಉದುರಿ ಕಾರಿಡಾರ್ ಸಂದಿಯನ್ನು ಕೆಂದಾರಿಯನ್ನಾಗಿಸಿದ್ದವು. ಅವುಗಳ ಮೇಲೆ ಹೆಜ್ಜೆಯಿಡುತ್ತ, ಪಕ್ಕದ ಟೆನ್ನಿಸ್ ಕೋರ್ಟ್‌ನಿಂದ ನಡೆದು ನ್ಯೂಸ್ ಪೇಪರ್ ರೀಡಿಂಗ್ ರೂಮಿಗೆ ಬಂದ. ಸಂಜೆಪತ್ರಿಕೆಯೊಂದರ ಮುಖಪುಟದಲ್ಲಿ ದೊಡ್ಡ ಅಕ್ಷರಗಳಲ್ಲಿ "ನಕ್ಸಲ್ ನಂಟು; ವಿದ್ಯಾರ್ಥಿ ಬಂಧನ" ಎಂದು ಬರೆಯಲಾಗಿತ್ತು, ಕೋಣೆ ಹೊಕ್ಕು ಕದವಿಕ್ಕಿಕೊಂಡವನ ಕಣ್ಣುಗಳಲ್ಲಿ ಬೆಂಕಿ ಕಿಡಿ ಹಾರಿದಂತಾಯಿತು. ಬೆಳಗಿನ ಆ ಶಾಲ್ಮಲೀ ಗಿಡ ಬೋಳಾದಂತೆ ಭಾಸವಾಯಿತು.

## ೧೯. ಸಾಯ ಪರೋಟ

· ಡಾ. ಹೆಚ್.ಡಿ.ಉಮಾಶಂಕರ್

ಇದು ಸ್ವಲ್ಪ ಹಿಂದಿನ ಕತೆ. ಆಗ ತಾನೆ ಎಂಟನೇ ತರಗತಿಯ ಓದುತ್ತಿದ್ದೆ. ಹಳ್ಳಿಯಿಂದ ಬರುತ್ತಿದ್ದ ನಮಗೆ ಪಟ್ಟಣದ ಹಾಸ್ಟೆಲ್ಲೇ ಜೀವಾಳ. ಇದ್ದ ಒಂದೇ ಕಾಲೇಜಿಗೆ ದೂರದೂರದ ಹಳ್ಳಿಗಳಿಂದ ನನ್ನಂತಹ ಹಲವು ವಿದ್ಯಾರ್ಥಿಗಳು ಸೇರಿದ್ದರು. ಹಾಸ್ಟೆಲ್‌ನಲ್ಲಿ ಸಿಗುತ್ತಿದ್ದ ಮುದ್ದೆ, ತಿಳಿಸಾರು ತಿಂದೂ ತಿಂದೂ ಬಾಯಿ ಜ್ವರ ಬಂದವರ ಹಾಗೆ ಕೆಟ್ಹೋಗುತ್ತಿತ್ತು. ಅಪರೂಪಕ್ಕೊಮ್ಮೆ ಬೆಳಗಿನ ತಿಂಡಿ ರುಚಿಯಾಗಿರುತ್ತಿತ್ತು. ಈ ರುಚಿಯಾದ ತಿಂಡಿಯನ್ನೇ ತಿಂಗಳುಗಟ್ಟಲೆ ನೆನಸಿಕೊಂಡು ಬಾಯಿ ಚಪ್ಪರಿಸುತ್ತಿದ್ದೆವು. ಹಾಸ್ಟೆಲ್ ಸುತ್ತ ಹಬ್ಬಿಕೊಂಡಿದ್ದ ತರಾವರಿ ಬಳ್ಳಿಗಳು, ಕುರುಚಲು ಗಿಡಗಳು, ಕೊಳಕು ನೀರು ಎಲ್ಲಾ ಆಗಾಗ್ಗೆ ಅನಾರೋಗ್ಯದ ಬಿಸಿಯನ್ನು ತಟ್ಟಿಸುತ್ತಿದ್ದವು. ಇದ್ದ ಒಂದೇ ಬಾವಿ ಸ್ನಾನಕ್ಕೆ ಮತ್ತು ಕುಡಿಯಲಿಕ್ಕೆ ಉಪಯೋಗವಾಗುತ್ತಿತ್ತು. ಅದರಲ್ಲೂ ಬೇಸಿಗೆ ಕಾಲದಲ್ಲಿ ಮೈಶಾಖ ಕಡಿಮೆಗೊಳಿಸಲು ಊಟದ ತಟ್ಟೆಯನ್ನು ಬಾವಿಯಲ್ಲಿ ಬೇಕಂತಲೇ ಬೀಳಿಸಿ ತರುವ ನೆಪದಲ್ಲಿ ಈಜುತ್ತಿದ್ದೆವು. ಇಷ್ಟೆಲ್ಲ ಅವಾಂತರಗಳನ್ನು ಬಾವಿ ರೋಧನದಲ್ಲಿ ಸಹಿಸಿಕೊಳ್ಳುತ್ತಿತ್ತು.

ಹಾಸ್ಟೆಲ್ ಊಟದ ಮೆನುಗೆ ಬೇಸತ್ತು, ಇನ್ನಿತರ ಕಡೆ ಬಾಯಿ ಹಾಕಲು ತವಕಿಸುತ್ತಿದ್ದೆವು. ಮದುವೆ ಸೀಸನ್ ಬಂದರೆ ಸಾಕು ನಮಗೆ ಎಲ್ಲಿಲ್ಲದ ಹಬ್ಬ, ಕನಕಪುರ ತಾಲ್ಲೂಕು ಕೇಂದ್ರವಾಗಿದ್ದ ಕಾರಣ ಕಲ್ಯಾಣಮಂಟಪಕ್ಕೇನೂ ಕೊರತೆ ಇರಲಿಲ್ಲ. ಪ್ರತಿನಿತ್ಯ ಒಂದಲ್ಲಾ ಒಂದು ಮಂಟಪದಲ್ಲಿ ಮದುವೆ ಇದ್ದೇ ಇರುತ್ತಿತ್ತು. ನಮ್ಮ ಹರಕು, ಕೊಳಕು ಬಟ್ಟೆಯನ್ನು ಕಂಡು ಕೆಲವರು ಇನ್ನಿಲ್ಲದ ಪ್ರಶ್ನೆಗಳ ಸುರಿಮಳೆ ಸುರಿಸಿದರೆ, ಇನ್ನೂ ಕೆಲವರು ಕಂಡೂ ಕಾಣದಂತೆ ಸುಮ್ಮನಿದ್ದುಬಿಡುತ್ತಿದ್ದರು. ಸ್ಕೂಲ್‌ಗೆ ಮಧ್ಯಾಹ್ನದ ಬಿಡುವು ಸಿಗುವುದೇ ತಡ ನಮ್ಮ ತಂಡ ಯಾವುದಾದರೊಂದು ಮಂಟಪದ ಮುಂದೆ ಹಾಜರಾಗುತ್ತಿತ್ತು. ಇದು ನಮ್ಮ ವರ್ಷದ ವೇಳಾಪಟ್ಟಿಯ ರೀತಿ ನಡೆಯುತ್ತಿತ್ತು.

ಓದು, ಬರಹ, ಹರಟೆ, ಕುಚೇಷ್ಟೆ, ಆಟ, ಈಜು ಎಲ್ಲವೂ ಜೊತೆಜೊತೆಗೇ ನಡೆಯುತ್ತಿತ್ತು. ಏನಿದ್ದರೂ, ಹೇಗಿದ್ದರೂ ಅದೇನೇ ಆದರೂ ನಮಗೆ ಬಾಯಿಯ ರುಚಿ ನೀಗಿಸುವ ಅಂಶದ ಕೊರತೆ ಮಾತ್ರ ಸದಾ ಕಾಡುತ್ತಲೇ ಇತ್ತು. 'ಮಸೀದಿ ಮುಂದಿರುವ ಸಾಬಿ ಬಹಳ ಚೆನ್ನಾಗಿ ಪರೋಟ ಮಾಡ್ತಾನೆ, ಎರಡು ತಿಂದರೆ ಸಾಕು ಹೊಟ್ಟೆಫುಲ್ ತುಂಬೋಯ್ತದೆ' ಎಂದು ಒಮ್ಮೆ ಹಾಸ್ಟೆಲ್‌ಗೆ ಬಂದಿದ್ದ ವಾರ್ಡನ್ ಅವರ ಗೆಳೆಯ

ವಾರ್ಡನ್‌ಗೆ ಹೇಳುತ್ತಿದ್ದರು. ಅಂದು ಕಸಗುಡಿಸುವ ಸರದಿ ಇದ್ದದ್ದರಿಂದ ಈ ಮಾತು ಕಿವಿಗೆ ಬಿದ್ದು ಅದೇಗೋ ತಲೆಯಲ್ಲಿ ವರ್ಷಾನುಗಟ್ಟಲೆ ಉಳಿದುಕೊಂಡುಬಿಟ್ಟಿತ್ತು.

ಇದಕ್ಕೂ ಕಾಲ ಕೂಡಿಬರಬೇಕಲ್ಲ. ಊರಿಂದ ಯಾರಾದರೂ ಬಂದರೆ ಒಂದೈದು ರುಪಾಯಿ ಕೊಟ್ಟೋಗುತ್ತಿದ್ದರು .ಇದು ಸೋಪು ಪೆನ್ನಿಗೇ ಸಾಕಾಗುತ್ತಿರಲಿಲ್ಲ. ಇನ್ನು ಪರೋಟ ತಿನ್ನುವ ಮಾತೆಲ್ಲಿ ಬಂತು. " ನನ್ ಜನ್ಮವೇ ಒಂದು ಪರೋಟ ತಿನ್ನೋಕು ಕಾಸಿಲ್ವಲಪ್ಪ' ಎಂದು ಗೊಣಗುತ್ತಲೇ ಹಾಸ್ಟೆಲ್ ತಿಂಡಿ ಊಟವನ್ನೇ ಚಪ್ಪರಿಸುತ್ತಿದ್ದೆ. ಒಮ್ಮೆ ಊರಿಂದ ಬಂದಿದ್ದ ಅಣ್ಣ ಹತ್ತು ರೂಪಾಯಿ ಕೈಗಿತ್ತು ಏನಾರ ಬೇಕಾದ್ರೆ ತಗೋ, ಚೆನ್ನಗೆ ಓದು' ಎಂದು ಹೇಳಿ ಹೊರಟುಹೋದರು. ಅಣ್ಣ ಹೇಳಿದ ಯಾವ ಮಾತುಗಳೂ ಮನಸಿಗೆ ನಾಟಲಿಲ್ಲ ಏಕೆಂದರೆ ಗಮನವೆಲ್ಲ ಹತ್ತು ರೂಪಾಯಿಯ ನೋಟಿನ ಮೇಲೆಯೇ ಇತ್ತು.

ಹತ್ತು ರೂಪಾಯಿ ಜೇಬಿನಲ್ಲಿ. ರಾತ್ರಿ ನಿದ್ದೆಯಿಲ್ಲ. ಸಾಬಿ ಅಂಗಡಿಯದ್ದೇ ಕನಸು. ಮಸೀದೆಯೇ ಕಣ್ಮುಂದೆ ಬಂದಂಗೆ, ಏನೇನೋ ಕಲ್ಪನೆ, ಸಾಬಿ ಹೋಟೆಲ್ ಹಂಗಿರಬೇಕು, ಹಿಂಗಿರಬೇಕು. ಪರೋಟ ಈ ತರ ಇರಬಹುದು. ಆ ತರ ಇರಬಹುದು, ಹೋಳಿಗೆ ಇದ್ದಂಗಿರಬಹುದು, ಕಜ್ಜಾಯ ಇದ್ದಂಗಿರಬಹುದು ಇನ್ನು ಏನೇನೋ... ಸರಿ ಅದೇಗೋ ಬೆಳಗಾಯಿತು. ತೊಣಚಿ ಹಚ್ಚಿದ ನಾಯಂಗೆ ಬೇಗನೆ ಎದ್ದು ಲಗುಬಗೆಯಿಂದ ಮುಖ ತೊಳೆದು, ಎಂಟು ಗಂಟೆ ಆಗುತ್ತಲೇ "ಲೋ ನಂಗೆ ಸ್ವಲ್ಪ ಕೆಲ್ಸ ಅದೆ ಬತ್ತೀನಿ ಕಣ್ರೋ" ಎಂದು ಗೆಳೆಯರ ಬಳಗಕ್ಕೆ ಸುಳ್ಳಾಕಿ ಬಿರಬಿರನೆ ಮುನ್ನಡೆದದ್ದೂ ಆಯಿತು.

ಕನಕಪುರದಲ್ಲಿ ಎರಡು ಮೂರು ಮಸೀದಿಗಳಿವೆ. ಯಾವ ಮಸೀದಿ ಅಂತ ಹುಡುಕುವುದು. ಗೊಂದಲವೋ ಗೊಂದಲ. ಹಾಸ್ಟೆಲ್ ಬಿಟ್ಟಿದ್ದಾಯಿತು. ಸಮೀಪವಿರುವ ಮಸೀದಿ ಎದುರಿಗೆ ಬಂದದ್ದಾಯಿತು. ಪರೋಟ ಅಂಗಡಿ ಎಲ್ಲಿ ಅಂತ ಹುಡುಕೋದು, ಇದೇ ಮಸೀದಿ ಮುಂದೆನಾ ಅಥವಾ ಇನ್ನೊಂದು ಮಸೀದಿ ಮುಂದೆನಾ, ಹೇಳಿದ ಪುಣ್ಯಾತ್ಮ ಅದೂ ಒದರಿದ್ದರೆ ಆಯ್ತಿರಲಿಲ್ಲವೇ, ಎಂದು ಗೊಣಗುತ್ತಾ ಮುಖವೆಲ್ಲ ಬಾಡಿಹೋದ ಬಳ್ಳಿಯಂತಾಗಿ ಸುಸ್ತು ಆವರಿಸುತ್ತಿತ್ತು. ಆಗ ಇದ್ದಕ್ಕಿದ್ದಂತೆ ಯಾರೋ ಹೆಗಲಿಗೆ ಕೈಹಾಕಿ "ಏನೋ ಇಲ್ಲಿ" ಎಂದು ಕೇಳಿದರು. ತಿರುಗಿ ನೋಡಿದರೆ ಅಬ್ದುಲ್ಲಾ ನಿಂತವನೆ. ಅಬ್ದುಲ್ಲಾ ಮತ್ತು ನಾನು ಎರಡು ವರ್ಷದಿಂದ ಒಂದೇ ತರಗತಿಯಲ್ಲಿ ಓದುತ್ತಿದ್ದವರು. ಗೆಳೆಯನ ಕಂಡು ಸಂತೋಷ ಉಕ್ಕಿ ಬಂದರೂ ಬಂದ ಕಾರ್ಯವನ್ನು ಅರಹುವ ಮನಸ್ಸಿಲ್ಲ. ಒಂದು ವೇಳೆ ಅವನೇನಾದ ನನ್ನ ಪರೋಟ ತಿನ್ನುವ ಬಯಕೆ ಕೇಳಿ 'ನಾನು ಬತ್ತೀನಿ' ಅಂದು ಬಿಟ್ಟರೆ ದುಡ್ಡು ಎಲ್ಲಿಂದ ತರುವುದು. ಇದು ನನ್ನ ದೊಡ್ಡ ತಲೆನೋವು. "ಏನಿಲ್ಲ ಕಣೋ ಸುಮ್ಮನೇ ಇಲ್ಲೆಲ್ಲ ನೋಡೋಣ ಅನ್ನಿಸ್ತು ಅದಕೇ ಬಂದೆ' ಎಂದು ಬಂದ ಕಾರ್ಯದ ವಿಷಯವನ್ನು ತಿರುಚಿದೆ.

ಅಬ್ದುಲ್ಲ ಸುಳ್ಳನ್ನು ಗ್ರಹಿಸಿದನೋ ಏನೋ 'ಹೋಗ್ಲಿ ಬಿಡು ಬಾ ನಂಜೊತೆ ನಿಂಗೆ ಒಳ್ಳೆ ಪರೋಟ ಕೊಡಿಸ್ತೀನಿ' ಅಂದು ಮಾತಾಡಲೂ ಬಿಡದೆ ಹೋಟೆಲ್‌ಗೆ



ಎಳೆದೊಯ್ದ. ಬೇಡ ಅನ್ನಲಿಕ್ಕು ಆಗದೆ ಅದಕ್ಕೇ ನಾನೂ ಬಂದಿದ್ದು ಎಂದು ಆನ್ನಲೂ ಆಗದೆ ಗೊಂದಲದಲ್ಲಿ ಅವನ ಹಿಂದೆ ಒಡೆಯನ ಹಿಂಬಾಲಿಸುವ ನಾಯಿಯಂತೆ ಹಿಂಬಾಲಿಸಿದೆ.

ಕಿತ್ತೋದ ಹೆಂಚಿನ ಮನೆ. ಮನೆ ಮುಂದೆಯೇ ನಿಂತ ನೀರಿನ ಗುಂಡಿ. ನೀರಿನ ತುಂಬ ಸಾವಿರಾರು ಸೊಳ್ಳೆಗಳು. ಅಲ್ಲಿಂದ ಒಳಗೆ ಕಾಲಿಟ್ರೊಡನೆ ಅರೆಮುರಿದ ಟೇಬಲ್‌ಗಳು, ಅವುಗಳನ್ನು ಹೇಗೋ ನಿಲ್ಲಿಸಲು ಇನ್ನೊಂದಿಷ್ಟು ಕರಕುಕರಕಾದ ಆದಾರ ಮರದ ಪಟ್ಟಿಗಳು. ಒಳಗೆ ಗಮ್ಮೆನ್ನುವ ಬಾಡಿನ ಸುವಾಸನೆ. ಆ ವಾಸನೆಯ ಸುತ್ತ ಗುಂಯ್ ಗುಡುವ ನೂರಾರು ನೊಣಗಳು. ಅಲ್ಲೊಂದು ಮೂಲೆಯಲ್ಲಿ ತೆರೆದ ತಟ್ಟೆಯಲ್ಲಿ ಬಿದ್ದಿರುವ ಈರುಳ್ಳಿ, ಸೌತೆಕಾಯಿ, ಇನ್ನೊಂದು ಮೂಲೆಯ ಇನ್ನೊಂದು ತಟ್ಟೆಯಲ್ಲಿ ಬೆತ್ತಲೆ ಬಿದ್ದಿರುವ ಪರೋಟದ ಗ್ಯಾಂಗು. ಅದರ ಸುತ್ತ ನಿಂತ ನೊಣಗಳ ದಂಡು, ಎಲ್ಲವೂ ವಿಚಿತ್ರ ಪ್ರದೇಶವೊಂದರ ಅನುಭವದಂತೆ ಅವಾಕ್ಕಾಗಿಸಿತು. ಒಂದು ರೀತಿಯಲ್ಲಿ ಬಂದ ಕೆಲಸವೇ ಮರೆತುಹೋದಂತಾಯಿತು.

“ಬಾರೋ.. ಇದು ಇಡೀ ಕನಕ್ಪುರಕ್ಕೆ ಫೇಮಸ್ ಪರೋಟ ಹೋಟೆಲ್ ಕಣೋ..ಬಾ ಕೂತ್ಕ ತಿನ್ನೋಣ' ಎಂದು ಗೆಳೆಯ ಭುಜವಿಡಿದು ಕುಳ್ಳಿರಿಸಿದನು. ಸರಿ, ಊಟದ ಮೊದಲು ಕೈತೊಳೆಯೋಣ ಎಂದುಕೊಂಡು ನೀರಿನ ಹಂಡೆಗೆ ಕೈಯಿಟ್ಟರೆ ಅದರೊಳಗಿನ ಎಣ್ಣೆಯೋಪಾದಿಯ ಜಿಡ್ಡಿನ ಅಂಶ ಕೈಗೆ ಮೆತ್ತಿಕೊಂಡು ವಿಚಿತ್ರ ಅಸಹ್ಯವನ್ನು ತಂದಿತು. ಇಷ್ಟಾದರೂ ಪರೋಟ ತಿನ್ನುವ ಆಸೆ ಮಾತ್ರ ನಿಲ್ಲಲಿಲ್ಲ. ಗೆಳೆಯನೊಡನೆ ಕುಂತಿದ್ದೇ ತಡ ಎರಡೆರಡು ಪರೋಟ' ಎನ್ನುವ ದನಿಗೆ ಒಳಗಿನಿಂದ ಒಂದು ವ್ಯಕ್ತಿ ದನಿಗೂಡಿಸಿ ಎರಡು ಪ್ಲೇಟ್ ಹಿಡಿದು ಬಂದಿತು. ಕೆದರಿದ ತಲೆಯ, ಕೊಂಚ ಬಾಗಿದ ಬೆನ್ನಿನ, ಹೊಗೆಯಿಂದ ಕೆಂಪಾದ ಕಣ್ಣುಗಳ, ರಸ ಆರಿದ ತುಟಿಗಳ, ಒತ್ತೊತ್ತಾಗಿ ಬೆಳೆದ ಗಡ್ಡ, ಅದಕ್ಕೆ ಹೊಂದಿಕೊಂಡಿರುವ ಮೀಸೆ ಇಷ್ಟೆಲ್ಲ ಹೊದ್ದುಕೊಂಡ ಮನುಷ್ಯ ಬಂದದ್ದು ಕಂಡು ಪರೋಟ ತಿನ್ನುವ ಬಯಕೆ ತನಗೆ ತಾನೇ ಹಿಂಗಿಹೋಯಿತು.

ಆ ಮನುಷ್ಯನ ವಿಕಾರಾಕೃತಿ ಮನದಲ್ಲಿ ಗಟ್ಟಿಯಾಗುವ ಮೊದಲೇ ಪರೋಟದ ಬಿಸಿ ಕೈತಾಗಿತು. ಕೈತಾಗಿ ಬಾಯಿಗಿಟ್ಟ ಕೂಡಲೇ ಲೋಕದ ಸಮಸ್ತವೂ ಮರೆಯಿತು. ಮೊದಲ ರುಚಿ. ಪರೋಟದ ಪದರು ಪದರನ್ನೂ ಬಿಚ್ಚಿ, ಅದನ್ನು ಸುರುಳಿಯಾಕಾರದಲ್ಲಿ ಸುತ್ತಿ ಸೇತ್ವದಲ್ಲಿ ಅದ್ದಿ ತಿನ್ನತೊಡಗಿದೆ. ಸೇವ್ವ ಯಾವುದರದು ಎನ್ನುವ ಯಾವ

ಗೊಂದಲವೂ ನನಗಿರಲಿಲ್ಲ. ಏಕೆಂದರೆ ಸಕಲವನ್ನೂ ಸೇವಿಸುವವರಿಗೆ ಇದನ್ನು ಕುರಿತು ಚಿಂತಿಸುವ ಗೊಡವೆಯೇ ಇರಲಾರದು. ತಿನ್ನುತ್ತಾ ತಿನ್ನುತ್ತಾ ಬಾಯಿ ಚಪ್ಪರಿಸಿದಷ್ಟೂ ಅದರ ರುಚಿ ಇಮ್ಮಡಿಗೊಳ್ಳುತ್ತಿತ್ತು. ಹಾಗೆ ತಿನ್ನುವುದರೊಂದಿಗೆ 'ಸಾಬಿ ಹೋಟ್ಲಿ ಪರೋಟ ಒಮ್ಮೆಯಾದ್ರು ತಿನ್ನೋಕು' ಎನ್ನುವ ವಾರ್ಡನ್ ಸ್ನೇಹಿತರ ಮಾತು ಪದೇ ಪದೇ ನೆನಪಾಗುತ್ತಿತ್ತು.

ಇಲ್ಲಿಂದ ಶುರುವಾದ ಪರೋಟ ಯಾತ್ರೆ ಸದ್ದಿಲ್ಲದೆ ಐದು ರೂಪಾಯಿ ಜೇಬಿನಲ್ಲಿ ಕಂಡ ಕೂಡಲೇ ಮುಂದುವರಿಯುತ್ತಿತ್ತು. ಒಮ್ಮೆ ಮಾರುಕಟ್ಟೆಯ ಶೆಟ್ಟಿ



ಅಂಗಡಿಯ ಮುಂದೆ ನಿಂತಿರುವಾಗ ಇದ್ದಕ್ಕಿದ್ದಂತೆ ಯಾರೋ ಬಂದು 'ಯಾಕಪ್ಪಾ ಸುಮಾರು ದಿನದಿಂದ ಹೋಟ್ಲಿಗೆ ಬಂದಿಲ್ಲ' ಎಂದು ಕೇಳಿದರು. ತಿರುಗಿ ನೋಡಿದರೆ ಪರೋಟ ಸಾಬಿ. ಅತ್ಯಾಶ್ಚರ್ಯ. ಮಳೆ ಬಂದು ಕೊಚ್ಚೆ ಕೆಸರಿನ ರಾಡಿಯಾಗಿದ್ದ ಮಾರುಕಟ್ಟೆಯಲ್ಲಿ ಈ ಮನುಷ್ಯ ಇನ್ನೊಂದು ರಾಡಿಯಂತೆ ಕಂಡನು. ಅಲ್ಲಿನ ಜನರ ಗಜಿಬಿಜಿ ಸದ್ದು ಹೇಗಿತ್ತೋ ಹಾಗೆ ಅಲ್ಲಿನ ಕೆಸರೂ ಕಾಣುತ್ತಿತ್ತು. ಮೊದಲೇ ಈ ಮನುಷ್ಯ ವಿಚಿತ್ರ ಈಗ ಕೆಸರನ್ನೆಲ್ಲ ಕಾಲಿಗೆ ಮೆತ್ತಿಸಿಕೊಂಡು, ಮೋಟುಬೀಡಿ ತುಟಿಯಲ್ಲಿ ಸಿಕ್ಕಿಸಿಕೊಂಡು, ಇರುವ ಮೂರು ಕೂದಲನ್ನು ಕೆದರಿಕೊಂಡು, ಅದಕ್ಕೊಂದಿಷ್ಟು ಕೆಸರು ಮೆತ್ತಿಸಿಕೊಂಡು ಮೊದಲು ಕಂಡದ್ದಕ್ಕಿಂತಲೂ ಈಗ ಇನ್ನೂ ವಿಚಿತ್ರವಾಗಿ ಕಾಣುತ್ತಿದ್ದನು.

ಇದ್ದಕ್ಕಿದ್ದಂತೆ ಹೀಗೆ ಸಿಕ್ಕಿ, ಆಕಸ್ಮಿಕವಾಗಿ ಎದುರಾದ ಈ ಪ್ರಶ್ನೆಗೆ ಉತ್ತರ ಹೊಳೆಯದೆ ತಬ್ಬಿಬ್ಬಾದರೂ, ಸಾವರಿಸಿಕೊಂಡು ಇಲ್ಲ ಸುಮ್ಮನೆ' ಎಂಬ ಹಾರಿಕೆಯ ಉತ್ತರ ನೀಡಿದೆ. ಅದೇನನ್ನಿಸಿತೋ ಆ ಸಾಬಿಗೆ 'ದುಡ್ಡಿಲ್ಲದಿದ್ದರೂ ಪರವಾಗಿಲ್ಲ ಬಂದು ಹೋಗಪ್ಪ ಎಂದು ಹೇಳಿ 'ದುಡ್ಡು ಇವತ್ತಿರದೆ ನಾಳೆ ಹೊಯ್ತದೆ' 'ದುಡ್ಡು ಇನ್ನೊಮ್ಮೆ ಕೊಟ್ರಾತು' ಎಂದು ಹೇಳಿದನು. ಮನದ ಮೂಲೆಯಲ್ಲೆಲ್ಲೋ ಖುಷಿಯ ಸಿಂಚನ ಮೂಡಿತು.

ಆದರೂ ಅದೇನೋ ಅನುಮಾನ. 'ಇನ್ನು ಯಾಕೀಗೆ ನನ್ನೇ ಕೇಳ್ದ , ಇನ್ಯಾರೂ ಬರೋದಿಲ್ವೆ ಇನ್ನ ಹೋಟಲ್ಗೆ' ಎಂದು ಏನೇನೋ ಅನುಮಾನ ಕಾಡಿಸಲು ಪ್ರಾರಂಭಿಸಿತು. ಅದೇನಾದರು ಆಗಲಿ ಮುಂದಿನ ವಾರ ಒಮ್ಮೆ ಹೋಗಿಬಂದರೆ ಆಯಿತೆಂದುಕೊಂಡು ಸುಮ್ಮನೆ ಮುಂದುವರಿದೆ.

ಒಂದು ವಾರದ ನಂತರ ಅಣ್ಣ ಮತ್ತೊಮ್ಮೆ ಐದು ರೂ ಕೈಗಿತ್ತರು. ಸಿಕ್ಕಿದ್ದೇ ತಡ ಮನಸ್ಸು ಸಾಬಿ ಪರೋಟದತ್ತ ಮುನ್ನುಗ್ಗಿತು. ಹಾಸ್ಟೆಲ್‌ನ ಗೆಳೆಯರ ಕಣ್ತಪ್ಪಿಸಿ ಸಾಬಿ ಹೋಟೆಲೆ ನುಗ್ಗಿ ಎರಡು ಪರೋಟ ಆರ್ಡರ್ ಮಾಡಿದೆ. ಈ ದಿನ ಹಿಂದೆಂದಿಗಿಂತಲೂ ಕೊಂಚ ಭಿನ್ನವಾಗಿ ಸಾಬಿ ಕಾಣುತ್ತಿದ್ದ, ಕೊಳಕು ಆ ಹೋಟೆಲನ್ನು ಅವನನ್ನು ಕೊಂಚವೂ ಬದಲಿಸಲಿರಲಿಲ್ಲ. ಆದರೂ ಅವನ ದಟ್ಟ ಗಡ್ಡದ ನಡುವೆ ಮೂಡಿದ ಬೆಳದಿಂಗಳಂತಹ ನಗು ಅವನನ್ನು

ಕೊಂಚ ಭಿನ್ನವಾಗಿ ಪರಿಚಯಿಸಿತ್ತು. ಅದೇನೋ ಉತ್ಸಾಹ, ಹುಮ್ಮಸ್ಸು, ಗೆಲುವು ಇವೆಲ್ಲ ಬೆರತ ರೀತಿಯಲ್ಲಿ ಅವನು ಕಾಣುತ್ತಿದ್ದ. ಬಡಿಸುವಾಗಲಂತೂ ಅವನು ಇನ್ನಿಲ್ಲದ ಲವಲವಿಕೆಯಿಂದ ಕೂಡಿದಂತೆ ಕಾಣುತ್ತಿದ್ದ. ತಿಂದಾದ ಮೇಲೂ ಸಹ. “ಇನ್ನೊಂದು ಬೇಕಾ ಪುಟ್ಟ, ದುಡ್ಡಿಲ್ಲದಿದ್ದರು ಪರವಾಗಿಲ್ಲ. ನಾಳೆ ಕೊಡುವಿಯಂತೆ, ಕೊಡದಿದ್ದರು ನಡೆಯುತ್ತೆ, ತಗೋ ಹೊಟ್ಟೆ ತುಂಬ ತಿನ್ನು ಎಂದೇಳಿ ನನ್ನನ್ನು ಅತ್ಯಂತ ಮುಜುಗರಕ್ಕೆ ಈಡುಮಾಡುತ್ತಿದ್ದ. ತಿಂದು ಹೊರಬಂದೆ. ಬಾಗಿಲವರೆಗೂ ಬಂದು 'ಮತ್ತೆ ಬಾರ್‍ತಾ ಇರು' ಎಂದೇಳಿ ಮುಗುಳ್ನಕ್ಕು ಒಳಹೋದ.

ತಲೆಯಲ್ಲಿ ಇನ್ನೊಂದಿಷ್ಟು ಗೊಂದಲ ಶುರುವಾಯ್ತು. ಗೆಳೆಯರೊಂದಿಗೆ ಇದೆಲ್ಲ ಹೇಳೋಣವೆಂದರೆ ಒಂಥರಾ ಸಂಕೋಚ. ಈ ಸಂಕೋಚ ಇನ್ನಷ್ಟು ದಿನಗಳ ಕಾಲ ಮುಂದುವರೆದು ಹೋಟೆಲ್‌ನ ಸಹವಾಸವೂ ಮುಂದುವರೆಯಿತು.



ಒಂದು ದಿನ ಹೋಟೆಲ್ ಊಟದಲ್ಲಿ ಮಗ್ನನಾಗಿದ್ದೆ. ಸಾಬಿ ಇದ್ದಕ್ಕಿದ್ದಂತೆ ಕೈಹಿಡಿದು 'ಮನೆಗೋಗಿದ್ದು ಬರೋಣ ಬಾ' ಎಂದು ಸರಸರನೆ ಎಳೆದುಕೊಂಡು ನಡೆದನು. ಎಲ್ಲಿಗೆ, ಯಾರ ಮನೆಗೆ, ಯಾಕೆ ಹೀಗೆ ಏನೆಲ್ಲ ಪ್ರಶ್ನೆ ಕೇಳಬೇಕಿತ್ತೋ ಅದೆಲ್ಲಕ್ಕೂ ಮೀರಿ ಅವನ ಹಿಂದೆ ನಡೆದೆ. ಸಾಬಿ ತನ್ನ ಮನೆಗೆ ಕರೆದೊಯ್ದು ತನ್ನೆಂಡತಿ ಮುಂದೆ ಕುಳ್ಳಿರಿಸಿದನು. 'ಬಾನು ಇಲ್ನೋಡು ಮಗ ಬಂದ, ಕಣ್ಣಿಟ್ಟು ನೋಡು, ಮಾತಾಡು' ಎಂದು ಏನೇನೋ ಮಾತನಾಡಿದನು. ಆದರೂ ಬಾನಮ್ಮ ಎದ್ದೇಳಲಿಲ್ಲ. ಎಷ್ಟೋ ಹೊತ್ತಾದ ಮೇಲೆ 'ಸ್ಕೂಲಿಗೆ ಟೇಮಾಯ್ತು ನಾ ಹೋಗ್ತಿನಿ' ಎಂದಾಗ ಬಾನಮ್ಮ ಕಣ್ಣೆರೆಯಲು ಪ್ರಾರಂಭಿಸಿದಳು. ಸುಕ್ಕುಸುಕ್ಕಾದ ಮುಖ, ಜೋತುಬಿದ್ದ ಕಿವಿಗಳು, ಮುಖದ ತುಂಬೆಲ್ಲಾ ನೇತಾಡುತ್ತಿದ್ದ ತಲೆ ಕೂದಲುಗಳು ಇವೆಲ್ಲಾ ಸೇರಿ ಬಾನಮ್ಮನ ಆಳದಲ್ಲಿ ದೊಡ್ಡದೊಂದು ದುಃಖದ ಕೊಡವೇ ಕುಳಿತಿದೆ ಎನಿಸಿತು. ಸ್ಕೂಲಿಗೆ ಹೊತ್ತಾದರೂ ಎದ್ದೇಳುವ ಮನಸ್ಸಾಗದೆ ಅಲ್ಲೇ ಕುಳಿತೆ.ಸಾಬಿಯ ಹೋಟೆಲ್‌ಗೆ ವಿರುದ್ಧ ರೀತಿ ಮನೆಯಿದೆ. ಅಚ್ಚುಕಟ್ಟಾದ ಮನೆ. ಒಪ್ಪ ಓರಣವಾಗಿ ಜೋಡಿಸಿಟ್ಟ ಮನೆ ಸಾಮಾನುಗಳು, ಅಡಗೆಮನೆ, ಹಜಾರ, ಸ್ನಾನದ ಮನೆ, ಮಲಗುವ ಕೋಣೆ ಎಲ್ಲಾ ಭೇದವಿಲ್ಲದಂತೆ ಇಂದೇ ಕಡೆ ನೆಲೆನಿಂತು ಬಂದವರಿಗೆಲ್ಲಾ ಕಾಣುತ್ತಿದ್ದವು. ಗೋಡೆಯ ಮೇಲೆ ಕಣ್ಣಾಡಿಸಿದಷ್ಟೂ ಉರ್ದುವಿನಿಂದ ಬರೆದ ಏನೇನೋ ಪೋಟೋಗಳು ವಿರಾಜಮಾನವಾಗಿದ್ದವು. 'ಇಷ್ಟು ಅಚ್ಚುಕಟ್ಟಾದ ಮನೆಯಿಟ್ಟಿರುವ ಸಾಬಿ ಹೋಟೆಲ್ ಮಾತ್ರ ಏಕೆ ಹಾಗಿಟ್ಟಿದ್ದಾನೆ' ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಲೇ ಎಲ್ಲವನ್ನೂ ಏಕಚಿತ್ತದಿಂದ ನೋಡಿ ಮೌನತ್ವಕ್ಕೆ ಶರಣಾಗಿದ್ದೆ.

ಇದೇ ಸಂದರ್ಭದಲ್ಲಿ ಬಾನಮ್ಮ ಅರೆತೆರೆದ ಕಣ್ಣಿನಿಂದ ನನ್ನನೊಮ್ಮೆ ನೋಡಿದಳು. ಅವಳ ಕಣ್ಣಲ್ಲಿ ಅದೆಂತದೋ ಸುಖ ಬಂದು ನಿಂತಿತು. ಜೊತೆಗೆ ಕಣ್ತುಂಬ ನೀರೂ ತುಂಬಿತು. ಏನೋ ಹೇಳಲು ಹೋದವಳು ಹಾಗೇ

ಮೂರ್ಛೆ ಹೋದಳು. ಸಾಬಯ್ಯ ತಕ್ಷಣವೇ ಬಂದು ಸ್ವಲ್ಪ ನೀರು ಕುಡಿಸಿದನು. ನಂತರ 'ಬಾ ಹೋಗೋಣ' ಎಂದು ನನ್ನ ಕೈಯಿಡಿದು ಹೊರನಡೆದನು. ನಾನು ಬಾನಮ್ಮನನ್ನೇ ನೋಡುತ್ತಾ ಮನೆಯ ಹೊಸ್ತಿಲ ದಾಟಿದೆನು. ಮನದಲ್ಲಿ ಅದೇನೋ ಕಳವಳ, ನೋವು, ಏನೋ ಬಾಧೆ, ಎಲ್ಲವೂ ಒಮ್ಮೆಲೇ ಮೈದುಂಬಿ ಬಾನಮ್ಮ ಮತ್ತೆ ಮತ್ತೆ ಎದೆಯಾಳದಲ್ಲಿ ಇಳಿಯಲು ಶುರುಮಾಡಿದಳು. ಸಾಬಯ್ಯ ಹೋಗುವಾಗ 'ಮೂರೊರ್ಷದಿಂದ ಹಿಂಗೆ ಪುಟ್ಟ, ಇವತ್ತು ನಮ್ಮೇರಿಯಾ ಹುಡುಗ ಓಡ್ಬಂದು ನಿನ್ನೆಂಡ್ತಿ ಯಾಕೋ ಒದ್ದಾಡ್ತಾವಳೆ ಅಂದ ಅದ್ರೆ ನಿನ್ನ ಕರ್ಕೊಂಡು ಹೋದೆ' ಎಂದು ಕಣ್ಣಲ್ಲಿ ನೀರು ತುಂಬಿಕೊಂಡ. ನನ್ನೇಕೆ ಕರ್ಕೊಂಡೋದೆ? ನಿಂಗೆ ಮಕ್ಕಳಿಲ್ವ? ಬಾನಮ್ಮನಿಗೆ ಏನಾಗಿದೆ?ಯಾಕೆ ಮೂರೊರ್ಷ ದಿಂದ ಹಾಗಿದ್ದಾಳೆ?ನೀನೇಕೆ ಎಲ್ಲಾ ಕಳ್ಕೊಂಡಂಗೆ ಯಾವಾಗ್ಲೂ ಇರ್ತಿಯಾ?ಎಂಬ ಪ್ರಶ್ನೆಗಳ ಮಳೆಯನ್ನೇ ಅವನ ಮೇಲೆ ಸುರಿಸಬೇಕೆಂದುಕೊಂಡೆ. ಆದರೆ ಅವನ ಬಾಡಿಹೋದ ಮುಖ ಕಂಡು ಏನನ್ನೂ ಕೇಳದೆ ಸುಮ್ಮನೆ ಅವನನ್ನು ಹಿಂಬಾಲಿಸಿದೆ. ಇಷ್ಟೊತ್ತಿಗಾಗಲೇ ಸ್ಕೂಲ್ ಶುರುವಾಗಿದ್ದ ಕಾರಣ, ಸೀದಾ ಹಾಸ್ಟೆಲ್‌ಗೆ ಬಂದು ಏನೋ ನೆಪ ಹೇಳಿ ಮಲಗಿಕೊಂಡೆ. ಸಾಬಯ್ಯನ ಕೇಳಬೇಕೆಂದ ಪ್ರಶ್ನೆಗಳು ನನ್ನನ್ನು



ಸುತ್ತುವರೆದು, ತನ್ನದೇ ಆದ ರೀತಿಯಲ್ಲಿ ಉತ್ತರವನ್ನು ಕಂಡುಕೊಳ್ಳಲು ಯತ್ತಿಸುತ್ತಿದ್ದವು.

ಮಧ್ಯಾಹ್ನವೇ ಗಾಢ ನಿದ್ರೆ ಆವರಿಸಿತು.

"ಲೋ ನೋಡೋ ಇನ್ನೂ ಆ ಸಾಬ್ರು ಜೊತೆ ಏನೋ ಸಂಬಂಧ ಬೆಳಸವ್ನೆ,

'ಆ ಸಾಬಯ್ಯನ ನೋಡಿದ್ರೆ ಇನ್ನಿಗೆ ಅವರಪ್ಪನ ನೆನಪು ಬತ್ತದಂತೆ ಕಣ್ರೋ'

ಹ್ಞ .. ಹ್ಞ.. ಹ್ಞ..

"ಒಟ್ನಲ್ಲಿ ಪಟ್ಟಕ್ಕೆ ಬಂದ ಹೈದನಿಗೆ ಒಳ್ಳೆ ಪ್ಯಾಮಿಲಿ ಸಿಕ್ತು ಕಣ್ರೋ'

'ಆಯಮ್ಮನಿಗೆ ಇನ್ನೂ ನೋಡಿದ್ದ ಕೂಡಲೇ ಅಳು ಬಂದ್ಬಿಡ್ತಂತೆ

ಎಂದೆಲ್ಲಾ ಹಾಸ್ಟೆಲ್ ಹುಡುಗರು ನನ್ನ ಈ ಸಾಬಯ್ಯನ ಸಂಬಂಧದ ಪ್ರಸಂಗ ಕೇಳಿ ಸುತ್ತ ನಗುತ್ತಿರುವಂತೆ ಭಾಸವಾಗಿ ಕನಸಿನ ಲೋಕದಿಂದ ತಟ್ಟಂತ ಜಾಗೃತ ಸ್ಥಿತಿಗೆ ಮರಳಿದೆ.

ಇದೆಲ್ಲದರ ನಡುವೆ ವಿಚಿತ್ರವಾದ ಸಂಬಂಧದ ಎಳೆಯೊಂದು ಮನದ ಮೂಲೆಯಲ್ಲಿ ಕೂತು ಬಾನಮ್ಮನ ಬಾನಂಗಳಕ್ಕೆ ಜಿಗಿಯುತ್ತಿತ್ತು. ಮತ್ತೆ ಮತ್ತೆ ಸಾಬಯ್ಯನ ಬೇಸತ್ತ ಮುಖ ಕಣ್ಣಾಳದಲ್ಲಿ ಇಳಿದು ಮಿಂಚಿ ಮರೆಯಾಗುತ್ತಿತ್ತು. ಓದು, ಬರಹದ ನಡುವೆ ಆಗಾಗ್ಗೆ ಇವರಿಬ್ಬರ ನೆನಪು ಮುಸುಕು ಮುಸುಕಾಗಿ ಪುಟದ ಅಕ್ಷರಗಳಾಗುತ್ತಾ ಸಾಗಿಬಂದಿತು.

ಇದ್ದ ಮುನ್ಸಿಪಲ್ ಹೈಸ್ಕೂಲ್ ಸಾವಿರ ಸಂಖ್ಯೆಯನ್ನು ಹೊಂದಿತ್ತು. ನಾನಿದ್ದ ತರಗತಿಯಲ್ಲೇ ನೂರೈವತ್ತು ವಿದ್ಯಾರ್ಥಿಗಳಿದ್ದೆವು. ಇತ್ತೀಚೆಗೆ ನನ್ನ ಅಸಮಾಧಾನದ ಮುಖ ಕಂಡು ಹಲವರು ಪ್ರಶ್ನಿಸಿದರೂ ಉತ್ತರ ಹೇಳಲು ನಾನು ಸಿದ್ಧನಿರಲಿಲ್ಲ. ಸಿದ್ಧನಿರಲಿಲ್ಲ ಎನ್ನುವುದಕ್ಕಿಂತ ಉತ್ತರವಾವುದೆಂದು ತಿಳಿಯದ ಸ್ಥಿತಿಯಲ್ಲಿ ನಾನಿದ್ದೆ. ಅಬ್ದುಲ್ಲಾ ಆತ್ಮೀಯನಾದ ಕಾರಣ ಹೇಳೋಣವೆಂದರೆ 'ನಮಗೂ ಈ ಧರ್ಮಕ್ಕೂ ಏನು ಸಂಬಂಧ' ಎಂದು ಯೋಚಿಸುತ್ತಾನೆನೋ ಎಂದು ಹೆದರಿ ನನ್ನೊಳಗೇ ಅದುಮಿಡಲು ಪ್ರಯತ್ನಿಸುತ್ತಿದ್ದೆ.

ಹೀಗಿರುವಾಗ ಒಂದು ದಿನ ಸಾಬಯ್ಯನ ಹೋಟೆಲ್‌ನಲ್ಲಿ ಪರೋಟ ತಿನ್ನುತ್ತಿದ್ದೆ. ಪಕ್ಕದಲ್ಲಿದ್ದ ಒಬ್ಬ 'ಸಾಬಯ್ಯ ನಿನ್ನ ಮಕ್ಳು ಎಷ್ಟು?ಎಲ್ಲಿದ್ದಾರೆ?' ಎಂದು ಕೇಳಿದ. ತಕ್ಷಣ ಸಾಬಯ್ಯ ಒಬ್ನೇ.. ಇಲ್ಲೇ ಕುಂತ ನೋಡಿ' ಎಂದು ಹೇಳಿ ನನ್ನನ್ನು ಅತ್ಯಾಶ್ಚರ್ಯದಲ್ಲಿ ಮುಳುಗಿಸಿದ. ಇದೇನು ಹೀಗೆ ಹೇಳಿದ ಸಾಬಯ್ಯ, ಸ್ನೇಹಿತರಿಗೆ ತಿಳಿದರೆ ಏನು ಗತಿ, ಅವರೆಲ್ಲ ಆಡಿಕೊಳ್ಳುವುದಿಲ್ಲವೇ' ಎಂದು ಏನೇನೋ ಭಯ, ಆತಂಕ ಮನದ ಮೂಲೆಯ ಸುತ್ತ ಸುತ್ತುತ್ತಾ ಬೇಗನೆ ತಿಂದು ಸಾಬಯ್ಯನಿಗೂ 'ಬರ್ತೇನೆ' ಎಂದೂ ಸಹ ಹೇಳದೆ ಹಾಸ್ಟೆಲ್‌ಗೆ ಬಂದೆ.



"ಲೋ ನಾನೂ ದಿನಾ ನೋಡ್ತಿದ್ದೀನಿ..ಅದೆಲ್ಲೋ ಹೋಯ್ತಿಯ, ಮತ್ತೆ ಬತ್ತೀಯ, ಸಪ್ಪಗಿರ್ತೀಯ, ಕೇಳಿದ್ರೆ ಏನೂ ಹೇಳಲ್ಲ, ಏನ್ ನಿನ್ನ ರೋಗ' ಎಂದು ಹಾಸ್ಟೆಲ್ ಗೆಳೆಯ ಸಿದ್ದರಾಜು ಕೇಳಿದ. ಏನಿಲ್ಲವೆಂದು ಸಬೂಬು ಹೇಳಿ ಬ್ಯಾಗ್ ನೇತಾಕಿಕೊಂಡು ಸ್ಕೂಲ್‌ಗೆ ಹಾಜರಾದೆ. ತರಗತಿ ಉದ್ದಕ್ಕೂ ಸಾಬಯ್ಯನ ಮಾತು ನೆನಪಿಗೆ ಬಂದು, ಸಂಜೆ ಹೋಗಿ ಕೇಳಾನ 'ಯಾಕಿಂಗಂದೆ' ಎಂದು ಮನದಲ್ಲೇ ಕೋಪವ ತಾಳಿ ಸಂಜೆಯಾಗುವುದನ್ನೇ ಕಾದು ಕುಳಿತೆ.

ಸಂಜೆ ಸಾಬಯ್ಯನ ಅಂಗಡಿ ಹತ್ತಿರ ಬಂದೆ. ಸಿಕ್ಕರೆ ಬೈಯಲೇಬೇಕು. ಇನ್ನೊಮ್ಮೆ ಬರುವುದಿಲ್ಲ ಎಂದು ಹೇಳಿಬಿಡಬೇಕೆಂದುಕೊಂಡು ಹೋಟೆಲ್ ಸುತ್ತೆಲ್ಲಾ ಹುಡುಕಿದೆ. ಸಾಬಯ್ಯ ಕಾಣಲಿಲ್ಲ. ಅಲ್ಲೇ ಇದ್ದ ಗುಜರಿ ಅಂಗಡಿಯವನು 'ಹೋಯ್ ಹುಡುಗ. ಇವತ್ತು ಅವನು ಬರಾಕಿಲ್ಲ, ಅವನೆಂಡ್ತಿ ಸತ್ತೋದ್ಲು' ಎಂದು ಹೇಳಿದ. ಮೈಯೆಲ್ಲ ಬೆವತು. ತಲೆತಿರುಗಿದಂತಾಗಿ ನಾಚಿಕೆ ಮನದ ಮೂಲೆಮೂಲೆಯಲ್ಲೂ ಆಕ್ರಮಿಸಿತು. ಕಾಲ ಮೀರುವ ಮೊದಲೇ ಬಾನಮ್ಮನ ನೋಡಲೇಬೇಕೆಂದುಕೊಂಡು ಅವನ ಮನೆ ಹತ್ತಿರ ದೌಡಾಯಿಸಿದೆ. ದುಃಖದ ತೀವ್ರತೆಯೇ ಮೈವೆತ್ತಂತಿದೆ ಮನೆ. ರೋಧನೆ ಸುತ್ತಲಿನ ಪ್ರದೇಶವನ್ನೆಲ್ಲ ಆವರಿಸಿದೆ. ಜನರ ಹಿಂಡು ಅಲ್ಲೇ ಸುತ್ತುವರಿದು ನಿಂತಿದೆ.

ಇವರನ್ನೆಲ್ಲ ಹೇಗೋ ಬಿಡಿಸಿ ಜಾಗ ಮಾಡಿ ಹೆಣದ ಹತ್ತಿರ ತಲುಪಿ ಬಗ್ಗೆ ನೋಡಿದೆ. 'ಬಂದೆಯ ಕಂದಾ' ಎಂದು ಕೂಗಿದ ದನಿಯಲ್ಲಿ ಬಾನಮ್ಮ ನಕ್ಕು ಮಾತನಾಡಿದಂತಾಗಿ ಕಣ್ಮುಚ್ಚಿದೆ. ಮತ್ತೆ ಕಣ್ಣೆರೆದು ಸಾಬಯ್ಯನ ಹುಡುಕಾಟದಲ್ಲಿ ತೊಡಗಿದೆ. ಕೊನೆಗೂ ಸಾಬಯ್ಯ ಸಿಕ್ಕಸಿಕ್ಕಿ ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಕಂಬನಿ ಮೈದುಂಬಿ ಆ ಕಡೆ ಮುಖಮಾಡಿದ. ನೂರು ಮಾತಿಗಿಂತ ಒಂದು ಮೌನ ಮೇಲಲ್ಲವೇ...

ಇಷ್ಟೆಲ್ಲದರ ನಡುವೆ ಕೊನೆಗೂ ಎಸ್ಸೆಸೆಲ್ಸಿ ಮುಗಿಯಿತು. ನಂತರ ಬೆಂಗಳೂರು ಕೈಬೀಸಿ ಕರೆದು ತನ್ನೊಡಲಲ್ಲಿ ಬಚ್ಚಿಟ್ಟುಕೊಂಡಿತು. ಇಷ್ಟಾದರೂ ಓದಿದ ಸ್ಕೂಲು, ಸಾಬಯ್ಯನ ಪರೋಟ ಹೋಟೆಲ್, ಹಾಸ್ಟೆಲ್ ಇವು ಮರೆಯಲಾರದ ತಾಣಗಳಾಗಿ ಮಾರ್ಪಟ್ಟವು. ಬೆಂಗಳೂರಿಂದ ಊರಿಗೆ ಹೊರಡುವಾಗ ಇಲ್ಲಿಳಿದು ಈ ಮೂರನ್ನು ನೋಡಿ ಹೋಗದಿದ್ದರೆ ಮನಸ್ಸಿಗೆ ಸಮಾಧಾನವೇ ಆಗುತ್ತಿರಲಿಲ್ಲ. ಆದರೆ ಒಂದು ಕೊರತೆ ನಿತ್ಯ ಕಾಡಿಸುತ್ತಿತ್ತು. ಸ್ಕೂಲು, ಹಾಸ್ಟೆಲ್ ಇದ್ದಂತೆ ಸಾಬಯ್ಯನ ಹೋಟೆಲ್ ಕೂಡ ಇತ್ತು. ಆದರೆ ಅದರೊಳಗೆ ಸಾಬಯ್ಯ ಮಾತ್ರ ಇರುತ್ತಿರಲಿಲ್ಲ. ಯಾರನ್ನಾದರೂ ಕೇಳಿದರೆ ಗೊತ್ತಿಲ್ಲ ಎನ್ನುವಂತೆ ಉತ್ತರವನ್ನು ನೀಡುತ್ತಿದ್ದರು.

ಇದು ಸುಮಾರು ಹತ್ತು ವರ್ಷ ಹೀಗೇ ಮುಂದುವರಿಯಿತು.

ಕೆಲಸ ಸಿಕ್ಕಿತ್ತು. ಊರಿಗೆ ಬಂದೋಗುವುದು ಕಡಿಮೆಯಾಗಿತ್ತು. ಬಂದಾಗ ಈ ಮೂರು ಸ್ಥಳಗಳ ಭೇಟಿಗಾಗಿ ಮನಸ್ಸು ಹಾತೊರೆಯುತ್ತಿತ್ತು. ಇತ್ತೀಚೆಗೆ ರಸ್ತೆ ಅಗಲೀಕರಣದ ಹಿನ್ನೆಲೆಯಲ್ಲಿ ಸಾಬಯ್ಯನ ಅಂಗಡಿಯೂ ನಿರ್ನಾಮವಾಗಿತ್ತು. ಆಗಾಗಿ ಉಳಿದೆರಡೇ ನೆನಪಿನ ಬುತ್ತಿಯನ್ನು ಹಿಗ್ಗಿಸುತ್ತಿದ್ದವು.

ಹೀಗಿರುವಲ್ಲಿ ಒಂದು ದಿನ ಹಾಸ್ಟೆಲ್ ಹೋಗಿದ್ದೆ. ಕೊಳಕಿನಿಂದ ಕೂಡಿದ್ದ ಅಂದಿನ ಹಾಸ್ಟೆಲ್‌ಗಿಂತ ಇಂದು ಎಷ್ಟೋ ಪಾಲು ಉತ್ತಮವಾಗಿ ಹೈಟೆಕ್ ಆಗಿತ್ತು. ಸುತ್ತ ಹಸಿರು ಮೈಚಾಚಿ ನಿಂತಿತ್ತು. ಮರಗಳು ಎತ್ತರೆತ್ತರಕ್ಕೆ ಬೆಳೆದು ಹಾಸ್ಟೆಲನ್ನು ಸೊಂಪಾಗಿಟ್ಟಿದ್ದವು. ಹಾಸ್ಟೆಲ್ ಹೊರಗೂ ಒಳಗೂ ಮರಗಳ ಸಾಲುಗಳು ಎದ್ದಿದ್ದವು. ಮನಸ್ಸು ಇವುಗಳನ್ನು ನೋಡಿ ಆನಂದಿಸುತ್ತಾ ಹಳೆಯ ನೆನಪುಗಳಿಗೆ ಜಾರುತ್ತಿದ್ದಂತೆ ಯಾರೋ ಹಾಸ್ಟೆಲ್ ಹೊರಗಿನ ಮರದ ಬುಡದಿಂದ 'ಗುರುವಾ' ಎಂದು ಕರೆದಿದ್ದು ಕೇಳಿಸಿತು. ಯಾವುದೋ ಪರಿಚಿತ ದನಿ. ತನ್ನ ಕಡೆಯೇ ಕೈಬೀಸಿ ಕರೆದು ಹತ್ತಿರ ಬಾ ಎನ್ನುತ್ತಿದೆ. 'ಇದ್ಯಾರೀ ಹುಚ್ಚ, ನನ್ನೇಕೆ ಕರೆತಿದ್ದಾನೆ, ಹಸಿವಿರಬಹುದು, ಎರಡು ರೂಪಾಯಿ ಕೊಟ್ಟರಾಯಿತೆಂದು' ಮುಂದೆ ಸಾಗಿದೆ.

ಹತ್ತಿರ ಹೋದಂಗೆಲ್ಲ ಅಪರಿಚಿತ ಮುಖ ಪರಿಚಿತದೆಡೆಗೆ ಸಾಗಿತು. ಕೆದರಿದ ಕೂದಲಿನ, ಅಸಹ್ಯ ಕೊಳಕಿನ, ಕಂಬಳಿ ಹೊದ್ದ ವ್ಯಕ್ತಿ ತಟ್ಟನೆ ಸಾಬಯ್ಯನ ಮುಖವನ್ನು ಮನದಲ್ಲಿ ಅಚ್ಚತ್ತಿತು. ಒಮ್ಮೆಗೆ ಗಾಬರಿ, ಒಂದು ರೀತಿಯ ತಳಮಳ, ಏನೋ ಸಂಕಟ.

ಏನಾಯಿತು ಎಂದು ಕೇಳುವ ಮೊದಲೇ ನನ್ನ ಕೈ ಅವನ ಕೈಯಿಡಿಯಿತು. 'ಏಳು ಮನೆಗೋಗುವ' ಎಂದೆ. 'ಯಾರ ಮನೆ ಎನ್ನುವಂತೆ' ಗಾಬರಿಯಿಂದ ನೋಡಿದ. “ನಿನ್ನ ಮನೆ ಅಲ್ಲಿದೆ.. ಆದರೆ ಈ ಲೋಕವೇ ನನ್ನನೆ. ನಾನಿನ್ನ ಹತ್ರ ಬಂದ್ರೆ ಲೋಕದೊಳಗೆ ನೂರೆಂಟು ಪ್ರಶ್ನೆ.. ನೂರೆಂಟು ಮಾತು, ಬೇಡ ಬಿಡಪ್ಪ..' ಎಲ್ಲಿದ್ರೂ ನೀ ಚೆನ್ನಾಗಿರು. ಯಾವತ್ತಾದ್ರು ಸಿಕ್ತಿಯಾ ಅಂತ ಈ ಮರಗಳ ಕೆಳಗೆ ಇಷ್ಟು ವರ್ಷ ಕಳ್ದೆ, ನಿನ್ನ ನೋಡಿದ್ರಲಾ ಅಷ್ಟೇ ಸಾಕು' ಎಂದು ಆಕಾಶದ ಹಕ್ಕಿಯೊಂದು ಗರಿಗೆದರಿ ತನ್ನ ಗುರಿಯೆಡೆಗೆ ತಾನೇ ಸಾಗುವಂತೆ ಕೂಗಿದರೂ ಕೇಳದಂತೆ ದಾರಿಯುದ್ದಕ್ಕೂ ಸಾಗಿದನು.

ಅಸಹಾಯಕತೆಯೇ ಮೈವೆತ್ತಂತೆ ದಾರಿಯುದ್ದಕ್ಕೂ ಕಣ್ಣಿಟ್ಟು ನೋಡಿ ಕಂಬನಿದುಂಬಿದೆ. ನನ್ನೆದೆಯೊಳಗೆ ಸಾಬಿ ಸಾಬಯ್ಯ ಆದದ್ದು, ಈ ಗುರುರಾಜ ಅವನೊಳಗೆ ಗುರವಾ ಆಗಿದ್ದು ಹೇಗೆಂದು ತಿಳಿಯದೆ ಕಾಲನ ಕೈಯೊಳಗೆ ಲೀನವಾಗಿದ್ದೆ. ಲೀನವಾಗುತ್ತಲೇ ತಡೆಯದ ನೋವಿನ ಕಡಲೊಂದು ಕಾಲು ಸೋಕಿದಂತಾಗಿ ಅವನ ನಡೆದ ಹಾದಿಗೆ ನನ್ನೆಜ್ಜೆಗಳು ಮುಂದಡಿಯಿಟ್ಟವು.

+

# ೧೦. ಜಾಡಮಾಲಿ

**ಮಂಜುನಾಥ ವಿ.ಎಂ.**

ದೈತ್ಯ ಹಾರ್ಲೆ ಡೇವಿಡ್‌ಸನ್ ಮೋಟಾರ್‌ಸೈಕಲ್ ಸುಂಟರಗಾಳಿಯಂತೆ ನುಗ್ಗಿಹೋಗಿದ್ದರ ಪರಿಣಾಮ ಸಾವಧಾನವಾಗಿ ಎದ್ದು ಕುಳಿತಳು ಗಂಗಾ, ಚಳಿಗಾಲ, ಮಂಜು ಮಳೆಯಂತೆ ಎಡೆಬಿಡದೆ ಸುರಿಯುತ್ತಿತ್ತು. ಕತ್ತಲಿನ್ನೂ ಕರಗಿರಲಿಲ್ಲ, ರಾತ್ರಿ ನಿದ್ದೆ ಹತ್ತಿದ್ದೇ ತಡವಾಗಿ, ತೀರಿಹೋದ ತನ್ನ ಕಿರುಜಗತ್ತಿನ ಕುರಿತು ಗೊಣಗಾಡಿಕೊಂಡು ರೆಸ್ಟೋರೆಂಟ್ ಗೋಡೆಗೆ ತಬ್ಬಿ ಮಲಗುವುದು ಅಭ್ಯಾಸವಾಗಿ ಹೋಗಿದೆ. ಬೆಳಿಗ್ಗೆ ಏಳುವಾಗಲೂ ಗೊಣಗುವಿಕೆ ಪುನರಾವರ್ತನೆಯಾಗುವುದು. ಮೊದಲು ಕೆಫೆ ಡೇ ಮುಂಭಾಗದಲ್ಲಿ ಕುಳಿತುಕೊಳ್ಳುತ್ತಿದ್ದಳು. 'ಇಲ್ಲಿ ಅನಾಥರು, ಭಿಕ್ಷುಕರು ಇರುವಂತಿಲ್ಲ." ಮಿಲಿಟರಿಯಿಂದ ನಿವೃತ್ತಿ ಹೊಂದಿ, ಆಗಷ್ಟೇ ಕಾವಲುಗಾರ ವೃತ್ತಿಗೆ ಬಡ್ತಿ ಪಡೆದಿದ್ದ ಕೊಡಗಿನವನು ಗತ್ತಿನಲ್ಲಿ ಗಂಗಾಳಿಗೆ ಆದೇಶಿಸಿದ್ದ. ಅಂದಿನಿಂದ ರೆಸ್ಟೋರೆಂಟ್, ಬಾರ್, ಗ್ಯಾರೇಜ್ ವರಾಂಡಗಳಲ್ಲಿ ಮಲಗಿಕೊಳ್ಳುವಳು. ಒಂದು ಗಳಿಗೆ ಬಂಡೆಗಲ್ಲಿನಂತೆ ಕುಳಿತು ಗಟ್ಟಿಯಾಗಿ ಕಣ್ಣುಜ್ಜಿಕೊಂಡಳು. ರಸ್ತೆ ಆ ಬದಿಯ ಏರುಕಟ್ಟಡಗಳು, ಬ್ರಾಂಡೆಡ್ ಶೋರೂಮ್‌ಗಳು, ನೈಸ್ ಜೆಟ್, ಕಿಂಗ್‌ಫಿಶರ್ ಹೋಲ್ಡಿಂಗ್‌ಗಳು ಶುಭಗೊಂಡವು. ಕೂರಹೇನುಗಳು ಕಾಡತೊಡಗಿದವು. ಕೆರೆದಿದ್ದೇ ನರೆಗೂದಲ ಗುಚ್ಛ ಕೈಗೆ ದಕ್ಕಿತು. ಬೊಗಸೆಯಲ್ಲಿಡಿದು ನೋಡಿದಳು, ಆ ಕಾಲದ ನೆನಪು ಹಕ್ಕಿಯಂತೆ ಆಳದಿಂದ ಚಿಮ್ಮಿತು.

ಚಾಪೆ, ಬುಟ್ಟಿ ಹೆಣೆಯುವ ಬೂರನ ಕುಟುಂಬದೊಂದಿಗೆ ಗಂಗಾ ತೆಲುಗುನಾಡಿನಿಂದ ಕರ್ನಾಟಕಕ್ಕೆ ಬಂದಾಗ ಅವಳಿಗೆ ವಯಸ್ಸು ಇಪ್ಪತ್ತು. ಈಗ ಅರವತ್ತು ದಾಟಿದೆ. ಅಂದರೆ ಬರೋಬ್ಬರಿ ನಲವತ್ತು ವರ್ಷಗಳು ಈ ನೆಲದಲ್ಲಿ ದೇಹ ಮತ್ತು ಮನಸ್ಸು ಎರಡನ್ನೂ ಸವೆಸಿದ್ದಾಳೆ. ಸಾತನೂರು ಹತ್ತಿರ ನೀಲಗಿರಿತೋಪಿನ ಬಳಿ ಬೂರ ಬಿಡಾರ ಹೂಡಿದ. ಅನುಮತಿ ಕೇಳದೆ ತನ್ನೊಂದಿಗೆ ರೈಲು ಹತ್ತಿದ್ದರಿಂದ ಬೂರ ಗಂಗಾಳನ್ನು ಗದರುತ್ತಿದ್ದ, ಅವಳ ಮುಖ ಕಂಡರಾಗುತ್ತಿರಲಿಲ್ಲ. ಹಾಗೆ ನೋಡಿದರೆ ಗಂಗಾ ಬೂರನಿಗೆ ಹತ್ತಿರದ ಸಂಬಂಧಿಕಳೇ, ಆ ಕಾರಣಕ್ಕೆ ಉರಿದುಬೀಳುತ್ತಿದ್ದ, ನೆರೆಹೊರೆಯವಳಾಗಿದ್ದರೆ ಲೆಕ್ಕಿಸುತ್ತಿರಲಿಲ್ಲ. ಸಂಬಂಧಿಕರಲ್ಲಿ ಮಾತಿಗೆ ಸಿಲುಕಿಕೊಂಡರೆ ಜಾಲಿಮುಳ್ಳೊಳಗೆ ಬಿದ್ದಂತೆ, ಸತ್ತ ನಂತರವೂ ಬದುಕಗೊಡರು. ಇವನ ಹೆಂಡತಿ ಅಲ್ಲೂರಮ್ಮ, 'ಬುಟ್ಟಿಚಾಪೆ ಹೆಣೆಯಾಕೆ ಆಳು ಬೇಕು ಸುಮ್ಮಿರು.' ಎಂದು ಗಂಡನನ್ನು ಸಮಾಧಾನಪಡಿಸುತ್ತಿದ್ದಳು. ಬೆಳಿಗ್ಗೆ ಎದ್ದ ಕೂಡಲೇ ಬೂರ ಉದ್ದನೆಯ ಕತ್ತಿ ಹಿಡಿದುಕೊಂಡು ಹಳ್ಳಿಹಳ್ಳಿಗಳ ಮೇಲೆ ಸವಾರಿ ಹೊರಡುತ್ತಿದ್ದ. ಅವನೊಂದಿಗೆ ಅಲ್ಲೂರಮ್ಮ, ಮಗಳು ದೇವಿ, ಗಂಗಾಳೂ ಸಾಲುಗಟ್ಟುತ್ತಿದ್ದರು. ದೇವನಹಳ್ಳಿ,

ದೊಡ್ಡಬಳ್ಳಾಪುರ, ವೆಂಕಟಾಲ ಸುತ್ತಲಿನ ಹಳ್ಳಿಗಳಲ್ಲಿ ಈಚಲುಕಾಡನ್ನು ಹುಡುಕುತ್ತಿದ್ದರು. ಎಳೆರೆಕ್ಕೆಗಳನ್ನು ಕೊಯ್ದು ಮುಳ್ಳು ಎಲೆಗಳನ್ನು ಸವರಿ ಕಡ್ಡಿಗಳನ್ನು ಬಿಸಿಲಿಗೆ ಒಣಹಾಕುತ್ತಿದ್ದರು. ಪೂರ್ಣವಾಗಿ ಒಣಗಿದ ನಂತರ ಚಾಪೆಯೋ, ಬಿದಿರ ಬುಟ್ಟಿಯೋ, ಹೂದಾನಿಯೋ, ಡಾಬಾಗಳಿಗೆ ಕಟ್ಟುವ ಕಿಟಕಿ ಪರದೆಯನ್ನು ಹೆಣೆಯಲು ಸಜ್ಜಾಗುತ್ತಿದ್ದರು. ಆರಂಭದಲ್ಲಿ ಗಂಗಾ ಈಚಲುಮರದಲ್ಲಿನ ತಿವಿಯಲು ಸಿದ್ಧವಾಗಿ ನಿಂತಿರುವ ಮುಳ್ಳುರೆಕ್ಕೆಗಳನ್ನು ಕೊಯ್ಯಲು ಹರಸಾಹಸಪಡುತ್ತಿದ್ದಳು. ಎದೆಗೋ, ಕೈಬೆರಳುಗಳಿಗೋ, ತಲೆಗೋ ತಿವಿದುಕೊಂಡು ಕಿಟಾರನೆ ಚೀರಿಕೊಂಡು ಅಲ್ಲೇ ಬುಡದಲ್ಲಿ ಕುಳಿತುಬಿಡುತ್ತಿದ್ದಳು. ಅಲ್ಲೂರಮ್ಮ ನಿಂತಲ್ಲೇ ರೆಕ್ಕೆ ಕೊಯ್ಯುವುದನ್ನು ಹೇಳಿಕೊಡುತ್ತಿದ್ದಳು. ಬರುಬರುತ್ತಾ ಗಂಗಾ ಮುಳ್ಳುರೆಕ್ಕೆ ಕೊಯ್ಯುವುದಲ್ಲದೆ ಬೂರನ ಕೈಬೆರಳುಗಳು ಮತ್ತು ಕ್ರಿಯಾಶೀಲವಾಗಿ ಓಡುವ ಅವನ ಮನಸ್ಸಿನೊಂದಿಗೆ ಮುನ್ನಡೆಯತೊಡಗಿದಳು. ಪುಟ್ಟಬುಟ್ಟಿಗಳನ್ನು ಕಟ್ಟುತ್ತಿದ್ದವಳು, ದೊಡ್ಡಬುಟ್ಟಿಗಳನ್ನು ಮತ್ತು ವಿವಿಧ ಆಕಾರದ ಹೂದಾನಿಗಳನ್ನು ಹೆಣೆಯತೊಡಗಿದಳು. ಬೂರ ಮೇಲ್ನೋಟಕ್ಕೆ ಧಿಮಾಕು, ಸಿಟ್ಟು ಪ್ರದರ್ಶಿಸಿದರೂ ಒಳಗೊಳಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದ.

ಬೂರ ಆವೊತ್ತು ಬಾಗಲೂರು ಕ್ರಾಸ್‌ನಲ್ಲಿನ ಡಾಬಾಗೆ ಕಿಟಕಿ ಪರದೆ ಕಟ್ಟಿಕೊಡಲು ಹೋಗಿದ್ದ. ಗಂಗಾ ಹತ್ತಿಪ್ಪತ್ತು ಬುಟ್ಟಿಗಳನ್ನು ಹೆಣೆದು, ಬಣ್ಣ ಹನಿಸಿ ಹೆಗಲಿಗೆ ತೂಗಿಸಿಕೊಂಡು ಎಂಟು ವರ್ಷದ ಬೂರನ ಹೆಣ್ಣುಮಗಳು ದೇವಿಯನ್ನು ಕರೆದುಕೊಂಡು ಮಿಲಿಟರಿ ಕ್ವಾಟ್ರಸ್ ಕಡೆ ವ್ಯಾಪಾರಕ್ಕೆ ನಡೆದಳು. ದೇವಿ ತುಂಟಹುಡುಗಿ, ತಂದೆತಾಯಿಯೊಂದಿಗೆ ಇರುವಾಗಲಷ್ಟೇ ಘನಗಂಭೀರವಾಗಿ ಹೇಳಿದ ಕೆಲಸ ಮಾಡುವುದು. ತಾನೊಬ್ಬಳೆ ಆಚೆಬಂದರೆ, ಅಥವಾ ಹೀಗೆ ಗಂಗಾಳೊಟ್ಟಿಗೆ ಬಂದಾಗ ಮನಸೋಇಚ್ಛೆ ನಲಿದುಬಿಡುವಳು. ಗಂಗಾ ತಿರುಗಿ ನೋಡಿದರೆ ಅವಳು ಕಾಣುತ್ತಿರಲಿಲ್ಲ, ಅಲ್ಲೆಲ್ಲೋ ಮರಗಿಡಗಳ ಹಿಂದೆಯೋ ಬಾ ಮಗ್ಗುಲಿನಲ್ಲೋ ಕಾಣಿಸಿಕೊಳ್ಳುತ್ತಿದ್ದಳು. ಗಂಗಾಳಿಗೆ ಒಂದು ಕ್ಷಣ ಜೀವವೇ ಹೋದಂತಾಗುತ್ತಿತ್ತು. ಏಕೆಂದರೆ ಬೂರನಿಗೆ ಅವಳೆಂದರೆ ಜಗತ್ತು. ಒಮ್ಮೆ ಹೀಗೆ ಈಚಲುಕಾಡಿನಲ್ಲಿ ಮುಳ್ಳುಎಲೆ ಕೊಯ್ಯುವಾಗ ದೇವಿಗೆ ಮುಳ್ಳು ಚುಚ್ಚಿಕೊಳ್ಳು, ಸಹಿಸಿಕೊಳ್ಳದೆ ನೋವಿನಿಂದ ಚೀರಿಕೊಳ್ಳತೊಡಗಿದಳು. ಬೂರನಿಗೆ ಎಲ್ಲಿತ್ತೋ ಸಿಟ್ಟು, ಮುಳ್ಳುರೆಕ್ಕೆ ಕಿತ್ತುಕೊಂಡು ಅಲ್ಲೂರಮ್ಮನನ್ನು ಈಚಲುಕಾಡು ಅಲೆಯುವಂತೆ ಓಡಾಡಿಸಿಕೊಂಡು ಹೊಡೆದಿದ್ದ. ಕತ್ತಿಯನ್ನೂ ಬೀಸಿದ್ದ, ಅವಳ ತಲೆ ಕತ್ತರಿಸಿ ಬೀಳುವಂತೆ. ನಡುಗುತ್ತಾ ಈಚಲುಬುಡದಲ್ಲಿ ಅವಿತುಕೊಂಡಿದ್ದಳು, ಮುಳ್ಳುರೆಕ್ಕೆಗಳನ್ನು ಬಿಡಿಸಿ ನೋಡಿದರೆ ಅರೆನಗ್ನಳಾಗಿದ್ದಳು. ಆ ಸಂದರ್ಭವನ್ನು ನೆನೆಸಿಕೊಂಡರೆ ಗಂಗಾಳ ಗುಂಡಿಗೆ ಕೈಗೆ ಬಂದಂತಾಗುತ್ತದೆ.

ಮಿಲಿಟರಿ ಕಂಪೆನಿ ಸಬ್ಸಿಡೈರಿ ಟ್ರೈನಿಂಗ್ ಸೆಂಟರ್ (ಎಸ್‌ಟಿಸಿ) ಬಳಿಯಿರುವ ಅಪಾರ್ಟ್‌ಮೆಂಟ್ ಕಡೆ ಇಬ್ಬರೂ ನಡೆಯುತ್ತಿದ್ದರು. ವೇಗವಾಗಿ ಚಲಿಸುವ ಪ್ರತಿವಾಹನಕ್ಕೂ ದೇವಿ ಕೈಬೀಸುತ್ತಾ ಮುಂದೆ ಮುಂದೆ ಸಾಗುತ್ತಿದ್ದಳು, ಕೆಲವೊಮ್ಮೆ

ನಿಂತಲ್ಲೇ ನಿಂತುಬಿಡುತ್ತಿದ್ದಳು. ಆಗ ಗಂಗಾ ಮತ್ತೆ ಹಿಂದಕ್ಕೆ ನಡೆದು ಬೆರಗಿನಲ್ಲಿ ಕಳೆದುಹೋದ ಹುಡುಗಿಯನ್ನು ಎಚ್ಚರಿಸಿ ಕರೆದುಕೊಂಡು ಮುನ್ನಡೆಯುತ್ತಿದ್ದಳು. ನೀಲಗಿರಿ ತೋಪಿನ ಪಕ್ಕದಲ್ಲಿ ಉದ್ದನೆಯ ಕಲ್ಲು ಕಾಂಪೌಂಡ್ ಎದುರಾಯಿತು. ಗಂಗಾ ತನ್ನ ಎಡಗೈ ಅನ್ನು ಕಲ್ಲುಗಳ ಮೇಲೆ ಸವರತೊಡಗಿದಳು. ಏನೇನೋ ಕೈಬರಹಗಳು. ಬಹುಜನ ಸಮಾಜ ಪಾರ್ಟಿಯಿಂದ ಐನೂರ ಒಂದು ಉಚಿತ ಸಾಮೂಹಿಕ "ಅತ್ಯಾಚಾರ', ಯಾರೋ ಪುಂಡರು 'ವಿವಾಹ'ವನ್ನು ಅಳಿಸಿ ಅತ್ಯಾಚಾರ ಎಂದು ಗೀಚಿದ್ದರು. ಜಸ್ಸಿ ಸಿಂಗ್ ಟ್ರಾವೆಲ್ಸ್, ಮಾದಿಗ ದಂಡೋರ... ಕೈ ಆಡುವುದು ನಿಂತಿತು, ತಾನೂ ನಿಶ್ಚೇಷ್ಟಳಾದಳು. ಆಂಧ್ರದಲ್ಲಿ ನಡೆಯುತ್ತಿದ್ದ ಮಾದಿಗ ದಂಡೋರ ಚಳುವಳಿಯಲ್ಲಿ ತಾನು ಭಾಗವಹಿಸುತ್ತಿದ್ದ ದಿನಗಳು ನೆನಪಾದವು. ತಮಟೆ ಸದ್ದು, ಎದೆ ಹೊಡೆದುಕೊಂಡು ಕೂಗುವ ಘೋಷಣೆಗಳು, ಬೀದಿನೃತ್ಯಗಳು.. ಹೀಗೆ ಒಂದೊಂದಾಗಿ ಸಾಲುಚಿತ್ರಗಳು ಸರಿದುಹೋಗತೊಡಗಿದವು.

ಶಾಲೆ ಓದುತ್ತಿದ್ದಾಗಲೇ ಗಂಗಾಳಿಗೆ ಚಳುವಳಿ, ಹೋರಾಟಗಳಲ್ಲಿ ಆಸಕ್ತಿ ಮೂಡಿತು. ನಾಯಕನ ಮಾತು ಅನುಸರಿಸಿ ಜೋರಾಗಿ ಕೂಗುವುದು, ರಸ್ತೆ ತಡೆ ಮಾಡುವುದು, ಸರ್ಕಾರಿ ಕಚೇರಿ, ಪೊಲೀಸ್ ಸ್ಟೇಷನ್ನು ಮುತ್ತಿಗೆ ಹಾಕುವುದು... ಹೀಗೆ ಚಳುವಳಿ ಇವಳ ಪಾಲಿಗೆ ಆಟ ಎನಿಸಿತ್ತು. ಮಾದಿಗ ದಂಡೋರ ಹೋರಾಟ ಸಮಿತಿಯ ಸಂಚಾಲಕ ಎರ ನಾರಾಯಣನ ಕರೆಯ ಮೇರೆಗೆ ನೂರಾರು ಹೆಣ್ಣಮಕ್ಕಳು ಬಸ್ಸು ಹತ್ತಿದರು. ಅವರಲ್ಲಿ ಗಂಗಾಳೂ ಇದ್ದಳು. ದಲಿತ ಹೆಣ್ಣೊಬ್ಬಳನ್ನು ಸಾಮೂಹಿಕ ಅತ್ಯಾಚಾರ ಮಾಡಿ ಕೊಲೆಗೈದ ಜಮೀನ್ದಾರ ಮಕ್ಕಳನ್ನು ಕೋರ್ಟ್ ನಿರಪರಾಧಿಗಳೆಂದು ತೀರ್ಪು ನೀಡಿತ್ತು. ಕೋರ್ಟು ಮತ್ತು ಫ್ಯೂಡಲ್‌ಗಿರಿ ವಿರುದ್ಧ ದಂಗೆ ಸಾರಿದ ಚಳುವಳಿ ಅದಾಗಿತ್ತು. ಬಸ್ಸಿನ ಮೇಲೆ ಕುಳಿತುಕೊಂಡು ಚಿತ್ರಾನ್ನ ತಿಂದಳು. ಪ್ರತಿಭಟನೆ ಮುಗಿದ ನಂತರ ಎರ ನಾರಾಯಣ ಗಂಗಾಳ ಜೇಬಿನಲ್ಲಿ ನಾಲ್ಕು ಕಾಸು ಮಡಗಿದ್ದ. ಇದ್ಯಾಕೋ ಖುಷಿ ತಂದಿತು. ಇದು ಗಂಗಾಳ ಮೊದಲ ಚಳುವಳಿ, ಕಲಿತ ನಾಲ್ಕು ಅಕ್ಷರ ಅಲ್ಲೇ ಬಿಟ್ಟು ಜನರೊಂದಿಗೆ ಬೆರೆಯುವ ಪ್ರೀತಿಯಿಂದ, ಹಸಿವು ನೀಗಿಸಿಕೊಳ್ಳಲು ಜನಾಂದೋಲನದಲ್ಲಿ ಪಾಲ್ಗೊಳ್ಳತೊಡಗಿದಳು. ಗೆಜ್ಜೆ ಕಟ್ಟಿ ಕುಣಿದರೆ ನೆಲ ಬಗೆದುಕೊಳ್ಳುವ, ತನ್ನ ಒಂದೇ ಒಂದು ಕೂಗಿನಲ್ಲಿ ನೊಂದಜೀವಗಳನ್ನು ಬಡಿದೆಬ್ಬಿಸುವ, ಅಧಿಕಾರಿಶಾಹಿಯ ದರ್ಪ ಮೆಟ್ಟಿ ನಿಲ್ಲುವ, ರಾಜಕಾರಣಿಗಳ ಭ್ರಷ್ಟತೆಯನ್ನು ಸಾರುವ ಗದ್ದರ್ ತಮಟೆ ಏಟಿಗೂ ಕುಣಿದುಬಿಟ್ಟಳು. ಜಾತಿ ಜನಾಂಗಗಳು ನಡೆಸುವ ದಂಗೆಗಳ ಅರಿವಿಲ್ಲದೆ ಅವುಗಳೊಳಗೆ ಕಳೆದುಹೋಗಿದ್ದಳು. ಚಳುವಳಿಯ ಮಹತ್ವವೇನು ಎಂಬುದು ಸುತಾರಾಂ ಇವಳಿಗೆ ಗೊತ್ತಿರಲಿಲ್ಲ. 'ಜಿಂದಾಬಾದ್', 'ಮುರ್ದಾಬಾದ್' ಘೋಷಣೆಯನ್ನು ಯಾವ ಸ್ವರದಲ್ಲಿ ಕೂಗಬೇಕೆಂಬುದನ್ನು ಸರಿಯಾಗಿ ಅರಿತಿದ್ದಳು.

ಎರ್ರ ನಾರಾಯಣ ಹೃದಯಾಘಾತದಿಂದ ಮೃತನಾದ ಸುದ್ದಿ ತಿಳಿದು ಗಂಗಾ ದಿಕ್ಕು ತೋಚದಾದಳು, ಚಳುವಳಿಗಳ ಕಾಲ ಮುಗಿದುಹೋಯಿತೇನೋ ಅನ್ನುವಷ್ಟರಮಟ್ಟಿಗೆ ಚಿಂತಾಕ್ರಾಂತಳಾದಳು. ಇವಳ ಮೇಲೆ ಕಣ್ಣಿಟ್ಟವರು

ಹೋರಾಟಗಳಿಗೆ ಕರೆದರು. ದಲಿತ ಸೇನೆಯೊಂದಿಗೆ ಒರಿಸ್ಸಾದ ಕಡೆ ಹೊರಟಿದ್ದಳು. ರೈಲಿನ ಕಿಟಕಿ ಪಕ್ಕದಲ್ಲಿ ಕುಳಿತು ಹಿಂಡುಹಿಂಡು ಬೀಸಿಬರುವ ಧೂರ್ತ ಗಾಳಿಗೆ ಮೈಯೊಡ್ಡಿದ್ದಳು. ಗುಂತಕಲ್‌ನ ಸಾಂಬಾರು ವ್ಯಾಪಾರಿ ಬಸವರಾಜ್ ಗಂಗಾಳ ಮಗ್ಗುಲಿಗೆ ಕುಳಿತ. ಅವನು ಯಾವ ನಿಲ್ದಾಣದಲ್ಲಿ ಹತ್ತಿಕೊಂಡನೆಂಬುದು ಇವಳಿಗೆ ಊಹಿಸಲಾಗಿರಲಿಲ್ಲ. ಹಸಿದ ಬಡ ಸಹಪ್ರಯಾಣಿಕರಿಗೆ ತುಂಡುರೊಟ್ಟಿ, ಹುಣಸೆಗೊಜ್ಜು ಕೊಡುವುದು ಇವನ ಧಾರಾಳಿತನ. ಗಂಗಾಳ ಮುಖವನ್ನೇ ದಿಟ್ಟಿಸುತ್ತಿದ್ದವನು, ಕಾಗದದ ಚೂರಿನಲ್ಲಿ ರೊಟ್ಟಿ, ಗೊಜ್ಜು ಹಾಕಿ ಅವಳ ಮುಂದೆ ಹಿಡಿದ. ರೈಲು ಪಶ್ಚಿಮ ಗೋದಾವರಿಯ ದೀರ್ಘ ಸೇತುವೆಯ ಮೇಲೆ ಓಡುತ್ತಿತ್ತು. ಚಪ್ಪಲಿಯಿಲ್ಲದೆ ಅವಳ ಕಾಲುಗಳು ವಿಕಾರಗೊಂಡಿದ್ದವು. ಹಿಂಗಾಲುಗಳು ಒಡೆದು ರಕ್ತ ಸೋರುತ್ತಿದ್ದವು. ರೊಟ್ಟಿ ತಿಂದು ಕಿಟಕಿಗೆ ಆನಿಕೊಂಡಳು. ಆಳನಿದ್ರೆ ಅವಳನ್ನು ನುಂಗಿಕೊಂಡಿತ್ತು. ಅಯ್ಯೋ ಎದ್ದಿರಬೇಕಾಗಿತ್ತು, ಅವನ ಕಣ್ಣುಗಳನ್ನು ತನ್ನ ಹೃದಯದಿಂದ ಮೀಟಬೇಕಾಗಿತ್ತು ಅನಿಸಿದ್ದು ಆಮೇಲೆ, ಅವನು ಅದೃಶ್ಯನಾದ ನಂತರ.

'ಚಾಯ್...ಚಾಯ್...' ಸದ್ದಿಗೆ ಗಂಗಾ ಎಚ್ಚರಗೊಂಡಳು. ಮಡಚಿಕೊಂಡಿದ್ದ ಕಾಲು ನೀಟಿದಳು. ಹಸಿದ ಹೊಟ್ಟೆಗೆ ಅಲ್ಲಲ್ಲ , ಹಸಿದ ಮನಕ್ಕೆ ಕ್ಷಣಕ್ಷಣವೂ ತಂಪೆರೆವ ಜೀವಪರ ಆಸಾಮಿ ಎಲ್ಲಿ ಹೋದ ಎಂದು ಹುಡುಕಾಡಿ ಅಕ್ಷರಶಃ ಸತ್ತಳು.

ಓದೂ ಇಲ್ಲ, ಕೈಯಲ್ಲಿ ಕಸುಬೂ ಇಲ್ಲ. ಅದೆಲ್ಲ ತೊರೆದು ಊರುಸೂಳೆಯಂತೆ ಬೀದಿಗಿಳಿವ ಗಂಗಾಳಿಗೆ ಮನೆ ಕಡೆಯಿಂದ ಕಿರುಕುಳ ಆರಂಭವಾಯಿತು. ಸಿನಿಮಾ ಪೋಸ್ಟರ್ ಹಚ್ಚುವ ಹುಡುಗನ ಜೊತೆ ತನ್ನ ಮದುವೆ ಕುದುರಿಸುತ್ತಿರುವ ವಿಷಯ ತಿಳಿದಿದ್ದೇ ಜಾಗೃತಳಾದಳು. ಚಳುವಳಿಗಳ ನೇತೃತ್ವ ವಹಿಸುವವನೇ ತನ್ನನ್ನು ಕಟ್ಟಿಕೊಳ್ಳಬೇಕೆಂದು ಬಯಸಿದ್ದಳೇನೋ! 'ಚಳುವಳಿ, ಪ್ರತಿಭಟನೆ ನಮ್ಮೊಳಗೆ ನಡೆಯುತ್ತಿರಬೇಕು, ಅದು ನಿಜವಾದ ದಿಟ್ಟ ನಡಿಗೆ.' ಎಂದು ಎರ ನಾರಾಯಣ ಪದೇಪದೇ ಸಾರುತ್ತಿದ್ದ ಮಾತು ಜ್ಞಾಪಕಕ್ಕೆ ಬಂತು.

ಹೀಗೆ ಬೂರನೊಂದಿಗೆ ರೈಲು ಹತ್ತಿಬಿಟ್ಟಳು.

ಮೋಟಾರ್‌ಸೈಕಲ್‌ನಲ್ಲಿ ಹೋಗುತ್ತಿದ್ದವನು, 'ಯಾವಳೇ ಅವಳು, ಎಣ್ಣೆ ಹೊಡೆದಿದ್ದೀಯೇನೆ?' ನೆನಪುಗಳಲ್ಲಿ ಜಾರಿ ರಸ್ತೆ ಮಧ್ಯೆ ನಡೆಯುತ್ತಿದ್ದ ಗಂಗಾಳನ್ನು ಫುಟ್‌ಪಾತ್‌ಗೆ ದೂಡಿದ. ಆ ರಭಸಕ್ಕೆ ಹೆಗಲಿನಲ್ಲಿ ತೂಗಾಡುತ್ತಿದ್ದ ಬಿದಿರಬುಟ್ಟಿಗಳು ಕಿತ್ತುಕೊಂಡವು. ಅವುಗಳನ್ನು ಹಾಗೇ ಹಿಡಿದುಕೊಳ್ಳುತ್ತಾ ಅರೆ, ದೇವಿಯನ್ನು ಎಲ್ಲಿ ಬಿಟ್ಟೆ ಎಂದು ಹಿಂದಕ್ಕೆ ತಿರುಗಿ ನೋಡಿದಳು. ಕೈಕಾಲುಗಳು ತಣ್ಣಗಾಗತೊಡಗಿದವು, ಎಂಥಾ ಅಚಾತುರ್ಯ ನಡೆದುಹೋಯಿತು. “ದೇವಿ, ದೇವಿ... ಕೂಗಿಕೊಂಡು ದಿಕ್ಕು ತೋಚಿದ ಕಡೆ ಓಡಿದಳು. ಎಲ್ಲೂ ಕಾಣಲಿಲ್ಲ. ಎದೆ ಹೇಗೆ ಹೊಡೆದುಕೊಳ್ಳುತ್ತಿತ್ತೆಂದರೆ ಇನ್ನೇನು ಹೃದಯಭಾಗ ಕಿತ್ತುಕೊಂಡು ಆಚೆ ಬೀಳಬೇಕು! ನಿಜಕ್ಕೂ ಹಾಗೇ ಆಯಿತು,

ದೇವಿ ರಕ್ತದ ಮಡುವಿನಲ್ಲಿ ಬಿದ್ದಿದ್ದಳು. ಮೋಟಾರ್‌ಸೈಕಲ್ಲೋ, ಟ್ರಕ್ಕೋ ಇವಳನ್ನು ಸವರಿಕೊಂಡು ಹೋಗಿತ್ತು, ಆ ಹೊಡೆತಕ್ಕೆ ದೇವಿ ಜೀವ ಕಳೆದುಕೊಂಡಿದ್ದಳು.



ಬಿದಿರಬುಟ್ಟಿಗಳನ್ನು ಎಸೆದು, ರಸ್ತೆಯಲ್ಲಿ ಹಾದುಹೋಗುತ್ತಿದ್ದ ವಾಹನಗಳಿಗೆಲ್ಲ ಕೈ ಅಡ್ಡ ಹಾಕತೊಡಗಿದಳು. ಮಿಲಿಟರಿಜೀಪು ನಿಂತಿತು, ಸೈನ್ಯಾಧಿಕಾರಿ ಇಳಿದು ದೇವಿಯನ್ನು ಪರೀಕ್ಷಿಸಿ ತಲೆತಗ್ಗಿಸಿದ. ಗಂಗಾ, 'ಸಾರ್...' ಎರಡೂ ಕೈಗಳನ್ನು ಜೋಡಿಸಿದಳು. ಅಧಿಕಾರಿ ಗಂಗಾಳ ಕೈಯಲ್ಲಿ ಹಣ ಇಟ್ಟು ಜೀಪು ಹತ್ತಿದ. ಬೂರ ಕಣ್ಮುಂದೆ ಧುಮುಕಿದಂತಾಯಿತು. ಭಯಭೀತಳಾಗಿ ಚೀರಿಕೊಂಡಳು, ಕೈಯಲ್ಲಿದ್ದ ಹಣವನ್ನು ದೇವಿಯ ತಲೆ ಹತ್ತಿರ ಇಟ್ಟು ಹುಚ್ಚಿಯಂತೆ ಓಡತೊಡಗಿದಳು.

ಅಲ್ಲಿಂದ ಓಡಿದವಳು ಯಲಹಂಕದ ರೈಲ್ವೆ ಸ್ಟೇಷನ್ನಿಗೆ ಬಂದು ತಲುಪಿದಳು. ಮಳೆ ಹೇಗೆ ಸುರಿಯುತ್ತಿತ್ತೆಂದರೆ, ಕಣ್ಣ ಮುಂದಿನದೇನೂ ಕಾಣುತ್ತಿರಲಿಲ್ಲ. ಲ್ಯಾವೇಟರಿ ಸನಿಹದಲ್ಲಿ ಕುಕ್ಕರುಗಾಲಿನಲ್ಲಿ ಕುಳಿತುಬಿಟ್ಟಳು. ರೈಲು ಕೂಗುವ ಸದ್ದು ಬೂರನೇ ಕೂಗಿದಂತಾಗಿ ಬೆಚ್ಚುತ್ತಿದ್ದಳು. ಮತ್ತೆ ಎದ್ದು ಮಳೆಯಲ್ಲೇ ದೌಡಾಯಿಸುತ್ತಿದ್ದಳು, ಬೂರನ ಆಕೃತಿ ವಿವಿಧರೀತಿಯಲ್ಲಿ ತಿನ್ನತೊಡಗಿತು. ತನ್ನನ್ನು ಮಳೆಹನಿಗಳು ತಿವಿದು ಭೀಕರವಾಗಿ ಕೊಲ್ಲಲಿ ಎಂದು ನೆಲದ ಮೇಲೆ ಅಂಗಾತ ಬಿದ್ದಳು. ಬೆಳಗಿನ ಜಾವ ಜಾಡಮಾಲಿಯೊಬ್ಬ ಕಸ ಗುಡಿಸಲು ಬಂದಾಗ ಗಂಗಾ ಕಾಣಿಸಿದಳು. ಜಾಡಮಾಲಿಯರು ಸರ್ಕಾರಿ ಆಸ್ಪತ್ರೆಯಲ್ಲಿ ಇವಳಿಗೆ ಚಿಕಿತ್ಸೆ ಕೊಡಿಸಿದರು, ಬದುಕುಳಿದಳು. ಕಾಲಾಂತರದಲ್ಲಿ ಜಾಡಮಾಲಿಯರೊಂದಿಗೆ ತಾನೂ ಪೊರಕೆ ಹಿಡಿದಳು.

ಆ ದಿನ ಸಂಜೆ ಫ್ಲಾಟ್‌ಫಾರಂ ಮೇಲೆ ಓಡಾಡಿಕೊಂಡು ಕಸ ಗುಡಿಸುತ್ತಿದ್ದಾಗ ಬೂರ ಕಂಡಂತಾಯಿತು. ಏಳು ಗಂಟೆಗೆ ಕಾಚಿಗುಡ ಎಕ್ಸ್‌ಪ್ರೆಸ್ ಬರುವುದರಲ್ಲಿತ್ತು. ಹೌದು, ತನ್ನ ಕುಟುಂಬದೊಂದಿಗೆ ಅಂದರೆ, ತನ್ನ ಪ್ರೀತಿಪಾತ್ರ ಮಗಳಿಲ್ಲದ ದುರದೃಷ್ಟ ಸಂಸಾರದೊಂದಿಗೆ ಬಟ್ಟೆ ತುಂಬಿದ ಚೀಲ, ಮೂಟೆ ಮತ್ತಿತರ ಸಾಮಾನು ಸರಂಜಾಮುಗಳೊಂದಿಗೆ ನಡೆದುಬರುತ್ತಿದ್ದ. ದೇವಿಯನ್ನು ಕಳೆದುಕೊಂಡ ಅವನು ಹೇಗಿರಬಹುದೆಂದು ದೂರದಿಂದ ಮರೆಯಲ್ಲಿ ನಿಂತು ನೋಡಲೆತ್ನಿಸಿದಳು. ಬೂರ ಮೃತನಾಗಿದ್ದ, ಅವನ ಅಸ್ತಿತ್ವ ಉತ್ಸಾಹರಹಿತ ಒಣಸೌದೆಯಂತಾಗಿತ್ತು. ಸ್ವಲ್ಪ ಧೈರ್ಯ ವಹಿಸಿ ಗಂಗಾ ಹೋಗಿ ಅವನೆದುರು ನಿಂತರೂ ಅವನು ಏನೂ ಪ್ರತಿಕ್ರಿಯಿಸಲಾರದವ ನಾಗಿರುತ್ತಿದ್ದನೇನೋ? ಅವನ ಸ್ಥಿತಿ ನೋಡಿ ಅವನೊಂದಿಗೆ ಒಂದು ಮಾತು ಆಡಿಬಿಡಲೇ ಎನಿಸಿತು. ಹಸಿದ ಬಡಕಲು ನಾಯಿಗೆ ಎಲುಬು ಸಿಕ್ಕರೆ ಏನು ಮಾಡೀತು? ಆ ಕ್ಷಣ ನೆನೆದು ತಲ್ಲಣಿಸಿದಳು. ಗಂಗಾ ಈ ಸಂದಿಗ್ಧ ಯೋಚನೆಯಲ್ಲಿದ್ದಾಗಲೇ ಇವಳ ಕಾಲುಗಳನ್ನು ದಿಟ್ಟಿಸುತ್ತಿದ್ದ ಚಮ್ಮಾರ, 'ಚಪ್ಪಲಿ ಕಿತ್ತೋಗದೆ, ಎದ್ದು ಹೊಲೆ ಹಾಕ್ಕೊಡ್ತೀನಿ ಕೊಡೂ' ಆಸೆಯಿಂದ ನಗುತ್ತಾ ವಿನಂತಿಸಿಕೊಂಡ. ಕರುಳು ಬಾಯಿಗೆ ಬಂದಂತಾಗಿ ಹೌಹಾರಿದಳು.

ಚಮ್ಮಾರನನ್ನು ನೋಡಿ, 'ಅಯ್ಯೋ...' ಅನ್ನುತ್ತಾ ತಲೆ ಮೇಲೆ ಕೈ ಹೊತ್ತು ಅಲ್ಲೇ ಕುಳಿತುಕೊಂಡಳು. ಹೊಸ ಬೆಳಕಿನ ತರುಣ ಚಮ್ಮಾರನ ಮುಖವನ್ನು ನೋಡುತ್ತಲೇ ಇರಬೇಕೆನಿಸಿತು, ಬೂರ ಎಬ್ಬಿಸಿದ ಭಯ ಆರಿಹೋಗಿತ್ತು. ಅವನೇ ಅವಳ ಕಾಲಿನಿಂದ ಚಪ್ಪಲಿಯನ್ನು ಎಳೆದುಕೊಂಡ, ಗಂಡು ಅವಳನ್ನು ಸ್ಪರ್ಶಿಸಿದ ಮೊದಲ ಗಳಿಗೆ.



“ಅಟ್ಟ ಸವ್ವುಹೋಗದೆ, ಹೊಸ ಅಟ್ಟ ಕಟ್ಟಬೇಕು. ಆ ಕಾಲ್ನಲ್ಲಿ ಹೊಸಚಪ್ಲಿನೇ ಬತ್ತದೆ.' ಅನ್ನುತ್ತಾ ಚಪ್ಪಲಿಯನ್ನು ಪರೀಕ್ಷಿಸತೊಡಗಿದ.

ಗಂಗಾ ಮಾತನಾಡಲಿಲ್ಲ, ಚಪ್ಪಲಿಯನ್ನು ಕಿತ್ತು, ಕಾಲಿಗೆ ಹಾಕಿಕೊಂಡಳು. ಬೂರ ಇತ್ತಕಡೆಯೇ ಬರುತ್ತಿದ್ದಾನೆ! ಓಡಿಹೋಗಿ ಕಳ್ಳಿಗಿಡಗಳ ಸಾಲಿನಲ್ಲಿ ನಿಂತಳು. ಹೆಗಲಿನ ಚೀಲದಿಂದ ಚಪ್ಪಲಿ ತೆಗೆದು ಚಮ್ಮಾರನಿಗೆ ಕೊಟ್ಟ. ಗಂಗಾ ಆಶ್ಚರ್ಯದಿಂದ ಕಣ್ಣರಳಿಸಿ ನೋಡಿದಳು. ದೇವಿ ಧರಿಸುತ್ತಿದ್ದ ಪಕ್ಷಿಯಾಕಾರದ ಚಪ್ಪಲಿಗಳು ಅವು! ಅಲ್ಲೂರಮ್ಮ ಒಳಗೊಳಗೆ ದುಃಖಿಸುತ್ತಿದ್ದಳು. “ಅಯ್ಯೋ ದೇವರೇ...' ಎದೆ ಹಿಸುಕಿಕೊಂಡು ಗಂಗಾ ರೋದಿಸಿದಳು. ಈ ಹಿಂಸಾತ್ಮಕ, ಪಾಪದ ಬದುಕಿಗೆ 'ಮುರ್ದಾಬಾದ್' ಎಂದು ಕೂಗಬೇಕೆನಿಸಿತು. ಚಮ್ಮಾರ ಚಮ್ಮಾರ ಚಪ್ಪಲಿಯನ್ನು ಹೊಲಿದುಕೊಟ್ಟ. ಅಷ್ಟೊತ್ತಿಗೆ ರೈಲು ಬಂತು. ಕಳ್ಳಿಗಿಡದ ಮಗ್ಗುಲಿನಲ್ಲೇ ನಿಂತು ಕಾಲಿನಿಂದ ಚಪ್ಪಲಿ ಕಳಚಿಕೊಂಡು ಕೈಗಳು ಸೋಲುವವರೆಗೂ ತನ್ನನ್ನು ತಾನು ಹೊಡೆದುಕೊಂಡು ಅಲ್ಲೇ ಕುಕ್ಕರುಗಾಲಿನಲ್ಲಿ ಕುಳಿತುಬಿಟ್ಟಳು.

ರೈಲು ಸೇತುವೆಯ ಒಂದು ಮೂಲೆಯಲ್ಲಿ ಮಲಗಲು ಸ್ಥಳ ಮಾಡಿಕೊಂಡು ಗಾಳಿ, ಮಳೆ, ಚಳಿ ತೂರುವ ಕಡೆ ಟಾರ್ಪಾಲಿನ್ ಕಟ್ಟಿಕೊಂಡಿದ್ದಳು. ಬೇಯಿಸಿದ ಅನ್ನಕ್ಕೆ ಗೊಜ್ಜು ಹಿಸುಕಿಕೊಂಡು ತಿಂದು ಮಲಬೇಕೆನ್ನುವಷ್ಟರಲ್ಲಿ ತನ್ನ ಎಡಭಾಗದಲ್ಲಿ ಮನುಷ್ಯನೊಬ್ಬ ಕಂಬಳಿಯೋ ಚಾಪೆಯನ್ನೊ ಕೊಡಹುವ ಸದ್ದು ಕೇಳಿಬಂತು. ಆದರೆ ಬಹಳ ದೂರದಲ್ಲಿ ಇರುವಂತೆ ಏನೂ ಅನ್ನಿಸಲಿಲ್ಲ. ಹದಿನೈದಿಪ್ಪತ್ತು ಅಡಿ ದೂರದಲ್ಲಿ ಇರಬೇಕು. ಕತ್ತಲೆಯಾದ್ದರಿಂದ ಏನೊಂದು ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಕಡ್ಡಿ ಅಂಟಿಸಿ ಸಿಗರೇಟು ಸೇದತೊಡಗಿದ. ಉರಿಯುವ ಬೆಂಕಿ ಮಾತ್ರ ಕೆಣಕತೊಡಗಿತು. 'ನಾ ಕಳ್ಳು ಚೆಬುತುನ್ನಾಯೀ ನಿನ್ನು ಪ್ರೇಮಿಂಚಾನನಿ...' ಹಾಡು ಗುನುಗತೊಡಗಿದ. ನಗು ಬಂತು, ಆ ಕಣ್ಣುಗಳು ತನ್ನನ್ನೇ ದಿಟ್ಟಿಸುತ್ತಿರಬೇಕೆನ್ನುವ ಗುಮಾನಿ ಮೂಡಿತು. ಸೇತುವೆಯ ಅಲ್ಲಲ್ಲಿ ಇವಳಂತೆ ಇನ್ನೂ ಹಲವು ಅನಾಥರು ಮತ್ತು ಬಡ ಪ್ರಯಾಣಿಕರು ಮಲಗುತ್ತಿದ್ದದ್ದರಿಂದ ನಿರಾಳ ಇತ್ತು. ಆ ಭಯ ಮತ್ತು ನಿರಾಳದಲ್ಲೇ ನಿದ್ದೆಗೆ ಜಾರಿದಳು.

ಬೆಳಿಗ್ಗೆ ಎದ್ದೊಡನೆ ಆ ಕಡೆ ನೋಡಿದಳು. ಮನುಷ್ಯನ ಮುಖ ಆ ಕಡೆ ತಿರುಗಿತ್ತು, ಎಮ್ಮೆ ಕತ್ತು ಮುರಿದುಬಿದ್ದಂತೆ, ಮುಖಕ್ಕೆ ನೀರು ಬಡಿದುಕೊಂಡು ಮೊರಕೆ ಹಿಡಿದುಕೊಂಡು ಅತ್ತಕಡೆಯೇ ನಡೆದಳು. ಚಪ್ಪಲಿಗೆ

ಹೊಲಿಗೆ ಹಾಕಿಕೊಡುತ್ತೇನೆ ಎಂದು ವಿನಂತಿಸಿಕೊಂಡ ಅದೇ ತರುಣ ಚಮ್ಮಾರ! ಕಟ್ಟಿಕೊಂಡಿದ್ದ ಲುಂಗಿ ಉದುರಿ ದೂರದಲ್ಲಿ ಬಿದ್ದಿತ್ತು. ಪೊರಕೆಗೆ ಬಿಗಿದಿದ್ದ ಹಿಡಿಕಡ್ಡಿಯಲ್ಲಿ ಎಳೆದುತಂದು ಅವನ ಪಕ್ಕದಲ್ಲಿ ಬಿಟ್ಟು, ಮುಗುಳ್ನಗುವಿನೊಂದಿಗೆ ಸೇತುವೆಯ ಮೆಟ್ಟಿಲಿಳಿಯತೊಡಗಿದಳು.

ಪ್ಲಾಟ್‌ಫಾರಂ ಮೇಲಿನ ಎಲ್ಲ ಕಸವನ್ನು ಒಗ್ಗೂಡಿಸಿಕೊಂಡು ಅವಳಿಗೇ ತಿಳಿಯದಂತೆ ಅಥವಾ ತಿಳಿಯುವ ನಾಟಕವಾಡಿಕೊಂಡು ಚಮ್ಮಾರನಿರುವಲ್ಲಿಗೇ ನಡೆದುಬಿಡುತ್ತಿದ್ದಳು. ಚಪ್ಪಲಿ ಆಗಾಗ ತುಂಡರಿಸಿ ಬೀಳುವುದು, ಅವಳು ಬೇರ್ಪಟ್ಟ ತುಂಡುಗಳನ್ನು ಬಟ್ಟೆಪಿನ್ನಿನಿಂದ ಜೋಡಿಸಿಕೊಳ್ಳುವುದನ್ನು ಗಮನಿಸುತ್ತಲೇ ಇದ್ದ .



ಗಂಗಾ ಅಲ್ಲಿಗೆ ಬರುತ್ತಿದ್ದಂತೆ ಒಂದು ಜೊತೆ ಚಪ್ಪಲಿಯನ್ನು ಅವಳ ಮುಂದಕ್ಕೆ ತಳ್ಳಿದ. ಹೊಸತೇನೂ ಆಗಿರಲಿಲ್ಲ, ಗಿರಾಕಿ ಯಾರೋ ಎಸೆದುಹೋಗಿದ್ದನ್ನು ಹೊಲೆದು ಮಿರಮಿರನೆ ಹೊಳೆಯುವಂತೆ ಸಿದ್ಧಗೊಳಿಸಿದ್ದ. ಅವಳು ಹಿಂದೆ ಸರಿದಿದ್ದನ್ನು ಕಂಡು, “ಕಾಸೇನೂ ಬೇಡ.' ಅಂದು ನಗುತ್ತಾ ಹೊಲೆದಿದ್ದ ಚಪ್ಪಲಿಯನ್ನು ಕೈಗೆ ತೆಗೆದುಕೊಂಡು ಧೂಳು ಜಾಡಿಸುತ್ತಾ ಹಾಡು ಆರಂಭಿಸಿದ. 'ಇನ್ನೊಬ್ಬನ ದಯೆ.' ತನಗೆ ಬೇಡ ಅಂದುಕೊಳ್ಳುತ್ತಾ ಕೋಟು ಜೇಬಿನಿಂದ ಇಪ್ಪತ್ತು ರೂಪಾಯಿಗಳನ್ನು ತೆಗೆದು ಮುಂದಿಡಿದಳು. ತಾನು ನಂಬಿದ ವೃತ್ತಿ ದೈವ, ಅದನ್ನು ಅಗೌರವದಿಂದ ಕಾಣಬಾರದೆಂದು ಹಣ ಇಸಕೊಂಡ. ಚಪ್ಪಲಿಗಳನ್ನು ನ್ಯೂಪೇಪರಿನಲ್ಲಿ ಸುತ್ತಿ ಕಂಕುಳಿನಲ್ಲಿಟ್ಟುಕೊಂಡು ಮುಂದುಮುಂದಕ್ಕೆ ನಿಧಾನ ಹೆಜ್ಜೆ ಇಡತೊಡಗಿದಳು. ತರುಣ ಚಮ್ಮಾರ ಗೋಂದು ಮೆತ್ತಿದ ಅಟ್ಟೆಯನ್ನು ಜೋರಾಗಿ ತಟ್ಟುತ್ತ ಅವಳ ಕಡೆ ನೋಡುತ್ತಲೇ ಇದ್ದ. ಅವಳು ಹುಡುಗಿ, ತಿರುಗಿ ನೋಡಬೇಕಾಗಿರಲಿಲ್ಲ. ಎದೆಯೊಳಗೆ ಇಟ್ಟುಕೊಂಡಿದ್ದ ಕೈಗನ್ನಡಿಯಲ್ಲಿ ತನ್ನ ಮುಖವನ್ನು ಬಲಕ್ಕೆ ಹಿಡಿದರೆ ಅರೆಬರೆ ಕಾಣುವ ಅವನನನ್ನೂ ಒಗ್ಗೂಡಿಸಿ ಹಿಡಿದಿಟ್ಟುಕೊಳ್ಳಲೆತ್ನಿಸುತ್ತಿದ್ದಳು.

ಸೇತುವೆಯ ಮೇಲೆ ನಿಂತು ಹಾದುಬರುವ ರೈಲುಗಳನ್ನು ಏಕ ದಿಟ್ಟಿಸುತ್ತಿದ್ದವಳ ಬೆನ್ನಿಗೆ ನಿಂತು, 'ಯೋಚ ಮಾಡಿ ನೋಡು, ಇಲ್ಲೇ ಹಟ್ಟಿಯಲ್ಲಿ ಒಂದು ಚಿಕ್ಕನೆ ಬಾಡಿಗೆ ಹಿಡಿಯನ.' ಕೈಗನ್ನಡಿಯಲ್ಲಿ ಗಳಿಗೆ ಗಳಿಗೆಯೂ ಮುಖ ನೋಡಿಕೊಳ್ಳುವಂತೆ ಪ್ರಚೋದಿಸಿದ ತರುಣ ಚಮ್ಮಾರ ತನ್ನ ಇಂಗಿತ ವ್ಯಕ್ತಪಡಿಸಿದ. ಪ್ರೇಮಿಸುವ ಮಾತು ಬಿಟ್ಟು ಏಕಾಏಕಿ ಮದುವೆ ನಂತರದ ಉಸಾಬರಿ ಕುರಿತು ಮಾತನಾಡುತ್ತಿದ್ದುದ್ದನ್ನು ನೆನೆದು ಬೆದರಿದಳು. ಪ್ರೀತಿ ಮಾಡುವುದಕ್ಕೆ ಸಿದ್ಧವಾಗು ಅಂತ ಹೇಳುವುದರ ಬದಲಿಗೆ, 'ಮೊದ್ಲು ಚಪ್ಲಿ ಹೊಲೆಯೋದು ಕಲೀ...' ಬಾಯಿ ತಪ್ಪಿ ಅಂದುಬಿಟ್ಟಳು. ನೋಡಿದ, ಅವೇ ಹಳೆಚಪ್ಪಲಿಯಲ್ಲಿದ್ದಳು. ನಕ್ಕು ಸುಮ್ಮನಾದ. ಒದಗಿಬಂದ ಆಸರೆಗೆ ಎರಡು ಹನಿ ಕಣ್ಣೀರು ಸುರಿಸಿದಳು. ಸಾಯಲೂ ಯೋಗ್ಯವಲ್ಲದ ತನ್ನ ದೇಹ ಇಟ್ಟುಕೊಂಡು ಮಾಡುವುದಾದರೂ ಏನು? ತಿರುಗಿ ನೋಡಿದಳು, ಚಪ್ಪಲಿ ಹೊಲೆಯುವ ಚೀಲ ಹೆಗಲಿಗೆ ತೂಗಿಸಿಕೊಂಡು ಸೀಟಿ ಹೊಡೆಯುತ್ತಾ ರೈಲ್ವೆ ಹಳಿ ಮೇಲೆ

ಬಡಬಡನೆ ನಡೆದುಹೋಗುತ್ತಿದ್ದ. ಅವನಿಂದ ಕೊಂಡ ಚಪ್ಪಲಿಯನ್ನು ಕಣ್ಣಿಗೊತ್ತಿಕೊಂಡು ಧರಿಸಿ ಅಲ್ಲೇ ಕುಳಿತುಕೊಂಡಳು.

ಸಿನಿಮಾ ಹಾಡು ಗುನುಗಿದರೂ, ಹೊಡೆದರೂ ಚಮ್ಮಾರ ಸೂಕ್ಷ್ಮಮತಿಯಾಗಿದ್ದ. ಜಗತ್ತಿನ ಕಸ, ಕೊಳಚೆ, ಅಸಹ್ಯವನ್ನು ತುಳಿದು ಬರುವ ಮನುಷ್ಯನ ಚಪ್ಪಲಿಯನ್ನು ಹಣೆಗೊತ್ತಿ ನಮಸ್ಕರಿಸಿ, ಕಳಚಿಕೊಂಡು ಹೊಲೆದುಕೊಡುವ ಚಮ್ಮಾರನಾದರೂ ಸ್ವಾಭಿಮಾನದ ಮಾತು ಬಂದಾಗ ಜಗ್ಗುತ್ತಿರಲಿಲ್ಲ. ಯಾವ ತೀರ್ಮಾನಕ್ಕೂ ಬರದ, ಯಾವುದಕ್ಕೂ ಮುಂದಾಗದ ಜಾಡಮಾಲಿ ಗಂಗಾ, ಚಮ್ಮಾರನಲ್ಲಿ ಬಗೆಬಗೆಯ ದ್ವಂದ್ವ ಎಬ್ಬಿಸುತ್ತಿದ್ದಳು. ಮುಂಬೈ ರೈಲು ಇಳಿದ ಪ್ರಯಾಣಿಕರಲ್ಲೊಬ್ಬ ಮಾರ್ವಾಡಿ ಗೇಟ್ ಬಳಿ ಕುಳಿತಿದ್ದ ಚಮ್ಮಾರನನ್ನು ಕಂಡು, ಎದ್ದು



ಎಕ್ಷ ಹೊಲ್ದರೂ ಮೂರ್ಕಾಸು ಸಿಕ್ಕಲ್ಲ ಇಲ್ಲಿ. ಬಾಂಬೆಗೆ ಬಾ, ಆರು ತಿಂಗ್ಳಲ್ಲಿ ಕಾರ್ನಲ್ಲಿ ಓಡಾಡ್ತೀಯ.' ಕಿತ್ತುಹೋದ ಶೂಸ್‌ಅನ್ನು ಮುಖದ ಮುಂದೆ ಬಿಟ್ಟ. ಚಮ್ಮಾರ ತಲೆಯೆತ್ತಿ ಅವನ ಮುಖ ನೋಡಿದ.

'ಗಮ್ ಹಾಕಿ ಹೊಲ್ದು ಕೊಡಲೇ, ಬಾಂಬೇಲಿ ನನ್ದು ದೊಡ್ಡ ಬೂಟ್‌ಹೌಸ್ ಇದೆ. ಬರಂಗಿದ್ರೆ ಈ ನಂಬರ್ಗೆ ಫೋನ್ ಮಾಡು.' ಕಾರ್ಡು ಕೊಟ್ಟು, ಸಿಗರೇಟು ಹಚ್ಚಿದ.

ಮುಂಬೈಯವನ ಆಹ್ವಾನದ ಕುರಿತು ಗಂಟೆಗಟ್ಟಲೆ ಯೋಚಿಸಿದ. ಬದುಕಿನ ಬೇರೆಬೇರೆ ಘಟ್ಟಗಳಲ್ಲಿ ಹೊಡೆತಗಳನ್ನು ತಿನ್ನುತ್ತಿದ್ದ, ಬಡತನದಲ್ಲಿ ಬೇಯುತ್ತಿದ್ದ ಚಮ್ಮಾರ ತನ್ನ ಆತ್ಮೀಯ ಗೆಳೆಯರು ಮತ್ತು ಹತ್ತಿರದ ಸಂಬಂಧಿಗಳ ಅಭಿಪ್ರಾಯ ಕೇಳಲು ಹೊರಟೇಬಿಟ್ಟ. ಆವೊತ್ತು ಸೇತುವೆ ಮೇಲೆ ಮಲಗಲು ಹೋಗಲಿಲ್ಲ. ಹೋಗುವ ಆಸೆಯೂ ಮೂಡಲಿಲ್ಲ.

ಇನ್ನೇನು ಎಲ್ಲವೂ ಕೂಡಿಕೊಳ್ಳಬೇಕೆನ್ನುವಷ್ಟರಲ್ಲಿ ಚಮ್ಮಾರ ಮುಂಬೈ ರೈಲು ಹತ್ತಿದ್ದನ್ನು ಜಾಡಮಾಲಿಯೊಬ್ಬ ಗಂಗಾಳಿಗೆ ತಿಳಿಸಿದ. ತನ್ನಿಂದ ಆದ ಅಚಾತುರ್ಯ ಏನಿರಬಹುದೆಂದು ಯೋಚಿಸುತ್ತಾ ಚಿಂತಾಕ್ರಾಂತಳಾದಳು. ನಿಂತಲ್ಲೇ ಕುಸಿದು ಕುಳಿತಳು. ಇನ್ನೊಬ್ಬರ ಹಕ್ಕಿಗಾಗಿ ಹೋರಾಟ ಮಾಡಿದ ತಾನು ತನ್ನ ಬಡಪ್ರೇಮದ ವಿರುದ್ಧವೇ ಚಳುವಳಿ ಹೂಡಿ ಜಯಿಸಿದೆನಲ್ಲ ಎಂದು ಹಲುಬತೊಡಗಿದಳು. ಅಂದಿನಿಂದ ಇವಳ ಯಾತನೆ ಆರಂಭವಾಯಿತು. ನಿಂತಲ್ಲಿ ನಿಲ್ಲದೆ, ಕುಳಿತಲ್ಲಿ ಕೂರದೆ, ಮಲಗಿದಲ್ಲಿ ಮಲಗಲಾಗದೆ ಒದ್ದಾಡತೊಡಗಿದಳು. ರೈಲ್ವೆ ಸ್ಟೇಷನ್ನಿನಲ್ಲಿ ಚಮ್ಮಾರನ ನೆನಪು ಎಡಬಿಡದೆ ಮುಗಿಬೀಳುತ್ತಿತ್ತು. ಅವನು ಗುನುಗಿದ ಹಾಡುಗಳು ಎದೆ ತಿವಿದು ನೆತ್ತರು ತರಿಸುತ್ತಿದ್ದವು. ರಾತ್ರೋರಾತ್ರಿ ಚೀಲ ಕಟ್ಟಿಕೊಂಡು ಸ್ಟೇಷನ್ನು ತೊರೆದಳು. ಬೆಂಗಳೂರಿನ ಮಹಾತ್ಮಾ ಗಾಂಧಿ

ರಸ್ತೆಯ ಚರ್ಚ್ ಸ್ಟ್ರೀಟ್ ಕಲ್ಲು ಕಟ್ಟಡದ ಮೂಲೆಯಲ್ಲಿ ನೆಲೆಯೂರಲು ನೋಡಿದಳು. ಭಿಕ್ಷಾಟನೆ ಮಾಡದೆ ಗ್ಯಾಲರಿ, ರೆಸ್ಟೋರೆಂಟ್, ಬೀಡಾ ಅಂಗಡಿಗಳ ಹತ್ತಿರ ಕಸ ಗುಡಿಸಿಕೊಂಡು ಬದುಕು ಸಾಗಿಸತೊಡಗಿದಳು. ತೃಪ್ತ, ಅತೃಪ್ತ ಗಂಡಸರು, ದಾರಿಹೋಕರು, ಪೊಲೀಸರು ದೈಹಿಕ ಸುಖಕ್ಕಾಗಿ ಹಿಂಸಿಸತೊಡಗಿದರು. ಚಳುವಳಿ ಕಾವಿನ ಕೆಂಡಗಣ್ಣುಗಳಲ್ಲಿ ಸಿಡಿದು ನಿಂತಳು, ಪ್ರತಿರೋಧ ಬಹಳ ಕಾಲ ನಿಲ್ಲಲಿಲ್ಲ. ದೇಹದ ಹೊರೆಯನ್ನು ಅಲೆಅಲೆಯಾಗಿ ಎಬ್ಬಿದರು. ಕಳಚಿಕೊಂಡು ಸುಲಿದ ಹಣ್ಣಿನ ಸಿಪ್ಪೆಯಂತಾಗಿದ್ದವಳು ಅಲ್ಲಿಂದ ಏರ್‌ಪೋರ್ಟ್ ರಸ್ತೆಗೆ ತನ್ನ ನೆಲೆ ಬದಲಿಸಿದಳು.

ವರ್ಷಗಳ ಮೇಲೆ ವರ್ಷಗಳು ಉರುಳಿದವು. ವೃದ್ಧೆ ಗಂಗಾ ತನ್ನನ್ನೇ ತಾನು ಗುರುತು ಹಿಡಿಯದಷ್ಟು ಅಸಂಗತಳಾದಳು. ಅವಳಲ್ಲೊಬ್ಬ ಬೆಂಕಿ ಸೀಳುವ ಹುಡುಗಿಯಂತೂ ಇದ್ದೇ ಇದ್ದಳು. ಅವಳೂ ಸತ್ತುಹೋಗಿದ್ದಳು. ಪೊರಕೆ ಹಿಡಿದು ಬೀದಿಗಿಳಿವ ಶಕ್ತಿ ಗಂಗಾಳಲ್ಲಿ ಇನ್ನಿಲ್ಲವಾಗಿತು. ಕುಳಿತಲ್ಲಿ ತುಕ್ಕಿಡಿಯುವಷ್ಟು ಜಡ್ಡು ಹಿಡಿದುಹೋಗಿದ್ದಳು. ಯಾರಾದರೂ ಬನ್ನು ತಂದು ಮುಂದೆ ಎಸೆದು ಕರೆದರೆ ಎಷ್ಟೋ ಹೊತ್ತಿಗೆ ತಲೆ ಎತ್ತಿ ನೋಡುವಳು.



ನೆನಪುಗಳ ಬೊಗಸೆ ಕ್ಷೀಣಿಸಿತು. ಎರ್ರ ನಾರಾಯಣ, ಸಾಂಬಾರು ವ್ಯಾಪಾರಿ ಬಸವರಾಜ್ ಮತ್ತು ತರುಣ ಚಮ್ಮಾರ ಇಳಿದುಬಂದು ಕೈ ಹಿಡಿದುಕೊಂಡರೋ ಏನೋ ಎಂದು ಚಡಪಡಿಸಿದಳು. ತರುಣ ಚಮ್ಮಾರನಿಂದ ಕೊಂಡ ಚಪ್ಪಲಿಗಳನ್ನು ಎದೆಗೆ ಅವುಚಿಕೊಂಡು ಎದ್ದು ನಿಲ್ಲಲೆತ್ನಿಸಿದಳು. ವ್ಯವಸ್ಥೆ ವಿರುದ್ಧ ದಂಗೆಯೇಳುವಾಗ ಕೂಗುತ್ತಿದ್ದ 'ಮುರ್ದಾಬಾದ್' ಎನ್ನುವ ಕೊನೆ ಘೋಷಣೆ ಅವಳಿಂದ ಕೇಳಿಬಂತು. ಅವಳಿಗೇ ವಿರೋಧಿಸಿಕೊಂಡಂತಿತ್ತು. ಬರಡು ಒಣಮರವೊಂದು ನೆಲಕ್ಕೆ ಉರುಳಿಬಿದ್ದಂತೆ ಗಂಗಾ ಕಲ್ಲುಗೋಡೆಗೆ ಒಡೆದುಕೊಂಡು ದಬಾರನೆ ಬಿದ್ದಳು. ನೆತ್ತರು ಜಿನುಗತೊಡಗಿತು, ದೇಹದೊಳಗಿನ ಅಲೆಮಾರಿ ಹಕ್ಕಿ ಒಂದು ಗಳಿಗೆ ಅಲ್ಲೇ ಸುತ್ತುವರಿದು ಹಾರುತ್ತಾರುತ್ತಾ ಅದೃಶ್ಯವಾಯಿತು.

ಎಂದಿನಂತೆ ಕೆಫೆ ಡೇ ಆಸುಪಾಸಿನಲ್ಲಿ ಕಸ ಗುಡಿಸಲು ಬರುತ್ತಿದ್ದ ವೃದ್ಧ ಜಾಡಮಾಲಿ, 'ಗಂಗಮ್ಮೋ, ತಗಾ ಬನ್ನು ಟೀ.' ಮುಂದೆ ಇಟ್ಟ. ತಲೆ ಆ ಕಡೆಗೆ ವಾಲಿಕೊಂಡಿತ್ತು. ಅಸ್ತವ್ಯಸ್ತವಾಗಿ ಮಲಗಿಕೊಳ್ಳುವುದು ಅಭ್ಯಾಸವಾಗಿ ಹೋಗಿತ್ತಾದ್ದರಿಂದ ಏನೂ ಅನ್ನಿಸಲಿಲ್ಲ. ಮೊದಲ ಕೂಗಿಗೆ ಏಳಲಾರಳು. ಒಂದು ಸುತ್ತು ಗುಡಿಸಿ ಬರುವಷ್ಟೊತ್ತಿಗೆ ಬನ್ನು ತಿಂದು, ಟೀ ಕುಡಿದಿರುತ್ತಾಳೆ. ಕಸ ತಳ್ಳಿ ಮತ್ತೆ ಬಂದ, ನಾಯಿ ಬಾಲವಾಡಿಸುತ್ತಾ ಬನ್ನು, ಟೀ ಎದುರು ಕುಳಿತುಕೊಂಡಿತ್ತು. ಆದರೂ ಏನೋ ಚಡಪಡಿಕೆ. ಮುಖದ ಕಡೆ ಬಂದ, ರಕ್ತ ಮಡುಗಟ್ಟಿತ್ತು. ಕಣೆಪ್ಪೆಗಳ ಮೇಲೆ ಕೈಯಾಡಿಸಿದ. ಎದೆಗೆ ಅವುಚಿಕೊಂಡಿದ್ದ ಚಪ್ಪಲಿಗಳನ್ನು ಬಿಡಿಸಿಕೊಳ್ಳಲು ಮುಂದಾದ, ಆಗಲಿಲ್ಲ. ಹಾರೆ ಬಡಿದು

ಮೀಟಿದರೂ ಬರುವಂತಿರಲಿಲ್ಲ, ಅಷ್ಟೊಂದು ಬಲವಾಗಿ ತಬ್ಬಿಡಿದಿದ್ದಳು. ನಾಯಿಗೆ ಬನ್ನು ಎಸೆದು, ರಸ್ತೆಗೆ ಟೀ ಚೆಲ್ಲಿದ. ಜನ ಅಸಹಿಸಿಕೊಳ್ಳುತ್ತಾರೆಂದು ರಕ್ತ ಕರೆ ಕಟ್ಟಿದಲ್ಲಿ ಮಣ್ಣು ಎಳೆದ. ತಳ್ಳುವ ಕೈಗಾಡಿಯಲ್ಲಿ ಗುಬ್ಬಚ್ಚಿ ತೂಕದ ಗಂಗಾಳ ಮೃತದೇಹವನ್ನು ಹೊತ್ತುಹಾಕಿ ಹಣೆಗೆ ಅರಿಶಿಣ ಕುಂಕುಮ ಉಜ್ಜಿದ. ಕಾಂಪೌಂಡಿನಿಂದ ಆಚೀಚೆ ಸುಳಿದ ಟುಲಿಪ್ ಹೂಗಳನ್ನು ಕಿತ್ತುಕೊಂಡು ಎದೆ ಮೇಲೆ ಚೆಲ್ಲಿ, ಗೋಣಿಬಟ್ಟೆ ಸುತ್ತಿದ ಮುಖ ಮಾತ್ರ ಕಾಣುವಂತೆ, ಗಂಗಾಳ ಮುಖದಲ್ಲಿ ಎದ್ದ ಸುಕ್ಕುಗಳು ಅವಳು ನಡೆದುಬಂದ ದಾರಿಗಳನ್ನು ಸೂಚಿಸುತ್ತಿದ್ದವು. ಹಣೆಯ ಮೇಲೆ ಇಳಿದ ನರೆಗೂದಲು ಬೆಳ್ಳನೆ ಹೊಳೆಯುತ್ತಿದ್ದವು. ಹಲವು ಗೊಂದಲಗಳಲ್ಲಿ ಸಿಲುಕಿ ನರಳುವ ಅಸಂಖ್ಯ ಜನರ ನಡುವೆ ಗಂಗಾಳ ಅನಾಥ ಹೆಣ ಸಹಜವಾಗಿ ಸಾಗತೊಡಗಿತು.

ಗಂಗಾ ಹೂಡಿದ ಕೊನೆಯ ಚಳುವಳಿ ಹೀಗೆ ತಣ್ಣಗೆ ಅಸಹನೀಯವಾಗಿ ಆರಂಭಗೊಂಡಿತ್ತು!

+

# ೧೧. ತೆರೆಮರೆಯ ಯೋಧ

**· ವಿಕಾಸ್ ಆರ್ ಮೌರ್ಯ**

ಬಸಪ್ಪನಿಗೆ ನಿನ್ನೆ ರಾತ್ರಿ ಕಂಟ್ರಾಕ್ಟರ್ ರಾಜಾರೆಡ್ಡಿ ತಿಳಿಸಿದ ವಿಷಯಕ್ಕೆ ಎಲ್ಲಿಲ್ಲದ ಸಂಭ್ರಮ. ಆ ಸಂಭ್ರಮಕ್ಕೆ ಬೆಳಿಗ್ಗೆಯೇ ಎದ್ದು ಆತುರಾತುರವಾಗಿ ಎಂದಿನಂತೆ ಪ್ಲಾಸ್ಟಿಕ್ ಚಂಬಿನಲ್ಲಿ ನೀರು ತುಂಬಿಕೊಂಡು ನಿತ್ಯಕರ್ಮಕ್ಕೆ ಹೊರಟ.

ಊರ ಹೊರಗಿನ ಸಿಮೆಂಟ್ ಫ್ಯಾಕ್ಟರಿಯ ಮತ್ತು ರಾಜಕಾಲುವೆಯ ಬಳಿ ಅವನ ಮನೆ ಇತ್ತು. ಬಸಪ್ಪನಂತೆ ನಗರ ಸ್ವಚ್ಚ ಮಾಡುವ ಪೌರ ಕಾರ್ಮಿಕರ ಅರಮನೆಗಳು ಸಹ ಅಲ್ಲೇ ಉದ್ಭವವಾಗಿದ್ದವು. ಸಿಮೆಂಟ್ ಫ್ಯಾಕ್ಟರಿಯವರು ತಮ್ಮ ಜಾಗದವರೆಗೆ ಕಾಂಪೌಂಡನ್ನು ಕಟ್ಟಿಕೊಂಡಿದ್ದರು. ಆದರೆ ಕಾಂಪೌಂಡಿನ ಹೊರಗೆ ರಾಜಕಾಲುವೆಗೆ ಕಲುಷಿತ ನೀರನ್ನು ಬಿಡುತ್ತಿದ್ದರು. ರೋಗಿಷ್ಟ ನೀರನ್ನು ಹೊತ್ತು ತರುವ ರಾಜಕಾಲುವೆ ಫ್ಯಾಕ್ಟರಿಯ ಭಯಾನಕ ವಿಷದಿಂದ ಕೊನೆಯುಸಿರೆಳೆಯುತ್ತಿತ್ತು. ಈ ಸತ್ತ ನೀರೇ ಅಲ್ಲಿನ ಪೌರ ಕಾರ್ಮಿಕರ ಜೀವ ಉಳಿಸಿಕೊಂಡು ಬರುತ್ತಿತ್ತು. ಬಸಪ್ಪ ಮಾಮೂಲಿಯಾಗಿ ಕಸವನ್ನು ಹಾಕಿ ರಾಜಕಾಲುವೆಯಲ್ಲಿನ ಸತ್ತ ನೀರಿನಲ್ಲೇ ಸಾಯುತ್ತಿರುವ ನೀರಿಗಾಗಿ ಹುಡುಕಿ ತಿಳಿಯಾಗಿಸಿ ಕೆಲಸ ಮುಗಿಸಿಕೊಂಡು ಬಂದ.

ಅಂದೇಕೋ ಮೈಸೂರಿಗೆ ಹೊರಡುವ ರೈಲು ಹೊರಟೇ ಇರಲಿಲ್ಲ. ಅದೇ ಇಲ್ಲಿನ ದುಡಿವ ಯೋಗಿಗಳಿಗೆ ಕೆಲಸದ ವೇಳೆಯನ್ನು ತಿಳಿಸುವ ಗಡಿಯಾರ. ಏಕೆಂದರೆ ಇವರ ಕೆಲಸ ಸೂರ್ಯ ಹುಟ್ಟುವುದಕ್ಕು ಮುನ್ನ ಪ್ರಾರಂಭವಾಗುವುದರಿಂದ ಆ ರೈಲೇ ಇವರಿಗೆ ಗಡಿಯಾರ, ಸೂರ್ಯ ಇವರ ದರುಶನ ಪಡೆಯುವುದು ಅರ್ಧ ಕೆಲಸವಾದಾಗಲೇ. ಮನೆ ಬಳಿ ಬಂದವನೇ ತನ್ನ ಸಂಗಡಿಗರನ್ನು ಮಾತನಾಡಿಸಿ ಮನೆ ಹಿಂದೆ ತೆರಳಿ ರಾಜಕಾಲುವೆಯ ನೀರು ಮನೆ ಬುಡಕ್ಕೆ ಬಂದಿರುವುದನ್ನು ಕಾತರಿ ಪಡಿಸಿಕೊಂಡ. ದಿನೇ ದಿನೇ ಸಿಮೆಂಟಿನ ತ್ಯಾಜ್ಯ ಹೆಚ್ಚಾಗುತ್ತಿದ್ದರಿಂದ ಬಸಪ್ಪನ ಮನೆಯ ಬುಡವನ್ನೇ ನೀರು ಕುಡಿಯುತ್ತಿತ್ತು. ಆದರೂ ಅಂದಿನ ಸಂಭ್ರಮಕ್ಕೆ ಕಾರಣ ನೆನಸಿಕೊಂಡು ತನ್ನ ಪಾಲಿನ ನಾಲಕ್ಕು ಕಿಲೋಮೀಟರ್ ದೂರದ ರಸ್ತೆಯನ್ನು ಮತ್ತು ಎರಡು ಲೇ ಔಟುಗಳನ್ನು ಬರಿಗಾಲಲ್ಲಿ ನಡೆದು ಎಂದಿನಂತೆ ಭೂತಾಯಿಯನ್ನು ಸಿಂಗರಿಸಲು ಅಣಿಯಾದ. ತನ್ನ ಕೈಗಳ ಹತ್ತು ಬೆರಳಿನೊಂದಿಗೆ ಹುಟ್ಟಿನಿಂದಲೂ ಜೊತೆಯಾಗಿರುವ ಕಡ್ಡಿ ಬೆರಳುಗಳನ್ನು ಪರಪರನೆ ಸವರುತ್ತಾ ಭೂತಾಯಿಗೆ ಅಂಟಿದ್ದ ಕೊಳೆಯನ್ನು ಮಳೆರಾಯನೂ ನಾಚುವಂತೆ ಸ್ವಚ್ಚಮಾಡುತ್ತಿದ್ದ. ದಾರಿಹೋಕರ ಕಸ, ಲೇ ಔಟುಗಳ ಮಡಿವಂತರ ಕಸವನ್ನು ತೊಡೆದು ಗುಡ್ಡೆಯಾಗಿಸುವಷ್ಟರಲ್ಲಿ ಬಸಪ್ಪನಿಗೆ

ನೀರಡಿಕೆಯಾಗಿ ಸುಸ್ತಾಗುತಿತ್ತು. ಲೇಔಟಿನ ಹೊರಗಡೆಯಿದ್ದ ಬೋರ್ವೆಲ್ ಬಳಿಯೇ ನೀರು ಕುಡಿಯಲು ತೆರಳಬೇಕು. ಏಕೆಂದರೆ ಇವನು ಕಾಯಕ ಮಾಡುವಾಗ ಇಡೀ ಲೇಔಟಿಗೇ ಲೇಔಟೇ ಮಲಗಿರುತ್ತಿತ್ತು. ಹಲವರು ಬೆಳಗಿನ ವಾಯುವಿಹಾರಕ್ಕಾಗಿ ಹೊರಗೆ ಬರುತ್ತಿದ್ದರಾದರೂ ಅವರೆಲ್ಲ ನೀರು ಕೊಡುವವರಲ್ಲ. ಅಷ್ಟೊತ್ತಿಗೆ ಬಸಪ್ಪ ನೀರು ಕುಡಿಯಲು ಹಪಹಪಿಸಬೇಕಿತ್ತು. ಉಸ್ಸಪ್ಪ ಎಂದು ಉಸಿರು ಬಿಡಬೇಕಿತ್ತು ಆದರೆ ಅವನಲ್ಲಿ ಅಡಗಿದ್ದ ಸಂಭ್ರಮ ಇಂದು ಜಟ್ಟಿಯ ಶಕ್ತಿಯನ್ನು ತಂದಿತ್ತು. ಪ್ರಾಣದ ಗೆಳೆಯ ಪಕ್ಕದ ಸ್ಲಂಮ್ಮಿನ ಮಣಿ ನೆನಪಾಗಿ ಅವನ ಬಳಿಗೆ ತನ್ನ ಮನೆಯ ಖಾಯಂ ಸದಸ್ಯ ಕಸಪೊರಕೆಯೂ ಹೊರಟಿತು ಮಿಂಚನ್ನು ಗುಡುಗು ಹಿಂಬಾಲಿಸುವಂತೆ.

ಮುಂಜಾನೆ ಧಡೂತಿ ದೇಹಗಳು ನೀರು ತುಂಬಿದ ಪ್ಲಾಸ್ಟಿಕ್ ಕವರುಗಳಂತೆ ತುಳುಕಾಡುತ್ತಾ ನಡೆದು ಬರುತ್ತಿದ್ದವು, ಓಡುತ್ತಿದ್ದವು. ಜಿಗಿಯುತ್ತಿದ್ದವು. ಪಕ್ಕದ ಪಾರ್ಕಿನಲ್ಲಿ, ಮನೆಯಲ್ಲೇ ಹೃದಯವನ್ನಿಟ್ಟು ಬಂದಿದ್ದ ಸಿರಿವಂತರ ವೃತ್ತಾಕಾರದಲ್ಲಿ ನಿಂತು ಗಂಭೀರವಾಗಿ ಒಂದೇ ಸಮನೆ ಗಹಗಹಿಸಿ ನಗುತ್ತಿತ್ತು. ನಗಲು ಹೇಳಿಕೊಡುವ ಮತ್ತೊಬ್ಬ ಮಾಸ್ತರು ಕೂಡ ಅಲ್ಲಿದ್ದ. ದಿನಕ್ಕೆ ಎರಡು ಲೀಟರ್ ಹಾಲು, ಇಪ್ಪತ್ತು ಮೊಟ್ಟೆ ತಿನ್ನುವ ಬಗೆ ಬಗೆಯ ಹೆಸರಿನ ನಾಯಿಗಳು ಸಹ ಯಜಮಾನನ ಜೊತೆಯಲ್ಲಿ ಓಡುತ್ತಿದ್ದವು. ಪಾಪ ಅವಕ್ಕೂ ಅಜೀರ್ಣಬಾಧೆ ಇರಬೇಕು. ಪಾರ್ಕಿನ ಹೊರಗಂತೂ ತರಾವರಿಯ ಕಾರುಗಳು. ಮನೆಯಿಂದ ಕಾರಿನಲ್ಲಿ ಬರುತ್ತಿದ್ದ ಸಿರಿವಂತರು ಪಾರ್ಕಿನಲ್ಲಿ ವ್ಯಾಯಾಮ ಮಾಡಿ ಮತ್ತೆ ಕಾರಿನಲ್ಲಿ ಮನೆಗೆ ಪಯಣಿಸುತ್ತಿದ್ದರು. ಯಾರದೋ ದುಡ್ಡಿನಲ್ಲಿ ಚಾಮುಂಡಮ್ಮನ ಜಾತ್ರೆ ಮಾಡಲಿವರಿಗೇನು ಕಷ್ಟ? ಇವರು ರಸ್ತೆಗಳಲ್ಲಿ ನಡೆಯುವುದೇ ಅಪರೂಪ. ನಡೆದರೆ ಎಡುವಿ ಬೀಳುವುದಂತೂ ಖಚಿತ. ಕಾರಣ ಇವರ ಕಣ್ಣುಗಳು ಕೆಳನೋಡುವುದನ್ನು ಮರೆತು ಎಷ್ಟೋ ದಿನಗಳಾದವು. ಅದಕ್ಕೆ ತಕ್ಕಂತೆ ಸರ್ಕಾರ ಮೆಟ್ರೊ ಮಾಡಿ ಮೇಲೆರಗಿಸುತ್ತಿತ್ತು.

ಇಂತಿಪ್ಪ ಭಾರತ ದೇಶದ ನಗರಗಳು ಈ ಪಾಟಿಯಾಗಿ ಮುಂದುವರೆದಿರಲು ಬಸಪ್ಪ ತನ್ನ ಕುಟುಂಬ ಸದಸ್ಯನಾದ ಕಸಪೊರಕೆಯನ್ನು ಎಳೆದುಕೊಂಡು ಬರುತ್ತಿರುವಾಗ ರಸ್ತೆಯ ಬದಿಯಲ್ಲಿ ಮಿಲಿಟರಿ ಧಿರಿಸಿನ ವ್ಯಕ್ತಿಯೊಬ್ಬ ತನ್ನ ಕಾಲುಗಳಿಗೆ ಹಾಕಿದ್ದ ಬೂಟುಗಳನ್ನು ಪಕ್ಕದಲ್ಲಿ ಅನಾಥವಾಗಿ ಬೆಳೆದಿದ್ದ ಗರಿಕೆ ಹುಲ್ಲಿನ ಮೇಲೆ ತಿಕ್ಕುತ್ತಿದ್ದ. ತಿಕ್ಕಿ ತಿಕ್ಕಿ ಸುಸ್ತಾಗಿ ಸೊಂಟದ ಮೇಲೆ ಕೈ ಇರಿಸಿ ನಿಂತ. ಇದನ್ನು ದೂರದಿಂದಲೇ ನೋಡಿಕೊಂಡು ಬರುತ್ತಿದ್ದ ಬಸಪ್ಪನಿಗೆ ಆಶ್ಚರ್ಯ ಮನದಾಳಿತು. ಆ ವ್ಯಕ್ತಿಯ ಸಮಸ್ಯೆಯನ್ನು ಕೇಳಲೋ ಬೇಡವೋ ಎಂದು ಅವನ ಬಳಿ ಬರುತ್ತಲಿದ್ದಂತೆ ನಡಿಗೆಯನ್ನು ನಿಧಾನವಾಗಿಸಿದ. ಇದನ್ನು ಗಮನಿಸಿದ ಮಿಲಿಟರಿಯವ ಅವನದೇ ಶೈಲಿಯಲ್ಲಿ "ಹೇ ಬಾ ಇಲ್ಲಿ" ಎಂದು ಬಸಪ್ಪನನ್ನು ಕರೆದ. ಜೇಬಿನಿಂದ ೫೦ ರೂಪಾಯಿ ನೋಟು ತೆಗೆದು ಅವನಿಗೆ ಕೊಡುತ್ತಾ "ನನ್ನ ಶೂಗೆ ಎಂತದೋ ಮೆತ್ತಿಕೊಂಡಿದೆ, ಸ್ವಲ್ಪ ಕ್ಲೀನ್ ಮಾಡಿ ಕೊಡು" ಎಂದು ಆಜ್ಞೆ ಮಾಡಿದ.

ಬಸಪ್ಪನಿಗೆ ಮಿಲಿಟರಿ ಮನುಷ್ಯರ ಬಗ್ಗೆ ಗೌರವವಿತ್ತು. ಬಂದೂಕು ಹಿಡಿದು ದೇಶಕ್ಕಾಗಿ ಜೀವವನ್ನು ಹಾರಿ ಬಿಡುವ ಇವರನ್ನು ಟೀವಿಯಲ್ಲಿ ಆಗಾಗ ನೋಡಿದ್ದ. ಇಂತಹ ವ್ಯಕ್ತಿ ಬಸಪ್ಪನನ್ನು ಮಾತನಾಡಿಸಿದ್ದೇ ಅವನಿಗೆ ದೊಡ್ಡದಾಗಿ ಕಂಡಿತು. ಮಿಲಿಟರಿಯವನ ಹತ್ತಿರ ಹೋಗುತ್ತಿದ್ದಂತೆ ರಾತ್ರಿ ಕುಡಿದ ಸಾರಾಯಿ ವಾಸನೆ ಮಿಲಿಟರಿಯವನ ಮೂಗಿಗೆ ಬಡಿಯಿತು. ವಾಸನೆ ಚಿರಪರಿಚಿತವಾದರೂ ಬೆಳಿಗ್ಗೆಯೇ ಆಗಿದ್ದರಿಂದ "ಏನಪ್ಪಾ ಬೆಳಿಗ್ಗೆ ಬೆಳಿಗ್ಗೇನೆ ಕುಡಿದಿದಿಯಾ?" ಎಂದ ಮಿಲಿಟರಿಯವ ಜಮ್ಮು ಕಾಶ್ಮೀರವನ್ನೊಮ್ಮೆ ನೆನಪಿಗೆ ತಂದುಕೊಂಡು.

"ಇಲ್ಲಾ ಸಾ... ರಾತ್ರೀದು ಇನ್ನೂ ಘಮಗುಡುತ್ಯೆತೆ, ಬೆಳಿಗ್ಗೆಲೆ ಕುಡಿಯಕ್ಕೆ ಪುರುಸೊತ್ತೆತೆ ಸಾ" ಎಂದು ಬೂಟಿನ ಗಂಟು ಬಿಡಿಸಲು ಕೆಳ ಕೂತ. ಆದರೆ ಗಂಟು ಬಿಚ್ಚಲು ತಿಳಿಯದೆ ತಿಣುಕಾಡುತ್ತಿರಲು ಅವನಿಗೆ ಮಿಲಿಟರಿಯವ ಮಾರ್ಗದರ್ಶನ ಕೊಟ್ಟ.

"ಬೆಳಿಗ್ಗೆ ಎದ್ದು ಹಲ್ಲುಜ್ಜಿಕೊಂಡು ಬರಲಾಗಲಿಲ್ಲವೇನಯ್ಯಾ? ಶಿಸ್ತು ಮುಖ್ಯ ಶಿಸ್ತು" ಎಂದದ್ದಕ್ಕೆ "ಶಿಸ್ತೆಲ್ಲ ತಿಳಿಯಾದಿಲ್ಲ ಸಾ.. ಬೆಳಿಗ್ಗೆ ಎದ್ದು ನನ್ನ ಪಾಲಿನ ರಸ್ತೆ, ಲೇಔಟನ್ನ ಕಿಲೀನ್ ಮಾಡಿಬುಟ್ರೆ ಅಲ್ಲಿನ ಜನ ಕಿಲೀನ್ ಆಯ್ತುರೆ. ಅವರೆಲ್ಲ ಕಿಲೀನ್ ಆದ ಮೇಲೆ ನಮ್ಮ ಕಿಲೀನ್ ಅಲ್ವುರಾ?" ಎಂದ ಬಸಪ್ಪ ಕೈಗೆ ಬಂದ ಬೂಟನ್ನು ಪಕ್ಕಕ್ಕೆ ತೆಗೆದುಕೊಂಡು ಹೋಗಿ ಒಂದಷ್ಟು ಗರಿಕೆ ಹುಲ್ಲು ಕಿತ್ತು ಗಂಟು ಕಟ್ಟಿ ಆ ಹೊಲಸು ನಾಯಿಯ ಕಕ್ಕಸ್ಸೇ ಎಂದು ಖಚಿತಪಡಿಸಿಕೊಂಡು ಬೂಟು ಒರೆಸುತ್ತಾ ಕುಳಿತ. ಕೈಯಿಂದಲೇ ಆ ಹೊಲಸನ್ನು ಒರೆಸುತ್ತಿದ್ದನ್ನು ನೋಡಲಾರದೆ ಆ ಕಡೆ ತಿರುಗಿ ನಿಂತ ಮಿಲಿಟರಿಯವ ಸ್ವಚ್ಛವಾದ ರಸ್ತೆ ನೋಡುತ್ತಾ, ವಾಯು ವಿಹಾರಿಗಳನ್ನು ನೋಡುತ್ತಾ, ತಂಪಾದ ಗಾಳಿಯನ್ನು ಅನುಭವಿಸುತ್ತ ನಿಂತ.

ಸ್ವಲ್ಪ ಹೊತ್ತಿನಲ್ಲಿಯೇ ಫಳಫಳನೇ ಹೊಳೆಯುವ ಬೂಟು ತಂದು "ಎಲ್ಲಿ ಸಾ... ಕಾಲು ಕೊಡಿ" ಎಂದು ಬೂಟನ್ನು ಪಾದಕ್ಕೆ ಸೇರಿಸಿದ. ಇನ್ನೊಂದು ಬೂಟು ಧೂಳು ಮೆತ್ತಿದನ್ನು ಕಂಡು ಹಾಗೆಯೇ ಅದನ್ನೂ ಸಹ ತನ್ನ ಟವಲ್ಲಿನಲ್ಲಿ ಒರೆಸಲು ಮುಂದಾದಾಗ ಮಿಲಿಟರಿಯವ ಬೇಡವೆಂದು ಎಷ್ಟೇ ಹೇಳಿದರು ಕೇಳದೆ ಅದನ್ನೂ ಫಳ ಫಳವಾಗಿಸಿದ. ಮಿಲಿಟರಿಯವ ಕೈಲಿದ್ದ ೫೦ ರೂಪಾಯಿ ನೋಟು ಕೊಡಲು ಮುಂದಾದಾಗ "ನೀವು ನಮ್ಮ ದೇಸ ಕಾಯೋರು ಸಾ... ನಿಮ್ಮ ಸೇವೆ ಮಾಡಿದ್ದೇ ನನ್ನ ಪುಣ್ಯ" ಎಂದು ಹೇಳಿ ನಮಸ್ಕರಿಸಿ ಮುಂದೆ ನಡೆದ, ಅವನ ಹಿಂದೆ ಕಸಬರಿಕೆ ಗುಡುಗಲಾರಂಭಿಸಿತು.

ಬೆಳಿಗ್ಗೆಯೇ ಸ್ವಚ್ಛವಾಗಿದ್ದ ಅಂಗಿಗೆ ಮತ್ತೆ ಹೊಲಸು ಮೆತ್ತಿಕೊಂಡು ಆ ಅಂಗಿ ನಗಲಾರಂಬಿಸಿತು. ಇತ್ತ ಮಿಲಿಟರಿಯವನ ಬೂಟು ಸಹ ಕಕ್ಕಸ್ಸನ್ನು ಕಳೆದುಕೊಂಡು ಮತ್ತೆ ನಗುತ್ತಿತ್ತು. ಅದೇಕೋ ಮಿಲಿಟರಿಯವನಿಗೆ ಸಮಾಧಾನವಾಗಲಿಲ್ಲ ಬಸಪ್ಪನ ಬಳಿ ಓಡಿದವನೇ "ನಿನ್ನ ಹೆಸರೇನು?" ಎಂದು ಕೇಳಿದ.

"ಬಸಪ್ಪ."

"ಕುಡಿಯುವುದನ್ನು ಬಿಟ್ಟುಬಿಡು, ಆರೋಗ್ಯಕ್ಕೆ ಒಳ್ಳೆಯದಲ್ಲ."

"ನಾನು ಸುಮಾ ಸರಿ ಕುಡಿಯಾದ ಬಿಡಬೇಕು ಅನ್ಕಂಡೀನಿ ಸಾ. ಆದ್ರೆ ಹಾಳಾದ್ದು ಹಸಿವು ಅದನ್ನ ಬಿಡಿಸ್ತಿಲ್ಲ" ಎಂದು ಹೇಳಿದ ಬಸಪ್ಪ ತುರ್ತಾಗಿ ಕೆಲಸವಿದೆಯೆಂದು ಹೇಳಿ ಹೊರಟ. ಮಿಲಿಟರಿಯವನಿಗೆ ಬಸಪ್ಪನ ಮಾತು ಅರ್ಥವಾಗಲಿಲ್ಲ. ಹಸಿವಿಗೂ ಕುಡಿಯುವ ಚಟಕ್ಕೂ ಇರುವ ಸಂಬಂಧವೇನು ಎಂಬ ಪ್ರಶ್ನೆ ಕಾಡುತ್ತಲೇ ಇತ್ತು.

***

ಮಣಿಯ ಬಳಿ ಬಂದ ಬಸಪ್ಪನ ಹರುಷ ನೋಡಿ "ಏನಣ್ಣ ಸಮಾಚಾರ? ಬಾಳ ಕುಸಿಯಾಗಿದ್ದೆ" ಎಂದ ಮಣಿ.

"ಹೌದು ಮಣಿ. ಇವತ್ತು ನಿಂಗೆ ಎರಡು ಹೊಸ ಸುದ್ದಿ."

"ಅದೇನ್ ಬೇಗ ಹೇಳಣ್ಣ, ಗುತ್ತಿಗೆ ಪದ್ಧತಿನ ಕಿತ್ತಾಕರಂತಾ? ಸಂಬಳ ಜಾಸ್ತಿ ಮಾಡವ?" ಗುತ್ತಿಗೆದಾರರಿಂದ ವಂಚಿತರಾಗಿದ್ದ ಪೌರಕಾರ್ಮಿಕರಿಗೆ ಇರುವ ಚಿಂತೆಯೇ ಮಣಿಗೂ ಇತ್ತು. ಇದರ ಬಗ್ಗೆ ಮಾತಾಡಿ ಮಾತಾಡಿ ರೋಸಿಹೋಗಿದ್ದ ಬಸಪ್ಪ "ಏ... ನಿಂಗ್ಯಾವಾಗ್ಲು ಅದೇ ವ್ಯಾಸ. ಅದು ಈ ಸೂರ, ಚಂದ್ರ ಇರಾಗಂಟ ರದ್ದಾಗಂಗಿಲ್ಲಂತ ರೆಡ್ಡಣ್ಣ ಹೇಳಿಲ್ವ? ಬೇರೆ ಇಚಾರ ಐತೆ" ಎಂದ ಬಸಪ್ಪ ಚರಂಡಿಯ ಪಕ್ಕದಲ್ಲಿ ಕುಳಿತು ಒಂದು ಬೀಡಿ ಹಚ್ಚಿ, ಮಣಿಗೂ ಬೀಡಿ ಕೊಟ್ಟು ಒಮ್ಮೆ ಉಸಿರು ಬಿಟ್ಟು ಚರಂಡಿಯ ಪರಿಮಳ ಸವಿಯುತ್ತಾ ತನ್ನ ಸಂಭ್ರಮವನ್ನು ಹಂಚಿಕೊಳ್ಳುತ್ತ "ಇವತ್ತು ಮಿಲಿಟರಿ ಮನುಸಾ ಸಿಕ್ಕಿದ್ರು, ಅವರೇ ನನ್ನ ಕರೆದು ಮಾತಾಡಿಸಿದ್ರು ಗೊತ್ತಾ!" ಎಂದಾಕ್ಷಣ ಆಶ್ಚರ್ಯಚಕಿತನಾದ ಮಣಿ "ಪರವಾಗಿಲ್ವೇ ನಮ್ಮಣ್ಣಂಗೆ ಮಿಲಿಟರಿ ಯವರೂ ಗೊತ್ತೇನು?" ಎಂದ.

ಬಸಪ್ಪ ನಾಚಿಕೊಳ್ಳುತ್ತ "ಏ.. ಮಾತ ಕೇಳು. ನನ್ನ ಕರ್ದು ಅವರ ಬೂಟ ಮೆತ್ತಿದ್ದ ಹೊಲಸು ಕಿಲೀನ್ ಮಾಡಿಕೊಡು ಅಂದ್ರಪ್ಪ. ಅದಲ್ದೇ ೫೦ ರೂಪಾಯಿ ಕೊಡಾಕ ಬಂದ್ರು ಆದ್ರೇ ಅಂತ ದೊಡ್ಡ ಮನುಸರತಾವ ದುಡ್ಡ ಕೇಳದುಂಟಾ? ಅದುಕ್ಕೆ ಬ್ಯಾಡ ಅಂದೆ" ಎಂದು ಹೇಳಿ ಮಣಿ ಮಾತನಾಡುವ ಮುಂಚೆಯೇ ಇನ್ನೊಂದು ಸಂಭ್ರಮದ ವಿಚಾರ ಹೇಳಲು ಅಣಿಯಾದ "ಇನ್ನೊಂದ್ ಇಷ್ಯ ಏನ್ ಗೊತ್ತಾ? ಇವತ್ ಸಂಜೆ ಅರಮನೆ ಮೈದಾನದಲ್ಲಿ ಯಾರಿಗೋ ಸನ್ಮಾನ ಮಾಡ್ತರಂತೆ ಅದ್ಕೆ ನಮಗೆ ಕಿಲೀನ್ ಮಾಡಾಕೆ ಹೇಳಾರಪ್ಪ, ಸಂಜೆ ಫುಲ್ ಸರಾಯಿ ಕನ್ ಮಣಿ" ಎಂದು ಜೋರಾಗಿ ನಕ್ಕ ಬಸಪ್ಪ.

ಈ ಸುದ್ದಿ ಕೇಳಿ ಮಣಿಯ ಮುಖದಲ್ಲಿ ಮಂದಹಾಸ ತುಂಬಿತು. ಎಲೆಕ್ಷನ್ ನಡೆದು ಅದಾಗಲೇ ಮೂರು ವರ್ಷವಾಗಿದ್ದರಿಂದ ಸಾರಾಯಿಯನ್ನು ಕಂಠಪೂರ್ತಿ ಕುಡಿವ ಸುಸಮಯ ಇವರಿಗೆ ಬಂದಿದ್ದೇ ಇಲ್ಲ. ಆದ್ದರಿಂದ ಸಹಜವಾಗಿಯೇ ಬಸಪ್ಪನ ಗ್ಯಾಂಗಿಗೆ ಸಾರಾಯಿಯ ಭಾಗ್ಯ ದಕ್ಕಿದ್ದು ಖುಷಿ ತಂದಿತ್ತು.

ಮಿಲಿಟರಿಯವನು ತನ್ನ ಸ್ನೇಹಿತನ ಬರುವಿಗಾಗಿ ಕಾಯುತ್ತಲೇ ಇದ್ದ. ಅವನ ತಲೆಯಲ್ಲಿ ಬಸಪ್ಪನ ಮಾತುಗಳೇ ಗುಯ್ ಗುಡುತ್ತಿದ್ದವು. ಎಷ್ಟೇ ಯೋಚಿಸಿದರೂ ಹಸಿವು ಮತ್ತು ಸಾರಾಯಿಗಿರುವ ಸಂಬಂಧ ತಿಳಿಯಲೇ ಇಲ್ಲ. ಹೀಗೆ ಯೋಚಿಸುತ್ತಿರಲು ಸ್ನೇಹಿತ ಗಂಗಾಧರ ಕಾರಿನಲ್ಲಿ ಬಂದು ಮಿಲಿಟರಿಯವನನ್ನು ಕರೆದುಕೊಂಡು ಹೊರಟ.

ದಿನೇಶ ತನ್ನ ೧೪ ವರ್ಷದ ಮಿಲಿಟರಿ ಸರ್ವೀಸಿನಲ್ಲಿ ಬಹಳಷ್ಟು ಸಾಧನೆ ಮಾಡಿದ್ದ. ಮಿಲಿಟರಿಯಲ್ಲಿ ಒಳ್ಳೆಯ ಹುದ್ದೆಯಲ್ಲೂ ಸಹ ಇದ್ದ. ಇವನಂತಹ ಸಾಧಕರಿಗೆ ರಾಜ್ಯೋತ್ಸವದ ಅಂಗವಾಗಿ ಸನ್ಮಾನ ಕಾರ್ಯವನ್ನು ಹಮ್ಮಿಕೊಳ್ಳಲಾಗಿತ್ತು. ಆ ಕಾರ್ಯಕ್ರಮದಲ್ಲಿ ದಿನೇಶನನ್ನು ಸನ್ಮಾನಿಸುತ್ತಿದ್ದರಿಂದ ಸ್ನೇಹಿತ ಗಂಗಾಧರನ ಮನೆಗೆ ಬಂದಿದ್ದ.

ಬಹಳ ದಿನಗಳ ನಂತರ ಬೇಟಿಯಾಗುತ್ತಿರುವ ಸ್ನೇಹಿತ ಮಾತನಾಡದೆ ಯೋಚನಾಮಗ್ನನಾಗಿರುವುದನ್ನು ಕಂಡು ಗಂಗಾಧರ "ಯಾಕಪ್ಪಾ ದಿನೇಶ, ಎಷ್ಟು ದಿನಾ ಆಯ್ತು ಮೀಟ್ ಮಾಡಿ, ಮಾತಾಡೋದು ಬಿಟ್ಟು ಏನೋ ಯೋಚನೆ ಮಾಡ್ತಾ ಕುಳಿತಿದ್ದೀಯಲ್ಲೋ. ಮದ್ಯ ಮಾಡಿಕೋತೀನಿ ಅಂತೇನಾದ್ರು ಶಾಕ್ ಕೊಡ್ತೀಯೇನೋ?" ಎಂದ. ಎಚ್ಚೆತ್ತ ದಿನೇಶ "ಸಾರಿ ಕಣೋ. ವೆರಿ ಸಾರಿ, ಬೆಳಿಗ್ಗೆ ತನಕ ಚೆನ್ನಾಗಿದ್ದೆ, ಆದ್ರೆ ಒಂದು ಘಟನೆ ನಡೀತು ಅದರ ಬಗ್ಗೇನೆ ಯೋಚಿಸ್ತಾ ಕೂತೆ" ಎಂದು ಹೇಳಿ ಗಂಗಾಧರನ ಒತ್ತಾಯದ ಮೇರೆಗೆ ಇದ್ದ ವಿಷಯವನ್ನು ಸ್ವಲ್ಪವೂ ಬಿಡದೆ ಹೇಳಿ ಮುಗಿಸಿದ.

ಗಂಗಾಧರನದ್ದು ಮಾನವೀಯತೆಗೆ ಮಿಡಿಯುವ ಹೃದಯವಾದ್ದರಿಂದ ಅವನಿಗೆ ತಿಳಿದಿರುವ ಹಲವು ಪೌರ ಕಾರ್ಮಿಕರ ಪಾಡನ್ನು ದಿನೇಶನಿಗೆ ವಿವರಿಸುವಷ್ಟರಲ್ಲಿ ಮನೆ ಬಂದಿತು. ದಿನೇಶನಿಗೆ ಮನೆಯಲ್ಲಿ ಭವ್ಯ ಸ್ವಾಗತವೇ ದೊರೆಯಿತು. ಅತಿಥಿ ಸತ್ಕಾರ ಬಹಳ ಜೋರಾಗಿಯೇ ಇತ್ತು. ಭಾರತ ಮಾತೆಯನ್ನು ನೋಡಿದಷ್ಟೇ ಸಂತೋಷದಿಂದ ನೆರೆಮನೆಯ ಜನತೆ ಬಂದು ನೋಡಿಕೊಂಡು ಹೋಗುತ್ತಿದ್ದರು. ಉಪಾಹಾರವಾದ ನಂತರ ದೂರದರ್ಶನದ ಇಂಟರ್‌ವ್ಯೂ ಕೂಡ ಮುಗಿಯಿತು. ಪ್ರಯಾಣದ ಸುಸ್ತು ನಿವಾರಿಸಲು ಸ್ವಲ್ಪ ಹೊತ್ತು ಮಲಗಿದನಾದರೂ ಬಸಪ್ಪ ಮಾತ್ರ ಅವನನ್ನು ಬಿಡಲಿಲ್ಲ.

ಮದ್ಯಾಹ್ನದ ಊಟದ ಮುಂದೆ ಕುಳಿತ ದಿನೇಶನಿಗೆ ಆಹಾರದ ಆಯ್ಕೆಯೇ ಕಷ್ಟವಾಗಿತ್ತು. ತರಹೇವಾರಿ ತಿನಿಸುಗಳು ಅವನಿಗಾಗಿಯೇ ತಯಾರಾಗಿತ್ತು. ದಿನೇಶನ ಹಿಂಸೆಯ ಮೇರೆಗೆ ಮನೆಯವರೆಲ್ಲರು ಒಟ್ಟಿಗೆ ಕುಳಿತು ಊಟ ಮಾಡುವುದು ಎಂದು ತೀರ್ಮಾನವಾಗಿ ಎಲ್ಲರೂ ಡೈನಿಂಗ್ ಟೇಬಲ್ಲಿನ ಮೇಲೆ ಇದ್ದ ಬದ್ದ ಚೇರುಗಳನ್ನು ತಂದು ಕುಳಿತುಕೊಂಡರು. ಮಕ್ಕಳಂತು ಗಲಾಟೆ ಮಾಡುತ್ತಾ ಬೇಕಾದ್ದನ್ನು ತಿನ್ನುತ್ತಿದ್ದಾಗ ತಾಯಂದಿರು ದಿನೇಶನಿಗೆ ತಿಳಿಯದಂತೆ ಅಗಲವಾಗಿ ಕಣ್ಣಿಟ್ಟು ಸುಮ್ಮನಿರಿಸುತ್ತಿದ್ದರು. ಮಿಲಿಟರಿಯವನಾದ್ದರಿಂದ ಊಟ ಮಾಡುವಾಗ ಗಲಾಟೆ ಮಾಡಬಾರದೆಂಬುದು

ಅವರ ಅಭಿಪ್ರಾಯ. ಆದರೆ ದಿನೇಶನಿಗೆ ಊಟ ಮಾಡುವಾಗಲೂ ಸಹ ಬಸಪ್ಪ ಬಿಡುತ್ತಿರಲಿಲ್ಲ. ಮಾತನಾಡದೆ ತಿನ್ನಲು ಇಷ್ಟವಾಗಲಿಲ್ಲ. ಕೊನೆಗೂ ಬಾಯ್ತೆರೆದ ದಿನೇಶ ಗಂಗಾಧರನನ್ನು ನೋಡಿ "ಈ ರೀತಿ ಊಟ ಮಾಡುವುದನ್ನು ಕುಡಿಯುವುದಕ್ಕು ಏನಾದರೂ ಸಂಬಂಧವಿದೆಯೇನು?" ಎಂದು ಪ್ರಶ್ನಿಸಿದ.

"ನಾನು ಯೋಚಿಸಿ ನೋಡಿದೆನಪ್ಪ. ಆದರೆ ಅರ್ಥವಾಗಲಿಲ್ಲ"

"ನನಗಂತು ಅವನ ಮಾತುಗಳು ಹುಚ್ಚನ್ನೇ ಹಿಡಿಸಿಬಿಟ್ಟಿವೆ"

ಮಧ್ಯೆ ಬಾಯಿ ಹಾಕಿದ ಗಂಗಾಧರನ ಹೆಂಡತಿ ಏನೆಂದು ಕೇಳಲು ಅವರಿಗೂ ವಿವರಿಸಲು ಸುರುವಿಟ್ಟ ದಿನೇಶನಿಗೆ ಅವರ ಮುಂದೆ ಪೂರ್ಣ ಕಥೆ ಹೇಳಲಾಗಲೇ ಇಲ್ಲ. ಎಲ್ಲರೂ ಊಟ ಮಾಡುತ್ತಿದ್ದದ್ದರಿಂದ ಬೂಟಿಗೆ ಅಂಟಿಕೊಂಡಿದ್ದ ನಾಯಿಯ ಕಕ್ಕಸ್ಸಿನ ತನಕ ಬಂದು ಅದನ್ನು ಹೇಳದೆ ಸುಮ್ಮನೆ ಕುಳಿತುಬಿಟ್ಟ. ಆಗ ಅವನಿಗೆ ಜ್ಞಾನೋದಯವಾಯಿತು. ತನಗೆ ತಿಳಿದ ವಿಷಯವನ್ನು ಗಂಗಾಧರನಿಗೆ ಹೇಳಲು ಬೇಗ ಬೇಗನೆ ಊಟ ಮಾಡಿ ಹೊರಗೆ ಬರಲು ತಿಳಿಸಿದ. ಇಬ್ಬರು ಹೊರಗೆ ಬಂದು ನಡೆದುಕೊಂಡು ಹೋಗುವಾಗ ಕಾತರನಾಗಿದ್ದ ದಿನೇಶ "ಗಂಗಾಧರ, ಬಸಪ್ಪನ ಮಾತುಗಳು ನನಗೆ ಈಗ ಅರ್ಥವಾದವು. ಪಾಪ ಅವನದ್ದು ಎಷ್ಟು ಕಷ್ಟ ಜೀವನ ಅಲ್ಲವೆ?" ಎಂದ.

"ಯಾಕೊ ಏನಾಯಿತೋ, ಏನು ಅರ್ಥವಾಯಿತೋ?" ಎಂದು ಗಂಗಾಧರ ಪ್ರಶ್ನಿಸಿದ.

"ನಾನು ಅತ್ತಿಗೆಗೆ ನಡೆದ ವಿಷಯವನ್ನು ಪೂರ್ಣ ಹೇಳಲಾಗಲಿಲ್ಲ. ಯಾಕೆ ಗೊತ್ತೆ? ಆಗ ನಾವೆಲ್ಲರೂ ಊಟ ಮಾಡುತ್ತಿದ್ದೆವು. ಆಗ ನಾನೇನಾದರು ನಾಯಿಯ ಕಕ್ಕಸ್ಸಿನ ವಿಚಾರ ಮಾತನಾಡಿದ್ದರೆ ಬಹುತೇಕ ಎಲ್ಲರಿಗೂ ಅಸಹ್ಯವಾಗಿ ಊಟ ಬಿಡಬೇಕಾಗುತ್ತಿತ್ತು ಎನಿಸುತ್ತದೆ. ಏಕೆಂದರೆ ಅಲ್ಲಿವರೆಗೂ ನಾನು ಮತ್ತು ನೀನು ಚೆನ್ನಾಗಿಯೇ ಊಟ ಮಾಡುತ್ತಿದ್ದೆವು. ಕಕ್ಕಸ್ಸಿನ ತನಕ ಬಂದು ನಾನು ನಿಲ್ಲಿಸಿದ ತಕ್ಷಣ ನಿನಗೂ ಸರಿಯಾಗಿ ಊಟ ಸೇರಲಿಲ್ಲ. ನನಗೂ ಸಹ ಊಟ ಸೇರಲಿಲ್ಲ. ನಮ್ಮಿಬ್ಬರಿಗೂ ಅಸಹ್ಯವಾದಂತಾಗಿ ಊಟವನ್ನು ಹಿಂಸೆಯಿಂದ ಮಾಡಿದೆವು. ಇಂತಹ ಪರಿಸ್ಥಿತಿಯಲ್ಲಿ ದಿನಾ ಹೇಲು ಬಾಚುವ ಆ ಬಸಪ್ಪನ ಪರಿಸ್ಥಿತಿ ಹೇಗಿರಬೇಡ!"

ಇದನ್ನು ಒಪ್ಪಿಕೊಳ್ಳುತ್ತಾ ಗಂಗಾಧರ "ನಿಜ ದಿನೇಶ, ಅವನಿಗೆ ಅನ್ನ ಉಣ್ಣುವುದು ಬಲು ಕಷ್ಟವೇ! ಅದಕ್ಕೆ ಎನಿಸುತ್ತದೆ ಅವನು ಕುಡಿಯುವುದು. ಅದಕ್ಕೆ ಎನಿಸುತ್ತದೆ ಅವನು ಕುಡಿಯದಿದ್ದರೆ ಹಸಿವು ತೀರುವುದಿಲ್ಲ ಎಂಬ ಮಾತಾಡಿದ್ದು" ಎಂದ.

ಇಬ್ಬರೂ ಅವನ ಬಗ್ಗೆ ಮರುಗುತ್ತಾ ಹೋದರು. ಇತಿಹಾಸದ ಕೆಲವು ಪಟಗಳು ಮರುಗುವಂತೆ.

***

ಸಂಜೆ ಬಸಪ್ಪ ಮತ್ತು ಅವನ ಸ್ನೇಹಿತರೆಲ್ಲರು ಅರಮನೆ ಮೈದಾನವನ್ನು ಅಚ್ಚುಕಟ್ಟು ಮಾಡಿಕೊಟ್ಟ ನಂತರ ಅಲ್ಲಿ ಶಾಮಿಯಾನ ಚೇರುಗಳನ್ನೆಲ್ಲ ಹಾಕಿದರು. ಆ ಜಾಗ ಅರಮನೆಯಂತೆಯೇ ಆಗಿಹೋಗಿತ್ತು. ಗಣ್ಯರೆಲ್ಲರೂ ಒಬ್ಬೊಬ್ಬರಾಗಿ ಬಂದು ಸೇರಿಕೊಳ್ಳುತ್ತಿದ್ದರು ಅಂತೆಯೇ ದಿನೇಶನೂ ಬಂದಾಗ ಬಸಪ್ಪ ಅವನನ್ನು ನೋಡಿ ತನ್ನ ಸ್ನೇಹಿತರಿಗೆ ದೂರದಿಂದಲೇ ತೋರಿಸಿದನು. ಆ ಗುಂಪಿನಲ್ಲಿ ಬಸಪ್ಪನಿಗೆ ಒಂದು ತೂಕ ಬಂದಿತು. ಆಶ್ಚರ್ಯವೆಂಬಂತೆ ಬಸಪ್ಪನ ಬಳಿಯೇ ಬಂದ ದಿನೇಶ ಅವನನ್ನು ಅವನ ಸ್ನೇಹಿತರೆಲ್ಲರನ್ನು ಮಾತನಾಡಿಸಿ ಕಾರ್ಯಕ್ರಮ ಮುಗಿಯುವವರೆಗೆ ಇಲ್ಲೇ ಇರಬೇಕು ಎಂದು ಹೇಳಿ ವೇದಿಕೆಯ ಮುಂಭಾಗದ ಚೇರುಗಳಲ್ಲಿ ಬಂದು ಕುಳಿತುಕೊಳ್ಳಿ ಎಂದು ಎಷ್ಟೇ ಹಿಂಸೆ ಮಾಡಿದರೂ ಸಹ ಬಸಪ್ಪ ಮತ್ತವನ ಸಂಗಡಿಗರು ಬರದಿದ್ದ ಕಾರಣ ದಿನೇಶ ಅವರನ್ನಲ್ಲಿಯೇ ಬಿಟ್ಟು ವೇದಿಕೆಯ ಬಳಿ ತೆರಳಿದ. ಕೆಲವು ಗಂಟೆಗಳ ನಂತರ ಕತ್ತಲು ಕವಿಯಿತು. ಕಾರ್ಯಕ್ರಮ ಆರಂಭವಾಯಿತು. ವೇದಿಕೆ ಮೇಲೆ ಎಲ್ಲಾ ಸನ್ಮಾನಿತರನ್ನು ಆಹ್ವಾನಿಸಲಾಯಿತು.

ದಿನೇಶನ ತಲೆಯಲ್ಲಿ ಹಲವು ಆಲೋಚನೆಗಳು ಹುಟ್ಟಿಕೊಂಡಿದ್ದವು. ಆಲೋಚನೆಗಳನ್ನು ಸಭಿಕರ ಮುಂದಿಡಲು ಸಿದ್ಧನಾಗಿ ಬಂದಿದ್ದನು. ಬಸಪ್ಪನಿಗೆ ದಿನೇಶನನ್ನು ವೇದಿಕೆಯ ಮೇಲೆ ನೋಡಿದಾಕ್ಷಣ ಆನಂದವನ್ನು ತಡೆಯಲಾಗದೆ ತನ್ನ ಸ್ನೇಹಿತರಿಗೆಲ್ಲರಿಗೂ ಹೇಳಿದ್ದನ್ನೇ ಪದೇ ಪದೇ ಹೇಳಿ ಹೆಮ್ಮೆ ಪಟ್ಟುಕೊಂಡನು. ಮಣಿ ಮಿಲಿಟರಿ ಸಾರಾಯಿ ಸಿಗಬಹುದೆಂದು ಕನಸು ಕಾಣುತ್ತಿದ್ದನು. ಎಲ್ಲರನ್ನೂ ಸನ್ಮಾನಿಸಲಾಯಿತು ಆದರೆ ದಿನೇಶನನ್ನೇ ಸನ್ಮಾನಿಸಲಿಲ್ಲ. ಕೆಲ ಹೊತ್ತಿನ ನಂತರ ಆಯೋಜಕರು "ನಮ್ಮ ದೇಶವನ್ನು ಕಾಯುತ್ತಿರುವ ಯೋಧರಾದ ದಿನೇಶ್‌ರವರು ಒಂದೆರಡು ಮಾತುಗಳನ್ನು ಆಡಿದ ನಂತರ ಸನ್ಮಾನಿತರಾಗುತ್ತಾರಂತೆ" ಎಂದು ಹೇಳಿ ದಿನೇಶನಿಗೆ ಮಾತನಾಡಲು ಅನುವು ಮಾಡಿಕೊಟ್ಟರು.

ಎಲ್ಲರಿಗೂ ನಮಸ್ಕರಿಸಿ ಆಯೋಜಕರಿಗೆ ಕೃತಜ್ಞತೆ ತಿಳಿಸಿ ಮಾತಿಗೆ ಮುಂದಾದ ದಿನೇಶ "ನೀವೆಲ್ಲಾ ಯೋಧನಾದ ನನ್ನ ಬಗ್ಗೆ, ನನ್ನಂತೆಯೇ ದೇಶದ ಗಡಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯೋಧರ ಬಗ್ಗೆ ಮಾತನಾಡುತ್ತೇನೆ ಎಂದು ಕಾತರರಾಗಿ ಕಾಯುವಂತಿದೆ" ಎಂದಾಗ ಸಭಿಕರಿಂದ ಹೌದೆಂಬಂತೆ ಸದ್ದು ಗದ್ದಲ ಚಪ್ಪಾಳೆ ಒಟ್ಟಿಗೆ ಅಪ್ಪಳಿಸಿ ಮೌನವಾದವು. ಮಾತು ಮುಂದುವರೆಸುತ್ತ ದಿನೇಶ "ಆದರೆ ನಾನಿಂದು ನನ್ನಂತಹ ಯೋಧರ ಬಗ್ಗೆ ಮಾತನಾಡುವುದಿಲ್ಲ. ಗಡಿಗಳಲ್ಲಿ ಬಂದೂಕು ಹಿಡಿದು ಹೋರಾಡುವ ಯೋಧರ ಬಗ್ಗೆ ಮಾತನಾಡುವುದಿಲ್ಲ. ಕಣ್ಣಿಗೆ ಕಾಣುವ ಶತ್ರುಗಳ ವಿರುದ್ಧ ಹೋರಾಡುವ ಯೋಧರ ಬಗ್ಗೆ ಮಾತನಾಡುವುದಿಲ್ಲ" ಎಂದಾಕ್ಷಣ ಸಭಿಕರಲ್ಲಿ ಗೊಂದಲ ಮೂಡಿ ಆ ಗೊಂದಲ ವಿವರಣೆ ಕೇಳಲು ಮೌನವಾಯಿತು. ದಿನೇಶ ಮತ್ತದೇ ಧಾಟಿಯಿಂದ "ನಾನಿಂದು ನಿಮ್ಮೊಂದಿಗೆ ಇರುವ ಯೋಧರ ಬಗ್ಗೆ ಮಾತನಾಡುತ್ತೇನೆ, ಬಂದೂಕಿನ ಸಹಾಯವಿಲ್ಲದೆ ಬಂದೂಕಿಗಿಂತ ಬಲಿಷ್ಠವಾಗಿರುವ ಆಯುಧ ಹೊಂದಿರುವ ಯೋಧರ ಬಗ್ಗೆ ಮಾತನಾಡುತ್ತೇನೆ. ನಿಮ್ಮನ್ನು ಪ್ರತಿ ದಿನವೂ ಕಣ್ಣಿಗೆ ಕಾಣದ ಶತ್ರುಗಳಿಂದ ರಕ್ಷಿಸುತ್ತಾ, ನಿಮ್ಮ ರಕ್ಷಣೆಗಾಗಿ ತಮ್ಮ ರಕ್ಷಣೆಯನ್ನು ಮರೆತು

ದಿನವೂ ನರಳಾಡುತ್ತಿರುವ ಯೋಧರ ಬಗ್ಗೆ ಮಾತನಾಡುತ್ತೇನೆ. ನಿಮ್ಮನ್ನು ಊರ ಒಳಗೆ ಇರಿಸಿ, ಶತ್ರುಗಳಿಂದ ರಕ್ಷಿಸಿ, ಊರ ಹೊರಗೆ ತನ್ನ ಕುಟುಂಬದ ಜೊತೆ ಅದೇ ಶತ್ರುಗಳೊಂದಿಗೆ ಗುದ್ದಾಡುತ್ತಾ, ಆ ಶತ್ರುಗಳನ್ನು ನಿಮ್ಮ ಬಳಿ ಸುಳಿಯದಂತೆ ಮಾಡುತ್ತಾ ಕಾಲ ಕಳೆಯುತ್ತಿರುವ ಕಾಯಕಯೋಗಿ ಯೋಧರ ಬಗ್ಗೆ ಮಾತನಾಡುತ್ತೇನೆ" ಹೀಗೆಯೇ ದಿನೇಶನ ಮಾತುಗಳು ಮುಂದುವರೆಯುತ್ತಿರಲು ಅಲ್ಲಿ ಮೌನ ಆವರಿಸಿ ಎಲ್ಲರ ಕಿವಿಗಳು ನಿಂತಿದ್ದವು.

ಸ್ನೇಹಿತ ಗಂಗಾಧರ ಮತ್ತು ನಿಮ್ಮನ್ನು ಬಿಟ್ಟು ಬೇರೆ ಯಾರಿಗೂ ದಿನೇಶನ ಮಾತಿನ ಮರ್ಮ ಅರ್ಥವಾಗುತ್ತಿರಲಿಲ್ಲ. ಊರ ಹೊರಗಿನ ಯೋಧರು ಯಾರೆಂದು ತಿಳಿಯುತ್ತಿರಲಿಲ್ಲ. ಭಾವುಕವಾಗಿದ್ದ ದಿನೇಶನ ಮಾತುಗಳು ಲೀಲಾಜಾಲವಾಗಿ ಮುಂದುವರೆಯುತ್ತಾ ಹೋಯಿತು.

"ಮಿಲಿಟರಿಯಲ್ಲಿ ನಮಗೆ ಯಾವ ಸೌಲಭ್ಯಗಳಿಲ್ಲ ಹೇಳಿ? ಎಲ್ಲವೂ ಇದೆ. ಕಂಠ ಪೂರ್ತಿ ಕುಡಿಯಲು ತಿನ್ನಲು, ಮೋಜು, ಮಸ್ತಿ ಎಲ್ಲವೂ ಇದೆ. ಹೆಂಡತಿ ಮಕ್ಕಳಿಗೆ ವಿಶೇಷ ಸೌಲಭ್ಯವಿದೆ. ನಿವೃತ್ತಿ ಆದ ಮೇಲು ಸಹ ನನಗೆ ಸುಖವಾಗಿ ಬದುಕಲು ಸರ್ಕಾರ ಎಲ್ಲಾ ಸೌಲಭ್ಯ ನೀಡುತ್ತದೆ. ಆದರೆ ನಿಮ್ಮ ಜೊತೆಯೇ ಇರುವ ಈ ಯೋಧನಿಗೆ ಸರ್ಕಾರ ತಿಂಗಳಿಗೆ ಕೊಡುವುದು ಕೇವಲ ಬಿಡಿಗಾಸು. ಅವನಿಗೆ ಅನ್ನ ತಿನ್ನಲು ಸಾಧ್ಯವಾಗದಷ್ಟು ಸಂಬಳ. ಇನ್ನು ಅವನ ಕುಟುಂಬದ ಕಥೆ!" ಎಂದು ಸ್ವಲ್ಪ ಹೊತ್ತು ಮೌನವಾದ ದಿನೇಶ. ಸಭಿಕರಿಗೆ ದಿನೇಶನ ಗುಟ್ಟು ಸಹಿಸಲಾಗಲಿಲ್ಲ.

"ಆ ಯೋಧ ಯಾರು ಸಾರ್?" ಸಭಿಕರಿಂದ ಪ್ರಶ್ನೆ ಬಂದೇ ಬಿಟ್ಟಿತು.

ದಿನೇಶ ನಿಧಾನಿಸಲಿಲ್ಲ ಈ ದಿನ ಬೆಳಿಗ್ಗೆ ಬಸಪ್ಪನ ಜೊತೆ ನಡೆದ ಸಂಗತಿಯನ್ನು ನಿಧಾನವಾಗಿ ವಿವರಿಸಿದ. ನಂತರ ಎಲ್ಲರಿಗೂ ಪ್ರಶ್ನಿಸಿದ "ಕೇವಲ ಹೇಸಿಗೆಯನ್ನು ನೆನೆಸಿಕೊಂಡರೇನೆ ಅನ್ನ ಉಣ್ಣಲಾಗದ ನಾವೆಲ್ಲಿ? ದಿನಾಲು ನಮಗೋಸ್ಕರ ಹೇಸಿಗೆಯನ್ನೇ ಬಾಚುತ್ತ, ಹೇಸಿಗೆಯಲ್ಲೇ ಜೀವನ ಮಾಡುತ್ತಾ, ಹೇಸಿಗೆಯಲ್ಲಿ ಹುಟ್ಟಿ ಕ್ರಿಮಿ ಕೀಟ, ಬ್ಯಾಕ್ಟಿರಿಯಗಳಿಂದ ನಮ್ಮನ್ನು ರಕ್ಷಿಸುತ್ತಾ ನಮ್ಮ ಆರೋಗ್ಯವನ್ನು ಕಾಪಾಡುತ್ತಾ ನಮ್ಮನ್ನೆಲ್ಲಾ ಹೇಸಿಗೆಯಿಂದ ದೂರವಿಟ್ಟಿರುವ ಈ ಬಸಪ್ಪನಂತವರಲ್ಲವೇ ನಿಜವಾದ ಯೋಧರು?" ಸ್ವಲ್ಪ ಹೊತ್ತಿನ ನಂತರ ಒಂದು ಗುಂಪು ಒಕ್ಕೊರಲಿನಿಂದ "ಹೌದು ಹೌದು" ಎಂದು ಮಾತಿನ ಬಹುಮಾನಗಳನ್ನು ನೀಡಿತು.

ದಿನೇಶ ಮುಂದುವರೆದು "ಹಾಗಾದರೆ ಅವರನ್ನೂ ಸಹ ನಾವು ಚೆನ್ನಾಗಿ ನೋಡಿಕೊಳ್ಳಬಹುದಲ್ಲವೆ?" ಮತ್ತದೇ ಬಹುಮಾನ, ದೂರದಲ್ಲಿ ಕುಳಿತಿದ್ದ ಬಸಪ್ಪನ ಕಾಲು ನಡುಗಲಾರಂಭಿಸಿದವು. ಅವನ ಸ್ನೇಹಿತರೆಲ್ಲರೂ ಖುಷಿಯಾಗಿ ಬಸಪ್ಪನನ್ನು ಪ್ರೀತಿಯಿಂದ ನೋಡುತ್ತಿದ್ದರು ಜೊತೆ ಜೊತೆಗೆ ದಿನೇಶನ ಮಾತುಗಳನ್ನು ಕೇಳುತ್ತಿದ್ದರು. ಪಕ್ಕಕ್ಕೆ ಹೋಗಿ ಮೂತ್ರವಿಸರ್ಜನೆ ಮಾಡುವ ತನಕ ಬಸಪ್ಪನಿಗೆ ಕಾಲು ನಡುಕ ನಿಲ್ಲಲಿಲ್ಲ. ವೇದಿಕೆಯ ಮೇಲೆ ನಿಂತಿರುವ ಯೋಧ ಇದುವರೆಗೂ ಯಾರೂ

ಮೂಸಿ ನೋಡದ ತನ್ನ ಬಗ್ಗೆ ಮಾತನಾಡುತ್ತಿರುವಾಗ ಬಸಪ್ಪನಿಗೆ ಇನ್ನೇನಾಗಬೇಕು ಹೇಳಿ?

ದಿನೇಶನ ಮಾತುಗಳು ಸ್ಪೀಕರ್ಗಳಿಂದ ಎದೆಯ ಬಾಗಿಲ ತೆರೆದುಕೊಂಡಿದ್ದ ಸಭಿಕರ ಕಿವಿಯ ಮೂಲಕ ಹೃದಯವನ್ನು ಪ್ರವೇಶಿಸುತ್ತಿತ್ತು. ಸರಾಗವಾಗಿ ಅರ್ಥಗರ್ಭಿತವಾಗಿ ಮಾತನಾಡಿದ ದಿನೇಶ ತನ್ನ ಮಾತನ್ನು ಮೊಟಗುಗೊಳಿಸಿ ತನಗೆ ಮಾಡಬೇಕಾದ ಸನ್ಮಾನವನ್ನು ಬಸಪ್ಪನಿಗೆ ಮಾಡಬೇಕೆಂದು ಹೇಳಿ ಸಂಘಟಕರನ್ನು ಒಪ್ಪಿಸಿದ. ವೇದಿಕೆಯಿಂದ ಬಹುದೂರ ಕುಳಿತಿದ್ದ ಬಸಪ್ಪನನ್ನು ಕರೆದು ಎಲ್ಲರೆದುರು ಸನ್ಮಾನಿಸಲಾಯಿತು. ಎಲ್ಲರೂ ಕಣ್ಣುಗಳನ್ನು ತೇವವಾಗಿಸಿಕೊಂಡು ಜೋರಾದ ಕರತಾಡನದ ಮೂಲಕ ಬಸಪ್ಪನಿಗೆ ನಿಂತು ಗೌರವ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ದಿನೇಶ "ದೇಶಕ್ಕಾಗಿ ಗಡಿಯಲ್ಲಿ ಪ್ರಾಣ ತೆತ್ತ ಯೋಧನಿಗೆ ಮೆರವಣಿಗೆ ಮಾಡಿ ಸರ್ಕಾರೀ ಗೌರವದ ಮೂಲಕ ನಾವು ಅಂತ್ಯಸಂಸ್ಕಾರ ಮಾಡುತ್ತೇವೆ ಆದರೆ ಇದೇ ದೇಶದ ರಕ್ಷಣೆಗಾಗಿ ಪ್ರಾಣ ತ್ಯಾಗ ಮಾಡುತ್ತಿರುವ ಈ ತೆರೆಮರೆಯ ಯೋಧರಿಗೆ ಸರಿಯಾದ ಆರೋಗ್ಯ ವ್ಯವಸ್ಥೆ ಮಾಡಿದ್ದೇವೆಯೇ? ಯೋಚಿಸಿ" ಎಂದು ನಮಸ್ಕಾರ ಮಾಡಿ ಬಸಪ್ಪನನ್ನು ಕರೆದುಕೊಂಡು ಹೋಗಿ ತನ್ನ ಪಕ್ಕದಲ್ಲಿಯೇ ವೇದಿಕೆ ಮೇಲೆ ಕುಳ್ಳಿರಿಸಿಕೊಂಡ. ಎಲ್ಲರ ಮನಸ್ಸಿನಲ್ಲೂ ಅಪರಾಧಿ ಪ್ರಜ್ಞೆ ಕಾಡಹತ್ತಿತು. ಕಾರ್ಯಕ್ರಮ ಮುಗಿದ ಮೇಲೆ ಕೆಲವು ಯುವಕರು ಬಸಪ್ಪನ ಜೊತೆ ಫೋಟೊ ತೆಗೆಸಿಕೊಂಡರು. ತಲೆ ಮೇಲೆ ಮಾಡಿ ನಿಂತ ಬಸಪ್ಪನ ಆಯುಧವೂ ಕ್ಲಿಕ್ಕಿಸುವ ಬೆಳಕಿಗೆ ಫಳಾರ್ ಎನ್ನುತ್ತಿತ್ತು.

ಬಸಪ್ಪನನ್ನು ಬೀಳ್ಕೊಟ್ಟ ದಿನೇಶ ಮತ್ತು ಗಂಗಾಧರ ಕಾರಿನಲ್ಲಿ ಹೊರಡುವಾಗ ಏನೋ ಅಸಮಾಧಾನದಲ್ಲಿದ್ದ ಗಂಗಾಧರ "ನೀನು ವೇದಿಕೆಯಲ್ಲಿ ಹೀಗೆಲ್ಲ ಮಾತನಾಡುತ್ತೀಯ ಅಂತ ನನಗೊಂದು ಸುಳಿವು ಕೊಡಬಾರದೇನೋ" ಎಂದ. ಏನೋ ಸಾಧಿಸಿದ್ದೇನೆಂಬ ಖುಷಿಯಲ್ಲಿದ್ದ ದಿನೇಶ "ನನ್ನ ಮನಸ್ಸು ನನ್ನ ಹಿಡಿತದಲ್ಲಿರಲಿಲ್ಲವೋ... ಅಷ್ಟಕ್ಕೂ ನನಗೆ ಪೌರ ಕಾರ್ಮಿಕರ ಬಗ್ಗೆ ಅಷ್ಟೊಂದು ವಿಷಯ ತಿಳಿದಿದ್ದೆ ನಿನ್ನಿಂದ. ಅದಕ್ಕೆ ನನ್ನ ಕೆಲವು ಆಲೋಚನೆಗಳನ್ನು ಸೇರಿಸಿದ್ದೇನೆ ಅಷ್ಟೆ" ಎಂದು ಹೇಳಿದ.

"ನಿನ್ನ ಮಾತುಗಳು ಒಳ್ಳೆಯವೇ ಆಗಿದ್ದವು... ಪೌರಕಾರ್ಮಿಕರನ್ನು ಯೋಧರೆಂದದ್ದು ಅಕ್ಷರಶಃ ಸರಿ. ಹಾಗೆಂದು ಅವರದನ್ನೇ ಮುಂದುವರೆಸಿಕೊಂಡು ಹೋದರೆ ಕಷ್ಟವಲ್ಲವೇನೋ?" ಗಂಗಾಧರನ ಪ್ರಶ್ನೆಗೆ ಗೊಂದಲಗೊಂಡ ದಿನೇಶ "ಒಳ್ಳೆ ಸ್ಥಾನ ಸಿಕ್ಕರೆ ಮುಂದುವರೆಸಿಕೊಂಡು ಹೋಗುವುದರಲ್ಲಿ ಸಮಸ್ಯೆ ಏನಿದೆಯೋ."

"ಸಮಸ್ಯೆ ಇದೇ ದಿನೇಶ. ನಮ್ಮ ದೇಶದ ಬಹುತೇಕ ಪೌರಕಾರ್ಮಿಕರು ಅಸ್ಪೃಶ್ಯರು. ಅದಕ್ಕಾಗಿಯೇ ಅವರನ್ನು ಆ ಕೆಲಸ ಮಾಡಲು ನೇಮಿಸಲಾಗಿದೆ. ಆದರೆ ನನ್ನ ಪ್ರಕಾರ ಅವರನ್ನು ಆ ಕೆಲಸದಿಂದ ಹೊರ ತರಬೇಕಾಗಿದೆ. ಅವರನ್ನು

ಪರ್ಯಾಯ ಕೆಲಸವೊಂದಕ್ಕೆ ಕಳುಹಿಸಬೇಕಾಗಿದೆ. ಇಲ್ಲವಾದರೆ ಅವರನ್ನು ಅಲ್ಲಿಯೇ ಇರಿಸುವ ಅಪಾಯವಿದೆ ಕಣೋ"

"ಹೌದು ಗಂಗಾಧರ ನನಗದು ಹೊಳೆಯಲೇ ಇಲ್ಲ. ಆ ಎಚ್ಚರಿಕೆಯನ್ನು ಸಹ ನಾನು ನೀಡಬೇಕಿತ್ತು."

"ಅದು ನಿನಗೆ ಹೊಳೆಯಲು ನೀನೇನು ನನ್ನಂತೆ ಅಸ್ಪೃಶ್ಯತೆ ಅನುಭವಿಸಿಲ್ಲವಲ್ಲೋ."

ದಿನೇಶನಿಗೆ ಮತ್ತೆ ಗಂಗಾಧರನ ಮಾತುಗಳು ಆವರಿಸಿಕೊಂಡವು.

+

## ೨೨. ಹನುಮಂತಿ

*** ದಯಾನಂದ ಕಿನ್ನಾಳ್**

ಆ ಗುಡಿಸಲುಮನೆಯ ನೆರಕಿಗಂಟಿಕೊಂಡ ಬೇವಿನಮರಕ್ಕೆ ಒಂದು ಕತ್ತೆ ಕಟ್ಟಲಾಗಿತ್ತು.

ಒಂದು ಕಡೆಗೆ ಜನರ ಗುಂಪು. ಅದನ್ನು ನೋಡಿದರೆ ಅಲ್ಲಿ ಏನೋ ಅಚಾತುರ್ಯ ನಡೆದಿದೆ ಎಂದು ಎಂಥವರು ಊಹಿಸಬಹುದು. ದಂಡುದಂಡಾಗಿ ಜನ ಅಲ್ಲಿಗೆ ದೌಡಾಯಿಸುತ್ತಿದ್ದಾರೆ. ಸಣ್ಣವರು ದೊಡ್ಡವರೆನ್ನದೆ ಕಿಕ್ಕಿರಿದು ಜನ ಸೇರುತ್ತಿದ್ದಾರೆ.

'ಆಕಿಗೆ ಏನ್ ಮಾಡಿದರು?' ಮುದಿಮಲ್ಲಪ್ಪ ತನಗೆದುರಾದ ಒಂದಿಬ್ಬರನ್ನ ವಿಚಾರಿಸಿದ. ನಮ್ಮನ್ನೇನ ಕೇಳಿದೆ, ನೀನು ಅಲ್ಲಿ ಹೊಂಟಿಯಲ್ಲ ಹೋಗಿ ನೋಡೋಗು, ನಮ್ಮನ್ನ ಕೇಳ್ತಾನ... ನಮ್ಮನ್ನ..' ಎಂದು ಗುರಾಯಿಸಲು, ಮುದಿಮಲ್ಲಪ್ಪ ನಾಲ್ಕು ಹೆಜ್ಜೆ ಮುಂದಿಟ್ಟು ಗುಂಪಿನಲ್ಲಿ ಕಡೆಗೆ ನಿಂತವನನ್ನು ವಿಚಾರಿಸಿದ.

ಇಂಥವಳ ಸುಮ್ನೆ ಬಿಡಬಾರ್ದು, ತಲಿ ಬೋಳ್ಸಿ ಹಣೆಗೆ ಪಟ್ಟಾ ಬಡದು ಕತ್ತಿ ಮ್ಯಾಲೆ ಕುಂದ್ರಿಸಿ ಊರು ತುಂಬಾ ಮೆರವಣಿಗೆ ಮಾಡಬೇಕ. ಇಂತ ಕೆಲ್ಸ ಇನ್ಮುಂದೆ ಈ ಊರಾಗ ಯಾವ ಹೆಂಗೂ ಮಾಡಬಾರು ಅಂತ ಅದ ಕತ್ತಿ ತಂದಾರ ಅಲ್ಲಿ ನೋಡು ಕಟ್ಯಾಕೇತಿ ಎಂದ.

ಹಜಾಮ ಫಕೀರನಿಗೆ ಕರೆಸಲಾಗಿತ್ತು. ಅವನು ಅವನ ಪೆಟ್ಟಿಗೆ ತೆಗೆದು ಕತ್ತಿ ಮಸೆಯುತ್ತ ಪಂಚರ ಆಜ್ಞೆಗೋಸ್ಕರ ನಿರೀಕ್ಷಿಸುತ್ತಿದ್ದ. ಮತ್ತೊಂದೆಡೆ ಆಕೆಯನ್ನು ತನ್ನ ಬೆನ್ನ ಮೇಲೆ ಕೂಡಿಸಿಕೊಂಡು ಊರು ತುಂಬಾ ಮೆರವಣಿಗೆ ಹೋಗಲು ಕಟ್ಟಿ ಹಾಕಿದ್ದ ಕತ್ತೆ ತವಕಿಸುತ್ತಿತ್ತು. ನೆರೆದಿದ್ದ ಜನರ ಮಧ್ಯ ಹನುಮಂತಿಯನ್ನು ಕೂಡಿಸಿದ್ದರು. ತಲೆಮೇಲಿಂದ ನೀರು ಸುರಿಯಲಾಗಿತ್ತು. ಆಕೆಗೆ ಯಾರೊಬ್ಬರೂ ಹೊಡೆದಿರಲಿಲ್ಲ. ಮತ್ತೆ ಆಕೆಯೂ ಒಂದೇ ಒಂದು ಕಣ್ಣಿನ ಹನಿ ಹರಿಸಿರಲಿಲ್ಲ. ಧೀರೋದಾತ್ತಳಂತೆ ಗಂಭೀರವದನೆಯಾಗಿದ್ದಳು.

ತನ್ನ ಪಾಲಿಗೆ ದೇವರು ಇಳಿಯುತ್ತಾನೇನೋ ಬಂದು ಕಾಪಾಡುತ್ತಾನೇನೊ ಎಂದು ಘಳಿಗೆಗೊಮ್ಮೆ ಗಗನದೆಡೆಗೆ ಆಕೆ ಮುಖ ಮಾಡುತ್ತಿದ್ದಳು. ಬಂದವರೆಲ್ಲ ಆಕಿನ್ನೇನ ನೋಡತಿರೋ ಹಿಂಗ ಬುಟ್ರ ಊರೆಲ್ಲ ಅದ್ವಾನ್ ಮಾಡ್ಯಾಳ, ಮೊದ್ಲ ತಲಿ ಬೋಳಿಸಿ ಕತ್ತಿ ಮ್ಯಾಲೆ ಕುಂದ್ರಿಸಿ ಮೆರವಣಿಗೆ ಮಾಡ್ಲಿ ಗಡಿಪಾರು ಮಾಡಿಬಿಡಿ' ಎನ್ನುವವರೆ.

ಹನುಮಂತಿ ದುಂಡು ಮುಖದ ತುಂಬು ಚೆಲುವೆ. ಹಾಲು ಚೆಲ್ಲಿದಂಥ ಬೆಳದಿಂಗಳ ಬಾಲೆ. ಅವಿದ್ಯಾವಂತೆಯಾದರೂ ನಡೆನುಡಿ ಚಂದ. ನೋಡಿದವರು

ಆಕೆಯನ್ನು ಮತ್ತೊಮ್ಮೆ ತಿರುಗಿ ನೋಡಿಯೇ ಅಲ್ಲಿಂದ ಹೆಜ್ಜೆ ಕೀಳುತ್ತಿದ್ದರು. ಆಕೆ ಕಣ್ಣೀರಿಟ್ಟರೂ ಸಿಂಡರಿಸಿಕೊಂಡರೂ ಮುಖಕ್ಕೊಂದು ಕಳೆಕಟ್ಟುತ್ತಿತ್ತು. ಆಕೆ ತಪ್ಪು ಮಾಡಿ ಸಿಕ್ಕಿಬಿದ್ದಿದ್ದಳು. ಅದನ್ನೇ ನೆವಮಾಡಿಕೊಂಡು ಆಕೆಯನ್ನು ಸ್ಪರ್ಶಿಸಿ ಆನಂದ ಪಟ್ಟವರೆ ಅಧಿಕ.

ಕೊರವರ ಮಂದಿ ಶಹನಾಯಿ ಊದಲು ಶುರುವಿಟ್ಟುಕೊಂಡರು. ಹಲಗೆ ಬಾರಿಸಲು ಮತ್ತೊಬ್ಬ ಸಿದ್ಧನಾದ. ಅಷ್ಟೊತ್ತಿಗೆ ಅಲ್ಲಿಗೆ ಬಂದ ವಾಲೀಕಾರ ಭೀಮಣ್ಣ "ಎಲ್ಲರು ಕೇಳ್ರಿ ಹನುಮಂತಿ ತಪ್ಪು ಮಾಡಿದ ಆಕಿ ತೆಲಿ ಬೋಳಿಸಿ ಕತ್ತಿ ಮ್ಯಾಲೆ ಕುಂದ್ರಿಸಿ ಮೆರವಣಿಗಿ ಮಾಡಿ ಗಡಿಪಾರು ಮಾಡಾಕ ಪಂಚು ಆದೇಸ ಕೊಟ್ಟಾರಪ್ಪ ಎನ್ನುತ್ತಿದ್ದಂತೆ ಕೂಡಿದ ಜನ ಆಗಲಿ ಆಗಲಿ...ಕೈಬೀಸಿದರು.

ಕೊಪ್ಪಳಕ್ಕೆ ಹೋಗಿದ್ದ ದಳಪತಿ ರಾಮಣ್ಣನ ಆಗಮನವಾಗಿ ಎಲ್ಲವೂ ಗಮನಿಸಿ ನೀವ್ಯಾರು ಹೆಣ್ಮಕಳ ಹೆತ್ತಿಲ್ಲೇನ್ರಿಯಾವು ತಪ್ಪು ಯಾವು ಒಪ್ಪು ಅನ್ನೋದನ್ನ ನೋಡಿ ಶಿಕ್ಷೆ ಕೊಡಾಕ ಬರದಿಲ್ಲ ಅಂದೇಲೆ ನೀವ್ಯಾ ಸೀಮ್ಯಾಗಿನ ದೊಡ್ಡ ಮನು ಸ್ಯಾರೊ, ಹರೆದ ಹುಡುಗಿನ್ನ ಹಿಂಗ ಕುಂದಿಸಿಗಂಡ ಮಾನ ಹರಾಜ ಹಾಕಾಕತಿರಲ್ಲೊ ನೀವೇನ್ ಮನುಸ್ಯಾರಾ, ಯಾರೂ ತಂದೆತಾಯಿ ಇಲ್ಲೇನಿಲ್ಲಿ ಅಬ್ಬರಿಸಿದ ಪರಿಗೆ ಜನ ಪಂಚನಪಾಡಾಗಿ ಹೋಯಿತು. ಪಂಚರಪಾಡು ನಾಯಿ ಪಾಡಾಯಿತು. "ಎದ್ದೇಳವ್ವ ಹನುಮಂತಿ ಮನಿಗೊಗಣ' ಎಂದು ರಾಮಣ್ಣ ಹನುಮಂತಿಯ ಜೊತೆ ಮನೆಗೆ ಹೆಜ್ಜೆ ಹಾಕಿದನು.

ಹನುಮಂತಿಗೆ ತವರುಮನೆ ಗಂಡನಮನೆ ಅದೇ ಊರಾಗಿತ್ತು. ಹನುಮಂತಿಗೆ ಅಷ್ಟೆಲ್ಲ ಅವಮಾನವಾದರೂ ತಂದೆತಾಯಿಗಳು ಯಾರೊಬ್ಬರೂ ಅಲ್ಲಿಗೆ ಬಂದಿರಲಿಲ್ಲ. ಹನುಮಂತಿ ಮಲತಾಯಿಯ ಮಗಳು. ಮಲತಾಯಿಗೆ ಒಂದು ಹೆಣ್ಣು ಮತ್ತು ಎರಡು ಗಂಡು ಮಕ್ಕಳಾದ್ದರಿಂದ ಹನುಮಂತಿಯನ್ನು ಕ್ಯಾರೆ ಎನ್ನುತ್ತಿರಲಿಲ್ಲ. ತಂದೆಯಾದ ಮೂಲಿಮನಿ ಭೀಮಪ್ಪ ಮೂಕಬಸವಣ್ಣನಂತಿದ್ದ. ಹನುಮಂತಿಗೆ ಹರೆಯ ಕಾಲಿಟ್ಟ ಕಾಲಕ್ಕೆ ಒಳ್ಳೆಯ ಹುಡುಗನನ್ನು ಹುಡುಕಿ ಮದುವೆ ಮಾಡಬೇಕೆಂಬ ಆಸೆ ತಂದೆ ತಾಯಿಗಳ ತಲೆಯಲ್ಲಿ ಬರದೇ ಇದ್ದುದರ ಕಾರಣಕ್ಕೆ ಆಕೆ ಕೊರವರ ಹುಡುಗ ಹನುಮಂತನ ಜೊತೆ ಸಖ್ಯ ಬೆಳೆಸಬೇಕಾಗಿಬಂತು. ಹನುಮಂತಿ ಹೆಜ್ಜೆಯ ಗುರುತಿರದ ಒಂದು ಹೊಲವು ಆ ಊರ ಸುತ್ತಲಿನಲಿ ಇರದಿರಲಿಲ್ಲ. ತೆಂಗಿನಮರ, ಬೇವಿನಮರ ತೋಟತುಡಿಕೆಗಳು ಮಾರ್ದನಿಸುತ್ತಿದ್ದವು. ತಮ್ಮ ಮಾನ ಕಳೆಯುವಳಲ್ಲ ಎಂಬ ಆತಂಕಕ್ಕೆ ಅವಳಿಗೆ ಮನಸ್ಸಿಲ್ಲದಿದ್ದರೂ ಬೆಪ್ಪುಬೆಪ್ಪಾಗಿದ್ದು ಎಮ್ಮೆ ಕಾಯ್ದುಕೊಂಡಿದ್ದ ಮುದಿಯನ ಜೊತೆಗೆ ಕರ್ಪೂರದ ಗೊಂಬೆಯಂತಿದ್ದ ಹನುಮಂತಿಗೆ ಮದುವೆ ಮಾಡಿ ಕೊಡಲಾಗಿತ್ತು.

ಹನುಮಂತಿಯ ತಂದೆ ಮೂಲಿಮನಿ ಭೀಮಪ್ಪನಿಗೆ ತಕ್ಕುದಾದ ಆಸ್ತಿಯಿತ್ತು. ವಾಸಿಸಲು ಊರ ಮಧ್ಯಕ್ಕೊಂದು ಮನೆಯಿತ್ತು. ಮಗಳಿಗೆ ತಕ್ಕ ವರ ನೋಡಿ ಮದುವೆ ಮಾಡಿಕೊಡುವ ಶಕ್ತಿಯಿತ್ತು. ಅದ್ಯಾಕೊ ಎರಡನೆ ಮದುವೆಯಾದ ಮೇಲೆ ತುಸು

ಶಕ್ತಿಗುಂದಿದಂತಾಗಿದ್ದ. ಹೆಂಡತಿಯನ್ನು ಕಳೆದುಕೊಂಡದಕೊ ಅಥವಾ ತನ್ನ ಮೇಲೆ ಪ್ರಭಾವಬೀರುವ ಹೆಂಡತಿಯನ್ನು ಮಾಡಿಕೊಂಡದಕೊ ತಿಳಿಯಲಿಲ್ಲ.

ಮುಂಜಾನೆಯಿಂದ ಸಂಜೆಯವರೆಗೆ ಬೀಸಿದ ತಂಪಾದ ಹವೆಗೆ ಊರಿನ ಜನ ಕೂಡಿ ಹಾಕಿದ ಕಾರಣಕ್ಕೆ ಹನುಮಂತಿ ಮೆತ್ತಗಾಗಿ ಹೋಗಿದ್ದಳು. ತನ್ನನ್ನು ರಕ್ಷಿಸಿದ್ದ ದಳಪತಿ ರಾಮಣ್ಣನಿಗೆ ಹನುಮಂತಿ ಮನಸ್ಸಿನಲ್ಲಿಯೆ ನೂರೊಂದು ನಮಸ್ಕಾರ ಹಾಕಿದಳು. ಕಾಲಕಾಲಕ್ಕೆ ನಿನ್ನ ಹೊಟ್ಟೆ ತಂಪಿರಲೆಪ್ಪ ಎಂದು ದೇವರಿಗೆ ಹರಕೆ ಹೊತ್ತು ಬೇಡಿಕೊಂಡಳು. ಆಕೆ ಆಯಾಸಕ್ಕೊಳಗಾಗಿದ್ದಾಳೆಂಬುದು ಕುಂತಲ್ಲೆ ಕಣ್ಣು ಮುಚ್ಚುವುದು ಕಂಡು ಮನವರಿಕೆಯಾಗುತ್ತಿತ್ತು.

ಬೆಚ್ಚನೆ ನೀರಿನ ಸ್ನಾನಕ್ಕೆ ಮೈ ಅರಳಿದಂತಾಗಿ ಊಟವಾದ ಮರುಕ್ಷಣವೆ ಗುಡಿಸಲಿನ ಒಂದು ಮೂಲೆಗೆ ದುಂಡಗೆ ಸುತ್ತಿಕೊಂಡು ಹನುಮಂತಿ ಹೆಣದಂತೆ ಮಲಗಿಬಿಟ್ಟಳು. ಮತ್ತೈದು ನಿಮಿಷದಲ್ಲಿ ಮನೆಯವರು ಮಾತಾಡುತ್ತಿದ್ದಂತೆಯೆ ಗೊರಕಿ ಹೊಡೆಯಲು ಪ್ರಾರಂಭಿಸಿದಳು. ಮಧ್ಯರಾತ್ರಿಯಾದರೂ ಮನೆಯವರಾರು ಮಲಗಲಿಲ್ಲ. ಬರೀ ಹನುಮಂತಿಯದೆ ಸುದ್ದಿ, ಅಕ್ಕಪಕ್ಕದ ಮನೆಯವರು ಓಣಿಯಲ್ಲಿ ರುವವರು ಜಮಾಯಿಸುತ್ತಿದ್ದರು. 'ರಾಮಣ್ಣ ಪುಣ್ಯ ಕಟಗೊಂಡ ಹುಡುಗಿಗೆ ಉಳಿಸಿ ಪುಣ್ಯ ಮೆರೆದ, ರಾಕ್ಷಸರ ಕೈಯಾಗ ಹುಡುಗಿ ಸಿಕ್ಕು ರಂಡಮುಂಡಿಯಂತಾಗತಿದ್ದು, ಆತನ ಹೊಟ್ಟಿ ತಣ್ಣಗ ಇರಲೆವ್ವ' ಹಾರೈಸುತ್ತಿದ್ದರು.

ಹತ್ತನೆ ತರಗತಿ ಓದುತ್ತಿದ್ದ ಶಂಕರ ರಾಮಣ್ಣನ ತಮ್ಮ ನೋಡಲು ದುಂಡು ದುಂಡಾಗಿದ್ದ, ಅವನು ಶಿಸ್ತಿನ ಸಿಪಾಯಂತೆ ಇದ್ದುದರಿಂದ ಮತ್ತು ಅವನಿಗೆ ಎಲ್ಲಿಲ್ಲದ ಕೋಪ ಬರುತ್ತಿದ್ದುದರಿಂದ ಮನೆಯಲ್ಲಿ ಅವನಿಗೆ ಎಲ್ಲರು ಇನ್‌ಸ್ಪೆಕ್ಟರ್ ಎಂದು ಕರೆಯುತ್ತಿದ್ದರು. ಅವನು ಎಷ್ಟು ಸೂಕ್ಷ್ಮಮತಿಯುಳ್ಳವನಾಗಿದ್ದನೆಂದರೆ ರಾತ್ರಿ ಮಲಗಿದಾಗ ಕಿಟಕಿಯದೊ ಬಾಗಿಲದೊ ಕಿರ್ ಎನ್ನುವ ಶಬ್ದವಾದರೂ ಎಚ್ಚರವಾಗಿ ಬಿಡುತ್ತಿದ್ದ. ರಾತ್ರಿ ಮೂರು ಗಂಟೆಯ ಹೊತ್ತದು. ಹನುಮಂತಿಯ ಭಯಂಕರ ಗೊರಕಿಯ ಸದ್ದಿಗೆ ಶಂಕರನಿಗೆ ಎಚ್ಚರವಾಗಿದೆ. ಮಂದವಾಗಿ ಉರಿಯುತ್ತಿದ್ದ ಕಂದೀಲಿನ ಬೆಳಕಿನಲ್ಲಿ ಶಂಕರನಿಗೆ ಅದು ಯಾವುದರ ಸದ್ದೆಂದು ಗುರುತಿಸುವುದು ಸಾಧ್ಯವಾಗದೆ ಹೋಗಿದೆ.

ಹಾಸಿಗೆಯಲ್ಲಿ ಎದ್ದು ಕುಳಿತು ಕಣ್ಣುಜ್ಜಿ ನೋಡಿದ್ದಾನೆ. ಅಸ್ಪಷ್ಟವಾದಾಗ ಕಂದೀಲಿನ ಬತ್ತಿ ಏರಿಸಿ ಬೆಳಕು ಹೆಚ್ಚು ಉರಿಯುವಂತೆ ಮಾಡಿದ್ದಾನೆ. ಮೈಮೇಲೆ ಪರಿವೆಯಿಲ್ಲದೆ ಹನುಮಂತಿ ಒಂದೆಡೆ ಗೊರಕೆ ಹೊಡೆಯುತ್ತಿದ್ದರೆ ಕಾಲು ಮೇಲೆತ್ತಿ ನಿದ್ದೆ ಮಾಡುವ ರೀತಿಗೆ ಆಕೆಯ ಸೀರೆಯೆಲ್ಲವೂ ಹೊಟ್ಟೆಯ ಮೇಲೆ ಜಾರಿದೆ. ಶಂಕರ ನೋಡಿ ಅವಕ್ಕಾಗಿದ್ದಾನೆ. ಹದಿನಾರರ ಹತ್ತಿರವಿದ್ದ ಶಂಕರನಿಗೆ ನೋಡಬೇಕೆನ್ನುವ ಚಪಲ. ಅಸಾಹಯಕಳಾಗಿ ಮನೆಹೊಕ್ಕ

ಹನುಮಂತಿಯನ್ನು ಹಾಗೆ ನೋಡಬಾರದೆಂದು ಒಳಮನಸ್ಸು ಹೇಳುತ್ತಿದ್ದರೂ ಚಪಲಮನಸ್ಸು ಮಾತ್ರ ಕೇಳಲು ಸಿದ್ಧವಿರಲಿಲ್ಲ.

ತನ್ನ ಹಾಸಿಗೆಯಿಂದ ಅಂಬೆಗಾಲಿಡುತ್ತ ಹನುಂತಿಯ ಹತ್ತಿರಕ್ಕೆ ಹೋದ ಶಂಕರನಿಗೆ ಯಾರಾದರೂ ನೋಡಿಯಾರೆಂಬ ಭೀತಿ, ಆ ಸಮಯದಲ್ಲಿ



ಹನುಮಂತಿಯ ಗೊರಕೆ ನಾದವಡಗಿ ಶಂಕರನ ಉಸಿರಾಟದ ಶಬ್ದವೆ ದುಪ್ಪಟ್ಟಾಗಿದೆ. ಹನುಮಂತಿಯನ್ನು ಎಬ್ಬಿಸುವಷ್ಟಾಗಲಿ ತಬ್ಬಿಕೊಳ್ಳುವಷ್ಟಾಗಲಿ ಧೈರ್ಯ ಶಂಕರನಿಗೆ ಎಲ್ಲಿಂದ ಬರಬೇಕು? ತನ್ನ ಉಸಿರಾಟವೆ ತನಗೆ ಮುಳುವಾಗಿ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಅಲೆದಾಡಿ ಬಸವಳಿದು ಮಲಗಿದ್ದಾನೆ. ಅವನು ಮಲಗಿದರೆ ನಿದ್ದೆ ಬಂದೀತೆ?

ಬೆಳಗರಿಯುತ್ತಿದ್ದಂತಯೇ ರಾಮಣ್ಣ ಪಂಚಾಯತಿ ಸೇರಿಸಿದ. ಸುದೀರ್ಘ ಸಂವಾದ ನಡೆಸಿದ. ಚರ್ಚೆ ಚಿಂತನ ಮಂಥನ ನಡೆದವು. ಹನುಮಂತಿಗೆ ನ್ಯಾಯ ದೊರಕಿಸಿ ಕೊಡಲೇಬೇಕೆಂಬ ಹಂಬಲದಿಂದ ರಾಮಣ್ಣ ಎಳೆಎಳೆಯಾಗಿ ಪಂಚಾಯತಿಯನ್ನು ಹಿಂಜಿದ.

ಎಮ್ಮೆ ಕಾಯುವ ಮುದಿಯ ಅರೆಹುಚ್ಚನಂತಿದ್ದ. ಒಲ್ಲದ ಅಂಥ ಗಂಡನಿಗೆ ಹನುಮಂತಿಯನ್ನು ಎಳೆದು ತಂದು ಕಟ್ಟಿದ್ದರು. ಮಲಗಿದಾಗ ರಾತ್ರಿ ಒಮ್ಮೊಮ್ಮೆ ವಿಕಾರವಾಗಿ ಕೂಗಿಡುತ್ತಿದ್ದ. ಜೊಲ್ಲು ಸೋರಿಸಿ ಹಾಸಿಗೆಯಲ್ಲ ಒದ್ದೆಯಾಗಿಸುತ್ತಿದ್ದ. ಮಗ್ಗುಲಲ್ಲಿ ಮಲಗಿದ ಹನುಮಂತಿಗೆ ಅಸಹ್ಯವಾಗುತ್ತಿತ್ತು. ತಾಳಿ ಕಟ್ಟಿದವನಾದ್ದರಿಂದ ಯಾರ ಮುಂದೆ ತೋಡಿಕೊಳ್ಳದೆ ಒಳಗೊಳಗೆ ನುಂಗುತ್ತಿದ್ದಳು. ಮೇಯಿಸಲು ನಾಲ್ಕು ಎಮ್ಮೆ ಹೊಡೆದುಕೊಂಡು ಹೋಗಿದ್ದರೆ ಅದರಲ್ಲಿ ಒಂದು ಎಮ್ಮೆ ಎಲ್ಲಿಯೋ ಬಿಟ್ಟುಬಂದಿರುತ್ತಿದ್ದ. ಅನುಭವವಿದ್ದ ಎಮ್ಮೆ ಹ್ಯಾಗೆ ದಾರಿ ಹಿಡಿದು ಬಂದು ಮನೆ ಸೇರುತ್ತಿತ್ತು. ಇಂಥ ಹಗಲು ರಾತ್ರಿಗಳು ಎಡೆಬಿಡದೆ ಹನುಮಂತಿಗೆ ಯಮಯಾತನೆ ತಂದೊಡ್ಡುತ್ತಿದ್ದವು.

ಮದುವೆಯಾಗಿ ನಾಲ್ಕಾರು ವರ್ಷ ಗತಿಸಿದರೂ ಗಂಡನೆಂಬ ಹೆಸರಿಗೆ ಅವನು ಒಂದು ದಿವಸವೂ ಸರಿಯಾಗಿ ಪ್ರತಿಕ್ರಿಯಸಿರಲಿಲ್ಲ. ಗಂಡನಂತೆ ಅವನು ಎಂದೂ ಮಲಗಲಿಲ್ಲ. ಗಂಡನೆನ್ನುವುದಕ್ಕೆ ಅವನಲ್ಲಿ ಯಾವ ಯೋಗ್ಯತೆಯೂ ಇರಲಿಲ್ಲ. ಕಡೆಗೊಂದು ದಿನ ಅವಳು ಏನು ಮಾಡಿದಳು ಗೊತ್ತೆ? ಒಂದು ರಾತ್ರಿ ಎಲ್ಲರು ಮಲಗಿ ಪ್ರಶಾಂತ ವಾತಾವರಣದಲ್ಲಿ ಜೀರುಂಡೆ ಶಬ್ದ ಕೇಳುವ ಸಮಯವದು. ಹನುಮಂತಿಯ ತಲೆಕೆಟ್ಟು ಪಿತ್ತ ನೆತ್ತಿಗೇರಿತ್ತು. ಕೊರವರ ಹನುಮಂತನಿಂದ ಸುಖ ಕಂಡಿದ್ದ ಆಕೆಗೆ ಕಣ್ಮುಂದೆ ಅವೇ ಚಿತ್ರಗಳು ಬಂದು ನಿಲ್ಲುತ್ತಿದ್ದವು. ರಾತ್ರಿ ಸರೋತ್ತಾದರೂ

ಆಕೆ ಕಣ್ಣಿಗೆ ಕಣ್ಣು ಹಚ್ಚುತ್ತಿರಲಿಲ್ಲ. ಸಂಕಟಬಿದ್ದು ವಿಲಿವಿಲಿ ಒದ್ದಾಡುತ್ತಿದ್ದಳು. ಒಂದು ದಿನ ದೂಡುವುದೆಂದರೆ ಒಂದೊಂದು ಯುಗವೆ ಕಳೆದಂತಾಗುತ್ತಿತ್ತು.

ಮುದಿಯ ಮಲಗಿ ಹಾಯಾಗಿ ನಿದ್ದೆ ಹೊಡೆಯುತ್ತಿದ್ದ. ಮಲಗಿದಾಗ ಅವನ ಮೈಮೇಲೆ ತುಂಡು ಬಟ್ಟೆಯೂ ಸರಿಯಾಗಿ ಇರುತಿರಲಿಲ್ಲ. ಅವನು ಮಲಗುವುದು ಚೆಲ್ಲಾಪಿಲ್ಲಿಯಾಗಿಯೆ. ಹನುಮಂತಿ ಅವನ ಕಡೆಗೆ ಮುಖಮಾಡಿ ಮಲಗಿದವಳೇ ಅಲ್ಲ. ಅವನ ಆ ಹಾಳು ಮುಖ ನೋಡಿ ಯಾವ ಸೌಭಾಗ್ಯ ಹೊಂದಬೇಕಾಗಿದೆ? ಜೀವನಪರ್ಯಂತ ಅದೇ ಜಂಜಾಟವಲ್ಲವೇ? ಬೇಸತ್ತುಕೊಂಡಿದ್ದ ಅವಳು ಅವನ ಆ ಹಾಳು ಮರ್ಮಾಂಗಕ್ಕೆ ಗೇರುಬೀಜ ಹಾಕಿಬಿಟ್ಟಳು.



ಮೂರು ದಿವಸದ ನಂತರ ದೊಡ್ಡ ರಂಪಾಟವಾಯಿತು. ಅದು ಗಾಯವಾಗಿ ಮುದಿಯ ಬಾಯಿಬಾಯಿ ಬಡೆದುಕೊಳ್ಳುತ್ತಿದ್ದ. ತನ್ನದೆ ಕಿತಾಪತಿಯಂದು ಮುದಿಯನ ತಂದೆತಾಯಿ ರಾದ್ಧಾಂತ ಮಾಡಿ ಊರುಕೇರಿ ಒಂದಾಗುವಂತೆ ಜನಕ್ಕೆ ಕೂಡಿ ಹಾಕಿದ್ದರು. ಹನುಮಂತಿ ಘಂಟಾಘೋಷವಾಗಿ ತಾನೆ ಮಾಡಿತ್ತೆಂಬಂತೆ ಸುಮ್ಮನಿದ್ದು ಬಿಟ್ಟಳು.

ವಾರದವರೆಗೆ ರಾಮಣ್ಣನ ಮನೆಯಲ್ಲಿದ್ದ ಹನುಮಂತಿ ಕಣ್ಣು ತುಂಬ ನಿದ್ದೆ ಮಾಡಿ ಗುಂಡುಗುಂಡಾಗಿದ್ದಳು. ಪಂಚಾಯತಿಯಲ್ಲಿ ರಾಮಣ್ಣ ಹಾಕಿದ ಪ್ರಶ್ನೆಗಳಿಗೆ ನಿರುತ್ತರಿ ಗಳಾದ ಪಂಚರು ತಬ್ಬಿಬ್ಬಾಗಿದ್ದರು. 'ಷಂಡನಂಗಿರುವ ಅಂಥ ಗಂಡನಿಗೆ ಮದ್ವಿ ಮಾಡಿದ್ರೆ ತಿಂದುಂಡು ಆರೋಗ್ಯದಿಂದಿದ್ದ ಹುಡುಗಿ ಮರ್ಮಾಂಗಕ್ಕೆ ಗೇರುಬೀಜ ಹಾಕ್ಷೆ ಇನ್ನೇನು ಮಾಡ್ತ್ಯಾಳು? ಆಕೆ ಸುಮ್ಮಿದ್ದಿದ್ರೆ ವಿಷಯ ಯಾರಿಗಾದ್ರೂ ಗೊತ್ತಾಗುತ್ತಿತ್ತೆ? ಬ್ಯಾರೆದವರಾಗಿದ್ರೆ ಕುತಿಗಿ ಹಿಚಗಿ ಸಾಯಿಸುತಿದ್ರು. ಯಾರಿಂದಲೂ ತುಟಿಬಿಚ್ಚ ಲಾಗಲಿಲ್ಲ.

ರಾಮಣ್ಣ ಮಾಡಿದ ಪಂಚಾಯತಿಯ ತೀರ್ಮಾನದ ತಿರುಳು ಇಂತಿತ್ತು: 'ಮುದಿಯನಿಂದ ಬಿಡುಗಡೆ ಸಿಗಬೇಕು. ಪಂಚರೆಲ್ಲ ಸೇರಿ ಒಳ್ಳೆಯ ಗಂಡನ್ನು ಹುಡುಕಬೇಕು. ಗಂಡಿನ ಮನೆಯವರೇ ಮುಂದೆ ನಿಂತು ಮತ್ತೊಂದು ಮದುವೆ ಮಾಡಿ ಖರ್ಚು ಭರಿಸಬೇಕು.'

ಹನುಮಂತಿಯ ಮದುವೆಯ ದಿನ ಊರಿಗೆ ಊರೇ ಸಿಂಗಾರಗೊಂಡಿತ್ತು. ಬೇವಿನಹಳ್ಳಿಯ ಗಂಡು ಗುಂಡಗಿದ್ದು, ರೈತ ಮನೆತನಕ್ಕೆ ಸೇರಿದವನು. ಹನುಮಂತಿಯ ಬಾಳು ಬೆಳಗುವುದಕ್ಕೆ ದಿಟ್ಟ ನಿಲುವು ಹೊಂದಿದವನು. ತಮ್ಮ ಮನೆಯ ಮಗಳಂತೆ ಊರು ಜನ ಸೇರಿ ಮದುವೆ ಮುಗಿಸಿದರು. ಹನುಮಂತಿ ಗಂಡನ ಕೈಹಿಡಿದು

ಹೋಗುವಾಗ ತಮ್ಮ ಕೃತಜ್ಞತೆ ಮರೆಯಲಾರನೆಂಬಂತೆ ಊರಿನ ಜನರ ಕಡೆಗೆ ತಿರುತಿರುಗಿ ನೋಡುತ್ತ ಕಂಬನಿ ಹರಿಸುತ್ತ ಹೆಜ್ಜೆ ಹಾಕಿದಳು. ಊರಿನವರೂ ಹೆಜ್ಜೆಗೆ ಹೆಜ್ಜೆ ಸೇರಿಸಿದರು.

# ೧೩. ಪ್ರಶ್ನೆ

· ಡಾ. ಎಲ್.ಸಿ.ರಾಜು

ಅಣ್ಣನಿಂದ ಪಾಠ ಹೇಳಿಸಿಕೊಳ್ಳುತ್ತಿದ್ದ ಪ್ರಜ್ಞಾಳ ಗಮನ ಬರಿಯ ಪಾಠದ ಮೇಲಷ್ಟೇ ಇರಲಿಲ್ಲ. ಅದು ಆಗಾಗ ಅಡಿಗೆ ಮನೆಯತ್ತಲೂ ಹರಿಯುತ್ತಿತ್ತು. ಅಲ್ಲಿ ಶಾಂತಮ್ಮ ರಾಗಿಮುದ್ದೆ ಮಾಡುವುದರಲ್ಲಿ ಮಗ್ನಳಾಗಿದ್ದಳು. ಬೆರಕೆ ಸೊಪ್ಪು ಬೇಯುತ್ತಿದ್ದ ಸುವಾಸನೆಯ ಜೊತೆಗೆ ಹಸಿಕಲ್ಲಿನ ಮೇಲೆ ಆಕೆ ಅರೆದ ಉಪ್ಸಾರಿನ ಖಾರದ ಘಮಲು ಮನೆಯ ತುಂಬೆಲ್ಲಾ ಹರಡಿ ನಾಲಿಗೆಯಲ್ಲಿ ನೀರೂರಿಸುತ್ತಿತ್ತು. ಮನೆಯಲ್ಲಿ ಮಿಕ್ಸಿ ಗ್ರೈಂಡರ್‌ಗಳಿದ್ದರೂ ಉಪ್ಸಾರು ಮಾಡುವಾಗ ಮಾತ್ರ ಅವಳು ಖಾರ ಅರೆಯಲು ಹಸಿಕಲ್ಲನ್ನೇ ಬಳಸುತ್ತಿದ್ದಳು. ಅದಕ್ಕೆಂದೇ ಅಡಿಗೆ ಮನೆಯಲ್ಲಿ ಹಸಿಕಲ್ಲಿಗಾಗಿ ಒಂದು ವಿಶೇಷ ಜಾಗದ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದಳು.

ಉಪ್ಸಾರು ಮತ್ತು ಖಾರದ ತಯಾರಿ ಮುಗಿಸಿದ್ದ ಶಾಂತಮ್ಮ ಇದೀಗ ರಾಗಿಮುದ್ದೆ ಮಾಡುವುದರಲ್ಲಿ ತಲ್ಲೀನಳಾಗಿದ್ದಳು. ರಾಗಿಯ ಹಸಿಹಿಟ್ಟನ್ನು ಹದವಾಗಿ ಬೇಯಿಸುತ್ತಾ, ಹಿಟ್ಟಿನ ದೊಣ್ಣೆಯನ್ನು ಕುಶಲತೆಯಿಂದ ಆಡಿಸುತ್ತಾ, ಅವಳು ಮುದ್ದೆ ತಿರುವಿದರೆ ಅದರಲ್ಲಿ ಒಂದು ಗಂಟೂ ಉಳಿಯುತ್ತಿರಲಿಲ್ಲ. ಉಪ್ಸಾರಿನಲ್ಲಿ ಖಾರ ಕಲಸಿ, ಅದರಲ್ಲಿ ಮುದ್ದೆಯ ತುತ್ತನ್ನದ್ದಿ ಬಾಯಿಗಿಟ್ಟರೆ ಸಾಕು. ಅದು ಗಂಟಲಲ್ಲಿ ನುಣ್ಣಗೆ ಜಾರಿಹೋಗುತ್ತಿದ್ದುದು ಅರಿವಿಗೇ ಬರುತ್ತಿರಲಿಲ್ಲ. ನಾಲಿಗೆಯಲ್ಲಿ ಉಳಿದ ರುಚಿಯ ಅನುಭವವಷ್ಟೇ ತುತ್ತು ನುಂಗಿರುವುದಕ್ಕೆ ಸಾಕ್ಷಿಯಾಗಿ ಉಳಿದಿರುತ್ತಿತ್ತು. ಅಷ್ಟರಮಟ್ಟಿಗೆ ಆಕೆಯ ಅಡಿಗೆಯ ರುಚಿ ಹಿತವಾಗಿರುತ್ತಿತ್ತು.

ಒಂದೆಡೆ, ಶಾಂತಮ್ಮನ ಅಡಿಗೆಯ ಸೆಳೆತ. ಇನ್ನೊಂದೆಡೆ, ಅಣ್ಣನ ಪಾಠದ ಆಕರ್ಷಣೆ. ಇವೆರಡರ ಇಬ್ಬದಿಯ ಎಳೆತಕ್ಕೆ ಸಿಲುಕಿದ್ದಳು ಪ್ರಜ್ಞಾ ಅವರಪ್ಪ ಅನಂತಯ್ಯ, ಅಮ್ಮ ನಿರ್ಮಲಾ ಮತ್ತು ಹಳ್ಳಿಯಿಂದ ಇವತ್ತಷ್ಟೇ ಬಂದಿದ್ದ ರಂಗಜ್ಜ ಹಜಾರದಲ್ಲಿ ಕುಳಿತು ಮಾತುಕತೆಯಲ್ಲಿ ತೊಡಗಿದ್ದರು. ಅವರ ಗಮನವೂ ಆಗಾಗ ಅಡಿಗೆ ಮನೆಯ ಘಮಲಿನತ್ತ ಸುಳಿಯುತ್ತಿತ್ತು.

ರಂಗಜ್ಜ ಶಾಂತಮ್ಮನ ದೊಡ್ಡಪ್ಪ, ಅಪ್ಪ-ಅಮ್ಮನನ್ನು ಚಿಕ್ಕಂದಿನಲ್ಲೇ ಕಳೆದುಕೊಂಡಿದ್ದ ಅವಳನ್ನು ರಂಗಜ್ಜನೇ ಪ್ರೀತಿಯಿಂದ ಸಾಕಿ ಬೆಳೆಸಿದ್ದ. ಅನ್ನ ಕೊಟ್ಟು, ಅಷ್ಟಿಷ್ಟು ಅಕ್ಷರ ಕಲಿಸಿ, ಅವಳಿಗೆ ಮದುವೆಯನ್ನೂ ಮಾಡಿಸಿದ್ದ. ಅವಳ ಗಂಡ ಕಾರ್ಖಾನೆಯೊಂದರಲ್ಲಿ ಕಾರ್ಮಿಕನಾಗಿದ್ದ. ಅವರು ಕಳೆದ ಹತ್ತು ವರ್ಷಗಳಿಂದಲೂ ಪ್ರಜ್ಞಾಳ ಪಕ್ಕದ ಮನೆಯಲ್ಲೇ ಬಾಡಿಗೆಗಿದ್ದರು.

ಆ ದಂಪತಿಗಳ ಸಜ್ಜನಿಕೆ ಅನಂತಯ್ಯನವರಿಗೆ ತೀರಾ ಇಷ್ಟವಾಗಿತ್ತು. ಶಾಂತಮ್ಮನ ಅಡಿಗೆಯ ರುಚಿಯಂತೂ ಇವರ ಮನೆಯವರೆಲ್ಲರಿಗೂ ಹುಚ್ಚು ಹಿಡಿಸಿತ್ತು. ಅವಳ ಒಪ್ಪ ಓರಣ ಮತ್ತು ಅಚ್ಚುಕಟ್ಟುತನ ಎಲ್ಲರ ಮೆಚ್ಚುಗೆಗೂ ಪಾತ್ರವಾಗಿತ್ತು. ಅದಕ್ಕಾಗೇ ತಮ್ಮ ಮನೆಯ ಅಡಿಗೆ ಕೆಲಸ ಮಾಡಿಕೊಡುವಂತೆ ಅನಂತಯ್ಯ ಶಾಂತಮ್ಮನನ್ನು ಕೇಳಿಕೊಂಡಿದ್ದರು. ಆ ಕೆಲಸಕ್ಕೆ ಸಂಬಳವನ್ನೂ ನಿಗದಿ ಮಾಡಿದ್ದಲ್ಲದೆ, ಆ ದಂಪತಿಗಳು ಪ್ರತ್ಯೇಕವಾಗಿ ಅಡಿಗೆ ಮಾಡಿಕೊಳ್ಳಬಾರದೆಂದೂ, ತಮ್ಮ ಮನೆಯ ಊಟವನ್ನೇ ಅವರೂ ಮಾಡಬೇಕೆಂದೂ ಪ್ರೀತಿಯಿಂದ ಷರತ್ತು ವಿಧಿಸಿದ್ದರು. ಮನೆಯವರೆಲ್ಲರ ಒಳ್ಳೆಯತನಕ್ಕೆ ಕಟ್ಟುಬಿದ್ದ ಆ ದಂಪತಿಗಳು ಇದೇ ಮನೆಯ ಕುಟುಂಬದ ಸದಸ್ಯರಂತೆಯೇ ಆಗಿಬಿಟ್ಟಿದ್ದರು.

ಮಗಳು-ಅಳಿಯನನ್ನು ನೋಡಿಕೊಂಡು ಹೋಗಲು ಇಂದು ರಂಗಜ್ಜ ಬಂದಿದ್ದರು. ಅವರು ಬಂದುದರಿಂದಲೇ ಇವತ್ತು ಅಡಿಗೆ ಮನೆಯಲ್ಲಿ ವಿಶೇಷ ತಯಾರಿ ನಡೆದಿತ್ತು. ಬೇರೆ ಏನಾದರೂ 'ವಿಶೇಷ' ಮಾಡಿಸೋಣವೆಂದು ಅಪ್ಪನೆಂದಾಗ ರಂಗಜ್ಜನೇ ಶಾಂತಮ್ಮನ ಕೈಯ 'ಉಪ್ಸಾರು-ಮುದ್ದೆ' ಸವಿಯುವ ಬಯಕೆ ವ್ಯಕ್ತಪಡಿಸಿದ್ದ. ತನ್ನ ದೊಡ್ಡಪ್ಪ ಇಷ್ಟಪಟ್ಟ ಊಟವನ್ನು ತಯಾರು ಮಾಡಲು ಅವಳು ಅಡಿಗೆ ಮನೆ ಸೇರಿಕೊಂಡಿದ್ದಳು. ಮನೆಯೊಡತಿ ನಿರ್ಮಲಾ ಸಹಾಯ ಮಾಡುತ್ತೇನೆಂದರೂ ಅದನ್ನು ಪ್ರೀತಿಯಿಂದಲೇ ನಿರಾಕರಿಸಿ ತಾನೊಬ್ಬಳೇ ಅಡಿಗೆ ಕಾರ್ಯದಲ್ಲಿ ತೊಡಗಿಕೊಂಡಿದ್ದಳು. ಅಜ್ಜನ ಅಪೇಕ್ಷೆಯಂತೆಯೇ ಇಂದು ಉಪ್ಸಾರು- ಮುದ್ದೆಯ ಊಟ' ತಯಾರಾಗುತ್ತಿತ್ತು. ಆ ಅಡಿಗೆಯ ಘಮಲು ಪ್ರಜ್ಞಾಳ ಪಾಠ ಕೇಳುವ ಏಕಾಗ್ರತೆಗೆ ಆಗಾಗ ಭಂಗ ತರುತ್ತಿತ್ತು.

ಪ್ರಜ್ಞಾಳ ಅಣ್ಣ ವಿಕಾಸನ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇರಲಿಲ್ಲ. ತಂಗಿಗೆ ಕನ್ನಡ ಕಾವ್ಯವನ್ನು ರುಚಿಕಟ್ಟಾಗಿ ವಿವರಿಸುತ್ತಿದ್ದ ವಿಕಾಸನ ಮನಸ್ಸು ಅವನಿಗರಿವಿಲ್ಲದೆಯೇ ಅಡಿಗೆ ಮನೆಯ ಕಡೆಗೂ ಇಣುಕು ಹಾಕುತ್ತಿತ್ತು.

ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿದ್ದ ವಿಕಾಸನಿಗೆ ತನ್ನ ವೃತ್ತಿಯ ಬಗ್ಗೆ ಅತೀವ ಅಭಿಮಾನ. ಆ ಅಭಿಮಾನ ಮತ್ತು ಪ್ರೀತಿಯಿಂದ ತನ್ನ ವೃತ್ತಿಯನ್ನು ಅತ್ಯಂತ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ನಿರ್ವಹಿಸುತ್ತಿದ್ದ. ತನ್ನ ಬೋಧನಾ ಕೌಶಲ್ಯವನ್ನು ತನ್ನದೇ ಆದ ವಿಶಿಷ್ಟ ನೆಲೆಯಲ್ಲಿ ರೂಪಿಸಿ ರೂಢಿಸಿಕೊಂಡಿದ್ದ, ಆ ಪ್ರಯತ್ನಶೀಲತೆ ಮತ್ತು ಪ್ರಯೋಗಶೀಲತೆಯಿಂದ ಎಲ್ಲ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಮೇಷ್ಟ್ರಾಗಿದ್ದ. ಅವನ ವಿವರಣಾ ವೈಖರಿ ಮತ್ತು ವೈಚಾರಿಕ ಪ್ರಜ್ಞೆ ಆತನ ಬೋಧನಾ ಶೈಲಿಯನ್ನು ವಿಶಿಷ್ಟವಾಗಿಸಿತ್ತು.

ಆದ್ದರಿಂದಲೇ ಪ್ರಜ್ಞಾ ತನ್ನ ಕಾಲೇಜಿನ ಮೇಷ್ಟ್ರು ಅಚ್ಚುಕಟ್ಟಾಗಿ ಪಾಠ ಮಾಡಿದ್ದರೂ, ತನ್ನಣ್ಣನ ಆಕರ್ಷಕ ಮಾತುಗಳನ್ನು ಕೇಳಲು ಸದಾ ತವಕಿಸುತ್ತಿದ್ದಳು. ಇವತ್ತೂ ಸಹ ವಿಕಾಸ ತನ್ನ ಪ್ರೀತಿಯ ತಂಗಿ ಪ್ರಜ್ಞಾಳ ಕೋರಿಕೆಯಂತೆ ಕಾವ್ಯಭಾಗವೊಂದನ್ನು ವಿವರಿಸಲು ಆರಂಭಿಸಿದ್ದ. ರಾಘವಾಂಕ ಕವಿ ತನ್ನ ಕೃತಿಯಲ್ಲಿ

ಚಿತ್ರಿಸಿರುವ 'ಗಾನಗಾತಿಯರ ಪ್ರಸಂಗ' ಇವತ್ತು ವಿಕಾಸ ವಿವರಿಸುತ್ತಿದ್ದ ವಿಷಯವಾಗಿತ್ತು.

ವಿಶ್ವಾಮಿತ್ರ ಸೃಷ್ಟಿಸಿದ್ದ ಮಾಯಾವರಾಹದ ಬೆನ್ನಟ್ಟಿ ಬರುವ ಹರಿಶ್ಚಂದ್ರನಿಗೆ, ಮತ್ತವನಿಂದಲೇ ಸೃಷ್ಟಿಸಲ್ಪಟ್ಟಿದ್ದ ಗಾನಗಾತಿಯರು ಕಾಡೊಳಗೆ ಎದುರಾಗುತ್ತಾರೆ. ಬೇಟೆಯಿಂದ ಬಳಲಿದ್ದವನಿಗೆ ಅವರು ತಮ್ಮ ಗಾಯನದಿಂದ ಅವನ ಮನಸ್ಸಿನ ಆಯಾಸವನ್ನು ಪರಿಹರಿಸುತ್ತಾರೆ. ಇದರಿಂದ ಸುಪ್ರೀತನಾದ ಹರಿಶ್ಚಂದ್ರ ಅವರ ಗಾಯನಕ್ಕೆ ಪ್ರತಿಯಾಗಿ ಉಡುಗೊರೆ ಕೊಡಲು ಮುಂದಾಗುತ್ತಾನೆ. ಆದರೆ ಅವನ ಉಡುಗೊರೆಯನ್ನು ನಿರಾಕರಿಸುವ ಗಾನಗಾತಿಯರು ತಮ್ಮನ್ನು ವಿವಾಹವಾಗುವಂತೆ ಅವನನ್ನು ಆಗ್ರಹಿಸುತ್ತಾರೆ. ಇದಕ್ಕೆ ಕುಪಿತನಾಗುವ ಹರಿಶ್ಚಂದ್ರನ ಮೂಲಕ ರಾಘವಾಂಕನು ಕೆಲವು ನುಡಿಮುತ್ತುಗಳನ್ನಾಡಿಸಿದ್ದಾನೆ.

ಆ ಸಂದರ್ಭ ವಿಕಾಸನ ವಿವರಣೆಯಲ್ಲಿ ಮನೋಜ್ಞವಾಗಿ ಮೂಡಿಬರುತ್ತಿತ್ತು. ಆ ವಿವರಣೆಯನ್ನು ಪ್ರಜ್ಞಾ ಮಾತ್ರವಲ್ಲದೆ ಅಮ್ಮ, ಅಪ್ಪ ಮತ್ತು ರಂಗಜ್ಜ ಕೂಡ ಕುತೂಹಲದಿಂದ ಕೇಳಿಸಿಕೊಳ್ಳುತ್ತಿದ್ದರು. ಆ ಕ್ಷಣಕ್ಕೆ ಊಟದ ನೆನಪು ಅವರಿಂದ ಕೊಂಚ ದೂರವೇ ಆಗಿಬಿಟ್ಟಿತ್ತು.

ಬಚ್ಚಲ ಉದಕಂ ತಿಳಿದಡೆ ಆರ ಮೀಹಕ್ಕೆ ಯೋಗ್ಯಂ; ನಾಯ್ಗೆ ಹಾಲುಳ್ಳಡೆ ಅವನ ಊಟಕ್ಕೆ ಯೋಗ್ಯಂ; ಪ್ರೇತವನದೊಳಗೆ ಬೆಳೆದ ಹೂವು ಆರ ಮುಡಿಹಕ್ಕೆ ಯೋಗ್ಯಂ; ಮಿಕ್ಕ ಹೊಲತಿಯರು ನೀವೆನೆ ನಿಮ್ಮ ಜವ್ವನದ ಸೊಕ್ಕು, ರೂಪಿನ ಗಾಡಿ, ಜಾಣತನದೊಪ್ಪವು ಏತಕ್ಕೆ ಯೋಗ್ಯಂ; ರಮಿಸಿದವರುಂಟೆ, ಶಿವಶಿವ, ಈ ಮಾತು ತಾ ಹೊಲೆಯೆಂದನು....

'ಚರಂಡಿಯ ನೀರು ತಿಳಿಯಾಗಿದ್ದರೂ ಅದು ಸ್ನಾನಕ್ಕೆ ಯೋಗ್ಯವಾಗುವುದಿಲ್ಲ; ನಾಯಿಯ ಹಾಲು ಹೇರಳವಾಗಿದ್ದರೂ ಅದು ಯಾರ ಊಟಕ್ಕೂ ಯೋಗ್ಯವಲ್ಲ; ಸ್ಮಶಾನದಲ್ಲಿ ಬೆಳೆದ ಹೂವನ್ನು ಯಾರೂ ಮುಡಿಯುವುದಿಲ್ಲ. ಅಂತೆಯೇ, ನಿಮ್ಮಲ್ಲಿ ಯೌವನ, ರೂಪ, ಪ್ರತಿಭೆಗಳಿದ್ದರೂ ನಿಮ್ಮೊಡನೆ ರಮಿಸಲಾದೀತೆ? ಮೊದಲಾಗಿ, ಇಂತಹ ಮಾತನ್ನು ಆಡುವುದೇ ಹೊಲೆತನವಾಗುತ್ತದೆ' ಎನ್ನುತ್ತಾನೆ ಹರಿಶ್ಚಂದ್ರ, ಈ ಪದ್ಯಭಾಗವನ್ನು ಬಿಡಿಸಿ ಅನ್ವಯಾನುಕ್ರಮದಲ್ಲಿ ಹೇಳಿ, ಅದರ ಅರ್ಥವನ್ನು ವಿಕಾಸ ನಿರೂಪಿಸಿದಾಗ ಪ್ರಜ್ಞಾಳಿಗೆ ಆ ಪಾಠ ಸುಲಭವಾಗಿ ಅರ್ಥವಾಗಿತ್ತು.

ಅದನ್ನರಿತ ವಿಕಾಸ ಮುಂದಿನ ಪದ್ಯದ ವಿವರಣೆಗೆ ತೊಡಗಿದ್ದ. ಹರಿಶ್ಚಂದ್ರನ ಈ ಮಾತಿಗೆ ಗಾನಗಾತಿಯರು ಅತ್ಯಂತ ಮಹತ್ವದ ಪ್ರಶ್ನೆಯೊಂದನ್ನು ಮುಂದಿಡುತ್ತಾರೆ.

ಹಾಡನೊಲಿದು ಆಲಿಸಿದ ಕಿವಿಗೆ ಹೊಲೆಯಿಲ್ಲ, ಮಾತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ, ರೂಪನೆರೆನೋಡಿದ ವಿಲೋಚನಕೆ ಹೊಲೆಯಿಲ್ಲ, ಮೆಯ್ ಮುಡಿಗಳಿಂ ಸುಳಿವ ತಂಗಾಳಿಯಿಂ ತೀಡುವ ಸುಗಂಧಮಂ

ಮೂಸಿಸಿದ ನಾಸಿಕಕೆ ನಾಡೆ ಹೊಲೆಯಿಲ್ಲ, ಸೋಂಕಿಂಗೆ ಹೊಲೆಯುಂಟಾಯ್ತಿ, ಕೂಡಿದ ಪಂಚೇಂದ್ರಿಯಂಗಳೊಳು ನಾಲ್ಕಧಮ ಒಂದಧಿಕವೇ....



'ಹಾಡನ್ನು ಆಲಿಸಿದ ಕಿವಿಗೆ, ಮಾತಾಡಿ ಹೊಗಳಿದ ನಾಲಿಗೆಗೆ, ರೂಪವನ್ನು ಮನಸಾರೆ ನೋಡಿದ ಕಣ್ಣಿಗೆ, ಮೈ-ಮುಡಿಗಳ ಸುಗಂಧವು ತಂಗಾಳಿಯ ಮೂಲಕ ಸುಳಿದಾಗ ಅದನ್ನು ಆಘ್ರಾಣಿಸಿದ ಮೂಗಿಗೆ ಹೊಲೆತನವಿಲ್ಲ. ಆದರೆ, ನಮ್ಮನ್ನು ಸೋಕಿದರೆ ಮಾತ್ರ ಹೊಲೆತನ ಉಂಟಾಗುತ್ತದೆಯೇ? ನಾಲ್ಕು ಇಂದ್ರಿಯಗಳಿಗೆ ತಾಗದ ಹೊಲೆತನ ಸ್ಪರ್ಶೇಂದ್ರಿಯಕ್ಕೆ ಮಾತ್ರ ತಾಗಿಬಿಡುತ್ತದೆಯೇ?' ಎಂದು ಗಾನಗಾತಿಯರು ಪ್ರಶ್ನಿಸುವ ಈ ಪದ್ಯಭಾಗವನ್ನು ವಿವರಿಸಿದ ವಿಕಾಸ, ಆ ಗಾನಗಾತಿಯರ ಪ್ರಶ್ನೆಗೆ ಹರಿಶ್ಚಂದ್ರನು ಸಮಜಾಯಿಷಿ ನೀಡುವ ಪದ್ಯಭಾಗದ ವಿವರಣೆಗೆ ಮುಂದಾಗಿದ್ದ,

ಕಂಡು ಅರಿವವೈಸಲೇ ನಯನೇಂದ್ರಿಯಂ, ಘ್ರಾಣಕೊಂಡು ಅರಿವವೈಸಲೇ ವಾಸನೆಯ, ಕರ್ಣಂಗಳು ಉಂಡು ಅರಿವವೈಸಲೇ ಶಬ್ದಮಂ, ದೂರದಿಂದಲ್ಲದೆ ಅವು ಮುಟ್ಟಲಿಲ್ಲ, ಭಂಡತನವೀ ಮಾತಿದಕ್ಕೆಯುಪಮಾನವೇ? ಕೆಂಡವನು ಮುಟ್ಟಿದಡೆ ಬೇವಂತೆ ಕೇಳ್ದಡಂ ಕಂಡು ವಾಸಿಸಿದಡಂ ಬೆಂದವೇ?

"ಕಾಣುವ, ಆಸ್ವಾದಿಸುವ ಮತ್ತು ಕೇಳುವ ಕ್ರಿಯೆಗಳು ಮುಟ್ಟದೆಯೇ ನಡೆಯುತ್ತವಾದ್ದರಿಂದ ಅವಕ್ಕೆ ಹೊಲೆತನ ಸೋಕುವುದಿಲ್ಲ. ಕೆಂಡವನ್ನು ಮುಟ್ಟಿದರೆ ಮಾತ್ರ ಸುಡುತ್ತದಲ್ಲದೆ, ಅದರ ಬಗ್ಗೆ ಕೇಳುವುದರಿಂದ ಮತ್ತು ಅದನ್ನು ನೋಡುವುದರಿಂದ ಸುಡಲಾರದು. ಇದು ಹರಿಶ್ಚಂದ್ರನ ಸಮರ್ಥನೆ. ಇದೊಂದು ತಾರ್ಕಿಕ ಅಂತ್ಯವಿಲ್ಲದ ಪ್ರಶ್ನೆ. ಇದು ಕೇವಲ ರಾಘವಾಂಕನ ಕಾಲಕ್ಕಷ್ಟೇ ಸೀಮಿತವಾಗಿರದೆ, ಸಾರ್ವಕಾಲಿಕ ಪ್ರಶ್ನೆಯಾಗಿಯೇ ಉಳಿದು ಇವತ್ತಿಗೂ ಪ್ರಸ್ತುತವಾಗುತ್ತದೆ" ಎನ್ನುವಾಗ ವಿಕಾಸನ ಮುಖದಲ್ಲಿ ಒಂದು ಬಗೆಯ ಸಂಕಟ ಸುಳಿದಾಡುತ್ತಿತ್ತು. ತಾನು ಹಳ್ಳಿಯಲ್ಲಿದ್ದಾಗ ಕಂಡಿದ್ದ ಒಂದು ಘಟನೆ ನೆನಪಾದದ್ದೇ ಆತನ ಸಂಕಟಕ್ಕೆ ಕಾರಣವಾಗಿತ್ತು. ಪಾಠ ಮಾಡುತ್ತಿದ್ದ ವಿಕಾಸ ಕೆಲಕಾಲ ಆ ಹಳೆಯ ನೆನಪಿನೊಂದಿಗೆ ಕಳೆದುಹೋಗಿದ್ದ.

****

"ಏನಮ್ಮಿ ಸಣ್‌ತಾಯಿ... ಮದ್ದೆಗ್ ಮುಂಚೇನೆ ಒಟ್ಟೆ ತುಂಬಿಸ್ಕಂಡ್ ನಿಂತಿದೀಯಲ್ಲಾ.... ಈ ಸಣ್ ವಯಸ್ಗೇ ತಾಯಿ ಆಗುಟ್ಟು, ಸಣ್ಣತಾಯಿ ಅನ್ನೋ ನಿನ್ ಎಸ್ರುನ್ನ ಉಳುಸ್ತೇಕು ಅಂತ ಮಾಡಿದೀಯ? ಎಸ್ರು ಉಳುಸ್ತೇಕು ಅಂತ ನಿನ್ ಬಾಳ್ನೇ ಆಳ್ ಮಾಡ್ಕಂಡ್ ನಿಂತಿದೀಯಲ್ಲಮ್ಮೀ.... ನಿನ್ಗೇನಾರ ಒಸಿ ಆದ್ರೂ ಮಾನ ಮಾರ್ವ್ಯಾದೆ ಐತಾ? ಅದೂ ಅಲ್ದೆ, ನಿನ್ ಒಟ್ಟೇಲಿರೋ ಪಿಂಡ ಲಿಂಗೇಸುಂದು ಅಂತ ಬ್ಯಾರೆ ಏಳ್ತಿದೀಯಲ್ಲಾ... ನಿನ್ ಬುದ್ದಿಗೇನಾರ ಸಗ್ಣಿ ಮೆತ್ಕಂಡಿದ್ದಾತಾ?....."

ಹಳ್ಳಿಕಟ್ಟೆ ಮುಖ್ಯಸ್ಥ ವೀರಭದ್ರಪ್ಪ ಪಂಚಾಯ್ತಿ ಕಟ್ಟೆಯಲ್ಲಿ ಸಣ್ಣತಾಯಿಯನ್ನು ವಾಚಾಮಗೋಚರ ನಿಂದಿಸುತ್ತಿದ್ದರೆ ಅವಳಪ್ಪ ಚಿಕ್ಕಮಾದ ಮಾತು ಕಳೆದುಕೊಂಡವನಂತೆ ಕಂಗಾಲಾಗಿ ನಿಂತಿದ್ದ. ಅವಳಪ್ಪ ಪುಟ್ಟಕ್ಕ ಉಕ್ಕಿ ಬರುತ್ತಿದ್ದ ಅಳುವನ್ನು ತಡೆಯಲು ಬಾಯಿಗೆ ಸೆರಗು ಅಡ್ಡವಿಟ್ಟು ಬಿಕ್ಕುತ್ತಿದ್ದಳು. ಅಪ್ಪ-ಅವ್ವ ಇಬ್ಬರೂ



ಮಾತಾಡದೇ ಮೂಕರಾಗಿದ್ದುದನ್ನು ಕಂಡ ಸಣ್ಣತಾಯಿ ತನ್ನ ರಕ್ಷಣೆ ತನ್ನಿಂದಲೇ ಎಂದು ತಿಳಿದು ತಾನೇ ಮಾತಾಡಲು ತೊಡಗಿದ್ದಳು.

"ನಾನ್ ಸುಳ್ಳೇಳ್ತಿಲ್ಲ ಬುದ್ಧಿ.... ಮದ್ವೆ ಆಯ್ತಿನಿ ಅಂತ ನಂಬ್ಸಿ ನಂಗ್ ಮೋಸ ಮಾಡ್ತಿರೋನು ಲಿಂಗೇಸಾನೇ.... ನನ್ ಒಟ್ಟ್ಯಾಗಿರೋ ಈ ಜೀವುದ್ ಮ್ಯಾಲೆ ಆಣೆ ಮಾಡಿ ಏಳ್ತೀನಿ.... ನಾನ್ ಸುಳ್ ಏಳ್ತಿಲ್ಲ.... ನಂಗೆ ಅನ್ಯಾಯ ಆಗೈತೆ.... ನೀವೆಲ್ಲಾ ಊರ್ಗೆ ಹಿರೀಮನುಸ್ರು... ತಿಳುವಳ್ಕೆ ಇರೋರು.... ನಿಮ್ಗೆ ಕೈ ಮುಗೀತೀನಿ.... ಕಾಲಿಗ್ ಬೀಳ್ತೀನಿ.. ನಂಗೆ ನ್ಯಾಯ ಕೊಡ್ಸಿ ಬುದ್ಧಿ...."

"ಮುಚ್ಚಮ್ಮಿ ಬಾಯ್ನ .... ನೀನೇನ್ ಮಾತಾಡ್ತಿದೀಯ ಅಂತ ಗೊತ್ತೈತಾ ನಿಂಗೆ? ನ್ಯಾಯ ಕೊಡುಸ್ರಿ ಅಂದ್ರೆ, ಅವನ್ಜೊತೆ ಮದ್ವೆ ಮಾಡುಸ್ತಿ ಅಂತ ತಾನೇ ಅರ್ತ? ನಿನ್ ಜಾತಿ ಯಾವ್ದು.... ಲಿಂಗೇಸುನ್ ಜಾತಿ ಯಾವ್ದು.... ಆಗೋ ಮಾತೇನಮ್ಮಿ ಅದು?"

"ಯಾಕ್ ಆಗಾಕಿಲ್ಲ ಬುದ್ದಿ? ನನ್ನನ್ನ ಮುಟ್ಟೋವಾಗ ಅಡ್ಡ ಬರ್ದೇ ಇರೋ ಜಾತಿ, ಮದ್ವೆ ಮಾಡ್ಕಳ್ಳೋವಾಗ ಮಾತ್ರ ಅಡ್ಡ ಬಂದ್ಬುಡ್ತದಾ? ಇದ್ಯಾವ್ ನ್ಯಾಯ? ಜಾತಿ ಗೀತಿ ಎಲ್ಲ ಮನ್ನ ಮಾಡ್ಕಂಡಿರೋದು? ನೀವು ತಿಳುವಳೆ ಇರೋರು.... ದೊಡ್ಡೋರು.... ಇವೆಲ್ಲಾ ಗೊತ್ತಿಲ್ವಾ ಬುದ್ದಿ ನಿಮ್ಗೆ?"

"ನಮ್ಗೇ ಪ್ರಶ್ನೆ ಮಾಡ್ತಿಯೇನಮ್ಮಿ? ಇಸ್ಟೆಲ್ಲಾ ಮಾತ್ ಕಲ್ತಿರೋ ನೀನು, ಕಾಲು ಜಾರೋ ಒತ್ನಾಗೆ ನಿನ್ನ ತಿಳುವಳ್ಕೇನ ಯಾವ ಮೂಲೇಲಿ ಮೂಟೆ ಕಟ್ಟಿ ಮಡಗಿದ್ದೆ? ಜಾತಿ, ಕುಲ ಎಲ್ಲಾ ನಮ್ಮ ಹಿರಿಯೋರು ಮಾಡಿರೋದು.... ಅದನ್ನ ನಾವ್ ಯಾವತ್ತೂ ಮೀರೋಕಾಗಲ್ಲ.... ನೀನ್ ಏಳ್ದೆ ಅಂತ ಈ ಮದ್ದೆ ಮಾಡ್ಸುದ್ರೆ ನಮ್ಮಳ್ಳಿ ಮಾನಾನ ನಾವೇ ಕಳ್ದಂಗ್ ಆಗಾಕಿಲ್ವಾ? ಗಂಡು ಬೇಕಾದಂಗ್ ಮಾಡ್ತಾನೆ ಕನಮ್ಮಿ.... ಎಂಗುಸ್ರು ನೀವೇ ಎಚ್ಚುರೇಲಿಲ್ಲೇಕು.... ಎಚ್ಚುರೆ ತಪ್ಪಿರೋದೂ ಅಲ್ಲೆ, ಈಗ ಮದ್ವೆ ಮಾಡುಸ್ತಿ ಅಂತ ಬಂದಿದೀಯಲ್ಲಾ... ಎಸ್ಟಮ್ಮಿ ದೈರ್ಯ ನಿಂಗೆ?"

"ಇದು ದೈರ್ಯ ಅಲ್ಲ ಬುದ್ಧಿ.... ಮುಂದಿನ್ ಜೀವ್ನದ್ ಬಗ್ಗೆ ನಂಗಿರೋ ಬಯ.... ದೊಡ್ಡೋರು ನೀವೇ ಇಂಗ್ ಅಂದ್ಬುಟ್ರೆ ನನ್ ಗತಿ ಏನು? ನಿಮ್ ಮಗ್ಳು ಅಂತ ತಿಳ್ಕೊಂಡು ನಂಗ್ ನ್ಯಾಯ ಕೊಡುಸ್ರಿ ಬುದ್ಧಿ...."

"ಕೆಳಜಾತಿ ಕುನ್ನಿ ನಮ್ ಮಗ್ಳು ಆಗಾಕೆ ಎಂಗ್ ಆದಾತು? ನನ್ ಮಗ್ಳೇನಾರ ಇಂಗ್ ನಡತೆಗೆಟ್ಟು ಬಂದಿದ್ದಿದ್ರೆ, ಉದ್ದುದ್ದ ಸಿಗ್ದು ಊರ್ ಬಾಕುಲ್ಗೆ ತೋರ ಕಟ್ಟುಡ್ತಾ ಇದ್ದೆ. ನಿನ್ನನ್ನ ಇಂಗೇ ಬುಟ್ರೆ ಇಡೀ ಊರೆ ಊರ್ಗೇ ಜಾತಿ ಕೆಡಿಸ್ಬುಡ್ತೀಯೆ...."

ಕೋಪದ ವಶಕ್ಕೆ ವಿವೇಕ ಒಪ್ಪಿಸಿದ್ದ ವೀರಭದ್ರಪ್ಪ ಆ ಕ್ಷಣಕ್ಕೆ ಮನುಷ್ಯನೇ ಆಗಿರಲಿಲ್ಲ. ಆದಷ್ಟು ಬೇಗ ಪಂಚಾಯ್ತಿಯ ತೀರ್ಮಾನ ಒದರಿ ಅಲ್ಲಿಂದ ಹೊರಟುಬಿಡಲು ಅವನು ಸಜ್ಜಾಗಿದ್ದ. ಅದಕ್ಕೆಂದೇ, ಈಗ ತೀರ್ಮಾನ ಹೇಳಬಹುದೇ ಎಂಬಂತೆ ಅವನು ಪಂಚಾಯ್ತಿ ಕಟ್ಟೆಯ ಇನ್ನಿತರೆ ಮುಖಂಡರ ಮುಖ ನೋಡಿದ. ಅವರು ಸುತ್ತಲಿನ ಜನರ ಮುಖ ನೋಡಿದರು. ಲಿಂಗೇಶ, ಅವನ ಅಪ್ಪ, ಅಮ್ಮ



ಎಲ್ಲರೂ ಅಲ್ಲಿದ್ದರು. ಲಿಂಗೇಶನಿಗಾಗಲೀ, ಅವನ ಅಪ್ಪ ಅಮ್ಮನಿಗಾಗಲೀ, ಒಂದಾದರೂ ಮಾತನ್ನಾಡುವ ಅಗತ್ಯವೇ ಬಂದಿರಲಿಲ್ಲ. ಅವರ ಪರವಾಗಿ ಪಂಚಾಯ್ತಿ ಕಟ್ಟೆಯ ಮುಖಂಡರೇ ವಕಾಲತ್ತು ವಹಿಸಿದಂತಿತ್ತು. ಈಗ ತೀರ್ಮಾನ ಹೇಳುವ ಸಮಯವೂ ಸನ್ನಿಹಿತವಾಗಿತ್ತು.

ಅಲ್ಲಿ ನೆರೆದಿದ್ದ ಜನ ಮತ್ತು ಪಂಚಾಯ್ತಿ ಕಟ್ಟೆ ಮುಖಂಡರ ಮುಖಗಳನ್ನು ಮತ್ತೊಮ್ಮೆ ನೋಡಿದ ವೀರಭದ್ರಪ್ಪ, ಅಲ್ಲೆಲ್ಲಾ ತಡ ಮಾಡದೆ ತೀರ್ಪು ಪ್ರಕಟಿಸುವಂತೆ ಹೇಳುವ ಭಾವ ಸ್ಪಷ್ಟವಾಗಿ ಕಾಣುತ್ತಿತ್ತು. ಅದನ್ನು ಅರ್ಥ ಮಾಡಿಕೊಂಡ ವೀರಭದ್ರಪ್ಪ ಪಂಚಾಯ್ತಿಯ ತೀರ್ಮಾನ ಹೇಳಲು ಮುಂದಾದ. ಲಿಂಗೇಶನ ಮುಖದಲ್ಲಿ ಆಗ ಗೆಲುವಿನ ನಗೆಯೊಂದು ಮಿನುಗಿತ್ತು. ಆರ್ತಳಾಗಿ ಆತನೆಡೆಗೆ ತಿರುಗಿದ್ದ ಸಣ್ಣತಾಯಿಗೆ ಆ ನಗುವಿನ ಮೊನಚು ತಾಗಿ, ಕಣ್ಣೆದುರು ಕತ್ತಲೆ ಕಂಡಂತಾಗಿ, ಎದೆ ತಲ್ಲಣಿಸಿತು. ಇತ್ತ ವೀರಭದ್ರಪ್ಪ ಪಂಚಾಯ್ತಿ ಕಟ್ಟೆಯ ತೀರ್ಮಾನ ಪ್ರಕಟಿಸುತ್ತಿದ್ದ.

"ಇದು ನಮ್ಮಳ್ಳಿ ಮಾನ-ಮಾರ್ರ್ಯಾದೆ ಪ್ರಶ್ನೆ. ಯಾವ್ದೇ ಅಳ್ಳಿ ಆಗ್ಲಿ, ಪ್ಯಾಟೆ ಆಗ್ಲಿ, ಇಂತ ಇಚಾರಗಳೆಲ್ಲಾ ನಡೀತಾನೇ ಇರ್ತವೆ. ವಯಸ್ಸಿಗೆ ಬಂದ ಐಕ್ಳು, ಉಪ್ಪು ಕಾರ ತಿನ್ನೋವು, ಏನೋ ತಪ್ಪು ಮಾಡ್ಬುಡ್ತವೆ. ಇದೆಲ್ಲಾ ಸಾಜಾನೇ.... ಆದ್ರೆ, ಮುಚ್ಚುಮರೇಲಿ ನಡಿಯೋ ಇಂತ ಇಚಾರಗಳ ಪಂಚಾಯ್ತಿ ಕಟ್ಟೋವನ್ನೂ ತರೋದು ಸುತಾರಾಂ ಸರಿಯಲ್ಲ. ಇದ್ರಿಂದ ನಮ್ಮಳ್ಳಿ ಬಗ್ಗೆ ನಾಕಾರು ಜನ ಆಡ್ಕಂಡ್ ನಗಿಯೋ ಅಂಗಾಯ್ತದೆ. ಅಂಗ್ ಆಳ್ವಾರು. ಅದ್ರೆ, ಈಗ ನಾವ್ ಕೊಡೋ ತೀರ್ಮಾನ ಇನ್ಮುಂದೆ ಇಂಗ್ ಮಾಡೋರೆಲ್ಲಾ ಒಂದ್ ಎಚ್ಚು ಪಾಟ ಆಗೋಕು.

ಆದ್ರಿಂದ, ಸಣ್ತಾಯಿ ಕುಟುಂಬಾನ ಈ ಅಳ್ಳಿಯಿಂದ ಬಯಿಸ್ಕಾರ ಆಗ್ತಾ ಇದೀವಿ. ಈ ಸಣ್ಾಯಿ ತಾನು ಎಣ್ಣೆಂಸ್ಸು ಅನ್ನೋದ್ರೆ ಮತ್ತು ನಾಚ್ಕೆ ಇಲ್ಲೆ ಮದ್ಯೆ ಇಸ್ಕಾನ ಇಷ್ಟೊಂದ್ ಜನಗಳೆದುರೆ ಮಾತಾಡವೆ. ಮೇಲ್ಜಾತಿ ಉಡುಗನೊತೆ ಕಳ್ಳಸಂಬಂದ ಇಡ್ಕೊಂಡು ಅಳ್ಳಿ ಸಂಪ್ರದಾಯಾನ ಆಳ್ ಮಾಡವ್ಳೆ, ಮತ್ತೆ, ಇವಳ ನೀತಿಗೆಟ್ಟ ನಡತೆಗೆ ಇವಳಪ್ಪ ಅಮ್ಮ ಕುಮ್ಮಕ್ಕು ಕೊಟ್ಟವ್ರೆ. ಇವು ಮಾಡಿರೋ ಈ ತೆಪ್ಗೆ, ಇವರ ಒಲಾ ಮನೇನ ಪಂಚಾಯ್ತಿ ಮುಟ್ಟುಗೋಲ್ ಮಾಡ್ಕೊಳ್ತಾ ಐತೆ. ಇದೇ ಈ ಪಂಚಾಯ್ತಿ ಕಟ್ಟೆ ತೀರ್ಮಾನ."

ವೀರಭದ್ರಪ್ಪ ತೀರ್ಪು ಹೇಳುತ್ತಿದ್ದಂತೆ ಸಣ್ಣತಾಯಿ ಕಿಡಿಕಿಡಿಯಾಗಿದ್ದಳು. ಯಾರಾದರೂ ತನ್ನ ನೆರವಿಗೆ ಬರಬಹುದು, ಈ ಅನ್ಯಾಯವನ್ನು ಪ್ರತಿಭಟಿಸಬಹುದು ಎಂದು ಸುತ್ತಲೂ ಕಣ್ಣಾಡಿಸಿದ್ದಳು. ಅಲ್ಲಿ ಯಾರೂ ಮನುಷ್ಯರೇ ಇದ್ದಂತಿರಲಿಲ್ಲ. ತಾನು ಯಾವುದೋ ಕಾಡೊಳಗೆ ಕ್ರೂರಮೃಗಗಳ ಮಧ್ಯೆ ಇರುವಂತೆ ಅವಳಿಗೆ ಭಾಸವಾಗಿತ್ತು. ಅನ್ಯಾಯ, ಅಪಮಾನಗಳಿಂದ ಆದ ನೋವು ಆಕ್ರೋಶಕ್ಕೆ ತಿರುಗಿ ಅಬ್ಬರಿಸಿದ್ದಳು. ಸಣ್ಣತಾಯಿ.

"ಸಣ್ಣ ಬುದ್ಧಿ ಇರೋ ದೊಡ್ಡ ಜನಗಳಾ.... ಯಾವ್ ಕಾಲ್ದಾಗ್ ಇದೀರೋ ನೀವೆಲ್ಲಾ.... ಕೋರ್ಟು ಕಾನೂನು ನನ್ಗೂ ಗೊತ್ತೈತೆ ಕಣೋ.... ನನಗಾಗಿರೋ ಈ ಅನ್ಯಾಯಾನ ನಾನೇ ಸರಿ ಮಾಡ್ಕ ತೀನಿ.... ನಿಮ್ಗೆಲ್ಲಾ ಸರಿಯಾದ ಪಾಟಾನ ಕಲ್ಸೇ



ಕಲಿಸ್ತೀನಿ. ಮಾನಗೆಟ್ಟೋರಾ... ಹಳ್ಳಿ ಮಾರ್ವಾದೆ ಬಗ್ಗೆ ಮಾತಾಡ್ತೀರಲ್ಲಾ.... ನಿಮಗೆಲ್ರೋ ಐತೆ ಮಾರ್ವಾದೆ....? ಕೆಳಜಾತಿ ಎಣ್ಣೆಕ್ಕು ಅಂದ್ರೆ ನೀವ್ ಇಸ್ಕೊಳ್ಳೋಕ್ ಅಂತ್ಲೇ ಉಟ್ಟೋರು ಅಕ್ಕಂಡಿದೀರೇನೋ? ಇಸ್ಕೊಳ್ಳೋಕೆ ಅಡ್ಡ ಬರ್ದೇ ಇರೋ ಜಾತಿ, ಕಳ್ಕೊಳ್ಳೋಕೆ ಮಾತ್ರ ಅಡ್ಡ ಬತ್ತದೇನ್ರೋ? ನಿಮ್ಮ ಬಾಯ್ಗೆ ಉಳ ಬೀಳಾ.... ನಿಮ್ಮನೆ ಆಳಾಗೋಗಾ..."

ಸಣ್ಣತಾಯಿ ನೋವಿನಿಂದ ಚೀರಾಡುತ್ತಿದ್ದರೆ ಅಲ್ಲಿದ್ದವರೆಲ್ಲಾ ಅಲ್ಲಿಂದ ಒಬ್ಬೊಬ್ಬರೇ ಎದ್ದು ಹೋಗಿದ್ದರು. ಅಬ್ಬರಿಸಿ ಸುಸ್ತಾದ ಅವಳು ಹಾಗೆಯೇ ನೆಲಕ್ಕೆ ಕುಸಿದಿದ್ದಳು.

ಇದಾದ ಮರುದಿನವೇ ಸಣ್ಣತಾಯಿ, ಅವಳ ಅಪ್ಪ ಮತ್ತು ಅವ್ವ ಹಳ್ಳಿಯಾಚೆಯ ಹುಣಸೇಮರದಲ್ಲಿ ಹೆಣಗಳಾಗಿ ನೇತಾಡುತ್ತಿದ್ದರು! ಮೂವರು ಮುಗ್ಧರ ಪ್ರಾಣ ನುಂಗಿಕೊಂಡ ಹಳ್ಳಿ ತನ್ನ ಮಾನ ಉಳಿಸಿಕೊಂಡಿತ್ತು. ಇದೆಲ್ಲಾ ಆಗಿ ಹನ್ನೊಂದನೇ ದಿನಕ್ಕೆ ಲಿಂಗೇಶನ ಮದುವೆಗೆ ಮುಹೂರ್ತ ನಿಗದಿಯಾಗಿತ್ತು!

****

“ಯಾಕಣ್ಣಾ! ಏನಾಯ್ತು?” ಪ್ರಜ್ಞಾತನ್ನಣ್ಣ ವಿಕಾಸನನ್ನು ಅಲುಗಿಸಿ ಪ್ರಶ್ನಿಸಿದಾಗ “ಏನಿಲ್ಲಮ್ಮ..... ಈ ಪಾಠ ಮಾಡೋವಾಗ ಸಣ್ಣತಾಯಿ ನೆನಪಾಯ್ತು” ಎಂದ. ಸಣ್ಣತಾಯಿಯ ಘಟನೆ ಪ್ರಜ್ಞಾಳಿಗೂ ಗೊತ್ತಿದ್ದದ್ದೇ! ಆ ಘಟನೆ ನಡೆದಾಗ ಪ್ರಜ್ಞಾಳಿಗೆ ಆರೇಳು ವರ್ಷ ಇದ್ದಿರಬಹುದು. ಆಗಾಗ ಅದರ ಬಗ್ಗೆ ವಿಕಾಸ ಪ್ರಸ್ತಾಪ ಮಾಡುತ್ತಲಿದ್ದುದರಿಂದ ಅದು ಅವಳ ಸ್ಮೃತಿಪಟಲದಲ್ಲಿ ನಿನ್ನೆಯೋ ಮೊನ್ನೆಯೋ ನಡೆಯಿತೆಂಬಷ್ಟು ನಿಚ್ಚಳವಾಗಿತ್ತು. ಶತಶತಮಾನಗಳಿಂದಲೂ ಈ ಸಾಮಾಜಿಕ ವಿಕೃತಿ ಹಾಗೆಯೇ ಉಳಿದುಕೊಂಡು ಬಂದಿರುವ ಬಗ್ಗೆ ಅವಳಲ್ಲಿ ಅಚ್ಚರಿಯಿತ್ತು!

ವಿವೇಕ ಬೆಳೆಸುವ ವಿದ್ಯಾಕೇಂದ್ರಗಳಲ್ಲೂ 'ಜಾತಿ ಜಿಜ್ಞಾಸೆ' ನಡೆಯದೇ ಇರುತ್ತಿರಲಿಲ್ಲ. ವಿದ್ಯೆ ಕಲಿಯುತ್ತಿದ್ದ ವಿದ್ಯಾರ್ಥಿಗಳಲ್ಲೂ ಈ ಬಗ್ಗೆ ಹಲವು ಗೊಂದಲಗಳಿದ್ದವು. ಅವರು ಪರಸ್ಪರ ಮಾತುಕತೆಯಲ್ಲಿ ತೊಡಗಿದ್ದಾಗ ಈ ಸಂಗತಿಯನ್ನು ಕುರಿತಂತೆ ಹಲವು ವಿಚಾರಗಳು ಅನಾವರಣಗೊಳ್ಳುತ್ತಿದ್ದವು.

****

ಒಮ್ಮೆಯಂತೂ ಇದೇ ವಿಷಯದ ಬಗ್ಗೆ ಪ್ರಜ್ಞಾಳಿಗೂ ಅವಳ ಗೆಳತಿ ಸುಜಾತಳಿಗೂ ವಾಗ್ಯುದ್ಧವೇ ನಡೆದುಹೋಗಿತ್ತು. ಸುಜಾತಳೇ ಮೊದಲು ಮಾತು ತೆಗೆದಿದ್ದಳು.

“ಕೆಳಜಾತಿಯ ವಿದ್ಯಾರ್ಥಿಗಳು ನಿಜಕ್ಕೂ ಅದೃಷ್ಟವಂತರು ಕಣೇ.”

“ಏನೂ.... ಅದೃಷ್ಟವಂತರಾ! ನೂರಾರು ವರ್ಷದಿಂದ ಅಪಮಾನ, ಶೋಷಣೆ ಅನುಭವಿಸ್ತಾ ಬಂದಿರೋ ಆ ಜನ ನಿನ್ನ ಪ್ರಕಾರ ಅದೃಷ್ಟವಂತರಾ? ಹೇಗೆ?”



“ನೀನೇ ಯೋಚ್ನೆ ಮಾಡು. ಅವರಿಗೆ ಎಲ್ಲ ಕ್ಷೇತ್ರಗಳಲ್ಲೂ ಮೀಸಲಾತಿ ಇದೆ. ಹಾಗಾಗಿ, ಅವರಿಗೆ ಉದ್ಯೋಗ ಸಿಕ್ಕೇ ಸಿಗುತ್ತೆ. ಸ್ಕೂಲು-ಕಾಲೇಜ್‌ಗಳಲ್ಲೂ ಅವರಿಗೆ ಸ್ಪೆಷಲ್ ಸವಲತ್ತುಗಳು ಸಿಗುತ್ತೆ, ಲೈಬ್ರರೀಲಿ ಅವರು ನಮಗಿಂತ ಜಾಸ್ತಿ ಬುಕ್ಸ್ ತಗೋಬಹುದು. ಯಾವುದೇ ಫೀಸ್‌ನಲ್ಲೂ ಅವರಿಗೆ ರಿಯಾಯಿತಿ ಇರುತ್ತೆ. ಹಾಸ್ಟೆಲ್‌ಗಳಲ್ಲೂ ಅವರಿಗೆ ಫ್ರೀ ಸೀಟ್ ಸಿಗುತ್ತೆ. ನಮಗೂ ಅವನ್ನೂ ಈ ವ್ಯತ್ಯಾಸ ಯಾಕೆ? ಆರ್ಥಿಕವಾಗಿ ನಾವೂ ಹಿಂದುಳಿದವರು. ಆದ್ರೂ, ಈ ಅವಕಾಶಗಳೆಲ್ಲಾ ನಮಗೇಕಿಲ್ಲ?”

“ನಿನ್ನ ಪ್ರಶ್ನೆಗಳೆಲ್ಲಾ ಇವತ್ತಿನವು. ಆದ್ರೆ, ಆ ಪ್ರಶ್ನೆಗಳಿಗೆ ದಲಿತ ಜೀವನದ ಇತಿಹಾಸವೇ ಉತ್ತರ ನೀಡುತ್ತೆ. ಆ ಇತಿಹಾಸ ಅರ್ಥ ಆಗೋಕು ಅಂದ್ರೆ ಅದನ್ನ ವಿವೇಕ, ಸಹಾನುಭೂತಿಯಿಂದ ಪರಿಶೀಲನೆ ಮಾಡ್ಬೇಕು. ಆಗ ಮಾತ್ರ ನಿನ್ನ ಪ್ರಶ್ನೆಗಳ್ಗೆ ಸಮರ್ಪಕ ಉತ್ತರ ಸಿಗ್ಬಹುದು.”

“ಇತಿಹಾಸಕ್ಕೂ ವರ್ತಮಾನಕ್ಕೂ ವ್ಯತ್ಯಾಸ ಇಲ್ವೇನೆ? ಅವತ್ತಿದ್ದ ಜಾತಿಭೇದ ಇವತ್ತೂ ಇದ್ಯಾ? ಎಲ್ರೂ ಇವತ್ತು ಒಂದೇ ಕಾಲೇಜ್ನಲ್ಲಿ ಓದ್ತೀವಿ.... ಒಂದೇ ಬೆಂಚಲ್ಲಿ ಒಟ್ಟಿಗೇ ಕೂರ್ತೀವಿ... ಒಂದೇ ಹೋಟ್ಲಲ್ಲಿ ತಿಂತೀವಿ.... ಹೀಗಿರೋವಾಗ, ಎಲ್ಲಿದೇ ಜಾತಿಭೇದ?”

“ಅಂದ್ರೆ! ನಿನ್ನ ದೃಷ್ಟಿಲಿ ಜಾತಿಭೇದ ನಿರ್ನಾಮ ಆಗೇಬಿಟ್ಟಿದ್ಯಾ? ಸಮಸಮಾಜದ ನಿರ್ಮಾಣ ನಡೆದೇಹೋಗಿದ್ಯಾ?”

“ಇಲ್ಲ ಅಂತೀಯ?”

“ಇಲ್ಲ ಸುಜಾತ. ಪರಿಸ್ಥಿತಿ ನೀನ್ ಅಂದ್ಕೊಂಡಿರೋ ಅಷ್ಟು ಸರಳವಾಗಿಲ್ಲ. ಜಾತಿಪದ್ಧತಿ ಈಗ ಹೊಸ ರೂಪ್ದಲ್ಲಿ ಮುಂದುವರಿದಿದೆ. ಬಾಡಿಗೆಗೆ ಮನೆ ಕೇಳೋಕ್ ಹೋದ್ರೆ ಮಾಲೀಕ್ರು ಬಾಡಿಗೆದಾರರ ಜಾತಿ ಕೇಳ್ತಾರೆ. ಅವರು ದಲಿತರು ಅಂತ ಗೊತ್ತಾದ್ರೆ ಅವರ್ಗೆ ಮನೇನ ಖಂಡಿತ ಕೊಡೋದಿಲ್ಲ. ದಲಿತರ ಮನೇಲಿ ಮೇಲ್ಜಾತಿಯವ್ರು ಒಂದು ಲೋಟ ಕಾಫೀನೂ ಕುಡಿಯೋದಿಲ್ಲ. ಇನ್ನು, ಮದುವೆ ಸಂಬಂಧ ಬೆಳೆಸೋ ವಿಚಾರಾನ ಕನಸಲ್ಲೂ ಯೋಚ್ನೆ ಮಾಡೋ ಹಾಗಿಲ್ಲ. ಯಾವ್ದೇ ಜಾತಿಯವ್ರು ಇನ್ಯಾವ್ದೇ ಜಾತಿಯವರ ಜೊತೆ, ಜಾತಿ ಕೇಳದೆ, ಮದುವೆ ಸಂಬಂಧ ಬೆಳೆಸೋ ದಿನಗಳು ಬರ್ಬೇಕು. ಆಗ ಮಾತ್ರ ಜಾತಿಪದ್ಧತಿ ತೊಲಗಿದೆ ಅಂತ ತಿಳ್ಕೊಬಹುದು ಅನ್ಸುತ್ತೆ.”

“ಪ್ರಜ್ಞಾ... ಏನ್ ಮಾತಾಡ್ತಿದೀಯ ಅಂತ ಪ್ರಜ್ಞೆ ಇದ್ಯಾ ನಿನ್ಗೆ? ಒಂದೇ ಜಾತಿಯ ಒಳಗೂ ಕುಲ ನೋಡೋ ಪರಿಪಾಠ ಇದೆ. ಅದು ಸರಿ ಹೊಂದಿಲ್ಲ ಅಂದ್ರೂ ಮದ್ವೆ ಮಾಡೋದಿಲ್ಲ. ಹೀಗಿರೋವಾಗ, ಇದೆಲ್ಲಾ ಸಾಧ್ಯ ಆಗೋ ಮಾತಾ?”

“ನಿನ್ನ ಪ್ರಕಾರ ಇದೆಲ್ಲಾ ಸಾಧ್ಯ ಆಗ್ಲೆಬೇಕು. ಯಾಕಂದ್ರೆ, ಇವತ್ತು ಜಾತಿಭೇದ ಇಲ್ವೇ ಇಲ್ಲ ಅಂತ ನೀನೇ ಹೇಳ್ತಿದ್ದೀಯಲ್ಲಾ? ಒಂದ್ಕೆಲ್ಸ ಮಾಡು.... ನಿನಗಿಷ್ಟ ಆಗೋ

ಒಬ್ಬ ದಲಿತ ಹುಡುಗನ್ನ ನಿಮ್ಮ ಮನೆಗೆ ಬಂದು ಹೆಣ್ಣು ಕೇಳೋಕ್ ಹೇಳು. ಜಾತಿ ಮುಚ್ಚಿಡ್ಬೇಡ ಅಂತ಼್ೂ ಹೇಳು. ನಿಮ್ಮ ಮನೆಯವು ಯಾವ್ದೇ ವಿರೋಧ ಮಾಡ್ದೆ ನಿಮ್ಮ ಮದ್ವೆಗೆ ಒಪ್ಪಿಗೆ ಕೊಟ್ರೆ, ಆಗ ಜಾತಿಪದ್ಧತಿ ಇಲ್ವೇ ಇಲ್ಲ ಅಂತ ಖಂಡಿತ ನಾನೂ ಒಪ್ಕೋತೀನಿ."

"ನಿನ್ನ ಮಾತು ಕೇಳ್ಕೊಂಡು ಹೀಗೆಲ್ಲಾ ಪ್ರಯೋಗ ಮಾಡೋಕ್ ಹೋದ್ರೆ, ನಮ್ಮ ಮನೆಯವ್ರು ನನ್ನನ್ನೇ ಒದ್ದು ಮನೆಯಿಂದ ಹೊರಗೆ ತಳ್ತಾರೆ ಅಷ್ಟೇ!"

"ನಿನ್ನ ಪ್ರಶ್ನೆಗಳೆ ನಿನ್ನ ಮಾತುಗಳಲ್ಲೇ ಉತ್ತರ ಇದೆ ಸುಜಾತ, ದಲಿತರು ಸಾಮಾಜಿಕವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿರೋ ಜನ. ಅವರನ್ನ ಮೇಲ್ಜಾತಿಯವ್ರು ಯಾವಾಗ್ಲೂ ದೂರ ಇಡೋದಕ್ಕೇ ನೋಡ್ತಾರೆ. ಮೀಸಲಾತಿ ಅನ್ನೋದು ಅವರಿಗೆ ಸಿಗಬೇಕಾಗಿರೋ ಕನಿಷ್ಠ ಸೌಲಭ್ಯ ಒದಗಿಸೋ ಏಕೈಕ ಸಾಧನ. ಮೀಸಲಾತಿ ಇಲ್ದೇ ಇದ್ರೆ ಅವರಿಗಿರೋ ಅಲ್ಪ ಅವಕಾಶಾನೂ ಸಿಗದ ಹಾಗಾಗುತ್ತೆ. ಇದು ಕೇವಲ ಆರ್ಥಿಕತೆಯ ಸಂಗತಿ ಅಲ್ಲ ಸುಜಾತ; ಇದು ಸಾಮಾಜಿಕ ಸ್ಥಾನಮಾನದ ವಿಚಾರ. ನಾವು ನಮ್ಮ ಜಾತಿಯನ್ನ ಬಿಡುಬೀಸಾಗಿ ಹೇಳ್ಕೊಬಹುದು. ಆದ್ರೆ ಅವರ ಪರಿಸ್ಥಿತಿ! ಜಾತಿ ವಿಚಾರ ಬಂದಾಗ ಅಪಮಾನದಿಂದ ಕುಗ್ಗಿಹೋಗೋ ಸ್ಥಿತಿ ಅವರಿಗೆ ಇವತ್ತಿಗೂ ಇದೆ. ಇದೇ ನಮಗೂ ಅವರಿಗೂ ಇರೋ ವ್ಯತ್ಯಾಸ. ಈ ವ್ಯತ್ಯಾಸ ಸಂಪೂರ್ಣವಾಗಿ ತೊಲಗಿ, ಸಮಾನತೆ ಸೃಷ್ಟಿಯಾದಾಗ ಮಾತ್ರ ದಲಿತರಿಗೆ ವಿಶೇಷ ಸೌಲಭ್ಯಗಳ ಅಗತ್ಯ ಬರಲಾರು ಅನ್ಸುತ್ತೆ."

ಪ್ರಜ್ಞಾಳ ವಾದಸರಣಿಗೆ ಮರುಮಾತು ಕೊಡಲು ಸುಜಾತಳಿಗೆ ಸಾಧ್ಯವಾಗಿರಲಿಲ್ಲ. ಆದರೂ, ಅವಳ ಮುಖಭಾವದಲ್ಲಿ ಪ್ರಜ್ಞಾಳ ಚಿಂತನೆಯನ್ನು ಒಪ್ಪಿಕೊಂಡ ಯಾವ ಛಾಯೆಯೂ ಕಂಡಿರಲಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದ್ದ ಪ್ರಜ್ಞಾಳಿಂದ ವಿಷಾದದ ನಿಟ್ಟುಸಿರು ಹೊರಚಿಮ್ಮಿತ್ತು.

****

ಈಗ ಪ್ರಜ್ಞಾಳನ್ನು ಎಚ್ಚರಿಸುವ ಸರದಿ ವಿಕಾಸನದಾಗಿತ್ತು. "ಏನಮ್ಮಾ! ಈಗ ನೀನ್ ಯಾವ ನೆನಪ್ನಲ್ಲಿ ಕಳೆದುಹೋಗಿದ್ದೀಯಾ?" ಎಂಬ ವಿಕಾಸನ ದನಿಗೆ ವಾಸ್ತವಕ್ಕೆ ಬಂದಿದ್ದಳು ಪ್ರಜ್ಞಾ "ಅಣ್ಣ.... ಈ ಸಮಾಜದಲ್ಲಿ ಜಡ್ಡುಗಟ್ಟಿ ನಿಂತಿರೋ ಜಾತಿ ವ್ಯವಸ್ಥೆ ಬಗ್ಗೇನೇ ಯೋಚ್ನೆ ಮಾಡಿದ್ದೆ. ಇದಕ್ಕೆ ಕೊನೆ ಅನ್ನೋದೇ ಇಲ್ವಾ?" ಎಂಬ ತಂಗಿಯ ಪ್ರಶ್ನೆಗೆ "ಇದು ಉತ್ತರ ಇಲ್ಲದ ಪ್ರಶ್ನೆ ಕಣಮ್ಮ. ಮನುಷ್ಯರನ್ನ ಮನುಷ್ಯರಂತೆ ಕಾಣುವ ಮನೋಧರ್ಮ ಮನುಷ್ಯರಲ್ಲಿ ಸಹಜವಾಗಿ ಒಡಮೂಡೋವರ್ಗೂ ಈ ಪ್ರಶ್ನೆಗೆ ಉತ್ತರ ಖಂಡಿತ ಸಿಗೊಲ್ಲ" ಎಂದು ನಿಟ್ಟುಸಿರು ಬಿಟ್ಟಿದ್ದ ವಿಕಾಸ.

ವಿಕಾಸನ ನಿಟ್ಟುಸಿರು ಮುಗಿಯುವ ಮೊದಲೇ ಶಾಂತಮ್ಮನಿಂದ ಊಟಕ್ಕೆ ಕರೆ ಬಂದಿತ್ತು. ವೈಚಾರಿಕವಾದ ಒಳಸಂಘರ್ಷದಲ್ಲಿ ತಾತ್ಕಾಲಿಕವಾಗಿ ಮರೆಯಾಗಿದ್ದ ಹಸಿವು ಈಗ ಇಬ್ಬರಿಗೂ ಧುತ್ತನೆ ನೆನಪಾಗಿತ್ತು. ಇಬ್ಬರೂ ಡೈನಿಂಗ್ ಹಾಲ್ ತಲುಪುವ



ಹೊತ್ತಿಗೆ ಅಪ್ಪ, ಅಮ್ಮ ಮತ್ತು ರಂಗಜ್ಜ ಅದಾಗಲೇ ತಟ್ಟೆಯ ಮುಂದೆ ಕುಳಿತಾಗಿತ್ತು. ಇವರು ಹೋಗಿ ಕುಳಿತುಕೊಳ್ಳುತ್ತಿದ್ದಂತೆಯೇ ಶಾಂತಮ್ಮ ಊಟ ಬಡಿಸಲು  ತೊಡಗಿದ್ದಳು. ರುಚಿಕಟ್ಟಾದ ಊಟದ ಸವಿಯನ್ನು ಎಲ್ಲರೂ ಸವಿಯುತ್ತಿದ್ದಂತೆಯೇ ರಂಗಜ್ಜ ಮಾತಾಡತೊಡಗಿದ್ದರು.

“ನಮ್ ಸಾಂತವ್ವ ನಿಜ್ವಾಗ್ಲೂ ಪುಣ್ವಂತೆ ಸ್ವಾಮಿ. ಒಬ್ಬ ಕೆಳಜಾತಿ ಎಂಗುಸ್ನ  ನಿಮ್ಮಂತ ಮೇಲ್ಜಾತಿಯನ್ನು ಅಡಿಗೆ ಕೆಲ್ಸಕ್ಕೆ ಇಟ್ಕೊಳ್ಳೋದು ಅಂದ್ರೇನು... ಅವಳು ಮಾಡಿರೋ ಅಡಿಗೇನ ಇಂಗೆ ಚಪ್ಪರಿಸ್ಕೊಂಡು ತಿನ್ನೋದು ಅಂದ್ರೇನು.... ನನ್ನಂತ ಕೆಳಜಾತಿಯೋನು ನಿಮ್ ಜೊತ್ಯಾಗೇ ಕೂತ್ಕಂಡು ಊಟ ಮಾಡೋದು ಅಂದ್ರೇನು.... ಇದೆಲ್ಲಾ ನಂಗೆ ನಂಬಾಕೇ ಆಯ್ತಲ್ಲ. ವಿಕಾಸಪ್ಪ ಪಾಟ ಮಾಡ್ತಿರೋವಾಗ ನನ್ ತಲೇಲಿ ಇದೇ ಯೋಚೆ ಸುತ್ತಾಡ್ತಾ ಇತ್ತು. ಈ ಪರಪಂಚದಾಗಿರೋ ಎಲ್ಲಾ ಜನಾನೂ ನಿಮ್ಮ ತರಾನೇ ಯಾಕಿರಾಕಿಲ್ಲ ಅನ್ನುಸ್ತು. ಎಲ್ಲೂ ನಿಮ್ಮಂಗೇ ಆಗೋ ಕಾಲ ಯಾವತ್ತಾದ್ರೂ ಒಂದಿನ ಬರಬೌದಾ ಸ್ವಾಮಿ?”

ರಂಗಜ್ಜನ ಪ್ರಶ್ನೆಗೆ ಯಾರೂ ಉತ್ತರ ಕೊಡುವ ಗೋಜಿಗೆ ಹೋಗಲಿಲ್ಲ. ಎಲ್ಲರೂ ಉಪ್ಪಾರು-ಮುದ್ದೆಯ ಹಿತವಾದ ಸವಿಯನ್ನು ಅನುಭವಿಸುವುದರಲ್ಲಿ ಮಗ್ನರಾಗಿದ್ದರು. ತಾನು ಮಾಡಿದ್ದ ಅಡಿಗೆಯನ್ನು ಅವರೆಲ್ಲಾ ಮನಸಾರೆ ಆನಂದದಿಂದ ಆಸ್ವಾದಿಸುತ್ತಿದ್ದ ಪರಿಯನ್ನು ನೋಡುತ್ತಾ ನಗುಮುಖದಲ್ಲಿ ನಿಂತಿದ್ದಳು ಶಾಂತಮ್ಮ. ಉತ್ತರ ಕಾಣದ ರಂಗಜ್ಜನ ಪ್ರಶ್ನೆ ಎತ್ತಲೋ ಗಾಳಿಯಲ್ಲಿ ತೇಲಿ ಹೋಗಿತ್ತು!

+

## ೧೪. ಹೋರಣ

**· ಶಿವರಾಜ ಬ್ಯಾಡರಹಳ್ಳಿ**

ಪ್ರಜಾಪ್ರಭುತ್ವದ ಅಣಕವೋ ಅಥವಾ ನಾವೆಲ್ಲರೂ ಸೇರಿ ಈ ವ್ಯವಸ್ಥೆಯನ್ನು ಹೀಗೆ ಮಾಡಿದ್ದೇವೋ ತಿಳಿಯದು. ಆಳುವ ಮತ್ತು ಆಳಿಸಿಕೊಳ್ಳುವವರ ನಡುವಿನ ಅಂತರ ಹಿಂದಿನಿಂದಲೂ ನಡೆಯುತ್ತಲೇ ಇದೆ. ಚುನಾವಣೆಗಳು ಹತ್ತಿರ ಬಂದಂತೆಲ್ಲಾ ನಮ್ಮ ಹಳ್ಳಿಗಳು ಮೊಲದ ಕಿವಿಯ ಹಾಗೆ ನೆಟ್ಟಗೆ ಆಗುತ್ತವೆ. ಈ ನಂಬಿಕೆಯಲ್ಲಿಯೇ ಇದ್ದ ಆ ಊರ ಜನರು, ಬೇರೆ ದಿನದಲ್ಲಿ ಸೋಮಾರಿಯಾಗಿದ್ದರೂ ಚುನಾವಣೆಯ ಪ್ರಚಾರಕ್ಕೆ ಬರುವ ಎಲ್ಲ ಪಕ್ಷದವರನ್ನು ಸ್ವಾಗತಿಸಿ ಅವರಿಂದ ಪ್ರಯೋಜನ ಪಡೆಯುವ ಗ್ರಾಮಗಳ ಚಾಕಚಕ್ಯತೆ ಚಾಣಾಕ್ಷ ಬುದ್ದಿಯನ್ನು ದೇವರಿಗೆ ಬಿಡಿಸಿ ಹೇಳಿದರೆ ನಿಜವಾಗಲೂ ದೇವರು ಏನೆಂದಾನೋ ತಿಳಿಯದು. ಐದು ವರ್ಷದ ಹಿಂದೆ ಇದೆ ಸಮಯಕ್ಕೆ ಚುನಾವಣೆ ಬಂದಿತ್ತಲ್ಲ ಅಂತ ಕಣದಲ್ಲಿ ರಾಗಿ ಒಕ್ಕುತ್ತಿದ್ದ ಮರಿಸ್ವಾಮಿ ರೋಣು ಗುಂಡು ಒಡೆಯುತ್ತಾ ನಿಧಾನವಾಗಿ ಹೆಜ್ಜೆ ಹಾಕುತ್ತಿದ್ದ  ತನ್ನ ಎತ್ತುಗಳಿಗೆ ಬಾರುಗೋಲಿಂದ ಬೀಸಿ ಹೊಡೆದಾಗಲೇ ಲಗು ಬಗೆಯಿಂದ ತಪರ್‍ಸಾಡಿಕೊಂಡು ಹೋಗಲು ಸಿದ್ಧವಾದವು.

“ಎಷ್ಟು ಸುತ್ತು ಒಡೆದರೂ ಒಣಗಿದ 'ರಾಗಿ ಪೈರು ನಿಂತಿರುವಾಗಲೇ ಹಾಳಾದ್ದು ಮಳೆ ಬಂದು ರಾಗಿ ತೆನೆಯೆಲ್ಲಾ ನೆಂದು ಹೋಗಿತ್ತು' ಅಂತ ಚಬ್ಬೆಯಿಂದ ರಪ್ಪಾರಪ್ಪ ಅಂತ ತನ್ನ ಹೆಂಡತಿ ಕೋಲಾಡಿಸುತ್ತಿದ್ದಳು. ಕಣದ ಪಕ್ಕದಲ್ಲಿಯೇ ಗುಡ್ಡಲಲ್ಲಿ ಬೆಲ್ಲ ಕಾಯಿ ತಿನ್ನುತ್ತಿದ್ದ ತನ್ನ ಮಗ ಮೂರ್ತಿ ಯಾವುದೋ ಆಟದಲ್ಲಿ ಮಗ್ನನಾಗಿದ್ದ.

ಎಲೆಕ್ಷನ್ ಶುರು ಎಂದರೆ ಸಾಕು ಮೈಕ್ ಹಾಕ್ಕೊಂಡು ಅರಚುತ್ತಿದ್ದ ಶಬ್ದ ಕಿಲೋಮೀಟರ್ ದೂರದಲ್ಲಿರುವಾಗಲೇ ಕಿವಿಗೆ ಅಪ್ಪಳಿಸುತ್ತಿತ್ತು. ಸ್ಕೂಲ್ ಬಿಡೋದೇ ತಡ ಪ್ರಚಾರಕ್ಕೆ ಬಂದವರು ಹುಡುಗರಿಗಂತಲೇ ಸಣ್ಣ ಗುಂಡಿಯ ರೂಪದ ಸ್ಟಿಕರ್‌ಗಳನ್ನು ಹಂಚುತ್ತಿದ್ದರು. ಅದನ್ನು ತೆಗೆದುಕೊಳ್ಳಲು ದೇವಸ್ಥಾನದ ಚರ್ಪನ್ನು ಪಡೆದುಕೊಳ್ಳುವಂತೆ ಒಬ್ಬರ ಮೇಲೆ ಒಬ್ಬರು ಬಿದ್ದು ತೆಗೆದುಕೊಳ್ಳುತ್ತಿದ್ದ ಪರಿ ನೋಡಿ

ಮಾರೇಗೌಡ 'ಥೂ ಚಂಗ್ಲು ಹುಡುಗ್ರು ಯಾಕ್ರೋ ಅದು ನಿಮಗೆ, ದೊಡ್ಡೋರ್ಗೆ ಸರಿ, ಓದೋ ಹುಡುಗ್ರು ನೀವು ನಿಮಗ್ಯಾಕೆ ಆ ಪಕ್ಷ ಈ ಪಕ್ಷ' ಅಂತ ಗದರಿಸಿದರೆ ಸ್ವಲ್ಪ ಹೊತ್ತು ಸುಮ್ಮನಿದ್ದು ಮತ್ತೆ ಜೇನುನೊಣ ಮುತ್ತಿದ ಹಾಗೆ ಮುತ್ತಿಕೊಳ್ಳುತ್ತಿದ್ದವು.

ಸುಗ್ಗಿ ಕಾಲ ಅಂತಂದ್ರೆ ಆರು ತಿಂಗಳು ಕಷ್ಟಪಟ್ಟು ಕೇದಿದ್ದ ಎಲ್ಲಾ ಶ್ರಮವು ಈ ಕಣದಲ್ಲಿಯೇ ನಿರ್ಣಾಯಕವಾಗೋದು, ಮಳೆ ಬಂದ್ರಂತೂ ಅದರ ಪಾಡು ಕೇಳೋ ಅಂಗಿಲ್ಲ. ಶತ್ರುಗಳಿಗೂ ಬೇಡ ಆ ಕಷ್ಟ ಅಂತ ಎಷ್ಟೋ ಸರಿ ರೈತರಿಗೆ ಅನ್ನಿಸಿದೆ.

ಮರಿಸ್ವಾಮಿಯ ಹೊಲದ ಕೂಗಳತೆಯ ದೂರದಲ್ಲಿಯೇ ತಮ್ಮಣ್ಣನೂ ಕಣ ಮಾಡಿ ರಾಗಿ ಒಕ್ಕಣಿಕೆಯಲ್ಲಿ ತೊಡಗಿದ್ದ, ಈ ಎಲೆಕ್ಷನ್ ಈ ಟೈಮಲ್ಲೇ ಬರಬೇಕೇ? ನಮಗೆ ಟೈಮೇ ಸಿಗಲ್ಲ. ಏನ್ ಮಾಡ್ಲಿ ಅಂತ ಒಳಗೊಳಗೆ ತಾನು ಏನೋ ಕಳೆದುಕೊಂಡವನಂತೆ ಗೊಣಗುಡುತ್ತಿದ್ದ. ತಮ್ಮಣ್ಣನೆಂದರೆ ಊರಿನ ಮುಖಂಡ ನಂತೆಯೇ ಹೆಚ್ಚು ಜನ ಸಂಪರ್ಕ ಇರುವ ಮನುಷ್ಯ ಊರಲ್ಲಿರುವ ಎಲ್ಲಾ ಜಾತಿಯವರಿಗೂ ತಮ್ಮಣ್ಣನೆಂದರೆ ಒಂದ್ ಸ್ವಲ್ಪ ಅವನ ಮಾತು ಕೇಳುವವರಾಗಿದ್ದರು. ಊರು ಮೂರು ಭಾಗವಾಗಿ ಹಂಚಿ ಹೋಗಿದ್ದರೂ ತಮ್ಮಣ್ಣ ಮಾತ್ರ ಯಾರ ಕಡೆಗೂ ಗುರುತಿಸಿಕೊಂಡವನಾಗಿರಲಿಲ್ಲ.

ದೇವರು ಧರ್ಮದ ಬಗ್ಗೆ ಅಪಾರವಾದ ಗೌರವ ಇಟ್ಟುಕೊಂಡಿದ್ದ ತಮ್ಮಣ್ಣ, ಊರೊಟ್ಟಿನ ಕೆಲಸವೆಂದರೆ ಬೆನ್ನಿಗೆ ಕಟ್ಟಿಕೊಂಡು ಕೆಲಸ ಮಾಡುತ್ತಿದ್ದ. ಹೊಲೇರು, ಮಾದಿಗರು, ಒಕ್ಕಲಿಗರು ಎನ್ನದೇ ಪರವಾಗಿಲ್ಲ; ಎನ್ನುವಷ್ಟರ ಮಟ್ಟಿಗೆ ಜನಾಭಿಪ್ರಾಯದಲ್ಲೂ ಒಳ್ಳೆಯ ವ್ಯಕ್ತಿ ಅನ್ನಿಸಿಕೊಂಡಿದ್ದ. ತೊಟ್ಟಿಮನೆಯಂತಿದ್ದ ಇಡೀ ಊರನ್ನೆ ಹಿಡಿಗಾಳಿನಂತೆ ಕಾಪಾಡಿಕೊಂಡಿದ್ದ.

ಹಿಂದಿನ ಯಜಮಾನರು ಕಾಲವಾದ ಮೇಲೆ ಪುಂಡ ಪೋಕರಿಗಳೆದ್ದು ಒಡೆದು ಮರಿಪಲಾಕುವಂತೆ ಪಾಲಾಗಿ ಹೋಗಿತ್ತು.

ಆದದ್ದು ಇಷ್ಟೆ, ಹೋದ ಎಲೆಕ್ಷನ್‌ನಲ್ಲಿ ಮತ ಕೇಳಲು ಬಂದ ಹುರಿಯಾಳುಗಳ ಕಡೆಯವರು ಹಣ ಹಂಚುವ ಮೂಲಕ ಈ ಊರ ಮತದಾರರನ್ನು ಕೊಂಡುಕೊಳ್ಳಲ ಹವಣಿಸುತ್ತಿದ್ದಾಗ ಅದಕ್ಕೆ ತಮ್ಮಣ್ಣನೇ ಮೊದಲು ಆಕ್ಷೇಪ ವ್ಯಕ್ತಪಡಿಸಿದ.

'ಸ್ವಾತಂತ್ರ್ಯ ಬಂದು ಇಷ್ಟು ವರ್ಷ ಆಗಿದೆ. ಊರಿಗೆ ಉಪಕಾರ ಮಾಡಿ ಸ್ವಾಮಿ, ನೀವು ಕೊಡೋ ಎಂಜಲು ಕಾಸು ನಮಗೆ ಬೇಡ' ಅಂತ ಜೋರಾಗಿ ದೇವಸ್ಥಾನದ ರಾಡು ಬೀದೀಲಿ ಮಾತಾಡಿದ್ದ ಇದನ್ನು ಇಷ್ಟ ಪಡದ ಕಡುಭ್ರಷ್ಟ ಮತದಾರರು ನಮಗೆ ಬರುವ ಹೆಂಡ ಸಾರಾಯಿ ಎಲ್ಲದಕ್ಕೂ ಮಣ್ಣು ಹಾಕ್ತನಲ್ಲ ಈ ತಮ್ಮಣ್ಣ ಅಂತ ಹೆಂಗಸರೆಲ್ಲಾ ಮನಸ್ಸಿನಲ್ಲಿಯೇ

ಬೈಯ್ದುಕೊಂಡರೆ, ಬೇರೆಯವರು “ಓ ಇವನ್ದೊಳ್ಳೆ ರಾಮಾಯಣ' ಅಂತ ಹಿಂದಿನಿಂದ ಗುಸುಕಾಡಿದ್ದರು. ಕೊನೆಗೆ ತಮ್ಮಣ್ಣನ ಮಾತಿಗೆ ಬೆಲೆ ಸಿಗದೇ ದೂರವಾದ.

ಅವತ್ತಿಂದ ಚುನಾವಣೆಯ ಪ್ರಚಾರದಲ್ಲಿ ಎಲ್ಲಾ ಪಕ್ಷದವರು ಎಷ್ಟೊತ್ತೆಂದರೆ ಅಷ್ಟೊತ್ತಲ್ಲಿ ಬಂದು ತಮ್ಮ ಕಾರ್ಯವನ್ನು ನೆರವೇರಿಸಿಕೊಳ್ಳುತ್ತಿದ್ದರು. ಹೊಲಗೇರಿ ಯಂತೂ ನೂಕುನುಗ್ಗಲಿನ ಜಾತ್ರೆಯಂತಾಗಿತ್ತು. ಕುಣಿಗಲ್

ಕಡೆಯಿಂದ ಬಂದ ಇಬ್ಬರು ಹೆಣ್ಣು ಮಕ್ಕಳು ಹೊಲಗೇರಿಯ ಬೋರಪ್ಪನ ಮನೆಗೆ ದಾಂಗುಡಿಯಿಟ್ಟರು. ಬರಿ ಪಟಕೋಸಿಯಲ್ಲಿದ್ದ ಬೋರಪ್ಪನು

“ಏನಪ್ಪ ಬಂದದ್ದು ಅಂತ ವಿಚಾರಿಸಿದ' ಅಂಕಲ್ ಎಲೆಕ್ಷನ್‌ನಲ್ಲಿ ಈ ಗುರುತಿಗೆ ಓಟಾಕಬೇಕು ಅಂತ ನಗು ಮುಖದಿಂದ ಹೇಳಿ ಅಂಗೈಯಗಲದ ಪೇಪರ್ ಕೊಟ್ಟು



ಮುಂದೆ ಹೋಗುತ್ತಿದ್ದರು. ಬೋರಪ್ಪನಿಗೆ ಇದ್ದ ನಾಲ್ಕಾರು ಆಡುಗಳ ತಿಕ ಕಾಯುವುದು ಬಿಟ್ಟರೆ ಈ ಪ್ರಜಾಪ್ರಭುತ್ವ ಅಂತ ಯಾವುದೂ ತಿಳುವಳಿಕೆ ಇರಲಿಲ್ಲ. ಆದರೂ ಈ ಊರಿಗೆ ನಾನೊಬ್ಬ ಪ್ರಜೆ ಅಂತ ತಿಳ್ಕೊಂಡಿದ್ದ, ಎಲೆಕ್ಷನ್ ಹತ್ತಿರ ಬಂದಂತೆಲ್ಲ ಊರು ಮತ್ತಷ್ಟು ರಂಗೇರುತ್ತಿತ್ತು. ಬೆಳಿಗ್ಗೆಯಾಗುವುದೇ ತಡ ಇವತ್ತು ಯಾರ್ ಬತ್ತಾರೆ ಅಂತ ಊರ ದೇವಸ್ಥಾನದ ಅಂಗಳದಲ್ಲಿ ನಾಲ್ಕೈದು ಜನ ಲೆಕ್ಕ ಹಾಕುತ್ತಿದ್ದರು. ಕೆಲವರು 'ಊರ ತಿಪ್ಪಾಳಾನಾದ್ರೂ ಮುಚ್ಚಿಸಬೇಕು. ಈ ಟೈಮಲ್ಲಿ ಆದ್ರೆ ಆದಂಗೆ, ಇಲ್ಲಾಂದ್ರೆ ಅಷ್ಟೇ' ಅಂತ ಅವರವರೇ ಮಾತಾಡಿಕೊಳ್ಳುವರು.

ಇನ್ನೇನು ಚುನಾವಣೆ ನಡೆದರೆ ಎಂ.ಎಲ್.ಎ. ಆಗೇ ಬಿಟ್ಟೆ ಅಂತ ಭಾವಿಸಿಕೊಂಡಿದ್ದ ಭರಮಗೌಡರು, ಒಂದು ದೊಡ್ಡ ಪಕ್ಷದ ಅಭ್ಯರ್ಥಿಯಾಗಿದ್ದರು. ತಮ್ಮ ದಂಡು ದಾಳಿಯ ಸಮೇತ ಊರಿಗೆ ಬೇಟಿ ಕೊಡುತ್ತಾರೆಂದು ಗೊತ್ತಾದ ಮೇಲೆ, ಊರ ರಸ್ತೆಯ ನಾಲ್ಕು ಕಡೆಗಳಲ್ಲಿ ಆ ಪಕ್ಷದ ಮರವೇಗೌಡ ಎರಡು ದಡಿನೆಟ್ಟು ಮಾವಿನ ತೋರಣ ಕಟ್ಟುವಂತೆ ಹೊಲೇರ ಮಂಜನಿಗೆ ಹೇಳಿದ್ದ. ಮಂಜ ದೊಡ್ಡಿತೆಕ್ಕಲು ಮಾವಿನ ಮರಕ್ಕೆ ಹತ್ತಿ, ಒಂದು ಹೊರೆ ಮಾವಿನಸೊಪ್ಪನ್ನು ತಂದು, ನಾಲ್ಕು ಕಡೆಯಲ್ಲಿ ಮರಗಳನ್ನೆಟ್ಟು ಮಧ್ಯದಲ್ಲಿ ಶಿವಶಂಕರ ಹೂವನ್ನು ಪೋಣಿಸಿ ಅಲಂಕಾರ ಮಾಡಿದ್ದ. ಎಲ್ಲೋ ಹೋಗಿದ್ದ ಮರವೇಗೌಡ ಬಂದವನೇ ಮಂಜನನ್ನು ಹುಡುಕುತ್ತಿದ್ದ. 'ಹೋದ ಜೀವ ಬಂದಂತೆ ಮರವೇಗೌಡ ಸ್ವಾಮಿಯನ್ನು ನೋಡಿದ ಮಂಜನು ಅನ್ನೋ ಎಂದ. ತಕ್ಷಣವೇ ಮರವೇಗೌಡಸ್ವಾಮಿಯ ಮೇಲಗಡೆ ಜೋಬಿಂದ ತನ್ನ ಬೆರಳಿಗೆ ಸಿಕ್ಕಿಕೊಂಡ ಗಾಂಧೀಜಿ ನೋಟು ನೋಡ ನೋಡುವಷ್ಟರಲ್ಲಿಯೇ ಲಬಕ್ಕಂತ ಆ ನೋಟು ಮಂಜನ ಜೋಬಲ್ಲಿತ್ತು. ಅದ್ಯಾವ ಮಾಯದಲ್ಲಿ ಕಣ್ಣಿಗೊತ್ತಿಕೊಂಡು ಜೋಬಿಗಿಳಿಸಿದನೋ? ಅಂತು ಗೆಲುವಾದ.

ಹಾಗೆಯೇ ತಮಟೆ ವಾಲಗದವರಿಗೆ ಹೇಳಿ ಬಾ ಅಂತ ಹೇಳಿದಾಗ ಅದಕ್ಕೂ ಏನಾದರೂ ಎಕ್ಸ್ಟ್ರಾ ದುಡ್ಡು ಸಿಗುವುದೆಂದು ಮನಸ್ಸಿನಲ್ಲಿಯೇ ಯೋಚಿಸುತ್ತಾ, ಇವತ್ತಿನ ಅದೃಷ್ಟವೇ ಅದೃಷ್ಟ ಅಂತ ತನ್ನ ತಲೆಯೊಳಗೆ ಯೋಜನೆ ರೂಪಿಸಿಕೊಳ್ಳತೊಡಗಿದ.

ಎಲ್ಲೋ ಹೊರಟಿದ್ದ ಸಿಂಗನು ತಮಟೆ ಎಂದ ಮೇಲೆ ದುಡ್ಡಿನ ಆಸೆಯಿಂದ ತಾನು ಹೋಗುವ ಪಯಣವನ್ನೇ ಅರ್ಧಕ್ಕೆ ತುಂಡರಿಸಿ ವಾಪಾಸ್ಸಾದ. ರಾತ್ರಿ ಆ ಕೇರಿಯ ಜನ ಗುಂಪುಗೂಡಿ ಮಾತನಾಡುತ್ತಿದ್ದುದನ್ನು ಕೇಳಿಸಿಕೊಂಡಿದ್ದ.

ಸಿಂಗ ಈ ಸಾರಿ ಇವ್ರೆಯಂತೆ ಗೆಲ್ಲೋದು! ಅಂತ ಮಾತಾಡ್ಕತಿದ್ರು, ಅಂಗೇನಾದ್ರೂ ಗೆದ್ರೆ ನಮಗೆ ತಮಟೆ ಬಡೆಯಲಿಕ್ಕೆ ತಮಟೆ ಕೊಡಿಸಿ ಸಾಹೇಬ್ರೆ ಅಂತ ಕೇಳೋದು. 'ನಾವು ಸಾಯೋವರೆಗೂ ತಮಟೆ ಬಡ್ಕೊಂಡು ಸಾಯ್ತಿವಿ ಅಂತ ಅಚಲ ನಿರ್ಧಾರ ತೆಗೆದುಕೊಂಡಿದ್ದರು. ಇವೆಲ್ಲಾ ಜ್ಞಾಪಕಕ್ಕೆ ಬಂದು ಸಿಂಗನು ವಾಪಸ್ಸಾದ.

ಮಧ್ಯಾಹ್ನದೊತ್ತಿಗೆಲ್ಲಾ ಪಕ್ಷದ ಅಭ್ಯರ್ಥಿ ಬರುವ ಸುದ್ದಿ ಮರವೇಗೌಡನಿಗೆ ಮುಟ್ಟಿತು. ಇದೀಗ ಪಕ್ಕದ ಊರಲ್ಲಿ ಭಾಷಣ ಮಾಡುತ್ತಿದ್ದರೆಂದು ಬಂದು ಹೇಳಿದ,



ಅದೇ ಪಕ್ಷದ ಕಾರ್ಯಕರ್ತ ಎಲ್ಲವನ್ನು ಸಿದ್ಧತೆ ಮಾಡಿಕೊಳ್ಳಲು ಸೂಚಿಸಿದ. ಮರವೇಗೌಡನ ಆಜ್ಞೆಯಂತೆ

ಜಕ್ಕುನಕ್ಕ ಸಿಂಗನ ಮತ್ತು ಅವನ ತಂಡ ಜಕ್ಕುನಕ್ಕ ಕಿವಿಗೆ ಇಂಪಾದವು. ಜನ ಕೂಡಿದರು. ದೂರದಲ್ಲಿಯೇ ನಿಂತು ನೋಡುತ್ತಿದ್ದ ತಮ್ಮಣ್ಣನೂ ಒಳಗೊಳಗೆ ಬೇಸರಪಟ್ಟುಕೊಂಡ. ಅಂತೂ ರಸ್ತೆ ತುಂಬಾ ದೂಳೆಬ್ಬಿಸಿಕೊಂಡು ಒಂದರ ಹಿಂದೆ ಒಂದರಂತೆ ಇರುವೆಸಾಲಂತೆ

ಕಾರುಗಳು ಬಂದೇ ಬಿಟ್ಟವು. ಕಟ್ಟಿದ ಕಮಾನುಗಳು ಸ್ವಾಗತಿಸಿದವು. ಹಸಿರು ಚಪ್ಪರ ಗೆಲುವಿನ ಕಳೆಯಂತೆ ಸ್ವಾಗತಿಸಿದವು. ಒಂದು ಸಣ್ಣ ಖುರ್ಚಿಯ ಮೇಲೆ ನಿಂತ ಮಾನ್ಯ ಅಭ್ಯರ್ಥಿ ನರಸಿಂಹಯ್ಯ ಮಾತಿಗೆ ನಿಂತರು. ಮಾತಿಗೆ ಶುರುವಾದದ್ದೆ, ದನ ಹೊಡೆದುಕೊಂಡು ಹೊಲದ ಕಡೆ ಹೋಗುತ್ತಿದ್ದವರು; ನರಸಿಂಹಯ್ಯನವರ ಭಾಷಣವನ್ನು ನುಂಗುವಂತೆ ನೋಡುತ್ತಾ ನಿಂತರು. ಮರಿಸ್ವಾಮಿ ಕಣದ ಕೆಲಸ ಮಾಡಿ ಮೈಗೆಲ್ಲಾ ಗಾಬು ಮೆತ್ತಿಸಿಕೊಂಡು ಬಂದು ನಿಂತಿದ್ದವನು ಆಂಜನೇಯನಂತೆ ಕಾಣುತ್ತಿದ್ದ.

ನಿಮ್ಮೂರಿಗೆ ಏನು ಬೇಕು ಅಂತ ನನಗೆ ಗೊತ್ತು, ನಾನು ಗೆದ್ದ ತಕ್ಷಣ ನಿಮ್ಮ ಮನೆಯ ಬಾಗಿಲಿಗೆ ಬರಬೇಕಾದುದ್ದನ್ನು ಮಾಡಿಕೊಡ್ತೀನಿ ಅಂತ ಹೇಳುತ್ತಿದ್ದರು. ಪ್ರತಿ ಮಾತಿಗೂ ಸ್ಕೂಲಿನ ಮಕ್ಕಳು ಚಪ್ಪಾಳೆ ತಟ್ಟುತ್ತಿದ್ದರು. ಆಗಾಗ ಮರವೇಗೌಡರು, ನೇಮಿಸಿದ ನಾಲ್ಕೈದು ಗಂಡಾಳು 'ನರಸಿಂಹಯ್ಯನವರಿಗೆ ಜೈ, ನರಸಿಂಹಯ್ಯನವರಿಗೆ ಜೈ' ಎಂದು ಮೊಳಗುವಂತೆ ಜೈಕಾರ ಹಾಕುತ್ತಿದ್ದರು.

ಈ ಮಧ್ಯೆ ತಮ್ಮಣ್ಣನವರು ಮೈಕ್ ಮುಂದೆ ಬಂದು ಮಾನ್ಯ ನರಸಿಂಹಯ್ಯನವರಲ್ಲಿ ವಿನಂತಿ. ನಮ್ಮ ಊರಿನ ಸಾರ್ವಜನಿಕವಾದ "ಊರ ಮುಂದೆ ತಿಪ್ಪಾಳದ ಗುಂಡಿಯನ್ನು ಮುಚ್ಚಿಸಿ, ಅಲ್ಲೊಂದು ಶಾಲೆಯನ್ನು ನಿರ್ಮಿಸಿಕೊಡುವಂತೆ ವಿನಂತಿಸಿದ. ಈ ಮಾತಿಗೆ ಯಾರೂ ಚಪ್ಪಾಳೆ ತಟ್ಟದೆ ಬೆಕ್ಕಸ ಬೆರಗಿನಂತೆ ನೋಡುತ್ತಿದ್ದರು.

ಮೊದಲೇ ಆಗದಿದ್ದ ಮರವೇಗೌಡ ಮತ್ತು ಸ್ವಾಮಿಯ ಕಡೆಯವರು, ತಮ್ಮಣ್ಣನನ್ನು ಬಾಯಿ ಮುಚ್ಚಿಸುವಲ್ಲಿ ಯಶಸ್ವಿಯಾದರು. ನರಸಿಂಹಯ್ಯನವರು ಇನ್ನೊಂದು ಊರಿಗೆ ಹೋಗಲು ಅನುವಾಗುತ್ತಿದ್ದರು. ಅಷ್ಟರಲ್ಲಿ ಅದು ಇದು ಅಂತ ಗೌಜು ಗದ್ದಲ ಶುರುವಾಯಿತು. ಉರಿಯಾಳು ಬುದ್ಧಿ ಓಡಿಸಿ ಮತ್ತೆ ಇಲ್ಲಿದ್ದರೆ ಮತ್ತಷ್ಟು ಜನರು ಮತ್ತಿನ್ನೇನಾದರೂ ಕೇಳಬಹುದು ಅಂತ; ಕಾರತ್ತಿ  ಬುರ್ರ್ ಅಂತ ಓಡಿದರು. ಹಿಂದೆ ಹಿಂದೆ ಓಡಿದ ಜನರು ಸುಮ್ಮನಾದರು. ತಲಾಗೊಂದರಂತೆ ಮಾತನಾಡಿಕೊಂಡರು.

ಹೀಗೆ ಉರಿಯಾಳುಗಳು ಬರುವುದು, ಹೋಗುವುದು, ತೋರಣ ಕಟ್ಟಿಸುವುದು, ದೇವಸ್ಥಾನದ ಮುಂಭಾಗದಲ್ಲಿ ಚಪ್ಪರ ಹಾಕಿಸಿ ಭಾಷಣ ಬಿಗಿಯುವುದು



ನಡೆದೇ ಇತ್ತು. ಅದು ಚುನಾವಣೆ ಇನ್ನೆರಡು ದಿನ ಇದೆ ಅನ್ನಬೇಕಾದರೆ ಮರಿಸ್ವಾಮಿಯೂ ಕಣದ ಒಕ್ಕಣಿಕೆಯ ಮುಗಿಸಿ ರಾಗಿಯೆಲ್ಲವನ್ನು ಕಣಜ ತುಂಬಿಸಿಕೊಂಡು, ಡಿಕಾವ್ ಆಗಿ ಅಂಗಡಿ ಮುಂಗಟ್ಟುಗಳಲ್ಲಿ ಬೀಡಿ ಸಿಗರೇಟ್ ಸೇದ್ಯಂಡು ರಾಜಕೀಯ ಸುದ್ದಿ ಮಾತಾಡ್ಕಂಡು ಇದ್ದ. ಇರುವುದು ಇನ್ನೆರಡೇ ದಿನ ಎಂಬುವುದು ಖಾತ್ರಿಯಾದಂತೆ ಊರು ಮಧ್ಯರಾತ್ರಿಯಾದರೂ ಸದಾ ಎಚ್ಚರದಲ್ಲಿತ್ತು. ಆಯಾಯ ಜಾತಿಯ ಹೆಂಗಸರುಗಳು ಮನೆ ಮನೆಗೆ ಹೋಗಿ ಕೈ ಮುಗಿದು, ಸಾಧ್ಯವಾದರೆ ವಯಸ್ಸಾದ ಅಜ್ಜ ಅಜ್ಜಿಯರಿಗೊಂದು ಕಾಲಿಗೆ ನಮಸ್ಕರಿಸಿ ಮುಂದೆ ಮುಂದೆ ಹೋಗುತ್ತಿದ್ದರು ಅಂದುಕೊಂಡಂತೆಯೇ ಆ ದಿನ ಬಂತು. ನಾಳೆಯೇ ಎಲೆಕ್ಷನ್, ಮಧ್ಯಾಹ್ನ ಮೂರು ಘಂಟೆಗೆಲ್ಲಾ ಎಲೆಕ್ಷನ್ ಬೂತ್ ತಂದ ನಾಲ್ಕೈದು ಶಿಕ್ಷಕರು ಮತ್ತು ಒಬ್ಬ ಪೊಲೀಸ್ ಪೇದೆ ಕೆ.ಎಸ್.ಆರ್.ಟಿ.ಸಿ. ಬಸ್ಸಲ್ಲಿ ಬಂದಿಳಿದಾಗ ಊರಿನ ಗ್ರಾಮ ಸೇವಕ ಬ್ಯಾಲದಯ್ಯ ಸ್ಕೂಲಿನ ಮೇಜು ಖುರ್ಚಿಯನ್ನು ಚೆನ್ನಾಗಿ ತೊಳೆದು ನೀಟಾಗಿ ಇಟ್ಟಿದ್ದ.

ಶೆಟ್ಟರ ಅಂಗಡಿಯ ಟೀ ಬೊಂಡದ ರುಚಿ ತೋರಿಸಿದ ಬ್ಯಾಲದಯ್ಯ ಸ್ವಾಮಿ ಈ ಊರಿಗೆ ಗ್ರಾಮ ಸೇವಕ ನಾನು, ನಾನು ಯಾವ ಪಕ್ಷಕ್ಕೂ ಸೇರೋನಲ್ಲ. ನಾಳೆ ನೀವು ಹೋಗೋವರೆಗೂ ನಿಮ್ಮ ಸೇವೆ ಮಾಡ್ಕಂಡ್ ಬಿದ್ದಿದ್ದೀನಿ ಸ್ವಾಮಿ' ಅಂತ ಕೈ ಮುಗಿದ.

ಮತಗಟ್ಟೆಯ ಅಧಿಕಾರಿ ಸ್ವಲ್ಪ ವಯಸ್ಸಾದಂತೆ ಕಂಡರೂ ಮೀಸೆ ಕಪ್ಪಾಗಿರಲಿಲ್ಲ. ಕಪ್ಪಾಗಿದ್ದರೂ ಇವನ ಕಣ್ಣಿಗೆ ಕಾಣುತ್ತಿರಲಿಲ್ಲ. ತುಮಕೂರಿನ ಶಿರಾ ಕಡೆಯಿಂದ ಬಂದಿದ್ದ ಒಂದು ಶಾಲೆಯ ಹೆಡ್ ಮಾಸ್ಟರ್

“ಏನಯ್ಯ ಬ್ಯಾಲದಯ್ಯ ನಿಮ್ಮೂರಲ್ಲಿ ಯಾವ ಪಕ್ಷ ಚೆನ್ನಾಗಿದೆ?'

ನಮ್ಮೂರಲ್ಲಿ ಎಲ್ಲಾ ಪಕ್ಷನೂ ಸ್ವಾಮಿ, ಬಂದೋರ್ಗೆಲ್ಲಾ ಜೈ ಜೈ ಅಂತಿದ್ದಾರೆ. ಹೆಂಗಸಿನ ಮರ್ಮತರ, ನಮ್ಮೂರ ಜನಾ, ಆದ್ರೂ ಯಂಗೇಳ್ತಿರ ಬುದ್ದಿ, ಯಾರೂ ತನ್ನ ಗುಟ್ಟು ಬಿಟ್ಕೊಡೋದಿಲ್ಲ. ಇವತ್ತು ರಾತ್ರಿ ಯಾವ ಪಕ್ಷದೋರು ಚೆನ್ನಾಗಿ ನೋಡ್ಕಾತ್ತಾರೆ ಅನ್ನೋ ಆಧಾರದ ಮೇಲೆ ತೀರ್ಮಾನ ಬುದ್ಧಿ ಎಂದು ವಿನಯದಿಂದ ಹೇಳಿದ.

ಅಲ್ಲಯ್ಯ ಬ್ಯಾಲದಯ್ಯ ಹೆಂಡ, ಸಾರಾಯಿ, ದುಡ್ಡು, ಹಂಚಾರ್ತೆ ಅಂಥ ಅನ್ನುತ್ತಿದ್ದಂತೆ ಪೋಲಿಸ್ ಪೇದೆ ಕೇಳಿಸಿದರೂ ಕೇಳದಂತೆ ಸ್ವಲ್ಪ ದೂರ ಹೋದ. ಸಂಜೆ ಆರು ಘಂಟೆಯ ಸಮಯ ಒಂದಿಬ್ಬರು ರಾಜಕೀಯ ಕಾರ್ಯಕರ್ತರು ಸ್ಕೂಲಿಗೆ ಬಂದು;

ಸಾಹೇಬ್ರೆ ನಿಮಗೇನು ಬೇಕು ಹೇಳಿ ಈ ಬ್ಯಾಲದಯ್ಯನ ಕೈಲಿ ಹೇಳಿ ಕಳ್ಸಿ, ಯಾವುದಕ್ಕೂ ತೊಂದರೆ ತಕಬೇಡಿ ಎಂದು ಪರಿಚಯ ಮಾಡ್ಕೊಂಡವ ಒಬ್ಬ ನನ್ನೆಸರು ಮಾದೇಶ ಅಂತ ಹಲ್ಕಿರಿದ ಮತ್ತೊಬ್ಬ ವೆಂಕಟೇಶ ಅಂತ ಕೈ ಕುಲುಕಿದ!

ಇವರು ಹಿಂತಿರುಗುವಷ್ಟರಲ್ಲಿ ಮರವೇಗೌಡ, ಸ್ವಾಮಿಯ ಜೊತೆ ಒಂದಿಬ್ಬರು ಪುಂಡರು ಜೊತೆಯಲ್ಲಿಯೇ ಬಂದರು. 'ನಾನು ಈ ಊರಿಗೆ ಮುಖಂಡ, ನಮ್ಮ ಪಕ್ಷ



ಇಡೀ ತಾಲ್ಲೂಕ್‌ನಲ್ಲಿ ಚೆನ್ನಾಗಿದೆ. ಈ ಸಾರಿಯೂ ನಂ ಪಕ್ಷನೇ ಸಾರ್. ಅದಿರಲಿ ನಿಮಗೆ ಅಗತ್ಯ ಸಹಾಯ ಏನಾದರೂ ಬೇಕಾದರೆ ಫೋನ್ ಮಾಡಿ, ಇಲ್ಲಾಂದ್ರೆ ನಮ್ಮ ಬ್ಯಾಲದಯ್ಯನ ಕೈಲಿ ಹೇಳಿಕಳ್ಳಿ ಎಂದು ಕೇಳಿ ಹೊರಟ.

ರಾತ್ರಿಯಾಗುತ್ತಿದ್ದಂತೆ ಊರ ಜನರ ಮೈಮೇಲೆ ಚೇಳು ಹರಿದಂತೆ ಚಡಪಡಿಕೆ ಶುರುವಾಗಿತ್ತು. ಹೆಂಗಸರು ಒಬ್ಬರಿಗೊಬ್ಬರು ಮಾತಾಡಿಕೊಂಡು, “ಆ ಚನ್ನಪಟ್ಟಣ ತಾಲ್ಲೂಕ್‌ನಲ್ಲಿ ಸೀರೆ ಉಂಗುರ, ಅರಿಶಿಣ ಕುಂಕುಮ ಬಳೆ ಎಲ್ಲಾನ ಕೊಟ್ಟಿದ್ದಾರಂತೆ ಇಲ್ಲೂ ಅದೆ ನೋಡು ಈ ದರಿದ್ರ ತಾಲ್ಲೂಕ್‌ನಲ್ಲಿ ಏನೂಕೊಡಲ್ಲ ಮುಂಡೇವು. ಸಿಕ್ಕದಷ್ಟು ಅವರೇ ಬಾಚ್ಚತಾರೆ. ಇನ್ನೂ ನಮಗೆಲ್ಲಿ ಕೊಟ್ಟಾರು. ಹೂ... ಅಂತ ಮೂದಲಿಸಿ ಮಾತನಾಡುತ್ತಾ ಕುಳಿತಿದ್ದರು ಗಂಡಸರು, ಹುಡುಗರು, ಸಿಕ್ಕಷ್ಟೇ ಸೀರುಂಡೆ ಅಂತ ಮನೆ, ಆಚೆ ಸರ್ಕಲ್ ಹೀಗೆ ಇಣುಕಿ ಇಣುಕಿ ನೋಡುತ್ತಾ ತವಕಿಸುತ್ತಿದ್ದರು.

ಊರಿನ ಹೊರಗಿಂದ ಯಾವುದಾದರೂ ವೆಹಿಕಲ್ ಬಂದ್ರೆ, ಇದೇ ಇರಬೇಕು ಅಂತ ಅಂದಾಜಿಸುತ್ತಾ ಕಾಯುತ್ತಾ ಊರಿಂದ ಆಯಾಯ ಪಕ್ಷದ ಕಾರ್ಯಕರ್ತರು ಕಾಯುತ್ತಾ ಮಾತಾಡ್ಕೊಂಡ್ ನಿಂತಿರುತ್ತಿರುವುದು ಸಾಮಾನ್ಯವಾಗಿತ್ತು.

ರಾತ್ರಿ ಒಂಭತ್ತಾಗುತ್ತಿದ್ದಂತೆ ಟವೆಲ್‌ನಲ್ಲಿ ತುಂಬಿದ್ದ ಎಣ್ಣೆ ಬಾಟಲುಗಳನ್ನು ಇಬ್ಬಿಬ್ಬರು ಮನೆ ಮನೆಗೆ ಹಂಚುತ್ತಾ ಹೋದರು ಖುಷಿಯಿಂದ ತೆಗೆದುಕೊಳ್ಳುತ್ತಿದ್ದ ಜನರು 'ಮತ್ತೊಂದು ಕೊಡಪ್ಪ ಯಾಕೋ ಮೈಯೆಲ್ಲಾ ನೋಯ್ತದೆ' ಅಂತ ಕೈ ಚಾಚುತ್ತಿದ್ದರು. ಇವರ ಹಿಂದೆಯೇ ನೋಟುಗಳ ಕಂತೆ ಹಿಡಿದು ಹೆಂಗಸರಿಗೆ ಕೊಡುತ್ತಾ ಬರುತ್ತಿದ್ದಂತೆ

ಕಿಟಕಿಯಲ್ಲಿಯೇ ನೋಡುತ್ತಾ 'ಆ ಕೇರಿಗೆ ಹೋದ್ರು! ಇಲ್ಲೇ ಬಂದ್ರು! ಅಂತ ಪಿಸ ಪಿಸ ಮಾತನಾಡುತ್ತಿದ್ದರು.

“ಅಯ್ಯೋ ಬಾ ಅವರೇನು ಅವರ ಸ್ವಂತ ದುಡ್ಡಿಂದ ಕೊಟ್ಟರೆ ಅವು ಯಾವೋ ಬೇನಾಮಿ ಹಣಾ ಹಂಚಾರೆ! ಅಂತ ಅವರಿಗೆ ಅವರೇ ಸಮರ್ಥನೆ ಕೊಟ್ಕಳಿದ್ದರು.

ಇದನ್ನು ನೋಡಿದ ತಮ್ಮಯ್ಯಣ್ಣ ಮನೆ ಮನೆಗೆ ಹೋಗಿ 'ನೋಡಿ ನಿಮ್ಮ ಓಟನ್ನು ಮಾರ್ಕೊಬೇಡಿ, ಪ್ರಾಮಾಣಿಕವಾಗಿ ಮತ ಚಲಾಯಿಸಿ. ಅವರ ಎಂಜಲು ಕಾಸಿಗೆ ಕೈ ಚಾಚಿ ನಿಮ್ಮ ಪವಿತ್ರ ಮತ ಭ್ರಷ್ಟ ಮಾಡ್ಕೊಬೇಡಿ ನಮ್ಮೂರಿಗೇನಾದ್ರೂ ಉಪಕಾರವಾಗೋದನ್ನು ಕೇಳೋಣ. ಅದು ಬಿಟ್ಟು ಹೆಂಡ ಹಣಕ್ಕೆ ಕೈ ಚಾಚೋದು ಸರಿಯಲ್ಲಾ ಅಂತ ಗಾಂಧಿಯ ವೇದಾಂತ ಹೇಳುತ್ತಾ ಹೋದ. ಮುಂದೆ ಮುಂದೆ ಅವರು ಹಣ, ಹೆಂಡ, ಹಂಚುತ್ತಾ ಹೋದ್ರು ಹಿಂದೆ ಹಿಂದೆ ತಮ್ಮಯ್ಯಣ್ಣ ಉಪದೇಶಹೇಳುತ್ತಿದ್ದರೂ

“ನಿಜ ತಮ್ಮಯ್ಯಣ್ಣ ನೀವೇಳೋದು ಸರಿಯೇ' ಅಂತ ತಲೆದೂಗುತ್ತಿದ್ದರು.



ಯಾರದೋ ಮುಖಾಂತರ ಗೊತ್ತಾದ ಮರವೇಗೌಡನಿಗೆ ಕೋಪ ಬಂದು ಈ ಬ ಮಗನ್ನ ಸುಮ್ನೆ ಬಿಟ್ಟರೆ ನಂ ಪಕ್ಷನಾ ಸೋಲಿಸ್ ಬಿಡ್ತಾನೆ. ಇವನಿಗೆ ಸರಿಯಾಗಿ ಬುದ್ಧಿ ಕಲಿಸಬೇಕು ಅಂತ ಚೀರಾಡಿದ. ಕುಣಿಗಲ್‌ನಿಂದ ನರಸಿಂಹಯ್ಯನವರು ಯಾವುದಕ್ಕೂ ಇರಲಿ ಅಂತ ಕೆಲ ಪುಡಿರೌಡಿಗಳನ್ನೂ ಪ್ರತಿ ಊರಿಗೂ ಕಳಿಸಿಕೊಟ್ಟಿದ್ದರು. ಆ ಪುಡಿ ರೌಡಿಗಳು ರಾತ್ರಿ ಪೂರಾ ಮರವೇಗೌಡನ ಜೊತೆಯೇ ಹಿಂದೆ ಮುಂದೆ ಓಡಾಡ್ಕೊಂಡಿದ್ದರು.

*ಯಾರಣ್ಣ ಅವನು ನೀನು ಊಂ ಅನ್ನು ನಾವ್ ನೋಡ್ಕತೀವಿ ಅಂತ ಎಚ್ಚತ್ತುಕೊಂಡರು. ಜುಟ್ಟು ಬಿಟ್ಟ ಪುಡಿ ರೌಡಿಗಳು ಎಚ್ಚೆತ್ತುಕೊಂಡರು. ಕೊಂಗಾಟಿ ಹುಡುಗರಂತೆ ಇದ್ದ ಇವರು ಯಾವುದಕ್ಕೂ ಹೇಸದ ಎಂಥಹ ಕೆಲಸವನ್ನು ಮಾಡುವ ಪೋಲಿ ಹುಡುಗರು ಎನ್ನುವುದು ಅವರನ್ನು ನೋಡಿದರೆ ಗೊತ್ತಾಗುತ್ತಿತ್ತು. ಅಂತೂ ಎಲ್ಲಾ ಕೆಲಸ ಮುಗಿದಿತ್ತು.

ಮರವೇಗೌಡನ ಆಜ್ಞೆಯನುಸಾರ ಆಪಾಟಿ ರೌಡಿಗಳು 'ಬೆಳ್ಳಿ ಚುಕ್ಕಿ ಹುಟ್ಟೋ ಮುಂಚೆ' ಕಟ್ಟೆ ಕಡೆ ಹೋಗಲು ತಮ್ಮಯ್ಯಣ್ಣ ಬರುವುದನ್ನು ಖಾತರಿ ಮಾಡಿಕೊಂಡರು. ಆಗ ಮರವೇಗೌಡ ತಮ್ಮಯ್ಯಣ್ಣನನ್ನು ಕಿಡ್ನಾಪ್ ಮಾಡಲು ಸೂಚಿಸಿದ್ದ.

ತಮ್ಮಯ್ಯಣ್ಣನ ಮನೆಯ ಪಕ್ಕದ ಗೂರಲು ಸಂಗಯ್ಯ ಕೊಟ್ಟ ಎಣ್ಣೆಯನ್ನು ಚೆನ್ನಾಗಿ ಕುಡಿದು ರಾತ್ರಿಯೆಲ್ಲಾ ಕೆಮ್ಮುತ್ತಿದ್ದ. ಅದರ ಶಬ್ದಕ್ಕೆ ಸರಿಯಾಗಿ ನಿದ್ರೆ ಮಾಡದ ತಮ್ಮಯ್ಯಣ್ಣ ರಾತ್ರಿ ಪೂರಾ ಊರಿನ ಬಗ್ಗೆ ಯೋಚಿಸಿದ. ರಾಜಕಾರಣಿಗಳು ಊರನ್ನೂ ಕುಡಿಸಿ ಕುಡಿಸಿ ಅಮಲಲ್ಲಿ ತೇಲಿಸ್ತಿದ್ದಾರೆ. ಗೆದ್ದ ಮೇಲೆ ಸಂವಿಧಾನ ಬದ್ಧವಾಗಿ ಅಂತ ಪ್ರಮಾಣ ವಚನ ಮಾಡ್ತಾರೆ. ಇದೇನು ಅನ್ಯಾಯ ಎಂದು ಮನಸ್ಸಿನಲ್ಲಿ ಚಡಪಡಿಸುತ್ತಿದ್ದ. ರಾತ್ರಿಯೆಲ್ಲಾ ಮನೆ ಮನೆಗೂ ತುಳಿಯುತ್ತಿದ್ದ ರಾಜಕೀಯ ಕಾರ್ಯಕರ್ತರು ಕಣ್ಣಿಗೆ ಎಣ್ಣೆ ಬಿಟ್ಕಂಡು ಕೆಲಸ ಮಾಡುತ್ತಿದ್ದರು.

ಮುಸುಕು- ಒಬ್ಬರ ಮುಖ ಮತ್ತೊಬ್ಬರಿಗೆ ಕಾಣುತ್ತಿರಲಿಲ್ಲ. ಮನೆ ಬಿಟ್ಟ ತಮ್ಮಯ್ಯಣ್ಣ ಕಟ್ಟೆ ಕಡೆ ಹೋಗಲು ಸ್ಕೂಲ್ ಮನೆಯ ಮುಂದಲ ರಸ್ತೆಯಲ್ಲಿ ನಡೆದು ರಸ್ತೆ ಪಕ್ಕ ಕೂತ. ಇದನ್ನೆ ಕಾಯುತ್ತಿದ್ದ ನಾಲ್ಕು ಪುಂಡರು ಬಾಯಿಯನ್ನು ಬಲವಾಗಿ ಅದುಮಿಟ್ಟುಕೊಂಡು ನಿಂತಿದ್ದ ಕಾರಲ್ಲಿ ಎತ್ತಿಕೊಂಡು ಹದ್ದು ಕೋಳಿಮರಿಯನ್ನು ಹಾರಿಸ್ಕೊಂಡೋಗೋ ರೀತೀಲಿ ಹಾರಿಸ್ಕೊಂಡ್ ಹೋದ್ರು, ಬಾಯಿಗೆ ಬಟ್ಟೆ ತುರುಕಿ, ಕೈಗಳನ್ನು ಹಿಂದಕ್ಕೆಳೆದು ಕಟ್ಟಿದ್ದರು. ಇದರಿಂದ ಬಾಯಿ ಬಂದಾಯಿತು. ಕೈಯಿಂದ ಒಬ್ಬ ಹಿಡಿದಿದ್ದ. ಪೈಲ್ವಾನ್‌ನಂತೆ ಇದ್ದ ಪುಡಿ ದಡಿಯರ ಶಕ್ತಿಯ ಮುಂದೆ ತಮ್ಮಯ್ಯಣ್ಣನ ಶಕ್ತಿ ಏನೂ ಮಾಡದಾಯಿತು.

ಸೂರ್ಯ ಮೂಡುತ್ತಾ ಬಂದಂತೆ ಓಟಾಕುವ ಸರದಿ ಸಾಲು ದೊಡ್ಡದಾಗುತ್ತಾ ಬಂತು, ಊರ ಎರಡು ಕಡೆ ರಾಡು ಬೀದೀಲಿ ದೊಡ್ಡ ಪಾತ್ರೆಯೊಂದರಲ್ಲಿ ಚಿತ್ರಾನ್ನ, ಬಾತು ಬೇಯುತ್ತಿತ್ತು. ಅವರ ಸುತ್ತಾ ಗಿರಕಿ ಹೊಡೆಯುತ್ತಾ ನಿಂತ ಹುಡುಗರು ಅನ್ನ



ಕಾಣದವರಂತೆ ಕಾಯುತ್ತಾ ನಿಂತಿದ್ದರು. ಸಾಲಲ್ಲಿ ನಿಂತು ಓಟು ಹಾಕುವುದು, ಕುಂಟರನ್ನು ಅನಾಮತ್ ಎತ್ತಿಕೊಂಡು ಓಟ್ ಹಾಕಿಸುವುದು, ಮೂಗರಿಗೆ ಮತ್ತೊಬ್ಬರು ಸಹಾಯ ಮಾಡುವುದು ನಡೆದೇ ಇತ್ತು. ಮಧ್ಯಾಹ್ನ ದನ ಮೇಯಿಸಿಕೊಂಡು ಬಂದ ಮೂಗಯ್ಯ ಮತ್ತು ಬೋರಪ್ಪ ಸರದಿ ಸಾಲು ಕಮ್ಮಿಯಾದ ಮೇಲೆ ಹೋದರು. ಹೋದ; ಚೀಟಿ ತೋರಿಸಿ ಹೆಬ್ಬೆಟ್ಟು ಹೊತ್ತಿದ ಮೂಗಯ್ಯ ಮತದಾನ ಮಾಡಲು ಕಡ್ಡಿಕೊಟ್ಟರು. ಎಂದೂ ಓಟೇ ಹಾಕಿರದ ಮೂಗಯ್ಯ ತನ್ನ ಎಡಗೈ ಹೆಬ್ಬೆಟ್ಟಿಗೆ ಸವರಿಕೊಂಡು ಬ್ಯಾಲೆಟ್ ಪೇಪರ್‌ಗೆ ತಗೋ, ನಿಂಗೊಂದು ತಗೋ ನಿಂಗೊಂದ್, ಅಂತ ಹೆಬ್ಬೆಟ್ಟಿನ ಹಿಂಕು ಅಸ್ಪಷ್ಟವಾಗಿ ಬ್ಯಾಲೆಟ್ ಪೇಪರಲ್ಲಿ ಇರುವ ಎಲ್ಲಾ ಅಭ್ಯರ್ಥಿಗಳಿಗೂ ಕಾಣೋವರೆಗೂ ಒತ್ತುತ್ತಾ ಬಂದ.

ಏಜೆಂಟಾಗಿ ಕುಳಿತಿದ್ದವರು ಯಾರೂ ಗಮನಿಸಲಿಲ್ಲ. ಹೊರಗೆ ಏನೋ ಗೆದ್ದವನಂತೆ ಬಂದ ಹೀಗೆ ಓಟ್ ಹಾಕಿರುವುದು ಎಷ್ಟೋ ದಿನಗಳ ಮೇಲೆ ಗೊತ್ತಾಯಿತು ಮರವೇಗೌಡ ಗೆಲುವಿನಿಂದಲೇ ಇದ್ದ. ಪ್ರೊಸಿಡಿಂಗ್ ಆಫೀಸರ್ ಮಧ್ಯಾಹ್ನ ೬೫% ಪರ್ಸೆಂಟೇಜ್ ಮತದಾನವಾಗಿದೆ ಅಂತ ಖಾತರಿ ಪಡಿಸಿದರು. ಸಂಜೆ ಐದಾಗುತ್ತಿದ್ದಂತೆ ಬೂತ್

ಭದ್ರ ಮಾಡ್ಕೊಂಡ್ ಕುಣಿಗಲ್ ಕಡೆ ಹೊರಟರು. ಮತದಾನ ಮಾಡಿ ಬಂದ ಹೆಂಗಸರು ನೀನು? ಎಂದರೆ.... ನಾನು?... ನೀನು.... ನಾನು..... ಅಂತ ಮಾತಾಡಿಕೊಂಡು ರಾತ್ರಿ ನಿದ್ದೆ ಗೆಟ್ಟಿದ್ದಕ್ಕೋ ಏನೋ ಕಣ್ಣ ತೂಕಡಿಕೆ ಎಳೆಯುತ್ತಿದ್ದರಿಂದ ಹೆಂಗಸರು ಕುಳಿತಿದ್ದ ಜಾಗದಿಂದ ಕದಲಿದರು.

ಕಿಡ್ನ್ಯಾಪ್ ಆದ ತಮ್ಮಯ್ಯಣ್ಣನ ಮಕ್ಕಳು ಹಾಸ್ಟೆಲ್ಲಿನಲ್ಲಿ ಇಬ್ಬರು ಇದ್ದರು. ರಾತ್ರಿಯಾದರೂ ತನ್ನ ಪತಿ ಮನೆಗೆ ಬರದಿದುದ್ದು ಆತಂಕ ಪಟ್ಟುಕೊಂಡು ಪತ್ನಿ ಗುಡಿಯ ರಾಡು ಬೀದಿಯಲ್ಲಿ ದೇವರೇ, ಭಗವಂತನೇ, ಊರು ಕಾಯೋ ದೇವರೇ ನನ್ನ ಗಂಡ ಎಲ್ಲಿಗೋದ್ರಪ್ಪೋ ಅಂತ ಬಾಯಿ ಬಡ್ಕಂಡ್ ಕಿರುಚಾಡ್ತಿದ್ದಳು. ತಮ್ಮಯ್ಯಣ್ಣನ ಹೆಂಡತಿಯ ಕೂಗು ದೇವರಿಗಾಗಲೀ, ಮರವೇಗೌಡನ ಕರ್ಣಕ್ಕಾಗಲೀ ಕೇಳಲೇ ಇಲ್ಲ. ಭೂತ್ ಭದ್ರ ಮಾಡಿಕೊಂಡು ಸೀಲ್ ಮಾಡಿಕೊಂಡು ಬ್ಯಾಲದಯ್ಯನಿಗೆ ಕೊಡಬೇಕಾದ ದುಡ್ಡು ಕೊಟ್ಟು ಅವನ ಹೆಬ್ಬೆರಳಿನ ರುಜು ತೆಗೆದುಕೊಂಡು ಕೆ. ಎಸ್. ಆರ್. ಟಿ. ಸಿ ಬಸ್ಸತ್ತಿ ಹೊರಟರು. ಮನೆಗೆ ಬಂದು ಬ್ಯಾಲದಯ್ಯ ರಾತ್ರಿ ಕೊಟ್ಟಿದ ಎಣ್ಣೆ ಬಾಟಲಿಗಳನ್ನು ಎಣಿಸುತ್ತಾ ದುರ್ಯೋಧನನ ಪಾರ್ಟು ಮಾಡಿದ.

## ೧೫. ಮೇಗಳಕೇರಿ

*** ಡಾ. ಸೋಮಣ್ಣ ಹೊಂಗಳ್ಳಿ**

ನೂರಾರು ಸುಕ್ಕುಗಳು ಬಂದಿರುವ ಹಣ್ಣು ಹಣ್ಣು ಮುದುಕಿ ಇಂದೋ ನಾಳೆಯೋ ಸಾಯುವಂತೆ ನಿನ್ನೆಯ ತಕನವೂ ತೆಪ್ಪಗೆ ಮಲಗಿದ್ದ ಕೇರಿಗೆ ಇದೀಗ ತಾನೇ ಜೀವ ಬಂದಿತ್ತು. ಅದರಿಂದಾಗಿಯೇ ಕೇರಿಯ ಎಲ್ಲರ ಮುಖದ ಮೇಲೂ ನಗು ಮಂದಹಾಸವಾಡುತ್ತ ನರ್ತಿಸುತ್ತಿತ್ತು. ಆ ಹೊತ್ತಿನಲ್ಲಿ ಚಂದ್ರೇಗೌಡರು ಹಟ್ಟಿಯ ಪಡಸಾಲೆಯಲ್ಲಿ ಕುಳಿತುಕೊಂಡು ನಾಳೆ ಮಾಡಬೇಕಾಗಿರುವ ಊರಬ್ಬಕ್ಕೆ ಬೇಕುಬೇಕಾದ ಸಾಮಗ್ರಿಗಳನ್ನು ರೆಡಿಮಾಡಿಕೊಳ್ಳುವ ಸಿದ್ಧತೆ ನಡೆಸುತ್ತಿದ್ದರು. ಆಳುಗಳಿಗೆ ಅದು ಆಗಬೇಕಿತ್ತು. ಹಬ್ಬದ ಮುನ್ನಾದಿನ ಇದು ಆಗಬೇಕಿತ್ತು. ಅವರು ಬರಬೇಕಾಗಿತ್ತು. ಇವರು ಇನ್ನು ಬಂದಿಲ್ಲವೆಂದು ಚಡಪಡಿಸುತ್ತಿದ್ದರು. ಹಬ್ಬದ ಮುನ್ನಾ ದಿನ ಮಾರಿಗುಡಿಯ ಮುಂದೆ ನಡೆಯುವ ಓಕಳಿಗಾಗಿ ನೀರು ತುಂಬಿಸುವ ಗುಂಡಿ ತೆಗೆಯುವ ವ್ಯವಸ್ಥೆ ಮಾಡುವ ಬಗ್ಗೆ ಹೊಲೇರ ಕುಳವಾಡಿ ಬೋರಯ್ಯ ಮನೆಗೊಂದು ಆಳು ತಪ್ಪದೇ ಬರಬೇಕು ಎಂದು ಸಾರಿ ಹೋಗಿದ್ದ. ಅದನ್ನು ಕೇಳಿಸಿಕೊಂಡ ಹೆಂಗಸರಿಗೆ ಸೀರೆಯೊಳಗೆ ಉಚ್ಚೆ ಉಯ್ದುಕೊಂಡ ಅನುಭವವಾಯಿತು. ಕಾರಣ ಕಳೆದ ವರ್ಷದ ಓಕಳಿ ನಡೆಯುವಾಗ ಆದ ದೊಂಬಿ ಗಲಾಟೆ, ಹೊಡೆದಾಟದಲ್ಲಿ ಚಂದ್ರೇಗೌಡರ ಮಗ ವಿಷಕಂಠನ ತೊಡೆ ಮುರಿದು ಹೋದದ್ದು, ಇದರಿಂದ ಕೆರಳಿದ ಗೌಡರ ಕೇರಿಯ ಜನ ರಾಕ್ಷಸರೇ ಆಗಿಬಿಟ್ಟಿದ್ದು, ಕುರುಬರ ಕೇರಿಯ ಮುದುಕಿಯೊಬ್ಬಳು ದೊಂಬಿಯಲ್ಲಿ ಸಿಕ್ಕಿ ಸತ್ತದ್ದು. ಎಲ್ಲಾ ಇದ್ದಕ್ಕಿದ್ದ ಹಾಗೆ ನೆನಪಾಗಿ ಮತ್ತೆ ಈ ಬಾರಿಯೂ ಗಲಾಟೆ ನಡೆದರೆ ಗಂಡಸರ ತಲೆ ಹೋಗುತ್ತದೆಯೋ ಎನ್ನುವ ಭಯ ದುತ್ತನೆ ಕಣ್ಣಿಗಿಳಿದು ಬಂದಂತಾಯಿತು.

ಸ್ವಲ್ಪ ಹೊತ್ತು ಯೋಚನೆಯಲ್ಲಿ ಮುಳುಗಿ ಹೋಗಿದ್ದ ಕಮಲಮ್ಮ ಅಯ್ಯೋ ನನ್ ಗ್ಯಾನವೇ ಅಂತ ಮತ್ತೆ ಎಚ್ಚರವಾದಳು. ತೊಡೆ ಸಂದುಗಳಲ್ಲಿ ತಣ್ಣಗಾದಂತಾಗಿ ಅಯ್ಯೋ ದೇವರೆ, ಈಗ ಎನ್ ಮಾಡ್ಲಿ ಅಂತ ತಾನು ಮುಟ್ಟಾದ ಲೆಕ್ಕಾ ಹಾಕಿದಳು. ಕಳೆದ ಇಪ್ಪತ್ತು ದಿನಗಳ ಹಿಂದೆಯಷ್ಟೇ ಮುಟ್ಟಾಗಿದ್ದಳು. ಮತ್ತೆ ಈ ಊರಬ್ಬದಲ್ಲಿಯೂ ಹೊರಗೆ ಕೂರಬೇಕಾಗಿರುವ ಬಗ್ಗೆ ವಿಷಾದಿಸಿಕೊಂಡು ಬಚ್ಚಲು ಮನೆಯ ಕಡೆ ಬಂದಳು. ಮಗಳಿಗೆ 'ಮೀ ಪದ್ಮ ಹಳೆ ಒಲೆ ಕತ್ತು ನಾನ್ ನೀರ್ ಹೊಯ್ಯಬೇಕು' ಅಂತ ಹೇಳಿದಳು. ತಲೆ ಮೇಲೆ ಕೈ ಹೊತ್ತುಕೊಂಡು ನಡುಮನೆಯಲ್ಲಿ ತನ್ನ ಗಂಡನ ಅಗಲಿಕೆಯಿಂದ ಬಸವಳಿದು ಹೋಗಿದ್ದ ಪದ್ಮಗೆ ಚಾಟಿಯಲ್ಲಿ ಬಾರಿಸಿದಂತಾಯಿತು. ಮಾತನಾಡದೆ ಎದ್ದು ಹಳೆ ಒಲೆಯನ್ನು ಹೊತ್ತಿಸಿದಳು. ಕಾಯಿ ಮಟ್ಟೆ, ಕುರೊಂಬಾಳೆ,

ತುಂಬಿದ ಒಲೆಯು ಕಪ್ಪು ಹೊಗೆಯನ್ನು ಕಕ್ಕುತ್ತ ಧಗಧಗನೆ ಉರಿಯತೊಡಗಿತು. ಜೊತೆಯಲ್ಲಿಯೇ ಹೊರಟ ಹೊಗೆಯು ತೊಟ್ಟಿಯನ್ನೆಲ್ಲಾ ಅಡರಿಕೊಂಡಿತು. ಅದರ ಜೊತೆಯಲ್ಲಿಯೇ ಆಕೆಗೆ ತನ್ನೊಳಗಿನ ವಿರಹವು ಹೆಚ್ಚಾಯಿತು. ಮತ್ತೆ ತನ್ನೊಳಗೇ ತಾನು ಗಂಡನ ನೆನಪಿನಲ್ಲಿ ಹೂತು ಹೋದಳು. ಮೇಗಳ ಕೇರಿಯ ಪ್ರತಿಯೊಬ್ಬರು ತಮ್ಮ ತಮ್ಮ ಬುದ್ಧಿಮಟ್ಟಕ್ಕೆ ಅನುಸಾರವಾಗಿ ನಾಳೆ ನಡೆಯಲಿರುವ ಹಬ್ಬದ ಬಗ್ಗೆ ಖುಷಿ ಖುಷಿಯಾಗಿ ಮಾತನಾಡಿಕೊಳ್ಳುತ್ತಿದ್ದರು. ಕೇರಿಯಾಳುಗಳು ತಮಗೆ ವಹಿಸಿರುವ ಕೆಲಸವನ್ನು ತರಾತುರಿಯಲ್ಲಿ ನೇಮನಿಷ್ಠೆಯಿಂದ ನಿರ್ವಹಿಸುತ್ತಿದ್ದರು. ಗೌಡರ ಆಳು ಮೊಳ್ಳೆಚಿಕ್ಕ ಈ ಹಬ್ಬ ಬಂತು ಅಂದ್ರೆ ತಿಕ ಕೆರಳ್ಳಕ್ಕೂ ಪುರುಸುತ್ತಿರಕಿಲ್ಲ ? ಅಂಡ್ಕೊಂಡು ಕೊಟ್ಟಿಗೆಗೆ ಕರೆಯುವ ಹಸು ತಂದು ಬಿಗಿದು. ರಾಗಿಕಡ್ಡಿಯ ಹೊರೆಯನ್ನು ಬಿಚ್ಚಿ ಒದರಿದ.

ಗೌಡರಿಗೆ ಯುಗಾದಿಗಿಂತ ಮೊದಲೇ ಊರಿನ ಹಬ್ಬ ಮುಗಿಯಬೇಕೆನ್ನುವ ಆಸೆ. ನಂತರ ಯಾವ ಹಬ್ಬವನ್ನು ಮಾಡುವಂತಿಲ್ಲ . ಈ ಕಾರಣದಿಂದಾಗಿಯೇ ವಾರದ ಹಿಂದೆಯಷ್ಟೇ ಬಿಸಿಲು ಮಾರಮ್ಮನ ಹಬ್ಬ ಮಾಡಿ ಕೈ ತೊಳೆದುಕೊಂಡಿದ್ದರು. ಯುಗಾದಿ ನಂತರ ಮಳೆಗಾಲ ಎಟಕಿಸಿಕೊಳ್ಳುತ್ತದೆ ಎನ್ನುವುದು ಹಳ್ಳಿಗರ ನಂಬಿಕೆ. ಮಾಡುವ ಕೆಲಸದಲ್ಲಿಯೇ ಹೊಸ ಚೈತನ್ಯ ಬಂದಂತೆ ಕಾಣುತ್ತಿದ್ದರು. ಮೇಗಳ ಕೇರಿಯ ಗೌಡರ, ವಡ್ಡರ, ಹೊಲೆರ ಗಂಡಸರು, ಹೆಂಗಸರು ಮಕ್ಕಳಾದಿಯಾಗಿ ಯಾರು ಕಲ್ಲು ಚಚ್ಚುವ ಕ್ವಾರಿಗೆ ಹಬ್ಬ ಮುಗಿಯುವವರೆಗೂ ಹೋಗಬಾರದೆಂದು ತಮ್ಮಲ್ಲಿ ತಾವೇ ತೀರ್ಮಾನಿಸಿಕೊಂಡಿದ್ದರು. ಮತ್ಯಾರೋ ಪಡಸಾಲೆಯಲ್ಲಿ ಗುಂಪಾಗಿ ಚಂದ್ರೇಗೌಡರ ಜೊತೆ ಹಬ್ಬದ ವರಿ ಹಣ ಕೊಡದೆ ಇರುವ ಬಗ್ಗೆ ಗಾಢವಾಗಿ ಚರ್ಚಿಸುತ್ತಿದ್ದರು. ಅಲ್ಲೇ ಇದ್ದ ಹೊಲೇರ ಮಂಚನ ಮಗ ಕುಮಾರನಿಗೆ ಗೌಡರು ಕೇರಿಯಲ್ಲಿ ಯಾರನ್ನು ಬಿಡದಂತೆ ವರಿ ಹಣ ಕೇಳುವಂತೆ ಆದೇಶ ನೀಡಿದರು. “ಅಪ್ಪೋ, ಅವ್ರು ವರಿ ಹಣ ಕೊಟ್ಟಿಲ್ಲ ಅಂದ್ರೆ ದಮ್ಮಯ್ಯ ಕೊಡ್ರಿ ಅಂತ ಕೇಳಕ್ಕಗಾದ್ರಪ್ಪ” ಅಂತ ತರ್ಕ ಬದ್ಧವಾಗಿ ತನ್ನ ಶಕ್ತಾನುಸಾರವಾಗಿ ಒಪ್ಪಿಸುತ್ತಿದ್ದ ಗೌಡರು ಎಲ್ಲವನ್ನು ಕೇಳಿಸಿಕೊಂಡು 'ಹಬ್ಬ ಮುಗೀಲಿ ಆಮೇಲೆ ಅವುನನಾ ಹಿಕ್ಕುಸ್ತಿನಿ'. ಅಂದ ಈಗ ಹೋಗಲ್ಲ . ಈ ಮಧ್ಯೆಯ ಹೊಲಗೇರಿಯ ಹುಡುಗರು ಅಂಬೇಡ್ಕರ್ ಯುವಕ ಸಂಘ' ಎನ್ನುವ ಬೋರ್ಡ್ ಬರೆಸಿ ಒಂದು ಮನೆಯ ಮುಂದೆ ನೇತು ಹಾಕಿಸಿದ್ದರು. ಅಲ್ಲಿ ರಾತ್ರಿ ಹೊತ್ತಿನಲ್ಲಿ ಸಂಘದ ಸ್ಥಾಪನೆಯ ಮೂಲ ಧ್ಯೇಯದಂತೆ ನಿರಂತರವಾಗಿ ಸಾಮಾಜಿಕ ನಾಟಕ, ವಯಸ್ಕರಿಗೆ ಅಕ್ಷರಾಭ್ಯಾಸವನ್ನು ಕಲಿಸುತ್ತಿದ್ದರು. ಊರಿನವರ ದೃಷ್ಟಿಯಲ್ಲಿ ಅವರು ಕ್ರಾಂತಿಕಾರಿಗಳಂತೆ ಕಾಣುತ್ತಿದ್ದರು. ಆ ಕಾರಣಕ್ಕಾಗಿಯೇ ಸಂಘದ ಹುಡುಗರ ಮೇಲೆ ಇಲ್ಲ ಸಲ್ಲದ ಆರೋಪಗಳು ಕೇಳಿ ಬರುತ್ತಿದ್ದವು. ಕೆಲವರು ಗಾಂಜ ಸೇದುತ್ತಾರೆಂಬ ಪುಕಾರಿನ ಹಿನ್ನೆಲೆಯಲ್ಲಿ ಒಮ್ಮೆ ಪೊಲೀಸರು ಬಂದು ಜಪ್ತಿ ಮಾಡಿ ಸಹ ಹೋಗಿದ್ದರು. ಗೌಡರ ಕೇರಿಯವರು ಎಡದ ಮೊಗ್ಗಲ್ಲಿ ಎದ್ದಿದ್ದೀರ ಹಂಗೆ ಆಡಿ ಬತ್ತಾರೆ' ಎಂದು ದಿಮಾಕಿನಲ್ಲಿ ನಡೆದಾಡುತ್ತಿದ್ದರು. ಅಲ್ಲಿ ಅಂತಹ ಯಾವುದೇ ಸುಳಿವು ಸಿಕ್ಕಿರಲಿಲ್ಲ. ಎರಡು - ಮೂರು ಸಿಗರೇಟಿನ ತುಂಡುಗಳು ಮಾತ್ರ ದೊರೆತ್ತಿದ್ದವು. ಪೊಲೀಸಿನವರಿಗೆ

ಕಳ್ಳ ಸಿಕ್ಕದ ಬಗ್ಗೆ ಸಿಟ್ಟಾಗಿ ಅಲ್ಲಿದ್ದ ತಬಲ, ಹಾರ್ಮೋನಿಯಂ ಇತ್ಯಾದಿ ಎಲ್ಲವನ್ನು ಶೋಧನೆ ಮಾಡಿ, 'ಈ ಸರ್ತಿ ಬಚಾವ್ ಆಗಿದ್ದೀರಿ ನಿಮ್ ದೆಸೆ ಚೆನ್ನಾಗಿತ್ತು . ಇನ್ನೊಂದು ಸರಿ ನನ್ ಕೈಯಲಿ ಸಿಕ್ಕಿ ನಿಮ್ಗೆ ಚರ್ಮ ಸುಲಿತೀನಿ' ಎಂದು ಗದರಿಸಿ ಹೋದರು. ಹುಡುಗರಾರೂ ಈ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ . ಕೇರಿಯ ಹೈಕಳೂ ಒಂದೆರಡು ಬಾರಿ ಚೆಂದಗಾಲ ನಿಂಗಯ್ಯನಿಂದ ಭಂಗಿ ಸೇದಿ ಪ್ರಜ್ಞೆ ಇಲ್ಲದಂತೆ ಬಿದ್ದಿದ್ದರು. ಅವರ ತೀರ್ಮಾನದ ಪ್ರಕಾರ ತಾವು ಯಾರು ಗೌಡರ ಕೇರಿಯ ಹಬ್ಬಕ್ಕೆ ತಮಟೆ ಬಡಿಯುವ ಕೆಲಸಕ್ಕೆ ಹೋಗಬಾರದೆಂದು ತಮ್ಮಲ್ಲಿಯೇ ತೀರ್ಮಾನ ಮಾಡಿಕೊಂಡಿದ್ದರು. ತಮ್ಮ ಒಗ್ಗಟ್ಟಿನ ಫಲವಾಗಿಯೇ ಕಳೆದ ತಿಂಗಳಿನಲ್ಲಿಯಷ್ಟೇ ನಡೆದ ಹೇರ್ ಕಟಿಂಗ್ ಸೆಲ್ಯೂನ್‌ನ ಮೇಲೆ ದಾಳಿ ಮಾಡಿ ನಮ್ಮ ಕೇರಿಯವರಿಗೂ ಕಟಿಂಗ್, ಶೇವಿಂಗ್ ಮಾಡಿಸಿಕೊಳ್ಳುವ ಹಕ್ಕು ದಕ್ಕಿತ್ತು. ಈ ಕಾರಣಕ್ಕಾಗಿಯೇ ಹಜಾಮರ ಈಸಕಂಠನಿಗೆ ಗೌಡರು ಉಗಿದು ಹೋಗಿದ್ದರು. ಈ ಹಿನ್ನೆಲೆಯಲ್ಲಿ ಸಂಘದ ಹುಡುಗರ ತೀರ್ಮಾನಕ್ಕೆ ಹೆಚ್ಚಿನ ಮಹತ್ವ ಬಂದಿತ್ತು. ಕ್ವಾರಿಯಲ್ಲಿ ಸರಿಯಾದ ಕೂಲಿ ನಿಗಧಿ ಮಾಡುವಂತೆಯೂ, ಎಂಟು ಗಂಟೆಗಳ ನಿಗಧಿತ ಸಮಯವನ್ನು ನಿಯಮದಂತೆ ಕಡ್ಡಾಯವಾಗಿ ಪಾಲಿಸುವಂತೆ ಕ್ವಾರಿಯ ಮಾಲೀಕರನ್ನು ಒತ್ತಾಯಿಸುವ ಬಗ್ಗೆ ; ಅವರು ಅದಕ್ಕೆ ಒಪ್ಪದಿದ್ದರೆ ಸರ್ಕಾರದ ಮಟ್ಟದಲ್ಲಿ ಹೋರಾಟ ನಡೆಸುವ ಬಗ್ಗೆ ತಂತ್ರ ರೂಪಿಸಿದ್ದರು. ಇವರ ತೀರ್ಮಾನ ಕೇರಿಯ ಹೆಂಗಸರು, ಮಕ್ಕಳ ಹಬ್ಬದ ಆಸೆಗೆ ಅಡ್ಡಿಯನ್ನುಂಟು ಮಾಡಿತ್ತು. ನ್ಯಾಯ ನಡೆಯುವ ಸಂಘದ ಮನೆಯ ಬಳಿಯೇ ಸಿದ್ಧಿ ಎನ್ನುವ ಕೇರಿಯ ಬಜಾರಿ ಹೆಂಗಸು 'ವರ್ಷಕ್ಕೊಂದ್ ಹಬ್ಬಲಿ ನಮ್ ಗೌಡ್ರ ಮನೇಲಿ ಎಡೆ ಅನ್ನ ತರೋಕೆ ನಮ್ಗೆ ಅಕ್ಕೈತೆ, ಯಾವ ನನ್ ಮಗನು ಕೇಳ್ವಂಗಿಲ್ಲ ಕೇಳಿದ್ರೆ ಸರಿಯಾದ ಪೂಜೆ ಆಯ್ತುದೆ' ಎಂದು ರಂಪ ಮಾಡಿದ್ದಳು. ಈ ವಿಚಾರದಲ್ಲಿ ಸಿದ್ಧಿಯದೇನೂ ತಪ್ಪಿಲ್ಲವೆಂದೂ ಎಷ್ಟೋ ಹೆಂಗಸರು ಆಂದಿದ್ದರು. ಅವ್ವ ತನ್ನ ಗಂಡನು ಹೊಲಗದ್ದೆ ಮಾಡದೇ ತಿರುಗಿಕೊಂಡಿದ್ದ. ಕಾರಣ ಎಷ್ಟೋ ಬಾರಿ ಅಯ್ಯನ ಎದುರಿಗೆ 'ಯಾವ ಸುಖ ಉಣ್ಣಾಕೆ ಅಂತ ಹಟ್ಟಿಗೆ ಸೇರಿಸ್ಕೋ' ಎಂದು ದುಃಖಿಸುತ್ತಿದ್ದಳು. ಮದುವೆಯಾಗಿ ಬಂದಂದಿನಿಂದಲೂ ತಾನು ಕುಳಿತುಕೊಂಡು ಇರದೇ ಗೌಡರ ಗದ್ದೆ ಹೊಲಗಳಿಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದು ಬಂದ ಹಣದಿಂದ ಮಕ್ಕಳಿಗೆ ಸ್ಕೂಲಿನ ಫೀಜು, ಬಟ್ಟೆಗಳಿಗೆ ಬಳಸುತ್ತಿದ್ದಳು. ಅಕ್ಕಪಕ್ಕದವರ ಹೊಲಗಳಲ್ಲಿ ಬೆಳೆ ಎದೆ ಮಟ್ಟ ಬೆಳೆದು ಪತ್ನಿ ಸುತ್ತಿದ್ದರೆ ತನ್ನ ಗಂಡ ಕ್ವಾರಿ ಮಾಡಲು ಆಸ್ತಿ ಹೊಲಗಳನ್ನು ಮಾರಿಬಿಟ್ಟಿತ್ತು. ಇದನ್ನು ನೆನೆದುಕೊಂಡಾಗಲಂತು ಈ ಜಲ್ಮವೇ ಬ್ಯಾಡ ಎನ್ನುವಷ್ಟು ರೋಸಿ ಹೋಗುತ್ತಿತ್ತು. ಮಕ್ಕಳು ಮುಖ ನೋಡಿಕೊಂಡು ನೋವನ್ನೆಲ್ಲ ನುಂಗಿಕೊಳ್ಳುತ್ತಿದ್ದಳು. ನಾವು ಚಿಕ್ಕ ಹುಡುಗರಾಗಿದ್ದ ಕಾರಣ ಕೇರಿಯಲ್ಲಿ ಯಾವುದೇ ನ್ಯಾಯ ನಡೆಸಿದರೂ ನಮ್ಮನ್ನು ಅಯ್ಯ ಇಲ್ಲವೇ ಅಪ್ಪ ಮಾರಿಗುಡಿಯ ಬಳಿಗೆ ಕರೆದುಕೊಂಡು ಹೋಗುತ್ತಿದ್ದ. ಅಲ್ಲಿ ಚಿಕ್ ಹೈಕಳಲ್ಲಾ ಬರ್‌ಬ್ಯಾಡ್ ಅವರು ಬೇಡವೆಂದರು ನಾನು ಹಟ ಮಾಡಿ ಅಯ್ಯನ ಜೊತೆ ಹೋಗುತ್ತಿದ್ದೆ. ಎಲ್ಲರಿಗಿಂತ ಮುಂಚೆ ಬಂದು ನಡೆದದ್ದನ್ನು ಅವ್ವನಿಗೆ ತಂದು ಹೇಳುತ್ತಿದ್ದೆ . ಅಯ್ಯನೂ ಕ್ವಾರಿಯಲ್ಲಿ

ಮೇಸ್ತ್ರಿಯ ಕೆಲಸ ಮಾಡಿ ಕೆಲವು ವರ್ಷಗಳ ಹಿಂದೆಯಷ್ಟೇ ಬಿಟ್ಟು ಬಂದಿತ್ತು. ಕ್ವಾರಿಯ ಕೆಲಸಕ್ಕೆ ಕೇರಿಯ ಹೆಂಗಸರು ಗಂಡಸರು ತಪ್ಪದೇ ಹೋಗುತ್ತಿದ್ದರು. ತನ್ನ ಮಕ್ಕಳು ಕ್ವಾರಿಯ ಕೆಲಸಕ್ಕೆ ಹೋಗದೇ ಪೋಲಿ ಅಲಡೆಯುತ್ತಿದ್ದ ಬಗ್ಗೆ ಅಯ್ಯ ತುಂಬ ಸಿಟ್ಟು ಮಾಡಿಕೊಂಡಿತ್ತು. ಇದೇ ಅಯ್ಯನಿಗೆ ಚಿಂತೆ ಮಾಡುವಂತೆ ಆಗಿತ್ತು. 'ನಾನ್ ಏನ್ ಮಾಡ್ಕಂದಿ ಸಾಯ್ಲೆ ಇನ್ನು ನಾನು ಬದ್ಕಿರುವಾಗ್ಲೆ ನನ್ ಹೊಲ ಮನೆ ಬೇರೆಯವರ ಪಾಲಾಯ್ತುಲ್ಲಾ' ಅಂತ ದಿನವು ಕೊರಗುತ್ತಿತ್ತು. ಅಪ್ಪ ತನ್ನ ಭಾಗದ ಹೊಲವನ್ನು ಕ್ವಾರಿ ಮಾಡಲು ಗೌಡರಿಗೆ ಕೊಟ್ಟಿತ್ತು.

ಒಮ್ಮೆ ನಾನು ಯಾರದೋ ಹುಡುಗರ ಜೊತೆ ಕ್ವಾರಿಗೆ ಹೋಗಿರುವ ಸುದ್ದಿ ತಿಳಿದು ಅಪ್ಪ ರಾಕ್ಷಸನಂತೆ ಕಣ್ಣುಳನ್ನು ಮೆಡರಿಸುತ್ತಾ 'ವಸಿ ನ್ಯಾರವಾಗಿ ಬುದ್ಧಿ ಕಲಿಯೋ ನಿನ್ ಅವ್ವನಡಾ' ಎಂದು ಹುಣಸೇಸಭೆ ತಂದು ತಾರಮಾರಿ ಮುಖ ಮುಸುಡಿ ನೋಡದೇ ಚೆನ್ನಾಗಿ ಬರಿಸಿತ್ತು. ಯಾರೂ ಅಪ್ಪನನ್ನು ತಡೆಯುವ ಸ್ಥಿತಿಯಲ್ಲಿರಲಿಲ್ಲ. ಇನ್ನೊಂದ್ ಸಾರಿ ಕ್ವಾರಿಗೊದ್ರೆ ನಿನ್ ಗೌಡ್ರಟ್ನಲ್ಲಿ ಜೀತಾಕ್ಕಿರಿಸ್ತೀನಿ' ಅಂದರು. ಅಂದಿನಿಂದ ಕ್ವಾರಿ ಕಡೆ ತಲೆ ಹಾಕಿರಲಿಲ್ಲ . ಆಯ್ಯನ ಮೇಲಿನ ಸಿಟ್ಟನ್ನು ಅಪ್ಪ ನನ್ನ ಹೊಡೆತದಲ್ಲಿ ತಿರಿಸಿಕೊಳ್ಳುತ್ತಿರುವಂತೆ ತೋರುತ್ತಿತ್ತು. 'ಬಿಡು ಮೊಗ ಯಾಕ್ ಹೊಡುದಿಯೇ ಆ ಹೈದುನ್ಗೆ' ಎಂದು ಬಿಡಿಸಲು ಬಂದ ಚಿಕ್ಕವ್ವನಿಗೆ 'ಹೋಗಮ್ಮಿ ನೀನು ಮನೆಯ ಒಳಕೆ ಬಂದ್ ಬುಟ್ಟ ದೊಡೆಜನಗಿತ್ತಿಯಂಗೆ' ಎಂದು ಅಪ್ಪ ಗದರಿಸಿತ್ತು. ಕೇರಿಯಲ್ಲಿದ್ದ ಅತ್ತೆ, ಅಕ್ಕಂದಿರು ಹೆದರಿ ಬಿಡಿಸಲು ಯಾರು ಬರಲಿಲ್ಲ. ಬೆನ್ನಿನಲ್ಲಿ ಬಾಸುಂಡೆ ಬೆರಳು ಗಾತ್ರ ಎದ್ದು ಬಂದಿದ್ದರು. ಬೆನ್ನಿನ ಕೆಲವು ಕಡೆ ಚರ್ಮ ಕಿತ್ತು ನೀಲಿ ಗಟ್ಟಿತ್ತು. ನನಗೆ ಜೀವವೇ ಹೋದ ಹಾಗೆನಿಸಿತು. ಚಡ್ಡಿಯಲ್ಲಿಯೇ ಉಚ್ಚೇ ಮಾಡಿಕೊಂಡಿದ್ದೆ. ನನಗೆ ಎಷ್ಟೋ ದಿನಗಳ ನಂತರವು ಅಷ್ಟೊಂದು ಹೊಡೆದುದು ಯಾಕೆ ಎನ್ನುವುದು ತಿಳಿಯಲಿಲ್ಲ.

ಊರಿನಲ್ಲಿದ್ದಾಗ ನಡೆದ ಎಷ್ಟೋ ವಿಚಾರಗಳು ಮೈಸೂರಿನ ಕಾಲೇಜು ಹಾಸ್ಟೆಲ್ ಸೇರಿದ ಮೇಲೆ ಮನಸ್ಸಿನಲ್ಲಿಯೇ ಕರಗತೊಡಗಿದವು. ಅಪ್ಪನ ವರ್ತನೆ ಮಾತ್ರ ಮಿತಿ ಮೀರಿ ಹೋಗಿತ್ತು. ಕ್ವಾರಿ ಕೆಲಸ ಮಾಡುತ್ತಿದ್ದ ಚೆನ್ನಕ್ಕನನ್ನು ಕಟ್ಟಿಕೊಂಡು ರಾತ್ರೋರಾತ್ರಿ ಬೇರೆ ಊರಿನ ಕ್ವಾರಿಗೆ ಹೊರಟು ಹೋಗಿದ್ದ. ನಾನು ಹಾಸ್ಟೆಲ್‌ನಿಂದ ರಜೆಗೆ ಊರಿಗೆ ಬಂದಾಗ ಅವ್ವ ಎಲ್ಲವನ್ನು ಹೇಳಿಕೊಂಡು ರಾತ್ರಿ ಇಡೀ ಕಣ್ಣೀರು ಕರೆದಳು. ಅವ್ವನೇ ಹೊಳೆಯಲ್ಲಿ ಮುಳುಗಿ ಸತ್ತ ಕರಿಯನ ಬಗ್ಗೆ ಹೇಳಿದಳು. ಅವ್ವ ತುಂಬ ನೊಂದಂತೆ ಕಂಡಳು. ಅವ್ವ ಮೊದಲಿನಂತೆ ಇಲ್ಲ. ದಿನದಿಂದ ದಿನಕ್ಕೆ ಒಣಗಿ ಹೋದ ಹಳ್ಳು ಕಡ್ಡಿಯಂತಾಗಿದಳು.

ಆ ಹೊತ್ತು ಮಾಮೂಲಿಯಾಗಿ ದನ ಎಮ್ಮೆ ಕುರಿಗಳನ್ನು ಮೇಯಿಸಲು ಹೊಳೆತಿಟ್ಟಿಗೆ ಹೋಗಿದ್ದ. ತಿಟ್ಟನ್ನು ಸಮೀಪಿಸಬೇಕಾದರೆ ಹೊಳೆಯನ್ನು ಹಾಯಬೇಕು. ಅದು ನಡುಗಡ್ಡೆಯ ರೀತಿಯ ನೀರಿನ ಮಧ್ಯದಲ್ಲಿದೆ. ಅಲ್ಲಿ ಎಷ್ಟೋ ವಿಚಿತ್ರ ಪಕ್ಷಿಗಳು, ಸಣ್ಣ ಕಾಲಿನ ಎತ್ತರದ ಕೊಕ್ಕರೆಗಳು ಹಿಂಡು ಹಿಂಡಾಗಿ ಮೀನು ತಿನ್ನಲು ಬರುತ್ತಿದ್ದವು.

ಎಷ್ಟೇ ಪ್ರವಾಹ ಬಂದರೂ ಕೂಡ ಅವು ಮುಳುಗುತ್ತಿರಲಿಲ್ಲ. ನೆರೆ ಬಂದಾಗ ಕಾಡು ಹಕ್ಕಿ-ಪಕ್ಷಿಗಳು ಉಡ, ಮೊಲ ಮುಂತಾದವು ಅಲ್ಲಿ ರಕ್ಷಣೆ ಪಡೆಯುತ್ತಿದ್ದವು. ಈ ತಿಟ್ಟು ಊರಿನ ನಕ್ಷೆಯಲ್ಲಿ ಗೋಮಾಳ ಎಂದು ನಮೂದಿಲಾಗಿತ್ತು. ಅಲ್ಲಿ ದನಗಳಿಗೆ ಸಿಹಿ ಹುಲ್ಲು, ಹುಲ್ಲಿನ ಪೊದೆಗಳ ನಡುವೆ ಹಣ್ಣಿನ ಮರಗಳು, ಆಳೆತ್ತರದ ಮರಗಳು ಹಳು ಬೆಳೆದು ಒಂದು ರೀತಿಯಲ್ಲಿ ಚಿಕ್ಕ ಗೊಂಡಾರಣ್ಯವೇ ಆಗಿತ್ತು. ಅಲ್ಲಿಗೆ ದಿನನಿತ್ಯವು ಕೇರಿಯ ಮೀನು ಶಿಕಾರಿಯವರು, ಸೌದೆ ಸೊಪ್ಪಿಗೆ ಹೋಗುವ, ಕುಕ್ಕೆ ಹೆಣೆಯುವವರು ನಿತ್ಯವು ಹೋಗಿ ಬರುತ್ತಿದ್ದರು. ತಿಟ್ಟಿಗೆ ಹೋಗುವಾಗ ಯಾರು ಈಜುತ್ತಿರಲಿಲ್ಲ. ಎಮ್ಮೆಯ ಬಾಲ ಹಿಡಿದುಕೊಂಡು ನಿಧಾನವಾಗಿ ಈಜುತ್ತ ಇಲ್ಲವೇ ಎಮ್ಮೆಯ ಮೇಲೆ ಕುಳಿತುಕೊಂಡು ಹೊಳೆದಾಟುತ್ತಿದ್ದರು. ಅದು ಕರಿಯನಿಗೆ ಹೊಸ ಸ್ಥಳವಾಗಿರಲಿಲ್ಲ. ಆ ದಿನ ಗೌಡರ ದೊಡ್ಡ ತೆನೆ ಎಮ್ಮೆಯ ಬಾಲ ಹಿಡಿದುಕೊಂಡು ಹೊಳೆ ದಾಟುತ್ತಿದ್ದ ಆ ಹೊತ್ತಿನಲ್ಲಿ ಎಮ್ಮೆ ಈಜುತ್ತಿದ್ದರು. ಮೊಸಳೆ ಮಡು ವಿನ ಕಡೆಗೆ ಹೋಗಿ ಸುಳಿಗೆ ಸಿಕ್ಕಿ ಕಾಲು ತಪ್ಪಿ ಮುಳುಗಿದ್ದು, ಮತ್ತೆ ಸುಳಿಯಿಂದ ತಪ್ಪಿಸಿಕೊಂಡು ಮೇಲೆ ಬರಲಿಲ್ಲ. ಸಂಜೆಯಾಗುತ್ತಿದ್ದಂತೆಯೇ ಊರಿಗೆಲ್ಲ ಸುದ್ದಿ ಹಬ್ಬಿತ್ತು, ಎಮ್ಮೆಯ ಜೊತೆಯಲ್ಲಿಯೇ ಕರಿಯನೂ ಸುಳಿಗೆ ಸಿಕ್ಕಿ ನೀರಿನಲ್ಲಿ ಮುಳುಗಿ ಹೋದ ಸುದ್ದಿ ಕೇರಿಗೆಲ್ಲ ಟಾಂಟಾಂಗಿತ್ತು. ಮೂರು ದಿನಗಳು ಹುಡುಕಿದರೂ ಹೆಣ ಸಿಕ್ಕದೇ ಇದ್ದಾಗ ಗಂಜಾಂನಿಂದ ಬೆಸ್ತರನ್ನು ಕರೆಸಿ ಹೆಣವನ್ನು ಹುಡುಕಿ ಹೊತ್ತು ತಂದಿದ್ದರು. ಅಲ್ಲಿ ಬಂದಿದ್ದ ಗೌಡರ ಕೇರಿಯವರು ಗಾಳ ಮೊಖ ಅವ್ವ ಅದಕ್ಕೆ ವಾಸ್ನ ಜಾಸ್ತಿ ಎಂದು ಮುಖಕ್ಕೆ ಬಟ್ಟೆ ಮುಚ್ಚಿಕೊಂಡಿದ್ದರು. ಕರಿಯನ ರೂಪವನ್ನು ಕೇರಿಯವರಾರು ಗುರುತಿಸಲು ಸಾಧ್ಯವಾಗದಷ್ಟು ವಿಕಾರವಾಗಿತ್ತು. ಹೆಣ ಆಗಲೇ ದುರ್ವಾಸನೆ ಹೊಡೆಯುತ್ತಿತ್ತು. ಮೂಗನ್ನು ಮೀನುಗಳು ಪೂರ್ತಿಯಾಗಿ ತಿಂದು ಹಾಕಿದ್ದವು. ಒಂದು ಕಣ್ಣು ಮತ್ತು ಕಿವಿಯನ್ನು ನಳ್ಳಿ ಮೀನುಗಳು ಅರ್ಧಂಬರ್ಧ ತಿಂದು ವಿಕಾರಗೊಳಿಸಿದ್ದವು. ಹೆಣ ನೋಡಲಾಗದಷ್ಟು ಕೊಳೆತು ದುರ್ನಾತ ಹೊಡೆಯುತ್ತಿತ್ತು.

ಗೌಡರು 'ಎಮ್ಮೆ ಹೋದ್ರೆ ಹೋಯ್ತು ನಮ್ ಕರಿಯನಾದ್ರು ಬದ್ಕಿದಿದ್ರೆ' ಅಂತ ಕಣ್ಣೀರಿಟ್ಟರು. ಸಂಜೆ ಹೊತ್ತಿನಲ್ಲಿ ನಮ್ಮ ತೋಟದ ಸಮೀಪದಲ್ಲಿಯೇ ಸುಟ್ಟು ಹಾಕಿದ ಬಗ್ಗೆ ಅವ್ವ ಹೇಳಿದಳು. ನನಗೆ ಕಣ್ಣೀರು ತುಂಬಿ ಬಂತು. ಏನು ಹೇಳಲೂ ಆಗದೇ ನೋವಿಗೆ ಕಣ್ಣೀರು ತುಂಬಿ ಬಂತು. ಆ ಘಟನೆ ನನ್ನೊಳಗೆ ಯಾವಾಗಲೂ ಚಿಟುಕು ಮುಳ್ಳಾಡಿಸುತ್ತಿತ್ತು.

ಕೇರಿಯ ಕುಳವಾಡಿಗಳು ತಮಟೆಯನ್ನು ಕಾಯಿಸಿ ನಿನಾದ ಬರುವಂತೆ ಬೀದಿಯಲ್ಲಿ ಬಡಿಯುತ್ತಿದ್ದರು. ಕಾರಣ ಹಬ್ಬದ ಸಡಗರ, ಕೇರಿಯ ಮಕ್ಕಳು ಮರಿಯಲ್ಲಾ ಸೇರಿ ಸಣ್ಣ ಗುಂಪೇ ಆಯಿತು. ಆತ ರಂಗದ ಕುಣಿತ ಬಡಿಯುತ್ತಿದ್ದ, ಆ ಗುಂಪಿಗೆ ಒಂದೆರಡು ಹಳೆಯ ತಲೆಗಳು ಸೇರಿಕೊಂಡರು. ತಮ್ಮಲ್ಲಿದ್ದ ಚೌಕಗಳನ್ನೇ ಕೈಯಲ್ಲಿ ಹಿಡಿದುಕೊಂಡು ಕುಣಿಯುವುದಕ್ಕೆ ತೊಡಗಿದರು. ಅಂದಿನ ಬಾಲ್ಯದ ಚಿತ್ರ ಕಣ್ಣು ಮುಂದೆ ಅಷ್ಟೋತ್ತಿದೆ. ತಮಟೆಯ ಬಡಿತದ ಸದ್ದು ಊರನ್ನೆಲ್ಲಾ ತನ್ನ ತೆಕ್ಕೆಯಲ್ಲಿ

ಮುಳುಗಿಸಿಕೊಂಡಿತ್ತು. ಇಡೀ ಕೇರಿಯೇ ಯಾವುದೋ ಗೋಳಿನ ರೋಧನದಲ್ಲಿ ಮುಳುಗಿರುವಂತೆ ಭಾಸವಾಗುತ್ತಿತ್ತು. ಇದ್ದಕ್ಕಿದ್ದಂತೆ ಅವನಿಗೆ ತಡೆದುಕೊಳ್ಳಲಾಗದ ತಳಮಳ, ಗುಡಿಸಲಿನೊಳಗಿದ್ದ ಅವ್ವ ಜೋರಿನಿಂದ 'ಆ ನಿಮ್ ಬೋರಯ್ಯನ್ ತಮೆಜಸಿಂದ ಕೇರಿ ಮಕ್ಳು ಮರಿಯಲ್ಲಾ ಹಾಳಾಯ್ತುವೆ ಅಷ್ಟಿಯೇ' ಅಂತ ಉಸುರಿದಳು. ಅವನ ಮಾತು ಸರಿ ಎನ್ನುವಂತೆ ಎಷ್ಟೋ ಜನ ತಲೆಯಾಡಿಸಿದರು. ಕೇರಿಯ ಜನರೆಲ್ಲರೂ ನಮ್ಮ ಮನೆಯ ಮುಂದಿನ ಅಂಗಳದಲ್ಲೇ ಜಮಾಯಿಸಿದ್ದರು. ಅವ್ವನಿಗೆ ಅಪ್ಪನ ಮೈಗಳ್ಳತನದಿಂದ ತನ್ನ ಮನೆಯೇ ಹಾಳಾದಂತೆ ಎಂದು ತಿಳಿದಿದ್ದಳು. ಏನಾದರೂ ಮಾಡಿ ಮನೆಯನ್ನು ಉಳಿಸಲು ಗೌಡರ ಗದ್ದೆ, ಹೊಲಗಳಲ್ಲಿ ಕಳೆ ಕಿತ್ತು ಬೇಸಾಯ ನಡೆಸುತ್ತಿದ್ದಳು. ಅಪ್ಪ ದಿನದ ಎರಡು ಹೊತ್ತು ಕುಡಿತ, ಇಸ್ಪೀಟು ಮುಗಿಸಿಕೊಂಡು ರಾತ್ರಿ ಯಾವಾಗಲೋ ಸೆಕೆಂಡ್ ಷೋ ಸಿನಿಮಾ ಬಿಡುವ ಸಮಯದಲ್ಲಿ ಬಂದು ಜಗಲಿಯ ರೂಮು ಸೇರಿಕೊಳ್ಳುತ್ತಿದ್ದ. ಒಮ್ಮೊಮ್ಮೆ ವಾರ, ಹದಿನೈದು ದಿನಗಳವರೆಗೂ ಬರದೇ ಎಲ್ಲರನ್ನೂ ಕಾಯಿಸುತ್ತಿದ್ದ. ಅವ್ವನನ್ನು ನಂಬಿಸುವ ಸಲುವಾಗಿ ಬೇರೆ ಕ್ವಾರಿಯಲ್ಲಿ ಮೇಸ್ತ್ರಿ ಕೆಲಸ ಮಾಡಿಸುತ್ತಿರುವುದಾಗಿಯೂ ಸುಳ್ಳು ಹೇಳುತ್ತಿತ್ತು. ಅವ್ವ ಅದನ್ನೇ ನಿಜವೆಂದು ನಂಬಿದ್ದಳು. ಅಷ್ಟೊತ್ತಿಗೆ ನಾವು ಪೂರ ನಿದ್ದೆ ಹೋಗಿರುತ್ತಿದ್ದೆವು. ಅವ್ವ ಅಪ್ಪರ ನಡುವೆ ಯಾವು ಯಾವುದೋ ಹಳೆಯ ಮಾತು ನಡೆಯುತ್ತಿದ್ದವು. ಒಮ್ಮೆ ಅವನ ಧ್ವನಿ ಜೋರಾದರೇ, ಮತ್ತೊಮ್ಮೆ ಅಪ್ಪನ ಧ್ವನಿ ಜೋರಾಗಿ, ನಂತರ ಎಷ್ಟೋ ಹೊತ್ತಿನವನರೆಗೆ ಮೌನ ಅಲ್ಲಿ ಆವರಿಸುತ್ತಿತ್ತು. ನಂತರ ಬಾಯಿ ಬಡಿದುಕೊಳ್ಳುವ ಅವ್ವ, ಎಷ್ಟೋ ಹೊತ್ತಿನ ಮೇಲೆ ಅಪ್ಪನ ಬಿರುಸಿನ ಮಾತು. ಹೀಗೆ ಅಪ್ಪ ಕ್ವಾರಿಯಿಂದ ಬಂದ ರಾತ್ರಿಗಳಲ್ಲಿ ನಿತ್ಯವೂ ನಡೆಯುತ್ತಿತ್ತು. ನಿದ್ದೆಗಣ್ಣಿನಲ್ಲಿ ಎಷ್ಟೋ ಬಾರಿ ನಾನು ಎದ್ದು ಕುಳಿತಿದ್ದೆ. ಪಕ್ಕದ ಮನೆಯ ಸಣ್ಣಕ್ಕ ಬಂದು ಅವ್ವನಿಗೆ ಬುದ್ಧಿ ಹೇಳಿ ಹೋದಳು. ನಾನು ಏಕೆ ಹೀಗೆ ಎಂದು ತಳಮಳಗೊಂಡೆ. ಅದು ಮಹಾಲಯ ಅಮಾವಸ್ಯೆಯ ರಾತ್ರಿ ಕ್ವಾರಿಯಿಂದ ಬರುವಾಗಲೇ ಕುಡಿದು ಬಂದಿದ್ದ. ಅಪ್ಪ ಇತ್ತೀಚೆಗೆ ನೆಂಟನಂತೆ ಯಾವಾಗಲೋ ಒಮ್ಮೆ ಕೇರಿಗೆ ಬರುತ್ತಿದ್ದರಿಂದ ಸಿಟ್ಟಿನ ಆವೇಶದಲ್ಲಿ ಅವ್ವ ಬಡಬಡಿಸುತ್ತಿದ್ದಳು. ಸಂಜೆಯಿಂದಲೂ ಅಪ್ಪ ಬರದಿರುವ ಬಗ್ಗೆ ತಳಮಳಗೊಂಡಿದ್ದಳು. 'ನಾನ್ ಎಷ್ಟು ಅಂತ ತಡಿಯನೇ ನಿನ್ ಶಿಕ್ಷಿಯಾ ನಾನ್ ಏನ್ ನೀನ್ ಹೇಳ್ತಂಗೆಲ್ಲಾ ಕೇಳಾಕೆ ನಿನ್ ಸೂಳೆ ಅನ್‌ಕಬುಟ್ಟಿದ್ದಿಯಾ ಗುಲಾಮ್ ಸೂಳೇ ಮಗನೇ ಇನ್ನೊಂದ್ ಸುಟರ್ ಬಾಯಿಬಿಟ್ರೇ ನಿನ್ ಸಾಯಿಸುತ್ತೀನಿ' ಅಂತ ಅವ್ವ ಅಪ್ಪನ ಕುತ್ತಿಗೆ ಚಿವುಕುತ್ತಿದ್ದಳು. ಅಪ್ಪ ಬಾಯಿ ಬಡಿಯುತ್ತ ಮೇಲಕ್ಕೂ ಕೆಳಕ್ಕೂ ನೆಗೆದು ಬೀಳುತ್ತಿದ್ದ. ಉಸಿರುಗಟ್ಟಿದ ಗಂಟಲು ಗೊಟರು ಗೆರೆಯುತ್ತಿತ್ತು. ಅವನ ಕಣ್ಣುಗಳು ತೇಲುಗಣ್ಣಾಗಿದ್ದವು. ಅವ್ವನನ್ನೇ 'ನಿನ್ ದಮ್ಮಯ್ಯ ಅಂತೀನಿ ಬುಡಮ್ಮಿ ಕೈ ತಾಯಮ್ಮ ನಿನ್ ಕಾಲ್ ಕಟ್ನಿ ಬುಡಮ್ಮಿ ಕೈಯ' ಅಂತ ಪ್ರಾಣ ಭಿಕ್ಷೆ ಬೇಡುವಂತೆ ಗೋಗರೆಯುತ್ತಿದ್ದ. ನನಗೆ ಆ ಕ್ಷಣ ನಂಬಲಿಕ್ಕೆ ಆಗಲಿಲ್ಲ. ಅಪ್ಪನ ಶೂರತನ ಮಣ್ಣಾಗಿರುವ ಬಗ್ಗೆ ಖುಷಿ ಎನಿಸಿತು. ಅವ್ವ ಯಾವತ್ತೂ ಅಪ್ಪನ ಕೈಯಿಂದ ಏಟು ತಿನ್ನಬಾರದು. ಹೀಗೆಯೇ ಧೈರ್ಯವಾಗಿ ಅಪ್ಪನನ್ನು ಎದುರಿಸಬೇಕು ಅಂದುಕೊಂಡೆ.

ಕೇರಿಯ ಜನರೆಲ್ಲಾ ಗುಂಪು ಗುಂಪಾಗಿ ನಮ್ಮ ಗುಡಿಸಲು ಮುಂಭಾಗದಲ್ಲಿ ಸೇರಿಕೊಂಡು ಗುಸುಗುಸು ಮಾತನಾಡಿಕೊಳ್ಳುತ್ತಿದ್ದರು. ಇಂತಹ ಬಜಾರಿ ಹೆಂಗ್ ಆದೊಡ್ಡ ಕೇರಿವೂಳುಗೆ ವೊಲೆ ಹೊತ್ತನಿಸುದ್ದು. ಇಲ್ಲಾ ಅಂದಿದ್ರೆ ಮತ್ತೆ ಕುಕ್ಕೆ ತಕ್ಕಂದಿ ಇವು ಯಾವಾದಾದ್ರೂ ಕ್ವಾರಿ ಕಡಿಕೆ ಜಲ್ಲಿ ಕಲ್ಲು ಬಚ್ಚಾಕೆ ಹೋಗ್‌ಬೇಕಿತ್ತ"  ಅನ್ನುತ್ತಿದ್ದರು. ಗೌಡರ ಕೇರಿಯ ಹೆಂಗಸರು "ಅಷ್ಟೇ ಗಟ್ಟಿಯೆಂಗ್ ಬೇರಿಯವ ಕೈಲಿ ಆದಾದ' ಎಂದು ಅಪ್ಪನಿಗೆ ಬೈದು ಹೋದರು. ಅವ್ವನಿಗೆ ವಸಿ ಸವುರಿಸಿಕೊಳ್ಳಬೇಕು ಅಂತ ಹೇಳಿದರೂ ಅವ್ವ ಮಾತ್ರ ಚಂಡಿಯಂತೆ ವೇಷ ತಾಳಿ ಯಾರು ಎಷ್ಟು ಗೋಗರೆದರೂ ಗುತ್ತಿಗೆಯನ್ನು ಬಿಟ್ಟಿರಲಿಲ್ಲ. ಅವ್ವನ ಕೋಪ ಕಡಿಮೆಯಾಗಿರಲಿಲ್ಲ. ಅಯ್ಯನೂ ಬಂದು ಸಮಾಧಾನಪಡಿಸುತ್ತ 'ಬುಡವ್ವ ತಾಯಮ್ಮ ಅವನ್ ಪಾಣಗೀಣಾ ಹೊಂಟೋದಾದು ಅಂತ ಹಲ್ಲು ಗಿಂಜಿ ಗೋಗರೆಯಿತು. ಆಗ ನನಗೆ ಅಪ್ಪನ ಆ ಹೊತ್ತಿನ ಸ್ಥಿತಿಗೆ ಪಾಪವೆನಿಸಿತು. ಅವ್ವನಿಗೆ ಏನು ಅನಿಸಿತ್ತೋ ಅಳುತ್ತಾ 'ನಾನು ಎಷ್ಟು ಅಂತ ತಡಿಯನೇ ಇವುನ್ ಶಿಕ್ಷೆ ಬಂದಾನವಾ, ಕ್ವಾರೀಲಿ ಇವತ್ತು ಬಟವಾಡೆ ದಿನ, ಒಂದ್ ರೂಪಾಯಿ ಇಲ್ದಂಗೆ ಎಲ್ಲಾನುವೆ ಆ ನನ್ ಸವ್ತಿಗೆ ಕೊಟ್ಟು ಬುಟ್ಟು, ಉಳಿದುದನ್ನ ಪುಟ್ಟುಗೆ ಕುಡ್ದು ಬಂದನ್ನೆಲ್ಲಾ, ನಾಳೆ ಸಂತೆ - ಹೊಟ್ಟೆಗೇನ್ ಗತಿ ಮಕ್ಕಳ ಹೊಟ್ಟೆಗೆ ತಣ್ಣೀರ್ ಬಟ್ಟೆ ಹಾಕಾಬೇಕ ಎಂದು ಕಣ್ಣೀರು ಸುರಿಸುತ್ತಾ ಹಲ್ಲು ಮಸೆಯುತ್ತಿದ್ದಳು. ಅವ್ವ ಸಿಟ್ಟಿನಿಂದ ಒಂದೇ ಸಮನೇ ಏದುಸಿರು ಬಿಡುತ್ತಿದ್ದಳು. ಅವ್ವನ ಕೈ ಬಿಡಿಸಿ ಅಪ್ಪನನ್ನು ವಪ್ಪಾರಿನಲ್ಲಿ ಕರೆದು ಮಲಗಿಸಿದರು. ಅಪ್ಪನಿಗೆ ಗೌಡರ ಕೇರಿಯವರೆಲ್ಲ ಬುದ್ದಿ ಹೇಳಿ ಹೋದರು. ಕೇರಿಯ ಜನರಿಗೆ ಕೊಟ್ಟಿರುವ ಸಾಲದ ಹಣಕ್ಕೆ ತಾವು ಕೆಲಸ ಮಾಡಿದ ಹಣವನ್ನು ಜಮಾ ಮಾಡಿರುವಂತೆಯೂ, ಕೆಲವರಿಗೆ ಕೇರಿಗೆ ಬಿಡದಂತೆ ಕಾಲಿಗೆ ಸರಪಳಿ ಕಟ್ಟಿ ಬಂಧಿಸಿರುವ ಬಗ್ಗೆಯೂ ಹೇಳಿದ. ಅಪ್ಪ ಕುಡಿದಿದ್ದರಿಂದ ಯಾರು ಅವನ ಮಾತು ನಂಬಲಿಲ್ಲ. ಸಾಮಾನ್ಯವಾಗಿ ಶನಿವಾರವೇ ಎಲ್ಲಾ ಕ್ವಾರಿಗಳಲ್ಲಿಯು ಬಟವಾಡೆ ನಡೆಯುತ್ತಿದ್ದುದ್ದು. ಭಾನುವಾರ ಸಂತೆ ಸಾಮಾನು ತರುವುದು ವಾಡಿಕೆ. ಎಷ್ಟೋ ವರ್ಷಗಳಿಂದ ಹಣವನ್ನು ತೆಗೆದುಕೊಂಡು ಪಾಂಡವಪುರ ಸಂತೆಗೆ, ಇಲ್ಲ ಕನ್ನಂಬಾಡಿ ಕಟ್ಟೆ ಸಂತೆಗೆ ಹೋಗಿ ಮನೆಗೆ ಬೇಕು ಬೇಕಾದ ರೇಷನ್, ದಿನಸಿ, ಕರಿಮೀನು, ಸಿಗಡಿ, ಉಪ್ಪು, ಮೆಣಸಿನ ಕಾಯಿ, ಎಲ್ಲವನ್ನು ಕೊಂಡು ತಂದು ಮನೆಯ ಮಕ್ಕಳಿಗೆ ಬೇಕಾಗುವ ತಿಂಡಿ ತೀರ್ಥವನ್ನು ಪೊಟ್ಟಣಗಳಲ್ಲಿ ಕಡಲೇಪುರಿ, ಕಾರಸೇವೆ ಬೆರೆಸಿ ಮೊಡಲು ತುಂಬುವಂತೆ ತಂದು ಮಕ್ಕಳಿಗೆ ಹಂಚುತ್ತಿದ್ದರು. ಮಕ್ಕಳು ಸಾಲಾಗಿ ಕುಳಿತು ಮಾತನಾಡುತ್ತ ತಿನ್ನುತ್ತಿದ್ದೆವು. ಅದು ನಿಜಕ್ಕೂ ಸುಖವೆನಿಸುತ್ತಿತ್ತು. ಆ ದಿನಗಳು ಬಂದ ಹಾಗೆಯೇ ಸದ್ದಿಲ್ಲದೆ ಕರಗಿ ಹೋದವು. ನಂತರವೆಲ್ಲ ಬರೀ ಮನೆ ತುಂಬ ಗೋಳೆ ಆಯಿತು. ಬಹುಪಾಲು ಇತ್ತಿತ್ತಾಗೆ ರಂಪ ರಾಮಾಯಣವೇ ಹೆಚ್ಚಾಗಿತ್ತು. ಊರೆಲ್ಲವೂ ನಿಶಬ್ದವಾಗಿತ್ತು. ಅಪ್ಪ ಮಾತ್ರ ನಿಶೆಯಲ್ಲಿ ಬಡಬಡಿಸುತ್ತಲೇ ಇತ್ತು. ಅವ್ವ ತಲೆ ಮೇಲೆ ಕೈ ಹೊತ್ತು ಕುಳಿತಿದ್ದಳು. ಮಿಂಚು ಹುಳುಗಳು ಬೀದಿಯಲ್ಲಿ ನಕ್ಷತ್ರಗಳಂತೆ ಹೊಳೆಯುತ್ತ ಹೋಗುತ್ತಿದ್ದವು. ಮನೆಯಲ್ಲಿ ಮಾತ್ರ ಅಲ್ಲದೆ ಕೇರಿಯಲ್ಲೂ ಎಲ್ಲಾ ಒಂದು ಥರ ಮಂಕು ಕವರಿತ್ತು. ನಾಯಿಯೊಂದು ರೋಧಿಸುತ್ತಿತ್ತು.

ಮನೆಯಲ್ಲಿ ಈ ಘಟನೆ ನಡೆದ ಕಾರಣ ನಾನು ಅಪ್ಪನಿಗೆ ಹೆದರಿಕೊಂಡು ಅತ್ತೆಯರು, ಚಿಕ್ಕವ್ವಂದಿರು, ಊರಿನ ಹಬ್ಬವಾದ ಕಾರಣ ಬಂದಿರುವ ನೆಂಟರು ಮಲಗಿದ್ದ ಹಜಾರಯಲ್ಲಿ ಮಲಗಿದ್ದೆ. ಅಲ್ಲಿಯೂ ಅಪ್ಪನ ವಿಷಯವನ್ನೆ ಮೆಲುಕು ಹಾಕುತ್ತ ಮಲಗಿದ್ದ ಅತ್ತೆಯರು ಏನೇನೋ ಪಿಸುಮಾತಿನಲ್ಲಿ ಹೇಳಿಕೊಂಡು ನಗುತ್ತಿದ್ದರು. ಚಿಕ್ಕವನಾದ ನನಗೆ ಅವರ ಮಾತಿನ ಅರ್ಥ ತಿಳಿಯುತ್ತಿರಲಿಲ್ಲ. ಮದುವೆಯಾಗದೇ ಕೇರಿಯಲ್ಲಿಯೇ ಇದ್ದ ಇವರು ನಮಗೆ ತುಂಬ ಪ್ರೀತಿಯಿಂದಲೇ ನೋಡಿಕೊಳ್ಳುತ್ತಿದ್ದರು. ಒಮ್ಮೊಮ್ಮೆ ನಮ್ಮ ಮುಖಕ್ಕೆ ಮುತ್ತಿಡುತ್ತಿದ್ದರು. ನನಗೆ ಮುಜುಗರವೆನಿಸುತ್ತಿತ್ತು. ಪ್ರಾಣಿ, ಪಕ್ಷಿಗಳ ಭೂತ ಪ್ರೇತಗಳ ಕಥೆಗಳನ್ನು ಹೇಳುತ್ತಿದ್ದರು. ಆಗ ದೆವ್ವದ ಕಥೆ ಕೇಳಿ ಹೆದರಿ ನಾವು ಅವರನ್ನೇ ತಬ್ಬಿಕೊಂಡು ಮಲಗುತ್ತಿದ್ದೆವು. ಒಮ್ಮೊಮ್ಮೆ ಅವರು 'ಹಾಲು ಕುಡಿ, ಹಾಲು ಕುಡಪ್ಪಾ ಜಾಣ ಮರಿ ನೀನು ಅಲ್ವಾ ಬೆಲ್ಲ ಕೊಟ್ಟಾನು' ಅಂಥೆಲ್ಲಾ ಆಸೆ ತೋರಿ ಮುದ್ದಿಸುತ್ತಾ ತಮ್ಮ ಮೊಲೆಗಳನ್ನು ಬಾಯಿಗೆ ಕಚ್ಚಿಸುತ್ತಿದ್ದರು. ನನಗೆ ಅವರ ಬೆವರಿನ ಗಬ್ಬು ವಾಸನೆಯನ್ನು ತಡೆಯಲಾರದೆ ವಾಕರಿಕೆ ಬಂದಂತಾಗುತ್ತಿತ್ತು. ಆದರೂ ತಡೆದುಕೊಳ್ಳಬೇಕಾಗಿತ್ತು. ಒಮ್ಮೆ ಅತ್ತೆ ರಾಜನ ಕಥೆ ಹೇಳುತ್ತಿದ್ದಳು. ನಾನು ಊಂ ಕೊಳ್ಳುತ್ತಿದ್ದೆ. ಅತ್ತೆಗೆ ನನ್ನ ಬಗ್ಗೆ ಇದ್ದಕಿದ್ದಂತೆ ಏನಾಯಿತೋ ಗೊತ್ತಿಲ್ಲ. ರಾಜಕುಮಾರಿ ತಾವು ರಾಜ್‌ಕುಮಾರ ಕತೇಲಿ ಕದ್ದು ಹಾಲು ಕುಡಿಯೋಕೆ ಬಂದಿದ್ರಲ್ಲಾ ; ಅಂಗೆ ನೀನು ನನ್ ತಾವು ಹಾಲ್‌ಕುಡ್ಕೊ, ಹಾಲ್ ಕುಡಪ್ಪಾ ಅಂದಳು. ಕೈಗಳಿಂದ ನಾನು ತಡೆದು ಬೇಡ ಬೇಡವೆಂದು ಎಷ್ಟು ಹೇಳಿದರು ಕೇಳದಿದ್ದಾಗ ತಡೆಯಲಾರದೆ ನಾನು ಅವಳ ಮೊಲೆಯನ್ನು ಜೋರಾಗಿ ಕಚ್ಚಿಬಿಟ್ಟೆ. ಮೊಲೆತೊಟ್ಟಿನ ಕಪ್ಪಿನ ಸುತ್ತಲೂ ಹಲ್ಲು ಮೂಡಿ ರಕ್ತ ಬರುವಂತೆ ಊದಿಕೊಂಡು ಕೆಂಪಾಗಿತ್ತು. ನಾವು ಮಲಗಿದ್ದ ಇಡೀ ಹಜಾರ ಮೊಳಗುವಂತೆ ಜೋರಾಗಿ ಕಿರುಚುತ್ತಾ 'ಅಯ್ಯವಣೆ, ಅಯ್ಯವಣ್ಣೆ ನನ್ ಮೊಲೆ ಹೋಯ್ತು, ನನ್ ಮೊಲೆ ಹೋಯ್ತು, ಇವುನ್ ಬಾಯಿ ಸೇದೋಗ, ಎಂತ ಕೆಲ್ಸ ಮಾಡ ನೋಡ್ದ, ಸಣ್ಣ ಹೈದಾ ಅಂತ ಜೊತೇಲಿ ಮಲಿಗ್‌ಸಂತೊತ್ತೆ' ಎಂದು ಅತ್ತೆ ನಡು ಬೆನ್ನ ಮೇಲೆ ಎರಡು ಮೂರು ಬಾರಿ ಜೋರಿನಿಂದ ಗುದ್ದಿದ್ದಳು. ನಾನು ತಪ್ಪು ಮಾಡಿದೆ ಎಂದುಕೊಂಡು ಬೆನ್ನು ನೋವಾದರೂ ಉಸಿರು ಗಟ್ಟಿ ಹಿಡಿದುಕೊಂಡು ಅಳದೆ ಸುಮ್ಮನಾದೆ. ಅತ್ತೆ ಅಲ್ಲಿಂದ ಎದ್ದು ನೋವಿನಿಂದ ಮೊಲೆ ಉರಿಯುತ್ತಿರುವುದರಿಂದ ರವಿಕೆಯನ್ನು ಬಿಚ್ಚಿ ಮೊಲೆಯನ್ನು ಗಾಳಿಗೆ ಬಿಟ್ಟು ಬಾಯಿಂದ ಗಾಳಿ ಉರುಬುತ್ತಾ : ಉಚ್ಚೆ ಉಯ್ಯುವ ನೆಪದಲ್ಲಿ ಹಾಜಾರದಿಂದ ಮನೆಯ ಸೊಂಪಲಿಗೆ ನಡೆದಳು. ಅಂದಿನ ದಿನದಿಂದ ಮತ್ತೆಂದು ತನ್ನ ಮೊಗ್ಗಲಿನಲ್ಲಿ ನನ್ನನ್ನು ಮಲಗಿಸಿಕೊಳ್ಳಲಿಲ್ಲ. ಮನೆಯಲ್ಲಿ ಈ ಮೊದಲೇ ಗಲಾಟೆಯಾಗಿರುವುದರಿಂದ ಅವ್ವನಿಗೆ ಅತ್ತೆ ಒಡೆದುದರ ಬಗ್ಗೆ ನಾನು ಯಾವುದೇ ದೂರು ಹೇಳಲಿಲ್ಲ . ಆ ವಿಷಯ ನನ್ನೊಳಗೆ ಮುಲುಗಟ್ಟುತ್ತಿತ್ತು. ಒಂದೇ ಒಂದು ಉಸುರು ಬಿಡದೆ ಸುಮ್ಮನಾದೆ.

ಸುಮಾರು ವರ್ಷಗಳ ಕಾಲ ಕೇರಿಯಿಂದ ದೂರವಿದ್ದ ನಾನು ಊರೊಟ್ಟಿನ ಹಬ್ಬವಿರುವ ಕಾರಣ ಅನಿವಾರ್ಯವಾಗಿ ಕೇರಿಗೆ ಮರಳಿದ್ದೆ. ಇಷ್ಟು ವರ್ಷಗಳ ಕಾಲ

ಊರಿಂದ ಹೊರಗಿದ್ದರು ಊರು ಪೂರಾ ಬದಲಾಗಿರಲಿಲ್ಲ. ಹಾಗಾದರೂ ಬಾಲ್ಯದ ದಿನಗಳಲ್ಲಿ ನನ್ನ ಕಣ್ಣು ತುಂಬಿದ್ದ ಊರು ಇದೇ ಎಂದು ಹೇಳಲಾಗದಷ್ಟು ಹದಗೆಟ್ಟಿ ಹೋಗಿತ್ತು. ಹಿಂದಿಗಿಂತಲೂ ಕೇರಿ ಅಡ್ಡಾದಿಡ್ಡಿಯಾಗಿ ಎತ್ತ ಸರಾಗವೆನಿಸಿತೋ ಅತ್ತ ಕಡೆಯೇ ವಕ್ರವಕ್ರವಾಗಿ ಬೆಳೆದು ನಿಂತಿತ್ತು. ಕೇರಿಯ ಬಹುಪಾಲು ಮನೆಗಳಲ್ಲಿ ಎರಡು, ಮೂರು ಜನ ಹೆಣ್ಣು ಮಕ್ಕಳು ಮೈ ನೆರೆದು ಮದುವೆಗೆ ರೆಡಿಯಾಗಿ ನಿಂತಿದ್ದರು. ನಾನು ನೋಡಿದಾಗ ಚಿಕ್ಕ ಹುಡುಗರಾಗಿದ್ದವರು ಚಿಗುರು ಮೀಸೆ ಹುಡುಗರಾಗಿದ್ದರು. ಎರಡು ಹಟ್ಟಿಗಳ ಸಂದಿಯಲ್ಲಿ ಹೆಂಗಸರು, ಗಂಡಸರು ಉಚ್ಚೆ ಉಯ್ದು ಗಬ್ಬೆಳಿಸಿ ಬಿಟ್ಟಿದ್ದರು. ಆ ಕಡೆ ಮುಖ ಹಾಕಿದ ಕೂಡಲೇ ರಪ್ಪನೆಮುಖಕ್ಕೆ ಹೊಡೆದಂತೆ ಉಚ್ಚೆಯ ಚುಂಗು ಅಪ್ಪಳಿಸುತ್ತಿತ್ತು. ಕೇರಿಯಲ್ಲೆಲ್ಲ ಕೆಸರು ಕೊಚ್ಚೆ ಆವರಿಸಿತ್ತು . ಮೆಟ್ಟುಗಾಲಿನಲ್ಲಿ ಬಹಳ ಹುಷಾರಾಗಿ ಹೆಜ್ಜೆ ಹಾಕುತ್ತಾ ಹೊರಟೆ, ಕೊನೆ ಪಕ್ಷ ಮೂಗು ಮುಚ್ಚಿಕೊಳ್ಳಬೇಕೆನಿಸಿತು. ಹೆಂಗಸರು ಮಕ್ಕಳು ಹೊಲದ ಬಯಲಿನ ಕಡೆ ; ಬೇಲಿ ಮರೆಯಲ್ಲಿ ಕೂರುವುದನ್ನು ತಪ್ಪಿಸುವ ಕುರಿತು ಗ್ರಾಮಪಂಚಾಯ್ತಿ ಸದಸ್ಯ ಲೋಕೇಶನ ಜೊತೆ ಮಾತನಾಡಿದ್ದೆ. ಆತನು ನನ್ನ ಮಾತಿಗೆ ಸಮ್ಮತಿ ಸೂಚಿಸಿದ್ದ. ನಮ್ಮ ಊರಿನ ಸುತ್ತಲೂ ಹತ್ತಾರು ಕ್ವಾರಿಗಳಿದ್ದರೂ ಸುಮಾರು ವರ್ಷಗಳ ಕಾಲದಿಂದಲೂ ಕೇರಿಯ ರಸ್ತೆಗಳು ಜೆಲ್ಲಿ, ಕಲ್ಲು, ಕೆಮ್ಮಣ್ಣು ಕಂಡಿರಲಿಲ್ಲ. ಈ ಬಾರಿ ಹಬ್ಬದ ಸಡಗರದಲ್ಲಿ ಎಷ್ಟೋ ವರ್ಷದಿಂದ ಕೊರಕಲಿದ್ದ ರಸ್ತೆಗಳು ರಿಪೇರಿಗೊಂಡು ಕಂಗೊಳಿಸುತ್ತಿದ್ದವು. ಇದು ಮನಸ್ಸಿಗೆ ನೆಮ್ಮದಿ ಎನಿಸಿತ್ತು. ಕೇರಿಯನ್ನೆಲ್ಲ ಒಮ್ಮೆ ನೋಡಿದೆ. ಹಳೆಯದೆಲ್ಲ ಕಣ್ಣಿಗಿಳಿಯಿತು. ಅಷ್ಟರಲ್ಲಿ ಗೋವಿಂದಣ್ಣನ ಅಂಗಡಿಯ ಬಳಿ ಬಂದೆ. ಅಂಗಡಿಯ ಬಳಿ ಗುಂಪು ಗುಂಪಾಗಿ ಹುಡುಗರು ನಿಂತಿದ್ದರು.ನನ್ನ ಕಂಡಿದ್ದೆ ಒಂದಿಬ್ಬರು ತಲೆಮರೆಸಿಕೊಳ್ಳಲು ಪ್ರಯತ್ನಿಸಿದರು. ಮತ್ತೊಬ್ಬ ತಾನು ಸೇದುತ್ತಿದ್ದ ಸಿಗರೇಟನ್ನು ಕೈಯಿಂದಲೇ ಆರಿಸಿ ಜೇಬಿಗಿಳಿ ಬಿಟ್ಟ . ಹೊಲಗೇರಿಯ ಹುಡುಗರು ತಾವು ಸಂಘ ಕಟ್ಟಿದ ನಂತರ ಪ್ರಗತಿ ಸಾಧಿಸಿರುವ ಪ್ರತೀಕವೆನ್ನುವಂತೆ ಬೀಡಿ ಸಿಗರೇಟು, ಸೇದುವ ಅನ್ನು ಹಾಕುವ, ಚಟವನ್ನು ಹೆಚ್ಚು ಮಾಡಿಕೊಂಡಿದ್ದರು. ಕೇರಿಯ ಜನರಿಗೆ ಅವರೇ ಸದ್ಯದ ಕ್ರಾಂತಿಕಾರಿಗಳಂತೆ ಕಾಣುತ್ತಿದ್ದರು. ಈ ಹುಡುಗರು ಹಬ್ಬದ ಹೊತ್ತಿನಲ್ಲಿ ಏನಾದರೂ ಅನಾಹುತ ಮಾಡುತ್ತಾರೋ ಎನ್ನುವ ಅನುಮಾನವಿತ್ತು. ಕಳೆದ ವರ್ಷ ಗಾಂಜಾ ಸೇದುತ್ತಿದ್ದ ಗೌಡರ ಕೇರಿಯ ಹುಡುಗನೊಬ್ಬನನ್ನು ಪೊಲೀಸರು ಎಳೆದುಕೊಂಡು ಹೋಗಿದ್ದರು. ಈ ಬಗ್ಗೆ ಗುಟ್ಟಿನಲ್ಲಿ ವಿಷಯವನ್ನು ಪೊಲೀಸರಿಗೆ ತಿಳಿಸಿದ್ದವರು ಕೇರಿಯ ಸಂಘದ ಹುಡುಗರು ಎನ್ನುವುದು ಎಷ್ಟೋ ದಿನದ ನಂತರ ಗುಮಾನಿಯಾಗಿ ತಿಳಿದು ಬಂದಿತ್ತು. ಆ ಹುಡುಗರು ತೊಟ್ಟಿದ್ದ ಟೈಟ್ ಜೀನ್ಸ್ ಪ್ಯಾಂಟನ್ನು ಚಿಕ್ಕದ್ದು ಮಾಡಿಸಿಕೊಂಡಿರುವುದು ಎದ್ದು ತೋರುತ್ತಿತ್ತು. ಎಷ್ಟೋ ಹೊತ್ತಿಗೊಮ್ಮೆ ಗೌಡರ ಕೇರಿಯ ಸುಂದರವಾದ ಹುಡುಗಿಯರು ದರ್ಶನ ನೀಡುತ್ತಿದ್ದರು. ಇದು ಅಂಗಡಿ  ಬಳಿ ಇದ್ದವರಿಗೆ ತಂಗಾಳಿ ಬೀಸಿದಷ್ಟು ಖುಷಿಯಾಗುತ್ತಿತ್ತು. ನನ್ನ ಬಿ.ಎ. ಓದುವಾಗಿನ ಜೊತೆಗಾರ್ತಿ ಗೌಡರ ಮಗಳು ಪದ್ಮ ಸಿಕ್ಕಿ ತಾನು ಮೂರುಮಕ್ಕಳನ್ನು ಹಡೆದಿರುವ ಬಗ್ಗೆ ವರದಿ ಒಪ್ಪಿಸಿ, ಗೌಡರು ನನ್ನ ಜೊತೆ

ಮಾತನಾಡಬೇಕೆಂದಿರುವ ಬಗ್ಗೆ ಹೇಳಿ ಮನೆಗೆ ಕರೆದಳು. ನಾನು ಅವಳ ಮಾತಿಗೆ ಒಪ್ಪಿ ಹೆಜ್ಜೆ ಇಡುತ್ತಾ ಯಾಂತ್ರಿಕಾಗಿ ಅವಳ ಹಿಂದೆ ಹೊರಟೆ. 'ಮೈಸೂರಲ್ಲಿರೂನು ಶೋಕಿಯಾಗೆ ಇದ್ದೀಯೇ ; ನನ್ ಪಾಡ್ ನೋಡು' ಅಂದಳು.

ಗೌಡರ ಕೇರಿಗೆ ಮೊದಮೊದಲು ಅಪರೂಪಕ್ಕೆ ಅಯ್ಯನ ಜೊತೆ ಹೋಗುತ್ತಿದ್ದೆ . ಆಗ ಆಪ್ಪ, ದೊಡ್ಡಪ್ಪ ಎಲ್ಲರೂ ಗೌಡರ ಕ್ವಾರಿಯಲ್ಲಿಯೇ ಕೂಲಿ ಕೆಲಸ ಮಾಡುತ್ತಿದ್ದರು. ನನ್ನನ್ನು ಕಂಡು ಗೌಡರು ಮಾತನಾಡಿ 'ಬಾ ಮೊಗ ಇಲ್ಲಿ' ಅಂದರು. ನನಗೆ ಹಳೆಯದೆಲ್ಲ ನೆನಪಾಗಿ ಒಂದು ಕ್ಷಣ ಕಸಿವಿಸಿಯಾಯಿತು. ಮತ್ತೆ ಗೌಡರೇ, “ಏನು ಓದುತ್ತಾ ಇದ್ದೀಯೇ ಊರ್ ಕಡೆ ಬರೋದೆ ಇಲ್ಲ. ಈಗ ನಮ್ಮನ್ನೆಲ್ಲಾ ಮರೆತು ಬುಟ್ಟಿಯಾ' ಅಂದರು. ನನಗೆ ಎತ್ತಿ ಎಸೆದಂತೆ ಅನಿಸಿತು.

ನಾನು ಅಷ್ಟರಲ್ಲಿ ಹಜಾರ ದಾಟಿದ್ದೆ. ಈಗ ಗೌಡರು ಕ್ವಾರಿ ಕಡೆ ಹೋಗುತ್ತಿರಲಿಲ್ಲ . ಎಲ್ಲ ವ್ಯವಹಾರ ಶಿವಣ್ಣ ಗೌಡರದೇ ಆಗಿತ್ತು. ನಡುಮನೆಯಲ್ಲಿ ಒಂದು ಹೆಣ್ಣು ತಲೆ ಹಿಣುಕಿಸಿತು. ಗೌಡರು 'ಮೀ ತಾಯಿ ಪದ್ಮ ಟೀ ಕಾಯ್ಸು' ಅಂತ ಗಟ್ಟಿಯಾಗಿ ತೊಟ್ಟಿ ಹಟ್ಟಿಗೆಲ್ಲಾ ಕೇಳುವಂತೆ ಹೇಳಿ ಮತ್ತೆ ನನ್ನನ್ನೇ ಪ್ರಶ್ನಿಸುತ್ತಾ “ಯಾಕೋ ಮದ್ವ ಬ್ಯಾಡ ಈ ವರ್ಷ ಅಂದಿಯಂತೆ ನಿಮ್ಮತ್ತೆ ಮಗ್ಳು ಸರಳಾ ಮರಾಣಿಯಂಗದೇ, ಬರೋ ದೀವುಳ್ಗೆ ಲಗ್ನಕ್ಕೆ ಮತ್ತೆ ಆಗ್ಬುಡುವಂತೆ' ಅಂದರು. ನನ್ನನ್ನು ಮದುವೆಯಾಗಲು ಅಣಿಯಾಗಿರುವ ಹುಡುಗಿ ಸರಳೆಯನ್ನು ನೆನೆದು ಮುಜುಗರವೆನಿಸಿತು. ಗೌಡರು ತಮ್ಮ ಮಗಳು ಮತ್ತು ಅಳಿಯನ ಪುರಾಣ ಬಿಚ್ಚತೊಡಗಿದರು. ಆತ ದೊಡ್ಡ ಕಂಟ್ರಾಕ್ಟ್. ಆದರೆ ಆದಾಯವನ್ನೆಲ್ಲ ಕುಡಿದು ಹಾಳು ಮಾಡುತ್ತಿರುವ ಬಗ್ಗೆ ಹೇಳಿದರು. ಅಷ್ಟರಲ್ಲಿ ಪದ್ಮ ಟೀ ತಂದು ನನ್ನ ಮುಂದಿಟ್ಟಳು. ನಾನು ಬೇಗ ಬೇಗನೆ ಬಿಸಿಬಿಸಿ ಟೀ ಕುಡಿದು 'ಆಮೇಕೆ ಬರ್ತೀನಿ ಮಾತನಾಡುವ ಈಗ ವಸಿ ಕೆಲ್ಸ ಅದೆ ಕೇರಿಲಿ' ಅಂತ ಹೇಳಿ ಹೊರಟೆ. ದಾರಿಯಲ್ಲಿ ಬರುವಾಗ ತಲೆ ತುಂಬ ಸರಳ ತುಂಬಿಕೊಂಡಿದ್ದಳು. ಊರಿನ ಕಣದ ಹೊಲದ ಬಳಿ ಊಟ ಮಾಡುವಾಗ ತನ್ನೊಂದಿಗೆ ಆಕೆ ಒಂದೇ ತಟ್ಟೆಯಲ್ಲಿ ತಿಂದದ್ದು. ಕ್ವಾರಿಯ ಪಕ್ಕದಲ್ಲಿರುವ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗಿದ್ದಾಗ ಬೇರೆಯವರು ನಮ್ಮನ್ನ ನೋಡಿ ಪಿಸಪಿಸನೆ ಅಂದುಕೊಂಡರೂ ಮುಜುಗರ ವ್ಯಕ್ತಪಡಿಸದೆ ಆಕೆ ಇದ್ದದು. ಎಲ್ಲರೂ ಈ ಕಡೆಗೆ ಮರೆಯಾದಾಗ ಏಕಾಂತದಲ್ಲಿ ನನ್ನ ಬಲಗೈ ಹಸ್ತದ ಮೇಲ್ಭಾಗಕ್ಕೆ ತನ್ನ ನವಿರಾದ ತುಟಿಗಳಿಂದ ಮುತ್ತಿಟ್ಟದ್ದು ನನ್ನನ್ನು ರೋಮಾಂಚನಗೊಳಿಸಿತ್ತು. ಆಕೆಯ ಮೊದಲ ಮುತ್ತಿನ ಸ್ಪರ್ಶಕ್ಕೆ ತಲೆ ಗಿರನೇ ತಿರುಗಿದಂತಾಯಿತು. ನಾನು ಬೆವರಿ ಹೋದದ್ದನ್ನು ನೋಡಿ ನಕ್ಕು ಆಕೆಯೇ ಸಮಾಧಾನಪಡಿಸಿದ ಘಟನೆಗಳೆಲ್ಲ ಒಮ್ಮೆಲ್ಲೆ ಮನಸ್ಸಿಗೆ ಇಳಿದು ಕಾಡತೊಡಗಿದವು. ನಾನು ಭಾರವಾದ ಮನಸ್ಸಿನಿಂದ ಕೇರಿಯ ಕಡೆ ನಡೆಯತೊಡಗಿದೆ. ಕೇರಿಯ ತುಂಬ ಜನ ಜಮಾಯಿಸುತ್ತಿದ್ದರು. ಹಳೆಯ ಮುಖದ ಜೊತೆ ಹೊಸ ತಲೆಗಳು ತುಂಬಿದ್ದವು.

ರುದ್ರೇಗೌಡರ ಕಲ್ಲು ಕ್ವಾರಿಯಲ್ಲಿ ಕೆಲಸ ಮಾಡುವುದಾಗಿ ಹಣವನ್ನು ಸಾಲ ಪಡೆದಿದ್ದ ನಾಗರಾಜ, ಸಣ್ಣಯ್ಯ ಮತ್ತು ಮಂಚಣ್ಣ ಸಾಲ ತೀರಿಸಲಾಗದೇ ಊರು

ಬಿಟ್ಟಿದ್ದರು. ಎಷ್ಟೋ ವರ್ಷಗಳ ನಂತರ ಊರಿನಲ್ಲಿ ಹಬ್ಬವಿರುವ ಕಾರಣ ನಿನ್ನೆ ರಾತ್ರಿಯಷ್ಟೇ ಕೇರಿಗೆ ಬಂದಿದ್ದರು. ಗೌಡರ ಕೇರಿಯವರು ಒತ್ತಾಯಪೂರ್ವಕವಾಗಿ ಕಲ್ಲು ಕ್ವಾರಿಗೆ ಅವರನ್ನು ಎಳೆದುಕೊಂಡು ಹೋಗಿದ್ದರು. ಈ ವಿಷಯ ಆಗಲೇ ಸಂಘದ ಹುಡುಗರ ಕಿವಿಗೂ ಬಿದ್ದಿತ್ತು. ಆತ ಸಾಲವೆಲ್ಲವೂ ಮುಗಿದಿರುವುದಾಗಿಯೂ ; ಸಾಲಕ್ಕಿಂತಲೂ ಎರಡು, ಮೂರು ಪಟ್ಟು ಹೆಚ್ಚಾಗಿಯೇ ದುಡಿಸಿರುವುದಾಗಿ ಹೇಳುತ್ತಿದ್ದ. ಆದರೆ ಯಾರು ಅವನ ಮಾತನ್ನು ಲೆಕ್ಕಿಸುತ್ತಿರಲಿಲ್ಲ. ಪರಿಸ್ಥಿತಿ ಇದರಿಂದಾಗಿ ತುಂಬ ಜಟಿಲವಾಗಿತ್ತು.

ಕ್ವಾರಿಯಲ್ಲಿ ಕೆಲಸ ಮಾಡುತ್ತಿದ್ದ ಹೆಂಗಸೊಬ್ಬಳು ಕೇರಿಯಲ್ಲಿ ಹಬ್ಬವಿರುವ ಕಾರಣ ತಪ್ಪಿಸಿಕೊಂಡು ಬಂದು ಕೇರಿಯ ಸಂಘದ ಹುಡುಗರಿಗೆ ವಿಷಯವನ್ನು ಮುಟ್ಟಿಸಿದಳು. ಕೇರಿಯ ಸಣ್ಣಯ್ಯ, ನಾಗರಾಜನ ಜೊತೆಗೆ ಇನ್ನೂ ಮೂರ್‍ನಾಲ್ಕು ಜನರಿಗೂ ಕಾಲಿಗೆ ಸರಪಳಿಯಿಂದ ಬಂಧಿಸಿರುವ ವಿಷಯವನ್ನು ತಾವು ಅಲ್ಲಿ ಅನುಭವಿಸಿರುವ ನರಕಯಾತನೆಯನ್ನು ತೋಡಿಕೊಂಡಳು. ಸಂಘದ ಹುಡುಗರು, ರೈತ ಸಂಘದ ಪುಟ್ಟಣ್ಣ, ಮಲ್ಲೇಶಗೌಡ, ನಂಜುಂಡೇಗೌಡರ ನೇತೃತ್ವದಲ್ಲಿ ತಂತ್ರ ರೂಪಿಸಿ, ಪೊಲೀಸ್ ವರಿಷ್ಠಾಧಿಕಾರಿಗಳು, ಪೊಲೀಸರು, ಸಂಘದ ಹುಡುಗರು ಸಹಿತ ಅಚಾನಕ್ ಆಗಿ ಕ್ವಾರಿಯ ಮೇಲೆ ದಾಳಿ ಮಾಡಿದರು. ಕಲ್ಲು ಕ್ವಾರಿಯಲ್ಲಿ ವರ್ಷಾನುಗಟ್ಟಗಲೇ ಮೂಕ ಪ್ರಾಣಿಗಳಂತೆ ದುಡಿಯುತ್ತಿರುವುದನ್ನು ಕಣ್ಣಾರೆ ಕಂಡರು. ಸರಪಳಿಯಿಂದ ಬಂಧಿತನಾಗಿ ಸೈಜುಕಲ್ಲನ್ನು ಬಹಳ ನವಿರಾಗಿ ಬಿಡಿಸುತ್ತಿದ್ದ ಸಣ್ಣಯ್ಯ ಎನ್ನುವ ವಯಸ್ಸಾದ ಮುದುಕ 'ಈ ನರಕದಿಂದ ಯಾವಾಗ್ ಪಾರ್ ಮಾಡ್ತಿರಿ ನನ್ ಒಡೆಯ' ಎಂದು ರೈತ ಮುಖಂಡರ ಕಾಲಿನ ಮೇಲೆ ಬಿದ್ದ ಅವರು 'ನಾನ್ ಬಂದಿರೋದೆ ನಿಮ್ಮನ್ ಬಿಡ್ಸಕೆ, ನೀವೇನು ಹೆದುರ‍್ಕಬೇಡಿ' ಅಂತ ಸಮಾಧಾನ ಮಾಡಿದರು. ಸಣ್ಣಯ್ಯ ತಾನು ಗೌಡರು ಕೊಟ್ಟಿರುವ ಸಾವಿರ ರೂಪಾಯಿಗಳಿಗೆ ಹತ್ತು ವರ್ಷಗಳಿಂದಲೂ ಹೆಂಡತಿ ಸಮೇತ ದುಡಿದಿರುವುದಾಗಿ ಹೇಳಿದ. ಇವರಂತೆಯೇ ಕಾಲಿಗೆ ಸರಪಳಿಯಿಂದ ಬಂಧಿತರಾದ ನಾಲ್ಕಾರು ಆಳುಗಳು ಕೆಲವೇ ಮಾರು ದೂರದಲ್ಲಿ ಬಂಡೆಗಳ ಮೇಲೆ ನಿಂತು ನಿಜವಾಗಿ ಬಂಡೆಗಳಂತೆ ಕಲ್ಲು ಚಪ್ಪಡಿಗಳನ್ನು ಕಡಿಯುತ್ತಿದ್ದರು. ಕಾಲಿಗೆ ಹಾಕಿರುವ ಸರಪಳಿಗಳು ತಿಕ್ಕಿ ಗಾಯವಾಗಿ ರಕ್ತ ಮತ್ತು ಕೀವು ಕಾಲಿನಿಂದ ಜಿನುಗುತ್ತಿತ್ತು. ಈ ಅಮಾನುಷ ದೃಶ್ಯವನ್ನು ಕಂಡು ಕೇರಿಯ ಸಂಘದ ಹುಡುಗರು ನೊಂದುಕೊಂಡು 'ನೋಡಿ ಸ್ವಾಮಿ ; ನೀವೇಕಣ್ ತುಂಬ ನೋಡಿ ಸಂತೋಷ ಪಡಿ, ನಮ್ ಕೇರಿ ಜನ್ಗಳ ನಾಯ್‌ಗಳಂಗೆ ದುಡಿಸ್ತವಲ್ಲಾ !

ನಮ್ಮ ಯಾವ ಸರ್ಕಾರ ಬಂದ್ರುವೆ ; ಈ ಶಿಕ್ಷೆ ಬಂದಾನ ತಪ್ಪಿಲ್ವಲ್ಲ' ಅಂತ ರೋಪು ಹಾಕುತ್ತಿದ್ದರು. ರೈತ ಮುಖಂಡರು ಸಮಾಧಾನಪಡಿಸುತ್ತಿದ್ದರು. 'ನಾವೆಲ್ಲ ಕೂತು ಒಂದ ಇತ್ಯರ್ಥ ಮಾಡ್ತ ಅದೆ ಅಲ್ವ ಬಂದಿರೋದು' ಅಂದರು.

ಪೊಲೀಸ್ ಅಧಿಕಾರಿಗಳು ತಮ್ಮ ಜೈಲಿನಲ್ಲಿ ಖೈದಿಗಳಿಗೂ ಈ ರೀತಿಯ ಶಿಕ್ಷೆ ಕೊಡದೇ ಇರುವ ಬಗ್ಗೆ ; ದಲಿತರನ್ನು ಈ ಮಟ್ಟದಲ್ಲಿ ಶೋಷಣೆ ಮಾಡುತ್ತಿರುವ ಬಗ್ಗೆ

ಕಾರಣರಾದ ಕ್ವಾರಿಯ ಮಾಲೀಕ ರುದ್ರೇಗೌಡ ಮತ್ತು ಅವನ ಮಕ್ಕಳ ವಿರುದ್ಧ ಕೇಸು ದಾಖಲಿಸಿಕೊಂಡರು. ರೈತ ಮುಖಂಡರು ಈ ರೀತಿ ಅನ್ಯಾಯ ನಡೆಯುತ್ತಿರುವ ಬಗ್ಗೆ ನೊಂದು ಕಾರಣರಾದವರಿಗೆ ತಕ್ಕ ಶಿಕ್ಷೆ ಕೊಡಿಸುವಂತೆಯೂ, ಈ ಕ್ಷೇತ್ರದ ಶಾಸಕರು ರಾಜೀನಾಮೆ ನೀಡುವಂತೆಯೂ; ನಾಳೆಯೇ ವಿಧಾನಸೌಧದಲ್ಲಿ ಚರ್ಚಿಸುವು ದಾಗಿಯೂ ; ದಲಿತರಿಗೆ ಸೂಕ್ತ ರೀತಿಯ ಪರಿಹಾರ ನೀಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುವುದಾಗಿಯೂ ಕೇರಿಯವರಿಗೆ ಭರವಸೆ ನೀಡುತ್ತಿದ್ದರು. ಕೇರಿಯ ಹಿರಿಯನೊಬ್ಬ 'ಈ ರುದ್ರೇಗೌಡ್ರು ಯಂತ ಘಾಟಿ ಮನುಷ್ಯ ಅನ್ನೊದೂ ತಿಳಿತ ಸ್ವಾಮಿ' ಎನ್ನುತ್ತಿದ್ದ.

ಕಲ್ಲ ಕ್ವಾರಿಯ ಮೇಲೆ ದಾಳಿಯಿಂದ ವಿಷಯ ತಿಳಿದಿದ್ದೆ ತಡ ಕೇರಿಯ ಯುವಕರ ಗುಂಪೊಂದು ಕ್ವಾರಿಗೆ ನುಗ್ಗಿ ಶ್ರೀ ಚೌಡೇಶ್ವರಿ ಕ್ವಾರಿ ಎನ್ನುವ ಬೋರ್ಡ್ ಇದ್ದ ಆಫೀಸನ್ನು ಧ್ವಂಸ ಮಾಡಿತು. ನಂತರ ಪೊಲೀಸ್ ವ್ಯಾನಿನಲ್ಲಿ ಜೀತದಾಳುಗಳಾಗಿ ಬಂಧಿಯಾದ ಹತ್ತಾರು ಜನರನ್ನು ಶ್ರೀರಂಗಪಟ್ಟಣದ ಪೊಲೀಸ್ ಠಾಣೆಗೆ ಕರೆತರಲಾಯಿತು. ಕ್ವಾರಿಯ ಮಾಲೀಕ ಮತ್ತು ಮೇಸ್ತ್ರಿ ತಲೆ ತಪ್ಪಿಸಿಕೊಂಡಿದ್ದರು. ಕ್ವಾರಿಯ ಆಫೀಸಿನಲ್ಲಿದ್ದ ಆಳೊಬ್ಬ ಸಿಕ್ಕಿಕೊಂಡ ಪೀಕಾಲಾಟವಾಡುತ್ತಿದ್ದ.

ಕ್ವಾರಿಯಲ್ಲಿ ಎಳೆಯ ವಯಸ್ಸಿನ ಹುಡುಗ-ಹುಡುಗಿಯರನ್ನು ದುಡಿಸಿಕೊಳ್ಳುತ್ತಿರುವ ಬಗ್ಗೆ ಕಾರ್ಮಿಕ ಅಧಿಕಾರಿ ವಿಚಾರಣೆ ಮಾಡುತ್ತಿದ್ದರು. ಸರಿಯಾದ ಕೂಲಿ ಕೊಡದ ಬಗ್ಗೆ ನಿಕರವಾದ ಕಾಗದ ಪತ್ರಗಳಿಲ್ಲದ ಬಗ್ಗೆಯೂ ಅಧಿಕಾರಿಗಳು ತಕರಾರು ವ್ಯಕ್ತಪಡಿಸುತ್ತಿದ್ದರು. ಅವರು ಬರೆದಿಟ್ಟಿದ್ದ ಲೆಕ್ಕಪತ್ರಗಳನ್ನೆಲ್ಲವನ್ನು ಅಬ್‌ಜಕ್ಷನ್ ಮಾಡುತ್ತಿದ್ದರು. ಕ್ವಾರಿ ಆಫೀಸನ್ನು ಕೇರಿ ಹುಡುಗರು ಧ್ವಂಸ ಮಾಡಿದರು. ಗಾಳಿ ಸುದ್ದಿ ತಿಳಿದು ಗೌಡರ ಕೇರಿಯವರು ಯಕಃಶ್ಚಿತ್ ದಲಿತರಿಂದ ಆದ ಅವಮಾನಕ್ಕೆ ಪ್ರತಿಯಾಗಿ ಸೇಡು ತೀರಿಸಿಕೊಳ್ಳಲು ಹೊಲೇರ ಕೇರಿಯ ಮೇಲೆ ದಾಳಿ ನಡೆಸಿದರು. ನಿನ್ನೆಯ ಸಂಜೆಯವರೆಗೂ ಹಬ್ಬದ ಸಂಭ್ರಮದಲ್ಲಿದ್ದ ಕೇರಿ ಹೊತ್ತಾರೆ ಕ್ವಾರಿಯಲ್ಲಿ ನಡೆದ ಘಟನೆಯಿಂದಾಗಿ ರೋಧನದಲ್ಲಿ ತುಂಬಿಹೋಗಿತ್ತು. ಕ್ಯಾರಿಯಲ್ಲಿ ಆರಂಭವಾದ ಜಗಳ ಕೇರಿಯೊಳಕ್ಕೂ ಬಂದಿತ್ತು. ಗವಿಸಿದ್ದನ ಭಾವಮೈದುನ ನಾಗರಾಜ ಮನೆಯಲ್ಲಿದ್ದಾನೆಂದು ಶೋಧಿಸುವ ಸಲುವಾಗಿ ಗೌಡರ ಕೇರಿಯವರು ಕೇರಿಗೆ ನುಗ್ಗಿದ್ದರು. ಈ ಮಧ್ಯೆ ಕೇರಿಯ ಯಜಮಾನ ನಿಂಗಪ್ಪ ಮತ್ತು ಕಾಳಣ್ಣನಿಗೂ ಏಟು ಬಿದ್ದಿತು. ಈ ಗಲಾಟೆಯಿಂದಾಗಿ ಕೇರಿಯ ವಾತಾವರಣ ಕದಡಿ ಬಗ್ಗಡವಾಗಿತ್ತು .

ಕ್ವಾರಿಯಲ್ಲಿ ಜೀತ ಮಾಡಿಸಿರುವುದಲ್ಲದೆ ಈಗ ಕೇರಿಯಲ್ಲಿಯೂ ದೊಂಬಿ ಗಲಾಟೆ ಎಬ್ಬಿಸಿರುವ ಬಗ್ಗೆ ಪೊಲೀಸ್ ಸ್ಟೇಷನ್ನಿಗೆ ಯಾರೋ ದೂರು ನೀಡಿದ್ದರು. ಕನ್ನಂಬಾಡಿ ಕಟ್ಟೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಚಂದ್ರಶೇಖರ್, ಸರ್ಕಲ್ ಇನ್ಸ್‌ಪೆಕ್ಟರ್ ಸುಂದರರಾಜ್, ದಫೇದಾರ ದೊಡ್ಡ ತಿಮ್ಮಯ್ಯ ಪೇದೆ ಬೋಪಯ್ಯ ಮೊದಲಾದವರು ಖುದ್ದಾಗಿ ಹಳ್ಳಿಗೆ ಬಂದಿದ್ದರು. ಈ ತನಕವೂ ವಾಹನದ ಸ್ಪರ್ಶವೇ ಇಲ್ಲದ ತಬ್ಬಲಿ ಹಳ್ಳಿಗೆ

ಜೀವ ಬಂದದ್ದು ಹಳ್ಳಿಯ ಇತಿಹಾಸದಲ್ಲಿ ಇದೇ ಮೊದಲಾಗಿತ್ತು. ಜೀತ ಪ್ರಕರಣಕ್ಕೆ ಕಾರಣರಾದ ಗೌಡರ ಕೇರಿಯ ಎಷ್ಟೋ ಜನ ಪೊಲೀಸರು ಬರುವ ಸುದ್ದಿ ತಿಳಿದು ತಲೆ ಮರೆಸಿಕೊಂಡಿದ್ದರು. ಕಂಪ್ಲೇಟು ಕೊಟ್ಟಿದ್ದ ಕೇರಿಯ ಹುಡುಗರು ರಾಜರೋಷವಾಗಿ ತಿರುಗಾಡುತ್ತಿದ್ದರು. ಎಷ್ಟೋ ತಲೆಮಾರುಗಳಿಂದ ಅಣ್ಣ ತಮ್ಮಂದಿರಂತೆ ಅನ್ನೋನ್ಯವಾಗಿದ್ದ ಕೇರಿಗಳ ಸಂಬಂಧ ಕ್ವಾರಿಯ ಘಟನೆಯಿಂದಾಗಿ ಯಾದವ ಕುಲದವರು ಚೇಣಿ ಕಡ್ಡಿಯಿಂದ ಹೊಡಿದಾಡಿ ಸತ್ತ ಕ್ರಿಯೆಯಂತಾಗಿತ್ತು .

ಈಗ ಊರಿನಲ್ಲಿ ಹಬ್ಬ ನಡೆಯುವ ಬಗ್ಗೆ ಕೇರಿಯ ಜನ ಅನುಮಾನ ಹೊಂದಿದ್ದರು. ಕೇರಿಯ ಜನ ಎದ್ದು ತಮ್ಮ ದಿನನಿತ್ಯದ ಕೆಲಸಕ್ಕೆ ತೊಡಗಿಸಿಕೊಳ್ಳುವ ಮೊದಲೇ ಪೊಲೀಸ್ ವ್ಯಾನೊಂದು ಊರ ಮಧ್ಯದ ಮಾರಿಗುಡಿ ಬಳಿ ಬಂದು ನಿಂತಿತ್ತು. ಅದರ ಹಿಂದೆಯೇ ಪೊಲೀಸ್ ಜೀಪೊಂದು ಹಾರನ್ ಮಾಡುತ್ತ ರಭಸವಾಗಿ ಬಂದಿತು. ಕೂಡಲೇ ಮಾರಿಗುಡಿಯ ಕಲ್ಲು ಬೆಂಚಿನ ಮೇಲೆ ಎಳೆ ಬಿಸಿಲು ಕಾಯುತ್ತ ಕುಳಿತಿದ್ದ ಹುಡುಗರು ಪೇರಿ ಕಿತ್ತರು. ವ್ಯಾನಿನಿಂದ ಪೊಲೀಸರು ದಿಕ್ ದಿಕ್ಕೆ ಅಂತ ಹೆಜ್ಜೆ ಹಾಕುತ್ತ ಒಂದೇ ಸಮನೇ ಒಂದು ಕೈಲಿ ಲಾಟಿ ಮತ್ತೊಂದು ಕೈಲಿ ಟೋಪಿ ಹಿಡಿದುಕೊಂಡು ಇಳಿಯುತ್ತಿದ್ದರು. ಜೀಪಿನಲ್ಲಿದ್ದ ಪೇದೆಯೊಬ್ಬ ತನ್ನ ಕಟ್ಟಿಗೆಯಂತಹ ಕೈಯಿಂದ ಮೈಕಿಡಿದುಕೊಂಡು ಸಾರುತ್ತಿದ್ದ. ಇವತ್ತೊಂದು ದಿನ ಟೈಂ ಕೊಡ್ತೀವಿ. ನೀವೇ ಬಂದು ಸರಂಡ ಆದ್ರಿ ಸರಿ ಹೋಯ್ತು, ಇಲ್ಲ ಅಂದ್ರೆ ನಿಮ್ ಹಳ್ಳಿಲಿರೋ ಒಂದ್ ನರಪಿಳ್ಳೆನೂ ಬಿಡದಂಗೆ ಅರೆಸ್ಟ್ ಮಾಡಿ ಬಿಡ್ತೀವಿ ಅಂತ ಜಬರದಸ್ತಾಗಿ ಗುಡುಗುತ್ತಿದ್ದ . ಪಕ್ಕದ ಸೀಟಿನಲ್ಲೇ ಎಸ್.ಐ. ಕುಳಿತಿದ್ದರು.

ಮಾರಿಗುಡಿಯ ಕಲ್ಲು ಚಪ್ಪಡಿಯ ಮೇಲೆ ಕುಳಿತುಕೊಂಡ ಬೋಪಯ್ಯ ಎಂಬ ಹೆಡ್ ಕಾನ್‌ಸ್ಟೇಬಲ್ ಕೇರಿಯ ಹಿರಿಯರಾದ ಜವರಯ್ಯ ಮತ್ತು ನಿಂಗಪ್ಪನ ಬಳಿ ವಿವರವಾದ ಹೇಳಿಕೆ ತೆಗೆದುಕೊಳ್ಳುತ್ತಿದ್ದನು. ಮುಖ್ಯವಾಗಿ ಹೊಲೇರ ಕೇರಿಯಿಂದ ಕ್ವಾರಿಯ ಕಲ್ಲು ಕೆಲಸಕ್ಕೆ ಎಷ್ಟು ಜನ ಹೋಗುತ್ತಾರೆ ಎನ್ನುವ ಬಗ್ಗೆ ದಿನಗೂಲಿಯ ಆಧಾರದ ಮೇಲೆ ವಾರದಾಳಿಗೆ, ತಿಂಗಳು ಸಂಬಳದ ಮೇಲೆ ಎಷ್ಟೆಷ್ಟು ಜನ ಹೆಂಗಸರು, ಗಂಡಸರು, ಮಕ್ಕಳು ಹೋಗುತ್ತಿರುವ ಕುರಿತು ವಿವರ ಪಡೆದುಕೊಳ್ಳುತ್ತಿದ್ದ ಮತ್ತು ಕ್ವಾರಿಯಲ್ಲಿ ಜೀತವಿರುವ ಬಗ್ಗೆ ಸುದೀರ್ಘ ಹೇಳಿಕೆ ಕೂಡ ಅನಿವಾರ್ಯವಾಗಿತ್ತು. ಅಂತಿಮವಾಗಿ ಪೇದೆಗೆ ಕ್ವಾರಿಯ ಜಗಳ ಸಾಲದ ಹಣದ ವಿಚಾರವಾಗಿ ಆರಂಭವಾದುದಲ್ಲ ; ಇದಕ್ಕೆ ಯಾವುದೋ ಹೆಂಗಸ್ಸಿನ ಸಂಬಂಧದ ಕಾರಣ ಇಷ್ಟೆಲ್ಲಾ ರಣರಂಪವಾಗಿರಬೇಕು ಎನ್ನುವ ಅನುಮಾನದ ಸುಳಿವು ಹೊಳೆಯತೊಡಗಿತು. ದಫೇದಾರ ನಗುತ್ತ ಇಂಥ 'ಕೇಸೆಲ್ಲಾ ಹೆಂಗಸ್ಸರಿಂದ್ದೆ ಅಲ್ವಾ ಸಾ ; ಮಭಾರತಾ ರಾಮಾಯಣ ನಡೆದುದ್ದೇ ಅದ್ರಿಂದಲ್ವಾ ಸಾ' ಅಂದನು. ಇವನ ಮಾತಿನಿಂದ ರೇಗಿಹೋದ ಇನ್ಸ್ಪೆಕ್ಟರ್ ಸರಿಯಾಗಿ ವಿವರಣೆ ಪಡ್ಕಳೀ ಸುಮ್ನೇ ನೀವ್ಯಾಕ್ ತಲೆ ತೂರಿಸ್ತೀರಿ" ಎಂದರು. ಆಯ್ತು ಸಾರ್ ಎಂದು ಸೆಲ್ಯೂಟ್ ಹೊಡೆದು ಮತ್ತೆ ಮಾತನಾಡದೇ ಆತ ಆ ಕಡೆ ಗುಂಪಿನತ್ತ ಹೋದ.

ಕೇರಿಯ ಜಗಳದಲ್ಲಿ ರುದ್ರೇಗೌಡನ ಭಾವಮೈದುನದಿಂದ ಒದೆ ತಿಂದಿದ್ದ ಕೇರಿಯ ರೋಗಿಷ್ಠ ಚಲುವ ಕೇರಿಯಲ್ಲಿ ನಡೆದುದನ್ನೆಲ್ಲ ವಿವರವಾಗಿ ಒಂದೇ ಉಸುರಿಗೆ ಹೇಳಿ ಬರೆಸುತ್ತಿದ್ದ. ಕಲ್ಲು ಕ್ವಾರಿಯಲ್ಲಿ 'ತನ್ನಪ್ಪನೂ ಜೀತದಾಳಾಗಿ ದುಡಿಯುತ್ತಿರುವುದಾಗಿಯೂ ಕಲ್ಲು ಸಿಡಿಸುವಾಗ ಒಂದು ಕಾಲು ಐಬಾಗಿರುವ ಬಗ್ಗೆ ಪರಿಹಾರ' ಕೊಡಿಸುವಂತೆ ಗೋಗರೆದ. ಅದು ಅಲ್ಲದೇ 'ಕ್ವಾರಿಯ ಕೆಲ್ಸಕ್ಕೆ ಹೋಗುವ ನಮ್ ಜಾತಿ ಹೆಣ್ ಮಕ್ಳು ಮಾನಭಂಗ ಮಾಡಿದ್ರಂತೆ ಮೇಗಳ ಕೇರಿಯವು ; ಅದನ್ನು ನಮ್ ಕೇರಿಯ ಸಣ್ಣಯ್ಯ ನೋಡಿದಂತೆ ಅದ್ರೆ ಈ ವಿಷ್ಯ ಊರೆಲ್ಲಾ ಹಬ್ಬುತ್ತದೆ ಅಂತ ಅವ್ರ ಕಾಲೆ ಸರಪಳಿ ಹಾಕಿ ಕಟ್ಹಾಕಿದ್ರಂತೆ ಸ್ವಾಮಿ' ಎಂದು ಹೇಳಿದ. ಕೇರಿಯ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವಿವರಣೆ ನೀಡುತ್ತಿರುವ ಬಗ್ಗೆ ಅನುಮಾನ ಬಂದು 'ಬೋಳಿ ಮಗ್ನ ಸರಿಯಾಗಿ ಹೇಳು ; ಕೇಸನ್ನೇ ಉಲ್ಟಾಪಲ್ಟಾ ಮಾಡೋಕೆ ನೋಡ್ತೀಯಲ್ಲಾ ನಿನ್ನ ಒದ್ದು ಒಳಿಕೆ ಹಾಕ್ತಿನಿ' ಅಂದರು. ಚಲುವ ಹೆದರಿ ಚಡ್ಡಿಯಲ್ಲಿಯೇ ಉಚ್ಚೆ ಮಾಡಿಕೊಂಡು 'ನಂಗೆ ಕ್ವಾರಿ ವಿಷ್ಯ ಗೊತ್ತಿಲ್ಲ ನನ್ ಬುಟ್ ಬುಡಿ ಬುದ್ಧಿ' ಅಂತ ತಿರುಗಿ ನೋಡಿಕೊಂಡು ಕೇರಿಯ ಕಡೆ ಬಿರಬಿರನೇ ಹೋಗಿ ಗುಡಿಸಲು ಸೇರಿಕೊಂಡ. ಸರಿಯಾದ ಸುಳಿವು ಸಿಕ್ಕದೇ ಹೋದ ಕಾರಣ ಪೇದೆ ಹಾಗೆಯೇ ಮುಂದೆ ಹುಡುಗರ ಗುಂಪಿನತ್ತ ಹೋದರು.

ಕ್ವಾರಿಯಲ್ಲಿ ಮಾತ್ರವಲ್ಲದೆ ಕೇರಿಯಲ್ಲಿಯೂ ನೆಮ್ಮದಿಯಿಂದ ಇರಲು ಬಿಡದೇ ಈ ರೀತಿ ದೌರ್ಜನ್ಯವೆಸಗಿರುವ ಬಗ್ಗೆ ಕೇರಿಯವರು ಪೊಲೀಸರಿಗೆ 'ನೋಡಿ ಸ್ವಾಮಿ ನಮ್ ಜನಗಳ್ ಬಾಳ ನಾಯಿಗಿಂತ ಕೀಳಾಗೋಯ್ತುಲ್ಲಾ' ಎಂದರು. ಕಾಲಿನ ಸರಪಳಿಗಳಿಂದ ಬಂಧಿಯಾಗಿದ್ದ ಮತ್ತೊಬ್ಬ ಜೀತುದಾಳು ಅಳುತ್ತಾ 'ನಮ್ ಜೀವ್ ಮಾನದಲ್ಲೇ ಇನ್ನೊಂದ್ ಸರಿ ನಾವು ನಿಮ್ಮುನ್ನೆಲ್ಲಾ ನೋಡ್ತೀವಿ ಅಂತ ಕನ್ಸು ಕಂಡಿಲ್ಲಾ ಸಾ. ಇದೆಲ್ಲಾ ರಾತ್ರಿ ಸ್ವಪ್ನದಲ್ಲಿ ನಡೆದಂಗೆ ಆಯ್ತು. ಸಲೆ ಯೇನ್ ಪಟ್ಲದಲ್ಲಿ ಶಿಕ್ಷೆ ನಡಿತ್ತದೆ ಅಂತಿದ್ರು ; ಅದ್ ನಮ್ ಗೌಡ್ರ ಕ್ವಾರೀಲೆ ಕಾಣ್ಣು ನಮ್ಮ' ಅಂದು ಕಣ್ಣೀರು ಸುರಿಸುತ್ತ ತನ್ನ ಮಕ್ಕಳನ್ನು ತಬ್ಬಿಕೊಂಡು ಗೋಳಾಡಿದ. ಗುಂಪಿನಲ್ಲಿದ್ದವರು ಸಮಾಧಾನಪಡಿಸುತ್ತಿದ್ದರು. ಯಾಕೋ ಕ್ವಾರಿಯಲ್ಲಿ ಆದದ್ದನ್ನು ನೆನಸಿಕೊಂಡಾಗಲೆಲ್ಲ ಒಳಗೊಳಗೆ ಭಯ, ನಡುಕ, ಇದು ನಿಜವೋ ಕನಸೋ ಎನಿಸುತ್ತಿತ್ತು. ಎಷ್ಟೋ ಸಾರಿ ಕ್ವಾರಿಯಿಂದ ರಾತ್ರೋ ರಾತ್ರಿ ಆಳುಗಳು ಕದ್ದು ಹೋಗಿರುವ ಪ್ರಕಣಗಳಿದ್ದವು. ಎಷ್ಟೇ ಕಟ್ಟುನಿಟ್ಟಾಗಿ ಕಾವಲು ಕಾದರೂ ಕೇರಿಯ ಗಂಡಸರು ರಾತ್ರಿ ಕೇರಿಗೆ ಬಂದು ಹೆಂಡತಿ ಮಕ್ಕಳಿಗೆ ಹಣ ಕೊಟ್ಟು, ಮಾತನಾಡಿಸಿಕೊಂಡು ಹೊತ್ತು ಮೂಡುವ ಸಮಯಕ್ಕೆ ಕ್ವಾರಿ ಸೇರುತ್ತಿದ್ದರು. ವೆಂಕಟೇಶನು ಈ ಮಧ್ಯೆ ರಾತ್ರೋ ರಾತ್ರಿ ಕದ್ದು ಹೊರಟಿದ್ದ. ದುರಾದೃಷ್ಟವಶವೆನ್ನುವಂತೆ ಎದುರುಗಡೆ ಕ್ವಾರಿಗೆ ಬರುವ ಲಾರಿ ಕಾಣಿಸಿತು. ಕಾಲಿಗೆ ಕಟ್ಟಿದ್ದ ಸರಪಳಿ ಎಳೆದುಕೊಂಡು ನಿಧಾನವಾಗಿ ಹೆಜ್ಜೆ ಇಡುತ್ತಿದ್ದವನನ್ನು ಮತ್ತೆ ಎಳೆದುಕೊಂಡು ಬಂದು ಕದ್ದು ಹೋದ್ರೆ ಬುಟ್‌ಬುಟ್ಟಾರಾ ನಿನ್ನ ಅಪ್ಪು ಸುಲುಬ್‌ಲಿ ನಿಮ್ಮಪ್ಪ ಬಂದು ಸಾಲ ತೀರ್‍ಸನಾ ವಡ್ಡಾನನ್ ಮಕ್ಳ ಅಂತ ದರದರನೆ ಎಳೆದು ತಂದು ಕಾಲಿನಲ್ಲಿದ್ದ ಸಣ್ಣ ಸರಪಳಿ ತೆಗೆದು ದೊಡ್ಡ ಸರಪಳಿ ತೊಡಿಸಿರುವುದಾಗಿ ಹೇಳಿದ. ಆಗ

ಕಾಲಿಗೆ ಆದ ಗಾಯ ವಾಸಿಯಾಗಿರದೇ ನೀರಾಡುತ್ತಿರುವುದನ್ನು ಸಾಹೇಬರಿಗೆ ತೋರಿಸಿದ. ವೆಂಕಟೇಶ ತನ್ನ ಜೇಬಿನಲ್ಲಿದ್ದ ಮಾಸಿದ ಲೆಕ್ಕದ ಚೀಟಿಯೊಂದನ್ನು ತೆಗೆದು ತೋರಿಸಿದ.

ಕಾರ್ಮಿಕ ಅಧಿಕಾರಿ ಚಾಚುತಪ್ಪದೇ ಎಲ್ಲವನ್ನೂ ಬರೆದು ಕೊಳ್ಳುತ್ತಿದ್ದರು. ಗಂಡಸರ ವಿಚಾರಣೆ : ಹೇಳಿಕೆ ಪಡೆದ ನಂತರ ಹೆಂಗಸರ ಬಳಿ ಬಂದು ನೀವು ವಾರಕ್ಕೆ ಎಷ್ಟು ಬಟಾವಾಡೆ ಪಡಿತಿದ್ರಿ ಹೇಳಿ, ಬಟವಾಡೆ ಪಡೆದಿದ್ದರಲ್ಲವೇ? ಹೇಳುವುದು ಸೊರಗುತ್ತಲೇ ನಿಂಗಕ್ಕ 'ಸ್ವಾಮಿ ಈ ಕ್ವಾರಿಗೆ ಬಂದು ಸೇರಿದ ದಿನದಿಂದಲೂ ಒಂದು ರೂಪಾಯಿ ಕಾಸು ಅಂತ ಕೊಟ್ಟಿಲ್ಲ. ಹೊಟ್ಟೆಗೆ ರೇಷನ್ ಕೊಟ್ಟವೆ' ಅಷ್ಟೆ ಅಂದಳು. ಅಧಿಕಾರಿ ನೀನು ಎಷ್ಟು ವರ್ಷ ಈ ಕ್ವಾರೀಲಿ ಕೆಲಸ ಮಾಡಿದ್ದಿಯೇ? ಅಂದರು. 'ಸ್ವಾಮಿ ನನ್ ಮಕ್ಳ  ಸಾಕ್ಷಿಯಾಗಿ ಸತ್ಯ ಹೇಳ್ತಿನಿ. ನಾಲ್ಕು ವರ್ಷ' ಸ್ವಾಮಿ ಅಂದಳು. ಅವಳ ಒಂದೊಂದು ಮಾತು ಅಂತರಾಳದಿಂದ ಬಂದವು. 'ಹಣ ಕೇಳಿದ್ರೆ ಎಲ್ಲಾ ಬಡ್ಡಿಗೆ ಜಮಾ ಆಯ್ತು' ಅಂತಾರೆ ಅಂದಳು. ಆಯ್ತು ನಿನ್ ಹೇಳಿಕೆ, ಇಲ್ಲ ಕುಳಿತು ಕೊ ಅಂತ ಕೂರಿಸಿ ಮತ್ತೊಬ್ಬರ ಬಳಿಗೆ ಬಂದರು. ಹೊಲೇರ ಕರಿಯಣ್ಣನ ಹೆಂಡತಿ, ಸಣ್ಣಕ್ಕ 'ವರ್ಷಾಗಲ್ ಹಬ್ಬದಲ್ಲಿ ನಮ್ ಗ್ರಾಮ್ ದೇವುನಾದ್ರೂ ನೋಡ್ಲಿಕ್ಕೆ ಹೋಗ್ತಿನಿ ಅಂದ್ರೆ ; ಎಲ್ಲೂಗೂ ಹೋಗೋದ್ ಬ್ಯಾಡ ಕ್ವಾರೀಲಿ ಬಿದ್ದೀರಿ' ಅಂದ್ರು ಅಂತ ಅಳುತ್ತ ಹೇಳಿದಳು. ಅವಳು ಅಳುತ್ತಿದ್ದ ಮಗುವಿಗೆ ಮೊಲೆ ಉಣ್ಣಿಸಿದಳು. ಅವಳ ಪಕ್ಕದಲ್ಲಿ ಕುಳಿತಿದ್ದ ಹೆಂಗಸು ಮಗೀಗೆ ಉಸಾರಿಲ್ಲ ಆಸ್ಪತ್ರೆಗೆ ವೊಯ್ತಿನಿ ಅಂದ್ರೆ, ರುದ್ರೇಗೌಡ್ರು ಸತ್ರೆ ಇಲ್ಲಿ ಕ್ವಾರೀಲಿ ವಪ್ಪ ಮಾಡುವಂತೆ ಎಂದುದನ್ನು ; ತನ್ನ ಮಗುವಿಗೆ ವಾರದಿಂದಲೂ ಚಳಿ ಜ್ವರ ಬಂದಿರುವ ಬಗ್ಗೆ ಹೇಳಿದಳು. ಈಗ ಔಷಧಿ ಕೊಡಿಸುವುದಕ್ಕೆ ಆಸ್ಪತ್ರೆಗೆ ಹೋಗಲು ಆತುರ ಪಡುತ್ತಿದ್ದಳು. ಸರ್ಕಾರಿ ಅಧಿಕಾರಿಗಳು ನಡೆದದ್ದೆಲ್ಲ ಕೇಳುತ್ತಾ ವಿವರವಾಗಿ ಬರೆದುಕೊಳ್ಳುತ್ತಿದ್ದರು.

ದಲಿತರು ಮತ್ತು ಸವರ್ಣಿಯರ ನಡುವಿನ ಜಗಳವಾದುದರಿಂದ ಎಲ್ಲಿ ಮಿತಿ ಮೀರಿ ಬೇರೆ ಊರುಗಳಿಗೂ ಕೋಮು ಗಲಭೆ ಹಬ್ಬುತ್ತದೆಯೋ ಎಂದುಕೊಂಡು ಮುನ್ನೆಚ್ಚರಿಕೆ ಕ್ರಮವಾಗಿ ಮಂಡ್ಯದ ಎಸ್.ಪಿ. ಸಾಹೇಬರಿಗೆ ಸರ್ಕಾರದಿಂದ ತಂತಿ ಸಂದೇಶವೊಂದು ಬಂದಿತ್ತು. ಈ ಕಾರಣದಿಂದಗಿಯೇ ಏನೋ ಎಸ್.ಪಿ. ಯವರೇ ಖುದ್ದಾಗಿ ಕೇರಿಯ ರಕ್ಷಣೆಗೆ ಬಂದಿದ್ದರು. ಕಲ್ಲ ಕ್ವಾರಿ ಜೀತಿ ಪ್ರಕರಣದಿಂದಾಗಿ ಕೇರಿ ತುಂಬ ಭಯದ ಕರಿನೆರಳು ಮುಸುಕಿತ್ತು. ನಿನ್ನೆ ಸಂಜೆಯೇ ಹೊಲಗೇರಿಗೆ ರಕ್ಷಣೆ ಒದಗಿಸಲು ಬಂದಿದ್ದ ಪೇದೆಗಳು ಮಾಸಲು ಬಟ್ಟೆ, ಚಿಂದಿ ತೊಟ್ಟು ಅರೆನಗ್ನರಾಗಿದ್ದ ಕೇರಿಯ ಹೆಂಗಸರು ಮುಕ್ಕಳನ್ನು ನೋಡಿ ಕನಿಕರವೊಂದು ಲಾಠಿ ಚಾರ್ಜು ಮಾಡಲು ಮನಸ್ಸಾಗದೆ ಸುಮ್ಮನಾಗಿದ್ದರು. ಒಳಗೊಳಗೆ ಸಂಕಟ ಪಡುತ್ತಿದ್ದರು. ಒಬ್ಬ ಹಿರಿಯ ಪೇದೆ, 'ಏಲ್ ಬೇಕಾದ್ರೂ ಡ್ಯೂಟಿ ಮಾಡ್‌ಬಹುದು ಈ ಜಾತಿ ಗಲಾಟೆಲ್ ಮಾತ್ರ ಡ್ಯೂಟಿ ಮಾಡೋದ್ ಬಲು ಕಷ್ಟ ಅಂತ ವಿಷಾಧದಿಂದ ಹೇಳಿದ. ಅವನ ಮುಖ ಕಪ್ಪಾಗಿತ್ತು.

ಗೌಡರ ಕೇರಿಯಲ್ಲಿ ವಿಚಾರಣೆಗಾಗಿ ಕೇಳಿದರೂ ಯಾರೂ ತುಟಿ ಬಿಚ್ಚಲಿಲ್ಲ . ಅಲ್ಲಿಯೂ ಭಯದ ವಾತಾವರಣ ಹರಡಿತ್ತು. ಹೀಗಿರುವಾಗಲೇ ಹೊಲಗೇರಿಯ

ಕಡೆಯಿಂದ ಇದ್ದಕ್ಕಿದ್ದಂತೆ ಗೊಳೋ ಅಂತ ಅಳುವುದು, ಕಿರುಚಿಕೊಳ್ಳುವುದು ಪೊಲೀಸರ ಕಿವಿಗಳಿಗೆ ರಪ್ಪನೆ ಬಡಿದಂತಾಯಿತು. ಕೇರಿ ಅಳುವಿನ ರೋಧನದಲ್ಲಿ ಮುಳುಗಿ ಹೋಗಿತ್ತು . ಕೇರಿಯ ಹೆಂಗಸರು ಎಷ್ಟು ಗೋಗರೆದರು, ದುಃಖತೋಡಿಕೊಂಡರೂ, ನಾಲ್ಕೈದು ಪೇದೆಗಳು ತಡೆದರೂ ಕೇರು ಮಾಡದೇ ಗೌಡರ ದಾಂಡಿಗರು ಕೇರಿಯ ಗುಡಿಸಲುಗಳಿಗೆ ನುಗ್ಗಿ ಸಂಘದ ಹುಡುಗರು ಅಡಗಿರುವ ಬಗ್ಗೆ ಶೋಧಿಸುತ್ತಿದ್ದರು. ಒಬ್ಬ ಕೇರಿಯ ಹೆಂಗಸ್ಸು ತನ್ನ ಮಗನನ್ನು ಎಳೆಯಲು ಬಂದ ಗೌಡರ ಕೇರಿಯ ಹುಡುಗನ ಕೈ ಕಚ್ಚಿದ್ದೆ. ಅವರ ಸಿಟ್ಟಿಗೆ ಕಾರಣವಾಗಿತ್ತು. ಇದ್ದಕ್ಕಿದ್ದಂತೆ ಕೇರಿಯ ಬಲಭಾಗದಲ್ಲಿ ದಿಗ್ಗನೇ ಬೆಂಕಿ ಕಾಣಿಸಿಕೊಂಡಿತು. ಕೇರಿಯ ಹೈಕಳು ಇದು ಗೌಡ್ರ ಕೇರಿಯವ್ರ ಕೆಲ್ಸ ಅಂದರು. ಸಿದ್ದಮ್ಮ ಎನ್ನುವ ನಡುವಯಸ್ಸಿನ ಹೆಂಗಸು ಓಡೋಡಿ ಬಂದು ಎಸ್.ಪಿ. ಸಾಹೇಬರ ಬೂಟಿನ ಕಾಲಿನ ಮೇಲೆ ಮಕಾಡೆ ಬಿದ್ದಳು. 'ಸ್ವಾಮಿ ನಮ್ಮಾನ ಪ್ರಾಣ ಎಲ್ಲ ನಿಮ್ ಕೈಲದೆ, ಉಳಿಸಿ ಕೊಡಂಗಿದ್ರೆ ಉಳಿಸ್ಕೊಡಿ ಇಲ್ಲಾಂದ್ರೆ ನೀವೇ ನಿಂತ್ ಗೌಡ್ರುಗೆ ಹರಾಜ್ ಹಾಕ್‌ಬುಡಿಬುದ್ಧಿ' ಅಂತ ಅಂಗಲಾಚಿದಳು. ಅವಳ ಸ್ವರ ತಾರಕ್ಕಕೇರಿತು. ಅರೆ ಹೊಟ್ಟೆಯಲ್ಲಿದ್ದ ನಮಗೆ ರಕ್ಷಣೆ ನೀಡಿ ಸ್ವಾಮಿ ಎಂದಳು. ಅವಳ ಕೈ ಬಳೆ ನರುಕಿ ಹೋಗಿದ್ದವು. ಕೈ ಮೊಳಸಂದುಗಳು ಕಿತ್ತು ರಕ್ತ ಜಿನುಗುತ್ತಿತ್ತು. ಸಾಹೇಬರಿಗೆ ಈ ಅನಿರೀಕ್ಷಿತ ಬೆಳವಣಿಗೆ ಗಾಬರಿ ತರಿಸಿತು. ಇಷ್ಟರೊಳಗೆ ಜನರ ಗುಂಪೊಂದು ಜವರಯ್ಯ ಎನ್ನುವ ಕೇರಿಯ ಮುದುಕನನ್ನು ಹೊತ್ತುಕೊಂಡು ಬಂದು ನಡುಬೀದಿಯಲ್ಲಿ ಅಂಗಾತ ಮಲಗಿಸಿದರು. ಮೂಗಿನಿಂದ ರಕ್ತ ಧಾರಾಕಾರವಾಗಿ ಹರಿಯುತ್ತಿತ್ತು . ಯಾರೋ ಹೆಂಗಸು 'ಮೂಗಿನ ಸೆಲೆ ಆಗಿದೆ' ಎಂದಳು. ಇನ್ಯಾರೋ ಅದು 'ಮೂಗಿನ ಸಲೆ ಅಲ್ಲ ಗೌಡರ ಕೇರಿಯ ಕುಮಾರ ಮೂಗಿಗೆ ಡಿಚ್ಚಿ ಹೊಡೆದುದು' ಅಂದಳು. ಎಸ್.ಪಿ. ಸಾಹೇಬರ ಕಣ್ಣು ಮುಂದೆಯೇ ನಡೆದ ಈ ರೀತಿ ಘಟನೆ ತಮ್ಮ ಇಪ್ಪತ್ತು ವರ್ಷದ ಸರ್ವಿಸ್‌ನಲ್ಲಿ ಇದೇ ಮೊದಲಾಗಿತ್ತು. ಸಾಹೇಬರು ಯಾವುದಕ್ಕೂ ಇರಲಿಂತ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲು ವ್ಯವಸ್ಥೆ ಮಾಡಿದರು. ಆ ಕೂಡಲೇ ಹೆಂಗಸೊಬ್ಬಳು ಲಬಲಬನೇ ಬಾಯಿ ಬಡಿಯುತ್ತ 'ನಮ್ ಮಾವನ್ ಪ್ರಾಣ ತಗುದ್‌ಬುಟ್ರಾಲ್ಲಾ ಕೊನೆಗೂ' ಅಂತ ಮಣ್ಣಿನ ಮೇಲೆ ಬಿದ್ದು ಹೊರಳಾಡುತ್ತ ಶಾಪ ಹಾಕುತ್ತಿದ್ದಳು. ಇನ್ನೊಂದು ನಡುವಯಸ್ಸಿನ ಪ್ರಾಯದ ಹೆಣ್ಣು ಸಾಹೇಬರ ಮುಂದೆ ಬಂದು 'ನಮ್ಮಾನ ಕಾಪಾಡಿ ಬುದ್ಧಿ' ಎಂದು ತನಗಾದ ಅವಮಾನವನ್ನು ಅರೆ ಬೆತ್ತಲೆಯಾದ ಮೈಯನ್ನು ಭೂಮಿಗೆ ಚೆಲ್ಲಿದಳು. ಇದ್ದಕ್ಕಿದ್ದ ಹಾಗೆ ಕೇರಿಯಲ್ಲ ಮೊಳಗುವಂತೆ ಹೈಕಳು ಅಳತೊಡಗಿದರು. ತಮ್ಮ ಕಣ್ಣೆದುರಿಗೆ ನಡೆದ ಈ ಭೀಭತ್ಸ ಘಟನೆಯಿಂದ ಕೋಪಗೊಂಡು ಅಧಿಕಾರಿಗಳು ಕ್ರಮಕೈಗೊಳ್ಳತೊಡಗಿದರು. ಆಕೆಯ ಮಾತು ಕೇಳಿ ಅಲ್ಲಿದ್ದವರೆಲ್ಲಾ ಕಣ್ಣೀರು ಸುರಿಸಿದರು. ಆಕೆ ಅಳುತ್ತ 'ನಮ್ ಅವ್ವ ನನ್ನೆಯಿಂದುವೆ ಕಾಣಿಲ್ಲ ; ಹುಟ್ಟಿಸಿಕೊಡಿ ಬುದ್ಧಿ' ಅಂದಳು. ಪೊಲೀಸರು ಆಕೆಯನ್ನು ವಿಚಾರಿಸಲಾಗಿ ಆಕೆ ನಿನ್ನೆ ರಾತ್ರಿ ಕಲ್ಲ ಕ್ವಾರಿಯಿಂದ ತಪ್ಪಿಸಿಕೊಂಡಿರುವ ಹೆಂಗಸ್ಸಿನ ಮಗಳು ಎನ್ನುವುದು ವಿಚಾರಣೆಯಿಂದ ತಿಳಿಯಿತು. ದೂರದಲ್ಲಿ ಸಂಘದ ಹುಡುಗರು ಏನೋ ಮಾಡಲಾಗದೇ ಕೈ ಕೈ ಹಿಸುಕಿಕೊಳ್ಳುತ್ತಾ ಹಲ್ಲು ಕಡಿಯುತ್ತಿದ್ದರು.

ಎಸ್.ಪಿ.ಯವರು ಕೇರಿಯನ್ನು ರಕ್ಷಿಸಲು ಎಲ್ಲಾ ರೀತಿಯಿಂದಲೂ ಪ್ರಯತ್ನಿಸುವಂತೆ ಆದೇಶ ನೀಡಿದರು. ಸಾಹೇಬರ ಆದೇಶವನ್ನು ಪಾಲಿಸಲು ಇನ್ಸ್‌ಪೆಕ್ಟರ್ ಚಂದ್ರಶೇಖರ್ ಕೂಡಲೇ ಲಾಠಿಚಾರ್ಜ್‌ಗೆ ಅನುಮತಿ ಕೊಟ್ಟರು. ಸಾಹೇಬರಿಂದ ಗ್ರೀನ್ ಸಿಗ್ನಲ್ ಸಿಕ್ಕಿದ್ದೆ ತಡೆ ಪೇದೆಗಳು ಗೌಡರ ಕೇರಿಯ ದಾಂಡಿಗರ ಗುಂಪನ್ನು ಕ್ಷಣಾರ್ಧದಲ್ಲಿ ಚದುರಿಸಿದರು. ಕೇರಿಯಲ್ಲಿ ಒಂದು ನರಪಿಳ್ಳೆಯನ್ನು ಬಿಡದಂತೆ ಲಾಠಿಯಿಂದ ತರಿದು ವ್ಯಾನಿಗೆ ತುಂಬಿದರು. ಊರಿನ ಮಸೀದಿಯ ಹಳೆ ಗಲಾಟೆಯಲ್ಲಿ ತಲೆ ಮರೆಸಿಕೊಂಡಿದ್ದ ಕುನ್ನಿ ಮಹಾದೇವನನ್ನು ಹಿಡಿದು ಪೇದೆಯೊಬ್ಬ "ನಡೀ ಈ ಸರಿ ನನ್ ಕೈಯಿಂದ ಯಂಗ್ ತಪ್ಪಿಸ್ಕಂಡ್ ಹೋದಿಯೇ, ಆ ಗಲಾಟೇಲಿ ಕೈ ಕಚ್‌ಬಿಟ್ಟು ಓಡೋಗಿದ್ದೆ'. ಎಂದ ಕುತ್ತಿಗೆಗೆ ಕೈ ಹಾಕಿ ವ್ಯಾನಿಗೆ ತಳ್ಳುತ್ತಿದ್ದ ಆತ ಕಳೆದ ವರ್ಷ ನಡೆದ ಮಸೀದಿ ಗಲಾಟೆ ಸಂದರ್ಭದಲ್ಲಿ ಪೇದೆಯೊಬ್ಬನಿಗೆ ಕಲ್ಲಿನಿಂದ ಹೊಡೆದು ತಲೆಯಲ್ಲಿ ರಕ್ತ ಬರಿಸಿದ್ದ . ಆಗ ದಫೇದಾರ್ ಹಿಡಿದುಕೊಂಡಿದ್ದು ಆತನ ಕೈ ಕಚ್ಚಿ ಪರಾರಿಯಾಗಿದ್ದ ಆತ ವ್ಯಾನಿನಲ್ಲಿದ್ದ ಊರಿನ ಹೈಕಳುಗಳಿಗೆ ಸಮಾಧಾನ ಮಾಡುತ್ತಿದ್ದ. 'ಕಂಡಿ ಕನಾ ಸುಮೀರಿ ಸ್ವಾಮಿ ನಿಮ್ ಪೊಲೀಸ್‌ನವುನುವೆ, ನಿಮ್ ಜೈಲುನವೆ' ಎಂದು ರೋಪು ಹಾಕುತ್ತಿದ್ದ. ಗಾಂಜಾ ಮಾರಾಟ ಮಾಡುತ್ತಿದ್ದ ಕೇಸಿನಲ್ಲಿ ಸಿಕ್ಕಿ ಜೈಲು ಶಿಕ್ಷೆ ಅನುಭವಿಸಿ ಈಗ ಜೈಲಿನಿಂದ ಊರಿಗೆ ಬಂದಿದ್ದು ಮತ್ತೆ ಗಲಾಟೆಗೆ ಕುಮ್ಮಕ್ಕು ನೀಡುತ್ತಿದ್ದ ಇವನ ಮಾತಿನಿಂದ ಅವಮಾನಿತನಾದ ಪೇದೆ ಸಿಟ್ಟಿನಿಂದ 'ಬೋಳಿ ಮಗನೇ ನಿನ್ ದುಸರಾ ಮಾತಾಡಿದ್ರೆ ಎರೋ ಪ್ಲೇನ್ ಎತ್ತೀನಿ' ಅಂತ ಲಾಠಿಯಿಂದ ಕುಂಡಿಯ ಮೇಲೆ ನಾಕು ಬಾರಿಸಿದ. ಕೇರಿಯವರಂತೆ ಆತ ಅಳಲಿಲ್ಲ. ಯಾರೊಬ್ಬರೂ ಅವನನ್ನು ತಡೆಯಲು ಹೋಗಲಿಲ್ಲ .

ಕೇರಿಯಲ್ಲಿ ಪರಿಸ್ಥಿತಿಯನ್ನು ನಿಯಂತ್ರಿಸುವ ಸಲುವಾಗಿ, ಅವರ ಹಕ್ಕು ರಕ್ಷಿಸುವ ಸಲುವಾಗಿ ಎಚ್ಚರವಾಗಿರುವಂತ ಸರ್ಕಾರದ ಆದೇಶ ಬಂದಿತ್ತು. ದಲಿತರ ಮತ್ತು ಅಲ್ಪಸಂಖ್ಯಾತರ ರಕ್ಷಣೆ ಅವರ ಮುಖ್ಯ ಕರ್ತವ್ಯವಾಗಿತ್ತು. ಆಗಲೇ ಬುದ್ಧ, ಬಸವ, ಅಂಬೇಡ್ಕರ್, ಗಾಂಧೀಯವರ ತತ್ವ ಪಾಲಿಸಿ ಎನ್ನುವ ಬಗ್ಗೆ ಗಂಭೀರವಾಗಿ ಅಧಿಕಾರಿಗಳು ಹಳ್ಳಿಗರಿಗೆ ಮನ ಮುಟ್ಟುವಂತೆ ಹೇಳಿ, ಕೇರಿಯಲ್ಲಿ ಶಾಂತ ಸ್ಥಿತಿಗೆ ಬಂದ ಕಾರಣ ಮೇಲಧಿಕಾರಿಗಳು ಹಳ್ಳಿಯಿಂದ ಹೊರಟಿದ್ರು. ಕಾರು ದೂರ ಹೋದಂತೆ ಬಿಳಿಯ ಕಾರಿನ ಮೇಲಿನ ಕೆಂಪು ಲೈಟು ಮಂಕಾಗುತ್ತ ಇದ್ದದ್ದು ಕೊನೆಗೆ ಮರೆಯಾಯಿತು. ಪೊಲೀಸರು ಒಬ್ಬೊಬ್ಬರಾಗಿ ಕಾಣೆಯಾಗುತ್ತಿದ್ದುದು ಊರಿನವರಿಗೆ ಸಮಾಧಾನ ತಂದಿತು.

ದಲಿತರ ಮೇಲೆ ಹಲ್ಲೆ ಪ್ರಕರಣ ಮತ್ತು ಕಲ್ಲು ಕ್ವಾರಿಯಲ್ಲಿ ಕೂಲಿ ಕಾರ್ಮಿಕರ ಮೇಲೆ ಅಮಾನವೀಯವಾಗಿ ದೌರ್ಜನ್ಯ ನಡೆಸಿದ ಆರೋಪಿಗಳಿಗೆ ಉಗ್ರ ಶಿಕ್ಷೆ ನೀಡಿ, ಕಾರ್ಮಿಕರಿಗೆ ನ್ಯಾಯ ಕೊಡಿ ಎಂದು ಒತ್ತಾಯಿಸಿ ಸಾಹಿತಿಗಳು, ಕಲಾವಿದರು, ಅಧ್ಯಾಪಕರು, ವಿದ್ಯಾರ್ಥಿಗಳು, ರಾಜಕೀಯ ಪಕ್ಷಗಳ ಮುಖಂಡರು, ಪ್ರಗತಿಪರ ಒಕ್ಕೂಟ ಆಶ್ರಯದಲ್ಲಿ ನಗರದಲ್ಲಿ ಬೃಹತ್ ಆದ ಮೌನ ಮೆರವಣಿಗೆಯನ್ನು

ನಡೆಸಿದರು. ಮೌನ ಮೆರವಣಿಗೆಯಲ್ಲಿ ಹಲವು ಭಿತ್ತಿ ಪತ್ರಗಳನ್ನು ಹಿಡಿದಿದ್ದರು. ಕ್ವಾರಿ ನೌಕರರ ಕುಟುಂಬ ಉಳಿಯಲಿ ಜೀತ ಪದ್ಧತಿ ದೇಶದಿಂದಲೇ ತೊಲಗಲಿ, ಕ್ವಾರಿ ಕೆಲಸಗಾರರ ಬೇಡಿಕೆ ಈಡೇರಲಿ, ತಾರತಮ್ಯ ನೀತಿ - ನಾಶವಾಗಲಿ, ಕ್ವಾರಿ ಕೆಲಸಗಾರರ ಶೋಷಣೆ ನಿಲ್ಲಲಿ ಎಂದು ಮುಂತಾಗಿ ವಿವಿಧ ಘೋಷಣೆಗಳನ್ನು ಕೂಗುತ್ತಾ ಜಿಲ್ಲಾಧಿಕಾರಿಗಳ ಕಛೇರಿಯತ್ತ ಜನಸಾಗರ ಹರಿಯಿತು. ನಂತರ ಜಿಲ್ಲಾಧಿಕಾರಿ ಗಳಿಗೊಂದು ಮನವಿ ಪತ್ರ ಸಲ್ಲಿಸಿದರು. ಮಾನವ ಹಕ್ಕುಗಳ ಆಯೋಗದ ಸದಸ್ಯರು ಕೇರಿಗೆ ಮತ್ತು ಕ್ವಾರಿಗೆ ಭೇಟಿ ನೀಡಿ ಸಾಂತ್ವನ ಹೇಳಿ ಹೋದರು. ಇದು ನಡೆದ ಒಂದೆರಡು ದಿನಗಳಲ್ಲಿಯೇ ದಿನಪತ್ರಿಕೆಗಳ ಮುಖಪುಟಗಳಲ್ಲಿ ಕಲ್ಲ ಕ್ವಾರಿಯ ಮಾಲೀಕ ಮತ್ತು ಮೇಸ್ತ್ರೀಯನ್ನು ಬಂಧಿಸಿರುವ ವಿಚಾರ ಪ್ರಕಟವಾಯಿತು. ಸಮಾಜದ ನಾನಾ ಸಂಘಟನೆಗಳ ಒತ್ತಾಯದಿಂದ ಅಪರಾಧಿಗಳಾದ ರುದ್ರೇಗೌಡ ಮತ್ತು ಮೇಸ್ತ್ರಿಯನ್ನು ಬಂಧಿಸಿ ಮಂಡ್ಯದ ಜೈಲಿಗೆ ಕಳುಹಿಸಲಾಯಿತು.

ಕಲ್ಲು ಕ್ವಾರಿಯಿಂದ ರಾತ್ರೋ ರಾತ್ರಿ ಎಲ್‌ಟಿಟಿಇ ಅವರಂತೆ ತಂತ್ರ ರೂಪಿಸಿ ತಪ್ಪಿಸಿಕೊಂಡು ಕೇರಿಗೆ ಸುಳಿವು ನೀಡಿದ ಮುದುಕಿ ಸಿಕ್ಕಲಿಲ್ಲವಾದ ಕಾರಣ ಆಕೆಯ ಮಗನನ್ನು ಪೊಲೀಸರು ವಿಚಾರಣೆಗಾಗಿ ಕರೆದೊಯ್ದಿದ್ದರು. ಇವನ ಜೊತೆಗೆ ತಮಗೆ ಅನುಮಾನ ಬಂದ ಹೊಲಗೇರಿಯ ನಾಗರಾಜ, ಗವಿಸಿದ್ದ, ಸಣ್ಣಯ್ಯ, ವಡ್ಡಣ್ಣ ಮತ್ತು ಗೌಡರ ಕೇರಿಯ ನಾಗರಾಜ ಮತ್ತು ಮಾದೇಗೌಡ ಸೇರಿದ್ದರು. ಇವರು ಪೊಲೀಸಿನವರಿಗೆ ಒಂದೊಂದು ಕೇಸಿನಲ್ಲಿ ಬೇಕಾಗಿದ್ದರು. ಜೈಲಿನಲ್ಲಿ ಮೇಲಧಿಕಾರಿಗಳು ಗೈರು ಹಾಜರಿಯಾದ್ದರಿಂದ ಇವರ ವಿಚಾರಣೆ ಮುಂದಕ್ಕೆ ಹೋಗಿತ್ತು. ಮಂಡ್ಯದ ಜೈಲಿನಲ್ಲಿ ಖೈದಿಗಳ ಸಂಖ್ಯೆ ಹೆಚ್ಚಾಗಿರುವ ಕಾರಣ ಮತ್ತು ಇತ್ತೀಚೆಗೆ ಮಳೆಯು ಕಡಿಮೆಯಾಗಿ ಬೇಸಿಗೆಯಲ್ಲಿ ನೀರಿನ ಕೊರತೆಯಾಗುತ್ತಿರುವುದರಿಂದ ಪಕ್ಕದಲ್ಲಿದ್ದ ದೊಡ್ಡ ಬಾವಿಯನ್ನು ಸೋಸುತ್ತಿದ್ದರು. ತಳದಲ್ಲಿ ಬಂಡೆಕಲ್ಲುಗಳನ್ನು ಕರಿಶಿಲೆ ಸಿಕ್ಕಿದ್ದು ಕೆಲಸಗಾರರಿಗೆ ಕಷ್ಟವಾಗಿತ್ತು.

ಪೊಲೀಸಿನವರು ಕೇರಿಯವರಿಗೆ ನಿಮ್ ವಿಚಾರಣೆಯಂಗಿದ್ರು ನಾಳೆಗೆ ನಡೆಯೋದು, ಬನ್ನಿ ನಿಮ್ ಕೆಲ್ಸವೇ ಕಲ್ಲು ಚೆಟ್ಟೋದಲ್ವ, ಸಾಹೇಬ್ರು ಬರೋದೊಳಗೆ ಬಾವೀಲಿರೋ ಬಂಡೆಕಲ್ಲ ಚೆಚ್ಚಿ ಕರಗ್ಸ್ ಬಿಡಿ, ಬಾವೀಲಿ ನೀರಾದ್ರು ತುಂಬಲಿ ಅಂದರು. ಬಾವಿಯಲ್ಲಿ ಕೆಸರು ಮೆತ್ತಿಕೊಂಡ ಮೂರಾಲ್ಕು ಆಳುಗಳು ಕೆಲಸ ಮಾಡುತ್ತಿದ್ದರು. ಅವರಲ್ಲಿ ಕ್ವಾರಿಯ ಮಾಲೀಕರಾದ ರುದ್ರೇಗೌಡರು ಸೇರಿದ್ದರು. ದೇಹಪೂರ್ತಿ ಮಣ್ಣು ಬಗ್ಗಡಮಯವಾಗಿರುವುದರಿಂದ ತಟ್ಟನೇ ಕೇರಿಯವರಿಗೆ ಗುರುತು ಸಿಕ್ಕಲಿಲ್ಲ. ಮೇಸ್ತ್ರಿ ಮುನಿಯಪ್ಪನೂ ಕಲ್ಲನ್ನು ಹೊರುತ್ತಿದ್ದ. ಕೆಮ್ಮಣ್ಣು ನೀರು ಮುಖದ ಮೇಲೆ ಸೋರುತ್ತಿತ್ತು. ಕೇರಿಯ ಆಳುಗಳು ಪೊಲೀಸ್‌ನವು ಕೈಗೆ ಸಿಕ್ಕಂದ್ ಮೇಲೆ ಬಾಳ ಕಷ್ಟ ಸುಲೋಪ್‌ದಲ್ಲಿ ತಪ್ಪಿಸಬೇಕು ಅಂದುಕೊಂಡು ಗವಿಸಿದ್ದ, ಸಣ್ಣಯ್ಯ ಮೊದಮೊದಲು ಮನಸ್ಸಿಲ್ಲದಿದ್ದರೂ ನಿಶ್ಚಯ ಮಾಡಿಕೊಂಡು ಕ್ವಾರಿಯಲ್ಲಿ ಮಾಡಿದ ಜೀತಕ್ಕಿಂತ ಇದು ಎಷ್ಟೋ ಒಳ್ಳೆಯದು ನಾಕ್ ಜನಕ್ಕೆ ಕುಡಿಯಕ್ಕೆ ನೀರಾದ್ರು ಬಾದೆ ನಮ್ ಪಾಪಾನಾದ್ರು

ಕಮ್ಮಿ ಆಗ್ತಿದೆ ಅಂತ ಯೋಚಿಸಿ ನಂತರ ಆಯ್ತು ಸ್ವಾಮಿ ನಾವು ಇವತ್ತೊಂದ್ ದಿನ ಬಾವಿ ಕೆಲ್ಸ ಮಾಡ್ತೀವಿ ; ನಾಳೀಕ್ ನಮ್ ವಿಚಾರಣೆ ಮುಗಿಸ್ ಕೊಡ್ರಿ ಅಂತ ಹೇಳಿ ಸುತ್ತಿ, ಹಾರೆ, ಗುದ್ದಲಿ, ಬಾಂಡಲಿ, ಮಂಕಿಗಳನ್ನು ಹಿಡಿದುಕೊಂಡು ರಾಟೆಯಿಂದ ಬಾವಿಯೊಳಕ್ಕಿಳಿದರು. ಬಿಟ್ಟಿದ್ದ ಹಗ್ಗ ಹಿಡಿದುಕೊಂಡು ಗಂಟೆ ಹನ್ನೆರಡಾಗುವುದರೊಳಗೆ ರಾಶಿ ರಾಶಿ ಕಲ್ಲು ಬಂಡೆಗಳನ್ನು ಡೈನಮೆಂಟ್ ಸಿಡಿಸಿ, ಸುತ್ತಿಗೆ, ಹಾಪುಗಳಿಂದ ಚಚ್ಚಿ ಬಾವಿಯಿಂದ ಹೊರಕ್ಕೆ ಸಾಗಿಸಿದರು. ಅಷ್ಟೊತ್ತಿಗೆ ಅವರ ಮೈಯಿಂದ ಎಷ್ಟೋ ಬೆವರು ಇಳಿದು ಹೋಗಿತ್ತು . ನಿಲ್ಲಲು ತಾಣವಿಲ್ಲದೆ ಹಣತೆಗಳಂತೆ ತೂರಾಡುತ್ತಾ ಕೆಲಸದಲ್ಲಿ ತೊಡಗಿದ್ದವರೆಲ್ಲಾ ನಿತ್ರಾಣವಾಗಿ ಮಾತಿಲ್ಲದ ಹುಳುಗಳಂತಾಗಿದ್ದರು. ಬಾವಿಯೊಳಗಿದ್ದ ಬಂಡೆಕಲ್ಲು ಕಡಿಮೆಯಾದಂತೆಲ್ಲಾ ಕಲ್ಲಿನ ಸೆಲೆಯಿಂದ ನೀರಿನ ಚಿಲುಮೆ ಹೆಚ್ಚಾಗತೊಡಗಿತ್ತು. ಕೇರಿಯವರಿಗೆ ಎಷ್ಟೊತ್ತಿಗೆ ನಮ್ ಊರ್‌ಗೆ ಸೇರ್ತಿವೊ, ಅನ್ನಿಸಿಬಿಟ್ಟಿತ್ತು. ಹೊತ್ತು ಕಳೆದಂತೆ ಅವರ ಮನಸ್ಸಿನಲ್ಲಿ ಆತಂಕವು ಕ್ರಮೇಣ ಹೆಚ್ಚಾಗತೊಡಗಿತ್ತು. ಸೂರ್ಯ ಆಗತಾನೇ ಇಳಿಮುಖವಾಗಿ ಚಲಿಸುತ್ತಿದ್ದ .

+

## ೨೬. ಕೊಂಯ್ಯ ಮತ್ತು ಧೋತ್ರ

· ಡಾ. ಶಾಂತಾನಾಯ್ಕ

ಎಲ್ಲಾ ಕಡೀಗ ಹುಡುಕಾಟ ನಡೆದಿತ್ತು. ದೊಡ್ಡ ದನಿ ಮಾಡದೆ ಬರಿ ಸನ್ನೆ ಮಾಡ್ತಾ ಒಬ್ಬರಿಗೊಬ್ಬರು ಅಲ್ಲಿ ಇಲ್ಲಿ ಅಂತೇಳಿ ಓಡಾಡತೊಡಗಿದ್ದರು. ಹ್ಯಾಪಮಾರಿ ಹಾಕ್ಕೊಂಡು ತಿಥಿ ಊಟ ಉಣ್ಣೋರಿಗ ಉಣ್ಣಾಕ ಬಡಸಾಕ ಹತ್ತಿದ್ದನೊ ದೊಡ್ಡಮನಿ ಕಡೀಗ ಸನ್ನಿ ಮಾಡಿ ಕಳಸ್ತಾ ಒಂದ ಹೆಜ್ಜಿ ಕಣದ ಕಡೀಗ ಓಡಿ ಹೋಗಿ ನೋಡಿಬಂದ ಬಾಬು ದೊಡ್ಡಪ್ಪ, ಸಂಕಣ್ಣ ಹಿರಿಮಾಮ, ಚಿಟ್ಟು, ಸಾವಕ್ಕ, ಬಾಗಿ ಅತ್ತಿಗಿ, ಮನಿ ಮಂದಿ ಹುಡುಕಿದ್ದೆ ಹಉಡುಕಿದ್ದು, "ಎಲ್ಲೋತು ಹಾಳಾದ್ದು" ದೊಡ್ಡಪ್ಪ ಕೇಳಿದ. ಯಾರು ಮಾತಾಡೋ ಗೋಜಿಗೆ ಹೋಗಲಿಲ್ಲಾ "ದನದ ಮನಿಯೊಳಗ ಯಾರಾರು ಇಟ್ಟು ಬಂದ್ರೇನ ಮತ್ತ" ಅಂದವನೆ ದನದ ಮನಿ ಕಡೀಗ ಓಡಿಹೋದ.

ನಮ್ಮಪ್ಪನ ಅಪ್ಪ ಅಂದ್ರ ನನ್ನಜ್ಜ ಜೇಂಬೂರಜ್ಜ ತೀಕ್ಕೊಂಡಿದ್ದ ದೊಡ್ಡ ಮನಿತನದ ಮರ್ಯಾದಿ ಪ್ರಶ್ನೆ ಅನ್ನೋಹಂಗ, ಹೆಣ ಸುಟ್ಟ ಹನ್ನೆಲ್ಲನೇಯತಿಥಿ ದಿನ ಊಟ ಸುತ್ತ ಯಾರೂ ಮಾಡಿರಬಾರದು ಹಂಗ ಮಾಡಾನಂತ ಗುಲ್ಬರ್ಗಾದಿಂದ ಬಂದ ನಾನು ಅಂದಿದ್ದಕ ಅಪ್ಪ ದೊಡ್ಡಪ್ಪ, ಸೋಮಿಕಾಕ, ಜಗ್ಗೇಶಿ ಕಾಕ, ಸೇರೊಂಡು ಭಾರಿ ಏರ್ಪಾಟು ಹಮ್ಮಿಕೊಂಡಿದ್ವಿ, ಚೆಂಬೂರಜ್ಜನ ಹಳೇ ಫೋಟೋ ಹಾಕಿ ಒಂದು ಕಾರ್ಡು ಪ್ರಿಂಟ್ ಆತು. ಗಂದೂರ ಜಿಲ್ಲೆಯ ಲೋಕಲ್ ನ್ಯೂಪೇಪರ್ ಆದ ಗಂದೂರ ಟೈಮ್ನಲ್ಲಿ ಶಿವಗಣಾರಾಧನೆ ಕಾಲಂನಲ್ಲಿ ಜಾಹೀರಾತು ಕೊಟ್ಟು ಬಂದೆ. ಮೂಲಿಮುಕ್ಕಟ್ಟಿನೊಳಗಿರೋ ನಮ್ಮ ಬೀಗರಿಗ ಸುದ್ದಿ ತಿಳಿಯಲಿ ಅಂತೇಳಿ ಎಲ್ಲಾ ವ್ಯವಸ್ಥೆಗಳನ್ನ ನಾನೇ ಖುದ್ದು ಮುಂದೆ ನಿಂತ್ಕಂಡೆ ಮಾಡಿದ್ದೆ. ಒಂದು ವಾರದಷ್ಟು ರಜೆ ಮುಂದುವರಿಸಿ ಎಲ್ಲಾದಕ್ಕೂ ನಾನೇ ಕಾರಣ ಅನ್ನೋರಂಗೆ ಅಡ್ಡಾತೊಡಗಿದ ಯಂಕಪ್ಪ, ವ್ಯವಸ್ಥೆ ಏನೋ ಗಡದ್ದಾಗೆ ಆಗಿತ್ತು ದುತ್ತರಗಿಯಿಂದ ರಾಂಭಟ್ಟ, ಯಂಕಟ್ರಮಣ ಭಟ್ಟ, ಅಡಗಿ ಮಾಡಾಕ ಏಳತಾಸು ಮುಂಚೆ ಬಂದೋರೆ ಮಂಡಿಕ್ಕಿ ಒಗ್ಗರಣೆ ಹಾಕೊಂಡು ಮೇದು ಕೇಟಿ ಚಾಯ್ ಮಾಡ್ಕೊಂಡು ಕುಡದು ಅಡಗಿಗ ಅಣಿಯಾಗಿ ಇಡಿರಾತ್ರಿ ಕಣ್ಣು ಮುಚ್ಚದಂಗ ಬಾರಾಡಿ ಅಡುಗೆ ಮಾಡಿದ್ರು, ತಿಥಿ ದಿನ ಪೂಜೆ ಮಾಡಿ ನುಸುಕಿನೊಳಗ ಬಂದು ಕುಂತಿದ್ದ ಹರಿಯಾರ, ದಾವಣಗೇರಿಗ ಕೂಲಿಗ ಹೋಗೋ ಮಂದಿಗ ಬಡಸಾಕಂತೇಳಿ ಪೂಜೆ ಮಾಡಿ ಇನ್ನೇನು ಹುಡು ಏಳಾಕು, "ಯಣ್ಣ ನನ್ನ ಧೋತ್ರ ಎಲ್ಲಪ್ಪೋ, ಕಡೀಗ ಜಳಕ ಮಾಡಿದ್ದು ಇಲ್ಲೇ ಅಲ್ಲೇನು?" ಅಂಡ್ಕೊಂತ ಬಂದೇ ಬಿಟ್ಟಲು. ಅಗಸರ ದೊಂಡಿ, ಪದ್ಧತಿ ಪ್ರಕಾರ ಸ್ಮಶಾನದಾಗಿನ ಕೊಬ್ರಿ ಹೆಣದ ಮ್ಯಾಲ ಬಿಸಾಡಿದ ಪುಡಿಗಾಸು, ಅದು ಇದು ಸಾಮಾನು

ಅವರಿಗೆ ಹೋದ್ರ, ಸತ್ತೋಗ ಹಾಸಿಗಿ, ಕಡಿಗ ಉಟ್ಟದ್ಧೋತ್ರ ಅಗಸರ ಮನಿಗ ಸೇರಬೇಕು.

ಕೊನಿಗ ಜಳಕ ಮಾಡ್ಲಿ ಬಿಟ್ಟ, ಜಾಗಾದಾಗಿನ ಧೋತ್ರ ಹನೆಲ್ಲ ದಿನದ ಮಟ ಅಲ್ಲೇ ಬಿದಿರಕು, ಹನ್ನೆಲ್ಲ ದಿನದ ನಂತರ ಅಗಸರ ಮನಿಮಂದಿ ಬಂದಿ ತಗೊಂಡ ಹೋಗಾಕು, ಅಗಸರ ಮನಿಯಿಂದ ಯಾರಾದ್ರು ಬಂದು ಒಯ್ಯದಿದ್ರ "ಏನಲೇ ಅಗಸ ಮುಕಳಾಗ ಸೊಕ್ಕೇನು ಮಗನ, ನಮ್ಮಪ್ಪನ ಧೋತ್ರ ಆಟ ಬ್ಯಾಡಾತೇನು ನಿನಗ? ನಾವೇನು ಕಮ್ಮಿ ಮಾಡೀವಿ ನಿನಗಂತ ಹಿಗ್ಗಾಮುಗ್ಗಿ ಬೊಯ್ಯುತ್ತಿತ್ತು ಮಂದಿ. ಕಡಿ ಧೋತ್ರ ಅಗಸರಿಗೇನಾರು ಸಿಗಲಿಲ್ಲಾಂದ್ರ "ಥ, ಇವನ್ನವ್ವನ, ಜುಗ್ಗನನ್ನಮಗ ಅಗಸಗ ಕೊಡೋ ಧೋತಾನು ಬಚ್ಚಿಟ್ಟಕೊಂಡ ಏಳಪಾಪದೋನು, ಯಾರು ಮುಟ್ಟಿಸ್ಕೋಬ್ಯಾಡ್ರಿ, ಅವನು ಕುಲಗೆಟ್ಟೋನು" ಅಂತೇಳಿ ಇಡೀ ಊರಿಗೆ ಸಾರಿಬಿಡ್ತಿದ್ದ.

ದೊಂಡಿ ಬಂದು ಡಿಮ್ಯಾಂಡ್ ಇಟ್ಟರೆ ದೊಡ್ಡಪ್ಪ, ಅಪ್ಪ, ಅಜ್ಜನ ಕುಂದ್ರಿಸಿ ಜಳಕ ಮಾಡಿಸಿದ ಕಲ್ತಾ ಗ ಹೋಗಿ ನೋಡಿದ್ದು ಧೋತ್ರ ಕಾಣಲಿಲ್ಲ. ದೊಡಪ್ಪಗ ಹೆದರಿಕಿಯಾತು. ಮದ್ರಲೆ ಹರಕಬಾಯಿ ಹೆಂಗಸಿಕಿ, ಅಕಿ ಗಂಡ ಚಂದ್ರ ಬಂದಿದ್ರ ಪಾಡಿತ್ತು. ಇಲ್ಲಲ್ಲೇ ಚಂದ್ರ ಎಲ್ಲೋ ಐತಿ ಹುಡುಕಿಸಿ ಇಡ್ತೀನಿ ಅಂದಿದ್ರ ತಿಳ್ಕೊಂಡು "ಅಂತ ಹೇಳ ಕಾಕ ಅದೆಲ್ಲಿಗೆ ಹೋಕೈತಿ ಅಂದು ಉಂಡು ಹೊಕ್ಕಿದ್ದ ಇಕಿ ಮಂಡ ಹೆಂಗಸಿ, ಊರಮಂದಿ ಮುಂದಮಾನ ಕಳಿತಾಳ ಅಂದವನೆ ಅರಬಾಡಿಸಿ ಹಲುಡುಕತೊಡಗಿದ. ದೊಡ್ಡಪ್ಪನ ಅಡ್ಡಾಟದ ರೀತಿ ನೋಡಿ ಗಾಬರಿ ಆತು. "ಯಪ್ಪ, ಏನಾತು, ಹಿಂಗ್ಯಾಕ ಅರಚಾಡ್ಯಾಕತಿ" ಅಂತೇಳಿ ಓಡಿಹೋದೆ. "ಏನಿಲ್ಲಲೇ ತಮ್ಮಾ" ನಿಮ್ಮಜ್ಜನ ಹರಕ ಧೋತ್ರ ಒಯ್ಯಾಕ ಬಂದಾಳ ದೊಂಡಿ, ಕಾಣವಲ್ಲು" ಅಂದವನೆ 'ಸಿಗೇನ' ಅಂತೇಳಿ ಜೋಕಿ ದೊಡವನ ಕಡೀಗ ಮಾರಿ ಮಾಡಿ ಕೇಳಿದ. ಅಲ್ಲೇ ಇನ್ನೂ ಆ ರಹಕ ಧೋತಕ ಇಟೊಂದು ತಲಿಕೆಡಿಸಿಕೊಂಡು ಹುಡುಕೋದ ಏನೈತಿ ಅನಿಸಿತು. "ಯವ್ವ ಮಲ್ಲ ಹೋಗು ಮಂದಿಗ ಉಣ್ಣಾಕ ಏರ್ಪಾಟು ಮಾಡು, ಧೋತ್ರ ಇಲ್ಲೇ ಎಲಾರು ಇದ್ದೀತು. ಎಲ್ಲಿಗೂ ಓಡಿ ಹೋಗೋದಿಲ್ಲಾ. ಅಮ್ಯಾಕ ಹುಡುಕಾನಂತ" ಅಂದೆ. "ಏ, ಹಂಗ ಅನಬ್ಯಾಡೊ ತಮ್ಮ, ಯಂಕಣ್ಣ ದಂಡ ಕೊಡಬೇಕಾದೀತು. ಹರಕ ಧೋತ್ರ ಕೊಡಾಕು ಇಲ್ಲಿ ನಮ್ಮ ಮನಿನ ಊರಿಂದ ಹೊರಗೆ ಹಾಕ್ತಾರು" ಅಂದ್ಲು ನನಗೇನು ಅಂತ ತಲಿಬುಡಾನೆ ಅರ್ಥ ಆಗಲಿಲ್ಲಾ ಆಕಿ ಮಾರಿ ನೋಡಿ ದೊಂಡಿ ಕಡೀಗ ಹೊಂಟೆ.

ದೊಂಡಿ ಸುತ್ತೆಲ್ಲಾ ಹುಡುಕೋರ ಹಿಂದಿಂದ ಗುಮಾನಿಯಿಂದ ಓಡಾಡತೊಡಗಿದಳು. ಬೇಕಂತ ಬಚ್ಚಿಟ್ರೋ ಹ್ಯಾಂಗಂತ ಅನುಮಾನ ವ್ಯಕ್ತಪಡಿಸಿದ್ದು. ಅಲ್ಲಾ ಒಂದ ಹರಕು ಧೋತ್ರದ ಹಿಂದ ಇಷ್ಟೊಂದ ಮಂದಿ ಗಂಟ ಬಿದ್ದಾರಲ್ಲಾ ಏನಿದ್ದು ಇದರ ಮಹಿಮೆ ಅಂದ್ಕೊಂಡವನೆ ಅಕೀನ ಕೇಳಾಕಂತೇಳಿ ಹೊರಟೆ. "ಏನಬೆ, ಮುದುಕ ಸಾಯೋ ಮುಂದ ಇಡಿ ಧೋತ್ರನ ಚೂರು ಚೂರು ಮಾಡಿದ್ದ ಅದನ್ನ ತಗೊಂಡ ನೀ ಏನ ಮಾಡ್ತಿ? ಎಲ್ಲಾರೂ ಇದ್ದೀತ ಬಿಡು" ಅಂತ ಸಮಾಧಾನದ ಮಾತು

ಹೇಳಿದ "ಯಂಕಪ್ಪಾ ಏನು ಹಿಂಗಂತಿಯಾ, ಹಂಗ ನೋಡಿದ್ರ ನನ್ನ ಧೋತ್ರ ಕೊಟ್ಟು ಅಮ್ಯಾಕ ಊಟಕ ಕುಂದ್ರಸೋಹಂಕಾಗಬೇಕು. ನಾ ಏನೋ ನಮ್ಮ ಮನಿ ಅಂತೇಳಿ ಸುಮ್ಮಗ ಅದೀನಿ ಆಟ" ಅಂದ್ಲು ನನಗೆ ಮತ್ತೂ ಅನುಮಾನ ಆತು. ಅಲ್ಲಾ ಒಂದ ಹಳೆ ಧೋತ್ರಕ ಹಿಂಗ ಆಡ್ತಿ ಅಲ್ಲಬೇ ಒಂದು ಪಕ್ಷ ಎಮ್ಮಿಗಿಮ್ಮಿ ತಿಂದ ಹೋದ್ರ ಎನ್ಮಾಡ್ತಿ" ಅಂತೇಳಿ ಕೇಳಿದ. "ನನ್ನ ಜೀವನದಾಗ ಎಷ್ಟೋ ಸೂತಕದ ಮನಿ ನೋಡಿನಿ, ನಿನ್ನಂಗ ಮಾತಾಡೋದನ್ನ ಕೇಳೇ ಇಲ್ಲ ಬಿಡು. ಎಲ್ಲೂ ಎಮ್ಮಿ ತಿಂದಿಲ್ಲಾ, ಜಳಕ ಉಗದಿಂದ ಧೋತ್ರ ದಬ್ಬಿ, ಸಗಣಿ ಪುಟ್ಟಿಯೊಳಗ ಮುಚ್ಚಿಟ್ಟು ನಾವು ಬರೋ ದಾರಿಯನ್ನು ಕಾಯುತಿದ್ದಾರ, ನೀ ಆಟೊಂದ ಕಲ್ಲು ಉಪಯೋಗಿಲ್ಲ ನೋಡು" ಅಂತೇಳಿ ನನ್ನ ಮರ್ಯಾದಿಗೆ ಕೈ ಹಾಕಿದ್ದು. "ಏನಬೇ ಏನೋ ಹಿರಿಯೋಳಂತ ಮರ್ಯಾದಿ ಕೊಟ್ರ ಮೈಮ್ಯಾಲ ಬರಾಕ ಹತ್ತಿಯಲ್ಲಾ, ಹೋಗಹೋಗು ಮಂದಿ ಊಟ ಆಗ್ಲಿ ಆಮ್ಯಾಕ ಹುಡುಕಿಸಿ ಇಟ್ಟಿದ್ದೀನಿ" ಅಂತ ಗದರಿಸಿದೆ. "ಯಂಕಪ್ಪ ಏನಂತ ತಿಳ್ಕೊಂಡಿ ದೊಡ್ಡವನಿದ್ರ ನಿಮ್ಮ ಮನೀಗ, ನಾ ಏನು ಭಿಕ್ಷಕ ಬೇಡಾಕ ಬಂದಿಲ್ಲಾ ಏನು, ನಿಮ್ಮಂತ ಪಾಪದ ಮಂದಿ ಸ್ವರ್ಗಕ್ಕೆ ಹೋಗಲಿ ಅಂತ ನಿಮ್ಮ ಪಾಪ ತೊಳಿತೀವಲ್ಲಾ ಅದು ನಮ್ಮ ತಪ್ಪು" ಅಂದವಳೇ ಎದ್ದು ದೊಡ್ಡಪ್ಪನ ಹುಡುಕಿಕೊಂಡು ಹೊಂಟಳು.

ಸ್ವಸ್ಥ ಕಲ್ಪನೆ ವಿಚಿತ್ರವಾಗಿ ಕಣ್ತು. ಈ ಮಂದಿ ತಲಿಯೊಳಗ ಏನೆಲ್ಲಾ ವಿಚಿತ್ರಗಳು ತುಂಬ್ಯಾವಲ್ಲಾ ಅನಿಸಿತು. ದೊಡ್ಡಪ್ಪನ ಕರ್ಕೊಂಡ ನನ್ನ ತಾವ ಬಂದ್ಲು. " ಯಂಕಪ್ಪ ಅದೊಂದು ನಂಬಿಕೆ, ಇದು ನಿನ್ನೆ ಇವತ್ತಿಂದಲ್ಲಾ ಈ ಸಮಾಜದಾಗ ಇವೆಲ್ಲಾ ಬೇಕು ಅಂತೇಳಿ ನಮ್ಮ ಹಿರಿಯರು ಮಾಡಿರೋದು. ನಾವು ಮಾಡಿದ ಪಾಪವನ ತೊಳದು, ತಾವು ಉಡೋದರಿಂದ ನಮಗ ಸ್ವರ್ಗ ಸಿಗತೈತೊ ಹುಚ್ಚಪ್ಪ, ಇದನ್ನು ಯಾ ಪುಸ್ತಕಾನು ಹೇಳಿಕೊಡಂಗಿಲ್ಲಾ" ನನ ತಲಿ ಹಾಳಾತು. "ಯಪ್ಪ, ನಿಂಗ ಬುದ್ಧಿ ಕೆಟ್ಟಿತೇನು? ಇವನ್ನೆಲ್ಲಾ ನಮ್ಮನ್ನು ನಂಬಿಸಾಕತಂದು ಮಾಡಿರೋ ವ್ಯವಸ್ಥಿತ ಸಂಚು. ಸ್ವರ್ಗ ನರಕ ಎಲ್ಲು ಇಲ್ಲೆ ಇಲ್ಲಾ. ನೀಯಾಕ ಸತ್ಯವನ್ನು ನಂಬೋದಿಲ್ಲಾ ಅಂತ ಆರ್ಥ ಆಗ್ತಿಲ್ಲಾ ನನಗ" ನಾನು ದೊಂಡಿಯನ್ನು ನೋಡಿದೆ. ದೊಡ್ಡಪ್ಪ ವಾದಕ್ಕೆ ಇಳಿತಾನಂತ ಹೆದರಿದೆ. "ಏನೋ ತಮ್ಮಾ ನಾ ಅಂತು ನಿನಷ್ಟು ಶಾಣ್ಯಾ ಅಲ್ಲಾ ಏನೋ ನಮ್ಮಪ್ಪ ಹೇಳ್ತಿದ್ದ ತೊಂಡಿ ಲೆಕ್ಕಾಚಾರದೆ ಮ್ಯಾಲ ಹೇಳ್ತಿನಿ ಆಟೆ ನೋಡು" ಅಂದು ಹಿರೀಗೌಡ್ರು ಬಂದಿದ್ದ ಓಡಿ ಹೊಂಟ.

ನಮ್ಮ ಮಾತು ಕೇಳಿಸಿಕೊಂಡಿದ್ದ ಗೌಡಗ ನನ್ನ ಮ್ಯಾಲ ವಿಪರೀತ ಸಿಟ್ಟ ಬಂದಿತ್ತು. "ಏನಪ್ಪಾ ಯಂಕಪ್ಪ ಬೋ ಪಸಂದಾಗೆ ಮಾತಾಡಿದೆ. ನಿಮ್ಮ ಮನಿನ ಊರ ಹೊರಗ ಹಾಕಾನೇನು. ಈ ಊರಾಟಗ ಹಿಂದಿಂದ ನಡಕೊಂಡ ಬಂದ ಆಚರಣೆಗಳನ್ನು ಮುಂದವರಿಸಿಕೊಂಡೇ ಬಂದೀವಿ. ನೀವು ಹೊರಗಿನವ, ಈ ಊರಾಗ ಏಟ ದಿನ ಆದಿ ಹೇಳು. ನಮ್ಮ ಆಚರಣೆಗಳು ಬೇಕಪ್ಪ, ಇಲ್ಲಿದ ಈ ಜಗತ್ತಿಗ ಉಳಿಗಾಲ ಇಲ್ಲಾ. ಏನಂದೆ ಈ ವ್ಯವಸ್ಥೆಯೊಳಗ ಎಲ್ಲಾನೂ ಬೇಕೆ ಬೇಕು" ಅವನ ಕಡ್ಡಿ ಮೀಸಿ ಹುರುಪುಗೊಳಿಸಿದ. "ಗೌಡ್ರ ನಾ ಏನ ಹೇಳಿದ್ರು ನಿಮ್ಮ ತಲಿಯಾಗ ಹೋಗೋದಿಲ್ಲಾ

ಏನು, ಈಗ ಹೋಗ್ರಿ ಉಣ್ಣಾಕ ಬಂದೀರಿ ಮಾತಬ್ಯಾಡ್ರಿ”  ಅಂತೇಳಿ ಸಾಗ ಹಾಕಾಕ ನೋಡಿದೆ. “ಹಂಗ್ಯಾಕ ಬ್ಯಾಸರ ಅಕ್ಕಿ ತಮ್ಮಾ ಬಿಸಿರಕ್ತ ನೀ ಏನ ಮಾಡಿ



ಎಲ್ಲಾನು ಬದಲು ಮಾಡ್ತೀನಿ ಅಂತ ಹೊಂಟಬಿಟ್ಟೆ. ಅಂದ್ರ ನಮ್ಮಂತೋರು ಅದಕ್ಕೆ ಅವಕಾಸ ಮಾಡಿಕೊಡಂಗಿಲ್ಲಾ” ನೆಟ್ಟಗ ನನ್ನ ನೋಡಿದ. ಒಂದ ಹರಕ ಧೋತ್ರ ಈ ಪಡಿಪಾಟಲು ತಂದಿಡತೈತಿ ಅಂತ ಅನಿಸಿರಲಿಲ್ಲಾ ನಾನು ಮಾತಾಡಲಿಲ್ಲಾ. ಮುಂದಕ ಹೋದ ಗೌಡ್ರು, ಒಬ್ಬ ನರಪೇತಲ ಹುಡಗನ್ನು ಅಂಗೈ ಹಿಡದು ಎಳ್ಕೊಂಡ ಬಂದು ನನ್ನೆದುರಿಗೆ ನಿಲ್ಲಿಸಿ, ಹೇಳಿದ “ಈ ಸಣಕಲ ವ್ಯಕ್ತಿ ದೊಡ್ಡ ಮೊಳ ಅಂಗಿ ಹಾಕೊಂಡು ತಾನು ದಪ್ಪ ಆದೆ ಅಂದ್ರೆ ದಪ್ಪ ಆಗಾಕ ಸಾಧ್ಯವೇನು?” ಅಂದವನೆ ಸೀದಾ ಊಟದ ಖೋಲಿಗ ನಡೆದ. ಅಪ್ಪ ದೊಡ್ಡಪ್ಪ ಅವನ ಹಿಂದ ಕೈಕಟ್ಟಿಕೊಂಡು ಅದೇ ಮಾಮೂಲು ನಡ ಬಗ್ಗಿಸಿ ಅಂ ಹುಂ ಅನ್ನೊಂತ ಅಡ್ಡಾಡ್ತಿದ್ರು, ಅವರನ್ನ ನೋಡಿ ಅಯ್ಯೋ ಅನಿಸಿತು.

ಆದ್ರೆ ಆ ಮುದಿಗೌಡ ಅಂದ ಹೋದ ಮಾತ ಮಾತ್ರ ಕಾಡತೊಡಗಿತು. ಎನು ಹಿಂಗಂದ್ರ, ಯಾಕ ನನಗ ಈ ಮಾತಂದ, ವಿಚಾರ ಮಾಡಿದೆ. ದೊಂಡಿ ಕಡೀಗ ನೋಡಿದೆ. ಧೋತ್ರ ಸಿಗೋ ಮಟ ಠಿಕಾಣಿ ಹೊಡೆದಿದ್ದು. ತಲಿಕೆಲ್ಗೊಂಡು ಬರೊ ಹೋಗೋ ಮಂದಿ ನೋಡ ತೊಡಗಿದೆ. ಗೌಡಪ್ಪನ ಮಾತು ಕಿವಿಯೊಳಗ ಗುಂಯ್ ಗುಡಾಕತ್ತು ಯಾವದೋ ಒಂದು ಅರ್ಥ ಇಟ್ಟು ಹೇಳ್ಯಾನ ಬೆರಕಿ ಮುದುಕ ಅನಿಸಿತು. ನಮ್ಮ ಮಂದಿ ಅವನ ಹೊಲ್ದಾಗ ದುಡಿದು ಸಾವುಕಾರನ್ನು ಮಾಡಿ ಗೌಡ ಗೌಡಕಿ ಪಟ್ಟ ಕೊಟ್ಟಾರಲ್ಲಾ ಅದಕ ಮಗ ಮಾತಾಡ್ತಾನ. ಎದ್ದ ಹೊರಟಿದ್ದೆ. ಇದ್ದಕ್ಕಿದ್ದಂಗೆ ಅವನ ಮಾತಿನ ಅರ್ಥ ನೆಪ್ಪಾತು. ಸಣ್ಣ ಜಾತಿಯವನು ಕಲ್ಲು ದೊಡ್ಡವನಾದ ಗಟ್ಟಿಗೆ ದೊಡ್ಡ ಜಾತಿಯವನಾಗಲಿಲ್ಲಾ! ಓ ಎಂಥ ಬೇವರ್ಸಿ ಮುದಿಯಾ, ಅನಿಸಿತು. ಹಾಳಾಗಿ ಹೋಗ್ಲಿ ಅವನಂತ ತಲಿ ಇಲ್ಲದ ಮಂದಿ ನಿರ್ಮಿಸಿರೋದು ಈ ವ್ಯವಸ್ಥೆ ಒಂದು ಹರಕು ಧೋತ್ರ ಎಲ್ಲಾ ಹುಳುಕನ್ನು ಕೆದಕಿ ತಗಿತಲ್ಲಾ ಅಂತೇಳಿ ಕೆಟ್ಟ ಅನಿಸಿತು. ನಮ್ಮಪ್ಪ, ದೊಡ್ಡಪ್ಪ, ಈ ಊರಾಟನ ಮಂದಿ ತಾವು ಸರಿಸಮಾನಾಗಿ ದುಡಿದು ಜೀವನ ಮಾಡ್ತಿದ್ರು, ಡೊಗ್ಗಿ ಸಲಾಂ ಹೊಡಿಯೋದನ್ನ ಬಿಟ್ಟಿಲ್ಲಾ, ಇದೆನು ಗೌರವನೋ, ಅನಿವಾರ್ಯ ಎಂಬ ತಾಕಲಾಟ ನನ್ನೊಳಗೆ ಸುರು ಆತು.

ದೊಂಡಿ ಹಚ್ಚಿ ನಿಂತು ಬೊಯ್ಯಾಕ ಹತ್ತಿದ್ಲು “ಯಾ ಸೀಮಿ ಮಂದಿ ನೀವು, ಕೆಲ್ಸ ಬಗಸಿ ಬಿಟ್ಟು ಬಂದೀನಿ, ಗೌಡಪ್ಪರವೂ ರಾಶಿ ಅರವಿ ಅದಾವು. ಇವತ್ತ ಸಂಜಿಕ ವಾಪಾಸ ಕೊಡಕು. ನಾ ಯಾ ಘಳಗಿಗ ಬಂದ್ನೆಯವ್ವ ಈ ಬ್ಯಾಡರಮಂದೀನ ಆಟು ಬ್ಯಾರೆ ಜನ ಅಂತಂದ್ರ  ದರಕಾರ ಮಾಡೋದಿಲ್ಲ. ಗೌಡ್ರಿಗ ಸುದ್ದಿ ಮುಟ್ಟಿಸಿ ಮಾನಕಾಸಿನ ಪಂಚ ಮಾಡಬಹುದು. ಆದ್ರ ಈ ಮನಿ ರಿಣ ಉಂಡೀವಿ ಅಂತಂದು ಬಿಡೋದು ಇವರಿಗೆ ಇದೆಲ್ಲಾ ತಿಳಿಯಂಗಿಲ್ಲಾ” ಆಕಿ ಕಡೀಗ ಯಾರು ನೋಡಾಕ ತಯಾರಿಲ್ಲಾ. ಸುತ್ತೆಲ್ಲಾ ಊರುಗಳಿಂದ ಮಂದಿ ಬರಾಕ ಹತ್ತು ಜನ ಜಾಸ್ತಿ ಆಗಿದ್ದಕ

ಎಲ್ಲರೂ ಗಡಬಡಿಸತೊಡಗಿದ್ರೂ ಯಾರೊಬ್ಬರು ದೊಂಡಿ ಮಾತಿಗೆ ಲಕ್ಷ್ಯ ವಹಿಸಲಿಲ್ಲಾ ದೊಡ್ಡಪ್ಪ ಮಾತ್ರ ಆ ಗಡಬಡಿ ನಡುವೆಯೂ ದೊಂಡಿಯ ಧೋತ್ರದ ಕಡಿಗ ಒಂದ ಕಣ್ಣಿಟ್ಟಿದ್ದ. ಮಂದಿನ ಉಣ್ಣಾಕ ಬಿಟ್ಟ "ದೊಂಡ್ಡವ್ವ ಬೇಜಾರಾಗಬ್ಯಾಡ, ಇಲ್ಲೇ ಎಲ್ಲೋ ಐತಿ. ಮನಿ ಹೆಂಗಸರಿಗೆ ಹೇಳಿನಿ, ಹುಡುಕಾಕ ಹತ್ತಯಾರ" ಅಂದ ಹೋದ. ನಮ್ಮವ್ವ



ಬಂದ ಒಂದ ಮಾತ ಹೇಳಾನಂತ, ಬಾಯಿ ತಗಿಯಾಕು" ಏ ನಮ್ಮವ್ವ ನನತಯಿ ನಾ ಏನು ಭಿಕ್ಷಕ ಬಂದೋರಹಂಗ ಮಾಡ್ತಿರಲ್ಲಾ ಕೊಡೋದು ಕೊಟ್ಟಬಿಡ್ರಿ ಹೊಕ್ಕಿನಿ ಅತ್ಯಾಲಗ ಹಾಳಾಗಿ, ನಿಮ್ಮು ದೊಡ್ಡ ಕಾಟ ಆತ ನೋಡು, ಹಿಂಗ ಯಾರು ಸತಾಸಲಿಲ್ಲಾ ನಿಮ್ಮ ಪಾಪ ದೊಡ್ಡದೈತಿ" ಅಂತ ತನ್ನ ಹಕ್ಕಿನ ಬಗ್ಗೆ ಮಾತಾಡಿದ್ರುಲ ಅವ್ವಗ ಯಾಕಾರು ಬಂದೀನೋ ಅನಿಸಿದ್ದೆ ಒಳಗ ಸೇರಿಕೊಂಡ್ಲು.

ದೊಡ್ಡಪ್ಪ ಎಲ್ಲರಿಗೂ ಹುಡುಕಾಟಕ ಮತ್ತೊಂದು ಸಾರಿ ತಾಕಿತ್ತು ಮಾಡಿದ. ಕಲ್ಲು ಎತ್ತಿ ಎತ್ತಿನ ಗ್ವಾಂಗ್ಲಿ, ಪಣತ, ದನಕರುಗಳಿಗೆ ಹುಲ್ಲಿಡೋ ಜಾಗ, ಸೊಪ್ಪಿಗೊಂಡು ಅಂತೇಳಿ ಒಂದ ಜಾಗಾನು ಬಿಟ್ಟು ಬಿಡದೆ ಹುಡುಕಿಸಿದ. ಪ್ರಯೋಜನ ಆಗಲಿಲ್ಲಾ. ಏ ಚೆನ್ನು ಏನ ನೆಲಾ ನುಂಗ, ಇಲ್ಲಾ ಆಕಾಶ ತಗೊಂತು, ಏನ ಲಕ್ಷಿ ಇಲ್ಲದ ಮಂದಿ ತುಂಙ್ಕೊಂಡಾರ ಈ ಮನಿಯಾಗಂದ್ರ ನಾ ಹೇಳಾಕ ವಲ್ಲೆ ಬಿಡು" ಅಂತೇಳಿ ಹಿರಿಮಗನ ಮ್ಯಾಲ ಹರಿಹಾದ. ಯಾರು ತುಟಿ ಪಿಟಕನ್ನಲಿಲ್ಲಾ ನಾನು ಮುಂದ ಬಂದೋನೆ ನೋಡ ದೊಂಡವ್ವ, ಆದದ್ದ ಆತು. ಒಂದು ಹೊಸ ಧೋತ್ರ ತಗೊಂಡ ಹೋಗು, ಅದನ್ನ ಅಜ್ಜನ ಸುಡುಗಾಡಿಗ ಮುಟ್ಟಿಸಿ ತೊಳದು ನಿನ್ನ ಗಂಡಗ ಉತ್ಕಳಾಕ ಕೊಡು ಅಂದೆ" ಅಕಿಗ ಮತ್ತೆ ಸಿಟ್ಟು ಬಂದಿತ್ತು. "ಯಂಕಪ್ಪ ನಿನತಾವ ರೊಕ್ಕ ಐತಿ ಅಂತ ಮಾತಾಡಬ್ಯಾಡ. ರೊಕ್ಕ ನನ್ನ ಬಲ್ಲು ಐತೆ, ಯಾಕ ಪಾಪದ ಮಾತ ಆಡ್ತೀಯ. ಮುದಿಯನ ಹಳೆ ಪಂಚೆಯನ್ನ ತೊಳೆದು ಪಾಪ ಕಳೆದು ಪುಣ್ಯ ಕೊಳ್ಳಾಣಂದ್ರ ನೀ ಇಲ್ಲದೆ ಮಾತಾಡ್ತಿಯಪ್ಪ. ನನಗಂಡನ ತಾವ ಧೋತ್ರ ಬಹಳ ಆದಾವು. ನೀ ಕೊಡಸೆ ಹೊಸ ಧೋತ್ರ ಉಡಾಕಂತೇಳಿ ಇಲ್ಲಾ" ಅಂತ ಕಡ್ಡಿ ಎರಡು ತುಂಡ ಮಾಡಿದಂಗ ಮಾತಾಡಿದ್ಲು.

ಇದೊಳ್ಳೆ ಗಾಚಾರ ಬಂತಲ್ಲ. ಅವಾಗ್ಲೆ ಧೋತ್ರದನ ಕಲ್ಲಪುಟ್ಟಿಯಡಿಗ ಮುಚ್ಚಿಟ್ಟಿದ್ರ ಅಕ್ಕಿತು. ಸತ್ತ ದುಃಖದಾಗ ಏನಂತ ನೋಡ್ತಾರ. ಅವರವರ ಪಾಡು ಅವರವರಿಗೆ ಆಗಿರೋ ಹೊತ್ನಾಗ ಇವತ್ತು ಇಂಥ ವ್ಯಾಳೆ ಬಂದಿತಂತ ಯಾರ ಕಲ್ಪನೆಯೊಳಗೂ ಇದ್ದಿರಲಿಕ್ಕಿಲ್ಲಾ ಬಿಡು ಅಂದು ಕೊಂಡೆ. ದಗದ ಮುಗಿಸಿ ಬಂದ ಕೇರಿ ಮಂದಿ ಸೀದಾ ಉಣ್ಣಾಕೆಂತೇಳಿ ಬಂದಿತ್ತು. ಎಲ್ಲಾರು ನುಗ್ಗಿ ಉಂಡು ಕೈ ತೊಳಿಯಾಕ ಹೊರಗೆ ಬರೋ ಹೊತ್ನಾಗ ಅಜ್ಜನ ಧೋತ್ರ ಗುರ್ತಿಡದಬಿಟ್ಟ ದೊಡಪ್ಪ, ಕೊಂಯ್ಯಾ, ಮುದುಕ ತೀಙ್ಕೊಂಡ ದಿನ ಹಲಗಿ ಹೊಡಿಯಾಕ ಬಂದಿದ್ದ. ಅವನಿಗೆ ಉಟ್ಕಳ್ಯಾಕ ಧೋತ್ರ

ಇಲ್ಲಕ ಕೊಳಕ ಟವಲು ಸುತ್ಕಂಡಿದ್ದ ಅದು ತತಾನು ತೂತಾಗಿತ್ತು. ಮಂದಿ ಎಲ್ಲಾ ಮುದುಕನ ಹೆಣದ ಸಿಂಗಾರ ಮಾಡೊ ಗಡಿಬಿಡಿಯಲ್ಲಿದ್ದಾಗ ಅದೆಂಗ ಎಗರಿಸಿದ್ನೋ ಅಂತು ಅಗಸನ ಮನಿಗೆ ಹೋಗೋ ಧೋತ್ರ ಕದ್ದಿದ್ದ, ದೊಡ್ಡಪ್ಪಗ ನೆತ್ತಿ ಉರದ ಹೋತು. "ಥು ಸುಳೀಮಗ್ನೆನ, ನಮ್ಮಪ್ಪನ ಧೋತ್ರ ಮುಟ್ಟಿ ನರಕಕ ಕಳಿಸಿದೆಯಲ್ಲೋ, ನನ್ನ ಕೇಳಿದ್ರ ಕೊರಾ ಹೊಸದೊಂದು ಧೋತ್ರಾನೆ ಕೊಟ್ಟಬಿಡ್ತಿದ್ದೆ" ಅಂದವನೆ ಎದಿಎದಿ ಬಡ್ಕೊಂಡ ಅಳತೊಡಗಿದ. ಗದ್ದ ಕೇಳಿದ ಹಿರಿಮಾವ ಓಡಿ ಬಂದ. ಕೊಂಯಾ ಉಟ್ಟಿದ ಧೋತ್ರ ಮುದಿಯಂದು ಅಂತೇಳಿ ತಿಳಿದದ್ದೆ ಓಡಿ ಹೋಗಿ



ನಾಕೆತ್ತಿನ ಬಾರ್ಕೋಲು ತಂದವನೆ ದನಕ ಹೋಡಿಯೊ ಹಂಗ ಹೊಡಿಯತೊಡಗಿದ. "ಹಾಳಾದ ಸೂಳೆಮಗ ಧೋತ್ರ ಮುಟ್ಟಿ ಮೈಲಿಗ ಮಾಡಿದ್ರೂ ಇವ್ವನ, ದುಡದು ಕುಡಿತಾರ, ಒಂದ ಅರವಿ ತಗೊಳಾಗ ಆಗಂಗಿಲ್ಲಾ, ಕಂಡೋರ ಅರಿವಿ ಮ್ಯಾಲ ಕಣ್ಣ ಹಾಕ್ತಾರಂತ" ಅಂದವನೆ ಮನಸಿಗೆ ಹ್ಯಾಂಗ ಬಂತೋ ಹಂಗ ಹೊಡದು ಅಂಗಾತ ಕೆಡವಿದ. ನೆರದ ಮಂದಿ ಗಾಬರಿಯಾಗಿ ನೋಡ್ತಿತ್ತು. ಯಾರು ಮುಂದ ಹೋಗಿ ಬಿಡಸಾಕ ತಯಾರಿಲ್ಲ. ಹಿತ್ತಾಗ ಇದ್ದ ನನಗ ಸುದ್ದಿ ಮುಟ್ಟಿದ್ದೆ ಓಡಿ ಬಂದೆ. ಇನ್ನ ನಾಕ ಬಾರ್ಕೋಲು ಬಿಗದಿದ್ರ ಕೊಂಯ್ಯನ ಹೆಣ ಉರುಳುತ್ತಿತ್ತು. "ಏ ಮಾವ ಮನುಷ್ಯ ಸಜ್ಜದಿ ಇಲ್ಲಾ, ಏರ್ನ ಮಾಡಾಕ ಹತ್ತಿ ಅನ್ನೋಯ ಕಿಬರ್ಯೆತೇನ ನಿನಗ ಬಿಡಿಲ್ಲ" ಅಂತ ತೆಕಮಾರಿ ಬಿದ್ದು ಬಾಲ ಕಸ್ಕೊಂಡು ದುಡ್ಕೊಂತ ಹೋಗಿ ಮನಿಯಾಗ ಕೂಡಿಟ್ಟೆ.

ನಾಚಿಕ್ಕೇಡು ಮಂದಿ ಉಣ್ಣಾಕ ಹೊಂಟಿತ್ತು. ನಾನು ಹೋದವನೆ ಕೊಂಯ್ಯನ್ನ ಎತ್ತಿ ನೆತ್ತಿಗೆ ನೀರ ಸುರುವಿ ಬಾಯಿ ಅಗಲಿಸಿ ನೀರ ಹಾಕಿದೆ. ನಮ್ಮ ಮನಿ ಮಂದಿ ಗಾಬರಿಯಿಂದ ನೋಡಾಕ ಹತ್ತು ನಾನು ಅವರ ಕಡೀಗ ತಿರಸ್ಕಾರದಿಂದ ನೋಡಿದವನೆ ಕೊಂಯ್ಯಾನ ಅಂಗಾತ ಎಷ್ಕೊಂಡ ಹೋಗಿ ಅವರ ಹಟ್ಟಿ ಮುಟ್ಟಿಸಿ ಅವನ ಮೈಮ್ಯಾಲ ಹ್ಯಾಂಗ ಹೊಡೆದಿದ್ರೂ ಮಾವ ಹಂಗಂಗೆ ಬಾಸಾಳ ಕಿತ್ಕಂಡ ಬಂದಿತ್ತು. ಕೊಂಯ್ಯನ ಹೇಣಿ ಚಿಕ್ಕಿ ಅವನ ಮಗಳು ತಿಮ್ಮಿ ಕೊಂಯ್ಯಾ ಉಳಿಯಂಗಿಲ್ಲಾ ಅಂತೇಳಿ ಎದಿ ಎದಿ ಬಡ್ಕೊಂಡ ಅಳ ತೊಡಗಿದ್ರು, ಹರಕ ಧೋತ್ರ , ಸಿಕಿದ್ಕ ಹಿಗ್ಗಿಂದ ಉಟ್ಕೊಂಡು ಎ ಚಿಕ್ಕಿ ಪಾಡ ಕಾಣತೈತೇನೆ ಅಂತ ತೋರಿ ಖುಷಿಪಟ್ಟೆಯಲ್ಲೋ ಕೊಂಯ್ಯಾ" ಅಂತ ಒತ್ತರಿಸಿ ಬಂದ ದುಃಖ ತಡಿಯಾಕ ಆಗದೆ ಬಾರಾಡಿ ಅಳಾಕ ಹತ್ತು. ಹಟ್ಟಿ ಮಂದಿ ಜಮಾಯಿಸಿದ್ರು "ಯ್ಯಾ ನಾತು ಕೊಂಯ್ಯಾಗಂತ" ಹಟ್ಟಿ ಮುಂದಾಳು ಸರ್ಪ ಮುಂದ ಬಂದ. "ಮನ್ನೆ ಸತ್ನಲ್ಲ ಮುದಿಯಾ ಅವನ ಹರಕ ಧೋತ್ರ ತಂದು ಉಳ್ಕೊಂಡಿದ್ದ, ಅದಕ ಅಗಸರ ದೊಂಡಿಗ ಧೋತ್ರ ಸಿಗದಾತು. ನಮ್ಮ ಧೋತ್ರ ಯಾಕ ಕದ್ದಿ ಅಂತಂದು ಚರ್ಮ ಸುಲಿಯೋಗಂಟ ಹೊಡ್ತಾರೋ ಯಪ್ಪಾ" ಅಂತೇಳಿ ಚಿಕ್ಕಿ ಅವನ ಪಾದಕ ಬಿದ್ದು ಅಳಾಕತ್ತು. ನನಗ ಕೆಟ್ಟ ಅನಿಸಿತು. "ಸುಮ್ನಾಗ ಯಾಕ ಅಳ್ತಿ ಆ ಬ್ಯಾಡರ ಮಂದಿನ ಹಿಂಗ, ಬೋಸೋಕ್ಕಿನ್ಯಾರು. ಎದಿಯಾಗ ಹೃದಯಾ ಇಲ್ಲೋರು. ಯ್ಯಾಪಾಟಿ ಹೊಡ್ದಾನ,

ಮನುಷ್ಯ ಅಂತ ತಿಳ್ಕೊಡಾನೋ ದನಗಿನಾಂತ ತಿಳ್ಕೊಂಡಾನ" ಸರ್ಪ ಗುಡುಗಿದ. "ಯಾಕೋ ಮುದ್ಕ ಮುಕಳಾಗ ಹಲ್ಲ ಬಂದಾವೇನು. ಜಾತಿ ಹಿಡದು ಮಾತಾಡೋ ತಾಕತ ಬಂತೇನು" ಅಂತ ಗದರಿಸಿದೆ. "ಯಪ್ಪಾ ತೆಪ್ಪ ಆತು, ನೀವು ಇಲ್ಲೇ ಅದಿರೇ, ಸಂಕಟ ತಡಿಯಾಕ ಆಗದೆ ಹೊಟ್ಟೆ ಒಳಗಿಂದ ಹೊರಗೆ ಬಂದಬಿಟ್ಟು ನನ್ನ ಕ್ಷಮಾಮಾಡಿ" ಅಂತ ನಮ್ಮಜ್ಜಗಿಂತ ಸಣ್ಣೀನಿರಬೇಕು ಸರ್ಪ ಉದ್ದಕ ನನಕಾಲೀಗ ಬಿದ್ದ ನನ್ನ ಅಸಲಿತನ ಹೊರಗ ಬಿದ್ದಿದ್ದು ನನಗೆ ಕಳವಳ ಉಂಟ ಮಾಡಿತ್ತು. ನಾನು ಪಕ್ಕ ಮೂಲಭೂತವಾದಿ ಆದ್ರು ಮನುಷ್ಯರೆಲ್ಲಾ ಒಂದೆ ಅನ್ನೋ ಸೋಗು ಹಾಕ್ಕೊಂಡು ಅಡ್ಡಾಡ್ತೀದೀನಿ ಅನಿಸಿತು. ಯಾಕೋ ಬೇಜಾರಾತು, ಮುದುಕ ಸರ್ಪನ ಹಿಡಿದು ಮೇಲೆತ್ತಿದೆ. ಆತನ ಎದಿಯೊಳಗ ಹೆದರಿಕೆ ಮಡುಗಟ್ಟಿತ್ತು. ತಾನು ಬ್ಯಾಡ ಅಂದೆ ಅನ್ನೋ ಒಂದೇ ಒಂದು ಮಾತು ಹೊರಕ ಬಿತ್ತಂದ್ರ ಮುಂಜಾನಿ ಆಗೋದ್ರಾಗ ತಮ್ಮ ಹಟ್ಟಿ ಒಂದು ಮನೀನೂ ಇರಂಗಿಲ್ಲಾ ಅಂತೇಳಿ ಥರಥರ ನಡಗತೊಡಗಿದ.



ಬಹಳ ಹೊತ್ತಿನತನಕ ನಾನು ಅವರ ಹಟ್ಟಿ ತಾವ ಕುಂತಿದ್ದೆ. ಕೊಂಯ್ಯಾನ ಮೈಮಾಲಿನ ಗಾಯಕ ಅರಿಶಿನಪುಡಿ ಜೇನುತುಪ್ಪ ಹಚ್ಚಿದೆ. ಆದ್ರೂ ಮನಸಿಗ ಸಮಾಧಾನ ಆಗಲಿಲ್ಲ. ನಾನು ಏಟ ಪ್ರಯತ್ನ ಪಟ್ಟು ನನ್ನೊಳಗಿನ ತನ್ನತನ ಹೊರಗ ಹಾಕಿಬಿಟ್ಟಿದ್ದೆ. ಮನಸ್ಸಿನ ಕಳವಳ ಹೆಚ್ಚಾಯಿತು. ಕೊಂಯ್ಯಾ ಬದಕತಾನೋ ಇಲ್ಲೋ ಅನ್ನೋ ಆತಂಕ. ಒಂದು ಹರಕ ಧೋತ್ರಕ್ಕೆ ನಮ್ಮ ನಮ್ಮೊಳಗಿನ ಮಂದಿಯೇ ಪರದಾಡೋದು ಕಂಡು ನನಗೆ ಬೇಜಾರಾಗಿತ್ತು. ಸಾಲದಕ ನಾನು ನನ್ನ ಆಹಾಂನ್ನ ಹೊರಹಾಕಿದ್ದೆ. ನನ್ನೊಳಗೆ ಅಪರಾಧಿ ಭಾವನೆ ಕಾಡಾಕಹತ್ತು ಸರ್ಪಜ್ಜನ ತಾವ ಹೋಗಿ ಆತನ ಕಾಲು ಹಿಡ್ಕೊಂಡೆ ಯಜ್ಜ ನನ್ನ ಬಾಯಿಂದ ಬರಬಾರದಾಗಿದ್ದ ಮಾತುಗಳು ಬಂದು, ಈ ಅಂತರದೊಳಗೆ ನನಗೆ ನಂಬಿಕೆ ಇಲ್ಲಾ ನನಗ ಉಳದಿದ್ದ ಇದೊಂದೆ ದಾರಿ. ಆ ಒಂದು ಕ್ಷಣ ನನ್ನ ಮನಸ್ಸನೊಳಗ ನಾನು ಮನುಷ್ಯ, ಬರಿ ಮನುಷ್ಯ ಅನ್ನೋದು ಮರೆತುಹೋಗಿತ್ತು. ನನ್ನ ಕ್ಷಮಿಸು" ಅಂತೇಳಿ ನನ್ನ ಅಳಲನ್ನು ತೋಡಿಕೊಂಡೆ. "ಯಪ್ಪಾ ಬಿಡ್ರಿ ನನಕಾಲ ಪಾಪ ಬರತೈತಿ ನಿಮಗ ನನ್ನಂತೋನ ಕಾಲ ಮುಟ್ಟಿದ್ರ" ಅಂತೇಳಿ ಕೊಸರಕೊಂಡ. ನಾನು ಒಳಗೊಳಗೆ ಒದ್ದಾಡತೊಡಗಿದೆ ಎಂಥ ಕೆಲ್ಸ ಆಗಹೋತು ಅಂದುಕೊಳ್ಳತೊಡಗಿದ.

ರಾತ್ರಿ ಎಂಟಕ ಮಂದಿ ಉಣ್ಣಾಕ ಬರೋದು ನಿಂತಿತ್ತು. ಮಂದಿ ಹೋದಿಂದ ಮನಿಯಾನಾರೆಲ್ಲಾ ಉಂಡು ಆದಮ್ಯಾಲ ದೊಂಡಿ ಹಿಂತಿರುಗಿ ಬಂದ್ಲು. "ಯಪ್ಪ ಮುದುಕನ ಆತ್ಮ ಇಲ್ಲಿ ಸುತ್ತಾಡಕ ಹತ್ತೈತಿ. ಒಂದ ಕೆಲ್ಸ ಮಾಡಿ, ಕೊಂಯ್ಯಾ ಉಟ್ಟಿರೋ ಧೋತ್ರ ಇಳವಿ ಊರತಡಾದು ಸಣ್ಣ ಹುಡ್ರೆ ಸ್ಮಶಾನದ ತಾವ ಒಯ್ದು ಸುಟ್ಟು ಹಾಕಿ, ಹಂಗಾರ ಮುದಿಯನ ಆತ್ಮ ಮ್ಯಾಲ ಹೊಕೈತಿ" ಅಂದಾಕಿನ ಹೊಂಟಹೊದ್ಲು. ದೊಡಪ್ಪ, ಅಪ್ಪ, ಮಾವ ಕೈಯಾಗ ಹಿಡಿದಿದ್ದ ಎಲಿ ಹಿಡ್ಕೊಂಡು ಬಾಯಾನ ಅಡಕಿ ಜಗಿತ ಹರಿಜನ ಹಟ್ಟಿಗ ಓಡಿದ್ರು.

ಮಂದಿ ಓಡಿ ಬರೋದನ್ನ ನೋಡಿದ ಹಟ್ಟಿ ಮಂದಿ ಕೈಗ ಬಡಗಿ ಹಿಡ್ಕೊಂಡು ಒಂದ ಕಡೀಗ ಜಮಾಯಿಸಿದ್ರು, "ಲೇ ತಮ್ಮಾ ಸಾಯೋದ ಒಂದ ದಿನ ಹುಟ್ಟೋದ ಒಂದ ದಿನ, ಅವರೇನಾರು ಮೈ ಕೈ ಮುಟ್ಟಿದ್ರ ಹಾಕ್ಕಿ ಬಿಡ್ರಿ, ಎಟದಿನಾಂತ ಹಿಂಗೆ ಅವಮಾನ ತಾಳ್ಕೊಂಡ ಬದಕೋದು. ಏನೋ ಉಡಾಕ ಇಲ್ಲಕ ಹೆಣದ ಮ್ಯಾಲಿನ ಧೋತ್ರ ಉಳ್ಕೊಂಡಾನ, ಏನ ತೆಪ್ಪಾತು. ಎಮ್ಮಿ, ಆಖಲ ಸತ್ತಾಗ ಪಸಂದಾಗೆ ಮಾತಾಡಿ ಎತ್ಕಂಡ ಹೋಗಾಕ ಅಂತಾರು. ಊರಾನ ಗವಡ್ರ ಮಂದಿ ಅವರ ಮ್ಯಾಲ ಜಗಳಕ ಬಂದ್ರ ನಾವು ನೀವು ಅಣ್ಣತಮ್ಮಂದ್ರು ಇದ್ದಂಗ ನಮ್ಮ ನಮ್ಮೊಳ ಭೇದ ಯಾಕಂತಾರ, ಮೆಲ್ಲಗ ನಮ್ಮ ಗುಡ್ಡಿಗೆ ಬೆಂಕಿ ಇಡ್ತಾರೆ" ಅಂತ ಮಂದಿಗೆಲ್ಲಾ ತಿಳಿಸಿ ಹೇಳಿದ ಸರ್ಪ. ಹಟ್ಟಿಮಂದಿ ಹೂಂ ಅಂದವರೆ ಕೊಂಯ್ಯಾನ ಮನಿ ಮುಂದೆ ಬಂದು ನಿಂತು ದೊಡಪ್ಪ, ಮಾವ, ತಮ್ಮಂದಿರೆಲ್ಲಾ ಮಂದಿ ನೋಡಿ ನಿಂತು, ಅಲ್ಲೆ ಇದ್ದ ನಾನು ಮುಂದಾಗಬಹುದಾದ ಅನಾಹುತ ಊಹಿಸಿದವನೆ ಮುಂದಕ ಬಂದೆ. "ಯಾಕ ಬಂದಿಲ್ಲ, ಕೊಯ್ಯಾನ ಹೆಣ ನೋಡಾಕೋ ಇಲ್ಲಾ ಅವನು ಉಟಿರೋ ಧೋತ್ರ ಮೈಲಿಗಿಯಾದ್ರೂ ತಗೊಂಡು ಹೋಗಾಕ. ಮನುಷ್ಯ ರೂಪದಾಗಿರೊ ರಾಕ್ಷಸಮಂದಿ



ನೀವು ನಿಮ್ಮನ್ನು ಯಾವಾನು ಮನಿಯೊಳಗ ಬಿಡ್ತಾನು ? ನೀವು ಯಾವ ಊರಿನ ಗೌಡಕಿ ಮಾಡೋರಂತ ನಿಮಗಿಂತ ಕೆಳಗಿರೋ ಮನುಷ್ಯನ ಹೆಣ ಬಿಳೋಹಂಗ ಹೊಡದ್ರಿ" ಸಿಟ್ಟಿಂದಲೆ ಹೇಳಿದೆ. ಮಂದಿ ಕೈಯಾಗಿನ ಬಡಗಿ ನೋಡಿ ದೊಡಪ್ಪ ಹೆದರಿದ್ರು, ಏಳೂರ ಜಗಳಗಂಟ ಮಾವ ಮಾತ್ರ "ಯಾಕೋ ಕಡಕ್ಕಾಗಿ ಅವರ ಪರವಹಿಸಿ ಮಾತಾಡಕ ಹತ್ತಿ ನಿಮ್ಮಜ್ಜನ ಆತ್ಮ ಮಯಾಲ ಹೋಗಿಲ್ಲಂತ ದೊಂಡಿ ಬಂದ ಹೇಳಿದ್ದ. ಕೊಂಯ್ಯಾ ಉಟ್ಟಿರೋ ಧೋತ್ರ ಒಯ್ದು ಸುಡುಗಾಡಿನೊಳಗ ಸುಡಾಕಂತ. ಅದಕ ಬಂದ್ವಿ" ಅಂದ. ಏನಂತ ಹೇಳಾಕಂತ ತಿಳಿಲಿಲ್ಲಾ ಕೊಂಯ್ಯಾ ಎಚ್ಚರ ತಪ್ಪಿ ಬಿದ್ದಿದ್ದ ಧೋತ್ರ ಬಿಚ್ಚಾಕ ಮಂದಿ ಅವಸ್ತ್ರ ಮಾಡ್ಕೊಂತ ಮುಂದ ಬರಿದ್ರು, ನಾ ಎಷ್ಟ ಹೇಳಿದ್ರು ಈ ಮಂದಿಗೆ ತಿಳಿಯೋದಿಲ್ಲಾ ಅಗಸರ ದೊಂಡಿ ನಮ್ಮೆಲ್ಲು ಜಾತಿಗಿಂತ ಶ್ರೇಷ್ಟಳು ಅಂತ ತೋರಿಸಿಕೊಳ್ಳಾಕ ಹುಡಿರೋ ನಾಟಕ ಅಂತ ನನಗೆ ತಿಳಿತು. ಇನ್ನಮ್ಯಾಲ ಹೆಣದ ಮೇಲಿನ ಬಟ್ಟೆ ಈ ಮಂದಿ ಮುಟ್ಟಬಾರದು ಆ ಪರಿ ಮಾಡಾಕ ಹೊಡಿರೋ ಮತ್ತೊಂದು ನೆಪ. ಇದನ್ನು ಹೆಂಗ ಮಾಡಾಕ, ಅಂತಗೇಳಿ ಯೋಚನೆ ಮಾಡ್ದೆ. ಸದ್ಯಕ್ಕೆ ತಲಿಗ ಏನೂ ಹೊಳಿಲಿಲ್ಲಾ ಆದ್ರೂ ಈ ಮಂದಿ ತಲಿಯೊಳಗಿಂದ ನಂಬಿಕೆಯನ್ನು ಬೇರು ಸಹಿತ ಕೀಳಬೇಕಂತ ನಿರ್ಧರಿಸಿದೆ. "ನಮ್ಮ ಪಡಿಪಾಟ್ಲಯಾ ನನ್ನ ಶತ್ರುಗೂ ಬ್ಯಾಡ್ರಪ್ಪ, ಹಾಳಾದ ದ್ಯಾವೂ ನಮ್ಮನ್ನು ಮನುಷ್ಯರಾಗಿ ಹುಟ್ಟಿಸೋದ್ರಿಂತ ಪಶುಪಕ್ಷಿಯಾಗಾರು ಹುಟ್ಟಿಸಿದ್ರ ಪಾಡಿತ್ತು" ಅಂದ ಸರ್ಪ. ನಮ್ಮ ದೊಡ್ಡಪ್ಪನಲ್ಲಿ ಏನಾರು ಬದಲಾವಣೆ ಅಕ್ಕೈತೇನಂತ ನೋಡಿದೆ. ಅನವೇನು ದರಕಾರ ಮಾಡಲಿಲ್ಲಾ ಯಾರು ಮಾತಾಡೋ ಗೋಜಿಗ ಹೋಗಲಿಲ್ಲಾ "ಹಿಂಗ್ಯಾಕಂತಿ ಸರ್ಪಜ್ಞ. ಮನುಷ್ಯನ ತಿಳ್ಕೊಳಾಕ ಮನುಷ್ಯನಲ್ಲಿರೋ ಮನಸಬೇಕು" ಅಂದೆ. ಮಾವ-ದೊಡ್ಡಪ್ಪಗ ಗಾಬರಿ ಆತು.

ನಮ್ಮ ಮರ್ವಾದಿ ತಗಿತಾನಂದವರೆ “ನೋಡಪ್ಪ ಇದ್ದ ವಿಷಯ ಹೇಳು. ಇನ್ನೂ ಬೇಗನೆ ಧೋತ್ರ ಬಿಚ್ಚಿಕೊಡೋ ಜವಾಬ್ದಾರಿ ನಿಮ್ಮದು ಅಂದ ದೊಡ್ಡಪ್ಪ” ಏನಾದರೂ ಹೂಂನೆ ಅನ್ನೋ ಮಂದಿ ಏನೂ ಮಾತಾಡಲಿಲ್ಲ. ಸುಖಾಸುಮ್ಮೆ ಮೈ ಚರ್ಮ ಕಳ್ಕೊಂಡ ಕೊಂಯ್ಯಾನ ಪರಿಸ್ಥಿತಿ ದೊಂಡಿಗ ತಿಳಿಯಾಕಂತ ನಾನು, “ಅಜ್ಜನ ಆತ್ಮಾತಿರುಗಾಡೋದನ್ನ ನಾವು ನೋಡಾಕು. ಈ ಮಾತ ಹೇಳಿದೋರು ಬಂದು ಅದನ್ನು ತೋರಿಸಲಿ. ಆ ಮ್ಯಾಕ ಧೋತ್ರ ಬಿಚ್ಚಾನಂತ” ಅಂದು ನೆರದ ಹುಟ್ಟಿ ಮಂದಿ ಮಾರಿ ನೋಡಿದೆ. ನೆರೆದ ಮಂದಿಗ ಆಟ ಬೇಕಿತ್ತು ಎಲ್ಲೂ ಹೌದು ಅಂದಬಿಟ್ರು, ದೊಡ್ಡಪ್ಪ ಮಾವ ಮಾರಿಮಾರಿ ನೋಡ್ಕೊಂಡ್ರು, ನನ್ನ ಸ್ವಭಾವ ತಿಳದಿದ್ದ ದೊಡ್ಡಪ್ಪ ದೊಂಡಿನ ಕರಿ ಕಳಿಸಿದ.

ಹೇಳೋದೆನೋ ಒಂದು ಸಣ್ಣ ಸುಳ್ಳು ಹೇಳಿದ ದೊಂಡಿಗ ಬಾಯಿ ಒಣಗಿದಂತಾಗಿ ಮಾತು ಗಂಟಲೊಳಗ ಸಿಕ್ಕೊಂಡ್ರ, “ಹೇಳಬೇ ಹಡಬಿ ಗುಟ್ಟಿದಾಕಿ, ಮಂದಿ ಜೀವದ ಕೂಡ ಆಟ ಆಡ್ತಿ ನೀ ಏನೋ ಭಾರಿ ದೊಡ್ಡ ಕುಲದೊಳಂಗ ನಿನ್ನ ಬೇಳಿ ಬಾಯಿಸಿಕೊಳ್ಳಾಕ ಮುಗ್ಧ ಜನರಿಗೆ ಜಗಳ ಹಚ್ಚಿ, ಮಾತಾಡು, ತೋರು ಮುದುಕನ ಆತ್ಮ ಎಲ್ಲೈತಿ ನೋಡಾನು” ಅಂದೆ. “ಅದು ಹೆಂಗೆಲ್ಲಾ ಕಾಣಂಗಿಲ್ಲಾ, ಹಿಂದಕ ಯಾರಿಗೂ ಹಿಂಗ ಆಗಿತಂತೆ ಅವರು ಹೇಳಿದ ಮಾತನ್ನ ಹೇಳಿದೆ ಆಟೇಯಾ. ನಾ ಎಲ್ಲಿ ಆತ್ಮ ನೋಡಿನಂತ ಹೇಳಿನಿ” ಅಂತೇಳಿ ಪಾರಾಗಾಕ ನೋಡಿದ್ದು. ಮಾವ-



ದೊಡಪ್ಪ ಅಕಿ ಪರ ವಹಿಸಿ ಮಾತಾಡಕ ನೋಡಿದ್ರು, ನಾನು ಒಪ್ಪಲಿಲ್ಲಾ, ಪರಿಸ್ಥಿತಿಯನ್ನು ತಿಳಿಸಿ ಹೇಳಿ ಮುದ್ಕ ಹಿಂಗಾಗದಂಗೆ ಮಾಡೋ ನಿರ್ಧಾರಕ ಬಂದೆ. ದೊಂಡಿ ಅಪರಾಧಿ ಹಂಗ ಮಾರಿ ಕೆಳಗ ಹಾಕಿದ್ದು. “ಈಗಾರ ತಿಳಿತೇನಪ್ಪ, ನಮ್ಮೊಳಗೆ ವಿಷ ಹಾಕೋ ಮಂದಿ ಗುಟ್ಟು, ತನಗೆ ಬರೋದು ಬ್ಯಾರೇರು ಪಡ್ಕೊಂಡಾರಂತ ದೊಂಡಿ ಆಡಿದ ನಾಟಕ, ನೀವು ಅಂಡ್ಕೊಂಡಿದೆಲ್ಲಾ ಸುಳ್ಳು, ಸ್ವರ್ಗ-ನರಕ ಪಾಪ ತೊಳೆದು ಪುಣ್ಯ ಕೊಡೋದು ನಮ್ಮನ್ನ ನಂಬಿಸಿ ಮೋಸ ಮಾಡೋ ಆಟ” ಅಂತೇಳಿ ದೊಡ್ಡ ಭಾಷಣ ಶುರು ಮಾಡಿದ್ದೆ ನನ್ನ ಮಾತು ಎಷ್ಟು ಮಂದಿ ಅರ್ಥ ಮಾಡಿಕೊಂಡ್ರೊ ಏನ ಕಥೆಯೊ, ಅಷ್ಟೊತ್ತಿಗೆ ಕೊಂಯ್ಯಾ, “ಯಪ್ಪ ಹೊಡಿಬ್ಯಾಡೋ ಉಡಾಕ ಇಲ್ಲದಕ ಹೆಣದ ಮ್ಯಾಲಿಂದ ಕೆಲ್ಸಕ ಬರಂಗಿಲ್ಲಾ ಅಗಸರು ಬರಾಕ ಮುಂಚೆ ನಾನು ಮುಟ್ಟಿದ್ರೆ ವಾಪಾಸ ಇಸ್ಕೊಳೊದಿಲ್ಲಾ ಅಂತಂದು ಉಳ್ಕೊಂಡೆ” ಅಂತ ಕನವರಿಸತೊಡಗಿದ.

ಅಷ್ಟೊತ್ತಿನ ತನಕ ಪಸಂದಾಗೆ ನನ ಮಾತು ಕೇಳಿದ್ದ. ಮಂದಿ ಓಡಿ ಅವನಾತಾವ ಹೋದವರೆ “ಕೊಂಯ್ಯಾ ಎದ್ದೇನೋ, ಮದ್ದು ಧೋತ್ರ ಬಿಚ್ಚು, ಹಿಂದಡೆ ಎಲ್ಲಾ ಹೇಳಿವು” ಅಂದವರೆ ಅನಾಮತ್ತಾಗಿ ಎತ್ತಿ ಅವನ ಬರೆ ಬತ್ತ, ಅದಾನನ್ನೋ ಖಬರಿಲ್ಲೆ ಮುದುಕನ ಧೋತ್ರ ಬಿಚ್ಚಿ ಅಪ್ಪನ ಕಡಿಗ ಬಿಸಾಕಿದ್ರು, ಏನ ಮಾಡ್ತಾರ ಈ ಜನ ಅಂತ

ತಿಳಿಲಿಲ್ಲಾ ಕೊಂಯ್ಯಾ ಬತ್ಲೆ ಬಿದ್ಕೊಂಡಿದ್ದ. ಸರ್ಪ ಬಂದವನೆ "ದೊಂಡವ್ವ, ನಮ್ಮನ್ನ ಪಾರಮಾಡ್ದೆ ನನತಾಯಿ, ಆ ಮುದುಕ ದೆವ್ವ ಆಗಿ ನಮ್ಮ ಹಟ್ಟಿ ಮಂದಿನ ಕಾಡೋದ್ರಿಂದ ಬಚಾವ ಮಾಡ್ದೆ" ಅಂದ. ನನಗೆ ತಲಿ ಸುತ್ತಿ ಬಂದಂಗಾತು. ಇಷ್ಟೊತ್ತಿಂದ ತಿಳಿಸಿ ಹೇಳಾಕ ಹತ್ತಿನಿ ಆದ್ರು ಈ ಮಂದಿ! ನನಗ ನಾಚಿಕಿ ಆತು. ದೊಡ್ಡಪ್ಪ-ಮಾವನ, ನನ್ನ ಸದೋರರು ಕೆಕ್ಕರಿಸಿ ನೋಡಿದ್ರು, ದೊಂಡಿ ನನ್ನ ಮಾರಿಗ ತಿವಿದಂಗ ಕಿಲಕಿಲ ನಕ್ಕು ಹೊಂಟಿಹೋದ್ಲು. ನಾನ ಮಾತ್ರ ಅಲ್ಲೇ ಬಿದ್ದಿದ್ದ ಮುದುಕನ ಧೋತ್ರ-ಬತ್ತೆ ಮಕ್ಕೊಂಡಿದ್ದ ಕೊಂಯ್ಯಾನ ನೋಡ್ದೆ. ಅವನ ಮೈಮಾಲಿನ ಬಾಸಾಳಗಳು ಮಾದು ನನ್ನ ಹೃದಯದ ಮ್ಯಾಲ ಮೂಡಿದಂಗಾಗಿ ನೋವು ಅನಿಸಿ ಕಣ್ಣು ಮುಚ್ಚಿದೆ. ಹಟ್ಟಿ ಮಂದಿ ಒಬ್ಬ ಬ್ಬರಾಗೆ ಖಾಲಿಯಾದ್ರು, ಕೊಂಯ್ಯಾ ಅವನ ಹೇಣಿ ಚಿಕ್ಕಿ ಅವನ ಮಗಳು ಮತ್ತೆ ನಾನು ಅಪರಿಚತರಂಗೆ ಬಹಳ ಹೊತ್ತು ಕುಂತಿದ್ವಿ. ಯಾರು-ಯಾರಿಗೂ ಸಂಬಂಧ ಇಲ್ಲೋರಂಗ

+

## ೧೭. ಪಪ್ಪಾಯಿ ಮರ

**ಅಣ್ಣಮ್ಮ**

ಈ ಬದುಕು ಅದೆಷ್ಟು ಅನಿಶ್ಚಿತ ! ನಾನು ಒಂಟಿಯಾಗಿ ಕೂತಾಗಲೆಲ್ಲ ನನ್ನ ತಲೆಯ ತುಂಬ ಈ ಬದುಕೆನ್ನುವ ಭೂತ ನೃತ್ಯ ಮಾಡಿದ್ದುಂಟು... ಅಂತಿಮವಾಗಿ ನನ್ನನ್ನು ನಾನೇ ಕೇಳಿಕೊಳ್ಳುತ್ತಿದ್ದೆ. ಈ ಬದುಕಿನಿಂದ ನಾನೇ ತಲೆಮರೆಸಿಕೊಂಡು ಹೋದರೆ ಹೇಗೆ? ನನ್ನೊಳಗಿನ ಈ ಭಾವನೆಯ ಭೂತಕ್ಕೆ ರೆಕ್ಕೆ ಪುಕ್ಕಗಳು ಬೆಳೆಯಲಾರಂಭಿಸಿತು. ಅರೆ! ಇದೇನಾಗಿ ಹೋಯಿತು? ಬಾಲ್ಯದ ಆ ದಿನಗಳಲ್ಲಿ ಹೇಗಿದ್ದೆ? ಥೇಟ್ ಹಕ್ಕಿಯಂತೆ ಹಾಡುತ್ತಾ ಕುಣಿಯುತ್ತ ಖುಷಿ ಖುಷಿಯಾಗಿ ಬದುಕಿನ ಎಲ್ಲ ಸುಖವನ್ನೂ ಸೂರೆ ಮಾಡಿದಂತೆ! ಈಗ ಹೇಗಿದ್ದೇನೆ, ಯಾವ ಅಗೋಚರ ಶಕ್ತಿ ನನ್ನ ಈ ಅವಸ್ಥೆಗೆ ಕಾರಣವಾಯ್ತು ನಾನವನನ್ನು ಪ್ರೀತಿಸಿದ್ದೆ? ಸಂಗಾತಿಯಾಗಿ ಸ್ವೀಕರಿಸಿದ್ದೆ? ಅಥವಾ ಅವನು ನನ್ನನ್ನು ಶಕುಂತಲೆಯನ್ನಾಗಿ ಮಾಡಿ, ತಾನು ದುಷ್ಯಂತನಾಗಿ ಅದೃಶ್ಯನಾದದ್ದೆ...!

ಓ ದೇವರೇ, ಒಂದೇ ಎರಡೇ, ಅಗಾಧ ನೆನಪುಗಳು ಭಾವಸಮುದ್ರದ ಅಲೆಗೆ ಸಿಕ್ಕಿ ಕೊಚ್ಚಿ ಹೋಗುತ್ತಿದ್ದೇನೆ. ನಮ್ಮಿಬ್ಬರ ಪ್ರೀತಿ! ಅದನ್ನು ಪ್ರೀತಿ ಎನ್ನಬಹುದೆ! ಅವನ ತುಂಟತನ, ಕಣ್ಣಲ್ಲಿ ತುಂಬಿಕೊಳ್ಳುವ ಅವನ ಆ ರೀತಿ ರಿವಾಜು, ಆಗಾಗ ಬುದ್ಧಿ ಮಾತುಗಳನ್ನು ಹೇಳುತ್ತಿದ್ದ ಚಕಮಕಿಗೆ ನಾನು ಈ ಪರಿ ಸೋತಿರಬೇಕು. ನಮ್ಮಿಬ್ಬರ ನಡುವಿದ್ದ ಆಕರ್ಷಣೆ, ಅವನು ಗುಲಾಬಿ ಹೂ ಮುಡಿಸಿದ ದಿನ ಪ್ರೀತಿಯಾಗಿ ಅರಳಿರಬಹುದು. ಅಥವಾ ರಸ್ತೆ ದಾಟಿರುವ ನೆವದಿಂದ ಹಿಡಿದ ಆ ಕೈಗಳ ಸ್ಪರ್ಶ ಪ್ರೀತಿಗೆ ಪೀಠಿಕೆಯಾಗಿರಲೂಬಹುದು. ಆಗವನು ಕಿವಿಯ ಹತ್ತಿರ ಬಂದು ಪಿಸುಗುಟ್ಟಿದ್ದ - ನಿನ್ನ ಕೆನ್ನೆ ಗುಲಾಬಿಯಂತೆ ಕೆಂಪೇರಿದೆ.

ಅವನ ನೆನಪಿಂದ, ಈಗಲೂ ನನ್ನ ಕೆನ್ನೆಗಳು ಅತ್ತೂ ಅತ್ತೂ ಕೆಂಪಾಗಿ ದುಮುದುಮಿಸುತ್ತಿವೆ ಎಂದು ಅಮ್ಮ ಹೇಳಿದ್ದಳು. ಅವನು ನನ್ನಿಂದ ದೂರವಾಗಿ ಇಂದಿಗೆ ಮೂರನೆಯ ದಿನ. ಸುಮಾರು ಮೂರು ತಿಂಗಳ ಗರ್ಭವತಿ, ಯಾವ ಫಲನೆಯೂ ಇಲ್ಲದೆ, ಮಲಗಿದ್ದಲ್ಲೇ ಸೂರು ನಿಟ್ಟಿಸುತ್ತಿರುವುದನ್ನು ಕಂಡು ನನ್ನ ತಾಯಿಯ ಎದೆಯಲ್ಲಿ ಶೂಲವಾಡುತ್ತಿರಬೇಕು. ಅದಕ್ಕವಳ ಮುದುಡಿದ ಮುಖವೆ ಸಾಕ್ಷಿ. ಇನ್ನು ಅಪ್ಪ, ಅವನು ಒಂದು ರೀತಿಯಲ್ಲಿ ನಿರ್ಲಿಪ್ತ. ಋಷಿಮುನಿಗಳ ಹಾಗೆ ಮಗಳ ಬಗ್ಗೆ ಒಂದು ದಿನವಾದರೂ ಚಕಾರವೆತ್ತಿದವನಲ್ಲ, ಮಗಳು ಏನು ಮಾಡಿದರೂ ಆತನಿಗೆ ಮುದ್ದು ಈಗ ಮೌನವಾಗಿ ನರಳುವ ಮಗಳನ್ನು ಕಂಡು ಒಳಗೇ ಮರಗುತ್ತಾನೆ.

ಹೊಟ್ಟೆಯಲ್ಲಿ ಏನೋ ತಳಮಳ, ಅಸಾಧ್ಯ ಸುಸ್ತು, ವಾಕರಿಕೆ ಬರುವಂತಿತ್ತು. ಮನೆಯ ಪಕ್ಕದಲ್ಲಿದ್ದ ಪಪ್ಪಾಯ ಮರದಡಿ ಮೆಲ್ಲನೆ ಕುಳಿತೆ, ಅಕ್ಕಪಕ್ಕದ ಕಣ್ಣುಗಳು ನನ್ನನ್ನೇ ದುರುಗುಟ್ಟು ನೋಡುತ್ತಿವೆ ಎನಿಸಿತು. ಅವರಾರಿಗೂ ನನ್ನ ಒಂಟಿತನದ ವಾಸನೆಯ ಸುಳಿವು ಸಿಕ್ಕಿಲ್ಲ ಅಬ್ಬಾ!, ಹಾಗೊಂದು ವೇಳೆ ಸಿಕ್ಕಿದರೆ ನನ್ನ ಗತಿ ಏನಾಗಬಹುದು? ನೆನಸಿಕೊಂಡರೆ ಮೈ ಝುಮ್ಮೆನ್ನುತ್ತೆ, ನನ್ನೊಳಗೆ ನಾನೇ ವಿಚಾರಿಸಿಕೊಂಡೆ ಹೆಣ್ಣೆ, ಈ ಮೂರು ದಿನಗಳಲ್ಲಿ ಒಂಟಿಯೆನಿಸಿ ಇಷ್ಟೊಂದ ನಿತ್ರಾಣಗಳಾಗಬಹುದೇ? ಏತಕ್ಕೆ ? ಗಂಡ ದೂರವಾದನೆಂದೆ? ಅಥವಾ ಅತ್ಯಂತ ಪ್ರೀತಿ ಪಾತ್ರ ಜೊತೆಗಾರ ಶಾಶ್ವತವಾಗಿ ಬಾರನೆಂದೆ ? ಅಥವಾ ಮುಂದಿನ ದಿನಗಳು ಅನಾಥವಾಗಿ 'ಕಳೆಯಬೇಕೆಂದೆ? ಅಥವಾ ಹುಟ್ಟಲಿರುವ ಮಗು, ತಂದೆಯಿಲ್ಲದೆ ತಬ್ಬಲಿಯಾಗುತ್ತಾನೆಂಬ ತಳಮಳ ಅಥವಾ ಅಥವಾ ಶಾರೀರಿಕ... ಮಾನಸಿಕ ಸುಖದಿಂದ ವಂಚಿತಳಾದೆನೆಂಬ ಭಾವನೆಯೋ... ನನ್ನ ತುಟಿಯಂಚಿನಲ್ಲಿ ವಿಸ್ಮಯ ನಗೆಯೊಂದು ಹಾದು ಹೋಯ್ತು ! ಮನಸ್ಸು ಅನಂತ ಶೂನ್ಯದಲ್ಲಿ ಲೀನವಾಯಿತು.

ನನಗೆ ತಂಪಾದ ನೆರಳನ್ನಿತ್ತು ಸಾಂತ್ವನ ನೀಡಿದ 'ಪಪ್ಪಾಯಿ' ಮರದೆಡೆಗೆ ದೃಷ್ಟಿ ಹರಿಸಿದೆ. ಮರದ ಒಡಲೆಲ್ಲ ಹಣ್ಣುಗಳಿಂದ ತುಂಬಿತ್ತು. ದಿನೇ ದಿನೇ ಎತ್ತರಕ್ಕೆ ಬೆಳೆಯುತ್ತಿದ್ದ ಇದು ಅದೆಷ್ಟೋ ರುಚಿಯಾದ ಹಣ್ಣುಗಳನ್ನು ಈವರೆಗೂ ಕೊಟ್ಟು, ಮತ್ತೂ ತೃಪ್ತಿಯಾಗದೆ ಇಡೀ ಮೈ ತುಂಬ ಕಾಯಿ ತುಂಬಿಕೊಂಡಿದೆ. ಎಂದೋ ಒಮ್ಮೆ, ಹಣ್ಣು ತಿಂದು ಮನೆಯ ಪಕ್ಕದಲ್ಲಿದ್ದ ಖಾಲಿ ಜಾಗದಲ್ಲಿ ಬೀಜಗಳನ್ನು ಎಸೆದಿದ್ದೆ. ಹದವಾದ ಮಣ್ಣಿನೊಳಗೆ ಹೂತ ಬೀಜಗಳು ಒಮ್ಮೆ ಬಿದ್ದ ಮಳೆಗೆ ತನ್ನ ಬೆರಗಿನ ಕಣ್ಣರಳಿಸುತ್ತಾ ಮೊಳೆತದ್ದನ್ನು ಗಮನಿಸಿದೆ. ಗುಂಪು ಗುಂಪಾದ ಸಸಿಗಳು, ನನ್ನಮ್ಮ ಆ ಸಸಿಗಳನ್ನೆಲ್ಲಾ ಕಿತ್ತೆಸೆಯಲು ಗಂಗೆಯಂತೆ ಮುಂದಾದಳು. ಅದರಲ್ಲಿ ಒಂದನ್ನಾದರೂ ಉಳಿಸೆಂದು ಶಂತನುವಾಗಿ ಬೇಡಿಕೆ ಮುಂದಿಟ್ಟೆ. ಆಗ ಉಳಿದದ್ದು ಈ ಒಂದೇ ಒಂದು ಸಸಿ.

ನಾನು ನೋಡು ನೋಡುತ್ತಿದ್ದಂತೆಯೇ ಎರಡೆರಡೇ ಎಲೆಗಳು ಮೊಳೆತು ಅಗಲವಾಗಿ ಅರಳಿ, ಚಾಮರ ಬೀಸತೊಡಗಿತು. ಜೊತೆ ಜೊತೆಗೆ ನೀಟಾದ ಕಾಂಡ ಮೂಡತೊಡಗಿತು. ಮೂರೇ ತಿಂಗಳಿಗೆ ನನ್ನ ಎತ್ತರಕ್ಕೆ ಬೆಳೆದ ಗಿಡದಲ್ಲಿ ಪುಟ್ಟ ಪುಟ್ಟ ಹೂವು, ಹೀಚು ರಾರಾಜಿಸಿತು. ಕೈಚಾಚಿದರೆ ಸಿಗುವ ಈ ಹೀಚು ಬೆಳೆ ಬೆಳೆದಂತೆಲ್ಲಾ ಸೊಂಪಾಗಿ, ದಪ್ಪ ಹಣ್ಣಾಗಿ ಕೈಗೆ ಸಿಗುವಂತಿತ್ತು. ಅದಕ್ಕೆ ದೃಷ್ಟಿ ತಾಕಬಾರದೆಂದು ಅಮ್ಮ ಸೀರೆಯ ತುಂಡಿನಿಂದ ಮುಚ್ಚುವಾಗ ನಾನು ಗತ್ತಿನಿಂದ ಹೇಳಿದ್ದೆ. ನೋಡಿದೆಯಾ ನನ್ನ ಮುದ್ದು ಪಪ್ಪಾಯಿ, ಎಷ್ಟೆಲ್ಲಾ ಹಣ್ಣು ಬಿಟ್ಟಿದೆ.

ನನಗೆ ಬೇಸರವಾದಾಗಲೆಲ್ಲ ಅದೆಷ್ಟೋ ಹೊತ್ತು ಈ ಗಿಡದೊಡನೆ ಮಾತನಾಡುತ್ತಿದ್ದೆ. ಅದರ ಕೆಳಗೆ ಓದುವುದು, ಊಟ ಮಾಡುವುದು, ತಲೆ ಬಾಚುವುದು, ಜೊಂಪು ಹತ್ತಿದ್ದರೆ ಕಾಲು ಚಾಚಿ ಮಲಗುವುದು ಇತ್ಯಾದಿ, ಇತ್ಯಾದಿ ನನ್ನ ಏಕಾಂತವನ್ನೆಲ್ಲ ಇದರ ಜೊತೆಯಲ್ಲೇ ಹಂಚಿಕೊಂಡಿದ್ದೇನೆ. ನನ್ನ ಉಪದ್ರವವನ್ನು ಅದೆಷ್ಟು ಸಹಿಸಿರಬಹುದು ಈ ಗಿಡ.

ಊಟಕ್ಕೆ ಬಾ ತಾಯೀ, ಅಮ್ಮನ ಅಕ್ಕರೆಯ ದನಿಗೆ ಎಚ್ಚೆತ್ತೆ. ಊಟ ಮಾಡಲು ಮನಸ್ಸಿರಲಿಲ್ಲ. ಶರೀರ ಇಲ್ಲಿಂದ ಏಳಲಾರೆ ಎಂದು ಮುಷ್ಕರ ಹೂಡಿತ್ತು. ಗಿಡವನ್ನೇ ದೃಷ್ಟಿಸುತ್ತಾ ಅನಂತ ಆಲೋಚನೆಯಲ್ಲಿ ಲೀನವಾಗಿ, ಊಟವನ್ನೂ ಮಾಡದೆ, ಬಳಲಿಕೆಯಿಂದ ನಿದ್ದೆಗೆ ವಶಳಾದೆ.

****

ಸಂಜೆ ಆರುಗಂಟೆ... ಥಕ್ಕನೆ ಎಚ್ಚರವಾಯ್ತು. ಕಪ್ಪಾದ ಮೋಡಗಳು ಮಳೆಗರೆಯಲು ಸಿದ್ಧವಾದಂತಿತ್ತು. ಹೊಟ್ಟೆಯೊಳಗೆ ಅಸಾಧ್ಯ ಹಸಿವೆಯ ಬೆಂಕಿ, ಏನನ್ನೂ ತಿನ್ನಲು ಮನಸ್ಸು ಬಾರದೆ, ಅಮ್ಮ ಮಾಡಿಕೊಟ್ಟ ಬಿಸಿ ಬಿಸಿ ಚಾ ಕುಡಿದು, ಮನಸ್ಸಿನಲ್ಲಿ ಏನನ್ನೋ ಧ್ಯಾನಿಸುತ್ತಾ, ಕೆದರಿದ ಮುಡಿಯನ್ನು ಸರಿಪಡಿಸಿಕೊಂಡು ಹೊರಗೆ ಅಡಿಯಿಡಬೇಕೆನ್ನುವಷ್ಟರಲ್ಲಿ ಸಣ್ಣಗೆ ಮಳೆ ಹನಿಯ ತೊಡಗಿತು. ಆದರೂ ನಿಲ್ಲದೆ, ಬಹಳ ಯೋಚಿಸಿ, ಕೊಡೆ ಹಿಡಿದುಕೊಂಡು ಅರ್ಧಫರ್ಲಾಂಗು ದೂರದಲ್ಲಿರುವ ಬಸ್‌ಸ್ಟ್ಯಾಂಡಿನ ಕಡೆಗೆ ಮೆಲ್ಲನೆ ನಡೆದು ಹೋದೆ. ದುಃಖ ಉಮ್ಮಳಿಸಿ ಬಂತು. ನನ್ನನ್ನು ಈ ಸ್ಥಿತಿಗೆ ತಂದು ನಿಲ್ಲಿಸಿದವನನ್ನು ಏನೆಂದು ಕರೆಯಲಿ? ಅನಾಗರಿಕನೆಂದೆ? ಶುದ್ಧ ಒರಟನೆಂದೆ? ನನಗರಿವಿಲ್ಲದೆ ನನ್ನ ಕಣ್ಣಂಚಿನಲ್ಲಿ ನೀರು ಹನಿಯುತ್ತಿತ್ತು. ಮನಸ್ಸು ಒಳಗೊಳಗೇ ಚೀರಿಡುತ್ತಿತ್ತು. ಮಳೆಯ ಹನಿ ಜೊತೆಯಲ್ಲಿ ಕಣ್ಣ ಹನಿ ಬೆರೆತು ಹೋಗಿತ್ತು.

ನನ್ನಂಥ ಹೆಣ್ಣುಗಳ ಮನಸ್ಸು ಅದೆಷ್ಟು ಭಾವುಕತೆಗೆ ಒಳಗಾಗುತ್ತದೆ. ಹೆತ್ತವರ ಬಾಂಧವ್ಯಕ್ಕೆ ಕೊಡದ ಮಹತ್ವವನ್ನು ಪ್ರೀತಿಯನ್ನು ಕೇವಲ ಗಂಡನಾಗಿ ಬಂದವನಿಗೆ ಕೊಟ್ಟುಬಿಡುವ ಧಾರಾಳತನ, ಅಥವಾ ಒಂದು ರೀತಿಯಲ್ಲಿ ಶರಣಾಗತಿ, ಹೆಣ್ಣಿನ ಬದುಕಿನಲ್ಲಿ ಎಲ್ಲದಕ್ಕೂ ಗಂಡನಿದ್ದರೆ ಶ್ರೇಯಸ್ಸು... ಇಲ್ಲದಿದ್ದರೆ ನಮ್ಮ ಜನಗಳು ಹೆಣ್ಣನ್ನು ನೋಡುವ ದೃಷ್ಟಿಕೋನವೇ ಬೇರೆ. ಇಂಥ ದರಿದ್ರ ಆಲೋಚನೆಗಳೆಲ್ಲಾ ಆಗಾಗ ತಲೆಯೊಳಗೆ ಗಿರಕಿ ಹೊಡೆಯುತ್ತವೆ.

ವರ್ಷದ ಹಿಂದೆ ನನ್ನ ದುಷ್ಯಂತ ನನ್ನನ್ನು ಪ್ರೀತಿಯಿಂದ ನೋಡಿದ ಮೊದಲ ದಿನವೂ ಹೀಗೆಯೇ ಹೂಮಳೆ ಬಂದಿತ್ತು. ಅವನ ಕಣ್ಣಿನಲ್ಲೇನೋ ಹೊಳಪು... ಮಳೆಯಿಂದ ತಪ್ಪಿಸಿಕೊಳ್ಳಲು, ಮರದ ಆಶ್ರಯದಲ್ಲಿ ನಿಂತೊಡನೆ ಅನಿರೀಕ್ಷಿತ 'ಹೂಮುತ್ತು' ನನ್ನ ಕೆನ್ನೆಗೆ ಸ್ಪರ್ಶವಾಯಿತು. ಆ ಮುತ್ತು ಪ್ರೀತಿಯನ್ನು ದೃಢಪಡಿಸಿತ್ತು. ಅಂದು ಬಂದ ಮಳೆ ನಮ್ಮ ಪ್ರೀತಿಯನ್ನು ಹಾರೈಸಿತ್ತು. ಅಂದಿನ ಆ ಮಳೆಗೆ ಧನ್ಯವಾದಗಳನ್ನು ಅರ್ಪಿಸಿದ್ದ ಮನಸ್ಸು ಇಂದಿನ ಮಳೆಯನ್ನು ಶಪಿಸುತ್ತಾ ಮುನ್ನಡೆದಿತ್ತು. ಹೇಗೋ ಏನೋ ಬಸ್ ಸ್ಟ್ಯಾಂಡಿನ ಹತ್ತಿರಕ್ಕೆ ತಲುಪಿದ್ದೆ. ಆಗಲೆ ಮಳೆ ತನ್ನ ಬಿರುಸನ್ನು ಹೆಚ್ಚಿಸಿತ್ತು. ಕೈಯಲ್ಲಿದ್ದ ಕೊಡೆ ಬಿಡಿಸಿ, ತಲೆ ಮೇಲೆ ಹಿಡಿದುಕೊಂಡು ಬಂದು ಹೋಗುತ್ತಿದ್ದ ಬಸ್ಸಿನ ಪ್ರಯಾಣಿಕರಲ್ಲಿ ಇವನನ್ನು ಹುಡುಕುತ್ತಿದ್ದೆ. ತಲೆ ಸುತ್ತುತ್ತಿರುವ ಅನುಭವವಾಗುತ್ತಿತ್ತು. ಅಲ್ಲಿ ಬಿದ್ದರೂ ಕೇಳುವವರಿಲ್ಲ ಎಂದೆನಿಸಿ, ಮೆಲ್ಲಗೆ ಮನೆಯತ್ತ ಮುಖಮಾಡಿದೆ. ಮಳೆ ಹೆಚ್ಚಾಗುತ್ತಲೇ ಇತ್ತು. ನನ್ನೆದುರೇ ನೆನೆಯುತ್ತಾ ಹೆಜ್ಜೆ

ಹಾಕುತ್ತಿದ್ದ ವೃದ್ಧರೊಬ್ಬರಿಗೆ ಕೊಡೆ ನೆರವು ನೀಡಿ, ಅವರು ಮತ್ತೊಂದು ರಸ್ತೆಯ ತಿರುವಿಗೆ ಧನ್ಯವಾದ ತಿಳಿಸಿ ಹೊರಟ ನಂತರ, ಇಲ್ಲದ ನಗೆ ತುಳುಕಿಸಿ ಮುನ್ನಡೆದೆ. ಸುಮಾರು ಏಳುಗಂಟೆಯಾಗಿತ್ತು. ಮನೆಯಲ್ಲಿಯೂ ಮೋಡ ಕವಿದ ವಾತಾವರಣವಿತ್ತು. ಅದಕ್ಕೆ ಕಾರಣ ನನ್ನ ಬಾಡಿದ ಮೋರೆಯಾಗಿತ್ತು. ಒಂದಷ್ಟು ತಿಂದ ಶಾಸ್ತ್ರ ಮುಗಿಸಿ ಜಂತೆ ಎಣಿಸುತ್ತಾ ನಿದ್ರಿಸಿದೆ.

****

ರಾತ್ರಿಯೆಲ್ಲಾ ಸುಂದರ ಕನಸುಗಳು. ನನಗೆರಡು ರೆಕ್ಕೆ ಮೂಡಿದೆ. ಇಷ್ಟ ಬಂದಲೆಲ್ಲ ಹಾಯಾಗಿ ತಿರುಗಾಡುತ್ತಾ ಒಳ್ಳೆಯ ಗಾಳಿ, ಬೆಳಕನ್ನು ಆಸ್ವಾದಿಸುತ್ತಾ, ಇಂಪಾಗಿ ಹಾಡುತ್ತಾ, ಕಿನ್ನರಿಯಂತೆ ಬಳುಕುತ್ತಾ ಆಕಾಶದ ಯಾವುದೋ ಎತ್ತರದಲ್ಲಿ, ಕಾಣದ ಬಿತ್ತರದಲ್ಲಿ ಹಾಯಾಗಿದ್ದೆ. ಸಮೀಪದಲ್ಲಿಯೇ ಮಂಜಿನ ಮನೆ, ಅರಳೆಯಿಂದ ಬಿಡಿಸಿದ ಮುದ್ದಾದ ಮಕ್ಕಳು, ಮೇಘವನ್ನು ಚುಂಬಿಸುತ್ತಿದ್ದ ಬಿಳಿಯ ಪಾರಿವಾಳಗಳು. ಇವೆಲ್ಲಾ ನನ್ನೊಡನೆ ಆಟವಾಡುತ್ತಾ, ಲಲ್ಲೆಗರೆಯುತ್ತಾ ಮತ್ತೆ ನನ್ನ ಬಾಲ್ಯವನ್ನು ಕರುಣಿಸಿ ಬಿಡುತ್ತವೆ. ಸುಮ್ಮನಿರದ ಪಪ್ಪಾಯಿಮರ ಅಲ್ಲಿಯೂ ಹಾಜರಾಗಿ ಬಿಡುತ್ತದೆ. ಕೊಡುವುದರಲ್ಲೇ ನನಗೆ ಕೃತಾರ್ಥತೆ ಎಂದು ಪಲುಕುತ್ತದೆ. ನಾನದರ ಕೆಂಪು ಕೆಂಪಾದ ಹಣ್ಣುಗಳನ್ನು ಮೃದುವಾಗಿ ಸವರುತ್ತಿದ್ದೇನೆ. ಯಾತಕ್ಕೂ ಪಕ್ಕಕ್ಕೆ ಹೊರಳಿದೆ. ಪಕ್ಕೆ ಹಿಡಿದಂತಾಯ್ತು. ಕಣ್ಣು ಬಿಡುತ್ತೇನೆ. ಕಲ್ಲು ನೀರು ಕರಗುವ ಸಮಯ. ನನ್ನ ರೆಕ್ಕೆಗಳನ್ನು ಹುಡುಕಾಡಿದೆ. ಆದರೆ ಅವು ಮಾಯವಾಗಿದ್ದವು. ನನ್ನ ಬೆಳ್ಳಿಯ ಮನೆ, ನನ್ನದೇ ನಿಟ್ಟುಸಿರಿಗೆ ಕರಗಿ ಹೋಗಿತ್ತು. ಅರಳೆಯಿಂದ ಮೂಡಿದ ಮುದ್ದಾದ ಮಕ್ಕಳು ಎಲ್ಲಿ? ಕಟುವಾಸ್ತವದ ನೋವಿಗೆ ಬಲಿಯಾದವು. ಮತ್ತು ಈ ಹೊಟ್ಟೆ, ಇದು ಪಪ್ಪಾಯಿಗಳಂತೆ ಗಟ್ಟಿಯಾಗಿದೆ. ಇದು ಎಂದಾದರೂ ಮಾಗಿ, ಹಣ್ಣಾಗಿ, ಈ ಧರೆಗುರುಳಬಹುದು. ಅಲ್ಲಿಯ ತನಕ ನಾನು ಯಾವುದೋ ಕುದಿವ ಲಾವಾರಸವನ್ನು ಹೊಟ್ಟೆಯಲ್ಲಿಟ್ಟುಕೊಂಡ ಭೂಮಿಯ ಹಾಗೆ ತಣ್ಣಗಿರುವಂತೆ ನಟಿಸಬೇಕೆ? ಹೇಗಿರಲಿ ನಾನು ಈ ನೋವನ್ನು ಹೊತ್ತುಕೊಂಡು? ಸಾಂತ್ವಾನ ಸಿಗದ ಈ ಜೀವಿತವನ್ನು ಹೇಗೆ ಭರಿಸಲಿ? ಈ ಜಗತ್ತಿನಲ್ಲಿ ಇಂಥ ಸವಾಲು ಭಯಂಕರವಾದದ್ದು ಎನಿಸಿತು. ಹೆಣ್ಣುಗಳಿಗೇ ಏಕೆ ಈ ಶಿಕ್ಷೆ ಅಥವಾ ಎಲ್ಲ ಹೆಣ್ಣುಗಳಿಗೂ ಹೀಗೇ ಅನ್ನಿಸುವುದೇ? ಈ ಪ್ರಶ್ನಾವಳಿ ಮುಗಿಯುವುದೇ ಇಲ್ಲ.

ಕಾಗೆಗಳ ಕಲರವದೊಂದಿಗೆ ಕಪ್ಪನೆಯ ಮೋಡ ತಿಳಿಯಾಯ್ತು. ಎದ್ದವಳೆ ನೋಡುತ್ತೇನೆ, ಪಪ್ಪಾಯಿ ಕಾಯೊಂದು ಕೆಂಪು ಪಟ್ಟೆ ಒಡೆದು ಕಣ್ಣು ಮಿಟುಕಿಸಿತು. ತುಟಿಕೊಂಕಿಸಿ ಮೆಚ್ಚುಗೆ ಸೂಚಿಸಿದೆ. ನನ್ನನ್ನೇ ಗಮನಿಸುತ್ತಿದ್ದ ತಾಯಿ ಹೇಳಿದಳು. “ಹುಷಾರು ನೀನೀಗ ಪಪ್ಪಾಯಿ ಹಣ್ಣು ತಿನ್ನಬಾರದು'.

***

ಬೆಳಿಗ್ಗೆ ನಿಧಾನವಾಗಿ ಅಡ್ಡಾಡಿ ಗಾಳಿ ಸೇವನೆ ಮಾಡಿದೆ. ಅಕ್ಕಪಕ್ಕದ ಮನೆಗಳ ಕಡೆಗೆ ಓರೆ ನೋಟ ಬೀರಿದೆ. ಯಾರೂ ನನ್ನನ್ನು ಅಷ್ಟಾಗಿ ಗಮನಿಸಲಿಲ್ಲ. ತುಸು ನೆಮ್ಮದಿಯಾಯ್ತು.



ಅಂಗಳಕ್ಕೆ ಬಂದು ಹೂ ಬಿಸಿಲಿಗೆ ಮೈ ಒಡ್ಡಿದೆ. ಮುಖದಲ್ಲಿ ಬೆವರು ಮನಸೆ ಭಾರ ಎನಿಸಿ, ಒಳಗೆ ಒಸರತೊಡಗಿತು. ಯಾಕೋ ಮೈಯೆ ಭಾರ ಹೋಗಬೇಕೆನಿಸಿತು. ಯೋಚಿಸುತ್ತಾ ಮತ್ತೆ ತುಸು ಹೊತ್ತು ನಿಂತೆ. ಹಾಳಾದ ದುಷ್ಯಂತನ ನೆನಪಾಯಿತು. ಖಂಡಿತವಾಗಿಯೂ ಅವನಿಗೆ ಯಾವುದೋ ಋಷಿಮುನಿಯ ಶಾಪವಿರಬೇಕು! ಕಟ್ಟಿಕೊಂಡವಳನ್ನು ಬಿಟ್ಟು ಎಲ್ಲಿ ಅಲೆಯುತ್ತಿದ್ದಾನೋ ಇವನನ್ನು ಚೇಳು ಕುಟುಕ! ಇನ್ನೇನೂ ಬಯ್ಯಲು ತೋಚದೆ, ತುಟ್ಟಿ ಕಚ್ಚಿ ಒಳ ನಡೆದೆ. ಕಾಫಿಯ ಲೋಟ ನನಗಾಗಿ ಕಾದಿತ್ತು. ಕೊನೆಗೆ ಅದೂ ಬೇಡವೆನಿಸಿ ನನಗೇ ಖಾಯಿಷ್ ಆಗಿ ಟೀ ಮಾಡಿಕೊಳ್ಳುವ ಎನಿಸಿತು. ಸ್ಟವ್ ಹಚ್ಚಿ ಟೀ ಪಾತ್ರೆಯನ್ನು ಅದರ ಮೇಲಿಟ್ಟು ನೀರು ಕುದಿಸಿ, ಟೀ ಡಬ್ಬಿಗೆ ಹುಡುಕಾಡಿದೆ. ಅಷ್ಟರಲ್ಲಿ ಹೊರಗಿನಿಂದ ಬೆರಗಿನ ಹೆಚ್ಚ ಕಡಿಮೆ ಚೀರಿದ ದನಿಯಲ್ಲಿ - "ಅವರು ಬಂದರಲ್ಲ" ಎಂದದ್ದು ಕಿವಿಗೆ ಅಪ್ಪಳಿಸಿತು. ಆಸೆಯ ಒಳಗಣ್ಣು ಸ್ಪಂದಿಸತೊಡಗಿತು. ನನ್ನ ತಂದೆಯ ದನಿ, ಮತ್ತು ಚಿರಪರಿಚಿತ ನಡಿಗೆಯ ಸದ್ದು ಒಮ್ಮೆಲೆ ಗ್ರಹಿಸಿದೆ. ಟೀ ಪುಡಿ ಮತ್ತು ಸಕ್ಕರೆ ಹಾಕಿ ಕುದಿಸಿ, ತಕ್ಕಷ್ಟು ಹಾಲನ್ನು ಬೆರೆಸಿ ಇನ್ನೇನು ಕೆಳಗಿಳಿಸಬೇಕು. ಆಗ ಎರಡು ಹಸ್ತಗಳು ನನ್ನನ್ನು ಬಳಸಿ ಕಣ್ಣನ್ನು ಮುಚ್ಚಿತು. ಸಿಟ್ಟೋ, ಅತಿ ದುಃಖವೋ ಅವನು ನನ್ನ ದುಷ್ಯಂತನೆಂದು ಗೊತ್ತಾಗಿ ನನ್ನ ತುಟಿಯಂಚಿನಲ್ಲಿ ಕೊನೆಗೂ ಬಂದ ಒಂದು ಪದ 'ಅನಾರ್ಯ' ಅವನು ಕೇಳಿಸಿಕೊಂಡು ನಕ್ಕ.

ನೀವು ಹೀಗೆ ಹೇಳದೆ ಹೋಗಿ, ನಮ್ಮ ಮಗು ಕೊರಗುವಂತಾಯ್ತು ಎಂದು ಅಳಿಯನನ್ನು ಅಮ್ಮ ತರಾಟೆಗೆ ತೆಗೆದುಕೊಂಡಳು. ನಿಮಗೆ ಸಭ್ಯತೆ ಕಡಿಮೆ ಎಂದದ್ದಕ್ಕೆ ಆತ ತಪ್ಪಾಯೆಂದು ಕಿವಿ ಹಿಡಿದುಕೊಂಡು ಕ್ಷಮೆ ಕೇಳುವ ನಟನೆ ಮಾಡಿದ. ಅದೆಲ್ಲವೂ ಗೌಣ ಎನ್ನುವಂತೆ ಮಾತು ಹೊರಳಿಸಿದ ಹೇಗಿದೆ ಈಗ ನನ್ನ ಮಗು' ಎಂದು ಕೇಳಿದ.

ನಾನೂ ಮಾತನಾಡದೆ ಪಪ್ಪಾಯಿ ಮರದೆಡೆಗೆ ಕೈ ತೋರಿಸಿದೆ. ಕಾಯಿಗಳ ಭಾರಕ್ಕೆ ಮರ ಧನ್ಯತೆಯಿಂದ ಬೀಗುತ್ತಿತ್ತು.

## ೧೮. ಕನಿ

**- ಚಿ.ರಂ.ಜಗದೀಶ್**

"ಅಯ್ಯೋ ತಾಯಿ ತಗ್ಯತ್ತ ಅದೇನ್ ಸಂತೆನೋ, ಅದೇನ್ ಗಲಾಟೆ ಅದೇನ್ ಗದ್ಲನಮ್ಮ ಸಾಕಾಗೋಯ್ತು. ಅವ್ವಾವನೋ ಕುಡುದ್ಬಂದ್ಬಿಟ್ಟು ಅವೊಯ್ಯನ್ನ ಅಲಲ್ಕ ಮತೆ ಬಯ್ತಾವ್ನೆ ಅವ್ವಾರೋ ಬಾಡ್ತಿನ್ನೋ ಲಂಗ್ಡ ನನ್ನನ್ನೇ ಇರ್ಬೇಕು" ಎನ್ನುತ್ತಾ ದೂರದ ಸೀಳುದಾರಿಯಲ್ಲಿ ನಡೆದುಬರುತ್ತಿದ್ದ ಹೆಂಗಸೋರ್ವಳ ಮಾತು ಸಂಜೆದಾರಿಯಲ್ಲಿ ನಡೆದು ಬರುತ್ತಿದ್ದ ಅಡವೀಶನ ಕಿವಿಗೆ ಬಿದ್ದಾಗ ತನ್ನೆರಡೂ ಕಿವಿಗಳನ್ನು ಆನೆಯಂತೆ ಅಗಲಿಸಿ ನಿಧಾನವಾಗಿ ಹೆಜ್ಜೆ ಹಾಕತೊಡಗಿದ್ದ. ಗದ್ದೆ, ತೋಟದ ಕಡೆ ನೋಡಿಕೊಳ್ಳುವವರು ಯಾರೂ ಇಲ್ಲದ ಕಾರಣ ತನ್ನ ಓದನ್ನು ಅರ್ಧಕ್ಕೆ ನಿಲ್ಲಿಸಿ ತಾಯಿ, ತಂದೆಯರೇ ಗುರುಗಳಂತೆ ಭಾವಿಸಿ ಮನೆಯ ಕಡೆ ನಿಂತಿದ್ದ ಅಡವೀಶ ಇಪ್ಪತ್ತರ ಯುವಕ, ಸುಂದರನಾಗಿದ್ದ, ಆತನ ಮುಖಕ್ಕೆ ಮತ್ತಷ್ಟು ಮೆರುಗನ್ನು ಗುಂಗುರುಕೂದಲು ನೀಡಿದ್ದವು. ತನ್ನ ಜಾತಿಯವನೇ ಆದ ಭೈರನ ಜೊತೆ ತನ್ನ ಚಿಕ್ಕಪ್ಪ ಜಗಳವಾಡುತ್ತಿದ್ದುದ ಕಂಡು ತಾನೂ ಭಾಗಿಯಾದಾಗ, ಭೈರ ಎಂಥದೋ ಕೆಟ್ಟ ಮಾತೊಂದನ್ನು ಬೈದಿದ್ದ. ಆ ಗುಂಗಿನಲ್ಲಿಯೇ ಕುಡುಗೋಲೊಂದನ್ನು ಕೈಯಲ್ಲಿ ಹಿಡಿದುಕೊಂಡು ಗದ್ದೆಯ ಕಡೆ ನಡೆಯತೊಡಗಿದ್ದ .

"ಅಯ್ಯೋ ತಗಳ್ ನರ್ಸಮ್ಮಕ್ಕಯ್ಯ ಬಾಡ್ತಿನ್ನ ಜನ ಏನು? ಅವುರ್ಮೇಲಿಗ, ಕಾಣ್ಬೆ ನೆನ್ನೆ ನಿಂಬೈರುನ್ನ ಎಂಥೆಂಥಾ ಮಾತಾದ್ದಾಂತ ಆ ಅಡ್ವೀಶಪ್ಪುನ್ನ ಮಾದಿರ್‍ಗುಟ್ಟಿದ್ ನನ್ಮಗ್ನೆ ಅಂತಾರ್‍ಗುಟ್ಟೋನೆ ಇಂತೋರ್‍ಗುಟ್ವಾನೆ ಅಂತಾ ಒಂದ್ಸಾವ್ರ ಬಯ್ತಿದ್ದಾ ಥೋ! ಅವು ಗಂಡುಸ್ರಾಡೋ ಮಾತ.." ಎಂದು ಬೇಸರಿಸಿಕೊಂಡು ನಡಿಯುವರೊಂದಿಗೆ ಮತ್ತೋರ್ವಳ ಸರದಿ ಪ್ರಾರಂಭವಾದಾಗ ತನ್ನ ವಿಷಯ ಪ್ರಸ್ತಾಪವಾದುದನ್ನು ಕಂಡು ಪಕ್ಕದಲ್ಲಿದ್ದ ಹಳ್ಳವೊಂದರಲ್ಲಿ ಅಡವೀಶ ಅವಿತು ಕುಳಿತ. ತನ್ನ ಹತ್ತಿರದ ಸಂಬಂಧಿಯಾದ ಭೈರನ ಬಗ್ಗೆ ತಾತ್ಸಾರದ ಮಾತಾಡಿದ್ದರಿಂದ ನರಸಮ್ಮನಿಗೆ ಕೋಪ ನೆತ್ತಿಗೇರಿತ್ತು. "ಎಲೆ ನಡೆ ಪಾರ್ವತಿ ಅವ್ರು ಬಲು ನೇರುಪಾಜ್ಜನ ಅಂತಾ ಏನೇಳೀಯ, ಅಲ್ವೆ ಬೈರ ನನ್ನ ಕೇಣಿ ಮಾಡ್ತಾ ಅಂತ ಹೇಳೇಕಾದ್ರೆ ಆ ಬಸ್ವಿ ! ಗಂಡ್ಸಾದನು ಸುಮ್ನೆ ಇರ್ತಾನ, ಅವ್ನು ಅವ್ರಪ್ಪ ಅವ್ನೊಬ್ನೆ ಗಂಡ್ಸು ಅನ್ನೋತರ ಬಂದ ಅವ್ರಿಗೆ ಸಪೋರ್ಟಾಗಿ ಅಡ್ವೀಶ ಬಂದವ್ನೆ ಅಯ್ಯೋ ನಡಿ ಅಡ್ವೀಶ ರಮ್ಮ ಏನ್ನೇರುಪಾದಳ, ಮಾದಿರೋನ್ನಿಕ್ಕೆಂಡಿದ್ಲಂತೆ ಅವಾಗ್ಲೆ ಅಡ್ವೀಶ ಹುಟ್ಟಿರೋದು ನಾ ಕಾಣುದ್ದೇಳೆ. ಹೋಗಿ ಒರ ಬಸಮಕ್ಕಯ್ಯನ್ನ ಕೇಳು ಅವುಲ್ಲಾ ಗೊತ್ತು' ಎಂದಾಗ ಇದುವರೆಗೂ ಕಥೆ

ಕೇಳಿದಂತೆ ಕೇಳುತ್ತಾ ಬರುತ್ತಿದ್ದ ಪಾರ್ವತಿಗೆ ಆಶ್ಚರ್ಯವಾಯಿತು. ತನ್ನ ಕಣ್ಣುಗಳನ್ನು ತಾನೇ ನಂಬದವಳಂತೆ 'ಹೇಳಕ್ಕಯ್ಯಾ ....' ! ಎಂದು ದೀರ್ಘವಾಗಿ ರಾಗ ಎಳೆಯುತ್ತಾ 'ಇವೆಲ್ಲಾ ನಮಗೇನು ಗೊತ್ತು ತಾಯಿ. ತಡ್ಯಕ್ಕಯ್ಯ ಒಂದೀಸುಚ್ಚೆ ಉಯ್ಬೇಕು' ಎಂದು ತನ್ನ ತಲೆಯ ಮೇಲಿನ ಗಂಟು ಇಳಿಸಿ ಗಿಡದಮರೆಗೆ ಹೋಗುವಳು. ಯಾರೋ ಹೋದ ಸುಳಿವು ಕಂಡು ಅರ್ಧಕ್ಕೆ ಎದ್ದು 'ಯಾರೋ ಗಂಡಸ್ರು ಹೋದಂಗಾಯ್ತಮ್ಮ' ಎಂದು ಎದ್ದು ಬಂದು ಚೀಲ ಹೊತ್ತುಕೊಂದು ನಡೆಯಲಾರಂಭಿಸಿದಳು. ನಾಗರಹಾವು ಸಿಟ್ಟು ಬಂದಾಗ ವಿಷಕಕ್ಕುವಂತೆ ತನ್ನೊಳಗುಂಟಾದ ಕಿಚ್ಚಿನಿಂದ ನಗ್ನ ಸತ್ಯವೊಂದನ್ನು ಕಕ್ಕಿದ್ದ ನರಸಮ್ಮ, ಕುಲದ ಪ್ರಶ್ನೆ ಬಂದಾಗ ಎಚ್ಚೆತ್ತು 'ನೋಡೆ ಪಾರ್ವತಿ ಯಾರೂ ಈ ವಿಸ್ಯ ಬಾಯ್ಬಿಡ್ಯಾಡ ನಿನ್ನೊಬ್ಬತ್ತಾನೆ ಹೇಳಿರೋದು" ಎಂದಾಗ ಪಾರ್ವತಿ 'ಅಯ್ಯೋ ಬಾರಕ್ಕಯ್ಯ ಬೇರೇರ ಸುದ್ದಿ ಕಳ್ಕೊಂಡು ನಮ್ಗನಾಗೋಕಾಗಕ್ಕೆ ನಮ್ಮ್ಕೆ ಹಾಸಿ ಹೊದಣವಕ್ಷಯ್ಕೆ' ಎಂದು ಜೋರಾಗಿ ಹೆಜ್ಜೆ ಹಾಕಲಾರಂಭಿಸಿದಳು. ಹೊತ್ತು ಮುಳುಗುತ್ತಿದ್ದುದ ಕಂಡು ನರಸಮ್ಮನೂ ಹೆಜ್ಜೆಯ ನಡೆಯನ್ನು ಜೋರು ಮಾಡತೊಡಗಿದಳು. ಅವರ ಹಿಂದೆ ಓಡಿಸಿಕೊಂಡು ಹೋದ ಮೇಕೆಯ ಗುಂಪೊಂದು ಧೂಳನ್ನೆಬ್ಬಿಸಿ ಗಗನ ಮುಟ್ಟುವಂತೆ ಮಾಡಿತ್ತು. ಸೂರ್ಯ ಮುಳುಗಿದುದರಿಂದ ಕತ್ತಲೆ-ಬೆಳಕಿನ ಸಂಘರ್ಷವೇರ್ಪಟ್ಟಿತ್ತು .

*****

ರಾತ್ರಿಯೆಲ್ಲಾ ಅಡವೀಶನ ಪಾಲಿಕೆಗೆ ನರಕಯಾತನೆಯಾಗಿತ್ತು. ಹೃದಯದಲ್ಲಿ ಗಾಜಿನ ಚೂರೊಂದು ಚುಚ್ಚಿಕೊಂಡಿರುವಂತಾಗಿತ್ತು. ತನ್ನ ತಾಯಿ ನಿಂಗವ್ವನ ಜೊತೆಯಲ್ಲಿ ಆತ ಹೆಚ್ಚು ಮಾತಾಡಲಿಲ್ಲ. ಅರಳೀಕಟ್ಟೆಯೂ ಹಿತಕಾಣದೆ ಅಡ್ವೀಶನ ಮನಸ್ಸು ನಿದ್ದೆಗೆ ಶರಣು ಹೋದರೂ ಬರಬೇಕಲ್ಲಾ ನಿದ್ದೆ ! ತೂಗುಯ್ಯಾಲೆಯಾಡಲಾರಂಭಿಸಿತು. ವಿಸ್ಮಯವಾದ ಈ ಜೀವನವೆಂಬ ದಿನಚರಿಯಲ್ಲಿ ಎಂತೆಂಥಾ ನಗ್ನ ಸತ್ಯಗಳು ಅಡಗಿವೆ. ಅದರ ಪುಟಗಳು ಯಾವ್ಯಾವಗಲೋ ತೆರೆದುಕೊಂಡು ಬದುಕನ್ನು ಶೂನ್ಯವಾಗಿಸಿಬಿಡುತ್ತವೆ. ಲೋಕ ದೃಷ್ಟಿಯಲ್ಲಿ ನಾನೊಬ್ಬ ಲಿಂಗಾಯ್ತ... ಆದರೆ ನಾನೊಬ್ಬ ಮಾದಿಗ... ಛೇ ದುರ್ಮಾರ್ಗಿ ಹೆಂಗಸು ಅಂದ ಮಾತಿಗೆ ತಲೆಕೆಡಿಸಿಕೊಳ್ಳುವುದೇ? ಬೆಂಕಿಯಿರದೆ ಹೊಗೆಯೇ? ಅದರಲ್ಲೂ ಇದು ಮೂರನೆಯವರ ಬಾಯಿಂದ ಕೇಳುತ್ತಿರುವುದು. ಕತ್ತಲೆಯಲ್ಲಿ ಹುದುಗಿರುವ ವಸ್ತುವಿಗೆ ಬೆಳಕು ಹರಿದಾಗ ವಾಸ್ತವ ಚಿತ್ರಣ ಕಾಣುವಂತೆ ನನ್ನ ಜೀವನದಲ್ಲಿ ಹುದುಗಿದ್ದ ರಹಸ್ಯವೊಂದು ತೆರೆದುಕೊಂಡಿದೆ. ವಸ್ತುವಿನ ಚಿತ್ರಣ ಮತ್ತೆ ಕತ್ತಲು ಬಂದರೂ ಮಾಸಲಾರದು. ಹಾಗಾದರೆ ಆ ವ್ಯಭಿಚಾರದಿಂದ ಜನಿಸಿದ ಕೂಸೆ ನಾನು? ಹೀಗೆ ತಿರುಚಿ ನೋಡಿದ ಕೊನೆಗೆ ಮನಸ್ಸಿನ ಎಲ್ಲಾ ಮಗ್ಗಲುಗಳನ್ನು ಮೊಂಡಧೈರ್ಯವೊಂದನ್ನು ಮಾಡಲು ಯತ್ನಿಸಿದ ಅದೂ ಸಾಧ್ಯವಾಗಲಿಲ್ಲ . ಇಲಿಯೊಂದು ಮಡಕೆಯ ಸಂದಿಯಲ್ಲಿ ಓಡಾಡಿದ ಶಬ್ದ ಅಡವೀಶನ ಕಣ್ಣಲ್ಲಿ ನೀರು ತಾನಾಗಿ ಹರಿಯಲಾರಂಭಿಸಿದವು.

ಯಾವಾಗ ಕಣ್ಣಿಗೆ ನಿದ್ದೆ ಹತ್ತಿತೋ ಏನೋ ತಂದೆಯ ಧ್ವನಿ ಎಬ್ಬಿಸಿದಾಗಲೇ ಎಚ್ಚರವಾದದ್ದು . ಬೆಳಕು ಎಲ್ಲೆಡೆ ಚೆಲ್ಲಿತ್ತು ಬೇಗ ಮನೆಯ ನಿತ್ಯ ಕರ್ಮಗಳನ್ನು ಮುಗಿಸಿ ಕೆರೆಯಕಡೆ ಹೊರಟ. ಅವನ ಮನದಲ್ಲಿ ನರಸಮ್ಮ ಆಡಿದ ಮಾತುಗಳ ಗುಂಗರಿ ಹುಳದಂತೆ ಕೊರೆಯುತ್ತಿದ್ದವು. ಅವಳ ಕೊನೆಯ ಮಾತೊಂದು ಜ್ಞಾನಪಕಕ್ಕೆ ಬಂದು ಒಕ್ಕಲಿಗರ ಕೇರೆಗೆ ನಡೆದು ಕಡೆಯ ಮನೆಯೊಂದನ್ನು ತಲುಪಿದ. ಒಂದು ಗಂಟೆಯನ್ನು ಆ ಮನೆಯಲ್ಲಿ ಕಳೆದಿದ್ದ. ಅತ್ತ ಯಾರೋ ಗಂಡಸರ ಪ್ರವೇಶವಾದಾಗಲೇ ಆ ಮನೆಯಿಂದ ಹೊರಬಂದ. ಮುದುಕಿಯೋರ್ವಳು ಅಡ್ವೀಶನನ್ನೇ ನೋಡುತ್ತಾ ನಿಂತಿದ್ದಳು. ಭಯ ಮತ್ತು ದುಃಖವೆರಡು ಅವಳ ಸುಕ್ಕುಗಟ್ಟಿದ ಮುಖದ ಮೇಲೆ ಎದ್ದು ಕಾಣುತ್ತಿತ್ತು. ಪ್ರವೇಶಿಸಿದ ವ್ಯಕ್ತಿಯೊಂದಿಗೆ ಮಾತಾಡುತ್ತ ಬಂದ ಅಡ್ವೀಶ ಆತನಿಗೇನೋ ಹೇಳಿ ಕಳುಹಿಸಿ ಹಟ್ಟಿಯ ಕಡೆ ನಡೆಯಲಾರಂಭಿಸಿದ.

ಕೆಲವು ಮನೆಗಳಿಗೆ ಆಯಸ್ಸು ಮುಗಿದಿದೆಯೇನೋ ಎಂಬಂತೆ ಆಗಲೋ ಈಗಲೋ ಬಿದ್ದು ಹೋಗುವಂತೆ ಹಸಿ ಇಟ್ಟಿಗೆ ಅರ್ಧಧ್ರಭಾಗವನ್ನು ಕೆಡವಿಕೊಂಡು ನಿಂತಿದ್ದವು. ಅಲ್ಲಲ್ಲಿ ಗುಡಿಸಲುಗಳಿದ್ದವು. ಒಂದು ಗುಡಿಸಲು ಮುಂದೆ ತಾಯಿಯೋರ್ವಳು ಸೌದೆಯನ್ನು ಕತ್ತರಿಸಿ ಇಡುತ್ತಿದ್ದರೆ, ಮಗುವೊಂದು ಅಂಗಾತವಾಗಿ ಹಾಸಿಗೆ ಹೊದಿಕೆಯಿಲ್ಲದೆ ಮಲಗಿತ್ತು. ಇನ್ನೊಂದು ರಾತ್ರಿಯ ಮೃಷ್ಟಾನ್ನವನ್ನು ಮುಕ್ಕತೊಡಗಿತ್ತು. ಅದರ ಮುಂದೆ ಬಡಕಲು ನಾಯೊಂದು ತನಗೂ ಹಾಕಬಹುದೆಂಬ ನಿರೀಕ್ಷೆಯಲ್ಲಿ ಮಲಗಿತ್ತು. ನೊಣಗಳು ತಟ್ಟೆಯನ್ನು ಸುತ್ತುತ್ತಿದ್ದವು. ದೂರದಲ್ಲಿ ಯಾರೋ ತಟ್ಟೆಯನ್ನು ಹೆಣೆಯುತ್ತಿದ್ದುದು ಕಂಡಿತು. ಅಲ್ಲೇ ಅಡ್ಡಾದಿಡ್ಡಿಯಾಗಿದ್ದ ರಸ್ತೆಯಲ್ಲಿ ಆಡುತ್ತಿದ್ದ ಹುಡುಗರಲ್ಲೊಬ್ಬ ತನಗೂ ಬಟ್ಟೆಗೂ ಯಾವುದೇ ಸಂಬಂಧವಿಲ್ಲವೆನ್ನುವಂತೆ ಬಾಹುಬಲಿಯ ರೀತಿಯಲ್ಲಿ ತಿರುಗಾಡುತ್ತಿತ್ತು .

ಸ್ವಲ್ಪ ಮುಂದೆ ಹೋದ ಅಡವೀಶ ಬಲಗಡೆಗೆ ತಿರುಗಿ ನೋಡಿದ. ಅಲ್ಲಿ ಕಲ್ಲು ಕಂಬವೊಂದು ನಿಂತಿದ್ದು ಅದಕ್ಕೆ ಗೋಡೆಯನ್ನು ಇಡಲಾಗಿ ಅದೆಲ್ಲಾ ಕಿತ್ತುಹೋಗಿದ್ದು, ಅದಕ್ಕೆ ಎದುರಿಗಿದ್ದ ಮತ್ತೊಂದು ಕಲ್ಲುಕಂಬ ತನ್ನ ಅರ್ಧಭಾಗವನ್ನು ಕಳೆದುಕೊಂಡಿತ್ತು. ಅದನ್ನು ನೋಡುತ್ತಾ ನೋಡುತ್ತಾ ಅಡವೀಶನ ಕಣ್ಣಲ್ಲಿ ನೀರು ಹರಿಯಿತು. ಅಡವೀಶ ತಕ್ಷಣ ಅಲ್ಲಿಂದ ಕಾಲೆಗೆದ.

ಮಗನನ್ನೇ ಎದುರು ನೋಡುತ್ತಾ ಗುದ್ದಲಿಗೆ ಕಾವೊಂದನ್ನು ಹಾಕುತ್ತ ಮಗಬಂದದ್ದನ್ನು ಕಂಡು 'ಎಲ್ಲೋದೋ ಅಡ್ವೀಶ ಅದೊಂಚೂರು ತೋಟನನ ಕೆತ್ತೋಣ ಇವತ್ತು ಬೇಗ ಬಾರೋ ನಾನು ಹೋಗಿದ್ದೀನಿ' ಎಂದು ಗುದ್ದಲಿಗೆ ಕಾವು ಹಾಕಿಕೊಂಡು ಹೊರಟುಹೋದ. ಅಡ್ವೀಶ ಒಳಗೆ ಬಂದು ಬೇಗ ಮುಖ ತೊಳೆದು ಮುಖ ಹೊರೆಸಿಕೊಳ್ಳುತ್ತಿದ್ದ ಮಗನಿಗೆ ರಾಗಿರೊಟ್ಟಿ, ಕಡ್ಲೆಕಾಯಿ ಚಟ್ಟಿಯನ್ನು ತಂದಿಟ್ಟು 'ಇನ್ನೊಂದು ಆಳಾನ ಕಾರ್ಕ್ಕೊಣೋದಲ್ವೇನೋ ಅಡ್ವೀಶ ' ಎಂದಾಗ ಅಡವೀಶನಿಗೆ ಮಾತು ಅನಿವಾರ್ಯವಾಯಿತು. 'ಎಲ್ಲವ್ವಾ ಯಾರೇಳಿದ್ರೂ ಅವ್ರಿಗೇಳಿದೀವಿ ಇವ್ರಿಗೇಳಿದೀವಿ

ಅಂತಾರೆ' ಎಂದು ತಾಯಿಯ ಕಡೆ ತಿರುಗಿದಾಗ ತಾಯಿ ಒಳಹೋಗಿದ್ದಳು. ತಾಯಿಗೆ ಮನದಲ್ಲೇ ಏನೋ ಒಂದು ಆಶ್ಚರ್ಯ ಮೂಡಿತ್ತು. ದಿನಾಲು ಅಕ್ಕರೆಯಿಂದ ಮಾತಾಡುತ್ತಿದ್ದ ಅಡ್ವೀ ಬ್ಯೆರುನ್ಜೊತೆ ಜಗ್ಳಾಡಿದಾಗಿಂದ್ಲು ಸರ್ಯಾಗಿ ಮಾತಾಡ್ತಲೇ ಇಲ್ವಲ್ಲಾ...? ಏನೋ ಕೇಳಬೇಕೆಂದು ಹೊರಗೆ ಬಂದಾಗ ಅಡ್ವೀಶ ದನಗಳನ್ನು ಎಮ್ಮೆಗಳನ್ನು ಹಿಡಿದುಕೊಂಡು ಹೋಗುತ್ತಿದ್ದ ಸಪ್ಪೆ ಮೋರೆಯಿಂದ ಒಳನಡೆದಳು.

****

ಯಾವುದು ಸರಿ ಯಾವುದು ತಪ್ಪು ಎಂಬುದರ ಜಿಜ್ಞಾಸೆಯಲ್ಲಿ ಮುಳುಗಿದ್ದ ಅಡವೀಶನಿಗೆ ತನ್ನ ತಾಯಿಯ ಬಗೆಗೆ ಹೇಸಿಗೆಯೇನಿಸಿದರೂ ಕ್ಷಣ ಮಾತ್ರದಲ್ಲಿ ಧೈರ್ಯವೊಂದನ್ನು ತಂದುಕೊಂಡ. ಮಧ್ಯಾಹ್ನ ತನ್ನ ತಾಯಿ ತಂದ ಊಟ ಹಿತಕಂಡಿರಲಿಲ್ಲ. ತಾಯಿ ಕೇಳಿದ ಪ್ರಶ್ನೆಗಳಿಗೆ ಹಾರಿಕೆಯ ಉತ್ತರಗಳನ್ನಷ್ಟೇ ಹೇಳಿದ್ದ. ಅವನ ಮನಸ್ಸಿನಲ್ಲಿ ಉಂಟಾದ ಉದ್ವೇಗ ಅವನ ಕೆಲಸದಲ್ಲಿ ವ್ಯಕ್ತವಾಗಿತ್ತು. ಮೈಯಲ್ಲಿ ಬೆವರು ಸುರಿದು ಬನಿಯನ್ ತೋಪೆದಿದ್ದರೂ ಎರಡು ದಿನದ ಕೆಲಸ ಒಂದೇ ದಿನದಲ್ಲಿ ಮುಗಿಸಲು ಪಣತೊಟ್ಟವನಂತೆ ಮಾಡತೊಡಗಿದ ಅವನಿಗೆ 'ಸ್ವಲ್ಪ ಸುಧಾರಿಸಿಕೊಂಡು ಆಗ್ಯೂ ಅಡ್ವೀಶ ' ಎಂದ ತಾಯಿಯ ಮಾತು ರುಚಿಸಿತಾದರೂ ಹೇಗೆ? ತನ್ನ ತಂದೆಯು ಎಲ್ಲಿಗೋ ಹೋಗಿಬರುತ್ತೇನೆಂದು ಹೇಳಿ ಹೋದದ್ದು ಅಷ್ಟೇ ಜ್ಞಾಪಕ. ವಿಷಯ ಮಾತ್ರ ತಲೆಯಲ್ಲಿ ಉಳಿದಿರಲಿಲ್ಲ. ನಿಂಗವ್ವ ಅಪ್ಪನಂತೆ ಒರಟ ಎಂದುಕೊಂಡು ರಾಗಿಯ ಹೊಲದ ಕಡೆ ನಡೆದಳು.

ಅಡವೀಶ ತನ್ನ ತಾಯಿಯು ಹೋದ ಕಡೆಯೇ ನೋಡುತ್ತಾ ಸಿಟ್ಟಿನಿಂದ ಗುದ್ದಲಿಯನ್ನು ಬಿಸಾಡಿ ಅಡಿಕೆ ತೋಟದ ಬದಿಯಲ್ಲಿ ಹಾಸಿದ್ದ ಮೆತ್ತನೆ ಹುಲಿನ ಮೇಲೆ ಕುಳಿತುಬಿಟ್ಟ ಮತ್ತೆ ಅವನ ಮನಸ್ಸು ಉಯ್ಯಾಲೆಯಾಡತೊಡಗಿತು. ಕ್ಷಣ ಕ್ಷಣಕ್ಕೂ ಹೃದಯದ ಪ್ರತಿಯೊಂದು ಬಡಿತದಲ್ಲೂ ಮಾದಿದ್ದುಟ್ಟೋನು ಎಂದಂತೆ ಭಾಸವಾಗುತ್ತಿತ್ತು. ಸರಿ ಮಾದಿರೋನಿಗೆ ಹುಟ್ಟಿದರೆ ನಾನ್ಯಾಕೆ ವ್ಯಥೆಪಡಬೇಕು ಅವನು ಮನುಷ್ಯನಲ್ಲವೇ? ಅವನಿಂದ ಹುಟ್ಟಿದ ನಾನು ಲಿಂಗಾಯಿತ! ಆದರೆ ಎಷ್ಟೋ* ಮಂದಿಗೆ ಗೊತ್ತಿಲ್ಲ ನಾನು ಯಾರೆಂದು! ನಮ್ಮೂರ ನಾಟಕದಲ್ಲಿ ಬರುವ ಕರ್ಣನ ಸ್ಥಿತಿ ನನ್ನದಾಗಿದೆ. ಹಾಗಾದ್ರೆ ನಮ್ಮಪ್ಪ .. ಅಲ್ಲ, ಅಲ್ಲ, ನನ್ನ ತಾಯಿಯ ಗಂಡ ಷಂಡನೇ? ಹಾಗಾದರೆ ನನ್ನ ತಾಯಿ...!?

ಎಷ್ಟೊಂದು ಬೆಸುಗೆಗಳು ಈ ರೀತಿ ಬೆಸೆದುಕೊಂಡಿರಲಿಕ್ಕಿಲ್ಲ ನಾನು ಲಿಂಗಾಯಿತನಾದಂತೆ ಬೇರೆ ಬೇರೆ ಜಾತಿಯವರು ಬೇರೆ ಬೇರೆ ಜಾತಿಯಲ್ಲಿ ಸೇರಿಹೋಗಿಲ್ಲವೇ? ಈಗ ಅವರೆಲ್ಲಾ ಆಯಾ ಜಾತಿಯವರೆ, ತನ್ನಜ್ಜಿ ಸಾಯುವ ಮೊದಲು ಹೇಳಿದ ಮಾರಿಕಥೆ ಮತ್ತು ಒಲೆಯರ ನಾರಾಯಣ ಹೇಳಿದ ಮಾದಿರೋನಿಂದಲೇ ನೀವು ಲಿಂಗಾಯಿತರಾದದ್ದು ಎಂಬ ದೃಶ್ಯಗಳು ಅವನ ಮನಸ್ಸಿನ ಪರದೆಯ ಮೇಲೆ ಮೂಡತೊಡಗಿದವು.

ಹೌದು ಮನುಷ್ಯರಲ್ಲಿ ಈ ಜಾತಿ ಎಂಬ ವಿಷಬೀಜ ಯಾವಾಗಿನಿಂದ ಬಿತ್ತಿದೆ. ಎಲ್ಲರಲ್ಲೂ ಹರಿಯುವುದು ಒಂದೇ ರಕ್ತವಲ್ಲವೇ ಎಲ್ಲರೂ ಉಸಿರಾಡುವುದು ಗಾಳಿಯನ್ನಲ್ಲವೇ, ಸೂರ್ಯ ಬೇರೆ ಬೇರೆ ಜಾತಿಯವರಿಗೆ ಬೇರೆ ಬೇರೆ ರೀತಿಯ ಬೆಳಕು ಕೊಡುತ್ತಾನೆಯೇ? ಮೇಲ್ಜಾತಿಯವನು ಬಂದನೆಂದು ಕೆರೆಯ ನೀರು ಹಾಲಾಗಿ ಹರಿಯುತ್ತದೆಯೇ? ಕೆಳಜಾತಿಯವನು ಬಂದನೆಂದು ಬತ್ತಿಹೋಗುತ್ತದೆಯೇ? ನನ್ನ ಚಿಕ್ಕವಯಸ್ಸಿನಲ್ಲಿ ಯಾರೋ ಮಾದೀರ ಹುಡುಗ ತಿಳಿಯದೆ ಒಳಗೆ ಬಂದಿದ್ದಾಗ ಅಲ್ಲಿದ್ದ ಸುಬ್ಬಣ್ಣನಿಂದ ಹೊಡೆಸಿದ್ದೆ, ಆದರೆ ನಾನೇ ಮಾದಿಗ ದೇವಾಲಯದೊಳಗೆಲ್ಲಾ ಓಡಾಡಲಿಲ್ಲವೇ? ಅದರಿಂದ ದೇವರೇನಾದರೂ ಮುಖವನ್ನು ಹಿಂದಕ್ಕೆ ತಿರುಗಿಸಿಕೊಂಡಿತ್ತೇ ? ಹಾಗಾದರೆ ಕೆಳಜಾತಿಯವರೇಕೆ ದೇವಸ್ಥಾನಗಳಿಗೆ ಬರಬಾರದು? ನನಗೆ ಬುದ್ಧಿ ತಿಳಿದ ಮೇಲೆ ತಂದೆಯನ್ನು ಈ ಕುರಿತು ವಿಚಾರಿಸಿದಾಗ ನಮ್ಮ ಹಿರಿಯರು ನಡೆಸಿಕೊಂಡು ಬಂದಿರುವುದು' ಎಂದಷ್ಟೇ ಉತ್ತರಗಳನ್ನು ಹೇಳಿದರೇ ವಿನಃ ಯಾಕೆಂಬುದಕ್ಕೆ ಕಾರಣ ಅವರಲ್ಲಿರಲಿಲ್ಲ ಎಂದು ಯೋಚಿಸುತ್ತಾ ತನ್ನ ಗುದ್ದಲಿಯನ್ನು ಹುಡುಕಿದ. ದೂರಕ್ಕೆ ಹೋಗಿ ಬೇಕಾಬಿಟ್ಟಿಯಾಗಿ ಬಿದ್ದಿತ್ತು. ಯಾಕೋ ಕೆಲಸ ಮಾಡಲು ಮನಸ್ಸು ಬಂದರೂ ಯಾವುದೋ ಶಕ್ತಿ ಚೈತನ್ಯವನ್ನೆಲ್ಲಾ ಹುದುಗಿಸಿದಂತಾಗಿತ್ತು ನಿತ್ರಾಣನಾಗಿದ್ದ.

ದೂರದ ಹೊಲದಲ್ಲಿ ತನ್ನ ತಾಯಿ ಓಡಾಡುತ್ತ ಕಾಯಿ- ಕಸುರುಗಳನ್ನು ಬಿಡಿಸಿಕೊಳ್ಳುತ್ತಿದ್ದಳು. ನನ್ನ ಅಮ್ಮ ಎಷ್ಟೊಂದು ಅಕ್ಕರೆಯಿಂದ ಸಾಕಿದಳು. ನಾನು ಮಾದಿಗರ ಕೂಸೆಂದು ತಿಳಿದೂ ಸಹ, ತಾಯಿ ಮಾತ್ರ ಮಗುವಿನ ಭೇದ ಮಾಡುವುದಿಲ್ಲ. ಅಷ್ಟಲ್ಲದೆ ಹೇಳುತ್ತಾರೆಯೇ ಹೆತ್ತವರಿಗೆ ಹೆಗ್ಣ ಮುದ್ದು ಅಂತಾ. ತನ್ನ ಉದರದಲ್ಲಿ ಜನಿಸಿದ ಕೂಸು ಹೇಗಿದ್ದರೂ ಕೂಸೇ..

ಆದ್ದರಿಂದಲೇ ಜಗತ್ತಿನಲ್ಲಿ ತಾಯಿಗೆ ಮಹತ್ವದ ಸ್ಥಾನವಿರುವುದು ಎಂದು ತನ್ನ ತಾಯಿ ಅಕ್ಕರೆಯಿಂದ ಬೆಳೆಸಿದ ಎಲ್ಲಾ ಚಿತ್ರಣಗಳನ್ನು ಕಾಣತೊಡಗಿದ. ದೂರದಲ್ಲಿದ್ದ ಹಲಸಿನ ಮರವನ್ನು ದಿಟ್ಟಿಸುತ್ತಾ ಆ ಹಲಸಿನ ಮರ ಒಂದು ಬೀಜದಿಂದ ಹುಟ್ಟಿದ್ದು . ಅದರಂತೆ ಆಗಿರುವುದಲ್ಲವೇ ಈ ಮನುಷ್ಯ, ಮೂಲ ಪುರುಷನೊಬ್ಬನಿಂದ ಬಂದ ಕುಡಿಗಳಲ್ಲವೇ ನಾವು, ಹಾಗಾದರೆ ಮನುಷ್ಯನನ್ನು ಮನುಷ್ಯನಂತೆ ಏಕೆ ಕಾಣುತ್ತಿಲ್ಲ ? ಎಂದೆಲ್ಲಾ ತನ್ನ ಮನಸಿನ ವಿವಿಧ ಮುಖಗಳಲ್ಲಿ ಯೋಚಿಸುತ್ತ ಕುಳಿತಿದ್ದವನಿಗೆ ' ಅಡ್ವೀ ಎಂಬ ತಾಯಿಯ ಮಾತು ಎಚ್ಚರಿಸಿತು. 'ಏನಮ್ಮಾ?' ಎಂದು ತಾಯಿಯ ಕಡೆ ನೋಡಿದಾಗ ತಾಯಿ 'ಅದೇನ್ ಯೋಚ್ನೆ ಮಾಡ್ತಾಯಿದ್ದಿ ನೋಡಲ್ಲಿ ಎತ್ತು ತೊಡುಕಂಡ್ಕೈತೆ ಬಿಚ್ಚು' ಎಂದು ಹೇಳಿ ಕರಂಟ್ ರೂಮಿನ ಬಳಿ ಬಂದು ಗಂಟನ್ನು ಕೆಳಗೆ ಹಾಕಿ ಉಸ್ ಎಂದು ಕುಳಿತುಕೊಂಡಳು. ಆಗಲೇ ಸೂರ್ಯ ತಣ್ಣಗಾಗಿದ್ದ ತಾಯಿಯೋರ್ವಳು ಮಗನನ್ನು ತಬ್ಬಿಕೊಳ್ಳಲು ಕೈಚಾಚಿದಾಗ ಓಡಿ ಹೋಗುವ ಮಗುವಿನಂತೆ ಕಳಕಳಿಯಿಂದ ನಳನಳಿಸುತ್ತ ಭೂಮಿಯ ಕಡೆ ಮುಖ ಹಾಕಿದ್ದ ಸೂರ್ಯ.

ತನ್ನ ಮಗ ಹೋಗುವುದನ್ನೇ ನೋಡುತ್ತಾ ಆನಂದಿಸುತ್ತಿದ್ದ ಅವಳಿಗೆ ಮತ್ತೊಂದು ಕಡೆಯಿಂದ ಗಂಡ ಬಂದದ್ದು ಕಾಣಿಸಿ 'ಎಲ್ಲೋಗಿದ್ದೆ ನೀನು ಉಂಡಾಗೋದ್ಮನ್ಸ ?' ಎಂದಾಗ ಸಿದ್ದನಂಜ 'ಯೇಯ್ ಎಲ್ಲೋಗಾನಾದುತು ದೇವ್ರ ಉತ್ಸವುದಗ್ಗೆ ಮಾತಾಡೋಣಂತ ಹೋಗಿದ್ದೆ . ಶಂಕರಪ್ಪ ಮನೆಹತ್ರ ಇರ್ಲಿಲ್ಲ ತೋಟತ್ರ ಹೋಗಿದ್ರಂತೆ ಅಲ್ಲೇ ಹೋಗರೇಕೀಗ ನಾನಂಗೆ ಬತ್ತೀನಿ ನೀವು ನಡೀರಿ' ಎಂದು ಅಲ್ಲಿಂದ ಮತ್ತೆ ಕಾಲುಕಿತ್ತ. ರಾತ್ರಿಯ ಸಾರಿಗೆ ಅಳಸಂಡೆ ಕಾಯಿಯನ್ನು ಸುಲಿಯುವುದರಲ್ಲಿ ಮಗ್ನಳಾದಳು ನಿಂಗವ್ವ.

ಎತ್ತುಗಳನ್ನು ಬದುವಿಗೆ ಹಿಡಿದುಕೊಂಡಿದ್ದ ಅಡವೀಶನ ಮನದಲ್ಲಿ ಗರಗಸದಲ್ಲಿ ಮರ ಕೊಯ್ದಂತೆ ಆಗುತ್ತಿತ್ತು. ಅದೇ ನೋವು, ಸಂಕಟ, ಅಸಮಾಧಾನ, ಜಿಜ್ಞಾಸೆ ಎಲ್ಲವೂ ಒಟ್ಟಿಗೆ ಆಗಿ ತಲೆಯಲ್ಲೆಲ್ಲಾ ಹುಳುಗಳು ಓಡಾಡುವಂತೆ ಭಾಸವಾಗಿತ್ತು. ಅದೆಷ್ಟೊತ್ತು ಹಾಗೆಯೇ ಕಳೆದಿದ್ದನೋ ಏನೋ ಅವನು ವಾಸ್ತವಕ್ಕೆ ಬಂದದ್ದು ತನ್ನ ಎತ್ತು ಹೊಲವನ್ನು ಮೇಯುತ್ತಿದ್ದಾಗ ಅದನ್ನು ಎಳೆದುಕೊಂಡು ತಾಯಿಯ ಕಡೆಗೊಮ್ಮೆ ನೋಡಿದ. ತಾಯಿಯ ಸೆರಗು ಕಣ್ಣನ್ನು ಒರೆಸುತ್ತಿತ್ತು. ಮುದುಕಿಯೋರ್ವಳು ಕರಂಟ್ ರೂಮಿನ ಪಕ್ಕದಲ್ಲಿರುವ ದಿಣ್ಣೆಯನ್ನು ಹತ್ತುತ್ತಿದ್ದಳು. ಹೌದು ಅವಳೇ ಆ ಒಕ್ಕಲಗಿತ್ತಿ ಬಸಮ್ಮ ! ಹಾಗಾದರೆ ನನ್ನ ತಾಯಿಯಲ್ಲಿ ಇಂದು ನಡೆದ ವಿಚಾರವನ್ನೆಲ್ಲಾ ಮಂಡಿಸಿದ್ದಾಳೆ. ಥೋ! ಎಂಥ ಅನರ್ಥವಾಯಿತು ನಾನೊಬ್ಬನೇ ನೋವುಂಡದ್ದು ಸಾಲದೇ? ಕಣ್ಣಲ್ಲಿ ನೀರು ಬಂದವು. ಆದರೂ ಈ ಸ್ಥಿತಿಯಲ್ಲಿ ತಾಯಿಯ ಮುಂದೆ ಹೋಗಿ ನಿಲ್ಲುವ ಸಾಹಸ ಮಾಡದೆ ತನ್ನ ಕಾರ್ಯದಲ್ಲಿ ಮಗ್ನನಾದ.

ಯಾರ ಕಿವಿಗೆ ಬೀಳಬಾರದೆಂದು ಇಷ್ಟು ವರ್ಷದಿಂದ ಮುಚ್ಚಿಟ್ಟುಕೊಂಡು ಬಂದಿದ್ದಳೋ ಮತ್ತು ಎಲ್ಲರ ಬಾಯಿಯನ್ನು ಮುಚ್ಚಿಸುತ್ತಾ ಬಂದಿದ್ದಳೋ ಅದೇ ವಿಷಯ ಇಂದು ಮಗನಿಗೆ ನೇರವಾಗಿ ತಿಳಿಯಿತೇ? ಮುಂದೆ ಆತ ನನ್ನನ್ನು ಎಷ್ಟೊಂದು ಕ್ರೂರವಾಗಿ ನೋಡುವುದಿಲ್ಲ ಮಾದಿರೋನಿಗೆ ಸೆರಗಾಸಿದವಳು ಎಂದು ಕ್ಷಣಕ್ಷಣಕ್ಕೂ ಅವನ ಮನಸ್ಸಿನಲ್ಲಿ ತುಂಬದೇ ಇರುತ್ತದೆಯೇ? ಎಂದು ಕಣ್ಣೀರಧಾರೆಯಲ್ಲಿ ತೊಯ್ದು ಬಿಟ್ಟಳು. ಆದರೆ ಈ ಮುದುಕಿಗೂ ಮುಂಚೆ ಈತನಿಗೆ ತಿಳಿಸಿದವರಾರು? ನಾನೇ ಹೇಳಿದನೆಂದು ಕೇಳಿದನಂತೆ..!? ಬಹಳ ಹೊತ್ತಿನವರೆಗೂ ಅಳುತ್ತಲೇ ಇದ್ದಳು. ನಿಧಾನವಾಗಿ ತನ್ನ ಮನಸ್ಸಿನ ಬೆಳ್ಳಿ ಪರದೆಯ ಮೇಲೆ ಪ್ರಿಯತಮನ ಚಿತ್ರ ಮೂಡತೊಡಗಿತ್ತು .

ತನ್ನ ಸೋದರ ಮಾವನ ಮಗನನ್ನೇ ಮದುವೆಯಾದಾಗ ನಿಂಗವ್ವನಿಗೆ ಬಹಳ ಸಂತೋಷವಾಗಿತ್ತು. ಆದರೆ ಮದುವೆಯಾದ ನಂತರವೇ ಗೊತ್ತಾಗಿತ್ತು ತನ್ನ ಗಂಡ ಏನೂ ಕಿಸಯಲಾರನೆಂದು. ಮಂಚ ಏರಿದ ಮರುಕ್ಷಣವೇ ಸೋತು ಮೈ ಹೊರಳಿಸಿ ಮಲಗಿಬಿಡುತ್ತಿದ್ದ ಕಣ್ಣೀರ ಸಿಂಚನವೊಂದೆ ಅವಳ ಹಾಸಿಗೆಯ ಹೂಗಳಾಗಿದ್ದವು. ವ್ಯಥೆ, ನೋವುಗಳಿಂದ ರಾತ್ರಿಗಳನ್ನು ಕಳೆಯುತ್ತಾ ತನ್ನ ಬದುಕನ್ನು

ಸಾಗಿಸುತ್ತಿದ್ದಳು. ಒಂದು... ಎರಡು ಮೂರು... ಹೀಗೆ ವರ್ಷಗಳು ಕಳೆಯಲಾರಂಭಿಸಿದವು. ಅತ್ತೆಯು ಹಾಕುತ್ತಿದ್ದ ಶಾಪದಿಂದ ನರಕಯಾತನೆಯನ್ನು ಅನುಭವಿಸಿದ್ದಳು. ಅಷ್ಟೇ ಆದರೆ ಸಹಿಸಿ ಬದುಕುತ್ತಿದ್ದಳೋ ಏನೋ ಆದರೆ ಹಲವಾರು ಶುಭ ಕಾರ್ಯಕ್ರಮಗಳಲ್ಲಿ ಅನ್ಯರಿಂದ ಸಿಕ್ಕ ಬಹುಮಾನವಂತೂ ಕ್ಷಣಕ್ಷಣಕ್ಕೂ ಒಂದು ಮಗುವಿಗಾಗಿ ಹಾತೊರೆಯುವಂತೆ ಮಾಡಿತು. ದೇವರು ದೇವರುಗಳಿಗೆಲ್ಲಾ ಮೀಸಲು ಕಟ್ಟಿದ್ದಳು. ದೇವರ ದರ್ಶನಗಳೂ ಆಯಿತು. ಶಾಸ್ತ್ರವನ್ನು ಕೇಳಿದ್ದೂ ಆಯಿತು. ವರ್ಷದಲಿ, ಮಗುವೊಂದು ಹುಟ್ಟುತ್ತದೆ ಎಂದು ಹೇಳಿದ್ದು ಎರಡು ಮೂರು ವರ್ಷವಾದರೂ ಪ್ರಯೋಜನವಾಗಿರಲಿಲ್ಲ. ಹೀಗೆ ತನಗೊಂದು ಮಗು ಬೇಕೆ ಬೇಕೆಂದು ಹಂಬಲಿಸುತ್ತಲೇ ಇದ್ದಳು.

ಒಂದು ದಿನ ಸಂಜೆ ಸಮಯ ಬಣವೆಯನ್ನು ಹಾಯ್ದು ಬರುತ್ತಿರುವಾಗ ಯಾವುದೋ ಶಬ್ದಗಳೂ ಕಿವಿಯ ಮೇಲೆ ಬೀಳತೊಡಗಿದವು. 'ಯೇಯ್ ಬೇಡಪ್ಪಾ ಯಾರಾದ್ರೂ ನೋಡಿರಾತು. ಉಹುಂ ಬೇಡ" ಎಂಬ ಸ್ತ್ರೀಯ ದನಿಯೊಂದಿಗೆ ಇಲ್ಲಾ ಬಾರೆ' ಬಾರೆ ಎಂಬ ಒಬ್ಬ ಪುರುಷನ ದ್ವನಿ ಒಟ್ಟೊಟ್ಟಿಗೆ ಬರತೊಡಗಿತ್ತು. ನಿಂಗವ್ವನ ಮನಸ್ಸು ಪುಳಕಿತಗೊಂಡಂತಾಗಿತ್ತು. ಹಾಗೆಯೇ ಕಿವಿಯಾಲಿಸಿ ಸಣ್ಣಹಳ್ಳವೊಂದರಿಂದ ಬರುತ್ತಿರುವುದೆಂದು ದಾರಿಯ ಸುಳಿವಿಡಿದು ನಿಧಾನವಾಗಿ ಹೆಜ್ಜೆ ಹಾಕಿ ಹಳ್ಳದ ಸಮೀಪ ಬಂದಳು ಹತ್ತಿರ ಬರುತ್ತಾ ದನಿ ಹೆಚ್ಚಾಗುತ್ತ ನಿಧಾನವಾಗಿ ಒಮ್ಮೆಲೆ ನಿಶ್ಯಬ್ದವಾಯಿತು. ನಾನು ಬಂದದ್ದರಿಂದಲೇ ಏನೋ ಎಂದು ತಿಳಿದ ನಿಂಗವ್ವ ಬೇಲಿಗಿಡದ ಮರೆಯಲ್ಲಿ ಮತ್ತೆ ನಿಧಾನವಾಗಿ ಎದ್ದು ನೋಡಿದಳು. ಮಲಗಿದ್ದ ಸ್ತ್ರೀಯ ಜಾಕೀಟಿನ ಉಗ್ಗುಗಳು ಬಿಚ್ಚಿಕೊಂಡಿದ್ದವು. ಪುರುಷನ ಕೈ ಲಂಗವನ್ನು ಹಿಡಿದಿತ್ತು. ಸ್ತ್ರೀಯ ಎರಡು ಕೈಗಳು ಅದನ್ನು ತಡೆಯುತ್ತಿದ್ದವು. ನಿಂಗವ್ವ ರಪ್ಪನೆ ಮುಖಮುಚ್ಚಿಕೊಂಡು ಈ ಕಡೆ ತಿರುಗಿಕೊಂಡು ಬಿಟ್ಟಳು. ಅವಳ ಮೈಯಲ್ಲಿ ಮಿಂಚಿನ ಸಂಚಾರವಾದಂತಾಗಿ ಎದೆ ಡವ ಡವ ಎಂದು ಹೊಡೆದುಕೊಳ್ಳಲು ಪ್ರಾರಂಭಿಸಿತು. ಒಂದು ಕ್ಷಣ ಕಣ್ಣು ಮಂಜಾಗಿಬಿಟ್ಟವು ಮತ್ತೆ ಅವಳು ತಿರುಗಿ ನೋಡುವ ಸಾಹಸ ಮಾಡಲಿಲ್ಲ. ಆದರೆ ಅವಳ ಕಿವಿಯ ಮೇಲೆ ಬೀಳುತ್ತಿದ್ದ ಒಂದೊಂದು ಶಬ್ದಗಳು ಮೈಯನ್ನು ರೋಮಾಂಚನಗೊಳಿಸಿತ್ತು. ನಿಧನಾವಾಗಿ ಏರುತ್ತಾ ಹೋದ ಶಬ್ದಗಳು ಅತಿರೇಖವನ್ನು ತಲುಪಿ ಸ್ಥಬ್ದವಾಗಿ ಹೋದವು. ನಿಂಗವ್ವನಿಗೆ ಅಲ್ಲಿಂದ ಏಳಲೂ ಸಹ ಶಕ್ತಿಯಿರಲಿಲ್ಲ .

ಮತ್ತೆ ತಮ್ಮ ಬಟ್ಟೆಗಳನ್ನು ಸರಿಪಡಿಸಿಕೊಂಡು ಹಳ್ಳದಲ್ಲಿ ಹೆಜ್ಜೆ ಶಬ್ದಗಳು ಮೂಡಿದಾಗಲೇ ಅವಳು ಆ ಕಡೆ ತಿರುಗಿ ನೋಡಿದ್ದಳು. ಮಾದಿಗರ ಸಣ್ಣಕದುರ ಮತ್ತು ಕೆಂಚಿ ಎಂಬುದು ಸ್ಪಷ್ಟವಾಗಿ ನಿಟ್ಟುಸಿರೊಂದನ್ನು ಬಿಡುತ್ತಾ ಮನೆಯ ಕಡೆ ಹೆಜ್ಜೆಹಾಕತೊಡಗಿದಳು. ರಾತ್ರಿಯೆಲ್ಲಾ ಅವಳಿಗೆ ನಿದ್ದೆ ಬರಲಿಲ್ಲ ಅದೇ ಚಿತ್ರ ಭೂತದಂತೆ ಅವಳನ್ನು ಕಾಡುತ್ತಿತ್ತು. ಗೊರಕೆಯೊಡೆಯುತ್ತಿದ್ದ ಗಂಡನ ಕಡೆಗೊಮ್ಮೆ ನೋಡಿ ಮತ್ತೊಂದು ಕಡೆ ಹೊರಳಿದಳು. ಆ ರಾತ್ರಿಯೆಲ್ಲಾ ನಿದ್ದೆ ಬರಲಿಲ್ಲ.

ಈ ಸಂದರ್ಭವನ್ನೇ ಬಂಡವಾಳನ್ನಾಗಿ ಮಾಡಿಕೊಂಡಿದ್ದ ನಿಂಗವ್ವ ಸಣ್ಣಕದುರನನ್ನು ತನ್ನ ಬಲೆಯೊಳಗೆ ಬೀಳಿಸಿಕೊಂಡಿದ್ದಳು. ನಿರಂತರವಾಗಿ ಅವರ ಸಂಬಂಧ ಯಾರಿಗೂ ತಿಳಿಯದೇ ನಡೆಯುತ್ತಲೇ ಇತ್ತು. ಕೂಲಿಯಾಳನ್ನು ಕರೆಯಲು ಹೊರಡುತ್ತಿದ್ದ ಗಂಡನಿಗೆ "ಸಣ್ಯದುನ್ನ ಕರೀರಿ ಅನ್ನು ಚೆನ್ನಾಗಿ ಕೆಲ್ಸ ಮಾಡ್ತಾನೆ" ಎಂದು ಹೇಳದೆ ಇರುತ್ತಿರಲಿಲ್ಲ. ಹೀಗೆ ಮುಚ್ಚು ಮರೆಯಲ್ಲಿ ನಡೆಯುತ್ತಿದ್ದ ಸಂಬಂಧ ಬಸಮ್ಮನಿಗೆ ರಟ್ಟಾಯಿತು. ಬಸಮ್ಮನ ಕೂಡೆ ತನ್ನ ಎಲ್ಲಾ ವಿಚಾರವನ್ನು ನಿಂಗವ್ವ ತಿಳಿಸಿಬಿಟ್ಟಳು. ಅಂದಿನಿಂದ ಬಸಮ್ಮ ಸಾರಥ್ಯ ವಹಿಸಿದಳು. ಇದರಿಂದ ಬಸವಮ್ಮನಿಗೆ ಭಕ್ಷೀಸು ಸಿಗುತ್ತಿತ್ತು. ಆದರೆ ಒಂದು ದಿನ ಸಿದ್ಧನಂಜನ ಕೈಯಲ್ಲಿ ನೇರವಾಗಿ ಸಿಕ್ಕಿಬಿದ್ದರು. ಸಿದ್ಧನಂಜ ಅವಳನ್ನು ಹಿಡಿದು ಸಿಕ್ಕಾಪಟ್ಟೆ ಹೊಡೆದ. ಅವಳು ತಿರುಗಿ ಬಿದ್ದು ಹೌದು ಮಾಡದೆ ಏನ್ಮಾಡ್ತಿಯ ನಿಲಿ ಏನೂ ಕಿಸಿಯಾಕಗಲ್ವಲ್ಲ ಅದುಡ್ಕಂಡಿರು ಎಂದು ಮಾರಿಯಂತೆ ಮಾತಾಡಿ ಆತ್ಮಹತ್ಯೆಗೆ ಯತ್ನಿಸಿದ್ದಳು. ಅಂದಿನಿಂದ ಸಿದ್ಧನಂಜನು ಬೇರನ್ನು ತೆಗೆದರೆ ಎಲ್ಲಾ ಸರಿಹೋಗುತ್ತೆ ಎಂದು ಮೌನವಹಿಸಿದ್ದ ಅದರ ಹಿಂದೆಯೇ ನಿಂಗವ್ವ ಬಸುರಿಯಾದ ವಿಷಯ ಊರನ್ನೆಲ್ಲಾ ಆವರಿಸಿತ್ತು.

ಐದು ತಿಂಗಳ ಬಸುರಿಯಾಗಿದ್ದಾಗ ತನ್ನ ಪ್ರಿಯತಮನಾದ ಸಣ್ಣಕದುರ ಬಾವಿಗೆ ಬಿದ್ದು ಸತ್ತದ್ದು ಮಾತ್ರ ಅವಳ ಜೀವನದ ಸೂರ್ಯಮುಳುಗಿದಂತಾಗಿತ್ತು. ಈ ಲೋಕದಲ್ಲಿ ನನಗಿನ್ಯಾರು ಗತಿ ಎಂದು ಅತ್ತಿದ್ದಳೆಂದರೆ ಅವಳ ಮುಖವೆಲ್ಲಾ ಊದಿಕೊಂಡಿತ್ತು. ಇಲ್ಲ .. ಇಲ್ಲ .. ಎಂದು ವಾಸ್ತವಕ್ಕೆ ಬಂದ ನಿಂಗವ್ವ ಸುತ್ತಕಣ್ಣಾಡಿಸಿದಳು ಯಾರೂ ಇರಲಿಲ್ಲ. ಮತ್ತೆ ತನ್ನ ನೆನಪಿನ ಸುಳಿಯುತ್ತ ತಿರುಗಿದಳು. ಇಲ್ಲಾ ಅವನು ಬಾವಿಗೆ ಬಿದ್ದು ಸಾಯಲಿಲ್ಲ. ಸಾಯಿಸಿದರು. ಅವನು ಯಾವ ರೀತಿ ಬಿದ್ದರೂ ಮೀನಿನಂತೆ ಈಜಾಡಿ ದಡ ಸೇರುತ್ತಿದ್ದ. ಇದನ್ನು ನೆನೆದಾಗ ಅವಳ ಕಣ್ಣಲ್ಲಿ ನೀರು ಉಕ್ಕಿ ಬಂತು ಒಂದು ದಿನ ನಿಂಗವ್ವ ಗಂಡನ ಚರ್ಯೆಗಳನ್ನು ಗಮನಿಸದಾಗ ಯಾವುದೋ ಆತುರದ ಕೆಲಸದಲ್ಲಿ ಏನನ್ನೋ ಹುಡುಕುತ್ತಿದ್ದ. ಮತ್ತೆ ಯಾವುದೋ ಊರಿಗೆ ಹೋಗುವೆನೆಂದು ಹೇಳಿ ಹೋದವ ತೋಟದಲ್ಲೇ ಸುಳಿದಾಡುತ್ತಿದ್ದುದ ಬೇರೆಯವರಿಂದ ತಿಳಿದು ತೋಟದ ಹತ್ತಿರ ಬರುವುದರೊಳಗೆ ಸಣ್ಣಕದುರನ ಹೆಣ ಬಾವಿಯಲ್ಲಿ ತೇಲುತ್ತಿತ್ತು. ಮುಂದಿನದನ್ನು ನೆನೆಯಲು ಅವಳಿಂದ ಸಾಧ್ಯವಾಗಲಿಲ್ಲ .

ಆದರೆ ಅವಳ ಮನಸ್ಸಿನಲ್ಲಿ ಚಿರಾಯವಾಗಿ ಉಳಿದುಕೊಂಡು ಕ್ಷಣ ಕ್ಷಣಕ್ಕೂ ಆಕೆಯನ್ನು ಜೀವ ಹಿಂಡುತ್ತಿದ್ದುದು ಸಣ್ಣಕದುರನ ತಾಯಿ ಲಬ ಲಬ ಬಾಯಿ ಬಡಿದುಕೊಳ್ಳುತ್ತಿದ್ದುದು ಮತ್ತು ಅರೆಹುಚ್ಚಿಯಾಗಿ ಊರುಬಿಟ್ಟಿದ್ದು. ಆಕೆಗೆ ಅವನೊಬ್ಬನೇ ಮಗನಾಗಿದ್ದ ನಿಷ್ಠುರ ಸಮಾಜದ ಎದುರು ನನ್ನನ್ನು ತಲೆ ಎತ್ತಿ ತಿರುಗಾಡುವಂತೆ ಮಾಡಿ, ನನಗಾಗಿ ಬಲಿ ಪಶುವಾದ ತ್ಯಾಗಮೂರ್ತಿ ಆ ಸಣ್ಣಕದುರ ಅವನು ಹಾಕಿದ ಬೀಜವು ನಮ್ಮ ಮನೆಯಂಗಳದಲ್ಲಿ ಹುಲುಸಾಗಿ ಬೆಳೆದಿದೆ ಆದರೆ ಇಂದು..?

ದುಃಖಿಸುತ್ತ ಸೆರಗಿನಿಂದ ಮುಖಮುಚ್ಚಿಕೊಂಡು.. ಕಣ್ಣನ್ನು ಒರೆಸಿಕೊಂಡು ಅತ್ತ ತಿರುಗಿದಾಗ ಯಾರದೋ ಮನುಷ್ಯರ ಸುಳಿವು ಕಂಡಂತಾಗಿ ತಲೆ ಎತ್ತಿದಳು ತನ್ನ ಮಗ...!? ತನ್ನನ್ನೇ ದಿಟ್ಟಿಸುತ್ತಿದ್ದ ಅವನ ಕಣ್ಣಿನಲ್ಲಿ ಉಕ್ಕಿದ ಬೆಂಕಿಯ ಹನಿ ಕೆನ್ನೆಯ ಮೇಲೆ ಹರಿಯುತ್ತಿತ್ತು. ಮಾತಾಡಲೆಂದು ಹೋದರೂ ನಿಂಗವ್ವನಿಗೆ ಮಾತೇ ಬರಲಿಲ್ಲ ತುಟಿಗಳು ಅದುರತೊಡಗಿದವು. ಪ್ರಶ್ನೆಯಾಗಿ ಎದುರಿಗೆ ನಿಂತ ಮಗನಿಗೆ, ಕಂಬನಿಯೊಂದೇ ಅವಳ ಉತ್ತರವಾಗಿತ್ತು. ಇವರಿಬ್ಬರ ದುಃಖವನ್ನು ನೋಡಲಾಗದ ಸೂರ್ಯ ಭೂಮಿಯಿಂದ ಮೇಲೆ ಉಳಿಸಿದ್ದ ತನ್ನ ಅರ್ಧಭಾಗವನ್ನು ಒಳಗೆ ಎಳೆದುಕೊಂಡುಬಿಟ್ಟ.

+

# ೨೯. ಸೋಮ್ಲ ಹಾಗೂ ಸಿ.ಎಂ.

**ಓಂಪ್ರಕಾಶ್ ನಾಯಕ್**

ಕಳೆದೊಂದು ವಾರದಿಂದ ರಾಂಪುರ ತಾಂಡಕ್ಕೆ ವಿಶಿಷ್ಟವಾದ ಕಳೆಯೇ ಬಂದುಬಿಟ್ಟಿದೆ. ಸುತ್ತಲ ಹತ್ತು ಹಳ್ಳಿಯಲ್ಲೆಲ್ಲ ರಾಂಪುರ ತಾಂಡದ ಕುರಿತ ಮಾತೆ ಮಾತು. ಆ ತಾಂಡಕ್ಕೆ ಖುಲಾಯಿಸಿದ ಅದೃಷ್ಟ ಕಂಡು ಅಕ್ಕಪಕ್ಕದ ಹಳ್ಳಿಯ ಜನರು ಕರುಬಿದ್ದು ಸುಳ್ಳಲ್ಲ. ಆ ತಾಂಡವೂ ಅಷ್ಟೆ ಹಬ್ಬದ ಕಳೆಯಿಂದ ಲಕಲಕಿಸುತ್ತಿದೆ. ಅದರಲ್ಲೂ ಸೋಮ್ಲಾನಾಯ್ಕನ ಮನೆಗೆ ಹೊಸ ಕಳೆಯೇ ಬಂದುಬಿಟ್ಟಿದೆ. ತನ್ನ ಜೀವಮಾನದಲ್ಲೇ ಎಂದೆಂದೂ ಸುಣ್ಣ ಬಣ್ಣ ಕಾಣದ ಆ ಮನೆ ಈಗ ಗುರುತೇ ಹತ್ತದಂತೆ ಸುಣ್ಣ ಬಣ್ಣದೊಡನೆ ಕಣ್ಣುಕುಕ್ಕುತ್ತಿದೆ. ಚಿಮಣಿ ಬುಡ್ಡಿಯ ಬೆಳಕಲ್ಲದೆ ಮತ್ತಾವ ಬೆಳಕನ್ನೂ ಕಾಣದ ನಡುಮನೆ ಟೆಂಪರವರಿ ಎಲೆಕ್ಟ್ರಿಕ್ ಕನೆಕ್ಷನ್ ಪಡೆದು ಬಲ್ಬು ಪ್ರಕಾಶಮಾನವಾಗಿ ಬೆಳಗುತ್ತಿದೆ. ಚಾಪೆ ಬಿಟ್ಟರೆ ಮತ್ತಾವ ಆಸನಗಳೂ ಇಲ್ಲದ ಆ ಮನೆಗೆ ಇದೀಗ ಐದಾರು ಕುರ್ಚಿಗಳು ಬಂದು ಕುಳಿತಿವೆ. ನಲವತ್ತು ಡಿಗ್ರಿಯ ಸೆಕೆಯನ್ನು ಕಡಿಮೆ ಮಾಡಲು ಒಂದು ಟೇಬಲ್ ಫ್ಯಾನ್ ಸಹ ಆ ಮನೆಯನ್ನು ಪ್ರವೇಶಿಸಿದೆ.

ಅಲ್ಲಾವುದ್ದೀನನ ಅದ್ಭುತ ದೀಪವೇನೂ ಸೋಮ್ಲಾನಾಯಕನಿಗೆ ಸಿಕ್ಕಿಲ್ಲ, ಆದರೆ ಆ ದೀಪದೊಳಗಿನ ಭೂತ ಆ ಮನೆಗೆ ಬರುತ್ತಿದೆ. ಇನ್ನೊಂದೆರಡು ದಿನಗಳಲ್ಲಿ. ಅಂದರೆ ಕುಗ್ರಾಮ ರಾಂಪುರ ತಾಂಡದ ಸೋಮ್ಲಾನಾಯಕನ ಮನೆಗೆ ಸಾಕ್ಷಾತ್ ಆ ರಾಜ್ಯದ ಮುಖ್ಯಮಂತ್ರಿಗಳು ದಯ ಮಾಡಿಸುವವರಿದ್ದಾರೆ. ಆ ಭಾಗದ ಕುಗ್ರಾಮಗಳ ಸಮಸ್ಯೆಗಳನ್ನು ಗ್ರಾಮವಾಸ್ತವ್ಯ ಹೂಡುವ ಮೂಲಕ ತಿಳಿದುಕೊಳ್ಳಲು ರಾಜಧಾನಿಯಿಂದ ರಾಜಪರಿವಾರದ ಸಮೇತ ದೊರೆಗಳು ಆ ತಾಂಡಕ್ಕೆ ಆಗಮಿಸುತ್ತಿದ್ದಾರೆ. ತಂಗಲು ಕಡು ಬಡವ ಸೋಮ್ಲಾನಾಯಕನ ಮನೆಯನ್ನು ಆರಿಸಿ ಕೊಂಡಿದ್ದಾರೆ. ಅಂದ ಮೇಲೆ ಅವರು ಬಂದಾಗ ಕುಳಿತುಕೊಳ್ಳಲು ನಾಲ್ಕಾರು ಕುರ್ಚಿಗಳು ಬೇಡವೆ? ಸೆಕೆಯಾದರೆ ಮುಖ್ಯಮಂತ್ರಿಗಳು ಬೆವರಲಾದೀತೆ? ಅದಕ್ಕಾಗಿ ಒಂದು ಫ್ಯಾನು ಬೇಡವೆ? ಅದಕ್ಕೆ ಆಡಳಿತ ವ್ಯವಸ್ಥೆ ವಾರದಿಂದಲೂ ರಾಂಪುರ ತಾಂಡವನ್ನೂ, ಸೋಮ್ಲಾನಾಯ್ಕನ ಮನೆಯನ್ನೂ ಹತ್ತನೇ ಶತಮಾನದಿಂದ ಇಪ್ಪತ್ತೊಂದನೆ ಶತಮಾನಕ್ಕೆ ತರಲು ಶತಪ್ರಯತ್ನ ನಡೆಸಿದ್ದಾರೆ.

ಬರಿ ಕೆಟ್ಟು ಹೋದ ರಸ್ತೆಯನ್ನು ದುರಸ್ತಿ ಮಾಡಿ ರೂಢಿಯಿದ್ದ ಆಡಳಿತ ಯಂತ್ರಕ್ಕೆ ಇದೀಗ ರಸ್ತೆಯೇ ಇಲ್ಲದ ಆ ಕುಗ್ರಾಮಕ್ಕೆ ಹೊಸ ರಸ್ತೆಯನ್ನೇ ಮಾಡಬೇಕಾಗಿ

ಬಂದಿರುವುದು, ಅದೂ ಅದಕ್ಕಾಗಿ ಕೇವಲ ಒಂದು ವಾರ ಮಾತ್ರ ಸಮಯವಿರುವುದು ಒಂದು ಸವಾಲಾಗಿ ಪರಿಣಮಿಸಿದೆ. ಕೇವಲ ಫೈಲಿನೊಳಗೆ ಮಾತ್ರ ಜಾಗ ಪಡೆದಿದ್ದ ಅಲ್ಲಿನ ರಸ್ತೆ, ಇದೀಗ ಮುಖ್ಯಮಂತ್ರಿಗಳು ಆ ತಾಂಡವನ್ನೇ ಗ್ರಾಮವಾಸ್ತವ್ಯಕ್ಕೆ ಆರಿಸಿದ್ದರಿಂದ, ಅನಿವಾರ್ಯವಾಗಿ ನಿಜವಾಗಲೂ ಅಲ್ಲಿ ಮೈದಳೆಯುತ್ತಿದೆ.

ಇದೇ ಕಾರಣಕ್ಕೆ ಸುತ್ತಮುತ್ತಲ ಹಳ್ಳಿಯ ಜನರು ರಾಂಪುರ ತಾಂಡದ ಹಾಗೂ ಸೋಮ್ಲಾನಾಯಕನ ಅದೃಷ್ಟದ ಬಗ್ಗೆ ಕರುಬಿದ್ದು, ಸೋಮ್ಲನಿಗಂತೂ ಆಕಾಶಕ್ಕೆ ಮೂರೇ ಗೇಣು. ಇನ್ನು ತನ್ನ ಬಡತನ, ಕಷ್ಟ ಎಲ್ಲ ದೂರ, ತುಂಡು ಜಮೀನನ್ನು ಸಾಲ ಮಾಡಿ ಕಳೆದುಕೊಂಡು ಸಾತ್ಕಾರನ ಮನೆಯಲ್ಲಿ ಜೀತ ಮಾಡುತ್ತಿರುವುದು ನಾಳೆಗೇ ಕೊನೆ. ಮುಖ್ಯಮಂತ್ರಿಗಳು ಬಂದು ತನ್ನ ಸಕಲ ಕಷ್ಟಗಳನ್ನು ಪರಿಹರಿಸಿ, ಹರಸಿ ಹೋಗುವುದು ಖಂಡಿತ. ಹೌದು ಅದರಲ್ಲಿ ಸಂಶಯವೇ ಇಲ್ಲ. ಇಲ್ಲದಿದ್ದರೆ ತಮ್ಮದೇ ಮನೆಯನ್ನು ಆರಿಸಿ ಅದಕ್ಕೆ ಸುಣ್ಣ ಬಣ್ಣ ಹೊಡೆಸಲು, ಮನೆಗೆ ಕುರ್ಚಿಗಳನ್ನು, ಫ್ಯಾನನ್ನೂ ಬಿಟ್ಟಿಯಾಗಿ ಕೊಡಲು ಅವರಿಗೇನು ತಲೆಕೆಟ್ಟಿದೆಯಾ? ಈ ತರ್ಕ ಕೇವಲ ಅವನೊಬ್ಬನದೇ ಅಲ್ಲ. ಆ ಹಳ್ಳಿಯ, ಅಷ್ಟೇ ಏಕೆ ಸುತ್ತಮುತ್ತಲ ಎಲ್ಲ ಹಳ್ಳಿಯ ಜನರ ಒಟ್ಟಾರೆ ತರ್ಕ. ಅದೇ ಕಾರಣಕ್ಕೆ ವಾರದಿಂದಲೂ ತಾಂಡದಲ್ಲಿ ಸೋಮ್ಲಾನಾಯಕನ ಸ್ಥಾನಮಾನ ಧಿಡೀರನೆ ಬದಲಾಗಿದೆ. ಮೊದಲು ಎತ್ತು ಎಮ್ಮೆಗೆ ಸರಿಸಮವಾಗಿದ್ದ ಜೀತದಾಳು ಸೋಮಾ ಇದೀಗ ಹಳ್ಳಿಗರ ದೃಷ್ಟಿಯಲ್ಲಿ ಒಬ್ಬ ಮನುಷ್ಯನಾಗಿ ಬದಲಾಗಿದ್ದಾನೆ. ಅದೂ ಕೇವಲ ಸಾಮಾನ್ಯ ಮುನುಷ್ಯನಾಗಿಯಲ್ಲ. ಅಸಾಮಾನ್ಯ ಮನುಷ್ಯನಾಗಿ! ಎಲ್ಲರ ಪಾಲಿಗೆ ಸೋಮ್ಲಾನಾಯುಕನೇ ತಾತ್ಕಾಲಿಕವಾಗಿ ಮುಖ್ಯಮಂತ್ರಿಯಾಗಿಬಿಟ್ಟಿದ್ದಾನೆ. ಎಲ್ಲರೂ ತಮ್ಮ ತಮ್ಮ ಕಷ್ಟ, ದುಃಖ ದುಮ್ಮಾನಗಳನ್ನು ದೊರೆತನಕ ತಲುಪಿಸಲು ಸೋಮ್ಲಾನಾಯಕನನ್ನೇ ಮಧ್ಯವರ್ತಿಯನ್ನಾಗಿ ಆರಿಸಿಕೊಳ್ಳುತ್ತಿದ್ದಾರೆ. ಮತ್ತಿನ್ನೇನು, ಅವನ ಮನೆಗೆ ಬಂದು ಜೊತೆಗೆ ತಿಂದು, ಮಲಗಿ ಹೋಗುವ ಮುಖ್ಯಮಂತ್ರಿಗಳು ಅವನ ಮಾತು ಕೇಳದಿರುತ್ತಾರೆಯೇ?

ಸೋಮ್ಲಾನಾಯಕನ ಮನೆಯಲ್ಲಿರುವವರು ಅವನನ್ನು ಸೇರಿಸಿ ನಾಲ್ಕು ಜನ. ಸೋಮ್ಲ, ಅವನ ಹೆಂಡತಿ ಲಚ್ಚಿ, ಹದಿನೈದರ ಮಗಳು ಹೇಮ್ಲ ಮತ್ತು ಬುದ್ಧಿ ಮಾಂದ್ಯ ಮಗ ಭೀಮ. ಭೀಮನಿಗೆ ಹತ್ತು ವರ್ಷಗಳಾಗಿದ್ದರೂ ಅವನ ಬುದ್ಧಿ ಮಾತ್ರ ಎರಡು ಮೂರು ವರ್ಷದ ಮಕ್ಕಳಿಗಿಂತ ಹೆಚ್ಚಿಗೆ ಬೆಳೆದಿರಲಿಲ್ಲ. ತೆಂಗಿನಕಾಯಿ ಗಾತ್ರದ ತಲೆ ಹೊಂದಿದ್ದ ಭೀಮ ಜೊಲ್ಲುಸುರಿಸುತ್ತ ಕುಳಿತಲ್ಲೇ ಕುಳಿತಿರುವುದು, ತೆವಳುತ್ತ ಸರಿದಾಡುವುದು ಮಾಡುತ್ತಿದ್ದ. ಅವನು ಸರಿಹೋಗುವ ಯಾವ ಲಕ್ಷಣಗಳೂ ಇಲ್ಲದ್ದರಿಂದ ಅವನ ಬಗ್ಗೆ

ಯೋಚಿಸುವುದನ್ನೇ ಸೋಮ್ಲಾ ಬಿಟ್ಟಿದ್ದ.

ಮೊನ್ನೆಯಿಂದ ಸೋಮ್ಲಾನಿಗೆ ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗಿಬಿಟ್ಟಿದೆ. ಹಿಂದೆ ಮಾತಾಡಿಸದವರೆಲ್ಲ, ಹಳೆಯ ಸ್ನೇಹಿತರೆಲ್ಲ, ಬಾದರಾಯಣ ಸಂಬಂಧಿಕರೆಲ್ಲ

ಸೋಮ್ಲಾನಾಯ್ಕನನ್ನು ಮಾತಾಡಿಸಲು ಪರಿತಪಿಸುವವರೆ, ಸಾಲ ಕೊಟ್ಟು ಜೀತ ಗೇಯಿಸಿಕೊಳ್ಳುತ್ತಿದ್ದ

ಸಾವ್ಕಾರ ರಂಗಪ್ಪ ಹಳೆಯದೆಲ್ಲವನ್ನು ಕಟ್ಟಿಟ್ಟು, ತಾತ್ಕಾಲಿಕವಾಗಿ ಸೋಮ್ಲನಿಗೆ ರಜೆ ನೀಡಿ ಬಿಟ್ಟಿದ್ದಾನೆ. ಜೊತೆಗೆ ಇಷ್ಟು ದಿನದ ಧಣಿಯಾದ್ದರಿಂದ ಆ ಅಧಿಕಾರವನ್ನು ಚಲಾಯಿಸಿ ಸೋಮ್ಲಾನಾಯಕನಿಗೆ ಆಪ್ತನಂತೆ ಜೊತೆಯಲ್ಲಿ ಓಡಾಡಿಕೊಂಡಿದ್ದಾನೆ. ಹೇಳಬೇಕೆಂದರೆ ಮುಖ್ಯಮಂತ್ರಿಯವರಿಗೆ ಅಪ್ತ ಕಾರ್ಯದರ್ಶಿಯಿದ್ದಂತೆ, ಸೋಮ್ಲಾನಾಯ್ಕನಿಗೆ ಇದೀಗ ರಂಗಪ್ಪ! ಇಬ್ಬರೂ ಒಟ್ಟಾಗಿ ರಸ್ತೆಯಲ್ಲಿ ಒಡಾಡುತ್ತಿದ್ದರೆ ನೋಡಿದವರಿಗೆ ಇಂಥದೊಂದು ಪವಾಡ ನಡೆಯಲು ಸಾಧ್ಯವೆ ಎಂದು ಅಚ್ಚರಿ. ಆದರೆ ಕಣ್ಣೆದುರಿಗಿನ ಸತ್ಯವನ್ನು ನಂಬದಿರಲು ಅದ್ಹೇಗೆ ಸಾಧ್ಯ?

ಮೊನ್ನೆ ನಡೆದ ಒಂದು ಘಟನೆಯಂತೂ ಸೋಮ್ಲಾನಾಯಕನೇ ಸಾಕ್ಷಾತ್ ಮುಖ್ಯಮಂತ್ರಿ ಎಂದು ಜನರಂದು ಕೊಂಡಿದ್ದನ್ನು ಸಾಬೀತುಪಡಿಸಿತು. ಸೋಮ್ಲ ಅಂದು ಹೊಲದಲ್ಲಿ ಜೊತೆಗಾರರೊಡನೆ ಕಳೆ ಕೀಳುವುದರಲ್ಲಿ ನಿರತನಾಗಿದ್ದ. ಜೊತೆಗಾರ ಲಾಲ್ಯಾನಾಯ್ಕನಿಗೆ ಸೋಮನ ಅದೃಷ್ಟದ ಬಗ್ಗೆ, ತನ್ನ ದುರದೃಷ್ಟದ ಬಗ್ಗೆ ಮಾತಾಡುವ ವ್ಯಸನ!

“ಅಣ್ಣ ನೀನೇನೇ ಹೇಳು, ನಿನ್ನ ಮ್ಯಾಕೆ ಆ ಸೇವಾಲಾಲ ಕಣ್ಣು ಬಿಟ್ಟ. ಅಲ್ಲ ನಿನ್ನ ಮನೀಗ ಆ ಬೆಂಗ್ರ ದೊರೆಗಳು ಬರ್ತಾರ ಅಂದ್ರ... ಹುಂ.. ಬಿಡು ನೀ ಎಲ್ಲೋ ಹೋದಿ" ಜಿ ಅವನ ಮಾತಿಗೆ ಇಂಬುಕೊಡುವವನಂತೆ ರಾಂಪ “ಹೌದೋ ಅಣ್ಣ ನಮ್ಮ ಸೋಮ ನಾಳ್ಳಿಂದ ನಮ್ ಜೋಡಿ ಮಾತಾಡ್ತಾನ ಇಲ್ಲ, ಹೇಳಾಕ ಬರೂದಿಲ್ಲ. ಮುಖ್ಯಮಂತ್ರಿ ದೊರೆಗಳು ಬರ್ತಾರ... ಸೋಮನ ಮನಿ ನೋಡಿ ಒಂದ್ ದೊಡ್ಡ ಮನಿ ಕಟ್ಟಿಸಿ ಕೊಡ್ತಾರ... ಅವನ ಮಗಳ ಮದ್ವಿಗೆ ರೊಕ್ಕಾನೂ ಕೊಟ್ಟ ಹೊಕ್ಕಾರ... ಏನಂತಿ ಲಾಲ್ಯ?"

“ಖರೆ ಐತಿ ಬಿಡೊ ನಿನ್ನ ಮಾತು. ಅಗದಿ ಖರೆ ಮಾತಾಡ್ಲಿ..." ಲಾಲ್ಯಾ ರಾಂಪನ ಮಾತಿಗೆ ತಲೆಯಲ್ಲಾಡಿಸಿದ. ಆಗಲೇ ಸ್ವಲ್ಪ ದೂರದಲ್ಲಿ ಹೊಸದಾಗಿ ನಿರ್ಮಿಸುತ್ತಿದ್ದ ರಸ್ತೆಯಲ್ಲಿ ಮೂರ್ನಾಲ್ಕು ಸರ್ಕಾರಿ ಜೀಪುಗಳು ಬಂದು ನಿಂತಿದ್ದನ್ನು ನೋಡಿದ ಹಳ್ಳಿಗರು ಕೆಲಸ ನಿಲ್ಲಿಸಿ ಕುತೂಹಲದಿಂದ ಅತ್ತ ನೋಡುತ್ತ ನಿಂತರು.

ಲ್ಯಾಲ್ಯ ಜೇಬಿನಿಂದ ಒಂದು ಬೀಡಿಯನ್ನು ತೆಗೆದು ಬಾಯಿಗಿಟ್ಟು ಕೊಂಡು ಇನ್ನೊಂದನ್ನು ಸೋಮ್ಲಾನಿಗೆ ಕೊಡುತ್ತ ಹೇಳಿದ, ನನಗನಸ್ಕೃತಿ, ಅವು ನಮ್ಮ ಸೋಮ್ಲಾನ್ನ ನೋಡಾಕೆ ಬರ್ಲಿಕತ್ತಾರಂತ...” ಅವನು ಕೊಟ್ಟ ಬೀಡಿಯನ್ನು ತೆಗೆದುಕೊಂಡು ಹಚ್ಚುತ್ತ ಸೋಮ್ಲ ಅವನು ಹೇಳಿದ್ದರಲ್ಲಿ ಏನಾದರೂ ಕುಹಕವಿದೆಯಾ ಎಂದು ಗಮನಿಸಿದ, ಆದರೆ ಅಂಥ ಯಾವ ಎಳೆಯೂ ಅಲ್ಲಿರಲಿಲ್ಲ. ಆದರೆ ಲಾಲ್ಯನ ಮಾತಿಗೆ ಪುಷ್ಟಿಕೊಡುವಂತೆ ಆ ಸರ್ಕಾರಿ ವಾಹನದಿಂದ ಇಳಿದ ಅಧಿಕಾರಿಗಳು ಒಂದಿಬ್ಬರು ಹಳ್ಳಿಗರ ಜೊತೆಗೆ ನೇರವಾಗಿ ಸೋಮನ ಬಳಿಗೆ ನಡೆದುಕೊಂಡು

ಬಂದರು. ಬಂದವರನ್ನು ನೋಡಿ ಸೋಮ್ಲ ಸೇರಿದಂತೆ ಅಲ್ಲಿದ್ದವರೆಲ್ಲ ಅಚ್ಚರಿಪಟ್ಟರು. ತಾವು ಹತ್ತಾರು ಬಾರಿ ಅಲೆದಾಡಿದರೂ ಸಿಗಲಾರದ ತಹಸಿಲ್ದಾರ ಹಾಗೂ ಜಿಲ್ಲಾಧಿಕಾರಿಗಳು ಇಂದು ಸೋಮ್ಲನನ್ನು ಹುಡುಕಿಕೊಂಡು ಬಂದು ಅವನೆದುರು ನಿಂತಿದ್ದಾರೆ! ಅದೂ ಅವನೆದರು ಬಂದವರೆ "ನೀವೇನಾ ಸೋಮಾನಾಯ್ಕ?" ಎಂದು ಕೇಳಿದಾಗ ಸೋಮ್ಲ ಅರಿದ ನಾಲಿಗೆಯನ್ನು ಸವರಿಕೊಳ್ಳುತ್ತ, ಆಗುತ್ತಿದ್ದ ಹೆದರಿಕೆಯನ್ನು ಮುಚ್ಚಿಡುತ್ತ "ಹೌದು ಧಣಿ.. ನೀವ್ಯಾಕೆ ಬರಾಕೋದ್ರಿ... ಕದ್ದಿದ್ರೆ ನಾನೇ ಬತ್ತಿರಲಿಲ್ವ?" ಎಂದ ವಿನಮ್ರನಾಗಿ, ಅಧಿಕಾರಿಗಳು ಅವನನ್ನು ಕೆಳಗಿನಿಂದ ಮೇಲಿನವರೆಗೆ ಅಳೆಯುತ್ತ "ನೋಡಿ ನಾಯಕರೆ," ಸೋಮ್ಲಾನಾಯಕನನ್ನು ಕುರಿತ ಅವರ ಸಂಭೋದನೆಯನ್ನು ಕೇಳಿದ ಜೊತೆಯಲ್ಲಿದ್ದವರಿಗಂತೂ ಅದೂ ಒಂದು ಪವಾಡದಂತೆ ತೋರಿತು. ತಹಸೀಲ್ದಾರ ಮಾತು ಮುಂದುವರೆಸಿದರು. "ಮುಖ್ಯಮಂತ್ರಿಗಳು ನಾಡಿದ್ದು ಬರ್ತಾರ. ಆಗ ನಿಮ್ಮನಿಯಾಗ ಕೆಲ್ಸ ಮಾಡಾಕ ಆಳುಮಕ್ಕಳು ಬರ್ತಾರ. ನೀವು ಅವತ್ತು ಏನು ಅಡಿಗಿ ಮಾಡೋದು ಬ್ಯಾಡ. ನಮ್ಮವರ ಛಲೋ ಅಡಿಗಿ ಮಾಡಿ ಇಡ್ತಾರ. ಮುಖ್ಯಮಂತ್ರಿಗಳ ಜೋಡಿ ನೀವು, ನಿಮ್ಮ ಮನಿ ಮಂದಿ ಉಂಡ್ರ ಅಷ್ಟ ಸಾಕು."

ಸೋಮ್ಲಾನಾಯಕನಿಗೆ ಅಚ್ಚರಿಯ ಮೇಲೆ ಅಚ್ಚರಿ, ತಾನೇ ಆಳುಮಗ. ಜೀತಗಾರ. ಅಂಥದ್ದರಲ್ಲಿ ತನ್ನ ಮನೆ ಕೆಲಸಕ್ಕೆ ಬೇರೆ ಆಳುಮಕ್ಕಳು! ಅವರು ತಮಗೆ ಅಡಿಗೆ ಮಾಡಿ ಬಡಿಸುತ್ತಾರೆ. ತಾನು ಮಹಾರಾಜನಂತೆ ಮುಖ್ಯಮಂತ್ರಿಗಳ ಜೊತೆಯಲ್ಲಿ ಕುಳಿತು ಊಟ ಮಾಡಬೇಕು! ಅಬ್ಬ ಇದಕ್ಕಿಂತ ಅದೃಷ್ಟ ಬೇರೆ ಇದೆಯಾ?

ಸೋಮ್ಲಾನಾಯಕನಿಗೆ ಮಾತುಬಾರದಂತಾಗಿ ಪಿಳಪಿಳನೆ ಕಣ್ಣುಬಿಡುತ್ತ ಸುಮ್ಮನೆ ಅವರನ್ನು ನೋಡಿದ! ಇದೀಗ ಜಿಲ್ಲಾಧಿಕಾರಿ ವಸುದೇವರಾವ್ ಮೀಸೆಯ ಮರೆಯಲ್ಲೇ ನಗುತ್ತ ಹೇಳಿದರು. "ನಾಯಕರೆ, ಅವರು ಬಂದಾಗ ನೀವು ಸ್ನಾನಗೀನ ಮಾಡಿ ಸ್ವಚ್ಛ ಆಗಿರ್ಬೇಕು, ಏನಂತೀರಿ... ಇಂಥವೆಲ್ಲ ಮತ್ತೆ ಮತ್ತೆ ಬರೋದಿಲ್ಲ. ನಿಮಗೆ ನಿಮ್ಮ ಹೆಂಡತಿಗೆ ಹೊಸಬಟ್ಟೆ ತಂದಿದೀವಿ. ತಗೋಳಿ. ಇದನ್ನ ಮುಖ್ಯಮಂತ್ರಿಗಳು ಬಂದಾಗ ಉಡ್ಕೊಬೇಕು, ಏನಂತೀರಿ..." ಎನ್ನುತ್ತ ಅವರು ಅಂಗಿಪಂಚೆ, ಸೀರೆ ಮುಂತಾದವನ್ನು ಕೊಟ್ಟಾಗ ಸೋಮ್ಲಾನಾಯಕ ಮೂಕನಂತೆ ತಲೆಯಲ್ಲಾಡಿಸುತ್ತ ಅವನ್ನು ತೆಗೆದುಕೊಂಡ. ಜೊತೆಯವರು ಅವನ ಅದೃಷ್ಟಕ್ಕೆಬೆರಗಾಗಿ ನಿಂತಿದ್ದರು.

ಅಧಿಕಾರಿಗಳು ಅಲ್ಲಿಂದ ಹೋದ ಮೇಲೆಯೇ ಸೋಮ್ಲಾನಿಗೆ ಮಾತು ಬಂದಿದ್ದು. ಜೊತೆಯಲ್ಲಿದ್ದವರಂತೂ ಖುದ್ದು ಜಿಲ್ಲಾಧಿಕಾರಿಯೇ ಬಂದು ಸೋಮ್ಲಾನಿಗೆ ಮಾತಾಡಿಸಿ ಹೋದ ವಿಷಯವನ್ನು ಕಂಡಕಂಡವರಿಗೆ ಹೇಳಿದರು, ಸುತ್ತಲ ಹತ್ತು ಹಳ್ಳಿಗಳಲ್ಲಿ ಆ ವಿಷಯ ಟಾಂಟಾಂ ಆಗಿ ಹೋಯಿತು. ಸೋಮ್ಲಾನ ಮೇಲಿನ ಜನರ ಗೌರವ ಮುಖ್ಯಮಂತ್ರಿಗಳು ಬರುವುದಕ್ಕೆ ಮುಂಚೆಯೇ ಇಮ್ಮಡಿಯಾಗಿ ಹೋಯಿತು. ಸೋಮ್ಲಾನ ಹಿಂದೆ ಮುಂದೆ ಜನರು ತಮ್ಮ ಮನವಿಪತ್ರಗಳನ್ನು ಹಿಡಿದು ಓಡಾಡಿದರು. ಹೇಗಾದರೂ ಮಾಡಿ ಸೋಮನಿಗೆ ಆ ಮನವಿಪತ್ರಗಳನ್ನು ಕೊಟ್ಟರೆ ಅವನು ಅದನ್ನು ಮುಖ್ಯಮಂತ್ರಿಗಳಿಗೆ ಕೊಟ್ಟು ಅವರು ತಮ್ಮ ಕಷ್ಟ ಪರಿಹರಿಸಬಹುದೆಂಬ ನಂಬಿಕೆ

ಅವರದು. ಇಲ್ಲದಿದ್ದರೆ ಮುಖ್ಯಮಂತ್ರಿಗಳು ತಮ್ಮೂರಿಗೆ ಬಂದಾಗ ಅಲ್ಲಿ ಸೇರುವ ಸಾವಿರಾರು ಜನರ ಮಧ್ಯೆ ತಾವು ಅವರತನಕ ತಲುಪಿ ತಮ್ಮ ಕಷ್ಟ ಹೇಳಿಕೊಳ್ಳಲು ಸಾಧ್ಯವೆ?

ಮುಖ್ಯಮಂತ್ರಿಗಳು ಬರುವ ಹಿಂದಿನ ದಿನ ರಾತ್ರಿ ಸೋಮ್ಲಾನ ಮನೆಗೆ ಅವನ ಖಾಸಾ ದೋಸ್ತರಾದ ಲಾಲ್ಯಾ, ರಾಂಪ, ಮೂರ್ತಿ ಬಂದು ಕುಳಿತರು. ಮೂವರು ತಾವು ತಂದಿದ್ದ ಸೆರೆ ಬಾಟಲಿಗಳನ್ನು ಲೋಟಕ್ಕೆ ಬಗ್ಗಿಸಿ ಕುಡಿಯುತ್ತ ಸೋಮ್ಲಾನ ಜೊತೆ ಸಂತೋಷಕೂಟವನ್ನೇ ಆಚರಿಸಿದರು. ಸೋಮ್ಲಾನ ಹೆಂಡತಿ ಲಚ್ಚಿಯೂ ದೂರದಲ್ಲಿ ಆಸೆಗಣ್ಣಿನಲ್ಲಿ ನೋಡುತ್ತ ಕುಳಿತಿದ್ದನ್ನು ಕಂಡ ಸೋಮ್ಲ "ಯಾಕಂಗ ನೋಡಿ... ಬಾ ನೀನು ಸ್ವಲ್ಪ ತಗೊ." ಎಂದ. ಅದಕ್ಕೆ ಧನಿಗೂಡಿಸಿದ ಲಾಲ್ಯ "ಹೌದ ಲಚ್ಚಕ್ಕ, ನಾಳಿಲಿಂದ ನೀವೆಲ್ಲೊ ನಾವೆಲ್ಲೊ.... ನಿಮ್ಮ ಜೋಡಿ ಕುಂತ ನಾವು ಕುಡಿಲಿಕ್ಕ ಆಗತೈತೇನು? ಕುಡಿಯೋದು ಒತ್ತಟ್ಟಿಗಿಲ್ಲ, ಮಾತಾರಾ ಆಡಾಕ ಆತೋ ಇಲ್ಲೊ.." ಎಂದಾಗ ಲಚ್ಚಿ ನಗುತ್ತ ಅವರ ಬಳಿ ಬಂದು ತಾನೂ ಒಂದು ಲೋಟದಲ್ಲಿ ಬಗ್ಗಿಸಿಕೊಂಡು ಶರಾಬನ್ನು ಗಟಗಟನೆ ಕುಡಿದಳು. ಅವರೇ ತಂದಿದ್ದ ಮೆಣಸಿನಕಾಯಿ ಬಜ್ಜಿಯನ್ನು ನೆಂಜಿಕೊಳ್ಳುತ್ತ "ಏ ಬಿಡಣ್ಣ... ಯಾಕಂಗಾಡ್ತಿ!" ಎಂದಾಗ ರಾಂಪ "ಹೆ ನೀ ಇವತ್ತ ಹಿಂಗ ಹೇಳಿದೆ ಅಷ್ಟ ನಾಳಿಕ ಮುಖ್ಯಮಂತ್ರಿಗೊಳು ನಿಮ್ಮನಿಗೆ ಬಂದು ಲಕ್ಷ ಲಕ್ಷ ಕೊಟ್ಟು ಹ್ವಾದಾಗ ಇದ ಮಾತ ಹೇಳಿಯೇನು?" ಎಂದು ಕೆಣಕಿದ. ಅದಕ್ಕೆ ಲಚ್ಚಿ ಪಕ್ಕದಲ್ಲಿ ಕುಳಿತು ಪಿಳಿಪಿಳಿ ಕಣ್ಣುಬಿಡುತ್ತ ಜೊಲ್ಲುಸುರಿಸುತ್ತಿದ್ದ ಭೀಮನನ್ನು ನೋಡಿ "ಅಯ್ಯ, ಅವು ನನಗೆ ಲಕ್ಷಲಕ್ಷ ಕೊಡೋದೇನು ಬ್ಯಾಡಣ್ಣ, ನನ್ನ ಈ ಮಗೀನ ದೊಡ್ಡಾಸ್ಪತ್ರೇಲಿ ದೊಡ್ಡ ಡಾಕಟರಿಗೆ ತೋರ್ಸಿ ಅವನ್ನ ಎಲ್ಲರಂಗ ಮಾಡಿಕೊಟ್ಟ ನನಗಷ್ಟ ಸಾಕು. ನಮ್ಮ ಭೀಮಣ್ಣ ಎಂಗ ಶ್ಯಾಣ್ಯಾ ಆದ್ರ ಸಾಕು.

ಅದನ್ನು ಕೇಳಿದ ರಾಂಪ ನಗುತ್ತ "ಅಕ್ಕ ನಿಮ್ಮನಿಗ ಬರ್ತಿರೋದ ಯಾರಂತಿ? ಮುಖ್ಯಮಂತ್ರಿಗೊಳು, ಅವು ಮನಸ್ಸು ಮಾಡಿದ್ರೆ ಅದು ಎಷ್ಟೇ ಹೊತ್ತರದು ಬಿಡು..." ಎಂದಾಗ ಲಚ್ಚಿ ಮತ್ತೊಂದಿಷ್ಟು, ಶರಾಬನ್ನು ಗುಟುಕರಿಸಿ "ನೀ ಹೇಳಂಗ ಆದರೆ ನಿನ್ನ ಬಾಯಿಗೆ ಸಕ್ರಿ ಹಾಕತೀನೋ ಯಪ್ಪ" ಎಂದಳು.

ಅಷ್ಟರಲ್ಲಿ ಕುಡಿತದ ನಶೆ ತಲೆಗೇರಿಸಿಕೊಂಡಿದ್ದ ಸೋಮ್ಲ ತೊದಲುತ್ತ ಅವರ ಮೇಲಿನ ತಮ್ಮ ಪ್ರೀತಿ ಎಂದೂ ಕಡಿಮೆಯಾಗದು ಎಂಬಂತೆ ಹೇಳಿದ " ಲೇ ಲಾಲ್ಯಾ ರಾಂಪ, ಮೂರ್ತಿ ನೀವು ಮೂವರು ಯಾರು? ಯಾರು ಹೇಳಿ?" ಎಂದಾಗ ಮೂವರು ತಲೆತುರಿಸಿಕೊಳ್ಳುತ್ತ ಅವನನ್ನೇ ನೋಡಿದರು. ಸೋಮ್ಲಾನೇ ಮಾತು ಮುಂದುವರೆಸಿದ, "ಲೇ ನೀವು ನನ್ನ ಖಾಸ ಗೆಳೇರು ಕಲೆ... ನನ್ನ ಖಾಸ ಅಣ್ಣತಮ್ಮಂದಿರಿದ್ದಂಗ.... ನಾಳೆ ಮಧ್ಯಾಹ್ನ ಆ ಮುಖ್ಯಮಂತ್ರಿ ಬಂದಾಗ ಅವ ನನಗೆ ಏನೇನು ಕೊಡ್ತಾನೋ ಅದನ್ನೆಲ್ಲ ನಿಮಗೂ ಕೊಡಾಕ ಹೇಳ್ತಿನಿ, ಏನು, ನನ್ನಂದ್ರ ಏನಂತ ತಿಳ್ಕೊಂಡಿರಲೇ..."

ಅವನ ಮಾತನ್ನು ಕೇಳಿ ಮೂವರು ಸಂತಸದಿಂದ ಬೀಗಿದರು. ಸೋಮ್ಲಾನ ಜೊತೆಗೆ ತಮ್ಮ ಅದೃಷ್ಟವೂ ಖುಲಾಯಿಸಲಿದೆ ಎಂದುಕೊಂಡ ಅವರಿಗೆ ಸೋಮ್ಲ ದೇವರಂತೆ ಕಂಡ, ಸೋಮ್ಲನಿಗೆ ಇನ್ನೂ ಕಂಠಮಟ್ಟ ಕುಡಿಸಿದ ಅವರು ಸೋಮ್ಲಾನ ಮಗಳು ಹೇಮ್ಲಿ ಮಾಡಿದ ಬಿಸಿ ಬಿಸಿ ರೊಟ್ಟಿ ಊಟವನ್ನು ತಿಂದು ಮನೆಗೆ ತೆರಳಿದರು.

ಅವರು ಹೋದ ನಂತರ ಸೋಮ್ಲ ಲಚ್ಚಿ ಹಾಗೂ ಮಗಳು ಹೇಮ್ಮಿಯೊಡನೆ ನಾಳೆಯಿಂದ ಬದಲಾಗಬಹುದಾದ ತಮ್ಮ ಜೀವನಕ್ಕೆ ಹೇಗೆ ಹೊಂದಿಕೊಳ್ಳಬೇಕೆಂಬುದರ ಬಗ್ಗೆ ದೀರ್ಘ ಚರ್ಚೆ ನಡೆಸಿದ. ಮೂವರು ತಮ್ಮ ಪಾಲಿಗೆ ಅದೃಷ್ಟ ತಂದ ಮುಖ್ಯಮಂತ್ರಿಯನ್ನು ದೇವರಂತೆ ನೆನೆಯುತ್ತ ನಾಳೆಯ ಸಿಹಿಕನಸನ್ನು ಕಾಣುತ್ತ ಚಾಪೆಯ ಮೇಲೆ ಉರುಳಿಕೊಂಡರು.

ಅಂದು ಮುಖ್ಯಮಂತ್ರಿಗಳು ಬರುವ ದಿನ. ಮಧ್ಯಾಹ್ನ ಹನ್ನೆರಡಕ್ಕೆ ಮನೆಗೆ ಬರುತ್ತಾರಂತೆ, ಅವರನ್ನು ಯಾವ ರೀತಿ ಸ್ವಾಗತಿಸುವುದು ಎಂದು ಕೊಳ್ಳುತ್ತ ಬೆಳಿಗ್ಗೆ ಎದ್ದು ಕಣ್ಣುಜ್ಜಿಕೊಳ್ಳುತ್ತ ಬಾಗಿಲು ತೆಗೆಯುತ್ತಲೇ ತಬ್ಬಿಬ್ಬಾಗುವಂತಾಯಿತು ಸೋಮ್ಲನಿಗೆ ಎದುರುಗಡೆ ಆಗಲೇ ಒಂದು ಸರ್ಕಾರಿ ವ್ಯಾನು, ಒಂದು ಪೋಲಿಸ್ ಜೀಪು ಕಾದುಕೊಂಡು ನಿಂತಿದ್ದವು! ಇವನು ಬಾಗಿಲು ತೆಗೆಯುತ್ತಲೇ ಇವನನ್ನು ಕ್ಯಾರೆ ಎನ್ನದೆ ಇನ್ಸ್‌ಪೆಕ್ಟರ್ ಬೂಟುಕಾಲಿನಲ್ಲೇ ಮನೆಯೊಳಗೆ ನುಗ್ಗಿದ. ಅವನ ಹಿಂದೆಯೇ ವ್ಯಾನಿಂದ ಹತ್ತು ಹದಿನೈದು ಕೆಲಸಗಾರರು ತಮ್ಮ ಪಾಡಿಗೆ ತಾವು ಏನೇನೋ ಸಾಮಾನುಗಳನ್ನೆಲ್ಲ ಇಳಿಸಿ ಮನೆಯೊಳಕ್ಕೆ ತಂದರು. ಇನ್ಸ್ ಪೆಕ್ಟರ್ ಮನೆಯನ್ನೆಲ್ಲ ಸೂಕ್ಷ್ಮವಾಗಿ ಪರಿಶೀಲಿಸಿದ. ಹೆಂಡತಿ ಲಚ್ಚಿ ಹಾಗೂ ಮಗಳು ಹೇಮಿ ಮಲಗಿದ್ದವರು ಅವರ ಗಲಾಟೆಗೆ ಧಡಕ್ಕನೆ ಬೆಚ್ಚಿ ಎದ್ದು ಕೂತರು. ಬಂದವರು ಅವರನ್ನು ಒಂದು ಮಾತೂ ಆಡಿಸದೆ ತಮ್ಮ ಪಾಡಿಗೆ ತಾವು ಕೆಲಸ ಮಾಡಲಾರಂಭಿಸಿದರು. ಯಾರೋ ಮನೆಯನ್ನೆಲ್ಲ ಗುಡಿಸಿದರೆ, ಮತ್ತಾರೋ ತಂದಿದ್ದ ದಿನಸಿಯಿಂದ ರುಚಿಕರ ತಿಂಡಿಯನ್ನು ತಯಾರಿಸತೊಡಗಿದರು. ಇನ್ನೊಂದಿಬ್ಬರು ಮನೆಯೊಳಗೆ ಟಿವಿ ಪೆಟ್ಟಿಗೆಯನ್ನು ತಂದಿಟ್ಟಾಗ ಸೊಮ್ಲನಿಗೂ ಅವನ ಹೆಂಡತಿ ಮಕ್ಕಳಿಗೂ ಆದ ಸಂತಸ ಅಷ್ಟಿಷ್ಟಲ್ಲ. ಇವರು ಯಾವ ಕೆಲಸವನ್ನೂ ಮಾಡಲೂ ಆ ಕೆಲಸದವರು ಅವಕಾಶ ಕೊಡಲಿಲ್ಲ. ಇವರು ಮನೆಯವರು ಎಂಬ ಒಂದೇ ಕಾರಣಕ್ಕೆ ಅವರಿಗೆ ಅಲ್ಲಿರಲು ಅವಕಾಶ ಕೊಟ್ಟಿದ್ದಂತೆ ತೋರಿಸಿಕೊಳ್ಳುತ್ತಿದ್ದರು ಅವರ ಮೇಲಾಧಿಕಾರಿಗಳು. ಅಷ್ಟರಲ್ಲಿ ಯಾರೋ ಒಬ್ಬ ಕೆಲಸದವ ಮಾಡಿದ ತಿಂಡಿಯನ್ನು ರುಚಿ ನೋಡಲೆಂಬಂತೆ ಇವರು ಮೂವರಿಗೂ ತಂದು ಕೊಟ್ಟ ಮೂವರು ಸರ್ಕಾರಿ ಅಡಿಗೆಯವರು ಅಪ್ಪಟ ತುಪ್ಪದಲ್ಲಿ ಮಾಡಿದ ರುಚಿಕರ ತಿಂಡಿಯನ್ನು ಸವಿದು ತಿಂದರು.

ಸೂರ್ಯ ಮೇಲೇರುತ್ತಿದ್ದಂತೆಯೇ ಇವರ ಮನೆಯೆದುರು ಜನ ಸೇರಲಾರಂಭಿಸಿದರು. ಪಕ್ಷದ ಕಾರ್ಯಕರ್ತರು, ಸ್ವಯಂಘೋಷಿತ ಮುಖಂಡರ ಸಂತೆಯೇ ಸೇರಿತು. ಬೆಂಗಳೂರಿನಿಂದ ಪತ್ರಕರ್ತರ ದಂಡೂ ಸಹ ಬಂದಿಳಿಯಿತು. ಎಲ್ಲರೂ ಇವರ ಮನೆಯ ಮುಂದೆ, ಮನೆಯೊಳಗೆ ಯಾವ ಮುಲಾಜೂ ಇಲ್ಲದೆ

ಓಡಾಡುತ್ತ ತಮ್ಮ ತಮ್ಮ ಕೆಲಸ ಮಾಡತೊಡಗಿದರು. ಟೀವಿ ಚಾನಲ್‌ಗಳವರು ಮುಖ್ಯಮಂತ್ರಿಗಳು ಬಂದಾಗ ಎಲ್ಲಿದ್ದರೆ ಅವರ ಎಲ್ಲ ಚಟುವಟಿಕೆಗಳನ್ನು ಸರಿಯಾಗಿ ಚಿತ್ರೀಕರಿಸಬಹುದು ಎಂದು ಸರಿಯಾದ ಜಾಗಕ್ಕಾಗಿ ಶೋಧಿಸುತ್ತಿದ್ದರು. ಪತ್ರಿಕೆಯವರಲ್ಲಿ ಕೆಲವರು ಬಂದು ಸೋಮ್ಲಾನ ಅವನ ಹೆಂಡತಿ ಮಕ್ಕಳ ಫೋಟೋ ತೆಗೆದುಕೊಂಡರು. ಇನ್ನು ಕೆಲವರು ಅವನ ಜಾತಿ ಕುಲ ಗೋತ್ರ ಕೇಳುತ್ತ ಜನ್ಮ 'ಜಾಲಾಡಿದರು. ಹನ್ನೆರಡಾಯಿತು, ಒಂದಾಯಿತು, ಎರಡಾಯಿತು.... ಮೂರು ಗಂಟೆಯಾಯಿತು. ಮುಖ್ಯಮಂತ್ರಿಗಳ ಪತ್ತೆಯೇ ಇಲ್ಲ. ಕಾಯುತ್ತ ಕಾಯುತ್ತ ಜನಗಳ ಸಂಖ್ಯೆಯೂ ಮಿತಿಮೀರುತ್ತಿತ್ತು.

ಆಗಲೇ ಸಂಜೆಯಾಗುತ್ತ ಬಂದಿತ್ತು. ಜನಜಾತ್ರೆಯೂ ಸಾವಿರ ಸಾವಿರ ಸಂಖ್ಯೆಯಲ್ಲಿ ಸೇರಿತ್ತು. ಸೋಮ್ಲನಿಗೆ ಒಂದು ಕ್ಷಣ ತನ್ನ ಬಗ್ಗೆ ತನಗೇ ಹೆಮ್ಮೆಯೆನಿಸಿತು. ಬಂದಿರುವ ಸಾವಿರಾರು ಜನರಿಗಿಂತ ತಾನು ಎತ್ತರದಲ್ಲಿದ್ದೇನೆ. ರಾಜ್ಯದ ಮುಖ್ಯಮಂತ್ರಿಗಳು ಇನ್ನು ಸ್ವಲ್ಪ ಹೊತ್ತಿನಲ್ಲಿ ತನ್ನ ಜೊತೆಗೆ ಕುಳಿತು ಊಟ ಮಾಡುತ್ತಾರೆ, ಅದನ್ನು ಈ ಟೀವಿಯವರು ಎಲ್ಲರಿಗೂ ತೋರಿಸುತ್ತಾರೆ. ಆಹಾ... ಎಂಥ ಭಾಗ್ಯ? ಯಾರಿಗುಂಟು ಯಾರಿಗಿಲ್ಲ? ಮುಖ್ಯಮಂತ್ರಿಗಳಿಗೆ ತಮ್ಮ ತಮ್ಮ ಕಷ್ಟ ಹೇಳಿಕೊಂಡು ಯಾರ್ಯಾರು ಪತ್ರಗಳನ್ನು ಕೊಟ್ಟಿದ್ದಾರೆ, ಅವುಗಳನ್ನೆಲ್ಲ ತಾನು ಜವಾಬ್ದಾರಿಯುತವಾಗಿ ಅವರಿಗೆ ಕೊಡುವುದು ಆಗುತ್ತದಾ ಎಂದುಕೊಳ್ಳುತ್ತ ಸೋಮ್ಲ ಊರಿನವರು ಕೊಟ್ಟಿದ್ದ ಅರ್ಜಿಗಳನ್ನು ನೋಡಿದ. ಜನರು ವಿಪರೀತವಾದಾಗ ಸೋಮ್ಲ ಲಚ್ಚಿ ಮಗಳು ಹೇಮ್ಲ ಮನೆಯ ಮೂಲೆಯಲ್ಲಿ ಸೇರಿಕೊಂಡರು. ಎಲ್ಲರೆದುರು ಜೊಲ್ಲು ಸುರಿಸುತ್ತ ಓಡಾಡುತ್ತಿದ್ದ ಮಗ ಭೀಮನನ್ನು ನೋಡಿ ಲಚ್ಚಿ ಗಂಡನಿಗೆ ಮುಖ್ಯಮಂತ್ರಿಗಳು ಬರುತ್ತಲೇ ಮೊದಲು ತಮ್ಮ ಮಗನಿಗೆ ಸರಿಯಾದ ಚಿಕಿತ್ಸೆ ಕೊಡಿಸುವ ಬಗ್ಗೆ ಮಾತಾಡಬೇಕು ಎಂದು ತಾಕೀತು ಮಾಡಿದಳು.

ಆಗಲೇ ಮುಖ್ಯಮಂತ್ರಿಗಳು ಹೆಲಿಕ್ಯಾಪ್ಟರ್‌ನಲ್ಲಿ ಊರಪಕ್ಕದ ಮೈದಾನದಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿದ್ದ ಹೆಲಿಪ್ಯಾಡ್‌ನಲ್ಲಿ ಬಂದಿಳಿದಿದ್ದಾರೆ ಎಂಬ ಸುದ್ದಿ ಬರುತ್ತಿದ್ದಂತೆಯೇ ಅಲ್ಲಿ ಸೇರಿದ್ದ ಅಧಿಕಾರಿಗಳು, ಪೋಲಿಸರು, ಪತ್ರಕರ್ತರು ಚುರುಕಾದರು. ಆ ಜನಜಂಗುಳಿ, ಪೋಲಿಸರು, ಅಧಿಕಾರಿಗಳನ್ನು ನೋಡಿ ತಲೆತಿರುಗುವಂತಾಗಿ ಸೋಮ್ಲಾ ನಿಗೆ ಮೊದಲ ಬಾರಿಗೆ ತನ್ನ ಅಸ್ತಿತ್ವವೇ ಕಳೆದುಕೊಂಡಂತೆನಿಸಿತು. ಇದು ನಿಜವಾಗಲೂ ತನ್ನ ಮನೆಯಾ ಎಂದು ಯೋಚಿಸುವಂತಾಯಿತು.

ಆಗಲೇ ಹತ್ತಿಪ್ಪತ್ತು ಕಾರುಗಳು ಒಂದರ ಹಿಂದೊಂದು ಧೂಳೆಬ್ಬಿಸುತ್ತ ಬಂದು ಅವನ ಮನೆಯೆದುರು ನಿಂತವು. ಪೋಲಿಸರು ಜಯಕಾರ ಹಾಕುತ್ತಿದ್ದ ಅಸಾಧ್ಯ ಜನಸಂದಣಿಯನ್ನು ಚದುರಿಸಿ ಮುಖ್ಯಮಂತ್ರಿಗಳನ್ನು ಸೋಮ್ಲಾನಾಯಕನ ಮನೆಯೊಳಕ್ಕೆ ಕರೆತಂದರು. ಮುಖ್ಯಮಂತ್ರಿಗಳು, ಅವರ ಹಿಂದಿನ ಅಧಿಕಾರಿಗಳ ದಂಡನ್ನು ನೋಡಿ ಸೋಮ್ಲಾ ನ ನಾಲಿಗೆಯೇ ಒಣಗಿಹೋಯಿತು. ಎದ್ದುನಿಂತು ಕೈ

ಮುಗಿಯುವುದಷ್ಟೆ ಅವನಿಗೆ ಸಾಧ್ಯವಾಯಿತು. ಮುಖ್ಯಮಂತ್ರಿಗಳು ಅವನನ್ನೊಮ್ಮೆ ನೋಡಿ ಅಲ್ಲಿದ್ದ ಕುರ್ಚಿಯಲ್ಲಿ ಕುಳಿತರು. ಅಲ್ಲಿನ ಸ್ಥಳೀಯ ಮುಖಂಡರು ಬಂದು ಮುಖ್ಯಮಂತ್ರಿಗಳ ಜೊತೆಯಲ್ಲಿ ಒಂದೆರಡು ನಿಮಿಷ ಮಾತಾಡಿದರು. ಟೀವಿ ಚಾನಲ್‌ಗಳು ಇದೆಲ್ಲವನ್ನು ಒಂದು ಸಮಾರಂಭದಂತೆ ಚಿತ್ರೀಕರಿಸಿಕೊಳ್ಳುತ್ತಿತ್ತು. ಪತ್ರಕರ್ತರ ಕೊರಳಲ್ಲಿದ್ದ ಕ್ಯಾಮರಾಗಳು ಸೆಕೆಂಡೂ ಬಿಡುವು ಕೊಡದೆ ಕ್ಲಿಕ್ಕಿಸುತ್ತಿದ್ದವು.

ಮುಖ್ಯಮಂತ್ರಿಗಳು ಹಣೆಯ ಮೇಲಿನ ಬೆವರನ್ನು ಒರೆಸಿಕೊಳ್ಳುತ್ತ ಫ್ಯಾನಿನತ್ತ ನೋಡಿದರು. ಯಾರೋ ಫ್ಯಾನಿನ ಗುಂಡಿಯನ್ನು ಅದುಮಿದರು. ಆದರೆ ಕರೆಂಟ್ ಇಲ್ಲದ್ದರಿಂದ ಫ್ಯಾನ್ ತಿರುಗಲಿಲ್ಲ. ಮುಖ್ಯಮಂತ್ರಿಗಳ ಮುಖ ಸೆಕೆಯಿಂದ ಸೊಟ್ಟಗಾಯಿತು. ಅಷ್ಟರಲ್ಲಿ ಯಾರೋ ಟೀವಿಯವರು ಬಂದು ಮುಖ್ಯಮಂತ್ರಿಗಳಿಗೆ ತಾವು ನಮ್ಮ ಜೊತೆ ಎರಡು ಮಾತಾಡಬೇಕು ಎಂದರು. ತಕ್ಷಣ ಮುಖ್ಯಮಂತ್ರಿಯವರ ಮುಖದಲ್ಲಿ ಮಂದಹಾಸ ಮೂಡಿತು. ಟೀವಿಯವರು ಕೇಳಿದರು, “ಮಾನ್ಯ ಮುಖ್ಯಮಂತ್ರಿಗಳೇ ತಮ್ಮ ಗ್ರಾಮ ವಾಸ್ತವ್ಯದ ಕಾರಣವೇನು, ಪ್ರೇರಣೆ ಯಾರು?"

ಮುಖ್ಯಮಂತ್ರಿಗಳು ಮುಗುಳುನಕ್ಕರು “ಗಾಂಧೀಜಿಯವರ ಗ್ರಾಮ ಸ್ವರಾಜ್ಯ ನನ್ನ ಕನಸು. ಗ್ರಾಮಗಳಿಂದಲೇ ಇಂದು ನಮ್ಮ ಉದ್ಧಾರವಾಗಬೇಕು. ನೋಡಿ ಇಲ್ಲಿರುವಂತೆಯೇ ಗ್ರಾಮದ ಪ್ರತಿಯೊಂದು ಮನೆಯಲ್ಲಿಯೂ ಟಿವಿ, ಫ್ಯಾನ್ ಇರಬೇಕು. ಇಂಥ ಕುಗ್ರಾಮಕ್ಕೂ ರಸ್ತೆ ಸಂಪರ್ಕ ಇರಬೇಕು. ಅದನ್ನು ನಾವು ಮಾಡಿದ್ದೇವೆ. ಈ ರಾಂಪುರ ತಾಂಡದಂತೆಯೇ, ಈ ಸೋಮ್ಲಾ ನಾಯಕರ ಮನೆಯಂತೆಯೇ ಪ್ರತಿಯೊಂದು ಗ್ರಾಮ, ಮನೆಗಳೂ ಆಗಬೇಕು. ಆಗುತ್ತದೆ, ನಾವು ಮಾಡುತ್ತೇವೆ. ನಿಮ್ಮೆಲ್ಲರ ಬೆಂಬಲ ಆಶೀರ್ವಾದ ನಮಗಿರಲಿ, ನಮಸ್ಕಾರ.”

ಚುನಾವಣಾ ಭಾಷಣದಂತಿದ್ದ ಮುಖ್ಯಮಂತ್ರಿಗಳು ಹೇಳಿದ ಮಾತು ಸೋಮ್ಲಾ ನ ಮನೆಯಲ್ಲಿದ್ದ ಟೀವಿಯಲ್ಲಿಯೂ ಲೈವ್ ಟೆಲಿಕಾಸ್ಟ್ ಆಯಿತು. ಸೋಮನಿಗೆ ತಲೆ ಗುಂಯ್ ಎಂದಿತು. ಜನರು ಕೊಟ್ಟಿದ್ದ ಅರ್ಜಿಗಳನ್ನು ನೋಡಿಕೊಂಡ. ಹೌದು ಇವರಿಂದ ನಮ್ಮ ಮನೆಗೆ ಟೀವಿ, ಫ್ಯಾನು ಬಂದಿದೆ. ಇನ್ನು ಇವರಿಗೆ ನಮಗೊಂದಿಷ್ಟು ಜಮೀನು, ಮಗನಿಗೆ ಚಿಕಿತ್ಸೆ ಇಷ್ಟು ಕೇಳಿ ಪಡೆದರೆ ಸಾಕು. ತನ್ನೆಲ್ಲ ಸಮಸ್ಯೆಗಳೂ ಕೊನೆಗೊಳ್ಳುತ್ತವೆ. ಹೇಗಿದ್ದರೂ ಇಂದು ರಾತ್ರಿಯೆಲ್ಲ ಇವರು ತಮ್ಮಲ್ಲಿಯೇ ತಂಗುತ್ತಾರೆ. ಅವರೊಬ್ಬರೇ ಇದ್ದಾಗ ಜನಗಳ ಅರ್ಜಿ ಕೊಟ್ಟು, ತನ್ನ ಕಷ್ಟವನ್ನೂ ಹೇಳಿಕೊಂಡರೆ ತನ್ನ ಕೆಲಸ ಆಗೇ ಆಗುತ್ತದೆ ಎಂದುಕೊಂಡು ಸಮಾಧಾನ ಮಾಡಿಕೊಂಡ.

ಸರಿರಾತ್ರಿಯಾಯಿತು. ಜನರೂ ಕಡಿಮೆಯಾಗಲಿಲ್ಲ. ಮುಖ್ಯಮಂತ್ರಿಗಳ ಕೆಲಸವೂ ನಿಲ್ಲಲಿಲ್ಲ. ಆ ನಡುವೆ ಸೋಮ್ಲಾ ಹಾಗೂ ಮನೆಯವರ ಜೊತೆ ಮುಖ್ಯಮಂತ್ರಿ ಯವರು ಹಾಗೂ ಅವರ ದಂಡು ಕುಳಿತು ಊಟ ಮಾಡಿತು. ಆದರೆ ಆ ಅಸಾಧ್ಯ ಗಲಾಟೆಯಲ್ಲಿ ಸೋಮ್ಲಾ ನಿಗೆ ಮುಖ್ಯಮಂತ್ರಿಗಳ ಮುಖವನ್ನೂ ಸಹ ನೋಡಲಾಗಲಿಲ್ಲ.

ಸರಿ ರಾತ್ರಿ ಎರಡು ಗಂಟೆಯಾಯಿತು. ಮುಖ್ಯಮಂತ್ರಿಗಳ ಮುಖದಲ್ಲಿ ಬಳಲಿಕೆಯಿತ್ತು. ಹತ್ತು ನಿಮಿಷ ಮುಖ್ಯಮಂತ್ರಿಗಳು ಮಲಗಿ ರೆಸ್ಟ್ ತೆಗೆದುಕೊಳ್ಳುತ್ತಾರೆ ಎಲ್ಲ ಹೊರಬನ್ನಿ ಎಂದು ಪೋಲಿಸರು ಎಲ್ಲರನ್ನೂ ಹೊರದಬ್ಬಿದರು. ಆಗ ಉಂಟಾದ ಗೊಂದಲದಲ್ಲಿ ಸೋಮ್ಲು ಹಾಗೂ ಮನೆಯವರನ್ನೂ ತಂದು ಬಾಗಿಲು ಹೊರಗಿನ ಜಗಲಿಯಲ್ಲಿ ಹಾಕಿದ್ದರು. ಲಚ್ಚಿ ಭೀಮ ಎಲ್ಲಿ ಭೀಮ ಎಲ್ಲಿ ಎಂದು ಕೂಗುತ್ತಿದ್ದಳು. ಆದರೆ ಅವಳ ಕೂಗಿಗೆ ಓಗೊಡುವವರು ಅಲ್ಲಿ ಯಾರೂ ಇರಲಿಲ್ಲ. ಸೋಮ್ಲಾ ಲಚ್ಚಿಯನ್ನು ಇಲ್ಲಿ ಎಲ್ಲೊ ಇರ್ತಾನ ಬಿಡ ಖೋಡಿ, ಹಂಗ್ಯಾಕ ಆಡ್ತಿ' ಎಂದು ಸಮಾಧಾನಪಡಿಸಿದ. ಆದರೆ ಅವನಿಗೂ ಭೀಮ ಕಾಣದಿದ್ದುದು ಆತಂಕ ಮೂಡಿಸಿತ್ತು. ಮನೆ ಒಳಗಿನಿಂದ ಬಾಗಿಲು ಹಾಕಿಕೊಂಡ ಮುಖ್ಯಮಂತ್ರಿಗಳು ಒಂದು ಗಂಟೆ ಮಲಗಿದ್ದು ನಂತರ ಎದ್ದು ಹೊರಬಂದರು. ಜನರೆಲ್ಲ ಜಯಕಾರ ಹಾಕಿದರು. ಸೋಮ ನೋಡು ನೋಡುತ್ತಿದ್ದಂತೆಯೇ ಮುಖ್ಯಮಂತ್ರಿಗಳು ಹಾಗೂ ಅಧಿಕಾರಿಗಳು ಕುಳಿತ ಕಾರುಗಳು ಧೂಳೆಬ್ಬಿಸುತ್ತ ಕತ್ತಲಲ್ಲಿ ಕರಗಿಹೋದವು. ಅವರ ಹಿಂದೆಯೇ ಜನರೂ ಕರಗಿಹೋದರು. ಮುಖ್ಯಮಂತ್ರಿಯವರ ಹೆಲಿಕ್ಯಾಪ್ಟರ್ ತಾಂಡದ ಮೇಲೆ ಶಬ್ದ ಮಾಡುತ್ತ ಹಾರಿಹೋಯಿತು. ಸೋಮ್ಲಾ ಮನೆಯೊಳಗೆ ಹೋಗಿ ನೋಡಿದ. ಕಳ್ಳ ನುಗ್ಗಿದ ಮನೆಯಂತಾಗಿತ್ತು ಅದು. ಲಚ್ಚಿ ಪೆಚ್ಚುಮುಖ ಹೊತ್ತು ಭೀಮನನ್ನು ಹುಡುಕಲಾರಂಭಿಸಿದಳು. ಸೋಮ್ಲಾ ನಿಗೆ ಭ್ರಮನಿರಸನವಾದಂತಾಗಿತ್ತು. ಆದರೂ ಮುಖ್ಯಮಂತ್ರಿ ಬಂದು ಹೋದ ಕುರುಹಾಗಿ ಟಿವಿ, ಫ್ಯಾನ್ ಹಾಗೂ ಕುರ್ಚಿಗಳು ಇರುವುದನ್ನು ನೋಡಿ ಸಮಾಧಾನವೆನಿಸಿತು. ಅಷ್ಟರಲ್ಲೇ ಹೊರಗಡೆ ಯಾವುದೋ ವಾಹನ ಬಂದು ನಿಂತಂತಾಗಿ ಇಣುಕಿ ನೋಡಿದ. ವಾಹನದಿಂದ ಇಳಿದ ಅಧಿಕಾರಿಗಳು ಹಾಗೂ ಕೆಲಸದವರು ಮನೆಯ ಒಳಗಡೆ ಬಂದು ಸೋಮನನ್ನು ಏನೂ ಕೇಳದೆ ಟೀವಿ, ಫ್ಯಾನ್ ಹಾಗೂ ಕುರ್ಚಿಗಳನ್ನು ಎತ್ತಿಕೊಂಡು ವ್ಯಾನಿಗೆ ತುಂಬಿಸಿದರು. ಅಧಿಕಾರಿಗಳು ಮನೆಯಲ್ಲಿ ಇನ್ನೇನಾದರೂ ಇದೆಯಾ ಎಂದು ಕಣ್ಣಾಡಿಸಿದರು. ಏನೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಅಲ್ಲಿಂದ ಗಾಡಿಬಿಟ್ಟರು. ಸೋಮ್ಲು ಬಾಗಿಲಲ್ಲಿ ದಿಗ್ಭ್ರಾಂತನಾಗಿ ನಿಂತಿದ್ದ. ಆಗಲೇ ಮನೆಹಿಂದೆ ಲಚ್ಚಿ ದೊಡ್ಡ ಧ್ವನಿಯಲ್ಲಿ ಅಳಲು ಪ್ರಾರಂಭಿಸಿದಾಗ ಗಾಬರಿಯಿಂದ ಓಡಿಬಂದ ಸೋಮ್ಲು ಅಲ್ಲಿನ ದೃಶ್ಯವನ್ನು ನೋಡಿ ಗರಬಡಿದಂತಾಗಿ ನಿಂತ. ಅಲ್ಲಿ ಅವನ ಮಗ ಭೀಮ ಜನರ ಕಾಲ್ತುಳಿತಕ್ಕೆ ಸಿಕ್ಕಿ ಅವನ ಮೈ ತಣ್ಣಗಾಗಿತ್ತು.

ಲೇಖಕರ ವಿಳಾಸ :


**೧. ದೇವನೂರ ಮಹಾದೇವ**

ನಂ. ೫೨, ೧೧ನೇ ಕ್ರಾಸ್, ನವಿಲು ರಸ್ತೆ

ಕುವೆಂಪು ನಗರ

ಮೈಸೂರು - ೫೭೦೦೨೩

ದೂ : ೦೮೨೧೨-೫೪೩೫೭೬

**೨. ಡಾ. ಬರಗೂರು ರಾಮಚಂದ್ರಪ್ಪ**

ನಂ. ೨೭೫, ೧೧ನೇ ಕ್ರಾಸ್

ಜೆ.ಪಿ. ನಗರ, ೨ನೇ ಹಂತ

ಬೆಂಗಳೂರು- ೫೬೦೦೭೮

ದೂ : ೭೬೭೬೬೬೨೫೬೫

**೩. ಬಿ.ಟಿ. ಲಲಿತಾನಾಯಕ್**

೨೨, ೧ನೇ ಮೇನ್, ೨ನೇ ಕ್ರಾಸ್,

ನ್ಯಾಯಾಧೀಶರ ಬಡಾವಣೆ

ಸಂಜಯನಗರ, ಆರ್.ಎಂ.ವಿ. ೨ನೇ ಹಂತ,

ಬೆಂಗಳೂರು-೫೬೦೦೯೪

ದೂ : ೦೮೦೩೪೧೪೩೦೨

**೪. ಅರವಿಂದ ಮಾಲಗತ್ತಿ**

ಪ್ರಾಧ್ಯಾಪಕ, ಕುವೆಂಪು ಕನ್ನಡ ಅಧ್ಯಯನ

ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ

ಮಾನಸಗಂಗೋತ್ರಿ, ಮೈಸೂರು

ದೂ : ೯೪೪೮೩೪೨೪೬೯

**೫. ಪ್ರೊ ಮೂಡ್ನಾಕೂಡು ಚಿನ್ನಸ್ವಾಮಿ**

ನಂ. ೫೫೮, ಕಾವ್ಯಾಂಬುದಿ, ೩ನೇ ಮೇನ್,

ಬೆಲ್ ಲೇ ಔಟ್, ೨ನೇ ಹಂತ

ರಾಜರಾಜೇಶ್ವರಿ ನಗರ,

ಬೆಂಗಳೂರು- ೫೬೦೦೯೮

**೬. ಮ.ನ. ಜವರಯ್ಯ**

ಎಂ.ಐ.ಜಿ.-೧೩, ೨ನೇ ಕ್ರಾಸ್

೨ನೇ ಮೇನ್, ೨ನೇ ಹಂತ

ಇ-ಎಫ್ ಬ್ಲಾಕ್, ರಾಮಕೃಷ್ಣನಗರ

ಮೈಸೂರು - ೫೭೦ ೦೨೭

ದೂ : ೯೯೩೬೩೯೦೬೦೮

ದೂ : ೯೮೮೬೦೭೫೬೫೨

೭. ಬಿ.ಟಿ. ಜಾಹ್ನವಿ

ನಂ. ೩೮೯೫/೮,

ರಾಮಕೃಷ್ಣ ನಿಲಯ

೧ನೇ ಮಹಡಿ, ೧೩ನೇ ಕ್ರಾಸ್,

ತರಳಬಾಳು ಬಡಾವಣೆ

ವಿದ್ಯಾನಗರ,

ದಾವಣಗೆರೆ-೫೭೭ ೦೦೫

**೮. ಡಾ. ಸಣ್ಣರಾಮ**

ನಂ. ೮೦, 'ಸಮತಾ',

೪ನೇ ತಿರುವು, ವಿದ್ಯಾನಗರ

ಶಿವಮೊಗ್ಗ – ೫೭೭ ೨೦೩

ದೂ : ೯೪೪೯೫೦೧೨೦೨

**೯. ಎಸ್.ಆರ್. ಗುರುನಾಥ**

೧೧ನೇ ತಿರುವು,

ಐ.ಯು.ಡಿ.ಪಿ. ಲೇಔಟ್

ಚಿತ್ರದುರ್ಗ- ೫೭೭ ೫೦೧

**೧೦. ಡಾ. ಎಚ್.ಟಿ. ಪೋತೆ**

ಪ್ರಾಧ್ಯಾಪಕರು, ಕನ್ನಡ ವಿಭಾಗ

ಗುಲಬರ್ಗಾ ವಿಶ್ವವಿದ್ಯಾನಿಲಯ

ಗುಲಬರ್ಗಾ

ದೂ : ೯೪೪೯೧೬೩೭೫೧

**೧೧. ದು. ಸರಸ್ವತಿ**

ನಂ. ೧೧೧, ಆರ್.ಎಸ್.ಎಸ್.

ಶಾಂತಿ ನಿವಾಸ, ತುಮಕೂರು ರಸ್ತೆ

ಯಶವಂತಪುರ

ಬೆಂಗಳೂರು- ೫೬೦೦೨೨

ದೂ : ೯೪೮೨೬೪೨೧೪೭

೧೨. ಪ್ರಶಾಂತ ನಾಯಕ ಜಿ.

ಪ್ರಾಧ್ಯಾಪಕರು, ಕನ್ನಡ ಭಾರತಿ

ಕುವೆಂಪು ವಿಶ್ವವಿದ್ಯಾನಿಲಯ

ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ

ದೂ : ೯೪೪೮೩೦೭೩೬೦

ಲೇಖಕರ ವಿಳಾಸಗಳು

**೧೩. ಟಿ.ಕೆ. ದಯಾನಂದ**

ದೂ : ೯೫೩೫೧೫೮೧೦೨

**೧೪. ಗುರುಪ್ರಸಾದ್ ಕಂಟಲಗೆರೆ**

ಅಂಚೆ : ಮಲಗೊಂಡನಹಳ್ಳಿ

ತಾ : ಚಿಕ್ಕನಾಯಕನ ಹಳ್ಳಿ

ಜಿ : ತುಮಕೂರು

ದೂ : ೯೯೬೪೫೨೧೧೦೮೩

**೧೫. ದಿನೇಶ್ ಮಡಗಾಂವ**

ನಂ. ೧೦೦, ೩ನೇ ಕ್ರಾಸ್,

೩ನೇ ಮುಖ್ಯರಸ್ತೆ,

ನಾಗದೇವನಹಳ್ಳಿ,

ರಾಜರಾಜೇಶ್ವರಿ ಲೇ ಔಟ್

ಬೆಂಗಳೂರು- ೫೬

**೧೬. ಡಾ. ಬಿ.ಎಂ. ಪುಟ್ಟಯ್ಯ**

ಪ್ರಾಧ್ಯಾಪಕರು, ಕನ್ನಡ ವಿ.ವಿ. ಹಂಪಿ

ದೂ : ೯೪೪೮೯೮೦೧೧೦೫

**೧೭. ಹುಲಿಕುಂಟೆ ಮೂರ್ತಿ**

ಕನ್ನಡ ಉಪನ್ಯಾಸಕರು

ಸರ್ಕಾರಿ ಪದವಿಪೂರ್ವ ಕಾಲೇಜು

೧೮ನೇ ಕ್ರಾಸ್, ಮಲ್ಲೇಶ್ವರಂ

ಬೆಂಗಳೂರು-೫೭೦೦೧೨

ದೂ : ೯೯೪೫೪೩೦೧೧೯

**೧೮. ರಮೇಶ ಅರೋಲಿ**

ಅಸಿಸ್ಟೆಂಟ್ ಪ್ರೊಫೆಸರ್,

ಡಿಪಾರ್ಟ್‌ಮೆಂಟ್ ಆಫ್ ಜರ್ನಲಿಸಂ

ಕಮಲಾ ನೆಹರೂ ಕಾಲೇಜು

ದೆಹಲಿ ವಿಶ್ವವಿದ್ಯಾಲಯ

ನವದೆಹಲಿ - ೧೧೦೦೪೯

ದೂ : ೯೭೧೧೯೦೭೯೫೫

**೧೯. ಡಾ. ಹೆಚ್.ಡಿ. ಉಮಾಶಂಕರ್**

ಸಹಾಯಕ ಪ್ರಾಧ್ಯಾಪಕರು

ಸರ್ಕಾರಿ ಪ್ರಕಾ.

ಕೆ.ಆರ್. ಪೇಟೆ

ದೂ : ೯೪೪೮೫೮೫೩೪೯

**೨೦. ಮಂಜುನಾಥ ವಿ.ಎಂ.**

ವೆಂಕಟಾಲ (ಲೇಕ್ ವ್ಯೂರೆಸಿಡೆನ್ಸಿ)

ಯಲಹಂಕ,

ಬೆಂಗಳೂರು-೫೬೦೦೬೪

ದೂ : ೯೯೪೫೧೭೭೯೦೦

**೧೧. ವಿಕಾಸ್ ಆರ್. ಮೌಲ್ಯ**

ನಂ. ೧೭, ಅಕ್ಕತಂಗಿಯರ ನಿಲಯ

ಜ್ಞಾನಜ್ಯೋತಿ ನಗರ

(ಭಾರತ್ ಪೆಟ್ರೋಲ್ ಬಂಕ್ ಹತ್ತಿರ)

ಉಲ್ಲಾಳ ಮುಖ್ಯರಸ್ತೆ,

ಬೆಂಗಳೂರು - ೫೬೦೦೫೬

ದೂ : ೯೫೩೫೩೨೦೫೫೬

**೧೨. ದಯಾನಂದ ಕಿನ್ನಾಳ್**

ಪಟೇಲ್ಸ್‌ನಗರ, ೧ನೇ ಕ್ರಾಸ್,

೩ನೇ ವಾರ್ಡ್, ಟಿ.ವಿ.ಎಸ್. ಬಿಲ್ಡಿಂಗ್

ಸ್ಟೇಷನ್ ರಸ್ತೆ,

ಹೊಸಪೇಟೆ-೫೮೩೨೦೧

ದೂ: ೯೪೪೯೬೫೪೨೩೪

**೧೩. ಡಾ. ಎಲ್.ಸಿ.ರಾಜು**

ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ

ಪ್ರಥಮ ದರ್ಜೆ ಕಾಲೇಜು,

ವಿಜಯನಗರ, ಬೆಂಗಳೂರು

ದೂ : ೯೨೪೨೬೦೪೪೨೭

**೧೪. ಡಾ. ಶಿವರಾಜ ಬ್ಯಾಡರಹಳ್ಳಿ**

ಸಹ ಪ್ರಾಧ್ಯಾಪಕರು,

ಆಕ್ಸ್‌ಫರ್ಡ್ ಕಾಲೇಜು

ಎಚ್.ಎಸ್.ಆರ್. ಬಡಾವಣೆ

ಬೆಂಗಳೂರು - ೫೬೦ ೧೦೨

ದೂ:೯೬೬೩೬೫೦೨೮೭

**೨೫. ಡಾ. ಸೋಮಣ್ಣ ಹೊಂಗಳ್ಳಿ**

ಪ್ರಾಧ್ಯಾಪಕರು,

ಎಸ್.ವಿ.ಪಿ. ಇನ್ಸಿಟ್ಯೂಟ್ಸ್ ಆಫ್

ಕನ್ನಡ ಸ್ಟಡೀಸ್, ಮಂಗಳೂರು ವಿ.ವಿ.

ಕೊಣಜೆ - ೫೭೪ ೧೯೯

ದಕ್ಷಿಣಕನ್ನಡ ಜಿಲ್ಲೆ

**೨೬. ಡಾ. ಶಾಂತನಾಯ್ಕ**

ಇಂಗ್ಲಿಷ್ ಪ್ರಾಧ್ಯಾಪಕರು

ಶ್ರೀಕೃಷ್ಣ ದೇವರಾಜು ವಿ.ವಿ.

ಬಳ್ಳಾರಿ.

**೨೭. ಡಾ. ಅಣ್ಣಮ್ಮ**

ಪ್ರಾಧ್ಯಾಪಕರು, ಕನ್ನಡ ವಿಭಾಗ

ತುಮಕೂರು ವಿಶ್ವವಿದ್ಯಾನಿಲಯ,

ತುಮಕೂರು.

**೨೮. ಬಿ.ರಂ. ಜಗದೀಶ್**

ತಂದೆ ರಂಗಪ್ಪ ಬಿಕ್ಕೆಗುಟ್ಟೆ

ಅಂಚೆ : ಕುರಂಕೋಟೆ ಕೊರಟಗೆರೆ ತಾಲ್ಲೂಕು

ತುಮಕೂರು ಜಿಲ್ಲೆ - ೫೭೨ ೧೩೮

**೧೯. ಓಂಪ್ರಕಾಶ್‌ನಾಯಕ್**

#೧೧, ಫಸ್ಟ್ ಫ್ಲೋರ್

ಫಸ್ಟ್ ಕ್ರಾಸ್, ಸೆಕೆಂಡ್ ಮೈನ್ ರೋಡ್

ರಾಜಮಹಲ್ ವಿಲಾಸ, ಸೆಕೆಂಡ್ ಸ್ಟೋರ್

ಜ್ಯೂಡಿಕಲ್ ಲೇಔಟ್, ಸಂಜಯನಗರ,

ಬೆಂಗಳೂರು-೫೬೦೦೯೪

ದೂ : ೭೦೧೧೩೮೯೯೦೪

# ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

## ಕಾರ್ಯಕಾರಿ ಸಮಿತಿ


ನಾಡೋಜ ಡಾ. ಮನು ಬಳಿಗಾರ್, ಅಧ್ಯಕ್ಷರು

ಡಾ. ರಾಜಶೇಖರ ಹತಗುಂದಿ, ಗೌರವ ಕಾರ್ಯದರ್ಶಿ

ಶ್ರೀ ವ.ಚ. ಚನ್ನೇಗೌಡ, ಗೌರವ ಕಾರ್ಯದರ್ಶಿ

ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷರು

ಶ್ರೀ ಮಾಯಣ್ಣ, ಬೆಂಗಳೂರು ನಗರ

ಶ್ರೀ ಚಿ.ಮಾ.ಸುಧಾಕರ, ಬೆಂ. ಗ್ರಾಮಾಂತರ

ಶ್ರೀ ಸಿಂ.ಲಿಂ. ನಾಗರಾಜ್, ರಾಮನಗರ

ಶ್ರೀ ನಾಗಾನಂದ ಕೆಂಪರಾಜ್, ಕೋಲಾರ

ಶ್ರೀ ಕೈವಾರ ಎನ್. ಶ್ರೀನಿವಾಸ, ಚಿಕ್ಕಬಳ್ಳಾಪುರ

ಶ್ರೀಮತಿ ಬಾ.ಹ. ರಮಾಕುಮಾರಿ, ತುಮಕೂರು

ಡಾ. ದೊಡ್ಡಮಲ್ಲಯ್ಯ, ಚಿತ್ರದುರ್ಗ

ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ದಾವಣಗೆರೆ

ಶ್ರೀ ಡಿ.ಬಿ. ಶಂಕರಪ್ಪ, ಶಿವಮೊಗ್ಗ

ಡಾ. ವೈ.ಡಿ. ರಾಜಣ್ಣ, ಮೈಸೂರು

ಶ್ರೀ ಬಿ.ಎಸ್. ವಿನಯ್, ಚಾಮರಾಜನಗರ

ಶ್ರೀ ಸಿ.ಕೆ. ರವಿಕುಮಾರ ಚಾಮಲಾಪುರ, ಮಂಡ್ಯ

ಶ್ರೀ ನಾಯಕರಹಳ್ಳಿ ಮಂಜೇಗೌಡ, ಹಾಸನ

ಶ್ರೀ ಬಿ.ಎಸ್. ಲೋಕೇಶ ಸಾಗರ್, ಕೊಡಗು

ಶ್ರೀ ಕುಂದೂರು ಅಶೋಕ, ಚಿಕ್ಕಮಗಳೂರು

ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ

ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ ಕನ್ನಡ

ಶ್ರೀಮತಿ ಮಂಗಲಾ ಶ್ರೀಶೈಲ್ ಮೆಟಗುಡ್ಡ, ಬೆಳಗಾವಿ

ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ, ವಿಜಯಪುರ

ಶ್ರೀ ಶ್ರೀಶೈಲ ಈರಪ್ಪ ಕರಿಶಂಕರಿ, ಬಾಗಲಕೋಟೆ

ಡಾ. ಲಿಂಗರಾಜ ರು. ಅಂಗಡಿ, ಧಾರವಾಡ

ಶ್ರೀ ಲಿಂಗಯ್ಯ ಬಿ. ಹಿರೇಮಠ, ಹಾವೇರಿ

ಶ್ರೀ ಶರಣು ಗೋಗೇರಿ, ಗದಗ

ಶ್ರೀ ಅರವಿಂದ ಕರ್ಕಿಕೋಡಿ, ಉತ್ತರ ಕನ್ನಡ

ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ

ಶ್ರೀ ಸಿದ್ಧಪ್ಪ ಎಸ್. ಹೊಟ್ಟಿ, ಯಾದಗಿರಿ

ಶ್ರೀ ಸುರೇಶ ಚನಶೆಟ್ಟಿ, ಬೀದರ್

ಡಾ.ಬಸವಪ್ರಭು ಪಾಟೀಲ ಬೆಟ್ಟದೂರು,ರಾಯಚೂರು

ಶ್ರೀ ರಾಜಶೇಖರ ಗು. ಅಂಗಡಿ, ಕೊಪ್ಪಳ

ಶ್ರೀ ಸಿದ್ಧರಾಮ ಕಲ್ಮಠ, ಬಳ್ಳಾರಿ

ಶ್ರೀ ಬಸವರಾಜ ಸಿದ್ರಾಮಪ್ಪ ಮಸೂತಿ, ಮಹಾರಾಷ್ಟ್ರ

ಶ್ರೀ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ

ಡಾ. ತಮಿಳ್ ಸೆಲ್ವಿ, ತಮಿಳುನಾಡು

ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ

ಶ್ರೀ ಮಲ್ಲಿಕಾರ್ಜುನ ಬದಾಮಿ, ಗೋವಾ

ಲಳನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು :
ಡಾ. ಚಂದ್ರಶೇಖರ ಕಂಬಾರ

ವಿಶ್ವವಿದ್ಯಾಲಯ ಪ್ರತಿನಿಧಿ, ತುಮಕೂರು ವಿ.ವಿ. :
ಡಾ. ಗೀತಾ ವಸಂತ

ವಿಶ್ವವಿದ್ಯಾಲಯ ಪ್ರತಿನಿಧಿ, ಕಲಬುರಗಿ ವಿ.ವಿ. :
ಡಾ. ರಮೇಶ ಲಂಡನಕರ

ಸರ್ಕಾರದ ಪ್ರತಿನಿಧಿ :
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮಹಿಳಾ ಪ್ರತಿನಿಧಿಗಳು :
ಡಾ. ವಸುಂಧರಾ ಭೂಪತಿ ಮತ್ತು
ಡಾ. ಎಸ್.ಪಿ. ಉಮಾದೇವಿ

ಪರಿಶಿಷ್ಟ ಜಾತಿ ಪ್ರತಿನಿಧಿಗಳು :
ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಮತ್ತು
ಶ್ರೀ ಪಿ.ಎ. ಮೇಘಣ್ಣನವರ

ಪರಿಶಿಷ್ಟ ಪಂಗಡ ಪ್ರತಿನಿಧಿ :
ಡಾ. ನೀಲಗಿರಿ ತಳವಾರ

ಸಂಘಸಂಸ್ಥೆಗಳ ಪ್ರತಿನಿಧಿ :
ಶ್ರೀ ಶೇಖರಗೌಡ ಮಾಲಿಪಾಟೀಲ

ನೂರೈದು ವರ್ಷಗಳ ಭವ್ಯ ಇತಿಹಾಸದ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಅವಧಿಯುದ್ದಕ್ಕೂ ಅನೇಕ ಮೈಲಿಗಲ್ಲುಗಳನ್ನು ದಾಟಿದೆ ಮತ್ತು ನೆಟ್ಟಿದೆ. ಪ್ರಸ್ತುತ ಪ್ರಕಟವಾಗುತ್ತಿರುವ ದಲಿತ ಸಾಹಿತ್ಯ ಸಂಪುಟಗಳು ಅಂಥ ಇನ್ನೊಂದು ಮಹತ್ವದ ಹಾಗೂ ಐತಿಹಾಸಿಕ ಎನಿಸುವಂಥ ಮೈಲಿಗಲ್ಲು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ನವ್ಯ ಘಟ್ಟಗಳ ಹಾಗೆಯೇ ೧೯೭೦-೮೦ರ ದಶಕದಲ್ಲಿ ಆರಂಭವಾದ ಬಂಡಾಯ ಹಾಗೂ ದಲಿತ ಪಂಥಗಳೂ ಅತ್ಯಂತ ಪ್ರಮುಖ ಘಟ್ಟಗಳು. ಬಂಡಾಯ ಹಾಗೂ ದಲಿತ ಪಂಥಗಳ ಕಾಲದಲ್ಲಿ ಕನ್ನಡದಲ್ಲಿ ಅನೇಕ ಮಹತ್ವದ ಕೃತಿಗಳು ಪ್ರಕಟವಾಗಿವೆ. ಆದರೆ, ಪ್ರಾತಿನಿಧಿಕ ದಲಿತ ಬರವಣಿಗೆಗಳನ್ನು ಒಳಗೊಂಡ ಸಂಪುಟಗಳು ಇದುವರೆಗೆ ಬಂದಿರಲಿಲ್ಲ. ಈಗ ನಿಮ್ಮ ಕೈಯಲ್ಲಿ ಆ ಸಂಪುಟಗಳು ಇವೆ. ಇವು ಕನ್ನಡದ ದಲಿತ ಲೋಕವನ್ನು, ಸಂವೇದನೆಯನ್ನು ಅರ್ಥ ಮಾಡಿಕೊಳ್ಳಲು ನೆರವಾದರೆ ಪರಿಷತ್ತು ಕೃತಾರ್ಥ. ನನ್ನ ಕಾಲದಲ್ಲಿ ಇದೆಲ್ಲ ಆಯಿತು ಎಂಬುದು ನನ್ನ ಹೆಮ್ಮೆ.

**ನಾಡೋಜ ಡಾ. ಮನು ಬಳಿಗಾರ್**
ಅಧ್ಯಕ್ಷರು

ರೂ.೩೨೦/-

**ಕನ್ನಡ ಸಾಹಿತ್ಯ ಪರಿಷತ್ತು**
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮